
# ಧರ್ಮ ಮತ್ತು ನೀತಿ

ಮೋ. ಕ. ಗಾಂಧೀ

ಗಾಂಧೀ ಸ್ಮಾರಕ ನಿಧಿ

೧೯೫೮

UNIVERSAL LIBRARY
OU_198634
UNIVERSAL LIBRARY



'ದೇವರಿಗೆ ಅಂಜೋಣ—ಮಾನವರಿಗೆ ಬೇಡ.'
ಧರ್ಮನಿಷ್ಠ, ನೀತಿಪರಾಯಣ ಗಾಂಧೀ.
(ಟೆಂಡುಲ್ಕರರ 'ಮಹಾತ್ಮಾ' ಗ್ರಂಥದಿಂದ)

ಗಾಂಧೀ ಗ್ರಂಥಮಾಲೆ–೫

# ಧರ್ಮ ಮತ್ತು ನೀತಿ

★

ಮೋ. ಕ. ಗಾಂಧೀ

★

ಗಾಂಧೀ ಸ್ಮಾರಕ ನಿಧಿ
೧೯೫೮

ಪ್ರಕಾಶಕರು :
ಪ್ರಧಾನ ಸಂಪಾದಕರು,
ಗಾಂಧೀ ಗ್ರಂಥಮಾಲೆಯ ಸಂಪಾದಕ ಮಂಡಲಿ
೧೬೨, ರಮಾವಿಲಾಸ ರಸ್ತೆ, ಮೈಸೂರು.

(ಅಹಮದಾಬಾದಿನ ನವಜೀವನ ಟ್ರಸ್ಟ್ ಅವರ ಅನುಮತಿಯ ಕೃಪೆಯಿಂದ)

Checked 1965

ಬೆಲೆ :
ಸಾಧಾರಣ ಪ್ರತಿ : ರೂ. ೨–೨೫

ಮುದ್ರಕರು :
ವಾಲ್ಮೀಕಿ ಪ್ರಿಂಟರ್ಸ್,
೨೬೪, ವಾಣೀವಿಲಾಸ ಮೊಹಲ್ಲಾ, ಮೈಸೂರು.

WORKS OF GANDHIJI IN KANNADA-5

# DHARMA MATTU NEETI

*(Religion and Ethics)*

★

*By*

M. K. GANDHI

★

GANDHI SMARAK NIDHI
1958

*Publisher*

CHIEF EDITOR

WORKS OF GANDHIJI IN KANNADA

EDITORIAL BOARD

162, Ramavilas Road, Mysore

By the kind permission of Navajivan Trust,
Ahmedabad-14

*Price*

**Ord Edn. Rs. 2-25**

*Printed at*

**VALMIKI PRINTERS**

2624, V. V. Mohalla, Mysore

# ಗಾಂಧೀಜಿಯ ಬರಹಗಳ ಕನ್ನಡ ಅನುವಾದ

ವಿಶ್ವದ ಎಲ್ಲ ಭಾಷೆಗಳಲ್ಲಿಯೂ ಗಾಂಧೀಜಿಯ ವಿಚಾರಗಳ ಪ್ರಚಾರ ಮಾಡುವುದು ಗಾಂಧೀ ಸ್ಮಾರಕ ನಿಧಿಯ ಮುಖ್ಯ ಉದ್ದೇಶ್ಯಗಳಲ್ಲಿ ಒಂದು ಕರ್ನಾಟಕಕ್ಕೆ ಹಾಗೂ ಕನ್ನಡಿಗರಿಗೆ ಅತೀವ ಮಹತ್ವದ ಗಾಂಧೀ ವಿಚಾರಗಳ ಪರಿಚಯ ಮಾಡಿಕೊಡುವುದು ಈಗ ಕೈಕೊಂಡ ಈ ಯೋಜನೆಯ ಗುರಿಯಾಗಿದೆ

ಕರ್ನಾಟಕದ ಹಲವಾರು ಸಾಹಿತಿಗಳು, ಲೇಖಕರು, ಗಾಂಧೀಜಿಯ ಬರಹಗಳಲ್ಲಿ ಕೆಲವನ್ನು ಆಗಲೇ ಅನುವಾದಿಸಿ ಪ್ರಕಟಿಸಿದ್ದಾರೆ ಸಾಧ್ಯವಾದಷ್ಟು ಈಗಲೇ ಪ್ರಕಟವಾಗಿರುವ ಅನುವಾದಗಳನ್ನು ಅವಶ್ಯಕವಿದ್ದಲ್ಲಿ ಪರಿಷ್ಕರಿಸಿ ಅವುಗಳನ್ನು ಈ ಗಾಂಧೀ ಗ್ರಂಥಮಾಲೆಯಲ್ಲಿ ಪೋಣಿಸುವ ಪ್ರಯತ್ನ ನಡೆದಿದೆ ಗಾಂಧೀಜಿಯ ಮುಖ್ಯ ಹಾಗೂ ವಿವಿಧ ವಿಚಾರಗಳ ಪರಿಚಯವನ್ನು ಮಾಡಿಕೊಡಲು ಸುಮಾರು ಇಪ್ಪತ್ತು ಸಂಪುಟಗಳು ಸಿದ್ಧವಾಗುತ್ತಲಿವೆ

ಗಾಂಧೀಜಿಯ ಎಲ್ಲ ಬರಹಗಳನ್ನೂ ಸಂಪೂರ್ಣವಾಗಿ ಅನುವಾದಿಸುವುದು ನಮ್ಮ ಉದ್ದೇಶ್ಯವಲ್ಲ, ಭಾರತ ಸರ್ಕಾರ ಆ ಕಾರ್ಯವನ್ನು ಕೈಕೊಂಡಿದೆ ಆದರೆ ಈ ನಮ್ಮ ಯೋಜನೆಯ ಉದ್ದೇಶ್ಯ ಗಾಂಧೀಜಿಯ ಪ್ರಧಾನವಾದ ಅಭಿಪ್ರಾಯಗಳನ್ನು ಸಮಂಜಸವಾದ ರೀತಿಯಲ್ಲಿ ಕೂಡಿಸಿ ಮುಖ್ಯವಾದ ಶೀರ್ಷಿಕೆಗಳ ಅಡಿಯಲ್ಲಿ ಅವನ್ನು ಅಳವಡಿಸಿ ಕನ್ನಡಿಸಿ ಪ್ರಕಟಮಾಡುವುದಾಗಿದೆ ಗಾಂಧೀಜೀ ಪುಸ್ತಕರೂಪವಾಗಿಯೇ ಬರೆದ ಗ್ರಂಥಗಳನ್ನು ಅವು ಇರುವಂತೆ ಅಥವಾ ಅವಶ್ಯಕವಾದರೆ ಸಂಗ್ರಹಿಸಿ ಅನುವಾದ ಮಾಡಲಾಗುತ್ತದೆ ಮತ್ತೆ ಕೆಲವು ಗ್ರಂಥಗಳು ಗಾಂಧೀಜೀ ಅವರ ಅಭಿಪ್ರಾಯಗಳನ್ನು "ಯಂಗ್ ಇಂಡಿಯಾ" ಮತ್ತು "ಹರಿಜನ" ಪತ್ರಿಕೆಗಳಿಂದ ಆಯ್ದ ಲೇಖನಗಳ ಸಂಕಲನಗಳಾಗಿವೆ ಸಂಕಲನವು ಸ್ವಲ್ಪ ನಿಧಾನದ ಕೆಲಸ, ಕಷ್ಟವಾದ ಕೆಲಸವೂ ಹೌದು ಎಷ್ಟು ಪ್ರಯತ್ನ ಮಾಡಿದರೂ ವಿಷಯಪ್ರತಿಪಾದನೆಯ ಪುನರಾವರ್ತನೆಯನ್ನು ತಪ್ಪಿಸುವುದು

ಕಷ್ಟ. ನಮ್ಮ ಅನುವಾದಕರು ಕರ್ನಾಟಕದ ನುರಿತ ಸಾಹಿತಿಗಳು ಮತ್ತು ಗಾಂಧೀಮಾರ್ಗದಲ್ಲಿ ಶ್ರದ್ಧೆಯುಳ್ಳವರು. ಆದಷ್ಟು ಸಮರ್ಪಕವಾಗಿ ಭಾಷಾಂತರದ ಕೆಲಸವನ್ನು ಮಾಡುತ್ತಿದ್ದಾರೆ. ಗಾಂಧೀಜಿಯವರ ಸರಳ ಮತ್ತು ರಸವತ್ತಾದ ಬರಹಗಳನ್ನು ಭಾಷಾಂತರಿಸುವುದು ಎಷ್ಟು ಕಷ್ಟವೆಂಬುದನ್ನು ಹೇಳಬೇಕಾಗಿಲ್ಲ. ಆದರೂ ಈ ಅನುವಾದಕರು ಗಾಂಧೀಜಿಯವರ ಮನೋಗತವನ್ನು ಅರಿತವರಾದುದರಿಂದ ಈ ಅನುವಾದಗಳು ಜನಪ್ರಿಯವಾಗಬಲ್ಲವೆಂದು ಆಶಿಸಲಾಗಿದೆ.

ಈ ಸಂಪಾದಕ ಸಮಿತಿಯಿಂದ ಪ್ರಕಟಿಸಲ್ಪಡುವ ಗ್ರಂಥಗಳು ಬಹಳ ಸುಲಭ ಬೆಲೆಗೆ ಪಾಠಕರ ಕೈಸೇರಬೇಕೆಂಬ ಉದ್ದೇಶ್ಯದಿಂದ ಸಾಮಾನ್ಯ ಪ್ರತಿಯ ಬೆಲೆ ಅತಿ ಕಡಿಮೆ ಇಡಲಾಗಿದೆ. ಇದರೊಡನೆ ಉತ್ತಮ ಪ್ರತಿಯೂ ಸಹ ಮಾರಾಟಕ್ಕೆ ಇರುವುದಲ್ಲದೆ ಅದರ ಬೆಲೆಯೂ ಕೂಡ ಬಹಳ ಹೆಚ್ಚು ಇಡಲಾಗಿಲ್ಲ.

ಈ ಗ್ರಂಥಮಾಲೆ ಕನ್ನಡನಾಡಿನ ಜನಕ್ಕೆ ಗಾಂಧೀ ಸಾಹಿತ್ಯವನ್ನು ಒದಗಿಸಿಕೊಡುವ ಕೆಲಸದಲ್ಲಿ ಕೃತಕೃತ್ಯತೆಯನ್ನು ಪಡೆಯಬಲ್ಲದೆಂದು ಭಾವಿಸಲಾಗಿದೆ. ಗಾಂಧೀಜಿಯವರ ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಅಭಿಪ್ರಾಯಗಳು ಈ ಗ್ರಂಥಗಳ ಮೂಲಕ ಜನಸಾಮಾನ್ಯರಲ್ಲಿ ಹರಡಲಿ, ಸಕಲ ಜನರಿಗೆ ಸ್ಫೂರ್ತಿ ಕೊಟ್ಟು ನವ ಚೈತನ್ಯವನ್ನು ತುಂಬಲಿ ಎಂದು ಹಾರೈಸಿ ಈ ಗ್ರಂಥಗಳನ್ನು ಜನತಾಜನಾರ್ದನನಿಗೆ ಅರ್ಪಿಸುತಿರುವೆ.

ಗಾಂಧೀ ಸ್ಮಾರಕ ನಿಧಿ
ರಾಜಘಾಟ, ದಿಲ್ಲಿ
೭—೫—೧೯೫೪

ರಂಗನಾಥ ದಿವಾಕರ

# ನಿವೇದನ

(ಗಾಂಧೀಜಿಯ ಮಾತುಗಳಲ್ಲಿ)

**ಅನುವಾದಕರು "ಕುವೆಂಪು"**

ನಾನೊಬ್ಬ ಸತ್ಯಶೋಧಕ ಅದಕ್ಕೊಂದು ಮಾರ್ಗವನ್ನು ಕಂಡುಕೊಂಡಿದ್ದೇನೆಂದು ನನ್ನ ವಿಶ್ವಾಸ ಅದರ ಸಿದ್ಧಿಗಾಗಿ ನಾನು ನಿರಂತರ ಪ್ರಯತ್ನಶೀಲನಾಗಿದ್ದೇನೆಂದೂ ನನ್ನ ನಂಬಿಕೆ ಅದು ಇನ್ನೂ ನನಗೆ ಸಿದ್ಧಿಸಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ ಸತ್ಯದ ಸಮ್ಯಕ್‌ದರ್ಶನವೇ ಆತ್ಮಸಾಕ್ಷಾತ್ಕಾರ, ಅದೇ ಜೀವನದ ಅಂತಿಮ ಗುರಿ ಅಂದರೆ ಪರಿಪೂರ್ಣತೆಯ ಸಿದ್ಧಿ ನನ್ನ ನ್ಯೂನತೆಗಳು ಎಷ್ಟೆಂಬುವನ್ನು ನಾನು ವ್ಯಸನದಿಂದ ಅರಿತಿದ್ದೇನೆ ಆ ಅರಿವು ಸನಗೆ ದುಃಖ ತರುವಷ್ಟೂ ಇದೆ ಆ ಅರಿವೇ ನನ್ನ ಸರ್ವಶಕ್ತಿಯ ಮೂಲ, ಏಕೆಂದರೆ ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನಿಗೆ ಒಂದು ಅಪೂರ್ವ ಬಲ (ಯಂಗ್ ಇಂಡಿಯಾ. ೧೭-೧೧-೨೧)

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಅತ್ಯಂತ ಋಜುವಾಗಿ, ಅತ್ಯಂತ ಸತ್ಯವಾಗಿ, ಅತ್ಯಂತ ಅಹಿಂಸಕವಾಗಿ ನಡೆಯಬೇಕೆಂದು ಹೋರಾಡುತ್ತಿದ್ದರೂ, ನನಗೆ ಸರಿಯೆಂದು ತಿಳಿದ ಗುರಿಯನ್ನು ಮುಟ್ಟಲು ಹಂಬಲಿಸಿ ಹೆಣಗುತ್ತ ಸತತವೂ ಸೋಲುತ್ತಿರುವ ನಾನು ಒಬ್ಬ ಸಾಮಾನ್ಯ ಚೇತನ ಆ ಯಾತ್ರೆಯೇನೊ ಕ್ಲೇಶಕರವೇ, ಆದರೆ ಆ ಯಾತನೆಯಲ್ಲಿಯೂ ನನಗೆ ಒಂದು ಆನಂದವಿದೆ ಏರುವ ಒಂದೊಂದು ಹೆಜ್ಜೆಯೂ ನನ್ನನ್ನು ಬಲಿಷ್ಠನನ್ನಾಗಿ ಮಾಡಿ ಮುಂದಣ ಹೆಜ್ಜೆಗೆ ಸಾಮರ್ಥ್ಯವೀಯುತ್ತದೆ (ಯಂಗ್ ಇಂಡಿಯಾ. ೯-೪-೨೬)

ದಾರಿ ನನಗೆ ಗೊತ್ತು ಅದು ನೇರ ಮತ್ತು ಇಕ್ಕಟ್ಟು—ಕತ್ತಿಯ ಅಲಗಿನಂತೆ ಅದರ ಮೇಲೆ ನಡೆಯುವುದೆಂದರೆ ನನಗೆ ಉಲ್ಲಾಸ ಜಾರಿದಾಗಲೆಲ್ಲ ಕಣ್ಣೀರಿಡುತ್ತೇನೆ 'ನ ಮೇ ಭಕ್ತಃ ಪ್ರಣಶ್ಯತಿ' ಎಂದು ದೇವರ ವಚನವಿದೆ ಆ ವಚನದಲ್ಲಿ ನನಗೆ ದೃಢವಾದ ನಂಬಿಕೆಯಿದೆ ಆದ್ದರಿಂದ ನನ್ನ ದೌರ್ಬಲ್ಯದ ಪರಿಣಾಮವಾಗಿ ಸಾವಿರ ಬಾರಿ ಸೋತರೂ ನಾನೆಂದಿಗೂ

ಶ್ರದ್ಧೆಗೆಡುವುದಿಲ್ಲ ಪ್ರತಿದಿನವಾಗಿ, ಇಂದಲ್ಲ ನಾಳೆ, ಸ್ವತಃಸಿದ್ಧವಾಗಿ ಕೈಗೂಡಲೇ ಬೇಕಾಗಿರುವ ಇಂದ್ರಿಯ ಜಯ ಲಭಿಸಿದಂದು, ದೇವರನ್ನು ಕಂಡೇ ಕಾಣುತ್ತೇನೆಂಬುದು ನನ್ನ ವಿಶ್ವಾಸ (ಯಂಗ್ ಇಂಡಿಯಾ, ೧೬-೬-೨೬)

ಏಕೆಂದರೆ, ಸಾವಿನ ನಡುವೆ ಬಾಳು, ಸುಳ್ಳಿನ ನಡುವೆ ಸತ್ಯ, ತಮಸ್ಸಿನ ನಡುವೆ ಜ್ಯೋತಿ ಚಿರಸ್ಥಾಯಿಯಾಗಿರುವುದನ್ನು ನಾನು ಕಾಣುತ್ತಿದ್ದೇನೆ ಭಗವಂತನೇ ಪ್ರಾಣಶಕ್ತಿ, ಅವನೇ ಸತ್ಯ ಮತ್ತು ಜ್ಯೋತಿ ಎಂಬುದು ನನ್ನ ವಿಶ್ವಾಸ ಆತ ಪ್ರೇಮಸ್ವರೂಪಿ, ಅವನೇ ಪರಮ ಶ್ರೇಯಸ್ಸು (ಯಂಗ್ ಇಂಡಿಯಾ ೧೦-೧೦-೨೮)

ಬಾಲ್ಯದಿಂದಲೂ ನಾನೊಬ್ಬ ಸತ್ಯಾರಾಧಕ ಎಂಬುದು ನನ್ನ ವಿಶ್ವಾಸ ಅದು ನನ್ನ ಅತ್ಯಂತ ಸಹಜ ಪ್ರವೃತ್ತಿ ಉಪಾಸನಾಪೂರ್ವಕವಾದ ಶೋಧನೆಯಿಂದ ಭಗವಂತನೇ ಸತ್ಯ ಎಂಬ ರೂಢಿಯ ನಂಬಿಕೆಯ ಬದಲು ಸತ್ಯವೇ ಭಗವಂತ ಎಂಬ ಸೂತ್ರ ನನಗೆ ಸ್ಫುರಣವಾಯಿತು ಭಗವಂತನನ್ನು ಪ್ರತ್ಯಕ್ಷವೋ ಎಂಬಂತೆ ಕಾಣಲು ಈ ಸೂತ್ರದಿಂದ ನನಗೆ ಸಾಧ್ಯವಾಗಿದೆ! ನನ್ನ ಚೇತನಸಮಸ್ತವನ್ನೂ ಆತ ವ್ಯಾಪಿಸಿದ್ದಾನೆ, ಎಂಬುದು ನನ್ನ ಅನುಭವ (ಹರಿಜನ, ೯-೮-೪೨)

ಭಗವಂತನ ಪ್ರತ್ಯಕ್ಷದರ್ಶನದ ಹಂಬಲ ನನ್ನದು ಭಗವಂತನೇ ಸತ್ಯ ಎಂಬುದನ್ನು ನಾನು ಬಲ್ಲೆ ನನ್ನ ಪಾಲಿಗೆ ಭಗವಂತನನ್ನು ಕಾಣಲು ಇರುವ ಒಂದೇ ಒಂದು ನಿಶ್ಚಿತ ಮಾರ್ಗವೆಂದರೆ ಅಹಿಂಸೆ, ಪ್ರೇಮ

(ಆತ್ಮಕಥೆ)

ಅಹಿಂಸೆ ನನ್ನ ದೇವರು ಸತ್ಯ ನನ್ನ ದೇವರು ಅಹಿಂಸೆಯ ಸಾಧನೆಗಾಗಿ ನಾನು ಶ್ರಮಿಸುವಾಗ ಸತ್ಯ ಹೇಳುತ್ತದೆ "ನನ್ನ ಮೂಲಕವೇ ಅದರ ಸಿದ್ಧಿ" ಎಂದು ಸತ್ಯದ ಸಾಧನೆಗಾಗಿ ನಾನು ಶ್ರಮಿಸುವಾಗ ಅಹಿಂಸೆ ಹೇಳುತ್ತದೆ "ನನ್ನ ಮೂಲಕವೇ ಅದರ ಸಿದ್ಧಿ"

(ಯಂಗ್ ಇಂಡಿಯಾ ४-೬-೨೫)

ಭಾರತದ ಸ್ವಾತಂತ್ರ್ಯ ಸಾಧನೆಯೇ ನನ್ನ ಜೀವಿತೋದ್ದೇಶ ಅದಕ್ಕಾಗಿ ನಾನು ಸಾಯಲು ಕೂಡ ಸಿದ್ಧ ಏಕೆಂದರೆ ಭಾರತದ ಸ್ವಾತಂತ್ರ್ಯ

ಸತ್ಯದ ಒಂದು ಅಂಶ. ಬಂಧವಿಮುಕ್ತವಾದಾಗಲೇ ಭರತಖಂಡ ಸತ್ಯ ಸ್ವರೂಪನಾದ ಭಗವಂತನನ್ನು ಪೂಜಿಸಬಲ್ಲದು ಭಾರತದ ಬಿಡುಗಡೆಗಾಗಿ ನಾನು ದುಡಿಯುತ್ತಿದ್ದೇನೆ, ಏಕೆಂದರೆ ಭಾರತದಲ್ಲಿ ಬದುಕಿ ಅದರ ಸಂಸ್ಕೃತಿ ಯನ್ನು ಪಡೆದಿರುವುದರಿಂದ ಅದರ ಸೇವೆಗೆ ನಾನು ಅತ್ಯಂತ ಅರ್ಹ ಎಂಬು ದನ್ನು, ನನ್ನ ಸೇವೆಯ ಮೊದಲ ಹಕ್ಕು ಭಾರತದ್ದು ಎಂಬುದನ್ನು ನನ್ನ ಸ್ವದೇಶಿ ನನಗೆ ಕಲಿಸಿದೆ ನನ್ನ ದೇಶಭಕ್ತಿ ಭಾರತಕ್ಕೆ ಮಾತ್ರ ಮೀಸಲಾದು ದಲ್ಲ ಬೇರೆ ಯಾವ ರಾಷ್ಟ್ರದ ಹಿತಕ್ಕೂ ಧಕ್ಕೆಯೊದಗಬಾರದು ಎಂಬು ದಷ್ಟೇ ಅಲ್ಲ, ಸಕಲ ರಾಷ್ಟ್ರಗಳಿಗೂ, ಆ ಪದದ ಸಂಪೂರ್ಣಾರ್ಥದಲ್ಲಿ, ಸರ್ವ ಲಾಭ ಒದಗಬೇಕು ಎಂಬುದೇ ನನ್ನ ಮಾತಿನ ಆಶಯ ನಾನು ಸಂಕಲ್ಪಿ ಸಿರುವ ಭಾರತದ ಸ್ವಾತಂತ್ರ್ಯ ಎಂದೆಂದೂ ಲೋಕಹಿತಕಂಟಕವಾಗ ಲಾರದು (ಆತ್ಮಕಥೆ)

ವಿಶ್ವಾತ್ಮಕವೂ ವಿಶ್ವವ್ಯಾಪಿಯೂ ಆದ ಸತ್ಯವನ್ನು ಸಾಕ್ಷಾತ್ತಾಗಿ ಸಂದರ್ಶಿಸಬೇಕಾದರೆ ಸೃಷ್ಟಿಯಲ್ಲಿ ಕ್ಷುದ್ರತಮವಾದುದನ್ನೂ ತನ್ನಂತೆ ಪ್ರೀತಿಸುವುದು ಸಾಧ್ಯವಾಗಲೇಬೇಕು ಆ ಹಂಬಲವನ್ನು ತುಂಬಿಕೊಂಡ ವನು ಜೀವನದ ಯಾವ ಕ್ಷೇತ್ರದಿಂದಲೂ ವಿಮುಖನಾಗಲು ಸಾಧ್ಯವಿಲ್ಲ ನನ್ನ ಸತ್ಯಶ್ರದ್ಧೆ ನನ್ನನ್ನು ರಾಜಕೀಯ ಕ್ಷೇತ್ರಕ್ಕೆ ಎಳೆದು ತಂದಿರುವುದು ಈ ಕಾರಣದಿಂದಲೇ ಅಧ್ಯಾತ್ಮಕ್ಕೂ ರಾಜಕೀಯಕ್ಕೂ ಏನೂ ಸಂಬಂಧ ವಿಲ್ಲ ಎನ್ನುವವರಿಗೆ ಅಧ್ಯಾತ್ಮವೆಂದರೇನು ಎಂಬುದೇ ತಿಳಿಯದೆಂದು ಸ್ವಲ್ಪವೂ ಅಳುಕದೆ, ಆದರೆ ವಿನೀತನಾಗಿ ನಾನು ಹೇಳಬಲ್ಲೆ (ಆತ್ಮಕಥೆ)

ಆತ್ಮಶ್ರೀವಿದೂರವಾದ ರಾಜಕೀಯ ನನ್ನ ಪಾಲಿಗೆ ಸರ್ವಥಾ ತ್ಯಾಜ್ಯವಾದ ಕಲಂಕ ರಾಜಕೀಯ ರಾಷ್ಟ್ರಗಳನ್ನು ಕುರಿತದ್ದು ಯಾವುದು ರಾಷ್ಟ್ರಗಳ ಹಿತವನ್ನು ಕುರಿತದ್ದೊ ಅದು ಅಧ್ಯಾತ್ಮ ಪ್ರವೃತ್ತಿಯುಳ್ಳ ವ್ಯಕ್ತಿಯ, ಎಂದರೆ ಸತ್ಯದ ಮತ್ತು ಭಗವಂತನ ಅನ್ವೇಷಕನ ಸಾಧನೆಯ ಅಂಗಗಳಲ್ಲಿ ಒಂದಾಗಿರುವುದು ಅನಿವಾರ್ಯ. ನನಗಾದರೊ ಭಗವಂತ ನೆಂದರೂ ಒಂದೇ, ಸತ್ಯವೆಂದರೂ ಒಂದೇ ಭಗವಂತ ಅಸತ್ಯದ ಮೂರ್ತಿ ಯೆಂದೂ, ಹಿಂಸೆಯ ಮೂರ್ತಿ ಎಂದೂ ಯಾರಾದರೂ ಸ್ಥಿರಪಡಿಸಿದರೆ ಅಂತಹ ಭಗವಂತನನ್ನು ಪೂಜಿಸಲು ನಾನು ನಿರಾಕರಿಸುತ್ತೇನೆ. ರಾಜ

ಕೀಯದಲ್ಲಿ ಕೂಡ ಭಗವಂತನ ರಾಜ್ಯ ಸ್ಥಾಪಿತವಾಗಬೇಕಾಗಿದೆ. ನನ್ನ ಬದುಕಿನ ಅತ್ಯಂತ ಆತ್ಮೀಯ ವಸ್ತುಗಳಿಂದ ರಾಜಕೀಯವನ್ನು ಬೇರ್ಪಡಿಸಲಾರೆ ಕಾರಣ ಇಷ್ಟೆ, ನನ್ನ ರಾಜಕೀಯ ಕಲುಷಿತವಲ್ಲ ಈ ಎಲ್ಲವೂ ಸತ್ಯ ಅಹಿಂಸೆಗಳೊಂದಿಗೆ ಜಟಿಲವಾಗಿ ಹೆಣೆದುಕೊಂಡಿವೆ ಸತ್ಯವನ್ನು ಬಲಿಗೊಟ್ಟು ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತ ಭಾರತ ವಿನಾಶ ಹೊಂದುವುದೇ ಹೆಚ್ಚು ಲೇಸೆಂಬುದು ನನ್ನ ಮತ ರಾಜಕೀಯ ಸಂಪರ್ಕವಿಲ್ಲದೆ ಸಮಾಜಸೇವೆಯಂಥ ಕೆಲಸವನ್ನು ಕೂಡ ನಡೆಸುವುದು ಅಸಾಧ್ಯವೆಂಬುದು ನನ್ನ ಅನುಭವಕ್ಕೆ ಬಂದುದರಿಂದ ರಾಜಕೀಯ ಕ್ಷೇತ್ರವನ್ನು ನಾನು ಪ್ರವೇಶಿಸುವುದು ಅನಿವಾರ್ಯವಾಯಿತು ಸಾಮಾಜಿಕ ಮತ್ತು ನೈತಿಕ ದೃಷ್ಟಿಯಿಂದ ರಾಜಕೀಯ ಕಾರ್ಯವು ಪರಿಗಣಿತವಾಗಲೇ ಬೇಕು

ಮಾನವನ ಮನಸ್ಸಾಗಲಿ ಸಮಾಜವಾಗಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಎಂಬ ಪ್ರತ್ಯೇಕ ವಿಭಾಗಗಳಾಗಿ ವಿಂಗಡಣೆಯಾಗಿಲ್ಲ ಎಂಬುದು ನನ್ನ ವಿಶ್ವಾಸ ಅವುಗಳ ನಡುವೆ ಕ್ರಿಯೆ-ಪ್ರತಿಕ್ರಿಯೆಗಳು ಇದ್ದೇ ಇರುತ್ತವೆ (ಯಂಗ್ ಇಂಡಿಯಾ. ೨-೩-೨೨)

ಆತ್ಮಶ್ರೇಯಸ್ಸಿಗೆ ಮಾತ್ರವೇ ಎಂದು ಬೇರೆಯಾದ ಒಂದು ಕ್ಷೇತ್ರವಿದೆ ಎಂಬುದನ್ನು ನಾನು ನಂಬುವುದಿಲ್ಲ ಬದಲು, ಅದು ಜೀವನದ ಸಾಮಾನ್ಯ ವ್ಯಾಪಾರಗಳ ಮೂಲಕವಾಗಿ ಮಾತ್ರವೇ ವ್ಯಕ್ತಗೊಳ್ಳುತ್ತದೆ ಹೀಗೆ ಅದು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಲಯಗಳ ಮೇಲೂ ಪರಿಣಾಮವನ್ನುಂಟುಮಾಡುತ್ತದೆ (ಯಂಗ್ ಇಂಡಿಯಾ. ೩-೯-೨೪)

ಮಾನವ ಜೀವಿತದ ಪರಮೋದ್ದೇಶ ಭಗವತ್ಸಾಕ್ಷಾತ್ಕಾರ ಅವನ ಕರ್ಮ ಕ್ರಿಯೆಗಳೇನೆ ಇರಲಿ ಸಾಮಾಜಿಕ, ರಾಜಕೀಯ, ಧಾರ್ಮಿಕ ಎಲ್ಲವೂ ಈ ಈಶ್ವರಸಾಕ್ಷಾತ್ಕಾರದ ಪರಮೋದ್ದೇಶದಿಂದಲೇ ನಿಯಂತ್ರಿತವಾಗಿರಬೇಕು ಮಾನವ ಸೇವೆಯೆ ಈ ಸಾಧನೆಯ ಪ್ರಪ್ರಥಮ ಅನಿವಾರ್ಯಾಂಗವಾಗುತ್ತದೆ ಏಕೆಂದರೆ ಇಷ್ಟೆ ಈಶ್ವರದರ್ಶನಕ್ಕಿರುವ ಏಕೈಕ ಮಾರ್ಗವೆಂದರೆ ಆತನ ಸೃಷ್ಟಿಯಲ್ಲಿಯೆ ಆತನನ್ನು ಕಂಡು ಅದರಲ್ಲಿಯೆ ಒಂದಾಗಿರುವುದು ಸರ್ವರ ಸೇವೆಯೊಂದೇ ಇದಕ್ಕೆ ಸಾಧನ

ನಾನು ಈ ಸರ್ವದ ಒಂದು ಅಂಶ, ಇತರರನ್ನುಳಿದು ನಾನೊಬ್ಬನೇ ಆತ ನನ್ನು ಪಡೆಯಲಾರೆ (ಹರಿಜನ. ೨೯-೮-೩೬)

ಈಶಸೇವೆ ಅರ್ಥಾತ್ ಮಾನವಸೇವೆಯೇ ನನ್ನ ಧರ್ಮ, ನಿಷ್ಕಾಮ ಸೇವೆಯಿಂದ ಸೇವೆ ಸಲ್ಲಿಸುವುದೆಂದರೆ ಇತರರಿಗೆ ನಾವು ಉಪಕಾರ ಮಾಡಿದ್ದಕ್ಕಿಂತ ನಮ್ಮ ಸಾಲವನ್ನು ನಾವು ತೀರಿಸಿಕೊಂಡು ಕೃತಕೃತ್ಯರಾದಂತೆ. ನಮ್ಮ ಹೊಣೆಯನ್ನು ನಾವೇ ಇಳಿಸಿಕೊಂಡು ನಮ್ಮ ಕರ್ತವ್ಯವನ್ನು ಪರಿಪಾಲಿಸುವುದರ ಮೂಲಕ ನಮಗೇ ನಾವು ಉಪಕಾರಮಾಡಿಕೊಳ್ಳುತ್ತೇವೆ. ನಮ್ಮಲ್ಲಿ ಒಳ್ಳೆಯವರೆನಿಸಿಕೊಂಡವರು ಮಾತ್ರವಲ್ಲ, ನಾವೆಲ್ಲರೂ ನಮ್ಮ ಸರ್ವಸಂಪತ್ತನ್ನೂ ಸರ್ವರಿಗಾಗಿ ವಿನಿಯೋಗಿಸಲು ಬದ್ಧರು ಮೃಗಗಳಿಗಿಂತ ಮಾನವ ಭಿನ್ನ ಎಂದು ತೋರುವುದು ತ್ಯಾಗಧರ್ಮ ಒಂದರಿಂದಲೇ (ಮಂಗಳ ಪ್ರಭಾತ)

ಮನುಷ್ಯ ಎಷ್ಟರಮಟ್ಟಿಗೆ ಪರಾರ್ಥಕ್ಕಾಗಿ ಶ್ರಮಿಸುತ್ತಾನೆಯೊ ಅಷ್ಟರಮಟ್ಟಿಗೆ ಅವನು ದೊಡ್ಡವನಾಗುತ್ತಾನೆ.

(ಯಂಗ್ ಇಂಡಿಯಾ. ೪-೧೨-೨೪)

ನಾನು ಸೋದರಭಾವ ಅಥವಾ ತಾದಾತ್ಮ್ಯವನ್ನು ಸಾಧಿಸಲೆಳಸುವುದು ಕೇವಲ ಮಾನವಜೀವಿಗಳೊಂದಿಗೆ ಮಾತ್ರವಲ್ಲ, ಸಮಸ್ತ ಜೀವರಾಶಿಯೊಂದಿಗೆ, ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೊಂದಿಗೆ ಕೂಡ. ನಿಮ್ಮನ್ನು ಚಕಿತಗೊಳಿಸಬಹುದಾದ ಈ ಬಯಕೆಗೆ—ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೊಂದಿಗೂ ತಾದಾತ್ಮ್ಯವನ್ನು ಸಾಧಿಸಬೇಕೆನ್ನುವ ಬಯಕೆಗೆ—ಕಾರಣವಿಷ್ಟೆ. ನಾವೆಲ್ಲರೂ ಒಬ್ಬನೇ ಭಗವಂತನಿಂದ ಬಂದವರು ಎಂದು ಹೇಳುತ್ತೇವಲ್ಲ, ಹಾಗಿರುವುದರಿಂದ ಯಾವುದೇ ರೂಪದಲ್ಲಿ ಗೋಚರಿಸಿದರೂ ಮೂಲತಃ ಎಲ್ಲ ಜೀವವೂ ಒಂದೇ

(ಹರಿಜನ. ೪-೪-೨೯)

ಭಗವಂತನ ಕೇವಲ ಅಖಂಡತೆಯನ್ನು ನಾನು ನಂಬುತ್ತೇನೆ, ಆದುದರಿಂದಲೇ ಜನತೆಯ ಅಖಂಡತೆಯಲ್ಲೂ ನನಗೆ ಶ್ರದ್ಧೆಯಿರುವುದು ಒಬ್ಬನು ಮಾತ್ರ ಅಧ್ಯಾತ್ಮಲಾಭ ಪಡೆದು ಆವನ ಸುತ್ತಣ ಜನರು ತೊಳಲುತ್ತಾರೆ ಎಂಬುದನ್ನು ನಾನು ನಂಬುವುದಿಲ್ಲ ಅದ್ವೈತದಲ್ಲಿ ನನಗೆ ಶ್ರದ್ಧೆಯಿದೆ

ತತ್ವಶಃ ಮಾನವನ ಅಖಂಡತೆಯಲ್ಲಿ, ಹಾಗೆ ನೋಡಿದರೆ ಜೀವಸಮಸ್ತದ ಅಖಂಡತೆಯಲ್ಲಿ ನನಗೆ ವಿಶ್ವಾಸವುಂಟು ಆದುದರಿಂದಲೆ ಒಂದು ವ್ಯಕ್ತಿಗೆ ಅಧ್ಯಾತ್ಮಲಾಭವಾದರೆ ಇಡೀ ವಿಶ್ವಕ್ಕೆ ಆ ಲಾಭ ಒದಗುತ್ತದೆ ಒಂದು ವ್ಯಕ್ತಿ ಪತನ ಹೊಂದಿದರೆ ಅಷ್ಟರಮಟ್ಟಿಗೆ ಇಡೀ ವಿಶ್ವದ ಪತನವೇ ಆಗುತ್ತದೆ ಎಂದು ನಾನು ಭಾವಿಸಿರುವುದು (ಯಂಗ್ ಇಂಡಿಯಾ. ೪-೧೨-೨೪)

ಈ ಪೃಥ್ವಿಯ ನಶ್ವರ ಸಾಮ್ರಾಜ್ಯದ ಬಯಕೆ ನನಗಿಲ್ಲ ಮೋಕ್ಷರೂಪವಾದ ಅಮರ ಸಾಮ್ರಾಜ್ಯಕ್ಕಾಗಿ ನಾನು ಶ್ರಮಿಸುತ್ತಿದ್ದೇನೆ ನನ್ನ ಧ್ಯೇಯ ಸಾಧನೆಗಾಗಿ ನಾನು ಗುಹಾನಿವಾಸಿಯಾಗಬೇಕಾಗಿಲ್ಲ

(ಯಂಗ್ ಇಂಡಿಯಾ. ೩-೪-೨೪)

ದೇಶದ, ತನ್ಮೂಲಕ ಮಾನವತೆಯ ಸೇವೆಗಾಗಿ ಎಡೆಬಿಡದೆ ದುಡಿಯುವುದೇ ನನ್ನ ಮೋಕ್ಷಪಥ ಜೀವನಸಮಸ್ತದೊಂದಿಗೆ ಅನನ್ಯತೆಯನ್ನು ಸಾಧಿಸುವುದೇ ನನ್ನ ಬಯಕೆ (ಯಂಗ್ ಇಂಡಿಯಾ. ೩-೪-೨೪)

ಯಾವ ನೂತನ ಸಿದ್ಧಾಂತಗಳನ್ನೂ ನಾನು ಮಂಡಿಸಿಲ್ಲ ಅದರ ಬದಲು ಪುರಾತನ ಸಿದ್ಧಾಂತಗಳ ಪುನರ್ನಿರೂಪಣೆಯ ಪ್ರಯತ್ನವೇ ನನ್ನದು ಅದು ಎಷ್ಟರ ಮಟ್ಟಿಗೆ ಸರಿಯಾಗಿ ಸಾಗಿದೆಯೋ ಹೇಳಲಾರೆ ಆದರೆ ಅದು ನನ್ನ ಪ್ರಾಮಾಣಿಕವಾದ ನಂಬಿಕೆಯನ್ನು ಪ್ರತಿನಿಧಿಸುತ್ತಿದೆ

(ಯಂಗ್ ಇಂಡಿಯಾ ೩-೧೨-೨೬)

ಗಾಂಧೀಪಂಥ ಎಂಬುದೊಂದಿಲ್ಲ ನನ್ನ ತರುವಾಯ ಯಾವ ಪಂಥವನ್ನೂ ಕಟ್ಟಿಹೋಗುವ ಇಚ್ಛೆ ನನಗಿಲ್ಲ ನಾನು ಯಾವುದಾದರೂ ನೂತನ ತತ್ವದ ಅಥವಾ ಸಿದ್ಧಾಂತದ ಮೂಲಪುರುಷ ಎಂಬ ಭಾವನೆ ನನಗಿಲ್ಲ ನಿತ್ಯಸತ್ಯಗಳನ್ನು ನಮ್ಮ ದೈನಂದಿನ ಜೀವನ ಹಾಗೂ ಸಮಸ್ಯೆಗಳಿಗೆ ಅಳವಡಿಸಲು ನನ್ನ ರೀತಿಯಲ್ಲಿ ನಾನು ಸಾಧಾರಣನಂತೆ ಪ್ರಯತ್ನಿಸಿದ್ದೇನೆ, ಅಷ್ಟೆ ಸತ್ಯ ಅಹಿಂಸೆ–ಈ ಭಾವಗಳು ಪರ್ವತಗಳಷ್ಟೇ ಪುರಾತನವಾದುವು. ನನ್ನ ಶಕ್ತಿಗೆ ಸಾಧ್ಯವಾದಷ್ಟು ವಿಪುಲ ಪ್ರಮಾಣದಲ್ಲಿ ಅವೆರಡರಲ್ಲೂ ಪ್ರಯೋಗಗಳನ್ನು ನಡೆಸಿರುವುದಷ್ಟೆ ನನ್ನ ಕೆಲಸ ಹಾಗೆ ಮಾಡುವಾಗ ಕೆಲವು ಸಲ ತಪ್ಪು ಮಾಡಿದ್ದೇನೆ, ಆ ತಪ್ಪುಗಳಿಂದ ಪಾಠ ಕಲಿತಿದ್ದೇನೆ

ಹೀಗೆ ಜೀವನ ಮತ್ತು ಅದರ ಸಮಸ್ಯೆಗಳು ಸತ್ಯ ಅಹಿಂಸೆಗಳ ಅನುಷ್ಠಾನಗಳಲ್ಲಿ ನಡೆಸಿರುವ ಅನೇಕ ಪ್ರಯೋಗಗಳಾಗಿವೆ. (ಹರಿಜನ ೨೮-೩-೩೬)

ನಿಮ್ಮ ಮುಂದೆ ಉದ್ಭವಿಸಿರುವ ಸಮಸ್ಯೆಗಳನ್ನು ನನ್ನ ಹೇಳಿಕೆಗೆ ಅನುಸಾರವಾಗಿ ಎದುರಿಸಬೇಕೆಂಬುದೇ ನನ್ನ ಇಚ್ಛೆ. ಹೀಗೆ ಸತ್ಯ ಅಹಿಂಸೆಗಳಲ್ಲಿ ನನ್ನ ಶ್ರದ್ಧೆ ವರ್ಧಿಸುತ್ತಲೇ ಇದೆ. ನನ್ನ ಜೀವನದಲ್ಲಿ ಅವುಗಳನ್ನು ಅನುಸರಿಸುತ್ತ ಹೋದಂತೆ ನಾನು ಕೂಡ ಪ್ರತಿಕ್ಷಣವೂ ಬೆಳೆಯುತ್ತಲೇ ಇದ್ದೇನೆ. ಅವುಗಳಲ್ಲಿ ನನಗೆ ಹೊಸ ಅರ್ಥ ಸ್ಫುರಿಸುತ್ತಿದೆ. ದಿನದಿನವೂ ಅವುಗಳನ್ನು ಹೊಸ ಹೊಸ ಬೆಳಕಿನಲ್ಲಿ ಕಂಡು ಹೊಸ ಹೊಸ ಅರ್ಥಗಳನ್ನೂ ಅರಿಯುತ್ತಿದ್ದೇನೆ. ನನ್ನ ಜತೆಜತೆಗೆ ನೀವೂ ಕೂಡ ಬೆಳೆಯಬೇಕು. ನನ್ನ ಅನಂತರ ಏನಾಗುತ್ತದೆ ಎಂಬುದನ್ನು ತಿಳಿಯುವ ಚಿಂತೆ ನನಗಿರಕೂಡದು. ಆದುದರಿಂದ ನನ್ನನ್ನು ಮರೆತು ಬಿಡಿ. ನೀವು ಭದ್ರವಾಗಿ ಅಂಟಿಕೊಳ್ಳಬೇಕಾದುದು ನನ್ನ ಹೆಸರಿಗಲ್ಲ, ತತ್ತ್ವಗಳಿಗೆ. ಅದರ ಅಳತೆಗೋಲಿನಿಂದ ನಿಮ್ಮ ಒಂದೊಂದು ಚಟುವಟಿಕೆಯನ್ನೂ ಉದ್ಭವಿಸಬಹುದಾದ ಎಲ್ಲ ಸಮಸ್ಯೆಗಳನ್ನೂ ನಿರ್ಭೀತರಾಗಿ ಎದುರಿಸಿ. (ಹರಿಜನ, ೧-೪-೩೭)

ನಿಲ್ಲುವುದು ನನ್ನ ಕೃತಿಯೇ ಹೊರತು, ನನ್ನ ಮಾತೂ ಅಲ್ಲ, ಬರಹವೂ ಅಲ್ಲ. ಇತ್ತೀಚೆಗೆ ನಾನು ಈ ಮಾತನ್ನು ಅನೇಕ ಸಲ ಹೇಳಿದ್ದೇನೆ. ಸಕಲ ಶಾಸ್ತ್ರಗಳೂ ಒಂದು ವೇಳೆ ವಿನಾಶ ಹೊಂದುವುದಾದರೂ ಹಿಂದೂ ಧರ್ಮದ ಸಾರವನ್ನು ಸಾರಲು ಈಶೋಪನಿಷತ್ತಿನ ಒಂದು ಮಂತ್ರ ಸಾಕು, ಆದರೆ ಅದನ್ನು ಅನುಷ್ಠಾನಕ್ಕೆ ತರಲು ಯಾರೊಬ್ಬರೂ ಇರದಿದ್ದರೆ ಆ ಒಂದು ಮಂತ್ರವೂ ನಿರರ್ಥಕ. ಅದರಂತೆಯೆ ನನ್ನ ಮಾತು, ಬರಹಗಳು ಸತ್ಯ ಅಹಿಂಸೆಯ ಮಹಾ ತತ್ತ್ವಗಳನ್ನು ರಕ್ತಗತಮಾಡಿಕೊಳ್ಳಲು ನಿಮಗೆ ನೆರವು ನೀಡುವಷ್ಟರ ಮಟ್ಟಿಗೆ ಮಾತ್ರ ಉಪಯುಕ್ತ. ಅವುಗಳನ್ನು ನೀವು ಹಾಗೆ ರಕ್ತಗತ ಮಾಡಿಕೊಳ್ಳದಿದ್ದರೆ ನನ್ನ ಬರಹಗಳಿಂದ ನಿಮಗೆ ಯಾವ ಪ್ರಯೋಜನವೂ ಇಲ್ಲ. ಒಬ್ಬ ಸತ್ಯಾಗ್ರಹಿಯಾಗಿ ನಾನು ಈ ಒಂದೊಂದು ಮಾತನ್ನೂ ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ. (ಹರಿಜನ. ೧-೫-೩೭)

ಗಾಂಧೀಪಂಥ ಎಂಬುದು ದೋಷದ ಪ್ರತೀಕವಾಗಿರುವುದಾದರೆ ಅದು ನಾಶಹೊಂದಲಿ. ಸತ್ಯ ಅಹಿಂಸೆಗಳು ಅಜರಾಮರ. ಆದರೆ ಗಾಂಧೀ

ಪಂಥ ಎಂಬುದು ಪಂಥಾಭಿಮಾನಕ್ಕೆ ಮತ್ತೊಂದು ಹೆಸರಾದರೆ ಅದು ವಿನಾಶಯೋಗ್ಯವೇ ನಿಜ ತಾನು ಗಾಂಧೀಯ ಅನುಯಾಯಿ ಎಂದು ಯಾರೊಬ್ಬನೂ ಹೇಳದಿರಲಿ ನಾನು ನನ್ನನ್ನು ಅನುಸರಿಸಿದರೆ ಸಾಕು. ಆದರಲ್ಲೂ ನಾನು ಎಂತಹ ಅಸಮರ್ಪಕ ಅನುಯಾಯಿ ಎಂಬುದನ್ನು ನಾನು ಬಲ್ಲೆ, ಯಾವ ತತ್ತ್ವಗಳಿಗಾಗಿ ನಾನು ನಿಂತಿದ್ದೇನೆಯೊ ಅವುಗಳಿಗೆ ತಕ್ಕಂತೆ ನಾನು ಬಾಳುತ್ತಿಲ್ಲ ನೀವು ಅನುಯಾಯಿಗಳಲ್ಲ, ಸಹವಿದ್ಯಾರ್ಥಿಗಳು, ಸಹಯಾತ್ರಿಕರು, ಸಹಅನ್ವೇಷಕರು, ಸಹಉದ್ಯೋಗಿಗಳು

(ಹರಿಜನ. ೨-೩-೪೦)

ಸತ್ಯ ಅಹಿಂಸೆಗಳನ್ನು ಕೇವಲ ವೈಯಕ್ತಿಕ ಅನುಷ್ಠಾನದ ತತ್ತ್ವಗಳನ್ನಾಗಿ ಮಾಡಿಕೊಂಡರೆ ಸಾಲದು, ಸಮಾಜ ಸಮುದಾಯಗಳು, ರಾಷ್ಟ್ರಗಳೂ ಕೂಡ ಅವುಗಳನ್ನು ಅನುಷ್ಠಾನಕ್ಕೆ ತರುವಂತಾಗಬೇಕು ಹೇಗೇ ಆಗಲಿ, ಅದಂತೂ ನನ್ನ ಕನಸು ನನ್ನ ಬದುಕೆಲ್ಲ ಅದರ ಸಾಕ್ಷಾತ್ಕಾರದ ಪ್ರಯತ್ನಕ್ಕಾಗಿಯೆ, ನನ್ನ ಸಾವೂ ಅದರಲ್ಲಿಯೆ ನನ್ನ ಶ್ರದ್ಧೆ ನನಗೆ ಅನುದಿನವೂ ನೂತನ ಸತ್ಯಗಳನ್ನು ಕಾಣಿಸುತ್ತಿದೆ ಆತ್ಮದ ಸ್ವರೂಪವೆ ಅಹಿಂಸೆ, ಆದುದರಿಂದಲೆ ಸಕಲರೂ ಬದುಕಿನ ಸಕಲ ವ್ಯವಹಾರಗಳಲ್ಲೂ ಅದನ್ನು ಅನುಷ್ಠಾನಕ್ಕೆ ತರಬೇಕು ಎಲ್ಲ ಕ್ಷೇತ್ರಗಳಲ್ಲೂ ಅದನ್ನು ಅನುಷ್ಠಾನ ಮಾಡಲಾಗದಿದ್ದರೆ ಅದಕ್ಕೆ ಔಪಯೋಗಿಕ ಮೌಲ್ಯವೇ ಇಲ್ಲ

(ಹರಿಜನ, ೧-೫-೩೭)

ನನ್ನ ದೇಶಕ್ಕಾಗಿ ನಾನು ತ್ಯಾಗಮಾಡಲಾರದುದು ಈ ಜಗತ್ತಿನಲ್ಲಿ ಏನೂ ಇಲ್ಲ—ಎರಡರ ಹೊರತು ಅವು ಸತ್ಯ ಮತ್ತು ಅಹಿಂಸೆ ಇಡೀ ಜಗತ್ತನ್ನೇ ನನ್ನ ಮುಂದಿಟ್ಟರೂ ಈ ಎರಡನ್ನು ಮಾತ್ರ ನಾನು ಬಿಡಲಾರೆ. ಏಕೆಂದರೆ ನನ್ನ ಪಾಲಿಗೆ ಸತ್ಯವೇ ದೇವರು ಸತ್ಯಸಾಧನೆಗೆ ಅಹಿಂಸೆಯಲ್ಲದೆ ಅನ್ಯ ಪಥವಿಲ್ಲ ಸತ್ಯ ಅಥವಾ ಭಗವಂತನನ್ನು ಬಲಿಗೊಟ್ಟು ಭಾರತಕ್ಕೆ ಸೇವೆ ಸಲ್ಲಿಸುವ ಆಲೋಚನೆಯನ್ನು ನಾನು ಮಾಡಲಾರೆ. ನಾನು ಬಲ್ಲೆ ಸತ್ಯವನ್ನು ಕೈಬಿಡಬಲ್ಲವನು ತನ್ನ ದೇಶವನ್ನೂ ಕೈಬಿಡಬಲ್ಲ ಆಪ್ತೇಷ್ಟರನ್ನೂ ಕೈಬಿಡಬಲ್ಲ ನನ್ನಾತ್ಮ ಮತ್ತು ಕರ್ತ ಇಬ್ಬರೂ ಮೆಚ್ಚುವಂತೆ ನಾನು ಹೋದೆಡೆಯೆಲ್ಲ ನನ್ನ ಕರ್ಮಕ್ಷೇತ್ರದ ಗಾಯತ್ರಿಗಳಾದ ಈ ನನ್ನ ಧರ್ಮಸೂತ್ರಗಳನ್ನು ಸಾರುತ್ತ ಹೋಗುತ್ತೇನೆ

ನನ್ನದು ಧರ್ಮಮಾರ್ಗ, ನಾವು ಧರ್ಮಿಗಳು, ಆದುದರಿಂದ ಉಳಿದವರಿಗೆ ನಾವು ಶ್ರೇಷ್ಠರು ಎಂಬ ಅಹಂಭಾವ ನಮ್ಮನ್ನು ಆಕ್ರಮಿಸುವ ಭಯ ಯಾವಾಗಲೂ ಇದ್ದೇ ಇದೆ ಇತರರಿಂದ ನಾನು ನಿರೀಕ್ಷಿಸುವಂತೆ ಸ್ವವಿಮರ್ಶೆಯಲ್ಲಿ ಸತ್ಯದಂತೆಯೆ ನಿಷ್ಠುರವಾಗಿರಲು ನಾನು ಪ್ರಯತ್ನಿಸುತ್ತೇನೆ

(ಹರಿಜನ, ೧-೫-೩೭)

"ಗಾಂಧೀತತ್ವ" ಎಂದು ಯಾವುದನ್ನು ಕರೆಯುತ್ತಾರೋ ಅದನ್ನು, ಆದರ ಪ್ರಸಾರವಿಧಾನಗಳನ್ನು ವಿಚಾರಿಸೋಣ ಸತ್ಯ ಅಹಿಂಸೆಗಳನ್ನು ಕುರಿತು ಪುಸ್ತಕಗಳನ್ನು ಬರೆಯುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸತ್ಯ ಅಹಿಂಸೆಗಳ ಪ್ರಸಾರ ಸಾಧ್ಯ ಅವುಗಳನ್ನು ಅನುಷ್ಠಾನಕ್ಕೆ ತಂದರೆ, ಅನುಷ್ಠಾನದ ಜೀವನ ಪುಸ್ತಕಕ್ಕಿಂತ ಶ್ರೇಷ್ಠ ಪುಸ್ತಕ ಮತ್ತು ಪತ್ರಿಕೆಗಳ ಪ್ರಕಟನೆ ಅನಗತ್ಯ ಎಂದು ನಾನು ಹೇಳುತ್ತಿಲ್ಲ ಅವು ಅನಿವಾರ್ಯವೇನಲ್ಲ ಎಂದಷ್ಟೆ ನನ್ನ ಅಭಿಪ್ರಾಯ ನಾವು ಸತ್ಯ ಅಹಿಂಸೆಗಳ ನಿಜವಾದ ಆರಾಧಕರಾಗುವ ಪಕ್ಷದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಆಗತ್ಯವಾಗಿ ಬೇಕಾದ ಬುದ್ಧಿಶಕ್ತಿಯನ್ನು ಭಗವಂತನೇ ನಮಗೆ ದಯಪಾಲಿಸುತ್ತಾನೆ ಪ್ರತಿಪಕ್ಷದ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವ ಇಚ್ಛೆ ಅಂತಹ ಶ್ರದ್ಧೆಯ ಪೂರ್ವಾಂಗವಾಗಿಯೇ ಉಳಿದಿದೆ ಪ್ರತಿಪಕ್ಷಿಯ ಮನಸ್ಸನ್ನು ಹೊಕ್ಕು ಆತನ ದೃಷ್ಟಿ ಏನೆಂದು ಅರಿಯಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು ಹಿಂಸೆಯ ಬಾಯನ್ನೇ ಅಹಿಂಸೆ ನೇರವಾಗಿ ಹೊಗುತ್ತದೆ ಎಂಬುದರ ಅರ್ಥ ಇದೇ ಅಂತಹ ಮನೋಧರ್ಮದ ಕವಚ ನಮಗಿದ್ದರೆ ಅಹಿಂಸೆಯ ತತ್ವಗಳನ್ನು ಪ್ರಸಾರಮಾಡುವ ವಿಶ್ವಾಸ ನಮಗೆ ಬರುತ್ತದೆ ಅದಿಲ್ಲದೆ ಪುಸ್ತಕ ಪತ್ರಿಕೆಗಳ ಪ್ರಚಾರ ವ್ಯರ್ಥ (ಹರಿಜನ, ೧೩-೫-೩೯)

ನನ್ನ ಸಲಹೆಗಳಲ್ಲೆಲ್ಲ ಒಂದು ರಕ್ಷಾಸೂತ್ರ ಇದ್ದೇ ಇರುತ್ತದೆ. ತಮ್ಮ ಬುದ್ಧಿಗೂ ಹೃದಯಕ್ಕೂ ಒಪ್ಪಿಗೆಯಾಗದಿದ್ದರೆ ಯಾರೂ ಅವುಗಳನ್ನು ಅನುಸರಿಸಬೇಕಾಗಿಲ್ಲ (ಹರಿಜನ, ೧೫-೭-೩೫)

ನನ್ನನ್ನು ಮೆಚ್ಚುವವರಿಗೂ ನನ್ನ ಮಿತ್ರರಿಗೂ ಒಂದು ಧೈರ್ಯ ಹೇಳಬಲ್ಲೆ ಮಹಾತ್ಮಾ ಎಂಬುದನ್ನು ಮರೆತು ನನ್ನನ್ನು ಬರಿಯ 'ಗಾಂಧೀ' ಎಂದು ಭಾವಿಸುವುದಾದರೆ ಅವರು ನನ್ನ ಮೆಚ್ಚುಗೆಗೆ ಹೆಚ್ಚಾಗಿ ಪಾತ್ರರಾಗುತ್ತಾರೆ. ನಾನು ಯಾವ ತತ್ವಗಳನ್ನು ಜೀವನದಲ್ಲಿ ಅನುಷ್ಠಾನ ಮಾಡ

ಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇನೆಯೊ ಅದನ್ನು ತಾವು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕು, ಇಲ್ಲವೆ ಆದರಲ್ಲಿ ಅವರಿಗೆ ನಂಬುಗೆ ಇರದಿದ್ದ ಪಕ್ಷದಲ್ಲಿ ಅದನ್ನು ಸರ್ವರೀತಿಯಿಂದಲೂ ವಿರೋಧಿಸಬೇಕು— ಇದೇ ನನ್ನ ಮಿತ್ರರು ನನಗೆ ತೋರಿಸಬಹುದಾದ ಪರಮಗೌರವ

(ಯಂಗ್ ಇಂಡಿಯಾ ೧೨-೬-೨೪)

ಯಾವ ಮಹಾ ಉದ್ಯಮದಲ್ಲಿಯೆ ಆಗಲಿ ನಿರ್ಣಯಕಾರಿಯಾಗುವುದು ಹೋರಾಡುವವರ ಸಂಖ್ಯೆಯಲ್ಲ, ಅವರ ಸತ್ವ ಜಗತ್ತಿನ ಮಹಾ ವ್ಯಕ್ತಿಗಳೆಲ್ಲ ಏಕಾಂಗಿಯಾಗಿ ನಿಂತರು ಝರತುಷ್ಟ್ರ, ಬುದ್ಧ, ಯೇಸು, ಮಹಮ್ಮದ್ ಈ ಎಲ್ಲ ಮಹಾಪ್ರವಾದಿಗಳನ್ನೂ ಗಮನಿಸಿ ನಾನಿನ್ನೂ ಹೆಸರಿಸಬಹುದಾದ ಇತರ ಹಲವರಂತೆಯೆ ಅವರೆಲ್ಲರೂ ಏಕಾಂಗಿಯಾಗಿಯೆ ಕೆಲಸ ಮಾಡಿದರು ಆದರೆ ಅವರಿಗೆ ತಮ್ಮಲ್ಲಿಯೂ ಭಗವಂತನಲ್ಲಿಯೂ ಜೀವಂತ ಶ್ರದ್ಧೆಯಿತ್ತು, ಭಗವಂತ ತಮ್ಮ ಪಕ್ಕದಲ್ಲಿದ್ದಾನೆಂಬ ವಿಶ್ವಾಸ ಇದ್ದುದರಿಂದ ತಾವು ಏಕಾಕಿಗಳು ಎಂಬ ಭಾವನೆಯೇ ಅವರಿಗೆ ಬರಲಿಲ್ಲ

(ಯಂಗ್ ಇಂಡಿಯಾ, ೧೦-೧೨ ೨೯)

ನನ್ನಲ್ಲಿರುವ ಏನೋ ಒಂದು ವಾಣಿ ನನ್ನ ಸಂಕಟವನ್ನು ಕೂಗಿ ಸಾರುವಂತೆ ನನ್ನನ್ನು ಪ್ರಚೋದಿಸುತ್ತಿದೆ ಅದು ಯಾವುದೆಂಬುದನ್ನು ನಾನು ಖಚಿತವಾಗಿ ಬಲ್ಲೆ ನನ್ನನ್ನೆಂದೂ ವಂಚಿಸದ ನನ್ನೊಳಗಿನ ಆ ವಾಣಿ ಹೇಳುತ್ತದೆ "ನೀನು ಒಬ್ಬೊಂಟಿಗನೆ ಆಗಿ ನಿಲ್ಲಬೇಕಾಗಿ ಬಂದರೂ ಸರಿ, ಇಡೀ ಜಗತ್ತನ್ನೆ ಎದುರಿಸಿ ನಿಲ್ಲಬೇಕಾಗುತ್ತದೆ.

"ಜಗತ್ತು ನಿನ್ನನ್ನು ತನ್ನ ಕೆಂಗಣ್ಣಿನಿಂದ ದುರುದುರನೆ ನೋಡಿದರೂ ಸರಿ ನೀನು ಆದರ ದೃಷ್ಟಿಗೆ ದೃಷ್ಟಿಕೊಟ್ಟು ನಿಲ್ಲಬೇಕಾಗುತ್ತದೆ, ಭೀತಿ ಬೇಡ. ನಿನ್ನ ಹೃದಯದಲ್ಲಿ ನೆಲಸಿ ಹೀಗೆಂದು ಹೇಳುತ್ತಿರುವ ಆ ಅಣುರೂಪಿಯಲ್ಲಿ ನಿನಗೆ ಶ್ರದ್ಧೆಯಿರಲಿ ಯಾವುದಕ್ಕಾಗಿ ನೀನು ಬದುಕಿದ್ದೀಯೋ ಯಾವುದಕ್ಕಾಗಿ ನೀನು ಮಡಿಯಬೇಕೋ ಅದಕ್ಕಾಗಿ ಮನೆ, ಮಠ, ಮಡದಿ, ಮಕ್ಕಳು ಸರ್ವಸ್ವವನ್ನೂ ಪರಿತ್ಯಜಿಸು, ಆದರೆ ಅದರ ಸತ್ಯಕ್ಕೆ ಸಾಕ್ಷಿಯಾಗಿ ಬಾಳು."

(ಬಾಂಬೆ ಕ್ರಾನಿಕಲ್, ೯-೮-೪೨)

# ವಿಶೇಷ ದೃಷ್ಟಿ

[ಲೇಖಕರು : ಶ್ರೀ ರಂಗನಾಥ ರಾಮಚಂದ್ರ ದಿವಾಕರ]

ಗಾಂಧೀಜೀ ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟರು ಅವರು ಮಹಾಮುತ್ಸದ್ದಿಗಳು, ರಾಜಕಾರಣಪಟುಗಳು ಆದರೆ ಮೂಲತಃ ಅವರ ಜೀವನ ಎಂತಹದು? ಅದು ಧರ್ಮಜೀವನ, ಅವರು ಧರ್ಮಜೀವಿಗಳು ಎಂದೇ ಹೇಳಬೇಕಾಗುವದು ಅವರು ರಾಜಕಾರಣವನ್ನು ನಡೆಸಿದರೂ ಅದನ್ನು ಧಾರ್ಮಿಕ ತತ್ವಗಳ ತಳಹದಿಯ ಮೇಲೆಯೇ ನಡೆಸಿದರು ಧರ್ಮಕ್ಕೆ ಚ್ಯುತಿಯುಂಟಾಗುವ ಸಂದರ್ಭಗಳಲ್ಲಿ ಅವರು ಧರ್ಮವನ್ನು ಪಾಲಿಸಿದರೆ ಹೊರತು ತಾತ್ಪೂರ್ತಿಕ ಅಥವಾ ತಾತ್ಕಾಲಿಕ ರಾಜಕೀಯ ಲಾಭವನ್ನರಸಲಿಲ್ಲ ಗೀತೆಯಲ್ಲಿ ಹೇಳಿದ 'ಅಧ್ಯಾತ್ಮ ಜ್ಞಾನ ನಿತ್ಯತ್ವವು' ಅವರ ಹೃದಯದಲ್ಲಿ ಮನೆ ಮಾಡಿಕೊಂಡಿತ್ತು ಅವರು ಯಾವ ಕೆಲಸದಲ್ಲಿ ತೊಡಗಿದರೂ ಏನು ಮಾಡಿದರೂ ದೇವರನ್ನೂ, ಧರ್ಮವನ್ನೂ ಸಾಕ್ಷಿಯಾಗಿಟ್ಟೇ ಮಾಡುತ್ತಿದ್ದರು

ಆದರೆ ಅವರ ಧರ್ಮದೃಷ್ಟಿ ಅತ್ಯಂತ ವ್ಯಾಪಕವಾಗಿತ್ತು ಕೇವಲ ಸಾಂಪ್ರದಾಯಿಕ ಧರ್ಮ ಅಥವಾ ಸಮಾರಂಭಾದಿಗಳು ಇಲ್ಲವೆ ಧರ್ಮದ ಬಾಹ್ಯ ಚಿನ್ಹಗಳು ಇವುಗಳಿಗೆ ಅವರು ಮಹತ್ವವನ್ನು ಕೊಡುತ್ತಿರಲಿಲ್ಲ ಎಲ್ಲ ಜಗತ್ತಿನಲ್ಲಿ ಪ್ರಚಲಿತವಿರುವ ಹಿಂದೂ, ಮುಸಲ್ಮಾನ, ಬುದ್ಧ, ಕ್ರಿಶ್ಚನ್ ಮುಂತಾದ ಧರ್ಮಗಳಿಗೆ ಆಧಾರಭೂತವಾದ ಸನಾತನ ಧರ್ಮತತ್ವಗಳನ್ನೆ ಅವರು ಮುಖ್ಯವಾಗಿಟ್ಟುಕೊಂಡಿದ್ದರು- ಈ ಧರ್ಮ ಶ್ರೇಷ್ಠ, ಆ ಧರ್ಮ ಶ್ರೇಷ್ಠ, ಎಂದು ಅವರು ಹೇಳುತ್ತಿರಲಿಲ್ಲ ಒಂದು ಧರ್ಮ ಬಿಟ್ಟು ಇನ್ನೊಂದು ಧರ್ಮವನ್ನು ಸೇರುವದು ಅವರಿಗೆ ಒಪ್ಪಿತವಿರಲಿಲ್ಲ ಅವರು ಧರ್ಮಾಂತರಕ್ಕೆ (ಕನ್‌ವರ್ಶನ್) ತೀರ ವಿರುದ್ಧರಿದ್ದರು ಆಯಾ ಧರ್ಮವು ಅವರವರಿಗೆ ಶ್ರೇಷ್ಠ, ಹಾಗೂ ಆಯಾ ಧರ್ಮವು ಅವರವರಿಗೆ ಮುಕ್ತಿದಾಯಕ ಎಂದು ಅವರು ಪ್ರತಿಪಾದಿಸುತ್ತಿದ್ದರು ಅವರು ಆಶ್ರಮದಲ್ಲಿ ಪಾಲಿಸುವ ವ್ರತಗಳಲ್ಲಿ ಸರ್ವಧರ್ಮಗಳನ್ನು ಕುರಿತು ಸಮಭಾವವನ್ನು

ತಾಳುವದು ಒಂದು ಮುಖ್ಯವಾಗಿತ್ತು. ಸ್ವಧರ್ಮನಿಷ್ಠೆ ಮತ್ತು ಪರಧರ್ಮ ಸಹಿಷ್ಣುತೆ ಇವು ಪರಸ್ಪರ ವಿರೋಧಿ ಭಾವನೆಗಳಲ್ಲ, ಅವು ಒಂದಕ್ಕೊಂದು ಪೋಷಕವಾದವುಗಳು. ಅಶೋಕ ಮಹಾರಾಜನು ಇದೇ ಅರ್ಥದಲ್ಲಿ, ಅನ್ಯ ಧರ್ಮಗಳನ್ನು ಆದರಪೂರ್ವಕವಾಗಿ ಅಭ್ಯಸಿಸಬೇಕು, ಚರ್ಚಿಸಬೇಕು, ಎಂದು ತನ್ನ ಶಿಲಾಲೇಖನಗಳಲ್ಲಿ ಬರೆದಿಟ್ಟಿರುವನು. ಈ ಬಗೆಯ ಪರಸ್ಪರ ಪ್ರೇಮಾದರ ಭಾವಗಳೇ ವಿವಿಧ ಧರ್ಮಗಳ ಜನರನ್ನು ಧರ್ಮಸಮನ್ವಯ ದತ್ತ ಒಯ್ಯಬಲ್ಲವು. ಸರ್ವಧರ್ಮಸಮಭಾವವು ಸರ್ವಧರ್ಮಸಮನ್ವಯದ ತಳಹದಿಯು.

ಧರ್ಮ ಎಂಬುದಕ್ಕೆ ಅನೇಕಾರ್ಥಗಳಿರುವುವು. ಸಾಂಪ್ರದಾಯಿಕ ವಾಗಿ ಯಾವದೊಂದು ಜನ ಇಲ್ಲವೆ ಜನಾಂಗ ಆಚರಿಸುತ್ತ ಬಂದ ಧರ್ಮ, ಹಿಂದೂ, ಪಾರಸಿ, ಕ್ರಿಶ್ಚನ್ ಇತ್ಯಾದಿ, ಎಂಬುದೊಂದು ಅರ್ಥ. ಇನ್ನೊಂದು ಮೂಲ ಅರ್ಥ, ಆಯಾ ವಸ್ತುವಿನ ಧರ್ಮ ಎಂಬುದು, ಯಾವ ತತ್ವ-ಗುಣ-ಕರ್ಮಗಳ ಮೂಲಕ ಯಾವದೊಂದು ವಸ್ತು ಹುಟ್ಟಿ ಬದುಕಿ ಸರಿಯಾಗಿ ಬಾಳುವುದೊ ಅವೆಲ್ಲ ಕೂಡಿ ಆಯಾ ವಸ್ತುವಿನ ಧರ್ಮ ಎಂದೆನಿಸುವದು. ಯಾವುದು ಯಾವುದೇ ವಸ್ತುವಿಗೆ ಧಾರಣಾಶಕ್ತಿಯನ್ನು, ಸರಿಯಾಗಿ ಜೀವಿಸುವ ಸಾಮರ್ಥ್ಯವನ್ನು ಕೊಡುವುದೊ ಅದು ಅದರ ಧರ್ಮ.

ಈ ಹೇಲ್ಯಾಣಿಸಿದ ವ್ಯಾಪಕಾರ್ಥದಲ್ಲಿ 'ಧರ್ಮ' ಈ ಶಬ್ದಕ್ಕೆ ಅನ್ವರ್ಥಕವಾದ ಇಂಗ್ಲೀಷ್ ಶಬ್ದವೇ ಇಲ್ಲ, ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದುಂಟು. ಆ ಭಾಷೆಯಲ್ಲಿ ಇದ್ದ 'ರಿಲಿಜನ್' ಎಂಬ ಶಬ್ದವು ಸಾಂಪ್ರದಾಯಿಕವಾಗಿ ನಡೆದುಬಂದ ಹಿಂದೂ, ಮುಸಲ್ಮಾನ ಇತ್ಯಾದಿ ಧರ್ಮಗಳನ್ನು ಸೂಚಿಸುವದೇ ಹೊರತು ಆಯಾ ವಸ್ತುವಿನ, ವ್ಯಕ್ತಿಯ, ಅಥವಾ ಸಮಾಜದ ಸರಿಯಾದ ಬದುಕು-ಬಾಳುವೆಗಳಿಗೆ ಆಧಾರಭೂತ ವಾದ ಸಕಲ ನಿಯಮ-ವ್ಯವಸ್ಥೆ-ಕಟ್ಟಳೆ ಎಂಬುದನ್ನು ಸ್ಪಷ್ಟಗೊಳಿಸುವುದಿಲ್ಲ. ಪ್ರತಿಯೊಂದು ವಸ್ತುವಿಗೂ ಅದರದರ ಧರ್ಮವಿದೆ. ಈ ಅರ್ಥದಲ್ಲಿ 'ದಿ ಲಾ' (*The Law*) ಎಂಬ ಶಬ್ದಪ್ರಯೋಗವನ್ನು ಮಾಡಬಹುದು. ಗಾಂಧೀಜೀ ಈ ಅರ್ಥದಿಂದಲೆ ಹೆಚ್ಚಾಗಿ ಧರ್ಮದತ್ತ ನೋಡುತ್ತಿದ್ದರು.

ಈ ಅರ್ಥದಿಂದಲೇ ಸ್ವಧರ್ಮವು ಎಲ್ಲಕ್ಕೂ ಹೆಚ್ಚಿನದು, ಪರಧರ್ಮವು ಕಾಣಿಸಲು ಸರಿಯಾದುದೆಂದು ತೋರಿದರೂ ಅದು ಭಯಾವಹವು

ಮಾನವಜೀವನದಲ್ಲಿ ಚತುರ್ವಿಧ ಪುರುಷಾರ್ಥವನ್ನು ಸಾಧಿಸಬೇಕೆಂದು ಸನಾತನ ಧರ್ಮವು ಸಾರುತ್ತ ಬಂದಿದೆ ಧರ್ಮ. ಅರ್ಥ, ಕಾಮ ಮತ್ತು ಮೋಕ್ಷ ಇವೇ ಆ ನಾಲ್ಕು ಪುರುಷಾರ್ಥಗಳು ಆದರೆ ಈ ಉದ್ದೇಶಗಳನ್ನು ಸಾಧಿಸುವ ಬಗೆ ಯಾವುದು? ಮಹಾಭಾರತಕಾರರು ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ ಅದೇನೆಂದರೆ, ಮೋಕ್ಷವಂತೂ ಧರ್ಮದಿಂದಲೇ, ಧರ್ಮಾಚರಣೆಯಿಂದಲೇ ಸಾಧ್ಯ ಅಲ್ಲದೆ ಅರ್ಥ ಮತ್ತು ಕಾಮ ಈ ಉದ್ದೇಶಗಳು ಕೂಡ ಧರ್ಮದಿಂದಲೇ ಸಾಧ್ಯ (ಧರ್ಮಾದರ್ಥಶ್ಚ ಕಾಮಶ್ಚ ತಸ್ಮಾದ್ಧರ್ಮಮಾಚರೇತ್) ಎಂದು ವ್ಯಾಸಮುನಿಗಳು ಹೇಳಿರುವರು. ಇಲ್ಲಿ ಧರ್ಮ ಅಂದರೆ ಸನಾತನಧರ್ಮ, ತ್ರಿಕಾಲದಲ್ಲಿಯೂ ಸತ್ಯರೂಪವಾಗಿ ಇರುವ ಧರ್ಮ, ಕಾಲಕಾಲಕ್ಕೆ, ದೇಶದೇಶಕ್ಕೆ, ಜನಾಂಗ ಜನಾಂಗಕ್ಕೆ ಬದಲಾಗುವ ಧರ್ಮವಲ್ಲ, ಇದು ಮಾನವ ಮಾತ್ರರಿಗೆಲ್ಲ ಸಾಮಾನ್ಯವಾಗಿರುವ ಧರ್ಮ ಇದೇ ಅರ್ಥದಲ್ಲಿ ಗಾಂಧೀಜಿಯವರು ಧರ್ಮ ಶಬ್ದದ ಉಪಯೋಗವನ್ನು ಅನೇಕ ಸಾರೆ ಮಾಡಿರುವರು ಯತೋ ಧರ್ಮಸ್ತತೋ ಜಯಃ, ಎಂದು ಹೇಳುವಾಗಲೂ ಇದೇ ಅರ್ಥವು ಗರ್ಭಿತವಾಗಿರುವದು.

'ಧರ್ಮ' ಈ ಶಬ್ದಕ್ಕೆ ವಿರೋಧವಾಗಿ 'ಅಧರ್ಮ' ಎಂಬ ಶಬ್ದವನ್ನು ನಾವು ಉಪಯೋಗಿಸುವೆವು ಧರ್ಮ ಎಂಬುದು ಬದುಕು-ಬಾಳುವೆಗಳಿಗೆ ಸಾಧಕವಿದ್ದಂತೆ ಅಧರ್ಮ ಎಂಬುದು ಅವುಗಳಿಗೆ ಬಾಧಕವಿರುವದು, ಬದುಕು ಬಾಳುವೆಗಳನ್ನು ಹಾಳುಮಾಡುವಂತಹದಿರುವದು ಆದುದರಿಂದ ಅಧರ್ಮವನ್ನು ಬಿಟ್ಟು, ನಿರಾಕರಿಸಿ, ಧರ್ಮವನ್ನು ಪಾಲಿಸುವುದೇ ಬುದ್ಧಿವಂತ ಮಾನವಪ್ರಾಣಿಯ ಆದ್ಯ ಕರ್ತವ್ಯವಿರುವದು ಆಯಾ ಪದಾರ್ಥಗಳ ಧರ್ಮವನ್ನರಿತು ಮಾನವನು ತನ್ನ ಹಾಗೂ ತನ್ನ ಸಮಾಜದ ಅಭ್ಯುದಯ ನಿಶ್ರೇಯಸಕ್ಕಾಗಿ ಆ ಜ್ಞಾನವನ್ನುಪಯೋಗಿಸುವುದು, ಅದೇ ರೀತಿ ತನ್ನ ಮನೋಧರ್ಮವನ್ನರಿತುಕೊಂಡು ಆ ಜ್ಞಾನವನ್ನು ಕೂಡ ಅದೇ ಉದ್ದೇಶಸಾಧನೆಗಾಗಿ ಉಪಯೋಗಿಸುವುದು ಮಾನವನ ನಿಜಧರ್ಮ

ವಿಧುವುದು. ಗಾಂಧೀಜಿಯವರು ಅದೇ ದೃಷ್ಟಿಯಿಂದ ಪ್ರೇರಿತರಾಗಿ ಸತ್ಯ ಶೋಧಕರಾದರು, ಸತ್ಯವ್ರತರಾದರು, ಸತ್ಯಾಗ್ರಹಿಗಳಾದರು. ಅವರ ಜೀವನವೆಲ್ಲ ಧರ್ಮಪ್ರೇರಿತ, ಧರ್ಮನಿಷ್ಠ ಹಾಗೂ ಪೂರ್ಣಧರ್ಮಾಚರಣೆ ಗಾಗಿ ಮೀಸಲು

ನೀತಿ ಎಂಬುದು ಧರ್ಮದಿಂದ ಪ್ರತ್ಯೇಕವಾದ ವಸ್ತುವಲ್ಲ. ಧರ್ಮದ ಆಚರಣೆಯ ತತ್ವಗಳು, ಧರ್ಮದ ಪ್ರತ್ಯಕ್ಷ ಆಚರಣೆ, ವ್ಯಕ್ತಿ, ವಸ್ತು, ಸಮಾಜ ಇವುಗಳೊಡನೆ ಮಾನವನು ಇಡತಕ್ಕ ಸಂಬಂಧ ಹಾಗೂ ಅದನ್ನನ್ವಯಿಸುವ ನಿಯಮಗಳು, ಇವೆಲ್ಲವೂ ಕೂಡಿ ನೀತಿಶಾಸ್ತ್ರವು ಸಿದ್ಧವಾಗುವದು. ನೀತಿಯು ಆಚಾರಕ್ಕೆ ಹೆಚ್ಚು ಸಂಬಂಧಿಸಿದ್ದು. ಆದರೆ ವಿಶಿಷ್ಟವಾದ ಆಚಾರವು ನೀತಿಯುಕ್ತವಿದೆಯೊ ಇಲ್ಲವೊ ಎಂಬುದನ್ನು ನಿಶ್ಚಯಿಸುವಾಗ ಧರ್ಮಾಧರ್ಮದ ವಿಚಾರ, ಕರ್ತವ್ಯಾಕರ್ತವ್ಯಗಳ ವಿಮರ್ಶೆ ಇವು ಅಗತ್ಯವಿರುವವು

'ನೀತಿ' ಎಂಬುದಕ್ಕೆ ಇಂಗ್ಲೀಷಿನಲ್ಲಿ 'ಎತಿಕ್ಸ್' ಇಲ್ಲವೆ 'ಮೊರ್‍ಯಾಲಿಟಿ' ಎಂಬ ಶಬ್ದವು ಪ್ರಚಲಿತವಿರುವದು ಸೀ ಈ, ಎಮ್ ಜೋಡ್ ಎಂಬ ಪ್ರಸಿದ್ಧ ಆಂಗ್ಲ ತತ್ವಜ್ಞಾನಿಯು ಗಾಂಧೀಜಿಯವರನ್ನು, 'ಮಾರಲ್ ಜೀನಿಯಸ್' ಎಂದು ಬಣ್ಣಿಸಿದ್ದಾನೆ ಆಧುನಿಕ ಕಾಲದಲ್ಲಿ ನೀತಿಶಾಸ್ತ್ರದಲ್ಲಿ ಜಗತ್ತಿಗೆಲ್ಲ ಪಾಠಕಲಿಸುವ ಶಕ್ತಿ ಗಾಂಧೀಜಿಯವರಲ್ಲಿ ಇತ್ತೆಂಬಲ್ಲಿ ಸಂಶಯವಿಲ್ಲ ಯಾವದೇ ಒಂದು ಸಂದರ್ಭದಲ್ಲಿ ಅಥವಾ ಸನ್ನಿವೇಶದಲ್ಲಿ ಯಾವ ಆಚರಣೆ ನೀತಿಯುಕ್ತ ಯಾವ ಆಚರಣೆ ಅನೀತಿಯುಕ್ತ ಎಂಬುದನ್ನು ಹೇಳುವದು ಅತಿಶಯ ಕಠಿಣವಾದ ಮಾತು ಅದೇ ರೀತಿ ನೀತಿಯುಕ್ತ ಎಂದು ನಿರ್ಧಾರಿತವಾದ ಬಳಿಕ ಆ ಪ್ರಕಾರವಾಗಿ ಆಚರಿಸುವುದು ಅಷ್ಟೇ ದುಸ್ತರವಾದುದು. ಗಾಂಧೀಜಿಯವರಲ್ಲಿ ನೀತಿ ಅನೀತಿಗಳನ್ನು ಕಂಡು ಹಿಡಿಯುವ ಅಗಾಧ ಶಕ್ತಿ ಇತ್ತು, ಇಷ್ಟೇ ಅಲ್ಲ, ಆ ರೀತಿ ಸ್ವತಃ ತಪ್ಪದೇ ನಡೆದುಕೊಳ್ಳುವ ವೀರ ವಿಕ್ರಮವಿತ್ತು ನಿರ್ಭಯತೆಯಿಂದ, ನಿರ್ದಾಕ್ಷಿಣ್ಯದಿಂದ, ನಿಷ್ಠೆಯಿಂದ ನೀತಿಮಾರ್ಗದಿಂದಲೆ ನಡೆಯುವುದರಲ್ಲಿ ಅವರಿಗೆ ಸರಿಮಿಗಿಲಾದವರು ಈಚೆಗ ಯಾವ ದೇಶದಲ್ಲಿಯೂ ಹುಟ್ಟಿಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು.

ಈ ರೀತಿ ಧರ್ಮ ಹಾಗೂ ನೀತಿ ಈ ಎರಡೂ ಕ್ಷೇತ್ರಗಳಲ್ಲಿ ಗಾಂಧೀಜಿಯವರು ಅದ್ವಿತೀಯ ಸಾಮರ್ಥ್ಯವನ್ನು ತೋರಿರುವರು

ಭಾರತವು ಅತೀವ ಪುರಾತನ ಸಂಸ್ಕೃತಿಯುಳ್ಳದ್ದು. ತತ್ವಜ್ಞಾನ, ನೀತಿಶಾಸ್ತ್ರ ಇವುಗಳನ್ನು ಕುರಿತು ಮೊದಲಿನಿಂದಲೂ ಮುಂದುವರಿದುದೂ ಇದ್ದುದರಿಂದ ಗಾಂಧೀಜಿಯವರಿಗೆ ಆ ಪರಂಪರೆಯ ಲಾಭವೂ ದೊರತಿತ್ತು. ಆದರೆ ಅವರು ಕೇವಲ ಪರಂಪರಾಶರಣರಲ್ಲ ಹಲವಾರು ಮೌಲಿಕವಾದ ವಿಚಾರಗಳನ್ನು ಕೂಡ ಅವರು ವ್ಯಕ್ತಮಾಡಿರುವರು ಸತ್ಯಾನ್ವೇಷಣೆ, ಧರ್ಮದರ್ಶನ, ನೀತಿಯುಕ್ತ ಆಚಾರ ಇವುಗಳಲ್ಲಿ ಗಾಂಧೀಜಿಯವರು ಅನುಪಮವಾದ ಸಾಹಸವನ್ನೂ ನವದೃಷ್ಟಿಯನ್ನೂ ತೋರಿದ್ದಾರೆ ಈ ವಿಷಯದಲ್ಲಿ ಅವರು ಕೇವಲ ಭಾರತೀಯರ ಸೊತ್ತಲ್ಲ, ಅವರು ವಿಶ್ವವ್ಯಕ್ತಿಗಳು, ವಿಶ್ವ ಮಾನವನ ಪ್ರಗತಿಗಾಗಿ ಹಗಲಿರುಳು ಹೋರಾಡಿದವರು, ತತ್ವ ಮತ್ತು ವ್ಯವಹಾರ ಇವುಗಳಲ್ಲಿಯ ಕೃತ್ರಿಮ ಭೇದವನ್ನು ಅಳಿಸಿ ಅವೆರಡೂ ಬೇರೆಯಲ್ಲ ಎಂದು ಪ್ರತ್ಯಕ್ಷ ಆಚರಣೆಯಿಂದ ತೋರಿಸಿಕೊಟ್ಟವರಲ್ಲಿ ಅವರು ಅತಿಶ್ರೇಷ್ಠರು ಆದುದರಿಂದ ಅವರು ಈ ವಿಷಯಗಳನ್ನು ಕುರಿತು ಆಗಾಗ ಪ್ರಕಟಿಸಿದ ವಿಚಾರಗಳು ಗಮನಾರ್ಹವಿರುವುದಷ್ಟೇ ಅಲ್ಲ ಅವು ಅತ್ಯಂತ ಅಭ್ಯಾಸಾರ್ಹವಿರುವುವು

———

# ಪ್ರಕಾಶಕೀಯ

ಗಾಂಧೀ ಗ್ರಂಥಮಾಲೆಯ ಐದನೆಯ ಸಂಪುಟವಾಗಿ 'ಧರ್ಮ-ನೀತಿ' ಗ್ರಂಥ ಪ್ರಕಟವಾಗುತ್ತಿದೆ. ಇದರ 'ಧರ್ಮ-ನೀತಿ' ವಿಭಾಗದ ಮೊದಲ ಹನ್ನೆರಡು ಅಧ್ಯಾಯಗಳನ್ನೂ ಮತ್ತು 'ರಾಮನಾಮ' ಎಂಬ ಭಾಗವನ್ನೂ ಶ್ರೀ ಜಿ ವಿ ನಾರಾಯಣಮೂರ್ತಿ ಅವರು ಕನ್ನಡಿಸಿಕೊಟ್ಟಿದಾರೆ 'ಈಶ್ವರಸ್ವರೂಪ' ಎಂಬ ಭಾಗವನ್ನು ಶ್ರೀ ದೇಶಪಾಂಡೆ ಮನೋಹರ ರಾಯರು ಅನುವಾದ ಮಾಡಿದಾರೆ ಈ ಭಾಗಗಳನ್ನು ಪ್ರೊ ಎಸ್ ವಿ ರಂಗಣ್ಣನವರು ಪರಿಷ್ಕರಿಸಿ ಕೊಟ್ಟಿದಾರೆ 'ಧರ್ಮ-ನೀತಿ' ವಿಭಾಗದ ೧೩ನೆಯ ಅಧ್ಯಾಯವಾಗಿ ಪ್ರಕಟವಾಗಿರುವ 'ನೀತಿಧರ್ಮ' ಎಂಬ ಪ್ರಬಂಧ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರ ಭಾಷಾಂತರ ಈ ಮಹನೀಯರಿಗೆಲ್ಲ ಸಂಪಾದಕಮಂಡಲಿ ಋಣಿ

ಈ ಗ್ರಂಥದಲ್ಲಿ ಅಚ್ಚಾಗಿರುವ ಮುಖಚಿತ್ರವನ್ನು ಶ್ರೀ ಡಿ. ಜಿ. ಟೆಂಡುಲ್ಕರ್ ಅವರ 'ಮಹಾತ್ಮಾ' ಗ್ರಂಥದಿಂದ ಆರಿಸಿಕೊಳ್ಳಲಾಗಿದೆ. ಅವರಿಗೂ ಸಂಪಾದಕ ಮಂಡಲಿಯ ಕೃತಜ್ಞತೆ ಮೀಸಲು

ಡಿಸೆಂಬರ್, ೧೯೫೮.
ಮೈಸೂರು

ಪ್ರಧಾನ ಸಂಪಾದಕರು
ಗಾಂಧೀ ಗ್ರಂಥಮಾಲೆ

# ಧರ್ಮ ಮತ್ತು ನೀತಿ

## ಅನುಕ್ರಮಣಿಕೆ


| | ಪುಟ |
|---|---|
| **ಧರ್ಮ-ನೀತಿ** | |
| ಪ್ರವೇಶ | ೧ |
| ಧರ್ಮ-ಕೆಲವು ಸಾಮಾನ್ಯ ಸೂಕ್ತಿಗಳು | ೧೧ |
| ನನ್ನ ಧರ್ಮ | ೩೬ |
| ನನ್ನ ಧರ್ಮದ ಅನುಷ್ಠಾನ | ೫೯ |
| ನನ್ನ ಧರ್ಮಾಚರಣೆಗೆ ಸಹಾಯಕಗಳು | ೭೪ |
| ನನ್ನ ಧರ್ಮದ ಗುರಿಗಳು—ಸರ್ವೋದಯ | ೯೮ |
| ಮೂರು ಪ್ರಧಾನ ಸದ್ಗುಣಗಳು | ೧೦೫ |
| ಒಳ್ಳೆಯ ಜೀವನದ ಮರ್ಮ—ಆತ್ಮಸಂಯಮ | ೧೧೫ |
| ನಾಗರಿಕತೆಯೂ ಇಂದ್ರಿಯನಿಗ್ರಹವೂ | ೧೨೯ |
| ವ್ರತದೀಕ್ಷೆಯೂ ನೀತಿನಿಷ್ಠೆ | ೧೩೧ |
| ನಮ್ರತೆಯ ಸದ್ಗುಣ | ೧೪೦ |
| ಕಾಯಕವೇ ಪೂಜೆ | ೧೪೨ |
| ನನ್ನ ಧ್ರುವ ನಕ್ಷತ್ರ | ೧೪೪ |
| ನೀತಿಧರ್ಮ | ೧೪೯ |
| **ಈಶ್ವರಸ್ವರೂಪ** | |
| ಧ್ಯೇಯ | ೧೬೧ |
| ನೈತಿಕ ಸಾಧನ | ೧೮೯ |
| ಪಾರಮಾರ್ಥಿಕ ಸಾಧನ | ೧೯೯ |
| ಪರಮಾತ್ಮನ ಸಾಕ್ಷಾತ್ಕಾರ | ೨೨೭ |
| **ರಾಮನಾಮ** | |
| ರಾಮನಾಮ | ೨೩೯-೩೦೪ |

# ಧರ್ಮ ಮತ್ತು ನೀತಿ

## ಪ್ರವೇಶ

ನಿಜವಾದ ಧರ್ಮವೂ ನಿಜವಾದ ನೀತಿಯೂ ಪ್ರತ್ಯೇಕಿಸಲಾರದಂತೆ ಪರಸ್ಪರ ಹೊಂದಿಕೊಂಡಿರುತ್ತವೆ ಭೂಮಿಯಲ್ಲಿ ಬಿತ್ತಿದ ಬೀಜಕ್ಕೆ ನೀರು ಹೇಗೋ ಧರ್ಮವು ನೀತಿಗೆ ಹಾಗೆ (ನೀತಿಧರ್ಮ)

ಬಿತ್ತಿದ ಬೀಜಕ್ಕೆ ಸಕಾಲದಲ್ಲಿ ನೀರನ್ನು ಎರೆಯದಿದ್ದರೆ ಅದು ಮಣ್ಣಿನ ಬುಡದಲ್ಲಿಯೇ ನಾಶವಾಗಿ ಹೋಗುತ್ತದೆ ಅದೇ ಪ್ರಕಾರವಾಗಿ ಫಲ ಪ್ರದಾನ ಮಾಡುವ ಶಕ್ತಿಯುಳ್ಳ ಧರ್ಮದ ಪ್ರಭಾವವಿಲ್ಲದಿದ್ದರೆ, ನೀತಿಯು ಕೃಶವಾಗಿ, ಒಣಗಿ, ಕೊನೆಗೆ ನಾಶವಾಗುತ್ತದೆ ಆದುದರಿಂದ ನಿಜವಾದ ಧರ್ಮವೂ ನಿಜವಾದ ನೀತಿಯೂ ಪ್ರತ್ಯೇಕಿಸಲಾರದಂತೆ ಪರಸ್ಪರ ಹೊಂದಿಕೊಂಡಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ ಧರ್ಮಬಾಹಿರವಾದ ನೀತಿಯು ಬರೀ ಶೂನ್ಯಕ್ಕೆ ಸಮಾನ ಸತ್ಯ ಮತ್ತು ಪ್ರಾಮಾಣಿಕತೆಗಳಿಗಿಂತ ಹೆಚ್ಚು ಉದಾತ್ತವಾದ ಧರ್ಮ ಬೇರೊಂದಿಲ್ಲ ನಾವು ಬಾಯಲ್ಲಿ ದೇವರ ನಾಮಗಳನ್ನು ಹೇಳುತ್ತಲೇ ಪಾಪಕೃತ್ಯಗಳನ್ನು ಎಸಗಿದರೆ, ಅವನ ಕೃಪೆಯನ್ನು ಗಳಿಸಲಾದೀತೆ? ಒಬ್ಬ ಮನುಷ್ಯನು ದೇವರ ಇರುವಿಕೆಯನ್ನು ಒಪ್ಪಿಕೊಂಡರೂ, ಮಿಥ್ಯಾಚಾರಿಯಾಗಿ ಅನೀತಿಯ ಬಾಳನ್ನು ನಡೆಸುವನೆಂದೂ, ಇನ್ನೊಬ್ಬನು ದೇವರ ಹೆಸರೇ ಗೊತ್ತಿಲ್ಲದಿದ್ದರೂ, ಸತ್ಯಸಂಧನಾಗಿಯೂ, ಸದ್ಗುಣಶಾಲಿಯಾಗಿಯೂ, ಜೀವನ ನಡೆಸುವನೆಂದೂ ಇಟ್ಟುಕೊಳ್ಳೋಣ ಇವರಿಬ್ಬರಲ್ಲಿ ಯಾರು ನಿಜವಾಗಿಯೂ ಧಾರ್ಮಿಕ ಮತ್ತು ನೀತಿವಂತ ಎಂಬುದನ್ನು ನಿರ್ಧರಿಸಲು ಅನುಮಾನವಿದ್ದೀತೆ? ದೇವರ ಹೆಸರನ್ನು ಕೇವಲ ವಾಚಾ ಪಠಿಸುವವನು ನಾಸ್ತಿಕನಿಗಿಂತಲೂ ನೀಚನಾದವನು, ಇನ್ನೊಬ್ಬನು ಸನಾತನವೂ, ನಿರ್ವಿಕಲ್ಪವೂ ಆದ ದೇವನ

ಆಜ್ಞೆಗಳಿಗನುಸಾರವಾಗಿ ಬಾಳುವುದರಿಂದ ನಿಜವಾದ ಧಾರ್ಮಿಕ ವ್ಯಕ್ತಿಯೆಂದೇ ಪರಿಗಣಿಸಲ್ಪಡಬೇಕು. ಹೀಗೆ, ಧರ್ಮವೆಂಬುದೂ ನೀತಿ ನಿಯಮಕ್ಕೆ ವಿಧೇಯತೆಯೆಂಬುದೂ ಪರ್ಯಾಯವಾಚಕಗಳು.

ಜಗತ್ತಿನ ಎಲ್ಲ ಅತ್ಯುಚ್ಚ ಧರ್ಮಗಳೂ ವಿಧಿಸಿರುವ ನಡೆವಳಿಯ ನಿಯಮಗಳೂ, ನಿತ್ಯನಿಷ್ಠೆಯೂ ಕಾರ್ಯತಃ ಒಂದೇ ಎಂಬುದು ನಮಗೆ ವಿದಿತವಾಗುತ್ತದೆ. ಎಲ್ಲ ಧರ್ಮಬೋಧಕರೂ ನೀತಿಯ ಆಧಾರದ ಮೇಲೆ ಧರ್ಮವು ನಿಂತಿದೆಯೆಂದೂ ಘೋಷಿಸಿದ್ದಾರೆ. ತನ್ನ ತಳಪಾಯ ಜಗ್ಗಿದಾಗ ಒಂದು ಕಟ್ಟಡವು ನೆಲಕ್ಕೆ ಕುಸಿಯುವಂತೆ ನೀತಿಯ ಆಧಾರ ತಪ್ಪಿದರೆ ಎಲ್ಲ ಧರ್ಮಗಳೂ ಕೆಳಗುರುಳಿ ಮಣ್ಣುಪಾಲಾಗಲೇಬೇಕು. (ನೀತಿಧರ್ಮ)

ನೀತಿಯ ಆಧಾರ ತಪ್ಪಿದ ಕೂಡಲೇ ನಾವು ಧರ್ಮಭ್ರಷ್ಟರಾಗುತ್ತೇವೆ. ನೀತಿಯನ್ನು ಧರ್ಮ ತಳ್ಳಿಹಾಕುವ ಸಂಭವವೇ ಇಲ್ಲ. ಉದಾಹರಣೆಗೆ, ಅಸತ್ಯವಾದಿಯೂ ನಿಷ್ಕರುಣಿಯೂ ವಿಷಯಲೋಲುಪನೂ ಆದ ಮನುಷ್ಯ ದೇವರನ್ನು ತನ್ನ ಕಡೆಗೆ ಒಲಿಸಿಕೊಳ್ಳಲಾರ.

(ಯಂಗ್ ಇಂಡಿಯಾ. ೨೪-೧೧-೨೧)

ಶೀಲನಿಯಮಗಳು, ನೀತಿಶಾಸ್ತ್ರ, ಧರ್ಮ— ಇವು ಸಮಾನಾರ್ಥಕ ಶಬ್ದಗಳು. ಧರ್ಮಬಾಹಿರವಾದ ನೈತಿಕ ಜೀವನವು ಮರಳಿನ ಮೇಲೆ ಕಟ್ಟಿದ ಮನೆಯನ್ನು ಹೋಲುತ್ತದೆ. ಹಾಗೆಯೇ, ನೀತಿಬಾಹಿರವಾದ ಧರ್ಮವನ್ನು ಕೇವಲ ಸಪ್ಪಳ ಮಾಡುವುದಕ್ಕೂ, ಒಬ್ಬರನ್ನೊಬ್ಬರು ತಲೆ ಒಡೆದುಕೊಳ್ಳುವುದಕ್ಕೂ ಉಪಯುಕ್ತವಾಗುವ ತಾಳ ಜಾಗಟೆಗೆ ಸಮವೆನ್ನಬಹುದು. ಸತ್ಯ, ಅಹಿಂಸೆ, ಇಂದ್ರಿಯನಿಗ್ರಹಗಳು ನೀತಿನಿಷ್ಠೆಯ ಭಾಗವಾಗಿವೆ. ಮನುಷ್ಯಕುಲ ಎಂದೆಂದೋ ಅನುಷ್ಠಾನಕ್ಕೆ ತಂದಿರುವ ಪ್ರತಿಯೊಂದು ಸದ್ಗುಣವೂ ಆಶ್ರಯಭೂತವಾದ ಈ ಮೂಲ ಸದ್ಗುಣತ್ರಯದಿಂದಲೇ ಬಂದದ್ದು. ಅಲ್ಲದೇ, ನಾನು ದೇವರೆಂದು ಪರಿಗಣಿಸಿರುವ ಸತ್ಯದಿಂದ ಅಹಿಂಸೆಯೂ, ಇಂದ್ರಿಯನಿಗ್ರಹವೂ ಉತ್ಪನ್ನವಾಗುತ್ತವೆ.

(ಹರಿಜನ. ೩-೧೦-೩೬)

ರೂಢಿಯಾದ ಅರ್ಥವನ್ನು ಬಿಟ್ಟು ವಿಶಾಲವಾದ ಅರ್ಥದಲ್ಲಿ ತೆಗೆದುಕೊಂಡರೆ ಧರ್ಮವು ದಿವ್ಯ ಸತ್ವದ ಇಣಿಕು ದರ್ಶನವನ್ನು ಪಡೆಯಲು

ನೆರವಾಗುತ್ತದೆ. ನೀತಿನಿಷ್ಠೆಯ ಪೂರ್ಣ ವಿಕಾಸವಿಲ್ಲದಿದ್ದರೆ ಅಂಥ ದರ್ಶನವು ಅಸಾಧ್ಯವಾಗುತ್ತದೆ. ಆದ್ದರಿಂದ ಧರ್ಮ ಮತ್ತು ನೀತಿತತ್ವ ಇವು ಸಮಾನ ಅರ್ಥವುಳ್ಳ ಪದಗಳು ನನ್ನ ದೃಷ್ಟಿಯಲ್ಲಿ. (ನೀತಿಧರ್ಮ)

ಜೀವನದ ಮೌಲ್ಯಗಳು ವೇಗವಾಗಿ ಪರಿವರ್ತನೆ ಹೊಂದುತ್ತಿರುವ ಕಾಲದಲ್ಲಿ ನಾವು ಜೀವಿಸುತ್ತಿದ್ದೇವೆ. ನಿಧಾನವಾದ ಪರಿಣಾಮಗಳಿಂದ ನಮಗೆ ತೃಪ್ತಿ ಇಲ್ಲ. ನಮ್ಮ ಜಾತಿಬಾಂಧವರ ಏಳಿಗೆ, ನಮ್ಮ ನಾಡಿನ ಏಳಿಗೆ, ಇಷ್ಟರಿಂದಲೇ ನಮಗೆ ತೃಪ್ತಿ ಇಲ್ಲ. ಸಮಸ್ತ ಮಾನವಕೋಟಿಯ ಬಗೆಗೆ ಅನುಕಂಪಪಡುತ್ತೇವೆ, ಅಥವಾ ಪಡಲು ಬಯಸುತ್ತೇವೆ. ಇವೆಲ್ಲ ತನ್ನ ಗುರಿಯೆಡೆಗೆ ಹೆಜ್ಜೆಯಿಡುತ್ತಿರುವ ಮಾನವತೆಗೆ ಅದ್ಭುತ ಲಾಭ.

ಪ್ರಾಚೀನವಾದದ್ದು ಕೇವಲ ಹಳೆಯದೆಂಬ ಕಾರಣದಿಂದಲೇ ಅದರ ವಿಷಯದಲ್ಲಿ ನಾವು ತಾತ್ಸಾರವನ್ನು ಕಳೆದುಕೊಳ್ಳುವುದರಿಂದಲೂ, ಮಾನವ ಕುಲದ ಅರಿಷ್ಟಗಳಿಗೆ ನಿವಾರಣೆ ದೊರಕಲಾರದು. ನಾವು ಯಾವ ಕನಸುಗಳ ಸ್ಫೂರ್ತಿಯಿಂದ ಉತ್ಸಾಹಿತರಾಗುತ್ತಿದ್ದೇವೋ ಅದೇ ಕನಸು ಗಳನ್ನು ಪ್ರಾಯಶಃ ಅಸ್ಪಷ್ಟವಾಗಿಯಾದರೂ ನಮ್ಮ ಪೂರ್ವಜರು ಕಂಡಿದ್ದರು. ಅವರು ತಮ್ಮ ಕಾಲದ ವ್ಯಾಧಿಗಳಿಗೆ ಯಾವ ಪರಿಹಾರಗಳನ್ನು ಬಳಸಿ ಕೊಂಡರೋ ಅವು ಊಹೆಯನ್ನು ಮೀರಿ ವಿಸ್ತಾರವಾಗಿರುವಂತೆ ತೋರುವ ಇಂದಿನ ಸನ್ನಿವೇಶಕ್ಕೂ ಅನ್ವಯಿಸಲು ಸಾಧ್ಯ.

ಸತ್ಯ, ಅಹಿಂಸೆ, ಇವು ಎಲ್ಲೋ ಆರಿಸಿದ ಹಲಕೆಲವು ವ್ಯಕ್ತಿಗಳು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಲು ಮಾತ್ರವಲ್ಲವೆಂದೂ, ಸಮಸ್ತ ಮಾನವರ ದಿನಚರಿ ಜೀವನದಲ್ಲಿ ಅವು ಅಭ್ಯಾಸಯೋಗ್ಯವೆಂದೂ ನನ್ನ ಕಾರ್ಯಕಾರೀ ಅನುಭವದ ಆಧಾರದ ಮೇಲೆ ನಾನು ವಾದಿಸುವ ರೀತಿ ಯಲ್ಲಿಯೇ, ಇಂದ್ರಿಯನಿಗ್ರಹವೂ ಒಬ್ಬಿಬ್ಬರು ಮಹಾತ್ಮರಿಗೆ ಮಾತ್ರ ವಲ್ಲದೇ ಇಡೀ ಮನುಜಕುಲಕ್ಕೇ ಅಗತ್ಯ. ಅನೇಕ ಜನರು ಅಸತ್ಯವಂತ ರಾಗಿಯೂ, ಹಿಂಸಾಕಾರಿಗಳಾಗಿಯೂ ಆಗಿರುವುದರಿಂದಲೇ ಮಾನವ ಜೀವನ ತನ್ನ ಆದರ್ಶದ ಮಟ್ಟವನ್ನು ಹೇಗೆ ಕೆಳಕ್ಕೆ ಇಳಿಸುವುದಿಲ್ಲವೋ ಹಾಗೆಯೇ ಅನೇಕರು ಜನತೆಯ ಬಹುಭಾಗ ಇಂದ್ರಿಯನಿಗ್ರಹದ ಆದೇಶಕ್ಕೆ

ಪ್ರತಿವರ್ತನೆ ತೋರಿಸುವುದಿಲ್ಲವೆಂಬ ಕಾರಣದಿಂದಲೇ ಅದರ ಮಟ್ಟವನ್ನು ನಾವು ಕಡಮೆ ಮಾಡಬಾರದು

ಅಳಿದುಹೋಗುವ ನಮ್ಮ ಕಾಯದ, ರಕ್ತಮಾಂಸದ ನ್ಯೂನತೆಗಳನ್ನು ಅಂತರ್ವ್ಯಾಪಿಯಾಗಿರುವ ಅಚ್ಯುತ ಆತ್ಮಕ್ಕೆ ಹೊಂದಿಸುವುದು ಸರಿಯಲ್ಲ ನಮ್ಮ ಆತ್ಮೋದ್ಧಾರಕ್ಕೆ ಸಲ್ಲುವ ವಿಧಿಗಳಿಂದಲೇ ನಮ್ಮ ಶರೀರವನ್ನೂ ಹದ್ದಿನಲ್ಲಿಡಬೇಕು ಆ ವಿಧಿಗಳು ಕೆಲವು ಮಾತ್ರವೆಂದೂ ಸಿರ್ವಿಕಾರ ಸ್ವಭಾವವುಳ್ಳವೆಂದೂ ಮಾನವ ಕುಟುಂಬವೆಲ್ಲ ಅವನ್ನು ಗ್ರಹಿಸಿ ಅಭ್ಯಸಿಸ ಬಹುದೆಂದೂ ನನ್ನ ದೃಢ ಅಭಿಪ್ರಾಯ ಅವುಗಳ ಅನುಷ್ಠಾನದಲ್ಲಿ ಕ್ರಮ ವ್ಯತ್ಯಾಸ ಕಂಡುಬರಬಹುದು, ಗುಣವ್ಯತ್ಯಾಸ ಕಾಣಲಾರದು ನಮ್ಮಲ್ಲಿ ನಂಬಿಕೆ ಇದ್ದರೆ ಅದು ಎಂದಿಗೂ ನಾಶವಾಗಲಾರದು. ಮಾನವತೆ ತನ್ನ ಉದ್ದಿಷ್ಟ ಗುರಿಯನ್ನು ಅರಿತುಕೊಳ್ಳುವುದಕ್ಕೂ ಪ್ರತ್ಯಕ್ಷವಾಗಿ ಅದರ ಹತ್ತಿರಕ್ಕೆ ಹೋಗುವುದಕ್ಕೂ ಹತ್ತು ಲಕ್ಷ ಸಂವತ್ಸರ ಬೇಕಾದರೂ ಆಗಲಿ (ಹರಿಜನ ೩೦-೫-೩೬)

ಯುಕ್ತ ಜೀವನ, ಯುಕ್ತಭಾವನೆ, ಯುಕ್ತ ಕ್ರಿಯೆ, ಇವು ಬಾಳಿನ ಪ್ರಧಾನ ಉದ್ದೇಶ ಶರೀರದ ಉಪಚಾರವೇ ನಮ್ಮ ಭಾವನೆಯೆಲ್ಲವನ್ನೂ ಆಕ್ರಮಿಸಿದರೆ ಆತ್ಮ ಕೊರಗಿ ನಶಿಸಲೇಬೇಕು (ಹರಿಜನ ೨೬-೨-೨೬)

ನನ್ನಲ್ಲುಂಟೆಂದು ಹೇಳಿಕೊಳ್ಳಬಲ್ಲ ಸದ್ಗುಣ ಸತ್ಯ ಮತ್ತು ಅಹಿಂಸೆ ಮಾತ್ರ ನನ್ನಲ್ಲಿ ಮಾನವಾತೀತ ಶಕ್ತಿಗಳಿವೆ ಎಂದು ಹೇಳಿಕೊಳ್ಳಲಾರೆ ಅಂಥದು ಯಾವುದೂ ಬೇಡ ನನ್ನ ಸಹಜೀವಿಗಳಲ್ಲಿ ಅತ್ಯಂತ ದುರ್ಬಲ ಮಂದಿ ತಳೆದಿರುವ ಕೆಟ್ಟುಹೋಗಬಲ್ಲ ರಕ್ತಮಾಂಸವೇ ನನಗೂ ಇದೆ, ಆದುದರಿಂದಲೇ ಯಾರೊಬ್ಬರಂತೆ ನಾನೂ ತಪ್ಪನ್ನು ಎಸಗುವ ಸಂಭವ ವುಂಟು (ಯಂಗ್ ಇಂಡಿಯಾ ೧೬-೨-೨೨)

ನನ್ನನ್ನು ಸನ್ಯಾಸಿ ಎಂದು ಕರೆದುದು ತಪ್ಪು ನನ್ನ ಬಾಳನ್ನು ಅಂಕೆಯಲ್ಲಿಟ್ಟಿದ್ದ ತತ್ವಗಳು ಸರ್ವಮಾನವರ ಅಂಗೀಕಾರಕ್ಕಾಗಿ ಮುಂದಿಟ್ಟವು ಕ್ರಮವಾಗಿ ಮುಂದೆ ಮುಂದೆ ನಡೆದು ಅವುಗಳ ಬಳಿಗೆ ನಾನು ತಲಪಿದ್ದೇನೆ ಪ್ರತಿ ಹೆಜ್ಜೆಯೂ ಪೂರ್ವಚಿಂತನೆಯ ಪರಿಣಾಮ, ಚೆನ್ನಾಗಿ ವಿಚಾರಿಸಲ್ಪಟ್ಟುದು, ತುಂಬ ವಿವೇಚನೆಯ ತರುವಾಯ ಅನುಸರಿಸಿ ನನ್ನ

ಬ್ರಹ್ಮಚರ್ಯ, ಅಹಿಂಸೆ ಎರಡೂ ನನ್ನ ವೈಯಕ್ತಿಕ ಅನುಭವದಿಂದ ನಿಷ್ಪನ್ನವಾದುದು, ಸಾರ್ವಜನಿಕ ಕರ್ತವ್ಯದ ಕರೆಗೆ ಓಗೊಡುವುದಕ್ಕೆ ಅವು ನನಗೆ ಅವಶ್ಯಕವೆನಿಸಿದುವು

ದಕ್ಷಿಣ ಆಫ್ರಿಕಾದಲ್ಲಿ ಗೃಹಸ್ಥನಾಗಿಯೋ, ನ್ಯಾಯವಾದಿಯಾಗಿಯೋ ಸಮಾಜಸುಧಾರಕ ಅಥವಾ ರಾಜಕಾರಣಿಯಾಗಿಯೋ ಪ್ರತ್ಯೇಕ ಜೀವನ ವನ್ನು ನಾನು ನಡೆಸಬೇಕಾಗಿದ್ದಾಗ ಆಯಾ ಕಾರ್ಯಗಳನ್ನು ಪೂರ್ತಿ ಗೊಳಿಸುವುದಕ್ಕೆ ಲೈಂಗಿಕ ವ್ಯಾಪಾರವನ್ನು ಕಠಿನತಮವಾದ ಕಟ್ಟುನಿಟ್ಟಿಗೆ ಒಳಪಡಿಸಬೇಕಾಯಿತು ಸಾಧಾರಣ ಸಾಮರ್ಥ್ಯಕ್ಕಿಂತ ಕಡಮೆ ಸಾಮರ್ಥ್ಯ ವುಳ್ಳ ಸಾಧಾರಣ ಮನುಷ್ಯ ನಾನು, ಅದಕ್ಕೆ ಹೆಚ್ಚೆಂದು ಹೇಳಲಾರೆ ಪ್ರಯಾಸಪೂರ್ವಕವಾದ ಪರಿಶೋಧನೆಯ ಮೂಲಕ ನಾನು ಸಾಧಿಸಿ ಕೊಂಡಿರುವ ಅಹಿಂಸೆಯಲ್ಲಾಗಲೀ, ಇಂದ್ರಿಯನಿಗ್ರಹದಲ್ಲಾಗಲೀ, ವಿಶೇಷ ಮಹತ್ವವಿದೆಯೆಂದು ಹೇಳಿಕೊಳ್ಳಲಾರೆ ಯಾವೊಬ್ಬ ಸ್ತ್ರೀಪುರುಷನಾಗಲೀ ಅದೇ ಪ್ರಯತ್ನವನ್ನು ಎಸಗಿದರೆ ಅದೇ ಭರವಸೆಯನ್ನೂ ನಂಬಿಕೆಯನ್ನೂ ಬೆಳೆಸಿಕೊಂಡರೆ, ನಾನು ಸಾಧಿಸಿರುವುದನ್ನು ಅವನೂ ಸಾಧಿಸಬಲ್ಲನೆಂಬು ದರಲ್ಲಿ ನನಗೆ ಯಾವೊಂದು ಸಂಶಯದ ಛಾಯೆಯೂ ಇಲ್ಲ

(ಹರಿಜನ ೩೦-೧೦-೩೬)

ನನ್ನಂಥ ವ್ಯಕ್ತಿ ಕೂಡ ಕಲ್ಮಶಭಾವನೆಗಳಿಂದ ತಪ್ಪಿಸಿಕೊಳ್ಳದಿದ್ದ ಮೇಲೆ ಇತರರ ಪಾಡೇನು ಎಂದು ವಾದಿಸಲೇಕೆ ? ಒಮ್ಮೆ ಇಂದ್ರಿಯ ಭೋಗದಲ್ಲಿ ಸಿಕ್ಕಿಕೊಂಡಿದ್ದ ಗಾಂಧೀ ಇಂದು ತನ್ನ ಪತ್ನಿಯೊಡನೆ ಗೆಳೆಯ ನಂತೆಯೂ, ಸಹೋದರನಂತೆಯೂ ಜೀವಿಸಲು ಸಾಧ್ಯವಾಗಿರುವಾಗ, ಅತ್ಯಂತ ಸುಂದರಿಯಾದ ಯುವತಿಯನ್ನು ತನ್ನ ತಂಗಿಯಂತೆಯೋ, ಮಗಳಂತೆಯೋ ಕಾಣಲು ಸಾಧ್ಯವಾಗಿರುವಾಗ, ಅತ್ಯಂತ ಪತಿತರೂ ಕಡು ಪಾಪಿಗಳೂ ನಿರಾಶರಾಗಬೇಕಾಗಿಲ್ಲ ಎಂದೇಕೆ ವಾದಿಸಬಾರದು ? ಭೋಗಾ ಭಿಲಾಷೆಯಿಂದ ತುಂಬಿ ತುಳುಕುತ್ತಿದ್ದ ಒಬ್ಬಾತನಿಗೆ ದೇವರು ಕೃಪೆ ತೋರಿದನೆಂದರೆ ಇತರ ಎಲ್ಲರಿಗೂ ಅವನ ಕೃಪೆ ಖಂಡಿತವಾಗಿ ಬಂದೇ ಬರುವುದು (ಯಂಗ್ ಇಂಡಿಯಾ ೨೬-೬-೨೭)

ಇಹದ ಬಾಳಿನಿಂದ 'ಸಂತ' ಎಂಬ ಶಬ್ದವನ್ನು ತೊಡೆದುಹಾಕ

ಬೇಕು ಕಂಡಕಂಡವರಿಗೆ ಅದನ್ನು ಲಾಘವದಿಂದ ಆರೋಪಿಸಲಾಗದು ತುಂಬ ಪವಿತ್ರವಾದ ಶಬ್ದ ಅದು ನನ್ನಂಥವನಿಗಂತೂ ಅದಕ್ಕೆ ಹಕ್ಕೇ ಇಲ್ಲ ನಾನು ಇಂಥವನೆಂದು ಇಷ್ಟು ಮಾತ್ರ ಹೇಳಬಲ್ಲೆ ನಾನೊಬ್ಬ ವಿನಮ್ರ ಸತ್ಯಾನ್ವೇಷಕ, ನನ್ನ ಅಳವಿನ ಎಲ್ಲೆಯನ್ನು ಚೆನ್ನಾಗಿ ಅರಿತು ಕೊಂಡಿದ್ದೇನೆ ತಪ್ಪುಗಳನ್ನು ಮಾಡುತ್ತೇನೆ, ಮಾಡಿದಾಗ ಮಾಡಿದ್ದೆಂ ಟೆಂದು ಒಪ್ಪಿಕೊಳ್ಳುವುದಕ್ಕೆ ಸ್ವಲ್ಪವೂ ಹಿಂದೆಗೆಯುವುದಿಲ್ಲ ವೈಜ್ಞಾನಿಕ ರಂತೆ ನಾನು ಬಾಳಿನ ಕೆಲವು ಸನಾತನ ಸತ್ಯಗಳನ್ನು ಕುರಿತು ಪ್ರಯೋಗ ನಡೆಸುತ್ತಾ ಬಂದಿದ್ದರೂ 'ವಿಜ್ಞಾನಿ'ಯೆಂದು ನನ್ನನ್ನು ಕರೆದು ಕೊಳ್ಳಲಾರೆ, ಏತಕ್ಕೆಂದರೆ ನನ್ನ ಪದ್ಧತಿಗಳು ವೈಜ್ಞಾನಿಕ ರೀತಿಯಲ್ಲಿ ಕರಾರುವಾಕ್ಕೆಂದು ಸುಸ್ಪಷ್ಟ ಸಮರ್ಥನೆಯನ್ನು ಈಯಲಾರೆ, ಆಧುನಿಕ ವಿಜ್ಞಾನ ನಿರೀಕ್ಷಿಸುವಂತೆ ನನ್ನ ಪ್ರಯೋಗ ಪರೀಕ್ಷೆಗಳಿಂದ ಪ್ರತ್ಯಕ್ಷ ಫಲ ಲಭಿಸಿದೆಯೆಂದು ತೋರಿಸಲಾರೆ (ಯಂಗ್ ಇಂಡಿಯಾ ೧೨-೫-೨೦)

ಸತ್ಯವು ನನ್ನ ಬಾಳಿನ ನಿಜವಾದ ತಳಪಾಯವೇ ಆಗಿದೆ. ಅಹಿಂಸೆಯೂ ಬ್ರಹ್ಮಚರ್ಯವೂ ಅಮೇಲೆ ಸತ್ಯದಿಂದ ಜನಿಸಿದುವು ಆದುದ ರಿಂದ ನೀವು ಯಾವುದನ್ನು ಮಾಡಬೇಕಾದರೂ ನಿಮ್ಮೊಡನೆಯೂ ಪ್ರಪಂಚ ದೊಡನೆಯೂ ಸತ್ಯದಿಂದಿರಿ ನಿಮ್ಮ ಭಾವನೆಗಳನ್ನು ಮರೆಮಾಚಬೇಡಿ. ಅವುಗಳನ್ನು ಬಹಿರಂಗಪಡಿಸುವುದು ನಾಚಿಕೆಗೇಡಾದರೆ ಅವುಗಳನ್ನು ಆಲೋಚಿಸುವುದು ಇನ್ನೂ ಹೆಚ್ಚಾಗಿ ನಾಚಿಕೆಗೇಡು (ಹರಿಜನ. ೨೫-೪-೩೬)

ಯಾವಾಗಲೂ ಮನಸ್ಸು ವಚನ ಕರ್ಮಗಳ ಪೂರ್ಣಸಾಮರಸ್ಯ ಗುರಿಯಾಗಿರಲಿ, ಯಾವಾಗಲೂ ಮನಸ್ಸನ್ನು ಚೊಕ್ಕಟವಾಗಿಡುವ ಧ್ಯೇಯವಿರಲಿ, ಎಲ್ಲವೂ ಸರಿ ಹೋಗುತ್ತದೆ ಆಲೋಚನೆಗಿಂತ ಹೆಚ್ಚು ಪ್ರಬಲವಾದುದು ಒಂದೂ ಇಲ್ಲ ಕ್ರಿಯೆ ಹಿಂಬಾಲಿಸುತ್ತದೆ ಮಾತನ್ನ, ಮಾತು ಹಿಂಬಾಲಿಸುತ್ತದೆ ಭಾವನೆಯನ್ನ ಮಹಾ ಯೋಚನೆಯ ಫಲ ಮಾತು, ಯೋಚನೆ ಎಲ್ಲಿ ಸತ್ವಯುತವಾಗಿಯೂ ಶುದ್ಧವಾಗಿಯೂ ಇರುತ್ತದೆಯೋ ಅಲ್ಲಿ ಪರಿಣಾಮ ಎಂದೂ ಸತ್ವಯುತವಾಗಿಯೂ ಶುದ್ಧ ವಾಗಿಯೂ ಇರುತ್ತದೆ (ಹರಿಜನ ೫-೪-೩೬)

ಸೌಶೀಲ್ಯವುಳ್ಳ ಪುರುಷ ತನಗೆ ದೊರೆತ ಯಾವ ಸ್ಥಾನಕ್ಕಾದಾರೂ

ಅರ್ಹನಾಗುತ್ತಾನೆ (ಯಂಗ್ ಇಂಡಿಯಾ. ೯-೬-೨೦)

ವಿಷಮಗಳಿಗೆಯಲ್ಲಿ ಗಣನೆಗೆ ಬರುವುದು ಶೀಲವೇ ಹೊರತು ಮೆದುಳಲ್ಲ (ಯಂಗ್ ಇಂಡಿಯಾ ೨೧-೨-೨೯)

ಯಾವೊತ್ತಾದರೂ ಭಾಷಣಕ್ಕಿಂತ ಒಳ್ಳೆಯ ನಡತೆ ಹೆಚ್ಚು ಒಪ್ಪು (ಯಂಗ್ ಇಂಡಿಯಾ ೨೧-೨-೨೯)

ಶೀಲಶುದ್ಧಿಯೂ, ಮೋಕ್ಷವೂ, ಶುದ್ಧಹೃದಯವನ್ನು ಅವಲಂಬಿಸಿವೆ ನಿಮ್ಮ ಎಲ್ಲ ಜ್ಞಾನ, ತಿಳಿವಳಿಕೆ, ವಿದ್ವತ್ತುಗಳನ್ನು ಒಂದು ಕಡೆಯೂ, ಸತ್ಯ ಮತ್ತು ಶುಚಿಯನ್ನು ಇನ್ನೊಂದು ಕಡೆಯೂ ತಕ್ಕಡಿಯಲ್ಲಿಟ್ಟು ನೋಡಿ, ಎರಡನೆಯದು ಮೊದಲನೆಯದಕ್ಕಿಂತ ಎಷ್ಟೋ ಹೆಚ್ಚು ತೂಕವಾಗುತ್ತದೆ, ದಿವ್ಯ ಲೆಕ್ಕಾಚಾರದ ಪುಸ್ತಕದಲ್ಲಿ ನಮ್ಮ ಕಾರ್ಯಗಳನ್ನು ಮಾತ್ರ ನಮೂದಿಸುವರು, ನಾವು ಓದಿದ್ದನ್ನಲ್ಲ, ನಾವು ನುಡಿದದ್ದನ್ನಲ್ಲ (ಯಂಗ್ ಇಂಡಿಯಾ ೭-೫-೩೨)

ಅನೇಕರು ಹೋದ ಜಾಡಿನಲ್ಲೇ ಹೋಗಬೇಕೆಂಬುದು ನಿಜವಾದ ನೀತಿಚರ್ಯೆಯಲ್ಲ, ಯಾವುದು ನಮಗೆ ಸರಿಯಾದ ಪಥವೋ ಅದನ್ನು ಕಂಡುಹಿಡಿದುಕೊಂಡು ಅದರಲ್ಲಿ ನಿರ್ಭಯವಾಗಿ ನಡೆಯುವುದೇ ನಿಜವಾದ ನೀತಿ (ನೀತಿಧರ್ಮ)

ಸ್ವಂತ ಇಚ್ಛೆಯಿಂದ ಮಾಡದಿರುವ ಯಾವ ಕರ್ಮವೂ ನೀತಿ ಎನಿಸುವುದಿಲ್ಲ ಕೇವಲ ಯಾಂತ್ರಿಕವಾಗಿ ಕೆಲಸ ಮಾಡಿದರೆ ನೈತಿಕ ಪ್ರಶ್ನೆಯೇ ಉದ್ಭವಿಸುವುದಿಲ್ಲ ಕರ್ತವ್ಯಪರಾಯಣತೆಯಿಂದಲೂ, ಅಂತಃಜ್ಞಾನದಿಂದಲೂ ಎಸಗಿದ ಕರ್ಮವನ್ನು ನೀತಿಯುತವೆಂದು ನಾವು ಕರೆಯಬೇಕು ಭಯದಿಂದಲೋ ಬಲೋದ್ಬಂದಿಯಿಂದಲೋ ಮಾಡಲ್ಪಟ್ಟ ಕರ್ಮ ನೀತಿರಹಿತವಾಗುತ್ತದೆ ಅಂತೆಯೇ ಪರಲೋಕದಲ್ಲಿ ಸುಖ ದೊರಕುವುದೆಂಬ ನಿರೀಕ್ಷೆಯಿಂದ ಮಾಡಲ್ಪಟ್ಟ 'ಪುಣ್ಯಕಾರ್ಯ'ವೂ ನೀತಿಬಾಹಿರವಾಗುತ್ತದೆ

ಮರಣಾನಂತರ ಪಾಪಕ್ಕೆ ನರಕಯಾತನೆ, ಈ ಜನ್ಮದಲ್ಲಾದ ಪುಣ್ಯಕ್ಕೆ ಮುಂದೆ ಸುರಕನ್ಯೆಯರ ಸಂಗದ ಬಹುಮಾನ ಎಂಬ ಊಹೆಯು

ಊರುಗೋಲನ್ನು ಕೊಟ್ಟು ಸದ್ಗುಣವನ್ನು ನಿಲ್ಲಿಸುವ ಪ್ರಯತ್ನವನ್ನು ಕೈಗೊಳ್ಳುವುದು ಬೇಡ ತನ್ನಿಂದ ತಾನೇ ಆಕರ್ಷಣೆ ಮಾಡಲಾರದ ಸದ್ಗುಣವು ತಿಪ್ಪೆಗೆಸೆಯಬಹುದಾದ ಕ್ಷುಲ್ಲಕ ವಸ್ತುವೇ ಸರಿ ಪ್ರಕೃತಿ ನಮಗೆ ಕಾಣಬರುವಷ್ಟು ಕ್ರೂರವಲ್ಲವೆಂದೇ ನನ್ನ ದೃಢಮತಿ, ಎಷ್ಟೋ ಸಾರಿ ನಮ್ಮಲ್ಲಿ ತುಂಬಿರುತ್ತದೆ ಕ್ರೌರ್ಯ ಸ್ವರ್ಗನರಕಗಳೆರಡೂ ನಮ್ಮೊಳಗೇ ಇವೆ ಸಾವಿನ ತರುವಾಯ ಪುನರ್ಜನ್ಮವಿದೆ, ಆದರೆ ಅದಕ್ಕೂ ನಮ್ಮ ಈಗಿನ ಅನುಭವಕ್ಕೂ ಇರುವ ಅಂತರ ನಮ್ಮನ್ನು ಭೀತಿಗೊಳಿಸುವಷ್ಟೋ ಹರ್ಷೋನ್ಮಾದಗೊಳಿಸುವಷ್ಟೋ ಆಗಿಲ್ಲ

'ಸುಖದುಃಖವೆರಡನ್ನೂ ಮೀರಿ ನಿಲ್ಲುವವನೇ ಸ್ಥಿತಪ್ರಜ್ಞ' ಎನ್ನುತ್ತದೆ ಗೀತೆ ಜ್ಞಾನಿಗಳು ಜೀವನದಿಂದಾಗಲೀ ಮರಣದಿಂದಾಗಲೀ ತಳಮಳಗೊಳ್ಳರು ಒಂದೇ ನಾಣ್ಯದ ಮುಖಗಳು ಅವು ಅಷ್ಟೆ

(ಯಂಗ್ ಇಂಡಿಯಾ ೨೫-೧೦-೨೯)

ಗುಣಾವಗುಣಗಳಿಗಿರುವ ವ್ಯತ್ಯಾಸವನ್ನು ನಾವು ವಿವೇಚಿಸುವುದನ್ನು ಬಿಟ್ಟಕೂಡಲೇ ನಮ್ಮ ಪ್ರಗತಿ ನಿಂತುಹೋಗುತ್ತದೆ

(ಯಂಗ್ ಇಂಡಿಯಾ ೧೫-೯-೨೧)

ಅಹಿಂಸೆಯ ಮುಖ್ಯ ವಾದಿಯಾದ ನಾನು ಒಂದು ಒಳ್ಳೆಯ ಕಾರ್ಯವನ್ನು ಮಾಡುವುದಕ್ಕಾಗಲೀ ಯಾವೊಬ್ಬನನ್ನೋ ಹೇಗೆ ಬಲತ್ಕಾರ ಮಾಡಲಿ? ಬಂಧನದಲ್ಲಿದ್ದು ತಪ್ಪು ಮಾಡದಿರುವುದಕ್ಕಿಂತ ಸ್ವತಂತ್ರನಾಗಿದ್ದು ತಪ್ಪು ಮಾಡುವುದು ಲೇಸೆಂದು ಒಬ್ಬ ಪ್ರಸಿದ್ಧ ಆಂಗ್ಲೇಯ ಹೇಳಿಲ್ಲವೆ? ಇದರ ಸತ್ಯಾಂಶವನ್ನು ನಾನು ನಂಬುತ್ತೇನೆ ಕಾರಣ ಸುವ್ಯಕ್ತ ಬಲಾತ್ಕಾರಕ್ಕೆ ಸಿಕ್ಕಿಬಿದ್ದು ಒಳ್ಳೆಯವನಾಗಿರುವವನ ಮನಸ್ಸು ಉತ್ತಮಗೊಳ್ಳುವುದಿಲ್ಲ, ಅಷ್ಟೇಕೆ, ಅದು ಕೆಟ್ಟುಹೋಗುತ್ತದೆ ಬಲಾತ್ಕಾರ ಮಾಯುವಾದಾಗ ಎಲ್ಲ ದೋಷಗಳೂ ಇನ್ನೂ ಹೆಚ್ಚು ಶಕ್ತಿಗೂಡಿ ಮೇಲಕ್ಕೇರಿ ಬರುತ್ತವೆ

(ಹರಿಜನ ೨೯-೯-೪೬)

ಸರ್ವಕಾಲಕ್ಕೂ ಅನ್ವಯಿಸುವ ಪರಾತ್ಪರ ನೀತಿಎಂಬುದಿಲ್ಲ ಆದರೆ ಅಪೂರ್ಣರೂ ಮರ್ತ್ಯರೂ ಆದ ನಮಗೆ ಪರಾತ್ಪರವೆನ್ನಿಸಬಹುದಾದ ಸಾಪೇಕ್ಷ ರೂಪದನೀತಿ ಇದೆ ಹೇಗೆಂದರೆ, ವೈದ್ಯರ

ಸಲಹೆಯಂತೆ ವೈದ್ಯಕೀಯ ಪ್ರಮಾಣದಲ್ಲಿ ಮಾದಕದ್ರವ್ಯಗಳನ್ನು ಸೇವಿಸಬಹುದು, ಬೇರೆ ರೀತಿಯಲ್ಲಿ ಅವುಗಳನ್ನು ಸೇವಿಸುವುದು ಪರಿಪೂರ್ಣ ಅನೀತಿ ಹಾಗೆಯೇ ತನ್ನ ಪತ್ನಿಯನ್ನು ಬಿಟ್ಟು ಬೇರೆ ಹೆಣ್ಣನ್ನು ಕಾಮೇಚ್ಛೆಯಿಂದ ನೋಡುವುದು ಪೂರ್ಣ ಅಪರಾಧ ಈ ಎರಡು ನಿಲುಗಡೆಗಳಿಗೂ ನಿಷ್ಠುರಬುದ್ಧಿ ವಿವೇಕದ ಸಮರ್ಥನೆ ಲಭಿಸಿದೆ ಪ್ರತಿವಾದಗಳನ್ನು ಹೂಡುವುದು ಯಾವಾಗಲೂ ಉಂಟು ಇರುವುದೆಲ್ಲದರ ಮೊತ್ತವಾದ ದೇವರ ಇರುವಿಕೆಗೆ ಎದುರಾಗಿ ಕೂಡ ಅವು ಹೂಡಲ್ಪಟ್ಟಿವೆ ವಿಚಾರಗೈಯುವ ಬುದ್ಧಿಯನ್ನತಿಕ್ರಮಿಸಿದ ನಂಬಿಕೆಯೇ ನಮ್ಮನ್ನು ಭದ್ರವಾಗಿರಿಸುವ ಯುಗ ಯುಗಾಂತರದ ಶಿಲಾಸನ ನನ್ನ ನಂಬಿಕೆ ನನ್ನನ್ನು ಕಾಪಾಡಿದೆ, ಈಗಲೂ ಅದು ಮತ್ತೆ ಕೆಲವರನ್ನು ಕುಳಿಗೆ ಬೀಳುವುದರಿಂದ ಕಾಪಾಡಿದೆ ಅದು ನನ್ನನ್ನೆಂದಿಗೂ ಕೈಬಿಟ್ಟಿಲ್ಲ, ಎಂದೂ ಯಾರನ್ನೂ ಅದು ಕೈಬಿಟ್ಟಂತೆ ಕಂಡುಬಂದಿಲ್ಲ [ಹರಿಜನ ೨೪-೧೨-೩೯)

ಪ್ರಲೋಭನಗಳ ನಡುವೆ ವಿಚಾರಬುದ್ಧಿಗೆ ಕ್ಷೀಣ ಬಲ ಆಗ ನಮ್ಮನ್ನು ರಕ್ಷಿಸುವ ಶಕ್ತಿ ನಂಬಿಕೆಯೊಂದೇ ಕುಡಿತ ಮತ್ತು ವ್ಯಭಿಚಾರ ಗಳಲ್ಲಿ ನಿರತರಾದವರ ಕಡೆಗೆ ಇರುವಂತೆ ಬುದ್ಧಿ-ವಿಚಾರ ತೋರಿಬರ ಬಹುದು ವಾಸ್ತವಿಕವಾಗಿ ಅಂಥ ಪರಿಸ್ಥಿತಿಗಳಲ್ಲಿ ಬುದ್ಧಿವಿವೇಚನೆ ಮಬ್ಬು ಮಬ್ಬು, ಅದು ಸಹಜಪ್ರವೃತ್ತಿಯನ್ನು ಅನುಸರಿಸುತ್ತದೆ ಎರಡು ವಿರುದ್ಧ ಪಕ್ಷದ ವಕೀಲರು ತಮ್ಮ ತಮ್ಮ ಕಡೆಗೇ ನ್ಯಾಯವಾದ ಒಲವು ಇರುವಂತೆ ತೋರ್ಪಡಿಸಲಾಶಿಸುದಿಲ್ಲವೆ? ಆದರೇನು, ಅವರಿಬ್ಬರಲ್ಲಿ ಯಾರಾದರೂ ಒಬ್ಬರು ತಪ್ಪಾಗಿರಬೇಕು ಅಥವಾ ಇಬ್ಬರೂ ತಪ್ಪಾಗಿರ ಬೇಕು ಆದ್ದರಿಂದ ವಿಚಾರಬುದ್ಧಿಯ ದಾಳಿಯಿಂದ ಭಂಗಪಡದಿರುವುದಕ್ಕೆ ನಮ್ಮ ನೀತಿತತ್ವದ ನೇರ್ಪಿನಲ್ಲಿ ನಂಬಿಕೆಯನ್ನಿಡುವುದೊಂದೇ ಕೋಟೆ ಕೊತ್ತಲ [ಹರಿಜನ. ೨೪-೧೨-೩೭)

ನಿಷ್ಠೆಯ ಅಧಿಷ್ಠಾನ, ಸೂತ್ರ, ಸುಶಿಕ್ಷಿತವಾದ ಬುದ್ಧಿಗೂ ನೀತಿ ಗಳಿಗೂ ಯಾವುದೂ ವಿರೋಧವಾಗಿದೆಯೋ ಅದು ಎಷ್ಟೇ ಪ್ರಾಚೀನ ವಾದರೂ ಶಾಸ್ತ್ರವೆನ್ನಿಸಿಕೊಳ್ಳಲಾರದು [ಹರಿಜನ. ೧೬-೧೨-೩೭)

ಇಂಥ ಧರ್ಮವನ್ನು ಪಾಲಿಸಬೇಕಾದರೆ, ಎಲ್ಲಜೀವಿಗಳನ್ನು ಕುರಿತ

ನಿರಂತರವಾಗಿ ಮುಂದುವರಿಯುವ ಸೇವೆಯಲ್ಲಿ ತನ್ಮಯರಾಗಬೇಕು ಆದ್ದರಿಂದ ಸಮಾಜಸೇವೆಯಿಂದ ಬಿಡುಗಡೆಯೇ ಇಲ್ಲ ನನಗೆ, ಅದನ್ನುಳಿದ, ಅದಕ್ಕಿಂತ ಅತಿಶಯವಾದ ಸೌಖ್ಯ ನನಗೆ ಭೂಮಿಯ ಮೇಲಿಲ್ಲ

ನಮ್ಮ ಆಶೆಗಳನ್ನು, ಉದ್ದೇಶಗಳನ್ನು ಸ್ವಾರ್ಥ-ನಿಸ್ವಾರ್ಥ ಎಂದು ಎರಡು ವರ್ಗಗಳನ್ನಾಗಿ ವಿಂಗಡಿಸಬಹುದು ಸ್ವಾರ್ಥಪರವಾದ ಎಲ್ಲ ಆಶೆಯೂ ಅನೀತಿ, ಆದರೆ ಪರರಿಗೆ ಉಪಕಾರ ಮಾಡುವುದಕ್ಕೋಸ್ಕರ ನಮ್ಮನ್ನು ಬೆಳಸಿಕೊಳ್ಳುವುದು ದಿಟ್ಟವಾದ ನೀತಿ ಮಾನವ ವರ್ಗದ ಕಲ್ಯಾಣಕ್ಕಾಗಿ ಅವಿಶ್ರಾಂತ ದುಡಿಮೆಯನ್ನು ಕೈಗೊಳ್ಳುವುದು ಅತ್ಯಂತ ಶ್ರೇಷ್ಠವಾದ ನೀತಿವಿಧಿ (ನೀತಿಧರ್ಮ.)

ನೀತಿನಿಯಮಗಳಿಗ ಅನುಗುಣವಾಗಿ ತನ್ನ ಬಾಳನ್ನು ವ್ಯವಸ್ಥೆಗೊಳಿಸಿಕೊಳ್ಳಲು ಯಾವಾತ ಸಿದ್ಧನಲ್ಲವೊ ಅವನು ಪೂರ್ತಿ ಅರ್ಥದಲ್ಲಿ ಮಾನವನೆನ್ನಿಸಿಕೊಳ್ಳಲಾರ (ನೀತಿಧರ್ಮ.)

ನನ್ನ ನಾನಾ ಪಾಪಕೃತ್ಯಗಳನ್ನು ಅತ್ಯಂತ ಬಿಚ್ಚುಮನಸ್ಸಿನಿಂದ ನಾನು ಒಪ್ಪಿಕೊಂಡಿದ್ದೇನೆ ಆದರೆ, ಅವುಗಳ ಹೊರೆಯನ್ನು ನನ್ನ ಹೆಗಲ ಮೇಲೆ ಹೊತ್ತು ಸಾಗುತ್ತಿಲ್ಲ ದೇವರ ದಿಕ್ಕಿಗೆ ನಾನು ಪ್ರಯಾಣಗೈಯುತ್ತಿದ್ದರೆ ನನ್ನ ಹೃದಯ ಹಾಗೆ ಹೇಳುತ್ತಿದೆ, ನನ್ನ ಸ್ಥಿತಿ ಸುಭದ್ರ. ಏಕೆಂದರೆ, ದೇವರ ಸಾಕ್ಷಿತ್ವದ ಬಿಸಿಗದಿರಿನ ಸುಖೋಷ್ಣವನ್ನು ಅನುಭವಿಸುತ್ತಿದ್ದೇನೆ ನಾನು ನನ್ನನ್ನು ಪುನೀತನನ್ನಾಗಿ ಮಾಡುತ್ತವೆಂದು ನನ್ನ ವ್ರತಗಳನ್ನೂ ಉಪವಾಸಗಳನ್ನೂ, ಪ್ರಾರ್ಥನೆಗಳನ್ನೂ, ನಾನು ಶರಣುಹೊಕ್ಕರೆ ಅದಕ್ಕೆ ಏನೇನೂ ಬೆಲೆಯಿಲ್ಲವೆಂದು ನಾ ಬಲ್ಲೆ ಆದರೂ, ತನ್ನ ಸೃಷ್ಟಿಕರ್ತನ ಮಡಲಿನಲ್ಲಿ ಬಳಲಿದ ತನ್ನ ಶಿರವನ್ನು ಇರಿಸಬೇಕೆಂದು ಸೆಣಸುತ್ತಿರುವ ಜೀವಿಯ ಹಂಬಲಿಕೆಯನ್ನು ಅವು ಸಾದೃಶ್ಯಪಡಿಸಿದರೆ ಹಾಗೆ ಮಾಡುವುವೆಂದು ನನ್ನ ಅಪೇಕ್ಷೆ, ಅದಕ್ಕೆ ಎಣಿಕೆಗೆ ಮೀರಿದ ಬೆಲೆ ಬಂದೀತು

[ಹರಿಜನ. ೧೮-೪-೩೬)

ಅಧ್ಯಾಯ ೧

# ಧರ್ಮ—ಕೆಲವು ಸಾಮಾನ್ಯ ಸೂಕ್ತಿಗಳು

ಧರ್ಮಕ್ಕೆ ನನ್ನ ಅರ್ಥವೇನೆಂಬುದನ್ನು ವಿವರಿಸುವೆ ಮಿಕ್ಕೆಲ್ಲ ಧರ್ಮಗಳಿಗಿಂತಲೂ ಮಿಗಿಲೆಂದು ನಾನು ಖಂಡಿತ ಬೆಲೆ ಕೊಡುವ ಹಿಂದೂ ಧರ್ಮ ನನ್ನ ಅರ್ಥದಲ್ಲಿ ಧರ್ಮವಲ್ಲ, ಅದನ್ನೂ ಮೀರಿಸಿ ನಮ್ಮ ನಿಜ ಸ್ವಭಾವವನ್ನೇ ಪರಿವರ್ತನೆಗೊಳಿಸುವ, ನಮ್ಮನ್ನು ಅಂತರಂಗದಲ್ಲಿರುವ ಸತ್ಯದೊಡನೆ ಬಿಡಿಸಲಾಗದ ರೀತಿಯಲ್ಲಿ ಐಕ್ಯಗೊಳಿಸುವ, ಸದಾ ನಮ್ಮನ್ನು ಪರಿಶುದ್ಧಗೊಳಿಸುವ ಧರ್ಮವೇ ಧರ್ಮ ಮಾನವನ ಪ್ರಕೃತಿಯಲ್ಲಿ ಸ್ಥಿರವಾದ ಅಂಶ ಅದು, ತನ್ನ ಪೂರ್ಣ ಪ್ರಕಟನಕ್ಕಾಗಿ ಎಂಥ ತ್ಯಾಗವನ್ನಾದರೂ ಅಧಿಕವೆಂದು ಅದು ಬಗೆಯದು ಜೀವಾತ್ಮ ತನ್ನನ್ನು ತಾನೇ ಕಂಡುಕೊಳ್ಳುವ ವರೆಗೂ, ತನ್ನ ಸೃಷ್ಟಿಕರ್ತನನ್ನು ಅರಿತು ಆತನಿಗೂ ತನಗೂ ಇರುವ ಯಥಾರ್ಥ ಹೊಂದಾಣಿಕೆಯನ್ನು ಮೆಚ್ಚಿಕೊಳ್ಳುವವರೆಗೂ ಅದಕ್ಕೆ ವಿಪರೀತ ಅಶಾಂತಿಯನ್ನುಂಟುಮಾಡುತ್ತದೆ

(ಯಂಗ್ ಇಂಡಿಯಾ ೧೨-೫-೨೦)

ಸತ್ಯವನ್ನೂ ಸಜ್ಜನತೆಯನ್ನೂ ಮೀರಿದ ಧರ್ಮವಿಲ್ಲ

(ನೀತಿಧರ್ಮ.)

ಅಷ್ಟೇ ಅಲ್ಲ, ಧರ್ಮವು ನಮ್ಮ ಸಕಲ ಕರ್ಮಗಳನ್ನೂ ಆವರಿಸಬೇಕು ಇಲ್ಲಿ ಧರ್ಮವೆಂದರೆ ಪಂಥಾಭಿಮಾನವೆಂದಲ್ಲ ಅರ್ಥ, ವಿಶ್ವದ ಸುವ್ಯವಸ್ಥಿತ ನೈತಿಕ ಪ್ರಭುತ್ವದಲ್ಲಿ ನಂಬಿಕೆ, ಎಂದು ಅದರರ್ಥ ಅದು ಅಗೋಚರವಾಗಿದೆ ಹೌದು, ಆದ್ದರಿಂದ ಅದು ಕಡಮೆ ಯಥಾರ್ಥವೆನ್ನುವಂತಿಲ್ಲ ಈ ಧರ್ಮ ಹಿಂದೂ ಮತ, ಇಸ್ಲಾಂ, ಕ್ರೈಸ್ತಮತ, ಇತ್ಯಾದಿಗಳನ್ನು ಮೀರಿಸಿದೆ ಅವುಗಳಿಗೆ ಬದಲಾಗಿ ಅದು ಎಂದು ತಿಳಿಯಲಾಗದು. ಅವನ್ನು ಸಮನ್ವಯಗೊಳಿಸಿ, ಅವಕ್ಕೆ ಯಥಾರ್ಥತೆಯನ್ನು ಕೊಡುತ್ತದೆ

(ಹರಿಜನ. ೧೦-೨-೪೦)

ಭಗವಂತನ ಶಾಸನಕ್ಕೆ ತಲೆಬಾಗುವುದನ್ನು ಧರ್ಮದ ಕಟ್ಟಕಡೆಯ

ನಿರ್ದೇಶ್ಯ ಎನ್ನಬಹುದು ದೇವರ ಶಾಸನವೂ ದೇವರೂ ಸಮಾನ ರೂಪಗಳು ಆದ್ದರಿಂದ ದೇವರೆಂದರೆ ನಿರ್ವಿಕಲ್ಪವಾದ ಜೀವಂತ ಶಾಸನ ಎಂದು ಸೂಚನೆ ಅವನನ್ನು ಯಾರೂ ಎಂದೂ ನಿಜವಾಗಿ ಪತ್ತೆಹಚ್ಚಿಲ್ಲ ಆದರೂ, ಅವತಾರಗಳೂ ಪ್ರವಾದಿಗಳೂ ತಮ್ಮ ತಪಸ್ಸಿನ ಪ್ರಭಾವದಿಂದ ಸನಾತನ ಧರ್ಮದ ಮಸುಕಾದ ಒಂದು ಕಿರುನೋಟವನ್ನು ಮಾನವ ವರ್ಗಕ್ಕೆ ದಯಪಾಲಿಸಿದ್ದಾರೆ. (ಯಂಗ್ ಇಂಡಿಯಾ ೨೫-೮-೨೦)

## ಧರ್ಮವೂ ವ್ಯಾವಹಾರಿಕ ಸಂಗತಿಗಳೂ

ವ್ಯಾವಹಾರಿಕ ಸಂಗತಿಗಳನ್ನು ಪರಿಗಣಿಸದೆ, ಅದರಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಸಹಾಯಕವಾಗದ, ಧರ್ಮವು ಧರ್ಮವೇ ಅಲ್ಲ (ಯಂಗ್ ಇಂಡಿಯಾ. ೭-೫-೨೩)

ಅತ್ಯಂತ ಆಧ್ಯಾತ್ಮಿಕವಾದ ಕರ್ಮವು ನಿಶ್ಚಯವಾದ ಅರ್ಥದಲ್ಲಿ ಅತ್ಯಂತ ವ್ಯಾವಹಾರಿಕವೆಂದು ನನ್ನ ನಂಬಿಕೆ (ಹರಿಜನ ೧-೭-೩೯)

## ಜಗತ್ತಿನ ಭಿನ್ನ ಭಿನ್ನ ಧರ್ಮಗಳು

ಮತಗಳು ಒಂದೇ ಕೇಂದ್ರವನ್ನು ಮುಟ್ಟುವುದಕ್ಕೆ ಹೋಗಲಿರುವ ವಿಭಿನ್ನ ಮಾರ್ಗಗಳು ಬೇರೆಬೇರೆ ಮಾರ್ಗಗಳನ್ನು ನಾವು ಹಿಡಿದರೇನು, ಒಂದೇ ನಿಲ್ದಾಣವನ್ನು ಸೇರಿದರಾಯಿತು ವಾಸ್ತವಿಕವಾಗಿ ನೋಡಿದರೆ, ಎಷ್ಟು ವ್ಯಕ್ತಿಗಳೋ ಅಷ್ಟು ಧರ್ಮಗಳಿರಲು ಸಾಧ್ಯ (ಹಿಂದ್ ಸ್ವರಾಜ್ಯ)

ಒಬ್ಬ ಪುರುಷ ಹೃದಯವನ್ನು, ತನ್ನ ಧರ್ಮದ ಹೃದಯವನ್ನು, ಸ್ಪರ್ಶಿಸಿದಲ್ಲಿ ಇತರ ಧರ್ಮಗಳ ಹೃದಯವನ್ನೂ ಕೂಡ ಸ್ಪರ್ಶಿಸಿದಂತೆಯೇ

ಎಲ್ಲಿಯವರೆಗೆ ಭಿನ್ನಭಿನ್ನ ಧರ್ಮಗಳಿರುವುವೋ ಅಲ್ಲಿಯ ವರೆಗೆ ಒಂದೊಂದಕ್ಕೂ ಒಂದೊಂದು ವಿಶಿಷ್ಟ ಸಂಕೇತ ಅವಶ್ಯವಾದೀತು ಆದರೆ ಸಂಕೇತ ಮೂಢಪೂಜೆಯ ಮಾಂತ್ರಿಕ ವಸ್ತುವಾಗಿ ಏರ್ಪಟ್ಟು ಇತರ ಧರ್ಮಗಳಿಗಿಂತ ಆ ಧರ್ಮವೇ ಮೇಲೆಂದು ವಾದಿಸಲು ಅದನ್ನು ಸಾಧನವಾಗಿ ಉಪಯೋಗಿಸುವುದಾದರೆ, ಅದು ನಿರಾಕರಣೆಗೆ ಮಾತ್ರ ಯೋಗ್ಯ (ಆತ್ಮಕಥೆ ೪೮೦)

ಹಿಂದೂಧರ್ಮದಲ್ಲಿ ಯೇಸುವಿಗೆ ಸಾಕಾಗುವಷ್ಟು ಜಾಗವಿದೆ, ಹಾಗೆಯೇ

ಮೊಹಮ್ಮದ್, ಝುರತುಸ್ತ್ರ, ಮೋಸೆಸ್ಸರಿಗೂ ಜಾಗವಿದೆ ನನ್ನ ದೃಷ್ಟಿಯಲ್ಲಿ ವಿಭಿನ್ನ ಧರ್ಮಗಳು ಒಂದೇ ತೋಟದಲ್ಲಿ ಬೆಳೆದ ಸುಂದರ ಪುಷ್ಪಗಳು, ಅಥವಾ ಭಾರಿಯಾದ ಒಂದೇ ಮರದ ಕೊಂಬೆಗಳು ಸಮಾನ ಆಳತೆಯಲ್ಲಿ ಅಸಂಪೂರ್ಣರಾದ ಮನುಷ್ಯರೆಂಬ ಉಪಕರಣಗಳ ಮೂಲಕ ಅವು ಸ್ವೀಕೃತವೂ ಅಭಿವ್ಯಕ್ತವೂ ಆಗುತ್ತಿದ್ದರೂ ಅವೆಲ್ಲವೂ ಸಮಾನವಾಗಿ ಸತ್ಯವಾದವು (ಹರಿಜನ ೩೦-೧-೩೭)

ಪ್ರಪಂಚದಲ್ಲಿರುವ ಎಲ್ಲ ಮತಗಳೂ ಉಳಿದ ವಿಷಯಗಳಲ್ಲಿ ವಿಭಿನ್ನ ವಾದರೂ ಈ ಜಗತ್ತಿನಲ್ಲಿ ಸತ್ಯ ಉಳಿಯುವುದು ವಿನಾ ಮತ್ತಾವುದೂ ಅಲ್ಲ ವೆಂಬುದನ್ನು ನಿಸ್ಸಂದೇಹವಾಗಿ ಘೋಷಿಸುತ್ತವೆ

(ಯಂಗ್ ಇಂಡಿಯಾ ೨೦-೧೦-೨೭)

ಜಗತ್ತಿನ ಸಕಲ ಮಹಾಧರ್ಮಗಳಲ್ಲಿಯೂ ಇರುವ ಅಧಿಷ್ಠಾನ ಸತ್ಯವನ್ನು ನಾನು ನಂಬುತ್ತೇನೆ ಅವೆಲ್ಲವೂ ಭಗವತ್ಪ್ರೇರಿತವೆಂದು ನನ್ನ ನಂಬಿಕೆ, ಯಾವ ಜನತೆಗಳಿಗಾಗಿ ಅವು ದಿವ್ಯಪ್ರಕಾಶಗೊಂಡುವೋ ಅವರಿಗೆ ಅವು ಆವಶ್ಯಕವಾಗಿದ್ದುವೆಂದು ನಂಬುತ್ತೇನ. ನನಗೆ ಇನ್ನೊಂದು ನಂಬಿಕೆ ವಿವಿಧ ಮತಗಳ ಪವಿತ್ರ ಗ್ರಂಥಗಳನ್ನು ಆಯಾ ಮತದ ಅನುಯಾಯಿಗಳ ದೃಷ್ಟಿಯಿಂದ ನಾವು ವ್ಯಾಸಂಗ ಮಾಡಿದರೆ, ಅವೆಲ್ಲವೂ ತಟ್ಟತಳದಲ್ಲಿ ಒಂದೇ ಎಂದೂ, ಪರಸ್ಪರ ಪೂರಕವೆಂದೂ ನಮಗೆ ತಿಳಿದುಬರುತ್ತದೆ

(ಹರಿಜನ ೧೦-೨-೨೪)

ಹಾಗಾದರೆ ಈ ಪ್ರಶ್ನೆ ಏಳುತ್ತದೆ ವಿವಿಧ ಧರ್ಮಗಳು ಇಷ್ಟೊಂದು ಏಕಿರಬೇಕು ? ಆತ್ಮ ಒಂದೇ, ಆದರೆ ಅದರಿಂದ ಸಚೇತನವಾಗುವ ದೇಹ ಗಳು ಅನೇಕ ದೇಹಗಳ ಸಂಖ್ಯೆಯನ್ನು ಇಳಿಸುವುದಕ್ಕೆ ನಮ್ಮ ಕೈಯಿಂ ದಾಗದು, ಆದರೂ ಏಕಾತ್ಮಭಾವವನ್ನು ಗೊತ್ತುಹಚ್ಚುತ್ತೇವೆ ಮರದ ಬುಡ ಒಂದೇ ಆದರೂ ಅದು ಬಹಳ ಶಾಖೆಗಳನ್ನೂ ಎಲೆಗಳನ್ನೂ ಹೊಂದಿರುವ ಹಾಗೆಯೇ ಸತ್ಯವೂ ಪರಿಪೂರ್ಣವೂ ಆದ ಧರ್ಮವಿದೆ, ಮಾನವಪಾತ್ರದ ಮೂಲಕ ಹಾದುಬರುವಾಗ ಅದಕ್ಕೆ ಬಹುತ್ವ ಒದಗುತ್ತದೆ ಈ ಏಕಧರ್ಮ ಅನಿರ್ವಚನೀಯ ಅಪೂರ್ಣ ಮಾನವರು ತಮ್ಮ ಅಧಿಕಾರವೆಂಥದೋ ಅಂಥ ಭಾಷೆಯಲ್ಲಿ ಅದನ್ನು ನಿರೂಪಿಸುತ್ತಾರೆ

ಅಂತೆಯೇ ಅಪೂರ್ಣರಾದ ಇತರ ಮಾನವರು ಅದನ್ನು ವ್ಯಾಖ್ಯಾನ ಗೈಯುತ್ತಾರೆ ಹೀಗಿರುವಾಗ ಯಾರ ವ್ಯಾಖ್ಯಾನವನ್ನು ಸರಿ ಎಂದು ಭಾವಿಸೋಣ? ಅವರವರ ನೆಲೆಯಿಂದ ಪ್ರತಿಯೊಬ್ಬರೂ ಸರಿಯಾದರೂ, ಪ್ರತಿಯೊಬ್ಬರೂ ತಪ್ಪಾಗಿರುವುದು ಸಂಭವವಲ್ಲ

## ಮಾನವಕಲ್ಪನೆಯ ಧರ್ಮ—ಅಪರಿಪೂರ್ಣ

ನಮಗ ಭಗವಂತನ ಸಾಕ್ಷಾತ್ಕಾರ ಹೇಗೆ ಸಾಧ್ಯವಾಗಲಿಲ್ಲವೋ ಹಾಗೆಯೇ ಪರಿಪೂರ್ಣ ಧರ್ಮವೂ ಕೈವಶವಾಗಿಲ್ಲ ಮಾನವ ಕಲ್ಪನೆಯ ಧರ್ಮವು ಹೀಗೆ ಅಪೂರ್ಣವಾಗಿರುವುದರಿಂದ ಅದು ವಿಕಾಸಕ್ರಮಕ್ಕೂ ಪುನರ್ವಿಮರ್ಶೆಗೂ ಬದ್ಧವಾಗಿರುತ್ತದೆ ಇಂಥ ವಿಕಾಸಕ್ರಮದಿಂದಲೇ ಸತ್ಯದೆಡೆಗೆ, ದೇವರೆಡೆಗೆ, ಪ್ರಗತಿ ಸಾಧ್ಯ ಮಾನವರೂಪಿತ ಧರ್ಮ ಗಳೆಲ್ಲವೂ ಅಪೂರ್ಣವಾಗಿರುವಾಗ ಒಂದಕ್ಕಿಂತ ಇನ್ನೊಂದು ಶ್ರೇಷ್ಠವೆನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಲ್ಲ ಧರ್ಮಗಳೂ ಸತ್ಯಪ್ರಕಾಶನವನ್ನು ವ್ಯಕ್ತಪಡಿಸುತ್ತವೆ, ಆದರೆ ಅವೆಲ್ಲ ಅಪೂರ್ಣವಾದವು, ಪ್ರಮಾದಕ್ಕೆ ಈಡಾದವು ಇತರ ಧರ್ಮಗಳನ್ನು ಕುರಿತು ನಮಗಿರುವ ಪೂಜ್ಯಬುದ್ಧಿ ಅವಲ್ಲಿನ ದೋಷಗಳಿಗೆ ಕಣ್ಮುಚ್ಚುವಂತೆ ಮಾಡಬೇಕಾದ್ದಿಲ್ಲ ನಮ್ಮದೇ ಧರ್ಮದಲ್ಲಿಯೂ ಇರುವ ಕೊರತೆಗಳ ವಿಚಾರ ತೀವ್ರ ಎಚ್ಚರಿಕೆ ನಮಗಿರ ಬೇಕು, ಆದರೂ ಅದಕ್ಕಾಗಿ ಅದನ್ನು ತ್ಯಜಿಸದೆ, ಕೊರತೆಗಳನ್ನು ತಗ್ಗಿಸಲು ಯತ್ನಗೈಯಬೇಕು ಎಲ್ಲ ಧರ್ಮಗಳನ್ನೂ ಸಮದೃಷ್ಟಿಯಿಂದ ಕಾಣುತ್ತ ಬಂದರೆ, ಅವುಗಳಲ್ಲಿರುವ ಸಂಗ್ರಾಹ್ಯ ಲಕ್ಷಣಗಳನ್ನು ತಂದು ನಮ್ಮ ಧರ್ಮದಲ್ಲಿ ಅಡಕಮಾಡಿಕೊಳ್ಳುವುದಕ್ಕೆ ನಾವು ಹಿಂದೆಗೆಯುವುದಿಲ್ಲ, ಹಾಗೆ ಮಾಡುವುದನ್ನು ನಮ್ಮ ಕರ್ತವ್ಯವೆಂದೇ ಬಗೆಯುತ್ತೇವೆ

ನನ್ನ ಹಿಂದೂ ಸಹಜ ಪ್ರವೃತ್ತಿ ಎಲ್ಲ ಧರ್ಮಗಳೂ ಹೆಚ್ಚುಕಡಮೆ ಸತ್ಯವೆಂದು ನನಗೆ ಬೋಧಿಸುತ್ತದೆ ಎಲ್ಲವೂ ಒಬ್ಬನೇ ಆದ ಪರಮಾತ್ಮ ನಿಂದ ಬಂದಿವೆ, ಆದರೆ ಎಲ್ಲವೂ ಅಪೂರ್ಣ ಏತಕ್ಕೆಂದರೆ ಅಪೂರ್ಣ ಮಾನವನೇ ಅವು ಅಭಿವ್ಯಕ್ತವಾಗುವುದಕ್ಕೆ ಸಾಧನ

ತುಂಬ ವಿನೀತನಾಗಿ ನಾನು ಹೇಳುತ್ತೇನೆ, ವೇದಗಳು ಕೂಡ,

ಕೊರಾನ್ ಮತ್ತು ಬೈಬಲ್ ದೇವರ ಸಂದೇಶವೇ ಆದರೂ ಅಪರಿಪೂರ್ಣ ಗುಂಪುಕಟ್ಟಿದ ರಾಗದ್ವೇಷಗಳಿಂದ ತುಂಬಿ ಅಪೂರ್ಣರಾಗಿರುವ ನಾವು ಈ ಅಪರಿಪೂರ್ಣ ಬೋಧೆಯನ್ನೂ ಪೂರ್ತಿ ತಿಳಿದುಕೊಳ್ಳಲು ಸಾಧ್ಯವಿಲ್ಲ ಆದ್ದರಿಂದ ಹಿಂದೂ ಬಾಲಕನಿಗೆ ನಾನು ಹೇಳುವುದಿಷ್ಟೆ ತಾನು ಬೆಳೆದು ಬಂದಿರುವ ಸಂಪ್ರದಾಯಗಳನ್ನು ಬುಡಸಹಿತ ಕೀಳಬಾರದು ಅವನು, ಹಾಗೆಯೇ ಮುಸ್ಲಿಂ ಅಥವಾ ಕ್ರೈಸ್ತ ಬಾಲಕರಿಗೂ ತಮ್ಮ ಧರ್ಮಸಂಪ್ರದಾಯಗಳನ್ನು ಕೀಳಬಾರದೆಂದು ಹೇಳುತ್ತೇನೆ ಎಂದಮೇಲೆ ನೀವು ಬೈಬಲನ್ನೂ ಕೊರಾನನ್ನೂ ವ್ಯಾಸಂಗಗೈಯುವುದನ್ನು ನಾನು ಸ್ವಾಗತಿಸುವಾಗ ಹಿಂದೂ ಬಾಲಕರಾದ ನೀವಲ್ಲ ಗೀತೆಯನ್ನು ಪಠಿಸಬೇಕೆಂದು ಒತ್ತಾಯ ಮಾಡುವ ಶಕ್ತಿ ನನ್ನಲ್ಲಿದ್ದರೆ ಖಂಡಿತ ಒತ್ತಾಯ ಮಾಡುತ್ತೇನೆ

(ಯಂಗ್ ಇಂಡಿಯಾ. ೨೨-೯-೨೭)

## ಸ್ವಧರ್ಮ

ಅನ್ಯರ ಧರ್ಮಗ್ರಂಥಗಳನ್ನು ಟೀಕೆ ಮಾಡುವುದಾಗಲೀ, ಅವುಗಳ ನ್ಯೂನತೆಗಳನ್ನು ಎತ್ತಿ ತೋರಿಸುವುದಾಗಲೀ ನನ್ನ ಕೆಲಸವಲ್ಲ ಅವುಗಳಲ್ಲಿರುವ ಸತ್ಯಾಂಶಗಳನ್ನು ಘೋಷಿಸಿ, ಅವನ್ನು ನನ್ನ ಅನುಷ್ಠಾನಕ್ಕೆ ತರುವುದು ನನಗೆ ಹೆಮ್ಮೆಯಾಗಿರಬೇಕು, ಆಗಿದೆ (ಹರಿಜನ ೧೩-೩-೩೭)

ಧರ್ಮವು ಹೃದಯಕ್ಕೆ ಸಂಬಂಧಪಟ್ಟ ವಿಷಯ ಎಷ್ಟೇ ಬಾಹ್ಯ ತೊಂದರೆ ಬಂದರೂ ಸ್ವಧರ್ಮವು ತ್ಯಜಿಸತಕ್ಕದಲ್ಲ

(ಯಂಗ್ ಇಂಡಿಯಾ ೨೭-೧-೨೦)

ಧರ್ಮವು ಪ್ರಾಣಕ್ಕಿಂತ ಮೇಲಾದುದು ಸ್ವಧರ್ಮವು ತತ್ವಶಾಸ್ತ್ರ ರೀತ್ಯಾ ಎಷ್ಟೇ ಕನಿಷ್ಠವಾದರೂ ಪ್ರತಿಯೊಬ್ಬನಿಗೂ ಅದೇ ಅತ್ಯಂತ ಸತ್ಯವಾದುದು (ಯಂಗ್ ಇಂಡಿಯಾ. ೨೮-೮-೨೪)

ಎಷ್ಟೇ ಹೇಳಿದರೂ. ಸ್ವಧರ್ಮ ಅದನ್ನು ಆಚರಿಸುವ ವ್ಯಕ್ತಿಗೂ ಅವನ ಸೃಷ್ಟಿಕರ್ತನಿಗೂ ನಡುವಣ ವಿಷಯವೇ ಹೊರತು ಇತರರಾರಿಗೂ ಅದು ಸಬಂಧ ಪಟ್ಟಿದಲ್ಲ (ಯಂಗ್ ಇಂಡಿಯಾ. ೨೦-೩-೨೪)

ಪ್ರಕೃತಿಯಲ್ಲಿ ನಾವು ನೋಡುತ್ತಿರುವ ಬಹುರೂಪಗಳ ಮುಖಾಂತರ

ಮೂಲಭೂತ ಐಕ್ಯತೆಯೊಂದು ಹಾದು ಹೋಗುತ್ತಿದೆ ಮಾನವ ಜಾತಿಗೆ ಧರ್ಮಗಳನ್ನು ಕೊಟ್ಟಿರುವುದು ಈ ಮೂಲಭೂತ ಐಕ್ಯತೆಯನ್ನು ಸಾಕ್ಷಾತ್ಕರಿಸಿಕೊಳ್ಳುವ ಉದ್ಯಮ ತ್ವರಿತವಾಗುವುದಕ್ಕಾಗಿ

(ಯಂಗ್ ಇಂಡಿಯಾ ೨೦-೧೦-೨೭)

ಇಸ್ಲಾಮಿನ ಅಲ್ಲಾ, ಕ್ರೈಸ್ತರ ದೇವರು, ಹಿಂದೂಗಳ ಈಶ್ವರ, ಎಲ್ಲ ಒಂದೇ ಹಿಂದೂಧರ್ಮದಲ್ಲಿ ದೇವರಿಗೆ ಅನಂತನಾಮಗಳಿದ್ದಂತೆ ಇಸ್ಲಾಂ ಧರ್ಮದಲ್ಲಿಯೂ ಇವೆ ಈ ನಾಮಗಳು ವ್ಯಕ್ತಿತ್ವಸೂಚಕವಲ್ಲ, ಗುಣವಾಚಕಗಳು, ಗುಣಾತೀತನೂ, ಅವರ್ಣನೀಯನೂ, ಅನಂತನೂ ಆದ ಸರ್ವಶಕ್ತನನ್ನು ಅಲ್ಪ ಮಾನವ ಗುಣಗಳಿಂದ ವರ್ಣಿಸಲು ನರ್ಮ ರೀತಿಯಲ್ಲಿ ಪ್ರಯತ್ನಿಸಿದ್ದಾನೆ ಈ ದೇವರಲ್ಲಿ ಇಡುವ ಸಚೇತನವಾದ ನಂಬಿಕೆಯು ಮಾನವವರ್ಗದ ಭ್ರಾತೃತ್ವವನ್ನು ಒಪ್ಪಿಕೊಳ್ಳುತ್ತದೆ ಹಾಗೂ ಎಲ್ಲ ಧರ್ಮಗಳಿಗೂ ಸಮಾನ ಗೌರವವನ್ನು ಸಾರುತ್ತದೆ ನಿಮಗೆ ಇಸ್ಲಾಂ ಪ್ರಿಯವಾದರೆ ನನಗೆ ಹಿಂದೂ ಧರ್ಮ ಪ್ರಿಯವಾದದ್ದು ಸ್ವಧರ್ಮವನ್ನು ಪೂರ್ತಿ ಅಲ್ಲದಿದ್ದರೂ ಬಲುಹತ್ತಿರವಾಗಿ ಹೋಲುವುದೆಂದು ನನಗೆ ಸಿಕ್ಕಿದ ವಿಚಾರ ಮದುವೆ ಮದುವೆಯು ವಿಚ್ಛೇದವಾಗದ ಸಂಬಂಧವಾಗಿದೆ, ಅಥವಾ ಆಗಿತ್ತು ಅದಕ್ಕಿಂತಲೂ ಹೆಚ್ಚಿನ ಸಂಬಂಧ ಧರ್ಮದ್ದು ಗಂಡ ಹೆಂಡತಿಯಲ್ಲಿ, ಹೆಂಡತಿ ಗಂಡನಲ್ಲಿ ನಿಶ್ಚಲ ವಿಶ್ವಾಸವನ್ನಿಡುವುದಕ್ಕೆ ಇತರ ಎಲ್ಲ ಮಹಿಳೆಯರಿಗಿಂತ ಅವಳಲ್ಲಿ ವಿಶಿಷ್ಟವಾದೊಂದು ಮೇಲ್ಮೆಯಿದೆಯೆಂದು ಅವನಾಗಲೀ ಇತರ ಎಲ್ಲ ಪುರುಷರಿಗಿಂತ ಅವನಲ್ಲಿ ವಿಶಿಷ್ಟವಾದೊಂದು ಮೇಲ್ಮೆಯಿದೆಯೆಂದು ಅವಳಾಗಲಿ ತಿಳಿಯುವುದಲ್ಲ ಕಾರಣ, ಯಾವುದೊ ವಿವರಿಸಲಾಗದ ಪ್ರತಿಭಟಿಸಲಾಗದ ಆಕರ್ಷಣೆ ಅದಕ್ಕೆ ಕಾರಣ ಹಾಗೆಯೇ ತನ್ನ ಧರ್ಮವೆಂದರೆ ಮನುಷ್ಯನಿಗೆ ಬಿಡಲಾಗದ ವಾತ್ಸಲ್ಯ, ಅದರೊಡನಾದ ಸೇರ್ಪಡೆಯಿಂದ ಅವನಿಗೆ ತುಂಬ ತೃಪ್ತಿ ಪ್ರಾಮಾಣಿಕ ಪತಿ ತನ್ನ ಪತಿಯೊಡನೆ ಸ್ಥಿರನಿಷ್ಠೆಯಿಂದ ಇರುವುದಕ್ಕೆ ಆಕೆಗಿಂತ ಇತರ ಸ್ತ್ರೀಯರೆಲ್ಲರೂ ಕೀಳೆಂದು ಭಾವಿಸುವ ಅಗತ್ಯವಿಲ್ಲ ಅದೇ ಪ್ರಕಾರ ತನ್ನ ಧರ್ಮದಲ್ಲಿ ನಿಷ್ಠೆಯುಳ್ಳವನಿಗೆ ಪರಧರ್ಮಗಳು ಕೀಳೆಂಬ ಭಾವನೆ ಅನಗತ್ಯ ಈ ಸಾದೃಶ್ಯವನ್ನು ಮುಂದುವರಿಸೋಣ ತನ್ನ ಪತಿಯ ವಿಚಾರನಿಷ್ಠೆಯನ್ನು ಪಾಲಿಸ

ಬೇಕಾದರೆ, ಆಕೆಯ ಕುಂದುಕೊರತೆಗಳಿಗೆ ಅಂಧನಾಗಿರಬೇಕೆಂಬ ಪೂರ್ವ ಪಕ್ಷ ಬೇಕಾಗಿಲ್ಲ, ಹಾಗೆಯೇ ಸ್ವಧರ್ಮನಿಷ್ಠೆಗೂ ಆ ಧರ್ಮದ ಕುಂದು ಕೊರತೆಗಳನ್ನು ನೋಡದಿರಬೇಕೆಂಬ ಪೂರ್ವಪಕ್ಷ ಬೇಕಾಗಿಲ್ಲ ನಿಜವನ್ನು ಭಾವಿಸಿದರೆ ಧರ್ಮದ ನ್ಯೂನತೆಗಳನ್ನು ತೀಕ್ಷ್ಣವಾಗಿ ಪರಿಶೀಲಿಸಬೇಕು ಧರ್ಮಶ್ರದ್ಧೆ ಖಂಡಿತ ವೃದ್ಧಿಯಾಗುವುದಕ್ಕೆ ತನ್ಮೂಲಕ ಕುಂದುಕೊರತೆ ಗಳನ್ನು ಪರಿಹರಿಸುವ ಯೋಗ್ಯ ಉಪಾಯಗಳ ಉತ್ಕೃಷ್ಟ ಜ್ಞಾನ ದೊರೆತೀತು ಧರ್ಮದ ಬಗೆಗೆ ಈ ದೃಷ್ಟಿಯುಳ್ಳವನಾದುದರಿಂದ, ಹಿಂದೂ ಧರ್ಮದ ಸೊಬಗು ಸೌಂದರ್ಯಗಳು ನನ್ನ ಬುದ್ಧಿಗೆ ಗೋಚರವಿಲ್ಲದಿದ್ದರೆ ನಾನು ಹಿಂದೂ ಆಗಿ ಉಳಿಯುತ್ತಿರಲಿಲ್ಲ, ಎಂಬುದನ್ನು ಪಾಠಕ ಲೆಕ್ಕಿ ಸಿಲ್ಲಲಿ ಎಂದರೆ ಅವು ಹಿಂದೂ ಧರ್ಮದಲ್ಲಿ ಮಾತ್ರ ಉಂಟೆಂಬ ಪ್ರತ್ಯೇಕತ್ವ ನನ್ನ ಉದ್ದೇಶಕ್ಕೆ ಸಲ್ಲದು ಆದ್ದರಿಂದ, ಹುಳುಕನ್ನು ಎತ್ತಿತೋರಿಸುವ ದೋಷೈಕದೃಕ್ಕಿನ ತೆರನಲ್ಲ ಅನ್ಯಧರ್ಮಗಳನ್ನು ಕಾಣುವ ನನ್ನ ರೀತಿ ಅವುಗಳಲ್ಲಿಯೂ ಸರಿಸಮನಾದ ಸೌಂದರ್ಯವನ್ನು ಕಾಣುವ ನಿರೀಕ್ಷ ಯಿಂದ ನನ್ನ ಧರ್ಮದಲ್ಲಿಲ್ಲದ ಅವಲ್ಲಿರುವ ಗುಣಗಳನ್ನು ತಂದು ನನ್ನದ ರೊಳಕ್ಕೆ ಕೂಡಿಸುವ ಆಶೆಯಿಂದ, ಭಕ್ತನೋಪಾದಿ ನಡೆಯುತ್ತೇನೆ ನಾನು

(ಹರಿಜನ. ೧೨-೮-೩೦)

ಹಾಕಿಕೊಳ್ಳುವ ವಸ್ತ್ರಗಳನ್ನು ಬದಲಾಯಿಸುವಷ್ಟು ಸುಲಭವಾಗಿ ಧರ್ಮವನ್ನು ಬದಲಾಯಿಸುವುದಿಲ್ಲ ಮನುಷ್ಯ ಅದನ್ನು ಮರಣದಿಂ ದಾಚೆಗೂ ತನ್ನೊಡನೆ ತೆಗೆದುಕೊಂಡು ಹೋಗುತ್ತಾನೆ ಅಲ್ಲದೆ ಇತರರ ಹಂಗಿಗೋಸ್ಕರ ಯಾವೊಬ್ಬನೂ ಒಂದು ಧರ್ಮದ ಅನುಯಾಯಿಯಾಗ ಲಾರ ಧರ್ಮವನ್ನು ಹಿಡಿಯದೆ ಅವನಿಗೆ ಗತ್ಯಂತರವಿಲ್ಲ, ನಿಷ್ಠಾವಂತ ಪತಿಯು ಇನ್ನಾವ ಸ್ತ್ರೀಯನ್ನೂ ಪ್ರೀತಿಸದಷ್ಟು ತನ್ನ ಸತಿಯನ್ನು ಪ್ರೀತಿಸಿ ಯಾನು ಆಕೆಯು ಪಾತಿವ್ರತ್ಯ ತಪ್ಪಿದರೂ ಕೂಡ ಅವನು ತನ್ನ ನಿಷ್ಠೆಯಿಂದ ಬೇರೆಯಾಗಲಾರ ಈ ಬೆಸುಗೆ, ರಕ್ತಸಂಬಂಧವನ್ನು ಮೀರಿ ಸಿದುದು ಸ್ವಧರ್ಮದ ಬೆಸುಗೆಯೂ ಅದೇ ಬಗೆ, ಅದರಲ್ಲೇನಾದರೂ ಹುಳುಕಿದ್ದರೆ ಅದು ಹೃದಯಕ್ಕೆ ಸಂಬಂಧಪಟ್ಟ ವಿಷಯ

(ಹರಿಜನ ೧೬-೧೨-೩೬)

## ಪರಧರ್ಮ ಸಹಿಷ್ಣುತೆ

ಪರಧರ್ಮಸಹಿಷ್ಣುತೆ ಎಂದರೆ ಸ್ವಧರ್ಮದಲ್ಲಿ ಉದಾಸೀನತೆಯಲ್ಲ ಅದರ ಸಲುವಾಗಿ ಹೆಚ್ಚು ವಿವೇಕಪೂರಿತವೂ, ಹೆಚ್ಚು ಪರಿಶುದ್ಧವೂ ಆದ ಪ್ರೇಮ ಸಹಿಷ್ಣುತೆಯು ನಮಗೆ ಆಧ್ಯಾತ್ಮಿಕ ದೃಷ್ಟಿಯನ್ನು ಈಯುತ್ತದೆ ಅದಕ್ಕೂ ಉತ್ಕಟ ದುರಭಿಮಾನಕ್ಕೂ ನಡುವಣ ದೂರ ಉತ್ತರ ಧ್ರುವ ದಕ್ಷಿಣ ಧ್ರುವಗಳ ಮಧ್ಯದಲ್ಲಿರುವ ದೂರ ಧರ್ಮದ ನಿಜವಾದ ಜ್ಞಾನವು ಧರ್ಮ ಧರ್ಮಗಳ ನಡುವೆ ಇರುವ ಬೇಲಿಗಳನ್ನು ಕೆಳಗುರುಳಿಸುತ್ತದೆ ಪರಧರ್ಮ ಸಹಿಷ್ಣುತೆಯನ್ನು ಬೆಳೆಸಿಕೊಳ್ಳುವುದು ಸ್ವಧರ್ಮದ ನಿಜವಾದ ಜ್ಞಾನವನ್ನು ವೃದ್ಧಿಗೊಳಿಸುತ್ತದೆ ನಮ್ಮಲ್ಲಿ

ಪರಧರ್ಮ ಸಹಿಷ್ಣುತೆ ಒಳ್ಳೆಯದು-ಕೆಟ್ಟದು ಅಥವಾ ನ್ಯಾಯ-ಅನ್ಯಾಯ ಇವುಗಳಿಗಿರುವ ವ್ಯತ್ಯಾಸವನ್ನು ಕದಲಿಸುವುದಿಲ್ಲವೆಂಬುದು ಸುಸ್ಪಷ್ಟ ಈ ಪ್ರಸ್ತಾವದಲ್ಲಿ ನಮ್ಮ ಮುಂದಿರುವುದು ಪ್ರಪಂಚದ ಪ್ರಧಾನ ಧರ್ಮಗಳು ಸಮಾನ ಮೂಲತತ್ವಗಳೇ ಅವೆಲ್ಲಕ್ಕೂ ಆಧಾರ ಅವೆಲ್ಲದರಲ್ಲಿಯೂ ಹುಟ್ಟಿ ಬಂದಿದ್ದಾರೆ ಭಾರಿ ಸಂತರು

(ಮಂಗಳಪ್ರಭಾತ)

## ಸರ್ವಧರ್ಮಸಮಭಾವ

ಸರ್ವ ಧರ್ಮಗಳೂ ಸರಿಸಮನೆಂಬ ತತ್ವದ ಅಂಗೀಕಾರ ಧರ್ಮ ಅಧರ್ಮಗಳಿಗಿರುವ ವ್ಯತ್ಯಾಸವನ್ನು ತೊಡೆದು ಹಾಕುವುದಿಲ್ಲ ಅಧರ್ಮ ಸಹಿಷ್ಣುತೆಯನ್ನು ಬೆಳೆಸಿಕೊಳ್ಳಬೇಕೆಂದು ನಾವು ಸೂಚಿಸುವುದಿಲ್ಲ ಧರ್ಮ ಯಾವುದು, ಅಧರ್ಮ ಯಾವುದು ಎಂಬ ಪ್ರಶ್ನೆಗಳಿಗೆ ಒಬ್ಬೊಬ್ಬರೂ ಸ್ವತಂತ್ರವಾದ ನಿರ್ಧಾರಕ್ಕೆ ಬರಬಹುದಾದರೆ, ಸಮಮನೋಭಾವಕ್ಕೆ ಜಾಗವೆಲ್ಲಿಂದ ಬರುತ್ತದೆಂದು ಕೆಲವರು ಆಕ್ಷೇಪವೆತ್ತಬಹುದು ನಾವು ಪ್ರೇಮಶಾಸನವನ್ನು ಅನುಸರಿಸಿದರೆ ಅಧರ್ಮಪ್ರವರ್ತಕನಾದ ಸೋದರನನ್ನು ದ್ವೇಷಿಸೆವು. ಅದರ ಬದಲು ಅವನನ್ನು ಪ್ರೀತಿಯಿಂದ ಕಾಣುವೆವು ಇಲ್ಲ ಅವನ ತಪ್ಪುಮಾರ್ಗದ ಅರಿವಿಗೆ ಅವನನ್ನು ನಾವು ತರುತ್ತೇವೆ, ಇಲ್ಲ ಅವನು ನಮ್ಮ ತಪ್ಪನ್ನು ನಮಗೆ ತೋರಿಸಿಕೊಡುತ್ತಾನೆ, ಅಥವಾ

ಇಬ್ಬರೂ ನಮ್ಮಲ್ಲಿರುವ ಅಭಿಪ್ರಾಯಭೇದವನ್ನು ತಾಳ್ಮೆಯಿಂದ ಕಾಣುತ್ತೇವೆ ನಮ್ಮ ಎದುರಾಳಿ ಪ್ರೇಮಶಾಸನಕ್ಕೆ ವಿಧೇಯನಲ್ಲದಿದ್ದರೆ ನಮಗೆ ಹಿಂಸೆಯನ್ನೆಸಗಬಹುದು ಅವ, ಹಾಗಾದರೂ, ನಾವು ಅವನ ಮೇಲೆ ಯಥಾರ್ಥಪ್ರೇಮವನ್ನೇ ಪರಿಪೋಷಿಸಿದಲ್ಲಿ ಅದು ಕೊನೆಗೆ ಅವನ ಕಹಿ ವೈರವನ್ನು ಗೆಲ್ಲಬಹುದು ನಮ್ಮ ಹಾದಿಯಲ್ಲಿ ಏಳುವ ಅಡಚಣೆಗಳೆಲ್ಲ ಮಾಯವಾಗಬೇಕಾದರೆ ನಾವು ಈ ಸುವರ್ಣಸೂತ್ರವನ್ನು ಮಾತ್ರ ಹಿಂಬಾಲಿಸಿದರೆ ಸಾಕು ತಪ್ಪು ಮಾಡುತ್ತಿರುವರು ಎಂದು ಯಾರನ್ನು ನಾವು ತಿಳಿಯುತ್ತೇವೆಯೋ ಅವರ ಒಗೆಗೆ ತಾಳ್ಮೆಯನ್ನು ಕಳೆದುಕೊಳ್ಳಬಾರದು, ಮತ್ತು ಅಗತ್ಯ ಬಿದ್ದರೆ ನಮ್ಮ ಶರೀರದಂಡನೆಗೆ ನಾವೇ ಸಿದ್ಧರಾಗಿರಬೇಕು (ಮಂಗಳಪ್ರಭಾತ)

ಅನ್ಯಧರ್ಮಗಳ ಭಕ್ತಿಯುಕ್ತ ವ್ಯಾಸಂಗವು ಸ್ವಧರ್ಮದಲ್ಲಿ ನಾವಿಟ್ಟಿರುವ ಶ್ರದ್ಧೆಯನ್ನು ಕಡಮೆ ಮಾಡುತ್ತದೆಂದಾಗಲೀ ಅಲ್ಲಾಡಿಸುತ್ತೆಂದಾಗಲೀ ಯಾರೊಬ್ಬರೂ ಒಂದು ಕ್ಷಣವೂ ಅಂಜದಿರಲಿ ಹಿಂದೂ ತತ್ವಜ್ಞಾನಚಕ್ರ ಸಮಸ್ತ ಧರ್ಮಗಳಲ್ಲಿಯೂ ಸತ್ಯಾಂಶಗಳಿವೆಯೆಂದು ಭಾವಿಸಿ, ಎಲ್ಲವುಗಳ ವಿಷಯದಲ್ಲಿಯೂ ಮರ್ಯಾದೆಯ, ಪೂಜ್ಯಭಾವದ, ಚಿತ್ತವೃತ್ತಿಯನ್ನು ಇಟ್ಟುಕೊಳ್ಳುವಂತೆ ವಿಧಿಸುತ್ತದೆ ಸ್ವಧರ್ಮದ ವಿಷಯದಲ್ಲಿ ಮರ್ಯಾದೆಯಿರಬೇಕೆಂಬ ಅಂಶವಂತೂ ಮೊದಲೇ ವಿಧಿಸಿದಂತೆಯೇ ಆಯಿತು ಆ ಮರ್ಯಾದೆ ಅನ್ಯಧರ್ಮಗಳ ವ್ಯಾಸಂಗ ಮತ್ತು ಮೆಚ್ಚಿಗೆಯಿಂದ ದುರ್ಬಲವಾಗಬೇಕಾದ್ದಿಲ್ಲ, ಇತರ ಧರ್ಮಗಳಿಗೂ ಅದು ಹಬ್ಬಿ ವಿಸ್ತಾರವಾಗಬೇಕು

(ಯಂಗ್ ಇಂಡಿಯಾ. ೬-೧೨-೨೮)

ಈ ಘಳಿಗೆಯಲ್ಲಿ ಆವಶ್ಯಕವಾಗಿರುವುದು ಏಕಧರ್ಮವಲ್ಲ, ವಿವಿಧ ಧರ್ಮಗಳ ಭಕ್ತರಲ್ಲಿ ಪರಸ್ಪರ ಗೌರವ ಮತ್ತು ಸಹನೆ ನಾವು ಸೇರಬೇಕಾಗಿರುವುದು ಒಂದೇ ಶವಸಹಜ ಘಟ್ಟವನ್ನಲ್ಲ, ಅನೇಕತ್ವದಲ್ಲಿ ಏಕತ್ವವನ್ನ ಪರಂಪರಾಗತವಾದ ಆನುವಂಶಿಕ ಪ್ರಭಾವ, ಹವಾಮಾನ, ಇತರ ಸನ್ನಿವೇಶಗಳು, ಮುಂತಾದುವನ್ನು ಬೇರುಸಹಿತ ಕೀಳಲೆತ್ನಿಸುವುದು ಖಂಡಿತ ವಿಫಲವಾಗುವುದಲ್ಲದೆ, ಧರ್ಮದ್ರೋಹವೂ ಆದೀತು ಸಕಲ ಧರ್ಮಗಳ ಆತ್ಮವೂ ಒಂದೇ, ಆದರೆ ಅದು ಬಹಳ ಆಕಾರಗಳಲ್ಲಿ ಆಚ್ಛಾದಿತವಾಗಿದೆ

ಅವು ಕಾಲವೆಂಬುದು ಮುಗಿಯುವವರೆಗೂ ನಿಂತಾವು ಜ್ಞಾನಿಗಳು ಹೊರಗಣ ಹೆಕ್ಕಳಿಕೆಯನ್ನು ಗಮನಿಸದೆ, ಬಗೆಬಗೆಯ ಹೆಕ್ಕಳಿಕೆಗಳ ಕೆಳಗೆ ಬದುಕಿರುವ ಏಕಾತ್ಮವನ್ನು ಸಂದರ್ಶಿಸುವರು.

(ಯಂಗ್ ಇಂಡಿಯಾ ೨೫-೯-೨೫)

ಜಗತ್ತಿನ ಎಲ್ಲ ಮತಗಳನ್ನೂ ನನ್ನ ಮತದಷ್ಟೇ ಸತ್ಯವೆಂದು ನಾನು ಭಾವಿಸುತ್ತೇನೆ ಇಂದು, ಆಯಾ ಮತಾನುಯಾಯಿಗಳಿಂದಲೇ ಅವು ವಿಕೃತಿಗೊಳಗಾಗಿರುವುದನ್ನು ಕಂಡು ನನಗೆ ವ್ಯಥೆಯಾಗುತ್ತದೆ

(ಹರಿಜನ. ೧೯-೧೨ ೩೫)

ನನ್ನ ಆತ್ಮತೃಪ್ತಿಗಾಗಿ ವಿವಿಧ ಮತಗ್ರಂಥಗಳ ಹಾಳೆಗಳನ್ನು ತಿರುವಿ ಹಾಕುತ್ತ ಕ್ರೈಸ್ತಧರ್ಮ, ಇಸ್ಲಾಂ, ಝುರತುಷ್ಟ್ರಧರ್ಮ, ಯೆಹೂದ್ಯ ಮತ್ತು ಹಿಂದೂಧರ್ಮಗಳನ್ನು ನನಗೆ ಸಾಕಾಗುವಷ್ಟು ಪರಿಚಯ ಮಾಡಿಕೊಂಡೆ ಮತ್ತೂ ಹೇಳುವುದಾದರೆ, ಅವುಗಳನ್ನು ಅಧ್ಯಯನ ಮಾಡುವಾಗ, ಪ್ರಾಯಶಃ ನನಗೆ ಅರಿವಿಲ್ಲದಂತೆಯೇ ಅವೆಲ್ಲವನ್ನೂ ಕುರಿತು ಸಮಾನಚಿತ್ತವುಳ್ಳವನಾಗಿದ್ದೆ ನಾನು ಆ ದಿವಸಗಳನ್ನು ಈಗ ಜ್ಞಾಪಿಸಿಕೊಂಡರೆ, ಅವು ನನ್ನ ಧರ್ಮವಲ್ಲವೆಂಬ ಕಾರಣದಿಂದಲೇ ಅವಲ್ಲಿ ಯಾವುದನ್ನಾಗಲೀ ಟೀಕಿಸಲು ಕೊಂಚವಾದರೂ ಮನಸ್ಸು ನನಗೆ ಎಂದೂ ಬರದಿದ್ದುದು ನಿಶ್ಚಯ, ಪ್ರತಿಯೊಂದು ಪವಿತ್ರ ಗ್ರಂಥವನ್ನೂ ಪೂಜ್ಯಬುದ್ಧಿಯಿಂದ ಓದಿ ಎಲ್ಲದರಲ್ಲಿಯೂ ಒಂದೇ ಮೂಲ ನೀತಿ ನೇಮವನ್ನು ಕಂಡೆ ಕೆಲ ವಿಷಯಗಳು ಆಗ ಅರ್ಥವಾಗಲಿಲ್ಲ ನನಗೆ, ಈಗಲೂ ಕೂಡ ಅರ್ಥವಾಗಿಲ್ಲ. ಆದರೆ ಯಾವುದನ್ನು ನಾವು ಅರ್ಥಮಾಡಿಕೊಳ್ಳಲಾರೆವೋ ಅದು ತಪ್ಪೇ ಆಗಿರಬೇಕೆಂದು ಶೀಘ್ರವಾಗಿ ಭಾವಿಸುವುದು ಸರಿಯಲ್ಲವೆಂಬುದು ಅನುಭವದಿಂದ ನನಗೆ ಗೊತ್ತಾಗಿದೆ ಮೊದಲು ನನಗೆ ಅರ್ಥವಾಗದಿದ್ದ ಕೆಲವು ವಿಷಯಗಳು ಈಚೆಗೆ ಹಗಲಿನ ಬೆಳಕಿನಷ್ಟು ಸ್ಪಷ್ಟವಾಗಿಬಿಟ್ಟಿವೆ ಸಹೃದಯತೆ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಹಾಯ ನೀಡುತ್ತದೆ ಒಂದು ವೇಳೆ ನಾವು ಯಾವುದನ್ನಾದರೂ ಟೀಕೆ ಮಾಡಬೇಕಾದರೆ, ನಮ್ಮ ಅಭಿಪ್ರಾಯಸೂಚನೆ ನಮ್ರತೆಯಿಂದಲೂ ವಿನಯದಿಂದಲೂ ಕೂಡಿರುತ್ತದೆ, ಹಿಂದೊಂದು ಚುಚ್ಚುಮುಳ್ಳನ್ನು ಬಿಟ್ಟು ಹೋಗುವುದಿಲ್ಲ

ಅಸಹಿಷ್ಣುತೆಯಿಂದ ಧ್ವನಿತವಾಗುತ್ತದೆ ಇತರ ಧರ್ಮಗಳು ನಮ್ಮ ಧರ್ಮಕ್ಕಿಂತ ಕೆಳಗೆ ಎಂಬ ಪ್ರತೀತಿ. ಅಹಿಂಸೆಯಾದರೋ ನಮ್ಮ ಧರ್ಮಕ್ಕೆ ನಾವು ಕೊಡುವ ಗೌರವವನ್ನೇ ಇತರರ ಧರ್ಮಗಳಿಗೂ ಕೊಡಬೇಕೆಂದು ಬೋಧಿಸುತ್ತದೆ, ಆ ಮೂಲಕ ನಮ್ಮ ಧರ್ಮದಲ್ಲಿಯೂ ಇರುವ ಅಪೂರ್ಣತೆಯನ್ನು ನಾವು ಒಪ್ಪಿಕೊಳ್ಳಬೇಕೆಂದು ಹೇಳುತ್ತದೆ. ಈ ವಿಚಾರದಲ್ಲಿ ಸಂಸ್ಕೃತಿ ಯಾವ ಪೀಠದ ಮೇಲೆ ನಿಂತಿದೆಯೋ ಅದೇ ಪೀಠದ ಮೇಲಿದೆ ಧರ್ಮ. ನಮ್ಮ ಸಂಸ್ಕೃತಿಯ ಸಂರಕ್ಷಣೆ ಎಂದರೆ ಇನ್ನೊಂದು ಸಂಸ್ಕೃತಿಯ ಅವಹೇಳನವಲ್ಲವೆಂದೂ ಅನ್ಯಸಂಸ್ಕೃತಿಗಳೆಲ್ಲದರಲ್ಲಿರುವ ಅತ್ಯುತ್ತಮ ಅಂಶಗಳನ್ನು ತಿಂದು ಜೀರ್ಣಿಸಿಕೊಳ್ಳುವುದೆಂದೂ ಅರ್ಥವಾಗುವಂತೆ ಧರ್ಮದ ವಿಚಾರದಲ್ಲಿಯೂ ಹಾಗೆಯೇ ಆಗಬೇಕು.

(ಯಂಗ್ ಇಂಡಿಯಾ ೬-೧೨-೨೩)

ನನ್ನ ಜೀವಿತದ ಪೂರ್ತ ನಾನು ಸಂಖ್ಯಾಬಾಹುಳ್ಯದ ಮೇಲೆ ಎಂದೂ ಅವಧಾರಣೆಯನ್ನು ಇಟ್ಟಿಲ್ಲ. ಸಂಖ್ಯಾಬಾಹುಳ್ಯ ಬಲಿಯಾದರೂ ಸರಿಯೆ, ಗುಣಪ್ರಾಧಾನ್ಯತೆ ಇರಬೇಕೆಂದು ಒತ್ತಾಯ ಮಾಡಿದ್ದೇನೆ. ಹತ್ತು ಲಕ್ಷ ಖೋಟಾ ನಾಣ್ಯಗಳನ್ನು ನಾನು ಶೇಖರಿಸಿದರೆ ಅವು ನನಗೆ ಕೆಲಸಕ್ಕೆ ಬಾರದ ಹೊರೆಯಾಗುತ್ತವೆ, ಒಂದು ಒಳ್ಳೆಯ ನಾಣ್ಯವಾದರೂ ಅದಕ್ಕೆ ತಕ್ಕ ಬೆಲೆಯುಂಟು. ತಮ್ಮ ಬಾಳಿನಲ್ಲಿ ಧರ್ಮದ ಸಿದ್ಧಾಂತಗಳನ್ನು ಸುಳ್ಳಿಸುತ್ತ ಕೇವಲ ವಾಗುಪಚಾರಿಗಳಾದವರ ಮೊತ್ತದಿಂದ ಯಾವ ಧರ್ಮವೂ ನಿಲ್ಲಲಾರದು. ಅಸ್ಪೃಶ್ಯತೆಯೆಂಬ ಕೆಡುಕಿಗೆ ಆಶ್ರಯವೀಯುವುದರಲ್ಲಿ ಹಿಂದೂ ಮತೀಯರು ಹಠ ಹಿಡಿಯುತ್ತಾ ಹೋದರೆ ತನಗೆ ಲಕ್ಷಗಟ್ಟಲೆ ಬರಿ ನಾಮಧಾರಿ ಅನುಯಾಯಿಗಳಿದ್ದರೂ ಈ ಮಹಾ ಹಿಂದೂಧರ್ಮ ಕೂಡ ನಾಶ ಹೊಂದುತ್ತದೆ. ಅಸ್ಪೃಶ್ಯರು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಇರುವರೆಂಬುದು ಕಾರಣವಲ್ಲ,ಅವರು ಕೇವಲ ಒಂದೇಹಿಡಿ ಜನರಿದ್ದರೂ ಅದು ನಾಶವಾದೀತು. ಹಾಲು ವಿಷಪೂರಿತವಾಗಿ ಬಿಸಾಡಲರ್ಹವಾಗುವುದಕ್ಕೆ ತುಸು ಪಾಷಾಣವನ್ನೋ ತುಂಬವನ್ನೋ ಅದರಲ್ಲಿ ಬೆರಸಿದರೆ ಸಾಕು. ನಾವೆಲ್ಲರೂ ಒಬ್ಬನೇ ಆದ ದೇವರ ಮಕ್ಕಳೆಂದೂ ಆತನೇ ಸತ್ಯವೂ ನ್ಯಾಯವೂ ಎಂದೂ ನಂಬಿರುವಾಗ ಅವನ ಮಕ್ಕಳಾದ ನಾವು ಒಬ್ಬರನ್ನೊಬ್ಬರು ಮುಟ್ಟದಿರುವುದು

ಹೇಗೆ? ಸತ್ಯ ನ್ಯಾಯಸ್ವರೂಪನಾದ ಭಗವಂತ ತನ್ನ ಸ್ವಂತ ಮಕ್ಕಳಲ್ಲಿಯೇ ಮೇಲು ಕೀಳೆಂಬ ವ್ಯತ್ಯಾಸವನ್ನು ಎಂದಿಗೂ ನಿರ್ಮಿಸಲಾರ

(ಹರಿಜನ. ೧೭-೧೧-೩೫)

ಧರ್ಮ ನಾಶವಾದರೆ, ಎಲ್ಲವೂ ನಾಶವಾದಂತೆ ಧರ್ಮವು ಬಾಳನ್ನೆಲ್ಲ ಆಳಬೇಕು ನನ್ನ ಕಾರ್ಯ ಚಟುವಟಿಕೆಗಳಲ್ಲಿ ಜಾತೀಯತೆಯ ಸೋಂಕಿಲ್ಲ ಹಿಂದೂಧರ್ಮವು ಮೇಲು ಕೀಳೆಂಬ ಭೇದಗಳನ್ನು ವಿಸರ್ಜಿಸಿದರೆ, ಮುಸಲ್ಮಾನರೊಡನೆಯೂ ಕ್ರೈಸ್ತರೊಡನೆಯೂ ಇತರರೊಡನೆಯೂ ಪೂರ್ತಿ ಸಮಾನಸ್ಕಂಧರಾಗಿ ಕಲೆಯುವ ಸ್ಥಿತಿಗೆ ಹಿಂದೂಗಳು ಬರುವರೆಂದು ನನ್ನ ಅಂತರ್ಯದ ನೆಚ್ಚಿಕೆ ಇಂದು ಅವರ ಮಧ್ಯೆ ಅಡ್ಡಕಂಬಿ ಇದೆ ಆ ಅಡ್ಡಕಂಬಿಯನ್ನು ಎತ್ತಿಡಬೇಕೆಂದು ನನ್ನ ಬಯಕೆ ವೈಯಕ್ತಿಕ ಧಾರ್ಮಿಕ ಭಾವನೆಗಳನ್ನು ನಮ್ಮ ನಮ್ಮಲ್ಲಿ ಇಟ್ಟುಕೊಳ್ಳಬಹುದು, ಆದರೆ ಹೃದಯಗಳು ಮಿಲನವಾಗುವುದಕ್ಕೆ ಅವೇಕೆ ತಡೆಯಾಗಬೇಕು ?

ಮುಸಲ್ಮಾನರೊಂದಿಗೂ ಕ್ರೈಸ್ತರೊಂದಿಗೂ ನೇರಲು ಹಿಂದೂಗಳಿಗೆ ಯಾವೊಂದು ತೊಂದರೆ ತಾನೆ ಏಕೆ ಇರಬೇಕು ? ಅಸ್ಪೃಶ್ಯತೆಯು ಹಿಂದೂ ಹಿಂದೂವಿನ ಮಧ್ಯೆ ಅಡ್ಡಕೋಲನ್ನಿಡುವುದಷ್ಟೇ ಅಲ್ಲ, ಮನುಷ್ಯ ಮನುಷ್ಯನ ಮಧ್ಯೆಯೂ ಇಡುತ್ತದೆ

ಅದು ತೊಲಗಿದಾಗ ಬಹುಸಂಖ್ಯಾತರು ಇರುವುದಿಲ್ಲ, ಅಲ್ಪಸಂಖ್ಯಾತರೂ ಇರುವುದಿಲ್ಲ ನಾವೆಲ್ಲರೂ ಒಂದಾಗಿ ದೇವರಲ್ಲಿರುತ್ತೇವೆ ನನ್ನ ಹಿಂದೂಧರ್ಮಕ್ಕೆ ನತ್ಯದಷ್ಟೇ ವೈಶಾಲ್ಯ

(ಹರಿಜನ. ೨೯-೧೨-೩೩)

"ದಿಟವಾಗಿ, ದಿಟವಾಗಿ ಹೇಳುತ್ತೇನೆ ನಿಮಗೆ ನನ್ನನ್ನು ಉದ್ದೇಶಿಸಿ ಪ್ರಭು, ಪ್ರಭು, ಎಂಬುದಾಗಿ ಕೂಗುವವರೆಲ್ಲರೂ ಸ್ವರ್ಗದ ರಾಜ್ಯವನ್ನು ಪ್ರವೇಶಿಸುವುದಿಲ್ಲ, ಆದರೆ ಸ್ವರ್ಗದಲ್ಲಿರುವ ನನ್ನ ತಂದೆಯ ಆಜ್ಞೆಯನ್ನು ಯಾವನು ಪರಿಪಾಲಿಸುತ್ತಾನೋ ಅವನು ಸ್ವರ್ಗವನ್ನು ಪ್ರವೇಶಿಸಿಯೇ ಪ್ರವೇಶಿಸುತ್ತಾನೆ " ಎಂಬುದಾಗಿ ಜಗತ್ತಿನ ಎಲ್ಲ ಘನ ಧರ್ಮಬೋಧಕರೂ ಬೇರೆ ಬೇರೆ ಪದಗಳ ಮೂಲಕ ನುಡಿದಿದ್ದಾರೆ (ಹರಿಜನ ೨೮-೧೧-೩೬)

ಎಲ್ಲ ಧರ್ಮಗಳೂ ಸಮಾನವಾಗಿ ಸತ್ಯ, ಸಮಾನವಾಗಿಯೇ

ಅಪೂರ್ಣ ಹೆಚ್ಚು ಹೆಚ್ಚು ಸೂಕ್ಷ್ಮವಾಗಿ ನೀವು ರೇಖೆಯನ್ನೆಳೆದಷ್ಟೂ ಅದು ಯೂಕ್ಲಿಡ್ಡನ ಆದರ್ಶ ಸರಳರೇಖೆಯ ಹೆಚ್ಚು ಹೆಚ್ಚು ಸಮೀಪಕ್ಕೆ ಹೋಗುವುದೇ ವಿನಾ ಅದೆಂದಿಗೂ ಆದರ್ಶ ಸರಳರೇಖೆಯಾಗಲಾರದು ಧರ್ಮವೃಕ್ಷವು ಅದೇ ಬಗೆ ಅದರ ಕೊಂಬೆಗಳಿಗೆ ಬಾಹ್ಯಾಕೃತಿಯಲ್ಲಿ ಸಮಾನತ್ವ ಇಲ್ಲ, ಎಲ್ಲವೂ ವೃದ್ಧಿಯಾಗತಕ್ಕವು ವೃದ್ಧಿಯಾಗುತ್ತಿರುವ ಕೊಂಬೆಗೆ ಸೇರಿಕೊಂಡ ವ್ಯಕ್ತಿ ಅದಕ್ಕಾಗಿ ಬಿಗುಮಾನದಲ್ಲಿ ಬೀಗಿ, 'ನನ್ನದೇ ಉತ್ತಮವಾದದ್ದು' ಎಂದು ಹೇಳಬಾರದು ಯಾವೊಂದೂ ಇನ್ನೊಂದಕ್ಕಿಂತ ಕೀಳಲ್ಲ (ಹರಿಜನ ೧೩-೩-೩೭)

ಅವರವರ ತಾಯಂದಿರು ಅವರವರಿಗೆ ಹೇಗೆ ಅತ್ಯುತ್ತಮವೋ ಪ್ರತಿಯೊಬ್ಬನ ಧರ್ಮವೂ ಅತ್ಯುತ್ತಮ, ಅವನವನಿಗೆ, ಅವರವರ ದೇಶ ಅವರವರಿಗೆ ಹೇಗೆ ಅತ್ಯುತ್ತಮವೋ ಹಾಗೆಯೇ ಪ್ರತಿಯೊಬ್ಬನ ಧರ್ಮವೂ ಅತ್ಯುತ್ತಮ, ಅವನವನಿಗೆ. ಆಯಾ ಧರ್ಮದ ಅನುವರ್ತಿಗಳಿಗೆ ಆಯಾ ಧರ್ಮ ತೃಪ್ತಿಕರವೂ ಶ್ರೇಷ್ಠವೂ ಆಗಿರುವುದರಲ್ಲಿದೆ ಧರ್ಮಗಳೆಲ್ಲದರ ಸಮಾನತ್ವ ನಾವು ಬಾಳುತ್ತೇವೆ, ಇತರರನ್ನು ಬಾಳಗೊಡುತ್ತೇವೆ ಅಥವಾ ಪರಸ್ಪರ ಕ್ಷಮೆಯೂ ಸಹನೆಯೂ ಬಾಳಿನ ಕಟ್ಟುಪಾಡು ಈ ಪಾಠವನ್ನು ಕೊರಾನ್, ಬೈಬಲ್, ಝೆಂಡ್-ಅವೆಸ್ತಾ ಮತ್ತು ಗೀತಾ ಇವುಗಳಿಂದ ನಾನು ಕಲಿತಿದ್ದೇನೆ. (ಹರಿಜನ ೨೬-೧೦.೩೯)

ಆ ಧರ್ಮಗಳನ್ನು ನನಗೆ ಸಾಧ್ಯವಾದಷ್ಟು ಅಧ್ಯಯನಗೈದು ಈ ತೀರ್ಮಾನಕ್ಕೆ ಬಂದಿದ್ದೇನೆ ಎಲ್ಲ ಧರ್ಮಗಳೂ ಒಳಗಡೆ ಒಂದೇ ಎಂಬುದನ್ನು ಸಂಶೋಧಿಸಿ ಕಂಡುಹಿಡಿಯುವುದು ಯುಕ್ತವೂ ಅಗತ್ಯವೂ ಆಗಿದ್ದರೆ ಒಂದು ಸೋಲನ್ನು ಕಾಣದ ಬೀಗದ ಕೈ ಬೇಕು ಸೋಲಿಲ್ಲದ ಬೀಗದ ಕೈಯೇ ಸತ್ಯ ಮತ್ತು ಅಹಿಂಸೆ ಈ ಅಗ್ರ ಕೀಲಿ ಕೈಯಿಂದ ಒಂದು ಧರ್ಮದ ಭಂಡಾರವನ್ನು ನಾ ತೆರೆದು ನೋಡಿದರೆ ಇತರ ಧರ್ಮಗಳಂತೆಯೇ ಅದೂ ಇರುವುದನ್ನು ಕಂಡುಹಿಡಿಯವುದು ನನಗೆ ಕಷ್ಟವಾಗುವುದಿಲ್ಲ ಈ ಧರ್ಮಗಳನ್ನು ಒಂದು ವೃಕ್ಷದ ನಾನಾ ಎಲೆಗಳಂತೆ ನೋಡಿದಾಗ ಎಷ್ಟೋ ಭಿನ್ನ ಭಿನ್ನವಾಗಿ ಅವು ಕಂಡರೂ, ಅವೆಲ್ಲವೂ ಬುಡದಲ್ಲಿ ಒಂದೇ

(ಹರಿಜನ ೧೩_೭_೪೦)

## ಪುರೋಹಿತರೂ ಧರ್ಮದ್ರೋಹವೂ

ಧರ್ಮವನ್ನು ನಿಜವಾಗಿಯೂ ಜತನ ಮಾಡುವವರಾಗಿರಬೇಕಾಗಿದ್ದ ಪುರೋಹಿತರು ತಮ್ಮ ವಶಕ್ಕೆ ಬಂದ ಧರ್ಮವನ್ನು ಹಾಳುಮಾಡುವುದಕ್ಕೆ ನಿಮಿತ್ತರಾದುದು ಯಾತನೆಯನ್ನುಂಟುಮಾಡುವ ಸಂಗತಿ, ಹಾಗೂ ಚಾರಿತ್ರ್ಯಕ ಸತ್ಯ ಕಡು ಬಡವರನ್ನು ಒಳಕ್ಕೆ ಹೋಗಗೊಡದೆ ಎಷ್ಟೋ ಕಪಟಾಚರಣೆ ಮತ್ತು ಮೋಸಕ್ಕೆ ಮುಸುಕಾಗಿರುವ ಚರ್ಚುಗಳು, ಮಸೀದಿಗಳು, ದೇಗುಲಗಳು ದೇವರ ಮತ್ತು ದೇವತಾರಾಧನೆಯ ಅಣಕ ಮಾತ್ರವೆಂದು ತೋರುತ್ತವೆ ಅದೇ ಅಪಾರವಾದ ನೀಲ ಗಗನದ ಕೆಳಗೆ ದಿನ ದಿನವೂ ಹೊಸಹೊಸದಾಗಿ ಕಾಣುವ ಪೂಜಾಮಂದಿರವನ್ನು ನೋಡಿ, ಸೂಕ್ತವಾದ ಪೂಜೆಗೆ ನಮ್ಮಲ್ಲಿ ಪ್ರತಿಯೊಬ್ಬರಿಗೂ ಆಹ್ವಾನವೀಯುತ್ತದೆ ಅದು, ಧರ್ಮದ ಹೆಸರಿನಲ್ಲಿ ಜಗಳವಾಡುತ್ತಾ ಆತನ ದಿವ್ಯ ನಾಮವನ್ನು ದುರುಪಯೋಗಪಡಿಸುವುದಿಲ್ಲ (ಯಂಗ್ ಇಂಡಿಯಾ ೮-೧೨-೨೭)

## ಧರ್ಮ-ಸ್ವದೇಶಪ್ರೇಮ

ನಮ್ಮ ನಮ್ಮ ಸ್ವಧರ್ಮಗಳನ್ನು ಸುಮ್ಮನೆ ಅಪ್ಪಿಕೊಂಡಿರುವುದರ ಜೊತೆಗೆ ನಾವು ಆದಿಯಿಂದ ಅಂತ್ಯದ ವರೆಗೂ ಭಾರತೀಯರಾಗಿರಬೇಕು ಒಳ್ಳೆಯ ಹಿಂದೂ ಅಥವಾ ಒಳ್ಳೆಯ ಮುಸಲ್ಮಾನ ಸ್ವದೇಶಪ್ರೇಮಾದಿಂದ ಇನ್ನೂ ಒಳ್ಳೆಯ ಹಿಂದೂ ಅಥವಾ ಇನ್ನೂ ಒಳ್ಳೆಯ ಮುಸಲ್ಮಾನನಾಗಬೇಕು ನಮ್ಮ ದೇಶದ ಯೋಗಕ್ಷೇಮಕ್ಕೂ ಧರ್ಮಕ್ಕೂ ಯಾವ ಹೋರಾಟವೂ ಇರಲಾರದು ಅಂಥ ವಿರೋಧ ಏನಾದರೂ ಕಂಡುಬಂದರೆ, ನಮ್ಮ ಧರ್ಮದಲ್ಲಿ ಅರ್ಥಾತ್ ನೀತಿಯಲ್ಲಿ ಯಾವುದೋ ದೋಷವಿದೆ ನೈಜ ಧರ್ಮವೆಂದರೆ ಒಳ್ಳೆಯ ಚಿಂತನೆ ಮತ್ತು ಒಳ್ಳೆಯ ನಡತೆ ನೈಜ ದೇಶಪ್ರೇಮಕ್ಕೂ ಒಳ್ಳೆಯ ಚಿಂತನೆ ಮತ್ತು ಒಳ್ಳೆಯ ನಡತೆಯೆಂದೇ ಅರ್ಥ ಎರಡು ಸಮಾನಾರ್ಥಕ ವಸ್ತುಗಳಿಗೆ ಪರಸ್ಪರ ಹೋಲಿಕೆಯನ್ನು ತರುವುದು ತಪ್ಪು (ಯಂಗ್ ಇಂಡಿಯಾ. ೯-೧-೩೦)

## ಧರ್ಮದ ಬಗೆಗೆ ಉದಾಸೀನತೆ

ನಿಜವಾದ ಧರ್ಮವು ಸಂಕುಚಿತ ಮತತತ್ವವಲ್ಲ ಅದು ಬರಿ ಬಾಹ್ಯಾಚರಣೆಯುಲ್ಲ ದೇವರಲ್ಲಿ ಭಕ್ತಿಯುಳ್ಳವರಾಗಿ, ದೇವರ ಸಮಾಕ್ಷೆ

ಯಲ್ಲಿಯೇ ಬಾಳುವುದು, ಪುನರ್ಜನ್ಮದಲ್ಲಿ, ಸತ್ಯ ಮತ್ತು ಅಹಿಂಸೆಗಳಲ್ಲಿ ನಂಬಿಕೆ ಇಡುವುದು ಇಂದು ಈ ಆಧ್ಯಾತ್ಮಿಕ ವಿಷಯಗಳ ಬಗೆಗೆ ಒಂದು ವಿಧದ ಉದಾಸೀನತೆ ಹರಡಿಕೊಂಡಿದೆ ಮುಗ್ಧರಿಗೂ ಅಜ್ಞಾನಿಗಳಿಗೂ ಮಾತ್ರವೋ ಎಂಬಂತಿವೆ ನಮ್ಮ ದೇವಾಲಯಗಳು ವಾಸ್ತವಿಕವಾಗಿ ದೇವರ ಗುಡಿಗಳಿಗೆ ಹೋಗುವವರು ಬಹಳ ಕಡಿಮೆ ವಿದ್ಯಾವಂತರು ಇದನ್ನು ಸುಧಾರಿಸಲು ಯತ್ನಿಸಲಿ (ಹರಿಜನ. ೩೦-೮-೪೮)

ಸಮಾಜದಿಂದ ಧರ್ಮವನ್ನು ನಿರ್ಮೂಲ ಮಾಡಲೆತ್ನಿಸುವುದು ಕಾಡುವರಟೆಯ ಬೇಟೆಯಂತೆ ನಿರರ್ಥಕ ಒಂದು ವೇಳೆ ಅಂಥ ಪ್ರಯತ್ನ ಯಶಸ್ವಿಯಾಗುವುದಾದರೆ ಸಮಾಜವೇ ನಾಶವಾದಂತೆ ಅವಧಿಯಿಂದ ಅವಧಿಗೆ ಮೂಢನಂಬಿಕೆಗಳು, ದುಷ್ಟಪದ್ಧತಿಗಳು, ನ್ಯೂನತೆಗಳು ನುಸುಳಿ ಬಂದು ಧರ್ಮವನ್ನು ಮಲಿನಮಾಡುತ್ತವೆ ಅವು ಏಳುತ್ತವೆ, ಬೀಳುತ್ತವೆ ಧರ್ಮವಾದರೂ ಎಂದಿಗೂ ಉಳಿಯುತ್ತದೆ, ಏತಕ್ಕೆಂದರೆ ವಿಶಾಲವಾದ ಭಾವನೆಯಲ್ಲಿ ಜಗತ್ತು ಧರ್ಮದ ಆಧಾರದ ಮೇಲೆ ನಿಂತಿದೆ

(ಯಂಗ್ ಇಂಡಿಯಾ ೨೫-೮-೨೮)

## ಧರ್ಮ ಮತ್ತು ವಿಚಾರಪರತೆ

ವಿಚಾರಪರತೆಯನ್ನು ಕೋರದ, ನೀತಿಗ ವಿರುದ್ಧವಾದ ಎಂಥ ಧಾರ್ಮಿಕತತ್ವವನ್ನಾಗಲೀ ನಾನು ತಳ್ಳಿಬಿಡುತ್ತೇನೆ

(ಹರಿಜನ. ೨೧-೭-೪೦)

ಧಾರ್ಮಿಕ ಅಧಿಕಾರವನ್ನು ಪಡೆದಿರುವಂತೆ ಕಾಣುವ ಮತ್ತು ಬಹು ಕಾಲದಿಂದ ಆಚರಣೆಯಲ್ಲಿರುವ ಪಕ್ಷಪಾತಗಳು ಎಲ್ಲಿವೆಯೋ ಅಲ್ಲಿ ವಿಚಾರ ಪರತೆ ನಮಗೆ ಉಪಯುಕ್ತವಲ್ಲವೆಂದು ನನ್ನ ಅನುಭವಕ್ಕೆ ಬಂದಿದೆ ವಿಚಾರಕ್ಕೆ ತಿಳಿವಳಿಕೆಯೇ ಕಣ್ಣು (ಯಂಗ್ ಇಂಡಿಯಾ. ೧೪-೧೨-೨೮)

ವಿಚಾರಪ್ರಧಾನವಾದ ಈ ಯುಗದಲ್ಲಿ ಪ್ರತಿಯೊಂದು ಧರ್ಮದ ಪ್ರತಿಯೊಂದು ಸಿದ್ಧಾಂತವೂ ಬುದ್ಧಿವಿವೇಚನೆಯ ವಿಮರ್ಶೆಗೂ, ಸಾರ್ವತ್ರಿಕ ಒಪ್ಪಿಗೆಗೂ ಬದ್ಧವಾಗಲೇಬೇಕು (ಯಂಗ್ ಇಂಡಿಯಾ ೨೬-೨-೨೫)

ವಿವೇಚನೆ ಮತ್ತು ಜ್ಞಾನೋದಯದ ಬೆಂಬಲವಿಲ್ಲದ ಧರ್ಮವು

ನಿಷ್ಫಲವಾದ ರಾಗಾತಿರೇಕವಾಗಿದೆ, ಕೊನೆಗೆ ತನ್ನ ನಿಸ್ಸತ್ವದಿಂದಲೇ ಸಾಯುತ್ತದೆ ಜ್ಞಾನದಿಂದಲೇ ಕಟ್ಟಕಡೆಗೆ ಮೋಕ್ಷ

## ಎಲ್ಲ ಧರ್ಮಗಳ ಸಮರಸತೆ–ದಿವ್ಯದರ್ಶನ

ಸರ್ವಧರ್ಮಗಳ ಸಾಮರಸ್ಯದಲ್ಲಿ ನನಗೆ ನಂಬಿಕೆ ಇದೆ ಅಂಥ ಸಾಮರಸ್ಯವನ್ನು ಸಾಧಿಸಲು ನನ್ನ ಅಲ್ಪ ಶಕ್ತಿಗೆ ತಕ್ಕಂತೆ ಶ್ರಮಿಸಿದ್ದೇನೆ ದೇವರೊಬ್ಬನೇ' ಎಂಬ ನಂಬಿಕೆ ಎಲ್ಲ ಧರ್ಮಗಳಿಗೂ ಮೂಲೆಗಲ್ಲು ಆದರೆ ಜಗತ್ತಿಗೆಲ್ಲ ಒಂದೇ ಧರ್ಮವಿರುವ ಕಾಲವನ್ನು ನಾ ಮುಂಗಾಣಲಾರೆ ದೇವರ ವಿಚಾರವಾಗಿ ಅಭಿನ್ನವಾದ ಒಂದೇ ಕಲ್ಪನೆಯುಳ್ಳ ಇಬ್ಬರು ವ್ಯಕ್ತಿಗಳು ನನ್ನ ಅನುಭವಕ್ಷೇತ್ರದಲ್ಲಿ ಪರಿಚಯವಾಗಿಲ್ಲ ನನಗೆ ಆದ್ದರಿಂದ, ವಿವಿಧ ಚಿತ್ತವೃತ್ತಿಗಳಿಗೂ ವಿವಿಧ ಹವಾಗುಣಗಳಿಗೂ ತಕ್ಕಂತೆ ವಿವಿಧ ಮತಪ್ರಕಾರಗಳೂ ಪ್ರಾಯಶಃ ಯಾವಾಗಲೂ ಇದ್ದೇ ಇರುತ್ತವೆ ಆದರೆ, ವಿವಿಧ ಮತಸ್ಥರು ತಮ್ಮ ತಮ್ಮ ಧರ್ಮದ ಬಗೆಗೆ ಯಾವ ಮರ್ಯಾದೆಯನ್ನು ಇಟ್ಟಿರುತ್ತಾರೋ ಅದನ್ನೇ ಇತರ ಧರ್ಮಗಳ ಬಗೆಗೂ ಇಟ್ಟುಕೊಳ್ಳುವ ಕಾಲ ಬರುತ್ತಿರುವುದನ್ನು ನಾನು ಸ್ಪಷ್ಟವಾಗಿ ಕಾಣಬಲ್ಲೆ ವೈವಿಧ್ಯತೆಯಲ್ಲಿ ಏಕತ್ವವನ್ನು ನಾವು ಕಾಣಲೇಬೇಕೆಂದು ನನ್ನ ಅಭಿಮತ

(ಹರಿಜನ ೨-೨-೩೪)

ನನ್ನ ಎದೆಯನ್ನು ಆಳುವುದರಲ್ಲಿ ಸಿನಾಯ್ ದಿಬ್ಬದ ಮೇಲಿಂದ ಆದ ಉಪದೇಶ ಭಗವದ್ಗೀತೆಗೆ ಹತ್ತಿರ ಹತ್ತಿರ ಸರಿಸಮನಾಗಿ ಸ್ಪರ್ಧಿಸಬಲ್ಲುದು 'ಕರುಣಾಳು ಬಾ ಬೆಳಕೆ' ಇತ್ಯಾದಿ ದಿವ್ಯಸ್ಫೂರ್ತಿಯಿಂದೊರೆದ ಭಕ್ತಿಗೀತೆಗಳನ್ನು ಗಟ್ಟಿಯಾಗಿಯೂ ದೈನ್ಯದಿಂದಲೂ ಹಾಡುವುದರಲ್ಲಿ ಯಾವ ಕ್ರೈಸ್ತನಿಗೂ ನಾನು ಹಿಂದಿಲ್ಲ 'ಪ್ರಪಂಚದ ಎಲ್ಲೆಡೆಗೂ' ಎಂಬ ಸಂದೇಶಕ್ಕೆ ಭಾಷ್ಯ ಸಂಕುಚಿತವಾಗಿಲ್ಲವೆ? ಅದರ ಮುಖ್ಯಾಶಯ ಅರ್ಥವಾಗಿಲ್ಲವಲ್ಲವೆ? ಪ್ರತಿಯೊಂದು ಧರ್ಮದಲ್ಲಿಯೂ ಹೊಸ ಹುಟ್ಟು, ಹೃದಯ ಪರಿವರ್ತನೆ ಪೂರ್ತಿಯಾಗಿ ಸಾಧ್ಯವೆಂದು ನನ್ನ ಅನುಭವ ಸಾರುತ್ತಿದೆ. ಕೊರಾನ್ ದೇವರಿಂದ ಬಂದದ್ದೆಂದು ತಿಳಿಯುವುದಕ್ಕೆ ನಾನು ಹಿಂದೆಗೆಯಲಾರೆ, ಬೈಬಲ್, ಝುಂಡ್-ಅವೆಸ್ತಾ, ಗ್ರಂಥಸಾಹೆಬ್ ಇತ್ಯಾದಿ ಎಲ್ಲ ಪರಿಶುದ್ಧ

ಗ್ರಂಥಗಳೂ ದಿವ್ಯದರ್ಶನದ ಫಲವೇ ಎಂದು ಅನುಮಾನ ಪಡದೆ ಹೇಳಬಲ್ಲೆ. ದಿವ್ಯದರ್ಶನವು ಯಾವುದೋ ಒಂದು ಜನಾಂಗದ, ಒಂದು ಬುಡಕಟ್ಟಿನ, ಸರ್ವಸಾಮಾನ್ಯವಲ್ಲ. ಹಿಂದೂ ಧರ್ಮವನ್ನು ನಾನು ತಿಳಿದವನಾದರೆ, ಅದು ಮೂಲತಃ ಸರ್ವಗ್ರಾಹ್ಯವಾದದ್ದು, ಸದಾ ಬೆಳವಣಿಗೆ ಹೊಂದುತ್ತಿರುವಂಥಾದ್ದು, ಹೊಸ ಪ್ರಭಾವಕ್ಕೆ ಸದಾ ಅಭಿಮುಖವಾದದ್ದು, ಆಲೋಚನೆಗೂ ವಿವೇಚನೆಗೂ ಅದು ಬೇಕಾದಷ್ಟು ಸಂಪೂರ್ಣ ಸ್ವಾತಂತ್ರ್ಯದ ಅವಕಾಶವನ್ನು ನೀಡುತ್ತದೆ. ಕೂರಾನಿನ ಬಗೆಗೂ ಪೈಗಂಬರರ ಬಗೆಗೂ ಪೂಜ್ಯಭಾವವನ್ನು ಹಿಂದೂ ಮಂಡಲಿಗಳಲ್ಲಿ ಉತ್ಪನ್ನ ಮಾಡಲು ನನಗೆ ಅತ್ಯಲ್ಪ ಕಷ್ಟ ಕೂಡ ಕಂಡುಬಂದಿಲ್ಲ. (ಯಂಗ್ ಇಂಡಿಯಾ. ೨೫-೯-೨೪)

ಇಸ್ಲಾಂ ನಿರೀಶ್ವರಮತವಲ್ಲ. ಏಕದೇವಪಾರಮ್ಯವನ್ನು ಅದು ರಾಗಾನ್ವಿತವಾಗಿ ಘೋಷಿಸುತ್ತದೆ. ಅದರ ಅತ್ಯಂತ ತೀವ್ರ ವಿಮರ್ಶಕರೂ ಅದನ್ನು ನಾಸ್ತಿಕ ಮತವೆಂದು ತೆಗಳಿಲ್ಲ.

(ಯಂಗ್ ಇಂಡಿಯಾ ೨೪-೪-೨೧)

ದೇವರು ಖಂಡಿತ ಒಬ್ಬನೇ. ಅವನು ಅದ್ವಿತೀಯ. ನರವರ್ಗದ ಬಹು ಭಾಗಕ್ಕೆ ಅವನು ಅಳತೆಗೆ ಸಿಗದವನು. ಅಜ್ಞೇಯ, ಅಜ್ಞಾತ, ಅವನು ಎಲ್ಲೆಲ್ಲಿಯೂ ಇದ್ದಾನೆ. ಕಣ್ಣಿಲ್ಲದೆ ಅವ ಈಕ್ಷಿಸುತ್ತಾನೆ, ಕಿವಿಯಿಲ್ಲದೆ ಆಲಿಸುತ್ತಾನೆ. ಅವನು ನಿರಾಕಾರ, ಅಭೇದ್ಯ. ಅವನಿಗೆ ಜನನವಿಲ್ಲ, ತಂದೆ ತಾಯಿ ಹೆಂಡತಿ ಮಕ್ಕಳು ಒಬ್ಬರೂ ಇಲ್ಲ. ಮರ ಕಲ್ಲು ಮುಂತಾದಾವುದೂ ಅವನಲ್ಲದಿದ್ದರೂ ಆ ರೂಪದಲ್ಲಿಯೂ ಪೂಜೆಗೊಳ್ಳುತ್ತಾನೆ. ಅವನನ್ನು ಕೈತಪ್ಪಿಸಿಕೊಳ್ಳುವ ವಸ್ತು ಮತ್ತೊಂದಿಲ್ಲ. ನಮಗೆ ಅತ್ಯಂತ ಸಮೀಪದಲ್ಲೇ ಇರುವಂಥವ, ಆ ಸಂಗತಿ ನಮ್ಮ ಬುದ್ಧಿಗೆ ಬಂದರೆ ಆತ ಸರ್ವಾಂತರ್ಯಾಮಿಯೆಂಬುದನ್ನು ನಾವು ಸಾಕ್ಷಾತ್ಕಾರ ಮಾಡಿಕೊಳ್ಳದಿದ್ದಾಗ ನಮ್ಮಿಂದ ಬಹುದೂರ ಆತ. ವೇದಗಳಲ್ಲಿ ಅನೇಕ ದೇವತೆಗಳು ಉಂಟು. ಆದರೆ ಅವು ಕೀರ್ತನೆಗೈಯುವುದು ಒಬ್ಬನೇ ದೇವರನ್ನು. ಇತರ ಧರ್ಮಗಳಲ್ಲಿ ನಮಗೆ ಗೌರವವಿರಬೇಕಾದರೆ ಪ್ರತಿಯೊಬ್ಬ ತರುಣನೂ ತರುಣಿಯೂ ಸಹೃದಯದಿಂದ ಆ ಪವಿತ್ರಗ್ರಂಥಗಳನ್ನು ಓದಬೇಕು. ನಮ್ಮ ಧರ್ಮವನ್ನು ಕುರಿತು ಅವರಿಗೆ ಗೌರವವಿರಬೇಕೆಂದು ನಮ್ಮ ಆಸೆ. ಪ್ರಪಂಚ

ಧರ್ಮಗಳೆಲ್ಲದರ ವಿಶ್ವಾಸಯುತ ವ್ಯಾಸಂಗ ಪವಿತ್ರವಾದೊಂದು ಕರ್ತವ್ಯ ಶುಚಿಯಾದುದೆಲ್ಲವನ್ನೂ ಧಾರಾಳವಾಗಿ ಪರಿಸಿ ಎಂದು ನಮ್ಮ ಹರೆಯದ ಮಕ್ಕಳನ್ನು ಪ್ರೋತ್ಸಾಹಿಸಿದರೆ ಅನ್ಯಧರ್ಮಗಳ ಪವಿತ್ರ ಗ್ರಂಥಗಳಿಂದ ಅವರ ಮೇಲೆ ಉತ್ಕಟ ಪರಿಣಾಮವಾದೀತೆಂದು ನಾವು ಅಂಜಬೇಕಾಗಿಲ್ಲ ಚಿಕ್ಕವರನ್ನು ತಮ್ಮ ಧರ್ಮಕ್ಕೆ ಪರಿವರ್ತನ ಮಾಡಿಕೊಳ್ಳಬೇಕೆಂಬ ಗುಪ್ತವೋ ಬಹಿರಂಗವೋ ಆದ ಉದ್ದೇಶದಿಂದ ತನ್ನ ಮತಗ್ರಂಥಗಳನ್ನು ಯಾವನಾದರೂ ಅವರ ಮುಂದ ಓದಿ ಹೇಳುವುದಾದರೆ ಆಗ ಭೀತಿ ಹಾಗೆ ಮಾಡಬೇಕಾದರೆ ತನ್ನ ಮತಗ್ರಂಥದ ವಿಚಾರದಲ್ಲಿ ಅವನಿಗೆ ದುರಭಿಮಾನ ಇದ್ದೇ ಇರಬೇಕು ನನ್ನ ವಿಚಾರ ಹೀಗೆ ಗಾಢ ಸನಾತನೀ ಹಿಂದೂ ಎಂಬುದಾಗಿ ನನ್ನನ್ನು ಕರೆದುಕೊಳ್ಳುತ್ತೇನೆ, ಬೈಬಲ್, ಕೊರಾನ್ ಇತ್ಯಾದಿ ಧರ್ಮಗ್ರಂಥಗಳನ್ನು ಓದಿ ಅವನ್ನು ಕುರಿತು ಪೂಜ್ಯಭಾವವನ್ನು ತಳೆಯುವುದು ಅದಕ್ಕೆ ಪೂರ್ತಿಯಾಗಿ ಹೊಂದಿಕೊಳ್ಳುತ್ತದಂದೇ ನನ್ನ ಭಾವನೆ ಸಂಕುಚಿತ ಭಾವನೆಯಿಂದಲೂ ಅಂಧಃಶ್ರದ್ಧೆಯಿಂದಲೂ ಕೂಡಿದವನಾಗಿ, ಪ್ರಾಚೀನ ಕಾಲದಿಂದ ಬಂದದ್ದು ಯಾವುದೋ ಸಂಸ್ಕೃತ ಪುಸ್ತಕದಲ್ಲಿ ಅದಕ್ಕ ಪ್ರಮಾಣವಿದ ಎಂಬ ಕಾರಣದಿಂದ ಕೆಟ್ಟದನ್ನು ಒಳ್ಳೆಯದೆಂಬುದಾಗಿ ಯಾವಾತ ಪರಿಗಣಿಸುವನೋ ಅವನು ಸನಾತನೀ ಹಿಂದೂವಲ್ಲ ಗಾಢ ಸನಾತನೀ ಹಿಂದೂ ಎಂಬ ಹಸರಿಗೆ ನನಗೆ ಹಕ್ಕಿದೆ, ಏತಕ್ಕೆಂದರೆ ನನ್ನ ನೀತಿವೃಷ್ಟಿಗೆ ಅಸಮ್ಮತವಾದುದೆಲ್ಲವನ್ನೂ ನಾನು ತ್ಯಜಿಸಿದರೂ ಆತ್ಮದ ಆವಶ್ಯಕತೆಗಳನ್ನು ಹಿಂದೂಶಾಸ್ತ್ರಗಳು ತೃಪ್ತಿಯಾಗಿ ತೀರಿಸುತ್ತವೆಯೆಂಬುದನ್ನು ನಾನು ಕಂಡುಕೊಂಡಿದ್ದೇನೆ

ಬೈಬಲ್ಲಿಗೆ ಅಥವಾ ಕೊರಾನಿಗೆ ನಾನು ಮಾಡುವ ವ್ಯಾಖ್ಯಾನದಂತೆ ನನ್ನನ್ನು ಕ್ರೈಸ್ತನೆಂದೋ ಮುಸಲ್ಮಾನನೆಂದೋ ಕರೆದುಕೊಳ್ಳಬಹುದಾದರೆ ಆ ಸಂಬೋಧನೆಗೆ ನಾನು ಹಿಂಜರಿಯಲಾಗದು ಆಗ ಹಿಂದೂ, ಕ್ರೈಸ್ತ, ಮುಸಲ್ಮಾನ ಶಬ್ದಗಳು ಪರ್ಯಾಯಶಬ್ದಗಳಾಗುವುವು ಪರಲೋಕದಲ್ಲಿ ಹಿಂದೂ, ಕ್ರೈಸ್ತ, ಮುಸಲ್ಮಾನ ಮೊದಲಾದ ವಿಂಗಡನೆಯಿಲ್ಲವೆಂದು ನಂಬಿದ್ದೇನೆ ಅಲ್ಲಿ ಯಾರಿಗೂ ಜಾತಿ ಅಥವಾ ಕಸುಬಿನ ಲೆಕ್ಕದಿಂದ ನ್ಯಾಯವಿನಿಯೋಗವಿಲ್ಲ, ವೃತ್ತಿ ಯಾವುದೇ ಆಗಿರಲಿ ಅವರವರ

ಕರ್ಮಕ್ಕನುಗುಣವಾಗಿಯೇ ಅಲ್ಲಿನ ತೀರ್ಪು

ಸ್ವಧರ್ಮದ ಕಥೆಯ ಜೊತೆಗೆ ಇತರ ಧರ್ಮಗಳ ಕಥೆಯ ಪರಿಚಯ ಎಲ್ಲ ಧರ್ಮದ ತತ್ವತಳದಲ್ಲಿನ ಐಕ್ಯತೆಯನ್ನು ಮುಂದಟ್ಟು ಮಾಡಿಸುತ್ತದೆ ಹಾಗೂ ಸಿದ್ಧಾಂತ, ನಂಬಿಕೆಗಳ ಹೋರಾಟದಿಂದೆದ್ದ ಧೂಳಿನಿಂದಾಚೆ ಸ್ಥಿರವಾಗಿರುವ ವಿಶ್ವವ್ಯಾಪಕವೂ ಪರಿಪೂರ್ಣವೂ ಆದ ಸತ್ಯದ ತುಸು ನೋಟವನ್ನು ಒದಗಿಸುತ್ತದೆ (ಯಂಗ್ ಇಂಡಿಯಾ. ೬-೧೨-೨೩)

ನಿಮ್ಮಲ್ಲಿ ಪ್ರತಿಯೊಬ್ಬನೂ ದೇವರಲ್ಲಿಯೂ ಧರ್ಮದಲ್ಲಿಯೂ ಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕೆಂಬುದು ನನ್ನ ಆಸೆ ಜಗತ್ತಿನ ಎಲ್ಲ ದೊಡ್ಡ ಧರ್ಮಗಳೂ ಸತ್ಯವಾದುವೆಂದೂ ಭಗವದಾಜ್ಞೆಯಿಂದ ನೇಮಿತವಾದುವೆಂದೂ ದೇವರ ಉದ್ದೇಶವನ್ನು ಸಲ್ಲಿಸುತ್ತಿರುವುವೆಂದೂ, ಆಯಾ ಧರ್ಮಗಳಲ್ಲಿಯೂ ಸನ್ನಿವೇಶಗಳಲ್ಲಿಯೂ ಬೆಳೆದವರಿಗೆ ಅವು ಉಪಯುಕ್ತವೆಂದೂ ನನ್ನ ದೃಢನಿಶ್ಚಯ ಪ್ರಪಂಚಕ್ಕೆಲ್ಲ ಒಂದೇ ಮತಧರ್ಮವಿದೆಯೆಂದು ನಾವು ಹೇಳಬಹುದಾದ ಕಾಲ ಎಂದಾದರೂ ಬರುವುದೆಂದು ನಾ ನಂಬಲಾರೆ ಒಂದು ದೃಷ್ಟಿಯಿಂದ ನೋಡಿದರೆ, ಈ ಹೊತ್ತು ಕೂಡ ಪ್ರಪಂಚದಲ್ಲಿ ಮೂಲಾಧಾರ ಧರ್ಮ ಒಂದೇ ಇರುತ್ತದೆ ಪ್ರಕೃತಿಯಲ್ಲಿ ಪರಿಪೂರ್ಣ ಸರಳರೇಖೆ ಎನ್ನುವಂಥದೇ ಇಲ್ಲ ಧರ್ಮವು ಅನೇಕ ಶಾಖೆಗಳಿಂದ ಕೂಡಿದ ಒಂದೇ ವೃಕ್ಷ ಶಾಖೆಗಳಂತೆ ಮತಧರ್ಮಗಳೂ ಅನೇಕವೆಂದು ಹೇಳಬಹುದು, ನಿಜವಾದ ಧರ್ಮ ಒಂದೇ (ಹರಿಜನ ೨೬-೧-೩೪)

## ಶುದ್ಧಿ ಚಳುವಳಿ

ಪರಮ ಪರಿಶುದ್ಧತೆಯಿಂದಲೂ ನಮ್ರತೆಯಿಂದಲೂ ನಿರ್ಭಯತೆಯಿಂದಲೂ ಕೂಡಿರುವ ಧರ್ಮಾನುಯಾಯಿಗಳಿಂದ ಮಾತ್ರ ಧರ್ಮವೆಂಬ ಹೆಸರಿಗೆ ಅರ್ಹವಾದ ಧರ್ಮದ ರಕ್ಷಣೆಯಾದೀತು ಅದೊಂದು ಮಾತ್ರ ಶುದ್ಧಿಯೆಂಬ ಚಳುವಳಿ, ಶುದ್ಧಿಯ ಪ್ರಚಾರ (ಯಂಗ್ ಇಂಡಿಯಾ. ೧೬-೬-೨೭)

ಪ್ರತಿಯೊಬ್ಬನೂ ತನ್ನ ಸ್ವಧರ್ಮದಲ್ಲಿಯೇ ಪರಿಪೂರ್ಣತೆಯನ್ನು ಸಾಧಿಸಿಕೊಳ್ಳುವ ಪ್ರಯತ್ನವೇ ನಿಜವಾದ ಶುದ್ಧಿ ಚಳುವಳಿ ಅಂಥ ಏರ್ಪಾಟಿನಲ್ಲಿ ಶೀಲಶುದ್ಧಿಯೊಂದೇ ಪರೀಕ್ಷೆ ನೈತಿಕ ಮಟ್ಟ ಎತ್ತರವಾಗದೆ

ಕೊರಡಿಯಿಂದ ಕೊರಡಿಗೆ ಬದಲಾಯಿಸಿಕೊಂಡಲ್ಲಿ ಉಪಯೋಗವೇನು? ನನ್ನ ಸ್ವಂತ ಧರ್ಮದ ಅನುಯಾಯಿಗಳೇ ತಮ್ಮ ಕೃತ್ಯಗಳಿಂದ ದಿನದಿನವೂ ದೇವರಿಲ್ಲವೆಂದು ಪ್ರಕಟಿಸುತ್ತಿರುವಾಗ ದೇವರ ಸೇವೆಗಾಗಿ—ಶುದ್ಧಿ ಅಥವಾ ತಬ್‌ಲೀಗ್ ಎಂದರೇ ಅದು ತಾನೆ ತಾತ್ಪರ್ಯ— ಇತರರನ್ನು ಪರಿವರ್ತನ ಗೊಳಿಸುವುದೆಂದರೆ ಅರ್ಥವಾದರೂ ಏನು? 'ವೈದ್ಯನೇ ನಿನ್ನನ್ನೇ ನೀನು ವಾಸಿಮಾಡಿಕೋ' ಎಂಬ ಮಾತು ಲೌಕಿಕ ವ್ಯವಹಾರಗಳಿಗಿಂತಲೂ ಹೆಚ್ಚಾಗಿ ಧಾರ್ಮಿಕ ವ್ಯವಹಾರಗಳಿಗೆ ಅನ್ವಯಿಸುತ್ತದೆ ಆದರೆ ಇವು ನನ್ನ ಸ್ವಂತ ಅಭಿಪ್ರಾಯ (ಯಂಗ್ ಇಂಡಿಯಾ. ೨೯-೫-೨೪)

## ಹಿಂದೂ ಧರ್ಮವೂ ಪರಧರ್ಮ ಸಹಿಷ್ಣುತೆಯೂ

ನಾನು ಹಿಂದೂ ಕುಟುಂಬದಲ್ಲಿ ಜನಿಸಿದ್ದರಿಂದ ಹಿಂದೂ ಆಗಿಯೇ ಇದ್ದೇನೆ ಅದು ನನ್ನ ಆತ್ಮೋನ್ನತಿಗೂ, ನೈತಿಕ ಭಾವಕ್ಕೂ ಅಸಮಂಜಸ ವೆಂದು ಕಂಡುಬಂದರೆ, ಅದನ್ನು ತ್ಯಜಿಸೇನು ಪರಿಶೀಲಿಸಿ ನೋಡಿದ ಮೇಲೆ, ನನಗೆ ಗೊತ್ತಿರುವ ಎಲ್ಲ ಧರ್ಮಗಳಿಗಿಂತಲೂ ಅದು ಅತ್ಯಂತ ಸಹಿಷ್ಣುತೆಯುಳ್ಳ ಧರ್ಮವೆಂದು ಕಂಡುಬಂದಿದೆ ಉದ್ಧತ ಸಿದ್ಧಾಂತವಾವು ದನ್ನೂ ಬರೆಯದಿರುವುದರಿಂದ ನನಗೆ ಅದರ ಆಕರ್ಷಣೆ ಬಹಳ, ಏಕೆಂದರೆ ಅನುಯಾಯಿಯ ವ್ಯಕ್ತಿತ್ವ ನಿರೂಪಣೆಗೆ ಅದರಲ್ಲಿ ಅವಕಾಶವುಂಟು ಅದು ಇದು ಮುಂತಾದ ಅನೇಕವನ್ನು ಹೊರದೂಡುವ ಧರ್ಮವಾಗದೆ ಅದು ತನ್ನ ಅನುಯಾಯಿಗಳಿಗೆ ಅನ್ಯಧರ್ಮಗಳ ವಿಷಯದಲ್ಲಿ ಗೌರವ ಬುದ್ಧಿಯ ನ್ನಿಟ್ಟುಕೊಳ್ಳಲು ಆಸ್ಪದ ಕೊಡುವುದೇ ಅಲ್ಲದೆ, ಅವುಗಳಲ್ಲಿರಬಹುದಾದ ಒಳ್ಳೆಯ ಅಂಶಗಳನ್ನು ಅವರು ಶ್ಲಾಘಿಸಿ, ಅವನ್ನು ತಮ್ಮವನ್ನಾಗಿ ಮಾಡಿ ಕೊಳ್ಳಲೂ ಸಹಾಯ ನೀಡುತ್ತದೆ (ಯಂಗ್ ಇಂಡಿಯಾ. ೨೦-೧೦-೨೭)

## ಮತಾಂತರ

ಇತರರನ್ನು ಮತಾಂತರಗೊಳಿಸಲು ನಾನು ಪ್ರಯತ್ನಗೈಯುವುದಿಲ್ಲ, ಅಷ್ಟೇ ಅಲ್ಲದೆ ನನ್ನ ಧರ್ಮವನ್ನು ಯಾರಾದರೂ ಅವಲಂಬಿಸಬೇಕೆಂದು ರಹಸ್ಯವಾಗಿ ಕೂಡ ಪ್ರಾರ್ಥಿಸುವುದಿಲ್ಲ ನನ್ನ ಪಾಲಿಗೆ ನನ್ನ ಪತ್ನಿ ಪ್ರಪಂಚದಲ್ಲೆಲ್ಲ ಅತ್ಯಂತ ಸುಂದರಿಯಾಗಿರುವಂತೆ, ಅಹಿಂಸಾ ಸಂದೇಶ ದೊಡನೆ ಕೂಡಿರುವ ಹಿಂದೂ ಧರ್ಮವು ನನಗೆ ಅತ್ಯಂತ ವೈಭವದ ಧರ್ಮ

ವೆನ್ನಿಸಿದೆ ಇತರರಿಗೆ ತಮ್ಮತಮ್ಮ ಧರ್ಮದ ಬಗೆಗೆ ಇದೇ ಭಾವ ಇರ ಬಹುದು ಪ್ರಾಮಾಣಿಕವಾದ ಮತಾಂತರಕ್ಕೆ ನಿದರ್ಶನ ಸಿಕ್ಕಬಹುದು ತಮ್ಮ ಅಂತರಾತ್ಮನ ತೃಪ್ತಿಗಾಗಿಯೂ, ಬೆಳವಣಿಗೆಗಾಗಿಯೂ ಕೆಲವರು ಮತಾಂತರ ಹೊಂದುವುದಾದರೆ ಆವಶ್ಯಕವಾಗಿ ಹೊಂದಲಿ

(ಯಂಗ್ ಇಂಡಿಯಾ ೧೯-೧-೨೮)

ಕಡೆಯ ಮಾತಾಗಿ, ಧರ್ಮ ಗಭೀರವಾದ ವೈಯಕ್ತಿಕ ವಿಷಯ ಅದು ಹೃದಯವನ್ನು ತಟ್ಟತಕ್ಕದ್ದು ಕ್ರೈಸ್ತಮತವೇ ಧರ್ಮವಾಗುಳ್ಳ ವೈದ್ಯನೊಬ್ಬನು ನನ್ನನ್ನು ಯಾವುದೋ ರೋಗದಿಂದ ಗುಣಪಡಿಸಿದುದಕ್ಕಾಗಿ ನಾನೇಕೆ ನನ್ನ ಮತವನ್ನು ಬದಲಾಯಿಸಬೇಕು ? ಅಥವಾ ಆ ವೈದ್ಯ ನಾದರೂ ತನ್ನ ವಶದಲ್ಲಿರುವ ನಾನು ಮತಾಂತರ ಹೊಂದಬೇಕೆಂದು ಅಪೇಕ್ಷಿಸುವುದಾಗಲೀ ಆ ರೀತಿ ನನಗೆ ಸಲಹೆ ಮಾಡುವುದಾಗಲೀ ಏತಕ್ಕೆ ? ರೋಗಿಯನ್ನು ಗುಣಪಡಿಸುವುದೇ ವೈದ್ಯನಿಗೆ ತೃಪ್ತಿಯೂ ಪ್ರತಿಫಲವೂ ಅಲ್ಲವೆ ? ಅಥವಾ ನಾನೊಂದು ಕ್ರೈಸ್ತ ವಾದರೀ ಶಿಕ್ಷಣಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗ ಕ್ರಿಸ್ತನ ಬೋಧೆಯನ್ನು ನನ್ನ ಮೇಲೆ ಏಕೆ ಹೂರಿಸಬೇಕು ? ನನಗೆ ತೋರುವಂತೆ, ಇಂಥ ಪದ್ಧತಿಗಳು ಔನ್ನತ್ಯ ಸಾಧಕವಲ್ಲ ಅವಿಂದ ಗುಪ್ತ ವೈಷಮ್ಯ ಜನಿಸದಿದ್ದರೆ ಸಂಶಯವಾದರೂ ಉತ್ಪನ್ನವಾಗುತ್ತದೆ ಮತಾಂತರದ ವಿಧಾನಗಳು 'ಸೀಝರನ ಪತ್ನಿ'ಯಂತೆ ಸಂಶಯಕ್ಕೆ ಎಡೆಗೊಡದಿರಬೇಕು ಲೌಕಿಕ ವಿಷಯಗಳನ್ನು ಕಲಿಸಿದಂತೆ ಧಾರ್ಮಿಕ ಶ್ರದ್ಧೆಯನ್ನು ಕಲಿಸಲಾಗುವುದಿಲ್ಲ ಅದು ನೆರವೇರುವುದು ಹೃದಯದ ಭಾಷೆಯ ಮುಖಾಂತರ ಚೈತನ್ಯಪೂರ್ಣವಾದ ಶ್ರದ್ಧೆ ಒಬ್ಬನಲ್ಲಿ ಇದ್ದರೆ ಅದರ ಪರಿಮಳ ಗುಲಾಬಿಯ ಸುವಾಸನೆಯಂತೆ ಹರಡಿಕೊಳ್ಳುತ್ತವೆ ಅದು ತನ್ನ ಅವ್ಯಕ್ತತೆಯಿಂದಲೂ ಆ ಅವ್ಯಕ್ತತೆಯ ವಿಸ್ತಾರದಿಂದಲೂ ಪುಷ್ಪದ ವ್ಯಕ್ತ ಲಾವಣ್ಯವನ್ನೂ ಮತ್ತು ದಳಗಳ ವರ್ಣವನ್ನೂ ಮೀರಿ ವಿಶಾಲವಾದ ಪ್ರಭಾವವನ್ನು ಹೊಂದಿದೆ (ಗಾಂಧೀ ಸೂತ್ರಗಳು)

ಒಂದು ಧರ್ಮದಿಂದ ಇನ್ನೊಂದಕ್ಕೆ 'ಮತಾಂತರ' ಎಂಬ ಪದಕ್ಕೆ ರೂಢಿಯಾದ ಅರ್ಥದ ಪ್ರಕಾರ ಇಲ್ಲವೇ ಇಲ್ಲವೆಂದು ನನ್ನ ನಂಬಿಕೆ ವ್ಯಕ್ತಿಗೂ ಅವನ ದೇವರಿಗೂ ಸಂಬಂಧಪಟ್ಟ ವಿಪರೀತ ವೈಯಕ್ತಿಕ ವಿಷಯ

ಅದು ನನ್ನ ಧರ್ಮವನ್ನು ನಾನು ಗೌರವಿಸುವಂತೆ ನೆರೆಯವನ ಧರ್ಮವನ್ನೂ ಗೌರವಿಸಬೇಕಾಗಿರುವಾಗ ಅದನ್ನು ಕುರಿತು ನನ್ನಲ್ಲಿ ಯಾವ ದುರುದ್ದೇಶವೂ ಇರಬಾರದು ಜಗತ್ತಿನ ಎಲ್ಲ ಧರ್ಮಗ್ರಂಥಗಳನ್ನೂ ನಿಷ್ಠೆಯಿಂದ ನಾನು ವ್ಯಾಸಂಗ ಮಾಡಿರುವುದರಿಂದ ಅವೆಲ್ಲವುಗಳಲ್ಲಿಯೂ ಇರುವ ಸೌಂದರ್ಯವನ್ನು ಕಾಣಲು ನನಗೆ ಕಷ್ಟವಿಲ್ಲ ನನ್ನ ಧರ್ಮವನ್ನು ನಾನು ಹೇಗೆ ಬದಲಾಯಿಸಲಾರೆನೋ, ಹಾಗೆಯೇ ಒಬ್ಬ ಕ್ರೈಸ್ತ, ಮುಸ್ಲಿಂ, ಪಾರಸೀಕ ಅಥವಾ ಯೆಹೂದ್ಯನನ್ನು ನಿನ್ನ ಧರ್ಮವನ್ನು ಬದಲಾಯಿಸೆಂದು ಹೇಳುವ ಯೋಚನೆ ನನಗೆ ಬರಲಾರದು ಇದರಿಂದ ನನ್ನ ಧರ್ಮಕ್ಕೆ ಸೇರಿರುವವರ ಪರಿಮಿತಿಗಳನ್ನು ನಾನು ಮರೆಮಾಚಲಾರೆ. ನನ್ನ ಧರ್ಮದ ಮಟ್ಟಕ್ಕೆ ನನ್ನ ಅನುಷ್ಠಾನವನ್ನು ತರುವ ಪ್ರಯತ್ನಕ್ಕೂ ನನ್ನ ಸಹಧರ್ಮಿಗಳಿಗೂ ಅದನ್ನೇ ಬೋಧಿಸುವ ಪ್ರಯತ್ನಕ್ಕೂ ನನ್ನ ಸರ್ವಶಕ್ತಿಗಳೂ ಅಗತ್ಯವಾಗಿರುವಾಗ, ಅನ್ಯಧರ್ಮೀಯರಿಗೆ ಉಪದೇಶ ಹೇಳುವ ಕನಸು ಕೂಡ ನನಗಿಲ್ಲ 'ಖಂಡಿಸಬೇಡ, ಏಕೆಂದರೆ ನೀನೂ ಖಂಡನೆಗೆ ಗುರಿಯಾಗಿದ್ದೀಯೆ' ಎಂಬುದು ನಡೆವಳಿಕೆಗೆ ಸೂಕ್ತ ನಿಯಮ ಭಾರತದಲ್ಲಿರುವ ಪ್ರಬಲವೂ ಹಣವುಳ್ಳವೂ ಆದ ಕ್ರೈಸ್ತ ಪ್ರಚಾರಸಂಸ್ಥೆಗಳು ಭಾರತವನ್ನೋ ಅಥವಾ ಹಳ್ಳಿಗಳಲ್ಲಿ ನಿರಾಡಂಬರದಿಂದ ವಾಸಿಸುತ್ತಿರುವ ಜನರನ್ನೋ ಕ್ರೈಸ್ತಮತಕ್ಕೆ ಪರಿವರ್ತನೆ ಮಾಡಬೇಕೆಂಬ ಸೊಟ್ಟ ಉದ್ದೇಶವನ್ನು ಬಿಟ್ಟು ಮಾನವೋಪಕಾರೀ ಕಾರ್ಯಗಳಲ್ಲಿ ತೊಡಗಿದರೆ ಭಾರತಕ್ಕೆ ನಿಜವಾದ ಸೇವೆಯಾದೀತು, ಎಂಬ ಅಭಿಪ್ರಾಯ ನನ್ನಲ್ಲಿ ದಿನದಿನಕ್ಕೂ ವೃದ್ಧಿಯಾಗುತ್ತಿದೆ ನಮ್ಮ ಸಮಾಜದ ವ್ಯವಸ್ಥೆಯಲ್ಲಿ ಕ್ರೂರತೆ ಇದ್ದರೂ, ಅದರ ಮೇಲೆ ಕವಿದುಬಿದ್ದ ಒಳಗಣ ಮತ್ತು ಹೊರಗಣ ಆಘಾತಗಳನ್ನು ಅನಾದಿಕಾಲದಿಂದಲೂ ಅದು ಎದುರಿಸಿ ನಿಂತಿದೆ ಕ್ರೈಸ್ತಪ್ರಸಾರಕರಾಗಲೀ ನಾವಾಗಲೀ ಅಪೇಕ್ಷಿಸಲಿ ಬಿಡಲಿ, ಹಿಂದೂ ಧರ್ಮದಲ್ಲಿ ಅಸತ್ಯವಾದುದು ಚೂರುಚೂರಾಗಿ ಬೀಳುತ್ತದೆ ಪ್ರತಿಯೊಂದು ಜೀವಂತ ಧರ್ಮವೂ ಪುನಶ್ಚೇತನಗೊಳ್ಳುವ ಶಕ್ತಿಯನ್ನು ತನ್ನೊಳಗೇ ಇಟ್ಟುಕೊಂಡಿರಬೇಕು, ಅದು ಬಾಳಿ ಉಳಿಯಬೇಕಾದರೆ. (ಹರಿಜನ. ೨೮-೯-೩೫)

ಮತಾಂತರ ಮಾಡಬೇಕೆಂಬ ಅಭಿಲಾಷೆಯ ಹಿಂದೆ ಯಾರನ್ನು

ಮತಾಂತರ ಮಾಡಬೇಕೋ ಅವನ ಧರ್ಮಕ್ಕಿಂತ ಪರಿವರ್ತನೆ ಮಾಡ ಬೇಕನ್ನುವವನ ಧರ್ಮ ಹಿರಿದಾದುದೆಂಬ ಭಾವನೆ ಇದೆ

(ಹರಿಜನ. ೨೮-೧೧ ೩೯)

## ಧರ್ಮಯುದ್ಧಗಳು

ಜಗತ್ತಿನ ಇತಿಹಾಸದ ಪುಟಗಳು ಧರ್ಮಸಂಗ್ರಾಮಗಳ ರುಧಿರ ವರ್ಣನೆಯಿಂದ ಕಳಂಕಿತವಾಗಿವೆ ಒಂದು ಧರ್ಮವು ಅದರ ಹಿಂಬಾಲಕರ ಶುಚಿತ್ವ ಸತ್ಕಾರ್ಯಗಳಿಂದ ರಕ್ಷಿಸಲ್ಪಡುವುದೇ ವಿನಾ, ಅನ್ಯಮತೀಯ ರೊಡನೆ ಅವರು ಮಾಡುವ ಜಗಳಗಳಿಂದ ಎಂದಿಗೂ ರಕ್ಷಿಸಲ್ಪಡದು

(ಹರಿಜನ. ೧೩-೭ ४०)

## ಧರ್ಮದ ಪರಿಮಳ

ಮಾತನ್ನು ಬಯಸದೆ ಗುಲಾಬಿ ಸುಮ್ಮನೆ ತನ್ನ ಪರಿಮಳವನ್ನು ಸುತ್ತಲೂ ಬೀರುವಂತೆ, ನಿಮ್ಮ ಬದುಕು ಮಾತಾಡಲಿ ನಮ್ಮೊಡನೆ ಗುಲಾಬಿಯನ್ನು ಕಾಣದ ಕುರುಡರು ಕೂಡ ಅದರ ಸುವಾಸನೆಯನ್ನು ಗ್ರಹಿಸುತ್ತಾರೆ ಇದೇ ಗುಲಾಬಿಯ ಸತ್ಯಸಂದೇಶದ ಗುಟ್ಟು

(ಹರಿಜನ. ೧೭-४-೩೭)

## ಧರ್ಮದ ವಿಕಾಸ

ಸಂಕುಚಿತವಾದ ಮತ್ತು ಬುದ್ಧಿವಿಚಾರಣೆಯ ಪರೀಕ್ಷೆಗೆ ನಿಲ್ಲದ ಯಾವ ಧರ್ಮವೂ ಸದ್ಯದಲ್ಲಿಯೇ ಪುನರ್ರಚನೆ ಹೊಂದಲಿರುವ ಸಮಾಜ ದಲ್ಲಿ ಉಳಿದಿರಲಾರದು, ಏಕೆಂದರೆ, ಪರಿಸ್ಥಿತಿಯಲ್ಲಿ ಇಂದಿನ ಜೀವನಮೌಲ್ಯ ಗಳು ಮಾರ್ಪಾಟಾಗಿ ಸಂಪತ್ತು ಪದವಿ ಜನ್ಮಗಳಿಗೆ ಬದಲಾಗಿ ಶೀಲ ಸ್ವಭಾವ ಯೋಗ್ಯತೆಗೆ ಏಕ ಪ್ರಮಾಣವಾಗಿರುತ್ತದೆ ನನ್ನ ಕಲ್ಪನೆಯ ಹಿಂದೂ ಧರ್ಮವು ಸಂಕುಚಿತ ಪದ್ಧತಿಯಲ್ಲ ಅದು ಕಾಲದಷ್ಟೇ ಪ್ರಾಚೀನ ವಾದ ಮಹೋನ್ನತಿಯ ವಿಕಾಸ ಸರಣಿ, ಅದರಲ್ಲಿ ಝುರತುಷ್ಟ್ರ, ಮೋಸೆಸ್, ಕ್ರಿಸ್ತ, ಮೊಹಮ್ಮದ್, ನಾನಕ್ ಮತ್ತು ನಾನಾ ಹೆಸರಿನಲ್ಲಿ ಇತರ ಪ್ರವಾದಿ ಗಳ ಬೋಧೆಗಳೆಲ್ಲ ಅಂತರ್ಗತವಾಗಿವೆ ಅವನ್ನು ಹೀಗೆ ನಿರ್ದೇಶಿಸಿದ್ದಾರೆ

ಯಾವ ಧರ್ಮವನ್ನು ಬುದ್ಧಿವಂತರೂ ಸಜ್ಜನರೂ ಸದಾ ರಾಗ

ದ್ವೇಷದಿಂದ ವಿಮುಕ್ತರೂ ಆದವರು ಆಚರಿಸುವರೋ ಯಾವ ಧರ್ಮ ಹೃದಯವನ್ನು ಮುಟ್ಟುವುದೋ, ಅದೇ ನಿಜವಾದ ಧರ್ಮವೆಂದು ತಿಳಿ
(ಹರಿಜನ. ೮-೩-೪೦)

## ಧರ್ಮದ ತಿರುಳು

ಅಧರ್ಮವು ಧರ್ಮದ ಸೋಗಿನಲ್ಲಿ ಮೆರೆಯುತ್ತಿರುವ ಈ ದಿವಸಗಳಲ್ಲಿ ಜಗತ್ತಿನ ವಿವಿಧ ಧರ್ಮಗಳ ಪ್ರತಿಭಾವಂತರ ಭಾವನೆಗಳನ್ನೂ ಹೇಳಿಕೆಗಳನ್ನೂ ನಾವು ಜ್ಞಾಪಿಸಿಕೊಂಡರೆ ಉತ್ತಮ. ಭಾವಿಯಲ್ಲಿರುವ ಕಪ್ಪೆಯು ತನ್ನ ಭಾವಿಯ ಸುತ್ತಣ ಗೋಡೆಯಿಂದ ಆಚೆ ಬೇರೆ ಪ್ರಪಂಚವೇ ಇಲ್ಲವೆಂದು ಭಾವಿಸುವಂತೆ, ನಮ್ಮ ದರ್ಮವೊಂದೇ ಪರಿಪೂರ್ಣ ಸತ್ಯವನ್ನು ಪ್ರತಿಬಿಂಬಿಸುವುದೆಂದೂ, ಇತರ ಧರ್ಮಗಳೆಲ್ಲ ಅಸತ್ಯವೆಂದೂ ನಾವು ಭಾವಿಸಬಾರದು, ಪೂಜ್ಯಭಾವದಿಂದ ಪ್ರಪಂಚದ ಇತರ ಧರ್ಮಗಳನ್ನು ವ್ಯಾಸಂಗಗೈದರೆ, ಎಲ್ಲ ಧರ್ಮಗಳೂ ಅನಿವಾರ್ಯವಾಗಿಯೇ ಅಪರಿಪೂರ್ಣವಾಗಿದ್ದರೂ ಎಲ್ಲವೂ ನಮ್ಮ ಧರ್ಮಕ್ಕೆ ಸಮಾನವಾಗಿಯೇ ಸತ್ಯವೆಂಬುದು ಗೋಚರಿಸುತ್ತದೆ

ದೀರ್ಘಕಾಲದ ಅನುಭವದಿಂದ ನಾನು ಈ ಕೆಳಗಿನ ನಿರ್ಣಯಗಳಿಗೆ ಬಂದಿದ್ದೇನೆ

(೧) ಎಲ್ಲ ಧರ್ಮಗಳೂ ಸತ್ಯವಾದುವು

(೨) ನನ್ನ ಸ್ವಂತ ಹಿಂದೂ ಧರ್ಮದಷ್ಟೇ ಹತ್ತಿರ ಹತ್ತಿರದ ಧರ್ಮಗಳೂ ನಮಗೆ ಪ್ರಿಯವಾದವು

(೩) ಎಲ್ಲ ಧರ್ಮಗಳಲ್ಲಿಯೂ ಕೊಂಚ ತಪ್ಪು ಇದೆ

ನಮ್ಮ ಧರ್ಮಕ್ಕೆ ಕೊಡುವ ಪೂಜ್ಯತೆಯನ್ನೇ ಇತರ ಧರ್ಮಗಳಿಗೂ ಕೊಡುತ್ತೇನೆ ಈ ಕಾರಣದಿಂದ ಮತಾಂತರ ಎಂಬುದರ ಯೋಚನೆಯೇ ಅಸಾಧ್ಯ ಇತರರ ಉನ್ನತಿಗಾಗಿ ನಮ್ಮ ಪ್ರಾರ್ಥನೆ, 'ದೇವಾ, ನನಗೆ ದಯಪಾಲಿಸಿರುವ ಬೆಳಕನ್ನೇ ಅವರಿಗೂ ದಯಪಾಲಿಸು' ಎಂಬುದಾಗಿ ಎಂದಿಗೂ ಇರದೆ, 'ದೇವಾ, ಅವರ ಅತ್ಯಂತ ಎತ್ತರವಾದ ಬೆಳವಣಿಗೆಗೆ ಆವಶ್ಯಕವಾಗಿರುವ ಎಲ್ಲ ಬೆಳಕನ್ನೂ ಸತ್ಯವನ್ನೂ ಅವರಿಗೆ ದಯಪಾಲಿಸು' ಎಂಬುದಾಗಿ ಇರಬೇಕು, ಪ್ರಾರ್ಥನೆ ಧರ್ಮದ ಆತ್ಮವೂ ತಿರುಳೂ ಎಂದೇ

ನನ್ನ ನಂಬಿಕೆ, ಆದ್ದರಿಂದ ಪ್ರಾರ್ಥನೆ ಮಾನವ ಜೀವನದ ಹೃದಯ ಬುದ್ಧಿ ವಿವೇಚನೆಯಿಂದೆದ್ದ ಅಹಂಭಾವದಲ್ಲಿ ಮಾನವರು ತಮಗೆ ಧರ್ಮದ ಗೋಜೇ ಬೇಡವೆಂದು ಒದೆಯುತ್ತಾರೆ, ಇದು ಯಾವನೋ ಒಬ್ಬ ತಾನು ಉಸಿರಾಡುತ್ತಿರುವೆನೆಂದೂ ಆದರೆ ತನಗೆ ಮೂಗಿಲ್ಲವೆಂದೂ ಹೇಳುವಂತಿದೆ ತರ್ಕದಿಂದಲೋ ಸಹಜಪ್ರವೃತ್ತಿಯಿಂದಲೋ ಮೂಢನಂಬಿಕೆಯಿಂದಲೋ ಮಾನವನು ದೈವಿಕವಾದ್ದರೊಡನೆ ತನ್ನ ಸಂಬಂಧವನ್ನು ಒಪ್ಪಿಕೊಳ್ಳುತ್ತಾನೆ ಅತ್ಯಂತ ಅತಿರೇಕದ ಅಜ್ಞೇಯತಾವಾದಿಯು ನಾಸ್ತಿಕನೂ ಯಾವುದೋ ಒಂದು ನೀತಿ ತತ್ವದ ಆವಶ್ಯಕತೆಯನ್ನು ಒಪ್ಪಿಕೊಂಡು ಅದರ ಅನುಷ್ಠಾನದೊಡನೆ ಕೊಂಚ ಕಲ್ಯಾಣವನ್ನಾದರೂ ಗಂಟುಹಾಕುತ್ತಾನೆ ಸುಪ್ರಸಿದ್ಧ ನಾಸ್ತಿಕನೆನಿಸಿದ್ದ ಬ್ರ್ಯಾಡ್ಲಾ, ಯಾವಾಗಲೂ ತನ್ನ ಹೃದಯಾಂತರಾಳದ ನಂಬಿಕೆಯನ್ನು ಘೋಷಿಸಲು ಒತ್ತಾಯ ಮಾಡುತ್ತಿದ್ದ ಹೀಗೆ ಸತ್ಯವಾದಿಯಾಗಿದ್ದುದರಿಂದ ಆತನು ತುಂಬ ಬವಣೆಗೆ ತುತ್ತಾದರೂ, ಕಷ್ಟದಲ್ಲಿಯೇ ಹರ್ಷ ಕಂಡು, "ಸತ್ಯಕ್ಕೆ ಸತ್ಯವೇ ಪ್ರತಿಫಲ"ವೆಂದು ಹೇಳುತ್ತಿದ್ದ ಸತ್ಯಾಚರಣೆಯಿಂದ ಉದ್ಭವಿಸುವ ಸಂತೋಷ ಅವನ ಚಿತ್ತಕ್ಕೆ ಅಗೋಚರವೆಂದಲ್ಲ ಆ ಸಂತೋಷ ಭೌತಿಕವಾದ ಸಂತೋಷ ಅಲ್ಲವೇ ಅಲ್ಲ, ಅದು ದೈವಿಕದೊಡನೆ ಏರ್ಪಡಿಸಿಕೊಂಡ ಸಂಪರ್ಕದಿಂದ ಜನಿಸುತ್ತದೆ ಆದ್ದರಿಂದಲೇ ತನಗೆ ಧರ್ಮ ಬೇಡವೆಂದ ಮನುಷ್ಯನೂ ಕೂಡ ಧರ್ಮವಿಲ್ಲದೆ ಬದುಕಲಾರನೆಂದೂ ಬದುಕುತ್ತಿಲ್ಲವೆಂದೂ ನಾನು ಹೇಳಿದ್ದೇನೆ

(ಯಂಗ್ ಇಂಡಿಯಾ ೨೩-೧-೩೦)

ಅಧ್ಯಾಯ ೨.

# ನನ್ನ ಧರ್ಮ

ಈ ಮೂರು ಪ್ರಶ್ನೆಗಳಿಗೆ ಉತ್ತರಕೊಡಬೇಕೆಂದು ಸರ್. ಎಸ್. ರಾಧಾಕೃಷ್ಣನ್ ಅವರು, ನನ್ನನ್ನು ಕೇಳಿದ್ದಾರೆ :

(೧) ನಿಮ್ಮ ಧರ್ಮ ಯಾವುದು ?

(೨) ಅದರ ಬಳಿಗೆ ನೀವು ಸಾಗುವುದು ಹೇಗೆ?

(೩) ಸಾಮಾಜಿಕ ಜೀವನದ ಮೇಲೆ ಅದರ ಪ್ರಭಾವವೇನು?

ನನ್ನ ಧರ್ಮ ಹಿಂದೂ ಧರ್ಮ; ನನಗೆ ಅದು ಮಾನವೀಯ ಧರ್ಮ. ನನಗೆ ಗೊತ್ತಿರುವ ಸಕಲ ಧರ್ಮಗಳ ಸಾರ ಅದರಲ್ಲಿದೆ.

ಎರಡನೆಯ ಪ್ರಶ್ನೆಯಲ್ಲಿ ಉದ್ದೇಶಪೂರಿತವಾಗಿಯೇ ವರ್ತಮಾನ ಕಾಲವನ್ನು ಇಟ್ಟಿದೆಯೆಂದು ನಾನು ತಿಳಿಯುತ್ತೇನೆ ಸತ್ಯ ಮತ್ತು ಅಹಿಂಸೆಗಳ ಮೂಲಕವಾಗಿ, ಬಹು ವಿಶಾಲವಾದ ಅರ್ಥದಲ್ಲಿ ಪ್ರೇಮದ ಮೂಲಕ ಎಂದರೆ ನನ್ನ ಧರ್ಮದ ಬಳಿಗೆ ಸಾಗುತ್ತಿದ್ದೇನೆ. ಅನೇಕ ಸಾರಿ ನನ್ನ ಧರ್ಮವನ್ನು ಸತ್ಯದ ಧರ್ಮವೆಂದು ಬಣ್ಣಿಸುತ್ತೇನೆ. ಈಚೀಚೆಗೆ ದೇವರು ಸತ್ಯವೆಂದು ಹೇಳುವುದಕ್ಕೆ ಪ್ರತಿಯಾಗಿ ಸತ್ಯವೇ ದೇವರೆಂದು ಹೇಳುತ್ತಿದ್ದೇನೆ. ನನ್ನ ಧರ್ಮವನ್ನು ಮತ್ತೂ ಪೂರ್ಣವಾಗಿ ನಿರ್ದೇಶಿಸುವುದಕ್ಕಾಗಿ ನಮ್ಮ ದೇಶದ ಹಲವು ದಶಸಹಸ್ರಗಟ್ಟಲೆ ಜನ ಪ್ರತಿದಿನವೂ ಪ್ರಾತಃಕಾಲ ಪಠನ ಮಾಡುವ ದೇವರ ಸಹಸ್ರನಾಮಾವಳಿ ಹಿಂದೂ ಮತದ ಒಂದು ಚಿಕ್ಕ ಪುಸ್ತಕ ಪದ್ಯರೂಪದಲ್ಲಿ ಕೊಟ್ಟಿದೆ; ಅದನ್ನು ನಾನು ಒಮ್ಮೆ ಬಾಯಿಪಾಠ ಮಾಡಿಕೊಂಡಿದ್ದೆ. ಆದರೆ ಈಗ ಸತ್ಯದಂತೆ ಬೇರಾವುದೂ ನನ್ನ ದೇವರನ್ನು ಸಂಪೂರ್ಣವಾಗಿ ವರ್ಣಿಸಲಾರದು. ದೇವರಿಲ್ಲವೆಂದು ನುಡಿಯುವುದನ್ನು ನಾವು ಕೇಳಿದ್ದೇವೆ, ಸತ್ಯವಿಲ್ಲವೆನ್ನುವುದನ್ನು ಕೇಳಿಲ್ಲ. ಅತ್ಯಂತ ಅಜ್ಞಾನಿ ಎನಿಸಿಕೊಂಡ ಮಾನವರಲ್ಲಿಯೂ ಕೊಂಚ ಸತ್ಯ ಉಂಟು. ನಾವೆಲ್ಲ ಸತ್ಯದ ಕಿಡಿಗಳು; ಈ ಕಿಡಿಗಳ ಸಮಷ್ಟಿಯೇ ಅವರ್ಣನೀಯವೂ

ಇನ್ನೂ ಅಗೋಚರವಾಗಿರುವುದೂ ಆಗ ಸತ್ಯ ಅದೇ ದೇವರು ಸಂತತ ಪ್ರಾರ್ಥನೆಯ ಬಲದಿಂದ ದಿನ ದಿನವೂ ಅದರ ಹತ್ತಿರ ಹತ್ತಿರಕ್ಕೆ ನಾನು ಸಾಗುತ್ತಿದ್ದೇನೆ

ಸಾಮಾಜಿಕ ಜೀವನದ ಮೇಲೆ ಈ ಧರ್ಮದ ಪ್ರಭಾವ ನಮ್ಮ ದಿನ ಚರಿ ಸಾಮಾಜಿಕ ಸಂಪರ್ಕದಲ್ಲಿ ಕಾಣುತ್ತದೆ, ಅಥವಾ ಅದನ್ನು ಅಲ್ಲಿ ಕಾಣಬೇಕು ಇಂಥ ಧರ್ಮಕ್ಕೆ ಋಜುವಾದ ಹಿಂಬಾಲಕನಾಗಿರಬೇಕಾ ದರೆ ನಾವು ಅನವರತವೂ ಮುಂದುವರಿಯುವ ಸೇವೆಯಲ್ಲಿ, ಸಕಲ ಜೀವಿ ಗಳ ಸೇವೆಯಲ್ಲಿ ತನ್ಮಯರಾಗಬೇಕು, ಈ ಅನಂತವಾದ ಜೀವನ ಸಾಗರ ದಲ್ಲಿ ಪೂರ್ತಿ ಬೆರೆತು ಅದರೊಡನೆ ಸಮರಸ ಹೊಂದದ ಹೊರತು ಸತ್ಯ ಸಾಕ್ಷಾತ್ಕಾರವು ಅಸಾಧ್ಯವೇ ಸರಿ, ಆದುದರಿಂದ ನಾನು ಸಮಾಜಸೇವೆ ಯಿಂದ ಬಿಡುಗಡೆ ಹೊಂದುವಂತೆಯೇ ಇಲ್ಲ, ಅದನ್ನು ಮೀರಿಯಾಗಲೀ ಅದಕ್ಕೆ ಹೊರತಾಗಲೀ ಸುಖವೂ ಈ ಪೃಥ್ವಿಯ ಮೇಲೆ ನನಗಿಲ್ಲ ಈ ಸಮಾಜ ಸೇವೆ ಜೀವನದ ಎಲ್ಲ ಶಾಖಗಳನ್ನೂ ಒಳಗೊಂಡಿದೆಯೆಂದು ತಿಳಿಯಬೇಕು ಈ ಯೋಜನೆಯಲ್ಲಿ ಯಾವೊಂದೂ ಉಚ್ಚವಲ್ಲ, ಯಾವೊಂದೂ ನೀಚವಲ್ಲ ಏಕೆಂದರೆ ನಾವು ವಿವಿಧ ರೂಪವಾಗಿ ಕಾಣಿಸಿ ದರೂ, ಎಲ್ಲವೂ ಒಂದೇ

## ನನ್ನ ಧರ್ಮದ ಮೂಲಗಳು

ಕುಟುಂಬದಲ್ಲಿ ನನ್ನ ತಂದೆಯೊಬ್ಬ ಕುಲಾಭಿಮಾನಿ, ಸತ್ಯವಂತ. ಧೈರ್ಯಶಾಲಿ, ಉದಾರಿ, ಆದರೆ ಶೀಘ್ರಕೋಪಿ

ಅವನಿಗೆ, ಧಾರ್ಮಿಕ ಶಿಕ್ಷಣವೆನ್ನುವುದು ಬಹಳ ಕಡಮೆಯಿದ್ದರೂ, ಮತ್ತೆ ಮತ್ತೆ ದೇವಾಲಯಕ್ಕೆ ಹೋಗಿಬರುವ ಅಭ್ಯಾಸ, ಪುರಾಣ ಶ್ರವಣ, ಇವುಗಳಿಂದ ಅನೇಕ ಹಿಂದೂಗಳಿಗೆ ಲಭಿಸುವ ಒಂದು ಬಗೆಯ ಧಾರ್ಮಿಕ ಸಂಸ್ಕಾರ ಆತನಿಗೂ ದೊರಕಿತ್ತು ತನ್ನ ಜೀವಿತದ ಕೊನೆಯ ದಿವಸಗ ಳಲ್ಲಿ ನಮ್ಮ ಕುಟುಂಬದ ಹಿತೈಷಿಯಾಗಿದ್ದ ಬ್ರಾಹ್ಮಣ ಪಂಡಿತನೊಬ್ಬನ ಸಲಹೆಯಂತೆ, ಭಗವದ್ಗೀತೆಯನ್ನು ಪಠಿಸಲಾರಂಭಿಸಿ ಪ್ರತಿದಿನವೂ ಪೂಜಾ ಕಾಲದಲ್ಲಿ ಕೆಲವು ಶ್ಲೋಕಗಳನ್ನು ಘಟ್ಟಿಯಾಗಿ ಹೇಳುತ್ತಿದ್ದ

ನನ್ನ ತಾಯಿಯ ವಿಚಾರ ಅಚ್ಚಳಿಯದ ಮುಖ್ಯ ನೆನಪೆಂದರೆ

ಆಕೆಯ ಸಾತ್ವಿಕತೆ  ಅವಳಿಗೆ ಧರ್ಮದಲ್ಲಿ ಗಂಭೀರ ಶ್ರದ್ಧೆ ಎಂದಾಗಲೀ ಪ್ರಾರ್ಥನೆ ಎಸಗದೆ ಊಟಗೈಯುವ ಯೋಚನೆ ಬಾರದು ಅವಳ ಹತ್ತಿರಕ್ಕೆ ಹವೇಲಿ ಎಂದರೆ ವೈಷ್ಣವದೇವಾಲಯಕ್ಕೆ ಹೋಗುವುದು ಅವಳ ನಿತ್ಯಕರ್ಮಗಳಲ್ಲಿ ಒಂದು "ಚಾತುರ್ಮಾಸ್ಯ" ವ್ರತವನ್ನು ಆಕೆ ತಪ್ಪಿಸಿದುದು ನನ್ನ ಸ್ಮೃತಿಯನ್ನು ಎಷ್ಟು ಹಿಂದಿನವರೆಗೆ ತಡಕಿ ನೋಡಿದರೂ ಕಾಣುವುದಿಲ್ಲ ಬಲು ಕಠಿಣ ವ್ರತ ದೀಕ್ಷೆಯನ್ನು ಹಿಡಿದು ಅಳುಕದೆ ಅದನ್ನು ನೆರವೇರಿಸುತ್ತಿದ್ದಳು  ಅದನ್ನು ಸಡಿಲಗೊಳಿಸಲು ಅನಾರೋಗ್ಯ ಕೂಡ ನೆಪವಾಗುತ್ತಿರಲಿಲ್ಲ  ಒಂದು ನಿದರ್ಶನ ಜ್ಞಾಪಕವಾಗುತ್ತದೆ  ಒಮ್ಮೆ ಚಾಂದ್ರಾಯಣ ವ್ರತವನ್ನು ಅನುಸರಿಸುತ್ತಿದ್ದಾಗ ಈಕೆ ಕಾಹಿಲೆ ಬಿದ್ದಳು, ವ್ರತಾಚರಣೆಯನ್ನು ತಡೆಗಟ್ಟಲಾರದೇ ಹೋಯಿತು ಆ ಕಾಹಿಲೆ  ಎರಡು ಮೂರು ಉಪವಾಸಗಳನ್ನು ಒಂದಾದ ಕೂಡಲೇ ಇನ್ನೊಂದರಂತೆ ಕೈಗೊಳ್ಳುವುದು ಆಕೆಗೆ ಸಾಮಾನ್ಯ ವಿಷಯ  ಚಾತುರ್ಮಾಸ್ಯವ್ರತದಲ್ಲಿ ಒಪ್ಪೊತ್ತೇ ಊಟ ಮಾಡುವುದು ಅವಳ ವಾಡಿಕೆ  ಒಂದು ಸಲ ಈ ವ್ರತವನ್ನು ಆಚರಿಸುವಾಗ ಅದರಿಂದ ತೃಪ್ತಳಾಗದೆ ದಿನ ಬಿಟ್ಟು ದಿನ ಪೂರ್ತಿಯಾಗಿ ಉಪವಾಸ ಮಾಡಿದಳು  ಇನ್ನೊಮ್ಮೆ ಸೂರ್ಯದರ್ಶನವನ್ನು ಪಡೆಯದೆ ಊಟಮಾಡುವುದಿಲ್ಲವೆಂದು ಸಂಕಲ್ಪಿಸಿದಳು  ಆಗ ಹುಡುಗರಾಗಿದ್ದ ನಾವು ಆಕಾಶದ ಕಡೆ ನೋಡುತ್ತ ಸೂರ್ಯನನ್ನು ಕಂಡ ಕೂಡಲೇ ಓಡಿಹೋಗಿ ವರ್ತಮಾನ ಕೊಡುವುದಕ್ಕೆ ಕಾದಿರುತ್ತಿದ್ದೆವು  ಮಳೆಗಾಲದ ಮಧ್ಯಭಾಗದಲ್ಲಿ ಅನೇಕ ವೇಳೆ ಮುಖ ತೋರಿಸುವ ಅನುಗ್ರಹವನ್ನು ಮಾಡದಿರುವುದು ಎಲ್ಲರಿಗೂ ಗೊತ್ತು  ನನಗೆ ನೆನಪಿದೆ, ಎಷ್ಟೋ ದಿವಸ ಸೂರ್ಯ ಹಠಾತ್ತಾಗಿ ಕಾಣಿಸಿದ ತಕ್ಷಣವೇ ನಾವು ಒಳಕ್ಕೋಡಿ ಸುದ್ದಿ ತಿಳಿಸುತ್ತಿದ್ದೆವು, ನಮ್ಮ ತಾಯಿ ತಾನೇ ಪ್ರತ್ಯಕ್ಷ ದರ್ಶನ ಮಾಡಲು ಓಡಿಬರುತ್ತಿದ್ದಳು.  ಅಷ್ಟರಲ್ಲಿ ಚಂಚಲ ಸೂರ್ಯ ಕಣ್ಮರೆಯಾಗಿ ಆಕೆಯ ಆಹಾರವನ್ನು ಕಸಿದುಕೊಳ್ಳುತ್ತಿದ್ದ ಆಕೆಯಾದರೋ ಹಸನ್ಮುಖಿಯಾಗಿ, ಚಿಂತೆಯಿಲ್ಲ, ಇಂದು ನಾನು ಊಟ ಮಾಡಬಾರದೆಂಬುದು ದೇವರ ಇಚ್ಛೆ' ಎನ್ನುತ್ತಿದ್ದಳು, ತರುವಾಯ ತನ್ನ ಕೆಲಸಕಾರ್ಯಗಳಲ್ಲಿ ಯಥಾಪ್ರಕಾರ ತೊಡಗುತ್ತಿದ್ದಳು

(ಆತ್ಮಕಥೆ)

## ಪಾಠಶಾಲೆಯಲ್ಲಿ

ನನ್ನ ಆರು ಅಥವಾ ಏಳನೇ ವಯಸ್ಸಿನಿಂದ ಹದಿನಾರನೇ ವಯಸ್ಸಿನ ವರೆಗೆ ಪಾಠಶಾಲೆಯಲ್ಲಿದ್ದೆ ಧರ್ಮದ ವಿಷಯವೊಂದನ್ನು ಬಿಟ್ಟು ಇತರ ಏನೇನೋ ವಿಷಯಗಳಲ್ಲಿ ಶಿಕ್ಷಣ ಪಡೆಯುತ್ತ ಇಲ್ಲ 'ಧರ್ಮ' ಶಬ್ದವನ್ನು ಅದರ ಅತ್ಯಂತ ವ್ಯಾಪಕಾರ್ಥವಾದ ಆತ್ಮಸಾಕ್ಷಾತ್ಕಾರ ಅಥವಾ ಆತ್ಮದ ಅರಿವು ಎಂಬ ಅರ್ಥದಲ್ಲಿ ಬಳಸುತ್ತಿದ್ದೇನೆ. ನನ್ನ ಉಪಾಧ್ಯಾಯರು ಯಾವ ಪ್ರಯಾಸವೂ ಇಲ್ಲದೆ ನನಗೆ ಏನನ್ನು ಕಲಿಸಬಹುದಾಗಿತ್ತೋ ಅದನ್ನು ನಾನು ಪಡೆಯಲಾರದೆ ಹೋದೆನೆಂದು ಹೇಳಬಲ್ಲೆ ಆದರೂ ನನ್ನ ಸುತ್ತ ಮುತ್ತಲಿನ ಸನ್ನಿವೇಶದಿಂದ ಅಲ್ಲೊಂದು ಇಲ್ಲೊಂದು ಅಂಶವನ್ನು ಸಂಗ್ರಹಿಸಿದೆ

ವೈಷ್ಣವ ವಂಶದಲ್ಲಿ ಜನಿಸಿದ್ದರಿಂದ ನಾನು ಆಗಾಗ ಹವೇಲಿಗೆ ಹೋಗಬೇಕಾಗಿದ್ದಿತು ಅದು ಯಾವತ್ತೂ ನನ್ನ ಮನಸ್ಸಿಗೆ ಹಿಡಿಸಲಿಲ್ಲ ದೇವಾಲಯದ ಥಳಥಳ್ಯ ವೈಭವಗಳನ್ನು ಕಂಡು ನನಗೆ ಅರುಚಿ ಜೊತೆಗೆ ಅಲ್ಲಿ ಅನೀತಿಯೂ ನಡೆಯುವುದೆಂದು ಗಾಳಿವರ್ತಮಾನ ಬಂದುದರಿಂದ ಅದನ್ನು ಕುರಿತು ಆಸಕ್ತಿಯೆಲ್ಲ ಕಳಚಿಹೋಯಿತು ತತ್ಪರಿಣಾಮವಾಗಿ ಹವೇಲಿಯಿಂದ ನನಗೆ ಎಳ್ಳಷ್ಟೂ ಪ್ರಯೋಜನವಾಗಲಿಲ್ಲ

ಹೀಗೆ ಅಲ್ಲಿಂದ ನಾನು ಪಡೆಯಲಾಗದಿದ್ದುದನ್ನು ನಮ್ಮ ಕುಟುಂಬದ ವೃದ್ಧ ಸೇವಕಿಯಾದ ದಾದಿಯ ಮೂಲಕ ಪಡೆದೆ, ನನ್ನ ಮೇಲೆ ಅವಳಿಗಿದ್ದ ಪ್ರೇಮವನ್ನು ನಾನಿನ್ನೂ ಮರೆತಿಲ್ಲ ಭೂತಪ್ರೇತಗಳ ಭೀತಿಯು ನನ್ನಲ್ಲಿತ್ತೆಂದು ಹಿಂದೆಯೇ ನುಡಿದಿದ್ದೇನೆ ಈ ಭೀತಿಗೆ ರಾಮನಾಮದ ಪುನಶ್ಚರಣೆ ಮದ್ದೆಂದು ರಂಭಾ—ಅದೇ ಅವಳ ಹೆಸರು—ಸೂಚಿಸಿದಳು. ಅವಳ ಮದ್ದಿಗಿಂತಲೂ ಹೆಚ್ಚಾಗಿ ಅವಳಲ್ಲಿ ನನಗೆ ತುಂಬ ನಂಬಿಕೆ ಇತ್ತು ಅಂತೂ ಪೀಡೆಪಿಶಾಚಿಗಳ ಭೀತಿಯಿಂದ ಗುಣಹೊಂದಬೇಕೆಂದು ಆ ಕೋಮಲ ವಯಸ್ಸಿನಲ್ಲಿ ರಾಮನಾಮ ಪುನಸ್ಮರಣೆಯನ್ನು ನಾನು ಪ್ರಾರಂಭ ಮಾಡಿದೆ ನಿರೀಕ್ಷೆಯಂತೆ ಅದು ಅತ್ಯಲ್ಪ ಕಾಲ ನಡೆದು ನಿಂತುಹೋದರೂ ಎಳೆತನದಲ್ಲಿ ಬಿತ್ತಿದ ಆ ಉತ್ಕೃಷ್ಟ ಬೀಜ ನಿಷ್ಫಲ ಬಿತ್ತನೆಯಾಗಲಿಲ್ಲ

ಆ ಸಾಧ್ವಿ ರಂಭಾ ಬಿತ್ತಿದ ಬೀಜದ ಫಲವಾಗಿಯೇ ರಾಮನಾಮ ಇಂದು ನನಗೆ ಸಂಜೀವನೌಷಧವಾಗಿದೆ ಎಂದು ಭಾವಿಸುತ್ತೇನೆ

ಆದರೆ, ನನ್ನ ಮನಸ್ಸಿನ ಮೇಲೆ ಗಾಢ ಮುದ್ರೆಯನ್ನು ಒತ್ತಿದುದು ನನ್ನ ತಂದೆಯ ಮುಂದೆ ನಡೆದ ರಾಮಾಯಣ ಪಾರಾಯಣ ರೋಗ ಪೀಡಿತನಾಗಿ ಕೆಲವು ಕಾಲ ಪೋರ್‌ಬಂದರಿನಲ್ಲಿದ್ದ ಆತ ಆಗ ಪ್ರತಿದಿನವೂ ಸಾಯಂಕಾಲ ರಾಮಾಯಣವನ್ನು ಆಲಿಸುತ್ತಿದ್ದ ಪಾರಾಯಣ ಮಾಡುತ್ತಿದ್ದಾತ ಭಾರಿ ರಾಮಭಕ್ತನೆಂದು ಹೆಸರು ಪಡೆದಿದ್ದ ಆತನ ಕಂಠ ಮಧುರವಾಗಿತ್ತು ದೋಹ (ಶ್ಲೋಕ) ಗಳನ್ನೂ ಚೋಪಾಯ (ಚೌಪದಿ) ಗಳನ್ನೂ ಹಾಡಿ ಅವುಗಳಿಗೆ ಅರ್ಥ ಮಾಡುತ್ತ ವ್ಯಾಖ್ಯಾನದಲ್ಲಿ ತಾನು ಭಾವಪರವಶನಾಗಿ ಕೇಳುತ್ತಿದ್ದವರನ್ನು ತನ್ನೊಡನೆ ಸೆಳೆದೊಯ್ಯುತ್ತಿದ್ದ ನನಗೆ ಆಗ ಸುಮಾರು ಹದಿಮೂರು ವರ್ಷ ವಯಸ್ಸು ಮಾತ್ರ, ಆದರೂ ಆತನ ಪಾರಾಯಣದಿಂದ ಹರ್ಷೋತ್ಕರ್ಷವನ್ನು ಪಡೆಯುತ್ತಿದ್ದೆನೆಂಬುದು ಚೆನ್ನಾಗಿ ನೆನಪಿದೆ ಅದು ರಾಮಾಯಣದ ಮೇಲೆ ನನಗಿರುವ ಭಕ್ತಿಗೆ ತಳಪಾಯವನ್ನು ಹಾಕಿತ್ತು ಈ ಹೊತ್ತು ತುಳಸೀದಾಸನ ರಾಮಾಯಣ ಭಕ್ತಿ ಸಾಹಿತ್ಯದಲ್ಲಿ ಮಹೋತ್ತಮ ಗ್ರಂಥವೆಂದು ನನ್ನ ಅಭಿಪ್ರಾಯ

ಇದಾದ ಕೆಲವು ತಿಂಗಳಿನ ತರುವಾಯ ನಾವು ರಾಜಕೋಟೆಗೆ ಬಂದೆವು ಅಲ್ಲಿ ರಾಮಾಯಣ ಪಾರಾಯಣವಿರಲಿಲ್ಲ ಪ್ರತಿ ಏಕಾದಶಿ ದಿವಸ ಭಾಗವತ ಪಾರಾಯಣ ನಡೆಯುತ್ತಿತ್ತು ನಾನೂ ಕೆಲವು ವೇಳೆ ಹೋಗಿ ಕೇಳುತ್ತಿದ್ದೆ, ಆದರೆ ಪಠನಕಾರನಲ್ಲಿ ಪ್ರಭಾವವಿರಲಿಲ್ಲ ಧಾರ್ಮಿಕ ತೀವ್ರಾವೇಶವನ್ನು ಎಚ್ಚರಗೊಳಿಸುವ ಒಂದು ಪುಸ್ತಕ ಭಾಗವತವೆಂದು ಈಗ ನಾನು ನೋಡುತ್ತಿರುವೆ ಅದರ ಗುಜರಾತೀ ಅನುವಾದವನ್ನು ತೀವ್ರ ಆಸಕ್ತಿಯಿಂದ ಓದಿದ್ದೇನೆ ನನ್ನ ಇಪ್ಪತ್ತೊಂದು ದಿವಸಗಳ ಉಪವಾಸದಲ್ಲಿ ಮೂಲದ ಕೆಲವು ಭಾಗಗಳನ್ನು ಪಂಡಿತ ಮದನಮೋಹನ ಮಾಳವೀಯ ಓದಿ ಹೇಳಿದಾಗ ಅಂಥ ಒಬ್ಬ ಶ್ರದ್ಧಾಳುವಿನಿಂದ ನನ್ನ ಚಿಕ್ಕಂದಿನಲ್ಲ ಅದನ್ನು ಕೇಳಬೇಕಾಗಿತ್ತೆಂದೂ ಅದರ ಮೇಲಣ ವಾಂಛಲ್ಯ ಬಾಲ್ಯದಲ್ಲಿಯೇ ಸ್ಥಾಪನೆಯಾಗಬೇಕಾಗಿತ್ತೆಂದೂ ಅಪೇಕ್ಷಿಸಿದೆ ಆ ವಯಸ್ಸಿನಲ್ಲಿ ಆದ ಮನೋಭಾವನೆಗಳು ನಮ್ಮ ಸ್ವಭಾವದ ತಳದವರೆಗೂ ಬೇರು

ಬಿಡುತ್ತವೆ. ಆ ಅವಧಿಯಲ್ಲಿ ಹೆಚ್ಚು ಹೆಚ್ಚಾಗಿ ಓದುವ ಸೌಭಾಗ್ಯವಿಲ್ಲದವನಾದೆನೆಂದು ನನ್ನ ನಿರಂತರ ಪರಿತಾಪ.

ರಾಜಕೋಟೆಯಲ್ಲಿದ್ದಾಗ ಹಿಂದೂ ಧರ್ಮದ ಬೇರೆಬೇರೆ ಪಂಥಗಳ ವಿಷಯದಲ್ಲಿಯೂ ಇತರ ಸೋದರಧರ್ಮಗಳ ವಿಷಯದಲ್ಲಿಯೂ ಸಹಿಷ್ಣುತೆಯನ್ನು ಬೆಳಸಿಕೊಳ್ಳುವುದಕ್ಕೆ ಕ್ಷೇತ್ರ ಆಧಾರ ನನಗೆ ದೊರಕಿತು. ನನ್ನ ಮಾತಾಪಿತೃಗಳು ಹವೇಲಿಗೆ ಮಾತ್ರವಲ್ಲದೆ ಶಿವರಾಮರ ಗುಡಿಗಳಿಗೂ ಹೋಗಬಲ್ಲವರಾಗಿದ್ದರು. ಹುಡುಗನಾದ ನಮ್ಮನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು ಅಥವಾ ಇತರರೊಡನೆ ಕಳುಹಿಸುತ್ತಿದ್ದರು. ಜೈನ ಸಂನ್ಯಾಸಿಗಳು ಪದೇ ಪದೇ ನಮ್ಮ ಮನೆಗೆ ಬಂದು ತಮ್ಮ ಶಿಷ್ಟಾಚಾರವನ್ನು ಬಿಟ್ಟು ಜೈನರಲ್ಲದ ನಮ್ಮಿಂದ ಭೋಜನವನ್ನು ಸ್ವೀಕರಿಸುತ್ತಿದ್ದರು. ನಮ್ಮ ತಂದೆಯವರೊಡನೆ ಲೌಕಿಕ ಧಾರ್ಮಿಕ ವಿಷಯಗಳನ್ನು ಕುರಿತು ಮಾತುಕಥೆ ನಡೆಸುತ್ತಿದ್ದರು.

ಇದೂ ಅಲ್ಲದೆ, ನನ್ನ ತಂದೆಗೆ ಮುಸಲ್ಮಾನ ಮತ್ತು ಪಾರಸೀ ಗೆಳೆಯರೂ ಇದ್ದರು, ಅವರು ತಮ್ಮ ಧರ್ಮಗಳನ್ನು ಪ್ರತಿಪಾದಿಸುತ್ತಿದ್ದರು, ಅದನ್ನು ಆತ ಯಾವಾಗಲೂ ಗೌರವ ಬುದ್ಧಿಯಿಂದಲೂ ಆಗಾಗ ಆಸಕ್ತಿಯಿಂದಲೂ ಕೇಳುತ್ತಿದ್ದ. ತಂದೆಗೆ ದಾದಿಯಾಗಿರುತ್ತಿದ್ದ ನನಗೆ ಈ ಸಂಭಾಷಣೆ ಆಗುವಾಗ ಹಾಜರಿರುವ ಅವಕಾಶ ಅನೇಕ ಬಾರಿ ದೊರಕುತ್ತಿತ್ತು. ಇಂಥ ಅನೇಕ ವಿದ್ಯಮಾನಗಳು ಕೂಡಿಕೊಂಡು ಸರ್ವಮತ ಸಹಿಷ್ಣುತೆಯನ್ನು ನನಗೆ ಒತ್ತಿ ಹೇಳಿದುವು. ಆ ಸಮಯದಲ್ಲಿ ಕ್ರೈಸ್ತ ಧರ್ಮವೊಂದೇ ಅದಕ್ಕೆ ನಿಷೇಧವಾಗಿತ್ತು. ಅದರ ಬಗೆಗೆ ನನ್ನಲ್ಲಿ ಒಂದು ರೀತಿಯ ಅಸಹ್ಯಭಾವನೆ ಬೆಳೆಯಿತು. ಕಾರಣ ಹೇಳಬೇಕಾದರೆ, ಆ ದಿವಸಗಳಲ್ಲಿ ಕ್ರೈಸ್ತ ಮತಪ್ರಚಾರಕರು ಪ್ರೌಢಶಾಲೆಯ ಹತ್ತಿರ ಒಂದು ಮೂಲೆಯಲ್ಲಿ ನಿಂತು ಹಿಂದೂಗಳ ಮೇಲೆ, ಅವರ ದೇವತೆಗಳ ಮೇಲೆ ಬಯ್ಗಳನ್ನು ಸುರಿಯುತ್ತ ಗಳಹುತ್ತಿದ್ದರು. ಎಲ್ಲೋ ಒಂದು ಸಲ ಅಲ್ಲಿ ನಿಂತು ಅವರ ಹರಟೆಯನ್ನು ಕೇಳಿರಬೇಕು, ಅಷ್ಟೇ ಸಾಕಾಯಿತು ನನಗೆ, ಆ ಪ್ರಯತ್ನವನ್ನು ಪುನಃ ಮಾಡಲಿಲ್ಲ. ಅದೇ ಕಾಲದಲ್ಲಿ ಒಬ್ಬ ಪ್ರಸಿದ್ಧ ಹಿಂದೂವನ್ನು ಕ್ರೈಸ್ತಮತಕ್ಕೆ ಮತಾಂತರಗೊಳಿಸಿದರೆಂದು ನನಗೆ ತಿಳಿಯು

ಬಂತು ಕ್ರೈಸ್ತಮತದ ತೀರ್ಥಸ್ನಾನವನ್ನು ತೆಗೆದುಕೊಂಡಾಗ ಅವ ಗೋಮಾಂಸವನ್ನು ತಿಂದು ಮದ್ಯಪಾನ ಮಾಡಬೇಕಾಗಿದೆಯೆಂದೂ ಜೊತೆಗೆ ತನ್ನ ಉಡುಪನ್ನು ತ್ಯಜಿಸಿ ಐರೋಪ್ಯ ಉಡುಪನ್ನೂ ಹ್ಯಾಟನ್ನೂ ಹಾಕಿಕೊಂಡು ತಿರುಗಲಾರಂಭಿಸಿದನೆಂದೂ ಊರಿನಲ್ಲೆಲ್ಲಾ ಗುಲ್ಲೆದ್ದಿತು ಅವು ನನ್ನ ನರಗಳನ್ನು ಚಿವುಟಿದುವು, ಯಾವ ಧರ್ಮ ಗೋಮಾಂಸ ಭಕ್ಷಣ, ಮದ್ಯಪಾನ, ಸ್ವದೇಶದ ಉಡುಪಿನ ಬದಲಾವಣೆಗಳನ್ನು ಕಡ್ಡಾಯ ಮಾಡಿತೋ ಅದು ಧರ್ಮವೆಂಬ ಹೆಸರಿಗೆ ಅರ್ಹವಲ್ಲ ಖಂಡಿತವಾಗಿ ಎಂದುಕೊಂಡೆ ಅಲ್ಲದೆ ಮತಾಂತರ ಹೊಂದಿದ ವ್ಯಕ್ತಿ ತನ್ನ ಪೂರ್ವಜರ ಧರ್ಮವನ್ನೂ ಆಚಾರ ವ್ಯವಹಾರವನ್ನೂ ದೇಶವನ್ನೂ ಅಗಲೇ ದೂಷಿಸತೊಡಗಿದನೆಂದೂ ಕೇಳಿದೆ, ಈ ಎಲ್ಲ ವಿದ್ಯಮಾನಗಳಿಂದ ಕ್ರೈಸ್ತಧರ್ಮದ ವಿಷಯವಾಗಿ ನನ್ನಲ್ಲಿ ಜುಗುಪ್ಸೆಯುಂಟಾಯಿತು.

ಅನ್ಯ ಧರ್ಮಗಳನ್ನು ಕುರಿತು ತಾಳ್ಮೆಯನ್ನು ನಾನು ಕಲಿತೆನೆಂಬ ಸಂಗತಿಯಿಂದ ದೇವರಲ್ಲಿ ಜೀವಂತ ನಂಬಿಕೆ ನನ್ನಲ್ಲಿತ್ತೆಂದು ಅರ್ಥಮಾಡಬಾರದು

ಆದರೆ ಒಂದು ಅಂಶ ನನ್ನೊಳಗೆ ಆಳವಾಗಿ ಬೇರೂರಿತು. ಎಲ್ಲಕ್ಕೂ ಆಧಾರ ನೀತಿ, ಸಕಲ ನೀತಿಯ ತಿರುಳು ಸತ್ಯ ಸತ್ಯ ನನ್ನ ಏಕಮಾತ್ರ ಗುರಿಯಾಯಿತು ದಿವಸ ದಿವಸಕ್ಕೂ ಅದರ ಪ್ರಮಾಣ ವೃದ್ಧಿಯಾಗತೊಡಗಿತು, ಅಲ್ಲಿಂದ ಈಚೆಗೆ ಸತ್ಯವೆಂಬುದರ ವಿವರಣೆ ನನ್ನಲ್ಲಿ ಸದಾ ವಿಶಾಲವಾಗುತ್ತಿದೆ

ಗುಜರಾತೀ ಭಾಷೆಯ ಒಂದು ನೀತಿಪದ್ಯ ನನ್ನ ಮನಸ್ಸನ್ನೂ ಹೃದಯವನ್ನೂ ಸೂರೆಗೊಂಡಿತು ನಿನಗಾದ ಕೆಡುಕಿಗೆ ಪ್ರತಿಯಾಗಿ ಒಳಿತನ್ನು ಮಾಡು ಎಂಬ ಅದರ ಬೋಧೆ ನನ್ನ ಧ್ಯೇಯವಾಯಿತು ಅದರ ಮೇಲೆ ನನಗೆ ಎಷ್ಟು ವ್ಯಾಮೋಹವುಂಟಾಯಿತೆಂದರೆ ಅದರ ಸುತ್ತ ಅನೇಕ ಪ್ರಯೋಗಗಳನ್ನು ನಾನು ಮಾಡತೊಡಗಿದೆ ನನಗೆ ಕೌತುಕವೆನ್ನಿಸಿದ ಪಂಕ್ತಿಗಳು ಇವು

**ಬೊಗಸೆ ನೀರಿತ್ತವಗೆ ತೃಪ್ತಿಯುಪ್ಪಂತುಣಿಸು**
**ಒಳ್ಳಿತನು ಬಯಸಿದಗೆ ಭಕ್ತಿಯಿಂ ಬಾಗು**

ಕಿರುಗಾಸನಿತ್ತವಗೆ ತಿರುಗಿ ಚಿನ್ನವ ನೀಡು
ಪ್ರಾಣವಂ ಕಾಯ್ದವಗೆ ಪ್ರಾಣದಾನವ ಮಾಡು—
ಕಿರುನೆರವಿಗೂ ಹಿರಿಯ ಸೇವೆಯ ಸಲಿಸುವುದು
ಪ್ರಾಜ್ಞರಾದವರ ನಡೆಯಂತೆಯೇ ಅವರ ನುಡಿ
ಜ್ಞಾನಿಗಳು ಮಾನವರ ಭೇದಗಳನೆಣಿಸದೆಯೆ
ಕೇಡಿಗುಂ ಸಂತಸದಿ ಶುಭವನೆಸಗುವರು

(ಆತ್ಮಕಥೆ)

## ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿ

ಇಂಗ್ಲೆಂಡಿನಲ್ಲಿ ನನ್ನ ಎರಡನೆಯ ವರ್ಷವನ್ನು ಕಳೆಯುವ ವೇಳೆಗೆ ಇಬ್ಬರು ಅವಿವಾಹಿತ ಥಿಯೊಸೊಫಿಸ್ಟ್ ಸಹೋದರರ ಪರಿಚಯವಾಯಿತು ನನಗೆ ಅವರು ನನಗೆ ಭಗವದ್ಗೀತೆಯ ವಿಚಾರವನ್ನು ತಿಳಿಸಿದರು ಸರ್ ಎಡ್ವಿನ್ ಆರ್ನಾಲ್ಡರ 'ದಿವ್ಯಗೀತೆ' (*Song Celestial*) ಎಂಬ ಭಾಷಾಂತರವನ್ನು ಓದುತ್ತಿದ್ದರು, ತಮ್ಮೊಂದಿಗೆ ಗೀತೆಯ ಮೂಲವನ್ನು ಓದಬೇಕೆಂದು ನನಗೆ ಆಹ್ವಾನವಿತ್ತರು ಸಂಸ್ಕೃತದಲ್ಲಾಗಲೀ ಗುಜರಾತಿಯಲ್ಲಾಗಲೀ ಆ ದೈವಿಕ ಕಾವ್ಯವನ್ನು ನಾನು ಓದಿರಲಿಲ್ಲವಾಗಿ ನನಗೆ ನಾಚಿಕೆಯುಂಟಾಯಿತು ಗೀತೆಯನ್ನು ಓದಿಲ್ಲವೆಂದು ಅವರೊಂದಿಗೆ ಹೇಳಲೇಬೇಕಾಗಿ ಬಂತು ಹಾಗೂ ಅವರೊಡನೆ ಮೂಲವನ್ನು ಓದಲು ಒಪ್ಪಿಕೊಂಡೆ ನನಗೆ ಗೊತ್ತಿದ್ದ ಸಂಸ್ಕೃತ ಅತ್ಯಲ್ಪವಾಗಿದ್ದರೂ, ಎಲ್ಲಿ ತರ್ಜುಮೆ ಮೂಲದ ಅಭಿಪ್ರಾಯವನ್ನು ಯಥಾವತ್ತಾಗಿ ರೂಪಿಸಿಲ್ಲವೋ ಅಲ್ಲಿ ಅದನ್ನು ಅವರಿಗೆ ತಿಳಿಯಪಡಿಸುವಷ್ಟರಮಟ್ಟಿಗ ಮೂಲವನ್ನು ಅರ್ಥಮಾಡಿಕೊಳ್ಳುವ ಶಕ್ತಿ ನನಗಿತ್ತೆಂದು ತಿಳಿದೆ ಗೀತೆಯನ್ನು ಅವರೊಡನೆ ಓದಲಾರಂಭಿಸಿದೆ ಎರಡನೇ ಅಧ್ಯಾಯದ ಈ ಶ್ಲೋಕಗಳು ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ಗುರುತನ್ನು ಮಾಡಿದುವು, ಅವು ಇನ್ನೂ ನನ್ನ ಕಿವಿಯಲ್ಲಿ ಮೊಳಗುತ್ತಿವೆ

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ ।
ಸಂಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಽಭಿಜಾಯತೇ ॥
ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ ॥

(ವಿಷಯಗಳನ್ನು ಚಿಂತಿಸುವ ಪುರುಷನಿಗೆ ಅವುಗಳಲ್ಲಿ ಆಸಕ್ತಿ ಉತ್ಪನ್ನವಾಗುತ್ತದೆ. ಆಸಕ್ತಿಯಿಂದ ಕಾಮವೂ, ಕಾಮದಿಂದ ಕ್ರೋಧವೂ ಉತ್ಪನ್ನವಾಗುತ್ತವೆ. ಕ್ರೋಧದಿಂದ ಮೂಢತೆಯೂ, ಮೂಢತೆಯಿಂದ ಸ್ಮೃತಿಭ್ರಾಂತಿಯೂ, ಸ್ಮೃತಿಭ್ರಾಂತಿಯಿಂದ ಜ್ಞಾನನಾಶವೂ ಆಗುತ್ತವೆ. ಜ್ಞಾನನಷ್ಟಹೊಂದಿದವನು ಮೃತನಿಗೆ ಸಮಾನನಾಗುತ್ತಾನೆ.) ಗೀತಾ ಪುಸ್ತಕ ಅನರ್ಘ್ಯವಾದುದೆಂದು ನನಗೆ ಹೊಳೆಯಿತು. ಅಲ್ಲಿಂದ ಮುಂದೆ ಸಂತತವಾಗಿ ಆ ಭಾವನೆ ನನ್ನಲ್ಲಿ ಬೆಳೆಯುತ್ತ ಬಂದಿದೆ; ಸತ್ಯವನ್ನು ಅರಿಯುವುದಕ್ಕೆ ಅದು ಅತ್ಯುಚ್ಚ ಪುಸ್ತಕವೆಂದು ಅದನ್ನು ಇಂದು ನಾನು ಗೌರವಿಸುತ್ತೇನೆ. ನನ್ನ ಬದುಕಿನಲ್ಲಿ ವಿಷಣ್ಣತೆ ಮುಸುಗಿದ ಘಳಿಗೆಯಲ್ಲೆಲ್ಲ ಅಮೂಲ್ಯ ನೆರವನ್ನು ಕೊಟ್ಟಿದೆ ಅದು.

ಆದೇ ಸಹೋದರರು ಸರ್ ಎಡ್ವಿನ್ ಆರ್ನಾಲ್ಡ್ ರ 'ಏಷ್ಯದ ಪ್ರದೀಪ' (*Light of Asia*) ಎಂಬುದನ್ನೂ ಓದು ಎಂದು ನನಗೆ ಸಲಹೆ ಮಾಡಿದರು. —ಆಗ ದಿವ್ಯಗೀತೆಯ ಕರ್ತೃ ಮಾತ್ರ ಎಂದು ನಾನು ಅಂದಿನವರೆಗೂ ಬಗೆದಿದ್ದೆ— ಬಹುಶಃ ಭಗವದ್ಗೀತೆಯನ್ನು ಓದಿದುದಕ್ಕಿಂತ ಹೆಚ್ಚು ಆಸಕ್ತಿಯಿಂದ ಅದನ್ನು ಓದಿದೆ. ಅದನ್ನು ಓದಲು ಒಮ್ಮೆ ತೆಗೆದುಕೊಂಡ ಮೇಲೆ ಮುಗಿಸುವವರೆಗೂ ಅದನ್ನು ಬಿಡಲಾಗಲಿಲ್ಲ. ಹಾಗೆಯೇ ಅವರ ಒತ್ತಾಯದಿಂದ ಮ್ಯಾಡಮ್ ಬ್ಲಾವಟ್ಸ್ಕಿಯ 'ಥಿಯೋಸಫಿಯ ಬೀಗದ ಕೈ' ಎಂಬ ಇನ್ನೊಂದು ಪುಸ್ತಕವನ್ನೂ ಓದಿದ್ದು ನೆನಪಿದೆ. ಕ್ರೈಸ್ತ ಪಾದರಿಗಳ ಅಪಪ್ರಚಾರದಿಂದ ಹಿಂದೂ ಧರ್ಮದಲ್ಲಿ ಮೂಢ ನಂಬಿಕೆ ತುಂಬಿಕೊಂಡಿದೆ ಎಂದು ಅದುವರೆಗೂ ನನ್ನ ಮನದಲ್ಲಿ ಮೂಡಿದ್ದ ಭಾವನೆಯನ್ನು ಅದು ದೂರ ಮಾಡಿತಲ್ಲದೆ ಹಿಂದೂ ಧರ್ಮಗ್ರಂಥಗಳನ್ನು ಇನ್ನೂ ಓದಬೇಕೆಂಬ ಆಕಾಂಕ್ಷೆಯನ್ನು ಪ್ರಚೋದಿಸಿತು.

ಆದೇ ಕಾಲದಲ್ಲಿ ಒಂದು ಶಾಕಾಹಾರಿ ಭೋಜನಗೃಹದಲ್ಲಿ ಮ್ಯಾಂಚೆಸ್ಟರ್‌ನವನಾದ ಒಬ್ಬ ಒಳ್ಳೆ ಕ್ರೈಸ್ತ ಮತೀಯನ ಪರಿಚಯವಾಯಿತು. ನನ್ನೊಂದಿಗೆ ಕ್ರೈಸ್ತ ಧರ್ಮದ ಪ್ರಸ್ತಾಪವನ್ನು ಮಾಡಿದ, ನನ್ನ ರಾಜಕೋಟೆಯ ನೆನಪುಗಳನ್ನು ಆತನಿಗೆ ಕಥನಗೈದೆ. ಅದನ್ನು ಕೇಳಿ ಅವನಿಗೆ ನೋವಾಯಿತು, ಅವನೆಂದ: "ನಾನೊಬ್ಬ ಸಸ್ಯಾಹಾರಿ, ಮದ್ಯ

ಪಾನ ಮಾಡುವುದಿಲ್ಲ ಅನೇಕ ಕ್ರೈಸ್ತರು ಮಾಂಸ ಭಕ್ಷಣವನ್ನೂ ಮದ್ಯ ಪಾನವನ್ನೂ ಮಾಡುವುದೇನೋ ನಿಜ ಆದರೆ ಆ ರೀತಿ ಮಾಡಬೇಕೆಂದು ನಮ್ಮ ಪವಿತ್ರಗ್ರಂಥದಲ್ಲಿ ವಿಧಾಯಕವಾಗಿಲ್ಲ ದಯವಿಟ್ಟು ಬೈಬಲನ್ನು ಓದಿನೋಡಿ " ಆತನ ಸಲಹೆಯನ್ನು ನಾನು ಅಂಗೀಕರಿಸಿದೆ, ನನಗೆ ಬೈಬಲಿನ ಒಂದು ಪ್ರತಿಯನ್ನು ಅವ ತಂದುಕೊಟ್ಟ

ಬೈಬಲಿನ 'ಸೃಷ್ಟಿಪ್ರಕರಣ'ವನ್ನು ಓದಿದೆ ಮುಂದಣ ಅಧ್ಯಾಯಗಳು ತಪ್ಪದೆ ನನಗೆ ರೋಕಡಿಕೆಯನ್ನು ತಂದವು ಆದರೂ ಓದಿದೆನೆಂದು ಹೇಳಬೇಕಾಗಿದ್ದುದರಿಂದ ಸ್ವಲ್ಪವೂ ಆಸಕ್ತಿ ಹೊಂದದೆ ಅರ್ಥವಾದಿತರೂ ಲಾರದೆ ಬಹಳ ಪ್ರಯಾಸಪಟ್ಟು ಉಳಿದ ಅಧ್ಯಾಯಗಳನ್ನು ಹಾದು ನಡೆದ ಸಂಖ್ಯಾಕಾಂಡ ಓದುವುದಕ್ಕೆ ಅಸಹ್ಯವನ್ನು ಹುಟ್ಟಿಸಿತು

ನನ್ನ ಮೇಲೆ "ಹೊಸ ಒಡಂಬಡಿಕೆ"ಯು ಪರಿಣಾಮವಾದರೆಯೋ ಬೇರೆ ತರದ್ದಾಯಿತು ಸಿನಾಯ್ ದಿಬ್ಬದಿಂದಾದ ಉಪದೇಶವಂತೂ ನೇರವಾಗಿ ನನ್ನ ಹೃದಯಾಂತರಾಳವನ್ನು ಹೊಕ್ಕಿತು ಅದನ್ನು ನಾನು ಗೀತೆಯೊಂದಿಗೆ ಹೋಲಿಸಿದೆ "ಇದು ನನ್ನ ಹೇಳಿಕೆ ನಿಮಗೆ ಕೆಟ್ಟದ್ದನ್ನು ಪ್ರತಿಭಟಿಸಬೇಡ ಯಾವನಾದರೂ ನಿನ್ನ ಬಲ ಕಪೋಲಕ್ಕೆ ಪೆಟ್ಟುಕೊಟ್ಟರೆ ಅವನಿಗೆ ಇನ್ನೊಂದನ್ನು ಕೂಡ ತೋರಿಸು ಯಾವನಾದರೂ ನಿನ್ನ ಅಂಗಿಯನ್ನು ಕಸಿದುಕೊಂಡರೆ ನಿನ್ನ ಮೇಲಂಗಿಯನ್ನೂ ಅವ ತಗದುಕೊಳ್ಳಗೊಡು" ಎಂಬುದು ಅತಿಶಯವಾದ ಸಂತಸವನ್ನು ಕೊಟ್ಟಿತು ನನಗೆ, ಹಾಗೆಯೇ ಶಾಮಲಾಲ ಭಟ್ಟನ 'ಬಟ್ಟಲು ನೀರು ಕೊಟ್ಟವಗ ಪಕ್ವಾನ್ನ ಭೋಜನ ನೀಡು' ಎಂಬುದನ್ನು ಸ್ಮೃತಿಗೆ ತಂದಿತು ನನ್ನ ಅಪಕ್ವ ಬುದ್ಧಿ 'ಗೀತೆ' 'ಏಷ್ಯದ ಪ್ರದೀಪ' 'ಸಿನಾಯ್ ದಿಬ್ಬದಿಂದಾದ ಉಪದೇಶ' ಮೂರನ್ನೂ ಸಮನ್ವಯ ಮಾಡುವುದಕ್ಕೆ ಪ್ರಯತ್ನಿಸಿತು ಸ್ವಾರ್ಥತ್ಯಾಗವೇ ಪರಮಧರ್ಮವೆಂಬ ತತ್ವ ನನಗೆ ಬಹಳ ರಂಜಕವಾಯಿತು

ಈ ವ್ಯಾಸಂಗ ಇತರ ಧರ್ಮಬೋಧಕರ ಜೀವನವನ್ನು ತಿಳಿದುಕೊಳ್ಳಬೇಕೆಂಬ ಹಸಿವನ್ನು ನನ್ನಲ್ಲಿ ತೀಕ್ಷ್ಣಗೊಳಿಸಿತು ಗೆಳೆಯನೊಬ್ಬ ಕಾರ್ಲೈಲನ 'ವೀರರು ಮತ್ತು ವೀರಪೂಜೆ'ಯನ್ನು ಓದೆಂದು ಶಿಫಾರಸು ಮಾಡಿದ ಪ್ರವಾದಿಯಾದ ವೀರನ ಮೇಲಿನ ಅಧ್ಯಾಯವನ್ನು ಓದಿದಾಗ

ಪೈಗಂಬರ್ ಮೊಹಮ್ಮದನ ಮಹಿಮೆ, ಧೈರ್ಯ, ಕಡುಸಂಯಮದ ಬಾಳು ಗಳ ವಿಚಾರ ಅರಿತುಕೊಂಡೆ

ಧರ್ಮದ ಇಷ್ಟು ಪರಿಚಯವನ್ನು ಬಿಟ್ಟು ಹೆಚ್ಚಿಗೆ ವ್ಯಾಸಂಗ ಮಾಡಲು ಆಗ ಪರೀಕ್ಷೆಯ ಓದಿನ ದೆಸೆಯಿಂದ ಕಿಂಚಿತ್ಕಾಲವೂ ನನಗೆ ದೊರಕಲಿಲ್ಲ ಆದರೆ ಹೆಚ್ಚುಹೆಚ್ಚಾಗಿ ಧಾರ್ಮಿಕ ಗ್ರಂಥಗಳನ್ನು ಪಠಿಸ ಬೇಕೆಂದೂ ಎಲ್ಲ ಪ್ರಮುಖ ಧರ್ಮಗಳ ಬಗೆಗೆ ಪರಿಚಯ ಮಾಡಿಕೊಳ್ಳ ಬೇಕೆಂದೂ ಮನಸ್ಸಿನಲ್ಲಿ ಗುರುತು ಹಾಕಿಕೊಂಡೆ

ನಿರೀಶ್ವರವಾದವನ್ನೂ ಅಷ್ಟಿಷ್ಟು ಅರಿಯದೆ ಇರಲು ನನಗೆ ಹೇಗೆ ಸಾಧ್ಯ? ಪ್ರತಿಯೊಬ್ಬ ಭಾರತೀಯನಿಗೂ ಬ್ರ್ಯಾಡ್ಲಾವಿನ ಹೆಸರೂ ನಿರೀಶ್ವರವಾದವೆಂಬ ಆರೋಪಣೆಯನ್ನು ತಳೆದಿದ್ದ ಆತನ ಸಿದ್ಧಾಂತವೂ ಗೊತ್ತಿತ್ತು ಅದರ ವಿಚಾರ ಪುಸ್ತಕವನ್ನು ಓದಿದೆ, ಅದರ ಹೆಸರು ಮರೆತು ಹೋಗಿದೆ ಅದು ನನ್ನ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ ಏತಕ್ಕೆಂದರೆ ನಾಸ್ತಿಕವಾದದ ಸಹರಾ ಮರುಭೂಮಿಯನ್ನು ನಾನಾಗಲೇ ದಾಟಬಿಟ್ಟಿದ್ದೆ (ಆತ್ಮಕಥೆ)

## ರಾಯಚಂದ್ ಭಾಯಿ

ರಾಯಚಂದ್ ಭಾಯಿಯ ವಾಣಿಜ್ಯೋದ್ಯಮಕ್ಕೆ ನೂರಾರು ಸಾವಿರ ಗಳ ವಹಿವಾಟು ಮುತ್ತು ರತ್ನಗಳಲ್ಲಿ ಆತನೊಬ್ಬ ಪ್ರವೀಣ ಎಂಥಹ ವ್ಯಾಪಾರದ ಸಮಸ್ಯೆಯಾದರೂ ಅವನಿಗೆ ಕಷ್ಟವಾಗಿ ತೋರದು. ಆದರೆ ಅವನ ಜೀವನ ಸುತ್ತುತ್ತಿದ್ದ ಕೇಂದ್ರ ಇವೊಂದೂ ಅಲ್ಲ ಭಗವಂತನನ್ನು ಪ್ರತ್ಯಕ್ಷವಾಗಿ ದರ್ಶನ ಮಾಡಬೇಕೆಂಬ ಉತ್ಕಟ ಲಾಲಸೆಯೇ ಆ ಕೇಂದ್ರ ಅವನ ವ್ಯವಹಾರದ ಮೇಜಿನ ಮೇಲೆ ಉಳಿದ ಸಾಮಾನುಗಳ ಜೊತೆಗೆ ಒಂದು ಧರ್ಮಗ್ರಂಥ, ಒಂದು ಡಯರಿ ತಪ್ಪದೆ ಕಾಣಬರುತ್ತಿದ್ದುವು. ವ್ಯಾಪಾರದ ಕಾರ್ಯಭಾರ ಮುಗಿದ ಕೂಡಲೇ ಧರ್ಮಗ್ರಂಥದ ಅಥವಾ ಡಯರಿಯ ಪುಟವನ್ನು ತೆರೆಯುತ್ತಿದ್ದ ಅಚ್ಚಾಗಿರುವ ಆತನ ಬರವಣಿಗೆ ಯಲ್ಲಿ ಬಹುಭಾಗ ಈ ಡಯರಿಯ ನಕಲು ಒಂದು ಗುರುತರವಾದ ವ್ಯಾಪಾರಕಾರ್ಯದ ಮೇಲೆ ತನ್ನ ಮಾತನ್ನು ಮುಗಿಸಿದ ಕೂಡಲೇ ಗೋಪ್ಯ

ವಾದ ಆಧ್ಯಾತ್ಮಿಕ ವಿಚಾರಗಳನ್ನು ಕುರಿತು ಬರೆಯಲಾರಂಭಿಸುತ್ತಿದ್ದ ಪುರುಷ ವ್ಯಾಪಾರಿಯಲ್ಲ, ನಿಜವಾದ ಸತ್ಯಾನ್ವೇಷಕನೆಂಬುದು ಸುಸ್ಪಷ್ಟ ಈ ಪ್ರಕಾರವಾಗಿ ದೈವಿಕ ವಿಚಾರಗಳಲ್ಲಿ ಆತ ನಿಮಗ್ನನಾಗಿದ್ದುದನ್ನು ನಾನು ಕಂಡುದು ಒಂದೆರಡು ಸಾರಿಯಲ್ಲ, ಅನೇಕಾನೇಕ ಸಾರಿ ಆತ ತನ್ನ ಚಿತ್ತಸಮತೆಯನ್ನು ಕಳೆದುಕೊಂಡದ್ದನ್ನು ನಾನೆಂದೂ ಕಾಣೆ ನನಗೂ ಅವನಿಗೂ ವ್ಯಾಪಾರದ ಅಥವಾ ಇತರ ಸ್ವಾರ್ಥರೀತಿಯ ಯಾವ ಬಾಂಧವ್ಯವೂ ಇಲ್ಲ ಅವನ ನಿಕಟ ಸಂಪರ್ಕವನ್ನು ನಾನು ಅನುಭೋಗಿಸಿದೆ ಆಗ ನಾನೊಬ್ಬ ನಿರುದ್ಯೋಗಿ ವಕೀಲ ಮಾತ್ರ, ಆದರೂ ಯಾವಾಗ ಭೇಟಿ ಮಾಡಿದರೂ ನನ್ನೊಡನೆ ಗಹನವಾದ ಧರ್ಮಜಿಜ್ಞಾಸೆಯನ್ನು ಆತ ನಡೆಸುತ್ತಿದ್ದ ನಾನೂ ಸರಿಯಾದ ದಾರಿಗಾಗಿ ಇನ್ನೂ ತಡಕಾಡುತ್ತಿದ್ದೆ, ಧರ್ಮಜಿಜ್ಞಾಸೆಯಲ್ಲಿ ಆಸಕ್ತಿಯುಳ್ಳವನೆಂದು ಹೇಳುವಂತಿರಲಿಲ್ಲ, ಆದರೂ ಆತನ ಸಂಭಾಷಣೆ ನನ್ನನ್ನು ಪರವಶಗೈಯುತ್ತಿತ್ತು ಈಚೆಗೆ ಎಷ್ಟೋ ಮಂದಿ ಧರ್ಮಮುಂದಾಳುಗಳನ್ನೂ ಉಪದೇಶಕರನ್ನೂ ಸಂಧಿಸಿದ್ದೇನೆ ವಿವಿಧ ಮಠಾಧಿಪತಿಗಳನ್ನು ಭೇಟಿಮಾಡುವುದಕ್ಕೆ ಶ್ರಮಿಸಿದ್ದೇನೆ ಆದರೆ ಅವರು ಯಾರೊಬ್ಬರೂ ರಾಯಚಂದ್‌ಭಾಯಿಯಷ್ಟು ನನ್ನ ಮೇಲೆ ಪ್ರಭಾವವನ್ನು ಬೀರಿಲ್ಲವೆಂದು ನುಡಿಯಲೇ ಬೇಕು ಆತನ ವಚನ ನನ್ನ ಅಂತರ್ಯಕ್ಕೆ ಹಿತವಾಗುತ್ತಿತ್ತು ಅವನ ನೈತಿಕಶ್ರದ್ಧೆ ಎಷ್ಟು ಗೌರವವನ್ನು ನನ್ನಿಂದ ಸೆಳೆಯುತ್ತಿತ್ತೊ ಅಷ್ಟೇ ಗೌರವವನ್ನು ಅವನ ಬುದ್ಧಿಯೂ ಸೆಳೆಯುತ್ತಿತ್ತು ಬೇಕೆಂತಲೇ ನನ್ನನ್ನು ಮಾರ್ಗ ತಪ್ಪಿ ನಡೆವಂತೆ ಅವ ಎಂದಿಗೂ ಮಾಡನೆಂಬ ನಂಬಿಕೆಯೂ ತನ್ನ ನಿಗೂಢ ಚಿಂತನೆಗಳನ್ನು ನನ್ನಲ್ಲಿ ಗುಟ್ಟಾಗಿ ಹೇಳುವನೆಂಬ ಭರವಸೆಯೂ ನನ್ನ ಹೃದಯಾಂತರಾಳದಲ್ಲಿ ಇದ್ದವು ಆದ್ದರಿಂದ ನನಗೆ ಧರ್ಮಸಂಕಟ ಒದಗಿದ ಘಳಿಗೆಯಲ್ಲಿ ಆತನಿಗೆ ಶರಣುಹೋಗುತ್ತಿದ್ದ ಇಷ್ಟೊಂದು ಗೌರವಬುದ್ಧಿ ಆತನ ವಿಷಯವಾಗಿ ನನ್ನಲ್ಲಿದ್ದರೂ ಅವನನ್ನು ಗುರುವೆಂದು ನನ್ನ ಹೃದಯಸಿಂಹಾಸನದ ಮೇಲೆ ಪ್ರತಿಷ್ಠಿಸಲು ಆಗಲಿಲ್ಲ ಆ ಸಿಂಹಾಸನ ಇನ್ನೂ ಶೂನ್ಯವಾಗಿಯೇ ಇದೆ, ಹಾಗೂ ನನ್ನ ಅರಸುವಿಕೆಯೂ ನಡೆಯುತ್ತಲೇ ಇದೆ

ಆಧುನಿಕರಲ್ಲಿ ಮೂವರು ನನ್ನ ಬಾಳಿನ ಮೇಲೆ ದೊಡ್ಡ ಪ್ರಭಾವವನ್ನು

ಬೀರಿ ಚಿತ್ರವನ್ನು ಸೂರೆಗೊಂಡಿದ್ದಾರೆ: ರಾಯಚಂದ್ ಭಾಯಿ ತನ್ನ ಜೀವಂತ ಸಂಸರ್ಗದಿಂದ, ಟಾಲ್‌ಸ್ಟಾಯಿ ತನ್ನ 'ದೇವರ ರಾಜ್ಯ ನಿನ್ನೊಳಗೇ ಇದೆ' ಎಂಬ ಪುಸ್ತಕದಿಂದ, ರಸ್ಕಿನ್ ತನ್ನ 'ಈ ಕಟ್ಟಕಡೆಯವನಿಗೂ' ಎಂಬ ಪುಸ್ತಕದಿಂದ. (ಆತ್ಮಕಥೆ)

## ದಕ್ಷಿಣ ಆಫ್ರಿಕಾದಲ್ಲಿ

ಬೇಕರ್ ಎಂಬಾತನಿಗೆ ನನ್ನ ಪರಜೀವಿತವನ್ನು ಕುರಿತು ತವಕವುಂಟಾಯಿತು. ವೆಲ್ಲಿಂಗ್ಟನ್ ಸಮ್ಮೇಳನಕ್ಕೆ ಆತ ನನ್ನನ್ನು ಕರೆದುಕೊಂಡು ಹೋದ. ಅದು ಶ್ರದ್ಧಾವಂತ ಕ್ರೈಸ್ತರ ಸಮೂಹವಾಗಿತ್ತು. ಅವರ ನಂಬಿಕೆಯನ್ನು ಕಂಡು ನಾನು ಹರ್ಷಿತನಾದೆ. ಅನೇಕರು ನನಗೋಸ್ಕರ ಪ್ರಾರ್ಥಿಸುತ್ತಿರುವುದನ್ನು ನೋಡಿದೆ. ಅವರ ಕಲವು ಧರ್ಮಗೀತೆಗಳು ಪ್ರಿಯವಾದುವು, ಅವು ಬಹಳ ಮಧುರವಾಗಿದ್ದುವು. ಧರ್ಮೋತ್ಕರ್ಷದ ವಾತಾವರಣವೂ ಅಲ್ಲಿ ನೆರೆದ ಸದಸ್ಯರ ಶ್ರದ್ಧೆಯ ಉತ್ಸಾಹವೂ ನನ್ನನ್ನು ಖಂಡಿತವಾಗಿ ಕ್ರೈಸ್ತಧರ್ಮದ ಅವಲಂಬನೆಗೆ ಪ್ರೇರಿಸುವುವೆಂದು ಬೇಕರ್ ನಂಬಿದ್ದ.

ಸಮ್ಮೇಳನಕ್ಕೆ ಆಗಮಿಸಿದ್ದವರ ಶ್ರದ್ಧಾಸಕ್ತಿಯನ್ನು ನಾನು ಅರ್ಥಮಾಡಿಕೊಂಡು ಮೆಚ್ಚಬಲ್ಲವನಾಗಿದ್ದೆ. ಆದರೆ ನನ್ನ ನಂಬಿಕೆಯನ್ನು, ನನ್ನ ಧರ್ಮವನ್ನು ಬದಲಾಯಿಸುವುದಕ್ಕೆ ಯಾವ ಕಾರಣವನ್ನೂ ನಾನು ಕಾಣಲಿಲ್ಲ. ಕ್ರೈಸ್ತಧರ್ಮವನ್ನು ಸೇರಿದವನಿಗೆ ಮಾತ್ರ ಸ್ವರ್ಗಪ್ರಾಪ್ತಿ ಅಥವಾ ಮೋಕ್ಷಸಾಧನೆ ಎಂಬುದನ್ನು ನಂಬಲು ನನಗೆ ಸಾಧ್ಯವಾಗಲಿಲ್ಲ. ಈ ಅಭಿಪ್ರಾಯವನ್ನು ಸ್ಪಷ್ಟವಾಗಿ ಕೆಲವು ಕ್ರೈಸ್ತ ಗೆಳೆಯರಿಗೆ ನಾನು ತಿಳಿಸಿದಾಗ ಅವರು ತಲ್ಲಣಗೊಂಡರು. ಬೇರೆ ಉಪಾಯವೇನೂ ಇರಲಿಲ್ಲ.

ನನ್ನ ಸಂಶಯಗಳ ತೆರ ಕೆಳಗಿತ್ತು: ಯೇಸು ಒಬ್ಬನೇ ದೇವರ ಮಗನಾಗಿ ಅವತರಿಸಿದವನೆಂಬುದೂ ಅವನನ್ನು ನಂಬಿದವನಿಗೆ ಮಾತ್ರ ಅಮರಜೀವನ ಲಭಿಸುವುವೆಂಬುದೂ ನನ್ನ ನಂಬಿಕೆಗೆ ಮೀರಿತು. ದೇವರಿಗೆ ಮಕ್ಕಳಿರುವ ಸಂದರ್ಭದಲ್ಲಿ ನಾವೆಲ್ಲರೂ ಅವನ ಮಕ್ಕಳೇ, ಯೇಸು ದೇವರಂತಿದ್ದು ಸ್ವತಃ ದೇವರೇ ಆಗಬಹುದಾಗಿದ್ದರೆ, ಎಲ್ಲ ಮಾನವರೂ ದೇವರಂತೆಯೇ, ಸ್ವತಃ ದೇವರೇ ಆಗಬಲ್ಲವರು. ಯೇಸು ತನ್ನ ಮರಣದಿಂದ

ತನ್ನ ನೆತ್ತರನ್ನು ಸುರಿಸಿದ್ದರಿಂದ, ಜಗತ್ತಿನ ಪಾಪವನ್ನೆಲ್ಲ ಕಳೆದನೆಂಬುದನ್ನು ಅಕ್ಷರಶಃ ನಂಬುವುದಕ್ಕೆ ಸಿದ್ಧವಿರಲಿಲ್ಲ ನನ್ನ ವಿವೇಚನೆ ರೂಪಕಾಲಂಕಾರವಾಗಿ ಅದರಲ್ಲಿ ಕಿಂಚಿತ್ ಸತ್ಯವಿರಬಹುದು ಮತ್ತೊಂದು ವಿಷಯ, ಕ್ರೈಸ್ತಧರ್ಮದ ಪ್ರಕಾರ ಮಾನವರಿಗೆ ಮಾತ್ರ ಆತ್ಮ, ಇತರ ಚೇತನಗಳಿಗೆ ಅದಿಲ್ಲವಾಗಿ, ಮರಣದಿಂದ ಅವಕ್ಕೆ ಪೂರ್ಣ ನಾಶ, ನನ್ನ ನಂಬಿಕೆ ಇದಕ್ಕೆ ವ್ಯತಿರಿಕ್ತವಾಗಿತ್ತು ಯೇಸು ಒಬ್ಬ ಧರ್ಮಬಲಿ, ಸ್ವಾರ್ಥತ್ಯಾಗದ ಪ್ರತಿಮೆ, ದೈವೀಪ್ರೇರಣೆಯ ಬೋಧಕ, ಎಂದು ಒಪ್ಪಿಕೊಂಡರೂ ಹುಟ್ಟಿಬಂದವರಲ್ಲಿ ಅವನೊಬ್ಬನೇ ಪೂರ್ಣಪುರುಷ ಎಂದು ಒಪ್ಪಿಕೊಳ್ಳಲಾಗಲಿಲ್ಲ ಶಿಲುಬೆಯ ಮೇಲೆ ಅವನಿಗಾದ ಸಾವು ಜಗತ್ತಿಗೊಂದು ಮಹಾ ನಿದರ್ಶನವಾದರೂ ಅದರಲ್ಲಿ ಅತಿರಹಸ್ಯವಾದದ್ದೋ ಅದ್ಭುತವಾದದ್ದೋ ಏನೋ ಇದೆಯೆಂದು ಒಪ್ಪಲಿಲ್ಲ ನನ್ನ ಹೃದಯ ಕ್ರಿಶ್ಚಿಯನ್ನರ ನಿಷ್ಠಾಜೀವನ ಇತರ ಮತೀಯರ ಜೀವನ ನನಗ ಒದಗಿಸದೇ ಇದ್ದ ಯಾವುದನ್ನೂ ಒದಗಿಸಲಿಲ್ಲ ಕ್ರೈಸ್ತರಲ್ಲಿ ನಡೆಯಿತು ಎಂದು ಹೇಳಿದ ಪರಿವರ್ತನೆಯನ್ನೇ ಇತರರಲ್ಲಿಯೂ ನಾನು ದೃಷ್ಟಿಸಿದ್ದೆ, ತಾತ್ವಿಕದೃಷ್ಟಿಯಿಂದ ಕ್ರೈಸ್ತಧರ್ಮದಲ್ಲಿ ಏನೂ ಅಸಾಧಾರಣ ವೈಶಿಷ್ಟ್ಯ ಇರಲಿಲ್ಲ, ತ್ಯಾಗದ ದೃಷ್ಟಿಯಿಂದ ಹಿಂದೂಗಳು ಕ್ರೈಸ್ತರಿಗಿಂತ ಎಷ್ಟೋ ಮಿಗಿಲಾದವರೆಂದು ತೋರಿತು ನನಗೆ ಕ್ರೈಸ್ತಧರ್ಮವನ್ನು ಪರಿಪೂರ್ಣ ಧರ್ಮವೆಂದಾಗಲೀ ಎಲ್ಲ ಧರ್ಮಗಳಿಗಿಂತ ಮಹತ್ವದ್ದೆಂದಾಗಲೀ ಭಾವಿಸಲು ನನಗೆ ಸಾಧ್ಯವಾಗಲಲ್ಲ

ಕ್ರೈಸ್ತ ಗೆಳೆಯರು ನನ್ನನ್ನು ಮತಾಂತರಗೊಳಿಸಲು ಪ್ರಯತ್ನಿಸುತ್ತಿದ್ದಂತೆ ಮುಸಲ್ಮಾನ ಗೆಳೆಯರೂ ಕೂಡ ಪ್ರಯತ್ನಿಸುತ್ತಿದ್ದರು ಅಬ್ದುಲ್ಲಾ ಸೇಠ್ ಇಸ್ಲಾಮ್ ವಿಷಯವನ್ನು ನಾನು ಓದಬೇಕೆಂಬ ಇಸ್ಲಾಂ ಮತದ ಲಾವಣೆಯಲ್ಲಿ ನಿರತನಾಗಿದ್ದ, ಅದರ ಅಂದಚಂದವನ್ನು ಕುರಿತು ಮಾತನಾಡುವುದಕ್ಕೆ ಅವನಿಗೆ ಏನಾದರೂ ಸದಾ ಸಿಕ್ಕುತ್ತಿತ್ತೆಂದು ಬೇರೆ ಹೇಳಬೇಕಾಗಿಲ್ಲ

ನನ್ನ ಸಮಸ್ಯೆಗಳನ್ನು ರಾಯಚಂದಭಾಯಿಗೆ ಒಂದು ಪತ್ರದಲ್ಲಿ ತಿಳಿಸಿದೆ ತಾಳ್ಮೆಯಿಂದಿರಬೇಕೆಂದೂ ಹಿಂದೂ ಧರ್ಮವನ್ನು ಆಳವಾಗಿ ಅಭ್ಯಸಿಸಬೇಕೆಂದೂ ಆತ ನನಗೆ ಆಣತಿಯಿತ್ತ ಅವನ ವಾಕ್ಯಗಳಲ್ಲಿ ಒಂದು

ಹೀಗಿತ್ತು "ಮಮತಾರಹಿತನಾಗಿ ಪ್ರಶ್ನೆಯನ್ನು ಪರಿಶೀಲನೆ ಮಾಡಿದ ಮೇಲೆ ಇದು ನನ್ನ ದೃಢನಿರ್ಧಾರ ಹಿಂದೂ ಧರ್ಮದಲ್ಲಿರುವ ಸೂಕ್ಷ್ಮವೂ ಗಂಭೀರವೂ ಆದ ಚಿಂತನೆಯಾಗಲೀ ಆತ್ಮದರ್ಶನವಾಗಲೀ ಹೃದಯ ವೈಶಾಲ್ಯವಾಗಲೀ ಮತ್ತಾವ ಮತಧರ್ಮದಲ್ಲಿಯೂ ಇಲ್ಲ"

ನನ್ನ ಧಾರ್ಮಿಕ ಪತ್ರವ್ಯವಹಾರ ಮುಂದುವರಿಯಿತು ರಾಯಚಂದ ಭಾಯಿ ನನಗೆ ಮಾರ್ಗದರ್ಶನ ಮಾಡುತ್ತಿದ್ದ ಮ್ಯಾಕ್ಸ್‌ಮುಲ್ಲರನ "ಭಾರತ ನಮಗೇನನ್ನು ಕಲಿಸೀತು?" ಎಂಬ ಪುಸ್ತಕವನ್ನೂ ಥಿಯೊಸಾಫಿಕಲ್ ಸಂಘದವರು ಪ್ರಕಟಿಸಿದ್ದ ಉಪನಿಷತ್ತುಗಳ ಭಾಷಾಂತರವನ್ನೂ ಕುತೂಹಲದಿಂದ ಓದಿದೆ ಇವೆಲ್ಲ ಹಿಂದೂ ಧರ್ಮದ ಮೇಲೆ ನನಗಿದ್ದ ಮರ್ಯಾದೆಯನ್ನು ಹೆಚ್ಚಿಸಿದುವು, ಅದರ ಸೊಬಗುಗಳು ನನ್ನನ್ನು ಆವರಿಸತೊಡಗಿದುವು ಅನ್ಯ ಧರ್ಮಗಳ ವಿರೋಧವಾಗಿ ಪಕ್ಷಪಾತವನ್ನು ಅವು ಹುಟ್ಟಿಸಲಿಲ್ಲ ವಾಷಿಂಗ್ಟನ್ ಇರ್ವಿಂಗ್‌ನ 'ಮೊಹಮ್ಮದ್ ಮತ್ತು ಆತನ ಉತ್ತರವಾದಿಗಳು' ಎಂಬ ಪುಸ್ತಕವನ್ನೂ ಕಾರ್ಲೈಲನು ಮೊಹಮ್ಮದ್ ವಿಷಯವಾಗಿ ಬರೆದ ಶ್ಲಾಘನಾಲೇಖನವನ್ನೂ ಓದಿದೆ ಅವಿಂದ ಮೊಹಮ್ಮದರ ವಿಷಯವಾಗಿ ನನ್ನ ಗೌರವ ಹೆಚ್ಚಿತು 'ಝುರತುಷ್ಟ್ರನ ಸೂಕ್ತಿಗಳು' ಎಂಬ ಪುಸ್ತಕವನ್ನೂ ನಾನು ಓದಿದೆ

ಹೀಗೆ ವಿವಿಧ ಧರ್ಮಗಳ ವಿಚಾರ ಹೆಚ್ಚಿನ ಜ್ಞಾನವನ್ನು ಗಳಿಸಿಕೊಂಡೆ ಇದೆಲ್ಲ ನನ್ನ ಒಳಚಿಂತನೆಯನ್ನು ಕುದುರಿಸಿದ್ದಲ್ಲದೆ ಮನಸ್ಸಿಗೆ ಚೆನ್ನಾಗಿ ಹಿಡಿಸಿದ ಅಂಶವನ್ನು ಕಾರ್ಯರೂಪಕ್ಕೆ ತರುವ ಅಭ್ಯಾಸವನ್ನು ಬಲಗೊಳಿಸಿತು ಹಾಗೆಯೇ ಹಿಂದೂ ಶಾಸ್ತ್ರ ಗ್ರಂಥಗಳಿಂದ ನಾನು ಗ್ರಹಿಸಿಕೊಂಡಷ್ಟರಮಟ್ಟಿಗೆ ಯೋಗಾಸನಗಳಲ್ಲಿ ಕೆಲವನ್ನು ಮಾಡತೊಡಗಿದೆ ಆದರೆ ಹೆಚ್ಚು ದೂರ ಹೋಗಲಾಗಲಿಲ್ಲ ಭಾರತಕ್ಕೆ ಹಿಂತಿರುಗಿದ ಮೇಲೆ ಪರಿಣತನೊಬ್ಬನ ಸಹಾಯದಿಂದ ಅವನ್ನು ಮುಂದುವರಿಸಲು ನಿರ್ಧರಿಸಿದೆ ಆ ಬಯಕೆ ಇನ್ನೂ ಸಂದಿಲ್ಲ ಅಲ್ಲದೆ, ಟಾಲ್‌ಸ್ಟಾಯಿಯ ಬರಹಗಳನ್ನು ಆಳವಾಗಿ ಅಧ್ಯಯನ ಮಾಡಿದೆ ಅವುಗಳಲ್ಲಿ 'ಸಂಕ್ಷಿಪ್ತ ಸುವಾರ್ತೆಗಳು' (*Gospels in Brief*) 'ಏನು ಮಾಡಬೇಕು' (*What then are we to do?*) ಮತ್ತು ಇತರ ಪುಸ್ತಕಗಳು ನನ್ನ ಮನಸ್ಸಿನ ಮೇಲೆ ತುಂಬ

ಪರಿಣಾಮಮಾಡಿದುವು. ವಿಶ್ವಪ್ರೇಮದ ಅನಂತ ಸಾಧ್ಯತೆ ಹೆಚ್ಚುಹೆಚ್ಚಾಗಿ ನನಗೆ ಅರಿವಾಗ ತೊಡಗಿತು. (ಆತ್ಮಕಥೆ)

೧೯೦೩ರಲ್ಲಿ ಥಿಯೊಸೊಫಿಸ್ಟ್ ಮಿತ್ರರು ನನ್ನನ್ನು ತಮ್ಮ ಸಂಘದೊಳಕ್ಕೆ ಎಳೆದುಕೊಳ್ಳಬೇಕೆಂದು ಉದ್ದೇಶಪಟ್ಟರು. ಥಿಯೊಸಫಿ ಸಾಹಿತ್ಯ ಹಿಂದೂ ಧರ್ಮದ ಪ್ರಭಾವದಿಂದ ತುಂಬಿಕೊಂಡಿದೆಯಾಗಿ ನನ್ನಿಂದ ತಮಗೆ ಸಹಾಯವಾಗಬಹುದೆಂದು ಅವರು ಊಹಿಸಿದ್ದರು. ಮೀನುಗಳ ನಡುವಣ ಜಲದೇವತೆಯೆಂದೇ ನನ್ನನ್ನು ಭಾವಿಸಿಕೊಂಡೆ. ಅವರಲ್ಲಿ ಕೆಲವರೊಂದಿಗೆ ಸ್ವಾಮೀ ವಿವೇಕಾನಂದರ ರಾಜಯೋಗವನ್ನು, ಇತರರ ಜೊತೆಯಲ್ಲಿ ಎಂ. ಎನ್. ದ್ವಿವೇದಿಯವರ ರಾಜಯೋಗವನ್ನೂ ಪಠಿಸಲು ಪ್ರಾರಂಭಿಸಿದೆ. ಒಬ್ಬ ಗೆಳೆಯನೊಂದಿಗೆ "ಪತಂಜಲಿಯ ಯೋಗಸೂತ್ರವನ್ನೂ, ಬಹಳ ಮಂದಿಯೊಡನೆ ಭಗವದ್ಗೀತೆಯನ್ನೂ ಓದಬೇಕಾಯಿತು. ಒಂದು ಬಗೆಯ ಅನ್ವೇಷಕ ಗೋಷ್ಠಿಯನ್ನು ನಾವು ರಚಿಸಿಕೊಂಡೆವು. ಅದರಲ್ಲಿ ಕ್ರಮ ತಪ್ಪದೆ ಸೇರತೊಡಗಿದೆವು. ಮೊದಲೇ ನನಗೆ ಗೀತೆಯಲ್ಲಿ ಭಕ್ತಿಯಿತ್ತು, ಅದೊಂದು ವ್ಯಾಮೋಹವಾಗಿತ್ತು. ಅದರಲ್ಲಿ ಇನ್ನೂ ಆಳಕ್ಕೆ ಇಳಿಯುವುದು ಆವಶ್ಯಕವೆಂದು ಈಗ ಮನಗಂಡೆ. ಜೊತೆಗೆ ಪ್ರತಿದಿನವೂ ಒಂದೋ ಎರಡೋ ಶ್ಲೋಕವನ್ನು ಕಂಠಪಾಠ ಮಾಡಲು ಸಂಕಲ್ಪಿಸಿದೆ. ಇದಕ್ಕೆ ನನ್ನ ಬೆಳಗಿನ ಸ್ನಾನಾದಿ ವಿಧಿಯ ಸಮಯವನ್ನು ಉಪಯೋಗಿಸಿಕೊಂಡೆ. ಈ ಕಾರ್ಯಾಚರಣೆಗೆ ಒಟ್ಟು ಮೂವತ್ತೈದು ನಿಮಿಷ ಹಿಡಿಯುತ್ತಿತ್ತು. ದಂತಧಾವನಕ್ಕೆ ಹದಿನೈದು ನಿಮಿಷ, ಮೈ ತೊಳೆಯುವುದಕ್ಕೆ ಇಪ್ಪತ್ತು ನಿಮಿಷ. ಪಾಶ್ಚಾತ್ಯಪದ್ಧತಿಯಂತೆ ನಿಂತುಕೊಂಡೇ ಹಲ್ಲನ್ನುಜ್ಜಿಕೊಳ್ಳುವುದು ಅಭ್ಯಾಸವಾಗಿತ್ತು. ನನ್ನ ಇದಿರಿನ ಗೋಡೆಗೆ ಗೀತಾ ಶ್ಲೋಕಗಳನ್ನು ಬರೆದ ಚೀಟಿಗಳನ್ನು ಅಂಟಿಸಿ ಆಗಾಗ ಅದನ್ನು ನೋಡುತ್ತ ಜ್ಞಾಪಕವನ್ನು ಭದ್ರಗೊಳಿಸಿಕೊಳ್ಳುತ್ತಿದ್ದೆ. ಹಿಂದೆ ಕಲಿತದ್ದನ್ನು ಪುನಃಸ್ಮರಣೆ ಮಾಡುವುದಕ್ಕೂ ದಿನಚರಿಯ ಹೊಸಭಾಗವನ್ನು ಗಟ್ಟಿ ಮಾಡುವುದಕ್ಕೂ ಈ ವೇಳೆ ಸಾಕಾಗುತ್ತಿತ್ತು. ಹೀಗೆ ಹದಿಮೂರು ಅಧ್ಯಾಯಗಳನ್ನು ಬಾಯಿಪಾಠ ಮಾಡಿದ್ದು ನೆನಪಿನಲ್ಲಿದೆ. (ಆತ್ಮಕಥೆ)

ನನ್ನ ಭಾವನೆಯಲ್ಲಿ ಗೀತೆ ತಪ್ಪೇ ಇಲ್ಲದ ಒಂದು ಕೈಪಿಡಿಯಾಯಿತು.

ನಡತೆಗೆ ದಿನ ದಿನವೂ ನೋಡತಕ್ಕ ನನ್ನ ನಿಘಂಟು ಆಯಿತು ಅದು ನನ್ನ ಸಮಸ್ತ ತೊಂದರೆಗಳಿಗೂ ಪರೀಕ್ಷೆಗಳಿಗೂ ಸಿದ್ಧ ಪರಿಹಾರವಾಗಿ ಮರೆಹೊಗುವ ಶೀಲದ ಕೋಶವಾಯಿತದು ಅಪರಿಗ್ರಹ, ಸಮಭಾವ ಇತ್ಯಾದಿ ಶಬ್ದಗಳು ನನ್ನನ್ನು ಸೆರೆಹಿಡಿದುವು ಸಮಭಾವವನ್ನು ಬೆಳೆಸಿಕೊಂಡು ಅದನ್ನು ಸ್ಥಿರವಾಗಿ ಇಟ್ಟುಕೊಳ್ಳುವುದು ಹೇಗೆಂಬುದೇ ಸಮಸ್ಯೆಯಾಗಿತ್ತು ನಮ್ಮ ವಶದಲ್ಲಿರುವ ಎಲ್ಲ ಪದಾರ್ಥಗಳನ್ನೂ ಕಳಚಿಡುವುದು ಹೇಗೆ? ದೇಹವೇ ಸಾಕಷ್ಟು ಸಂಗ್ರಹವಲ್ಲವೇ? ಪತ್ನೀಪುತ್ರರು ಸಂಗ್ರಹವಲ್ಲವೆ? ನನ್ನಲ್ಲಿದ್ದ ಎಲ್ಲ ಪುಸ್ತಕ ತುಂಬಿದ ಅಲಮಾರುಗಳನ್ನು ನಾಶಮಾಡಬೇಕೆ? ನನ್ನಲ್ಲಿದ್ದುದನ್ನೆಲ್ಲ ತ್ಯಜಿಸಿ ದೇವರನ್ನು ಹಿಂಬಾಲಿಸುವುದೆ? ನೇರವಾಗಿಯೇ ಉತ್ತರಬಂತು "ನನ್ನಲ್ಲಿದ್ದುದೆಲ್ಲವನ್ನೂ ತ್ಯಾಗಮಾಡಿದ ಹೊರತು ನಾನು ದೇವರನ್ನು ಹಿಂಬಾಲಿಸಲಾರೆ" ಗೀತಾಬೋಧೆಯ ಬೆಳಕಿನಲ್ಲಿ 'ನ್ಯಾಸಧಾರಿ' ಎಂಬ ಪದದ ಅರ್ಥ ನನಗೆ ನಿಚ್ಚಳವಾಗಿ ತಿಳಿಯಿತು ವಿಪರೀತ ಸಂಗ್ರಹದ ಮೇಲೆ ಆಧಿಪತ್ಯವಿದ್ದರೂ ಅವರಲ್ಲಿ ಅಣುವಿನಷ್ಟನ್ನೂ ತನ್ನದೆಂಬುದಾಗಿ ಭಾವಿಸದಿರುವ ನ್ಯಾಸಧಾರಿಯಂತೆ ಮೋಕ್ಷಾಭಿಲಾಷಿ ವರ್ತಿಸುವುದೇ ಗೀತೆಯ ಅಸಂಗ್ರಹ ಬೋಧೆಯ ಅರ್ಥವೆಂದು ಗ್ರಹಿಸಿದೆ ಅಸಂಗ್ರಹ ಮತ್ತು ಸಮಭಾವಗಳಿಗೆ ಪೂರ್ವಭಾವಿಯಾಗಿ ಹೃದಯದ ಮಾರ್ಪಾಟು ದೃಷ್ಟಿಕೋನದ ಮಾರ್ಪಾಟು ಅಗತ್ಯವೆಂಬುದು ಹಗಲಿನ ಬೆಳಕಿನಲ್ಲಿಯೋ ಎಂಬಂತೆ ಸುಸ್ಪಷ್ಟವಾಯಿತು

(ಆತ್ಮಕಥೆ)

ನಾನು ನೆಟಾಲಿಗೆ ಪ್ರಯಾಣ ಹೊರಟೆ ಮಿ ಪೋಲಕನಿಗೆ ನನ್ನ ಗುಟ್ಟೆಲ್ಲವನ್ನೂ ತಿಳಿಸಿದೆ ನನಗೆ ಸುಖಪ್ರಯಾಣ ಕೋರಲು ಅವನೂ ರೈಲು ನಿಲ್ದಾಣಕ್ಕೆ ಬಂದಿದ್ದ ಪ್ರಯಾಣಕಾಲದಲ್ಲಿ ಓದಲೋಸುಗ ನನ್ನ ಬಳಿಯಲ್ಲಿ ಒಂದು ಪುಸ್ತಕವನ್ನಿಟ್ಟು ನನಗೆ ಅದು ಖಂಡಿತವಾಗಿ ಪ್ರಿಯವಾಗುವುದೆಂದು ತಿಳಿಸಿದರು ಅದು ರಸ್ಕಿನ್ನನ 'ಅಂಟು ದಿಸ್ ಲಾಸ್ಟ್' (ಈ ಕಟ್ಟಕಡೆಯವನಿಗೂ) ಪುಸ್ತಕ ಅದನ್ನು ನಾನು ಕೆಲವುಕಾಲದ ಮೇಲೆ ಅನುವಾದ ಮಾಡಿ ಸರ್ವೋದಯ(ಸರ್ವರ ಕ್ಷೇಮ)ಎಂದು ಹೆಸರಿಟ್ಟೆ ರಸ್ಕಿನ್ನನ ಈ ಭವ್ಯ ಗ್ರಂಥದಲ್ಲಿ ನನ್ನ ಹೃದಯಾಂತರಾಳದ ಕೆಲವು ನಿಶ್ಚಿತಗಳನ್ನು ಕಂಡುಹಿಡಿದೆ ಆದುದರಿಂದಲೇ ಅದು ನನ್ನನ್ನು ಆ ರೀತಿ ಸೆರೆ ಹಿಡಿದು

ನನ್ನ ಬಾಳನ್ನು ಪರಿವರ್ತನೆ ಮಾಡಿತು ಮಾನವನ ಎದೆಯಲ್ಲಿ ಹುದುಗಿರುವ ಒಳ್ಳೆಯದನ್ನು ಹೊರಕ್ಕೆ ಕೂಗಿ ಕರೆಯುವವನೇ ಕವಿ ಎಲ್ಲರೂ ಒಂದೇ ಪ್ರಮಾಣದಲ್ಲಿ ವಿಶ್ವಾಸ ಹೊಂದಿರುವುದಿಲ್ಲವಾದ್ದರಿಂದ ಎಲ್ಲರ ಮೇಲೂ ಕವಿಗಳು ಒಂದೇ ರೀತಿಯ ಪ್ರಭಾವವನ್ನು ಬೀರಲಾರರು

'ಅಂಟು ದಿಸ್ ಲಾಸ್ಟ್' ಪುಸ್ತಕದಲ್ಲಿನ ಉಪದೇಶಗಳನ್ನು ನಾನು ಹೀಗೆ ಅರ್ಥಮಾಡಿಕೊಂಡೆ

(ಅ) ವ್ಯಕ್ತಿಯ ಒಳಿತು ಎಲ್ಲರ ಒಳಿತಿನಲ್ಲಿ ಅಡಕವಾಗಿದೆ

(ಆ) ನ್ಯಾಯವಾದಿಯ ಕರ್ಮ ನಾಯಿಂದನ ಕರ್ಮ ಎರಡಕ್ಕೂ ಸಮಾನ ಬೆಲೆ, ಏಕೆಂದರೆ ಕರ್ಮಮಾಡಿ ಉದರಂಭರಣ ಮಾಡುವ ಹಕ್ಕು ಎಲ್ಲರಿಗೂ ಇದೆ

(ಇ) ದುಡಿಮೆಯ ಜೀವನವೇ, ಎಂದರೆ ಭೂಮಿ ಉಳುವವನ ಮತ್ತು ಕೈಕಸಬುದಾರನ ಜೀವನವೇ ಬಾಳಲು ಯೋಗ್ಯವಾದ ಜೀವನ

ಇವುಗಳಲ್ಲಿ ಮೊದಲನೆಯದು ನನಗೆ ಗೊತ್ತಿತ್ತು ಎರಡನೆಯದನ್ನು ಮಸುಕಾಗಿ ತಿಳಿದಿದ್ದೆ ಮೂರನೆಯದು ನನಗೆ ಎಂದೂ ತೋಚಿಯೇ ಇರಲಿಲ್ಲ ಎರಡು ಮತ್ತು ಮೂರನೆಯವು ಮೊದಲನೆಯದರಲ್ಲಿ ಅಂತರ್ಗತವಾಗಿವೆ ಎಂಬುದನ್ನು "ಅಂಟು ದಿಸ್ ಲಾಸ್ಟ್" ಪುಸ್ತಕ ಹಗಲಿನ ಬೆಳಕಿನಷ್ಟು ಸ್ಪಷ್ಟ ಮಾಡಿತು ನಾನು ಮುಂಜಾನೆ ಎದ್ದು ಈ ತತ್ವಗಳನ್ನು ಅನುಷ್ಠಾನಕ್ಕೆ ತರಲು ಸಿದ್ಧನಾದೆ (ಆತ್ಮಕಥೆ)

## ಇತರ ಮತ ಗ್ರಂಥಗಳ ವಿಷಯದಲ್ಲಿ ನನ್ನ ಮನೋಭಾವ

ಭಗವದ್ಗೀತೆಯಿಂದ ಹಿಡಿದು ಪ್ರತಿಯೊಂದು ಮತಗ್ರಂಥವನ್ನೂ ನನ್ನ ನ್ಯಾಯವಿೀಕ್ಷಣೆಗೆ ಒಳಪಡಿಸುತ್ತೇನೆ ಯಾವ ಧಾರ್ಮಿಕ ವಚನವೇ ಆಗಲಿ ನನ್ನ ವಿಚಾರಪರತೆಯನ್ನು ತಳ್ಳಿಹಾಕಲು ನಾನು ಒಪ್ಪಲಾರೆ. ಮುಖ್ಯವಾದ ಮತಗ್ರಂಥಗಳು ಸ್ಫೂರ್ತಿಪ್ರೇರಿತವೆಂದು ನಂಬಿದರೂ ಅವು ಎರಡು ಸಲ ಬಟ್ಟಿಯಿಳಿಯುವ ಪ್ರತಿಕ್ರಿಯೆಗೇ ಒಳಗಾಗಿವೆ. ಪ್ರಥಮವಾಗಿ ಅವು ಮಾನವ ಪ್ರವಾದಿಯ ವದನದಿಂದ ಹೊರಹೊಮ್ಮುತ್ತವೆ ಆಮೇಲೆ ಭಾಷ್ಯಕಾರರ ವ್ಯಾಖ್ಯಾನಗಳ ಮೂಲಕವಾಗಿ ಅವುಗಳಲ್ಲಿನ ಯಾವುದೂ ನೇರ

ವಾಗಿ ದೇವರಿಂದಲೇ ಬರುವುದಿಲ್ಲ ಮೂಲ ವಾಕ್ಯವನ್ನು ವ್ಯಾಖ್ಯಾ ಒಂದು ರೀತಿಯಲ್ಲಿ ವಿವರಿಸಿದರೆ ಜ್ಞಾನನ ರೀತಿ ಇನ್ನೊಂದು ದೈವೀ ಸ್ಫೂರ್ತಿಯನ್ನು ನಾನು ಹೌದೆಂದು ಒಪ್ಪಿ ವಿಚಾರಶಕ್ತಿಯನ್ನು ಬಿಟ್ಟು ಕೊಡಲಾರೆ ಎಲ್ಲಕ್ಕಿಂತ ಮಿಗಿಲಾಗಿ 'ಬರಿ ಅಕ್ಷರದಿಂದ ಮರಣ, ತಾತ್ಪರ್ಯ ದಿಂದ ಜೀವನ' (ಹರಿಜನ. ೫-೧೨-೩೬)

ನಾನು ವಾಚ್ಯಾರ್ಥಪ್ರಿಯನಲ್ಲ ಜಗತ್ತಿನ ವಿವಿಧ ಧರ್ಮಗ್ರಂಥಗಳ ಭಾವಾರ್ಥವನ್ನು ತಿಳಿದುಕೊಳ್ಳುವುದೇ ನನ್ನ ಪ್ರಯತ್ನ ಪ್ರತಿಪಾದಿಸಿರುವ ಸತ್ಯ ಅಹಿಂಸೆಗಳ ಪ್ರಮಾಣದಿಂದ ಅವನ್ನು ನಾನು ಪರಿಶೀಲಿಸುತ್ತೇನೆ. ಪರೀಕ್ಷೆಯಲ್ಲಿ ಸರಿಯಾಗಿ ಹೊಂದಿಕೊಂಡವನ್ನು ಸ್ವೀಕರಿಸುತ್ತೇನೆ ಹೊಂದದೆ ವಿರೋಧವಾದುವನ್ನು ತ್ಯಜಿಸುತ್ತೇನೆ (ಯಂಗ್ ಇಂಡಿಯಾ. ೨೭-೮-೨೫)

ಪ್ರತಿಯೊಬ್ಬ ಸುಸಂಸ್ಕೃತ ಸ್ತ್ರೀಯೂ ಪುರುಷನೂ ಪ್ರಪಂಚದ ಧರ್ಮ ಗ್ರಂಥಗಳನ್ನು ಸಹೃದಯದಿಂದ ವ್ಯಾಸಂಗ ಮಾಡಬೇಕೆಂದು ನನ್ನ ವಾದ ನಮ್ಮ ಧರ್ಮವನ್ನು ಇತರರು ಎಷ್ಟು ಗೌರವದಿಂದ ಕಾಣಬೇಕೆಂದು ಅಪೇಕ್ಷಿಸುತ್ತೇವೋ ಅಷ್ಟೇ ಗೌರವದಿಂದ ಅವರ ಧರ್ಮಗಳನ್ನು ನಾವು ಕಾಣಬೇಕಾದರೆ ಅವನ್ನು ಮೈತ್ರೀಭಾವದಿಂದ ವ್ಯಾಸಂಗ ಮಾಡುವುದು ಒಂದು ಪವಿತ್ರ ಕರ್ತವ್ಯ ಇತರ ಧರ್ಮಗಳ ಶ್ರದ್ಧಾಯುಕ್ತ ವ್ಯಾಸಂಗದಿಂದ ಹಿಂದೂ ಧರ್ಮಗ್ರಂಥಗಳಲ್ಲಿ ನನಗೆ ಪೂಜ್ಯಬುದ್ಧಿಯಾಗಲೀ ನಂಬಿಕೆಯಾಗಲೀ ಕಡಮೆಯಾಗಿಲ್ಲ ಹಿಂದೂ ಧರ್ಮಗ್ರಂಥಗಳ ಅರ್ಥಪರಿಚಯವನ್ನು ನಾನು ಮಾಡಿಕೊಳ್ಳುವಾಗ ಅವುಗಳ ಪ್ರಬಲ ಕೈವಾಡ ನಿಜವಾಗಿ ಇದೆ ನನ್ನ ಜೀವನದರ್ಶನವನ್ನು ವಿಶಾಲಗೊಳಿಸಿವೆ ಅವು. ಹಿಂದೂ ಧರ್ಮಗ್ರಂಥಗಳ ಅನೇಕ ಅಸ್ಪಷ್ಟ ಭಾಗಗಳನ್ನು ಹೆಚ್ಚು ಸ್ಫುಟವಾಗಿ ಅರ್ಥ ಮಾಡಿಕೊಳ್ಳುವ ಶಕ್ತಿಯನ್ನು ಅವು ತಂದುಕೊಟ್ಟಿವೆ ನನಗೆ

(ಯಂಗ್ ಇಂಡಿಯಾ. ೨-೩.೨೬)

ನಾನೊಬ್ಬ ನಿಷ್ಠಾವಂತ ಹಿಂದೂ ಆದರೂ, ನನ್ನ ನಂಬಿಕೆಯಲ್ಲಿ ಕ್ರೈಸ್ತ, ಇಸ್ಲಾಮ್, ಝರತುಷ್ಟ್ರ ಧರ್ಮಗಳ ಬೋಧೆಗೂ ಜಾಗವಿದೆ

(ಯಂಗ್ ಇಂಡಿಯಾ. ೨೨-೧೨-೨೭)

## ಕ್ರೈಸ್ತಧರ್ಮ

ಹಳೇ ಒಡಂಬಡಿಕೆಯ ಕೆಲವು ಭಾಗಗಳು ನನಗಿತ್ತಿದ್ದ ವಿಕರ್ಷಣೆಯ ತರುವಾಯ ಓದಿದಾಗ ಹೊಸ ಒಡಂಬಡಿಕೆ ನನಗೆ ನೆಮ್ಮದಿಯನ್ನೂ ಅಮಿತ ಸಂತೋಷವನ್ನೂ ಕೊಟ್ಟಿತು (ಯಂಗ್ ಇಂಡಿಯಾ. ೨೨-೧೨-೨೭)

ಯೇಸು ಕೇವಲ ಕ್ರೈಸ್ತಮತೀಯರಿಗೆ ಮಾತ್ರವಲ್ಲ, ಇಡೀ ಜಗತ್ತಿಗೆ, ಎಲ್ಲ ಜನಾಂಗಗಳಿಗೆ, ಜನಗಳಿಗೆ ಸೇರಿದ ವ್ಯಕ್ತಿ, ಇದು ನನ್ನ ನಂಬಿಕೆ ವ್ಯಾಟಿಕನ್ ಅರಮನೆಯಲ್ಲಿರುವ ಕ್ರೂಶಾರೋಹಿತ ಕ್ರೈಸ್ತನ ಜೀವಂತ ಪುತ್ಥಳಿಗೆ ನಮಿಸಲು ಶಕ್ತನಾದುದಕ್ಕೆ ಪ್ರತಿಯಾಗಿ ನಾನು ಏನನ್ನು ತಾನೆ ಈಯಲಾರೆ? ಎಂದಿಗೂ ಅಳಿಯದ ಆ ದುರಂತದ ಪರಿಸರವನ್ನು ಬಿಟ್ಟು ಬರುವುದು ನನಗೊಂದು ವಿಚ್ಛೇದನವೆನ್ನಿಸಿತು ವ್ಯಕ್ತಿಗಳಂತೆ ಜನಾಂಗಗಳೂ ಶಿಲುಬೆಯಂದದ ಪರಮ ಸಂಕಟದ ಮೂಲಕವೇ ನಿರ್ಮಾಣವಾಗಬೇಕೆಂಬುದನ್ನು ಅಲ್ಲಿ ಒಮ್ಮೆಗೇ ಕಂಡೆ ಹರ್ಷ ಬರುವುದು ಪರರ ಮೇಲೆ ನೋವನ್ನು ಹೊರಿಸುವುದರಿಂದಲ್ಲ, ಆತ್ಮಸಂತೋಷದಿಂದ ನೋವನ್ನು ನಾವೇ ಉಣ್ಣುವುದರಿಂದ

**(ಶಿಲುಬೆಗೇರಿದ ಕ್ರೈಸ್ತನ ಚಿತ್ರವೊಂದನ್ನು ರೋಮಿನಲ್ಲಿ ನೋಡಿದಾಗ ಗಾಂಧೀಜೀ ಹೇಳಿದ ಮಾತು ಇದು)**

## ಬೌದ್ಧಧರ್ಮ

ಬುದ್ಧನಿಗೆ ದೇವರಲ್ಲಿ ನಂಬಿಕೆ ಇರಲಿಲ್ಲವೆಂದು ಅಸಂಖ್ಯಾತ ವಾದಗಳಲ್ಲಿಯೂ ಬುದ್ಧಧರ್ಮದ ತಿರುಳನ್ನು ತೋರಿಸುವೆವೆಂದು ಹೇಳಿಕೊಳ್ಳುವ ಗ್ರಂಥಗಳಲ್ಲಿಯೂ ನಾನು ಕೇಳಿದ್ದೇನೆ ನನ್ನ ನಮ್ರ ಅಭಿಪ್ರಾಯದಲ್ಲಿ ಇದು ಬುದ್ಧನ ಬೋಧೆಯ ಪ್ರಧಾನಾಂಶಕ್ಕೆ ವಿರುದ್ಧವಾದುದು ಈ ತಪ್ಪು ತಿಳಿವಳಿಕೆಗೆ ಕಾರಣ ಇದು ತನ್ನ ತಲೆಮಾರಿನಲ್ಲಿ ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಎಲ್ಲ ಕ್ಷುದ್ರ ವಿಷಯಗಳನ್ನೂ ಆತ ನಿರಾಕರಣೆ ಮಾಡಿದ್ದ. ದೇವರೆಂಬ ಪುರುಷ ಅಸೂಯಾಭರಿತ, ತನ್ನ ಕರ್ಮಗಳಿಗಾಗಿ ಪರಿತಾಪಪಡುವ, ಭೂಲೋಕದ ರಾಜರುಗಳಂತೆ ಪ್ರಲೋಭನೆಗಳಿಗೂ ಲಂಚಗಳಿಗೂ ವಶಗೊಳ್ಳುವ. ಕೆಲವರ ಮೇಲೆ ಅವನಿಗೆ ಪಕ್ಷಪಾತ— ಇಂಥ ಭಾವನೆ

ಗಳನ್ನು ಆತ ನಿರಾಕರಣೆ ಮಾಡಿದ್ದು ನಿಸ್ಸಂದೇಹ. ದೇವರೆಂಬಾತ ಸಂತೋಷಗೊಳ್ಳುವುದಕ್ಕೆ, ತೃಪ್ತಿಗೊಳ್ಳುವುದಕ್ಕೆ ಜೀವಂತ ಪ್ರಾಣಿಗಳ— ತಾನೇ ಸೃಷ್ಟಿಸಿದ ಪ್ರಾಣಿಗಳ— ರಕ್ತ ಬೇಕು ಎನ್ನುತ್ತಾನೆಂಬುದನ್ನು ಕೇಳಿದಾಗ ಬುದ್ಧನ ಇಡೀ ಅಂತರಾತ್ಮ ಮಹದಾಗ್ರಹದಿಂದ ಕುದಿಸೆದ್ದಿತು. ಆದ ದರಿಂದ ಆತನು ದೇವರನ್ನು ಸಮುನ್ನಾದ ಜಾಗದಲ್ಲಿ ಪುನಃ ಸ್ಥಾಪಿಸಿದ. ಆ ಶ್ವೇತಸಿಂಹಾಸನದ ಮೇಲೆ ಕುಳಿತಿದ್ದಾನೆಯೋ ಎಂದು ಆ ಕಾಲದಲ್ಲಿ ತೋರುತ್ತಿದ್ದ ದುರಾಕ್ರಮಣಗಾರನನ್ನು ಕಳದೂಡಿದ. ವಿಶ್ವವನ್ನು ಆಳುವ ನೀತಿಶಕ್ತಿಗೆ ಸನಾತನವೂ ನಿರ್ವಿಕಾರವೂ ಆದ ಅಸ್ತಿತ್ವವುಂಟೆಂದು ಪುನಃ ಘೋಷಿಸಿ, ಒತ್ತಿ ಹೇಳಿದ. ಈ ನೀತಿ ನಿಯಮ ಸ್ವತಃ ದೇವರೆಂದು ಹೇಳಲು ಅನುಮಾನಪಡಲಿಲ್ಲ.

ದೇವರ ಕಟ್ಟಳೆಗಳು ಸನಾತನ, ನಿರ್ವಿಕಾರ, ಅವು ದೇವರಿಂದ ಪ್ರತ್ಯೇಕವಲ್ಲ. ದೇವರ ಪರಿಪೂರ್ಣತ್ವಕ್ಕೆ ಅವೊಂದು ಅನಿವಾರ್ಯ ಲಕ್ಷಣ. ಈ ಕಾರಣದಿಂದ ಬುದ್ಧ ದೇವರನ್ನು ನಂಬದೆ ಸುಮ್ಮನೆ ನೀತಿನಿಯಮದಲ್ಲಿ ನಂಬಿದ್ದನೆಂಬ ದೊಡ್ಡ ಅಪಾರ್ಥ ಉಂಟಾಯಿತು. ದೇವರ ವಿಷಯ ದಲ್ಲಿಯೇ ಹೀಗೆ ಭ್ರಾಂತಿ ಉಂಟಾದ ಕಾರಣದಿಂದ ಶ್ರೇಷ್ಠ ಪದವಾದ ನಿರ್ವಾಣವನ್ನು ಗ್ರಹಿಸುವ ವಿಚಾರದಲ್ಲಿಯೂ ಭ್ರಾಂತಿ ಮಾಡಿತು. ನಿರ್ವಾಣ ಸರ್ವನಾಶವಲ್ಲವೆಂಬುದು ಖಂಡಿತ. ಬುದ್ಧನ ಜೀವನದ ಮುಖ್ಯಾಂಶವನ್ನು ನಾನು ಅರಿಯಲಾಗಿರುವಂತೆ, ನಿರ್ವಾಣದ ಅರ್ಥ ನಮ್ಮಲ್ಲಿರುವ ಸಮಸ್ತ ನೀಚತ್ವದ, ಸಮಸ್ತ ದುಷ್ಟಭಾವನೆಯ, ಸಮಸ್ತ ಮಲಿನತೆಯ ಮತ್ತು ಮಲಿನಗೊಳ್ಳಬಲ್ಲ ಅಂಶದ ಸರ್ವನಾಶ. ಸಮಾಧಿಯ ಕಪ್ಪಾದ ನಿರ್ಜೀವ ಮೌನವಲ್ಲ ನಿರ್ವಾಣ, ಅದು ಜೀವಂತ ಶಾಂತಿ, ತನ್ನನ್ನು ಕುರಿತು ಸ್ವಯಂಪ್ರಜ್ಞೆಯುಳ್ಳ, ವಿಶ್ವಾತ್ಮದಲ್ಲಿ ತನ್ನ ನಿವಾಸವನ್ನು ಕಂಡುಕೊಂಡಿದ್ದೇನೆಂಬ ಅರಿವುಳ್ಳ ಆತ್ಮದ ಸಜೀವ ಸೌಖ್ಯ.

(ಯಂಗ್ ಇಂಡಿಯಾ. ೨೪-ೱ-೨೭)

## ಇಸ್ಲಾಂಧರ್ಮ

ಕ್ರೈಸ್ತಧರ್ಮ, ಬೌದ್ಧಧರ್ಮ, ಹಿಂದೂಧರ್ಮಗಳ ಹಾಗೆಯೇ ಇಸ್ಲಾಂಧರ್ಮವೂ ಶಾಂತಿಯ ಧರ್ಮವೆಂದೇ ನನ್ನ ಪರಿಗಣನೆ. ಆ ವಿಚಾರ

ದಲ್ಲಿ ತರತಮವೆಂಬ ಅಂತರ ಇರಬಹುದು, ಆದರೂ ಶಾಂತಿಯೇ ಈ ಧರ್ಮಗಳ ಗುರಿ ಇಸ್ಲಾಂಧರ್ಮದ ಅನುಯಾಯಿಗಳು ಕತ್ತಿಯನ್ನು ಬಳಸುವುದರಲ್ಲಿ ಧಾರಾಳಿಗಳೆಂದು ನನ್ನ ಅಭಿಪ್ರಾಯವನ್ನು ತಿಳಿಸಿದ್ದೇನೆ. ಆದರೆ ಅದು ಕೊರಾನ್ ಬೋಧೆಯ ಪರಿಣಾಮವಲ್ಲ ನನ್ನ ಮನಸ್ಸಿಗೆ ತೋರುವಂತೆ, ಅದು ಇಸ್ಲಾಂ ಹುಟ್ಟಿಬಂದ ಸನ್ನಿವೇಶದ ಫಲವೆ ಹಾಗೆಯೇ ಕ್ರೈಸ್ತಮತಕ್ಕೆ ಆಕ್ಷೇಪಣೆಯಾಗಿ ರಕ್ತಪೂರಿತ ಚರಿತ್ರೆ ಅದಕ್ಕೆ ಇದ್ದರೆ ಕಾರಣ ಯೇಸುವಿನ ಲೋಪವಲ್ಲ, ಅದು ಹರಡಿದ ಪ್ರಪಂಚ ಅವನ ಘನಬೋಧೆಗೆ ಓಗೊಡುವಂಥದಾಗಿರಲಿಲ್ಲ

## ಭಗವಂತನ ಆಲಯದಲ್ಲಿ ನಾನಾ ಕೋಣೆಗಳಿವೆ

ವಿವಿಧ ಧರ್ಮಗಳಿರುವವರಿಗೆ ಒಂದೊಂದಕ್ಕೂ ಯಾವುದೋ ಒಂದು ಬಾಹ್ಯ ಚಿಹ್ನೆ ಆವಶ್ಯಕ ಆದರೆ ಬಾಹ್ಯ ಚಿಹ್ನೆ ಮೂಢಪೂಜೆಯ ಪ್ರತಿಮೆ ಯಾದಲ್ಲಿ ನಮ್ಮ ಧರ್ಮ ಇತರ ಧರ್ಮಗಳಿಗಿಂತ ಹಿರಿದೆಂದು ಸಾಧಿಸುವ ಉಪಾಯವಾದಲ್ಲಿ, ಅದು ನಿರಾಕರಣೆಗೆ ಮಾತ್ರ ಯೋಗ್ಯ (ಆತ್ಮಕಥೆ)

ಅವುಗಳ ಅನುಯಾಯಿಗಳನ್ನು ತಾನೇ ಸೃಷ್ಟಿಮಾಡಿರುವಂತೆ ವಿವಿಧ ಧರ್ಮಗಳಿಗೂ ದೇವರೇ ಸೃಷ್ಟಿಕರ್ತ ನನ್ನ ನೆರೆಯವನ ಧರ್ಮ ನನ್ನದ ಕ್ಕಿಂತ ಕೀಳೆಂಬ ಭಾವನೆಗ ಅಂತರಂಗದಲ್ಲಿ ಹೇಗೆತಾನೆ ಗುಟ್ಟಾಗಿ ಆಶ್ರಯ ಕೊಟ್ಟೇನು ? ತನ್ನ ಧರ್ಮವನ್ನು ಬಿಟ್ಟು ನನ್ನದನ್ನು ಅವ ಸ್ವೀಕರಿಸಲೆಂದು ಹೇಗ ತಾನೆ ಆಶಿಸೇನು ? ಅವನಿಗೆ ನಿಜವಾದ ನೆಚ್ಚಿನ ಸ್ನೇಹಿತನಾಗಿರು ವಾಗ, ತನ್ನ ಧರ್ಮದಲ್ಲಿಯೇ ಅವನಿದ್ದುಕೊಂಡು ಪರಿಪೂರ್ಣನಾಗಲೆಂದು ಮಾತ್ರ ಆಶಿಸಿ ಹಾರೈಸೇನು. ದೇವರ ಆಲಯದಲ್ಲಿ ನಾನಾ ಕೋಣೆಗಳಿವೆ, ಅವೆಲ್ಲವೂ ಸಮಾನವಾಗಿ ಪವಿತ್ರ. (ಹರಿಜನ. ೨೦ ೪ ೩೪ )

ನನ್ನ ಕ್ರೈಸ್ತ ಸ್ನೇಹಿತರು ಹಿಂದೂ ಧರ್ಮ ಅಸತ್ಯವೆಂದು ಈಗ ಬಹಿ ರಂಗವಾಗಿ ಹೇಳದಿದ್ದರೂ ಹೇಳಿದೆವೆಂದು ಒಪ್ಪಿಕೊಳ್ಳದಿದ್ದರೂ, ಹಿಂದೂ ಧರ್ಮ ಒಂದು ತಪ್ಪೆಂದು, ತಾವು ನಂಬುವ ಕ್ರೈಸ್ತ ಧರ್ಮವೊಂದೇ ನಿಜ ವಾದ ಧರ್ಮವೆಂಬ ಭಾವನೆಗೆ ತಮ್ಮ ಹೃದಯದಲ್ಲಿ ಎಡೆಕೊಟ್ಟಿರುವರೆಂಬ ಭೀತಿ ನನಗಿದೆ ಹಿಂದೂ ಧರ್ಮವೊಳಕ್ಕೆ ನುಸುಳಿ ಬಂದಿರುವ ಅಸ್ಪೃ ಶ್ಯತೆ ಇತ್ಯಾದಿ ನಾನಾ ದೋಷಗಳ ಮೇಲೆ ಇವರು ಮಾಡುವ ದಾಳಿ ನಮಗೆ

ಅರ್ಥವಾಗುತ್ತದೆ  ನಮ್ಮ ಧರ್ಮವನ್ನು ಪ್ರವೇಶಿಸಿರುವ ದುರ್ವ್ಯಾಪಾರಗಳನ್ನು ತೊಡೆದುಹಾಕಿ, ಅದನ್ನು ಶುದ್ಧಿಗೊಳಿಸಲು ನಮಗೆ ಸಹಾಯವಿತ್ತರೆಂದು ಅವರು ರಚನಾತ್ಮಕ ಕಾರ್ಯವನ್ನು ಎಸಗಿದಂತಾಗುತ್ತದೆ, ಅದನ್ನು ಕೃತಜ್ಞತೆಯಿಂದ ಸ್ವೀಕರಿಸಬಹುದು  ಆದರೆ, ಅವರ ಇಂದಿನ ಪ್ರಯತ್ನವನ್ನು ಪರಿಶೀಲಿಸಿದರೆ ಹಿಂದೂ ಧರ್ಮವನ್ನು ಬುಡಮೇಲಾಗಿ ಕಿತ್ತೊಗೆದು ಅದಕ್ಕೆ ಬದಲಾಗಿ ಅನ್ಯಧರ್ಮವನ್ನು ಸ್ಥಾಪಿಸಬೇಕೆಂಬುದೇ ಅವರ ಉದ್ಯಮ  ಅಲ್ಲಿ ಇಲ್ಲಿ ತುಂಬ ಸರಿಪಡಿಸಬೇಕಾದ ಒಂದು ಮನೆಯಲ್ಲಿ ವಾಸಮಾಡುತ್ತಿರುವವನಿಗೆ ಅದು ಪಸಂದಾಗಿಯೂ ವಾಸಯೋಗ್ಯವಾಗಿಯೂ ತೋರಿ ರುಚಿಕರವಾಗಿದ್ದರೂ ಅದನ್ನು ಪೂರ್ತಿ ಹಾಳುಮಾಡುವ ಪ್ರಯತ್ನದಂತಿದೆ  ಹುಳುಕು ಮುರುಕನ್ನು ಹೇಗೆ ಸರಿಪಡಿಸಬೇಕೆಂದು ತೋರಬಲ್ಲವರಿಗೆ ತಾವೇ ಸರಿಪಡಿಸಿಕೊಡುವುದಕ್ಕೆ ಮುಂದೆ ಬರುವವರಿಗೆ, ಆತ ಸ್ವಾಗತ ನೀಡುವುದರಲ್ಲಿ ಅಚ್ಚರಿಯಿಲ್ಲ  ಆದರೆ, ತನಗೂ ತನ್ನ ಪೂರ್ವಜರಿಗೂ ವಾಸಸ್ಥಾನವಾಗಿ ಬಹಳ ಉಪಯುಕ್ತವಾಗಿರುವ ಆ ಮನೆಯನ್ನು ಧ್ವಂಸಗೈಯಲು ಹಂಬಲಿಸುವವರನ್ನು ಆತ ಉಗ್ರವಾಗಿ ಪ್ರತಿಭಟಿಸುವುದು ಅತಿ ಉಚಿತ, ಅದನ್ನು ಇನ್ನುಮುಂದೆ ಸರಿಪಡಿಸಲು ಅಸಾಧ್ಯ ಅದರಲ್ಲಿ ಮಂದಿ ವಾಸಮಾಡಲಾರರೆಂದೂ ಮನೆಯವನೇ ಮನಗಂಡರೆ ಆಗ ವಿಚಾರ ಬೇರೆ  ಕ್ರೈಸ್ತ ಲೋಕ ಹಿಂದೂಧರ್ಮದ ವಿಷಯದಲ್ಲಿ ಅಂಧ ಭಾವನೆಯಿಂದ ಕೂಡಿದ್ದರೆ “ ಧರ್ಮಗಳ ಪರಿಷತ್ತು ” “ ಅಂತರರಾಷ್ಟ್ರೀಯ ಭ್ರಾತೃಕೂಟ ” ಮೊದಲಾದುವು ಟೊಳ್ಳು ಮಾತುಗಳು  ಈ ಎರಡು ಪದಗುಚ್ಛಗಳಿಗೂ ಪದವಿಯಲ್ಲಿ ಸಮಾನಸ್ಕಂಧತೆ ಮತ್ತು ಸಮಾನ ವೇದಿಕೆ ಪೂರ್ವಭಾವಿಯಾದ ತತ್ವ  ಉಚ್ಚ ನೀಚರಿಗೂ ಬೆಳಕನ್ನು ಕಂಡವರಿಗೂ ಕಾಣದವರಿಗೂ ಸಿದ್ಧಿ ಹೊಂದಿದವರಿಗೂ ಹೊಂದದವರಿಗೂ, ಮೇಲು ಕುಲದವನಿಗೂ ಕೀಳು ಕುಲದವನಿಗೂ, ಸವರ್ಣದವನಿಗೂ ವರ್ಣಭ್ರಷ್ಟನಿಗೂ ‘ ಸಮಾನವೇದಿಕೆ ’ ಇರಲಾರದು  ನನ್ನ ಸಾದೃಶ್ಯದಲ್ಲಿ ಕೊರತೆ ಇರಬಹುದು, ರೇಗಿಸುವಂತೆ ಕೂಡ ಅದು ಕೇಳಿಬರಬಹುದು  ನನ್ನ ತರ್ಕ ಕುಂಟಾಗಿರಬಹುದು  ಆದರೆ, ನನ್ನ ಸಿದ್ಧಾಂತಕ್ಕೆ ಚ್ಯುತಿಯಿಲ್ಲ

(ಹರಿಜನ. ೧೩-೩-೩೭)

ಹಿಂದೂ ಧರ್ಮದವ ಉತ್ತಮ ಹಿಂದೂ ಆಗುವುದಕ್ಕೆ, ಮುಸಲ್ಮಾನ ಉತ್ತಮ ಮುಸಲ್ಮಾನನಾಗುವುದಕ್ಕೆ, ಕ್ರಿಶ್ಚಿಯನ್ನ ಉತ್ತಮ ಕ್ರಿಶ್ಚಿಯನ್ನನಾಗುವುದಕ್ಕೆ, ಸಹಾಯವನ್ನೆಸಗುವುದೇ ಧರ್ಮ ಭ್ರಾತೃವರ್ಗದ ಗುರಿಯಾಗಿರಬೇಕು ತಿರಸ್ಕಾರವನ್ನು ಕೂಡಿಕೊಂಡ ಸಹಿಷ್ಣುತೆಯ ಭಾವ ಅಂತರ ರಾಷ್ಟ್ರೀಯ ಭ್ರಾತೃವರ್ಗದ ಧ್ಯೇಯಕ್ಕೆ ವಿರುದ್ಧವಾದುದು

(ಸಬರಮತಿ ಅಂತರ ರಾಷ್ಟ್ರೀಯ ಧರ್ಮಗಳ ಸಮ್ಮೇಳನ ವರದಿ)

## ಅಧ್ಯಾಯ [illegible].

# ನನ್ನ ಧರ್ಮದ ಅನುಷ್ಠಾನ

### (ಪ್ರೇಮಧರ್ಮ ಆತ್ಮತ್ಯಾಗದ ಸೇವೆಯಲ್ಲಿ ರೂಪಗೊಳ್ಳುವಿಕೆ)

ಭಾರತದಲ್ಲಿ ಬಹು ಕನಿಷ್ಠರೆನಿಸಿದವರ ದುಃಖದಲ್ಲಿ ನಾನು ಆತ್ಮೀಯನಾಗಬೇಕಾದರೆ, ಅಷ್ಟೇಕೆ, ಅಂಥ ಸಾಮರ್ಥ್ಯ, ಅತ್ಯಂತ ಅಲ್ಪವಾದದ್ದಾದರೂ, ನನ್ನಲ್ಲಿರುವುದಾದರೆ, ನನ್ನ ರಕ್ಷಣೆಯಲ್ಲಿರುವ ಹಸುಗೂಸುಗಳ ಪಾಸದಲ್ಲಿ ಒಂದಾಗಲು ನನಗೆ ಅವಕಾಶ ಕೊಡಿ ವಿಶೇಷ ನಮ್ರತೆಯಿಂದ ಅಂತೆನಗೆ, ಒಂದಲ್ಲ ಒಂದು ದಿನ ದೇವರ ಸತ್ಯದ ಮುಖದರ್ಶನವನ್ನು ಮಾಡುವೆನೆಂಬ ಆಸೆ ನನಗಿದೆ (ಯಂಗ್ ಇಂಡಿಯಾ. ೩-೧೨-೨೫)

ನಾನೊಂದು ತಾಯಿತಿಯನ್ನು ಕೊಡುತ್ತೇನೆ ನಿನ್ನಲ್ಲಿ ಸಂಶಯ ಮೂಡಿದಾಗ, ಸ್ವಾರ್ಥವು ನಿನ್ನನ್ನು ವಿಪರೀತ ಬಾಧಿಸಿದಾಗ, ಈ ಉಪಾಯವನ್ನು ಅನುಸರಿಸು ನೀನು ನೋಡಿರಬಹುದಾದ ಅತ್ಯಂತ ಬಡವನೂ ಅತ್ಯಂತ ನಿಸ್ಸಹಾಯಕನೂ ಆದ ಮನುಷ್ಯನನ್ನು ಸ್ಮೃತಿಗೆ ತಂದುಕೊಂಡು, ಈ ಪ್ರಶ್ನೆಗಳನ್ನು ಕೇಳಿಕೊ ನೀ ಮಾಡಲಿರುವ ಕಾರ್ಯದಿಂದ ಅವನಿಗೆ ಏನಾದರೂ ಉಪಯೋಗವಾದೀತೆ? ಅವನಿಗೆ ಪ್ರಯೋಜನಕರವಾದದ್ದು ಏನಾದರೂ ದೊರೆತೀತೆ? ತನ್ನ ಬಾಳು ಅದೃಷ್ಟಗಳ ಮೇಲೆ

ಪುನಃ ಹತ್ತೋಟಿ ಪಡೆದುಕೊಳ್ಳಲು ಅವನಿಗೆ ನೆರವಾದೀತೆ ? ಬೇರೆ ಮಾತಿನಲ್ಲಿ ಹೇಳುವುದಾದರೆ, ಹೊಟ್ಟೆಯ ಹಸಿವೇ ಅಲ್ಲದೆ, ಧರ್ಮದ ಹಸಿವಿನಲ್ಲಿಯೂ ಕಂಗೆಟ್ಟಿರುವ ನಮ್ಮ ಲಕ್ಷೋಪಲಕ್ಷ ದೇಶಬಾಂಧವರನ್ನು ಸ್ವರಾಜ್ಯ ಅಥವಾ ಆತ್ಮನಿಗ್ರಹದ ದಾರಿಗೆ ಒಯ್ದೀತೆ ? ಆಗ ನಿನ್ನ ಸಂಶಯಗಳೂ ನಿನ್ನ ಸ್ವಾರ್ಥವೂ ಕರಗಿಹೋಗುವುದನ್ನು ಕಾಣುವೆ

(ಗೆಳೆಯರೊಬ್ಬರಿಗೆ ಬರೆದ ಪತ್ರದಿಂದ)

ದೀನಸೇವೆಯೇ ಧರ್ಮ ದೀನರ ಮತ್ತು ಪೀಡೆಗೊಂಡವರ ರೂಪದಲ್ಲಿ ದೇವರು ನಮಗೆ ಪ್ರತ್ಯಕ್ಷನಾಗುತ್ತಾನೆ ಸೇವಾಧರ್ಮದ ಆಚರಣೆಯನ್ನು ಬಿಟ್ಟು ನಾನು ಅಹಿಂಸೆಯನ್ನು ಆಚರಿಸಲಾರೆ, ಅಹಿಂಸಾಧರ್ಮವನ್ನು ಆಚರಿಸದೆ ಸತ್ಯವನ್ನು ನಾನು ಕಾಣಲಾರೆ ಸತ್ಯವಿಲ್ಲದೇ ಬೇರೊಂದು ಧರ್ಮವಿಲ್ಲ (ಯಂಗ್ ಇಂಡಿಯಾ. ೧೪-೩-೨೪)

ದೃಢಕಾಯದ ಯಾವೊಬ್ಬ ಸ್ತ್ರೀ ಪುರುಷನಿಗೇ ಆಗಲೀ ಆಹಾರ ಉದ್ಯೋಗ ಎಂದಿನವರೆಗೆ ಇಲ್ಲದೇ ಹೋಗುವುದೋ ಅಂದಿನವರೆಗೂ ನಾವು ವಿಶ್ರಾಂತಿ ಪಡೆಯುವುದಕ್ಕೂ ಚೊಕ್ಕ ಭೋಜನ ಮಾಡುವುದಕ್ಕೂ ನಾಚಿಕೊಳ್ಳಬೇಕು (ಯಂಗ್ ಇಂಡಿಯಾ ೫-೨-೨೫)

ಆದ್ದರಿಂದ, ಮೂವತ್ತು ಕೋಟಿ ಮಂದಿ ನಿರುದ್ಯೋಗಿಗಳಾಗುವುದು, ಉದ್ಯೋಗ ಸಿಕ್ಕದೆ ದಿನದಿನವೂ ಹತ್ತಾರು ಲಕ್ಷ ಮಂದಿ ಪತಿತರಾಗುವುದು ಆತ್ಮಗೌರವವನ್ನು ಕಳೆದುಕೊಳ್ಳುವುದು ಎಂಥ ಘೋರ ವಿಪತ್ತೆಂಬುದನ್ನು ವಿಭಾವಿಸಿಕೊಳ್ಳಿ ಕಣ್ಣುಗಳಲ್ಲಿ ಒಂದಿಷ್ಟೂ ಹೊಳಪೇ ಇಲ್ಲದೆ, ಅನ್ನವೊಂದೇ ತಮ್ಮ ದೇವರೆಂದು ತಿಳಿದಿರುವ, ಆ ಕ್ಷುಧಾತುರ-ಲಕ್ಷಗಳ ಮುಂದೆ ದೇವರ ಸಂದೇಶವನ್ನು ನಾನು ಇಡುವುದೇಕೆ ! ಒಂದು ಪವಿತ್ರ ಕಾರ್ಯದ ಸಂದೇಶವನ್ನು ಅವರ ಮುಂದೆ ನಾನು ಇಟ್ಟಲ್ಲಿ ದೇವರ ಸಂದೇಶವನ್ನು ಇಟ್ಟಂತೆ ನೊಗಸಾಗಿ ಹೊತ್ತುಕೂಟ ತಿಂದು ಹೆಚ್ಚು ಸೊಗಸಿನ ಭೋಜನವನ್ನು ನಿರೀಕ್ಷಿಸುತ್ತಾ ಇಲ್ಲಿ ಕುಳಿತುಕೊಂಡು ದೇವರ ವಿಷಯವಾಗಿ ಹರಟುವುದು ನಮಗೆ ಚೆಲುವೆಂದು ಎನ್ನಿಸಬಹುದಾದರೂ, ನೆಟ್ಟಗೆ ಎರಡು ಊಟಕ್ಕೆ ಗತಿಯಿಲ್ಲದ ಲಕ್ಷಾಂತರ ಜನರಿಗೆ ದೇವರನ್ನು ಕುರಿತು ನಾನು ಹೇಗೆ ಮಾತಾಡಲಿ ? ರೊಟ್ಟಿ ತುಪ್ಪವೊಂದೇ ಅವರಿಗೆ ದೇವರ ಅವತಾರ

(ಯಂಗ್ ಇಂಡಿಯಾ, ೧೫-೧೦-೩೧)

ಕಡುಬಡವರೊಂದಿಗೆ ಒಂದಾಗಿ ಸೇವೆ ಸಲ್ಲಿಸಿದ ಹೊರತು ಆತ್ಮಸಾಕ್ಷಾತ್ಕಾರ ಸಿದ್ಧಿಸದೆಂದು ನನ್ನ ನಿರ್ಧಾರ

## ತ್ಯಾಗ

ಮಾನವ ದೇಹ ಬಂದಿರುವುದು ಸೇವೆಗೊಂದಕ್ಕೆಂದೇ, ಭೋಗಲೋಲುಪತೆಗಲ್ಲ ಸುಖ ಬಾಳಿನ ಗುಟ್ಟು ವಿರಕ್ತಿಯಲ್ಲಿ ಅಡಗಿದೆ ವಿರಕ್ತಿಯೇ ಬಾಳು, ಭೋಗಲೌಲ್ಯದಿಂದ ಬರುವುದು ಸಾವು ಆದುದರಿಂದ, ಫಲದ ಕಡೆಗೆ ಲಕ್ಷ್ಯಕೊಡದೆ ಸೇವೆಯನ್ನು ಸಲ್ಲಿಸುತ್ತಾ ೧೨೫ ವರುಷಗಳು ಬದುಕುವ ಹಕ್ಕು ಪ್ರತಿಯೊಬ್ಬನಿಗೂ ಉಂಟು, ಬದುಕುವ ಆಕಾಂಕ್ಷೆ ಇರಬೇಕು ಅಂಥ ಬಾಳು ಸೇವೆಯೊಂದಕ್ಕೇ ಪೂರ್ತಿ ಮುಡಿಪಾಗಬೇಕು ನಿಷ್ಕಾಮ ಸೇವೆಗಾಗಿ ಮಾಡಿದ ತ್ಯಾಗ ಒಂದು ಅವರ್ಣನೀಯ ಆನಂದ, ಅದನ್ನು ನಮ್ಮಿಂದ ಯಾರೂ ಕಿತ್ತುಕೊಳ್ಳಲಾರರು ಏಕೆಂದರೆ, ಆ ಅಮೃತ ಅಂತರಂಗದಿಂದ ಉಕ್ಕಿ ಬಾಳನ್ನು ಪರಿಪೋಷಿಸುತ್ತದೆ ಇದರಲ್ಲಿ ಮಾನಸಿಕ ಕ್ಲೇಶಕ್ಕಾಗಲೀ ಅಸಹನೆಗಾಗಲೀ ತೆರಪಿಲ್ಲ ಇಂಥ ಆನಂದವಿರದೆ ದೀರ್ಘಾಯುಷ್ಯ ಅಸಾಧ್ಯ ಒಂದು ವೇಳೆ ಸಾಧ್ಯವಾದರೂ ಅದರಲ್ಲಿ ಹುರುಳಿರುವುದಿಲ್ಲ (ಹರಿಜನ. ೨೪-೨-೪೬)

ಆದ್ದರಿಂದ ನಮ್ಮ ಈ ದೇಹ ನಮಗೆ ದತ್ತವಾಗಿರುವುದು ಸಕಲ ಸೃಷ್ಟಿಯ ಸೇವೆಯನ್ನು ನಾವು ಮಾಡುವುದಕ್ಕೋಸ್ಕರ ಮಾತ್ರ, ಕರಾರಿನ ಗುಲಾಮ ತಾನು ಜೀತಗೈಯುವ ಯಜಮಾನನಿಂದ ಹೇಗೆ ಅನ್ನ ಬಟ್ಟೆ ಮುಂತಾದುವನ್ನು ಪಡೆಯುವನೋ ಹಾಗೆ ವಿಶ್ವೇಶ್ವರನಿಂದ ನಮಗೆ ಯಾವ ದಾನ ಕೊಡಲ್ಪಡುವುದೋ ಅದನ್ನು ಕೃತಜ್ಞತೆಯಿಂದ ನಾವು ಸ್ವೀಕರಿಸಬೇಕು ಲಭಿಸಿದುದನ್ನು ಕೊಡುಗೆ ಎಂದೇ ಭಾವಿಸಬೇಕು- ಋಣ ತೀರಿಸಿದುದಕ್ಕಾಗಿ ಯಾವ ಪ್ರತಿಫಲಕ್ಕೂ ಹಕ್ಕಿಲ್ಲ ಆದ್ದರಿಂದ ಯಾವ ಪ್ರಸಾದವೂ ನಮಗೆ ದೊರಕದೇ ಹೋದರೆ ಸ್ವಾಮಿಯನ್ನು ನಾವು ದೂಷಿಸುವಂತಿಲ್ಲ ನಮ್ಮ ದೇಹ ಆತನ ಅಧೀನ, ಅವನ ಸಂಕಲ್ಪದಂತೆ ಅದು ಬೆಳೆಯುತ್ತದೆ ಅಥವಾ ಬೀಸಾಡಲ್ಪಡುತ್ತದೆ ಈ ಸಂಗತಿಯಿಂಧ ದೂರಿಗಾಗಲೀ, ದಯಾಭಿಕ್ಷೆಗಾಗಲೀ ಆಸ್ಪದವಿಲ್ಲ. ಅದಕ್ಕೆ ಬದಲು ದೇವರ ವ್ಯವಸ್ಥೆ

ಯಲ್ಲಿ ನಮಗೆ ಯುಕ್ತವಾದ ಸ್ಥಾನವಾವುದೆಂದು ನಾವು ಅರಿತುಕೊಂಡರೆ ಅದೇ ಸ್ವಾಭಾವಿಕವೂ, ಅಪೇಕ್ಷಣೀಯವೂ, ಹರ್ಷದಾಯಕವೂ ಆದ ಸ್ಥಿತಿ ಈ ಬಗೆಯ ಪರಮಾನಂದವನ್ನು ನಾವು ಅನುಭವಿಸಬೇಕಾದರೆ, ಬಲವಾದ ನಂಬಿಕೆ ಆವಶ್ಯಕ "ನಿನಗಾಗಿ ಕೊಂಚ ಕ್ಲೇಶವನ್ನೂ ಹಚ್ಚಿಕೊಳ್ಳಬೇಡ, ಎಲ್ಲ ಕ್ಲೇಶವನ್ನೂ ದೇವರಿಗೆ ಬಿಡು" ಇದು ಸರ್ವಧರ್ಮಗಳ ಆಣತಿಯೆಂದು ತೋರುತ್ತದೆ

ಇದನ್ನು ಕೇಳಿ ಯಾರೂ ಅಂಜಬೇಕಾಗಿಲ್ಲ ಯಾವಾತ ನಿರ್ಮಲವಾದ ಅಂತರ್ಯದಿಂದ ಸೇವೆಗೆ ತನ್ನನ್ನು ಧಾರೆಯೆರೆದುಕೊಳ್ಳುವನೋ ಆತ ಅದರ ಅಗತ್ಯವನ್ನು ದಿನದಿನಕ್ಕೂ ಹೆಚ್ಚು ಹೆಚ್ಚಾಗಿ ಮುಂದಟ್ಟು ಮಾಡಿಕೊಂಡು ತನ್ನ ನಂಬಿಕೆಯಲ್ಲಿ ಹೆಚ್ಚು ಹೆಚ್ಚು ಶ್ರೀಮಂತನಾಗುವನು ಸ್ವಂತ ಯೋಗಕ್ಷೇಮ ತ್ಯಜಿಸಲಾರದ ಹುಟ್ಟಿನ ಕಟ್ಟುನಿಟ್ಟುಗಳನ್ನು ಅರ್ಥಮಾಡಿಕೊಳ್ಳದ ವ್ಯಕ್ತಿ ಸೇವಾಪಥದಲ್ಲಿ ಹೆಜ್ಜೆಯಿಡುವುದು ದುರ್ಲಭ ತಿಳಿದೋ ತಿಳಿಯದೆಯೋ ನಾವೆಲ್ಲರೂ ಒಂದಲ್ಲ ಒಂದು ಬಗೆಯ ಸೇವೆಯನ್ನು ಸಲ್ಲಿಸುತ್ತಲೇ ಇರುತ್ತೇವೆ ದೀರ್ಘಾಲೋಚನೆಯಿಂದ ಆ ಸೇವೆಯನ್ನು ಸಲ್ಲಿಸುವ ಅಭ್ಯಾಸ ಗಳಿಸಕೊಂಡರೆ ನಮ್ಮ ಸೇವಾಕಾಂಕ್ಷೆ ಕ್ರಮವಾಗಿ ಪುಷ್ಟಗೊಂಡು ನಮಗೆ ಮಾತ್ರವಲ್ಲದೇ ಸುತ್ತಣ ಲೋಕಕ್ಕೆಲ್ಲ ಸೌಖ್ಯವನ್ನುಂಟು ಮಾಡುವುದಕ್ಕೆ ಆಧಾರವಾದೀತು ಹಾಗೂ, ಸಜ್ಜನ ಮಾತ್ರವೇ ಅಲ್ಲ ನಾವೆಲ್ಲರೂ ಮನುಷ್ಯವರ್ಗದ ಬಳಕೆಗಾಗಿ ನಮ್ಮ ಶಕ್ತಿಸಾಮರ್ಥ್ಯಗಳನ್ನು ನಿವೇದಿಸುವುದು ಆದ್ಯ ಕರ್ತವ್ಯ ನಿಯಮ ಈ ಪರಿ ಇದ್ದರೆ ಇರುವುದು ಸುವ್ಯಕ್ತ — ಭೋಗಲಲಾಸೆಗೆ ಬಾಳಿನಲ್ಲಿ ಜಾಗವಿಲ್ಲ, ವಿರಕ್ತಿ ಅದನ್ನು ಓಡಿಸಿ ಬಿಡುತ್ತದೆ ಮಾನವನನ್ನು ಮೃಗದಿಂದ ಪ್ರತ್ಯೇಕಿಸುವುದು ವಿರಕ್ತಿಯ ಕರ್ತವ್ಯವೆಂದೇ ತಿಳಿಯುವ ಭಾವ

ಇಂಥ ಜೀವನ ನೀರಸವೆಂದೂ ಕಲಾಹೀನವೆಂದೂ ಗೃಹಸ್ಥನಿಗೆ ಅದರಲ್ಲಿ ಸ್ಥಾನವೇ ಇಲ್ಲದಂತಾಗುವುದೆಂದೂ ಕೆಲವರ ಆಕ್ಷೇಪಣೆ ಆದರ ವಿರಕ್ತಿಯೆಂದಾಗ ಪ್ರಪಂಚವನ್ನು ಬಿಟ್ಟುಕೊಟ್ಟು ಅರಣ್ಯಕ್ಕೆ ಹೋಗಿ ಸೇರುವುದೆಂದಲ್ಲ ತಾತ್ಪರ್ಯ ಬದುಕಿನ ಎಲ್ಲ ಕರ್ಮಗಳನ್ನು ವಿರಕ್ತಿಯ ಬುದ್ಧಿ ಆಳಬೇಕು ಅಷ್ಟೆ ಭೋಗವಿಲಾಸವಲ್ಲ ಜೀವನ, ಅದೊಂದು ಕರ್ತವ್ಯವೆಂದು

ಭಾವಿಸುವ ಗೃಹಸ್ಥ ತನ್ನ ಗೃಹಸ್ಥಾಶ್ರಮವನ್ನು ಕಳೆದುಕೊಳ್ಳುವುದಿಲ್ಲ ತ್ಯಾಗಬುದ್ಧಿಯಿಂದ ವ್ಯವಹರಿಸುವ ಒಬ್ಬ ವಣಿಕನ ಮೂಲಕ ಕೋಟ್ಯಾಂತರ ರೂಪಾಯಿ ಅತ್ತಲಿಂದತ್ತ ಇತ್ತಲಿಂದತ್ತ ಸಾಗುತ್ತಿದ್ದರೂ ನೇಮವನ್ನ ಲವನು ಅನುಸರಿಸಿದಲ್ಲಿ ತನ್ನ ಕೌಶಲ್ಯವೆಲ್ಲವನ್ನೂ ಸೇವೆಗಾಗಿಯೇ ಅರ್ಪಿಸುತ್ತಾನೆ ಅವನು ಮೋಸವೆಸಗ, ಸಟ್ಟಾವ್ಯಾಪಾರ ನಡೆಸ, ಸರಳ ಬಾಳು ಬಾಳುವ ಜೀವಿಯೊಂದನ್ನು ಗಾಯಗೊಳಿಸಲಾರ, ಯಾವ್ರೊಬ್ಬನಿಗೋ ತೊಂದರೆಯಾದೀತೆಂದು ಲಕ್ಷಾಂತರ ಹಣವನ್ನು ತಾನು ನಷ್ಟಮಾಡಿಕೊಳ್ಳುವ ಇಂಥ ಮಾದರಿಯ ವ್ಯಾಪಾರಗಾರ ಕೇವಲ ನನ್ನ ಕಲ್ಪನೆಯಲ್ಲಿ ಇದ್ದಾನೆಂದು ಅಭಿಪ್ರಾಯಪಟ್ಟು ಯಾರೂ ಓಡಕೂಡದು ಪ್ರಪಂಚದ ಸುಯೋಗದಿಂದ ಪಶ್ಚಿಮದಲ್ಲಿಯೂ ಪೂರ್ವದಲ್ಲಿಯೂ ಆ ಮಾದರಿ ಇದ್ದೇ ಇದೆ ಅಂಥ ವಣಿಕರ ಸಂಖ್ಯೆ ಬೆರಳುಗಳನ್ನು ಎಣಿಸಿದರೆ ಮುಗಿಯುತ್ತದೆ, ದಿಟ ನಿರ್ದೇಶನಕ್ಕೆ ಒಬ್ಬ ಸಿಕ್ಕಿದ ಕೂಡಲೇ ಅದು ಕೇವಲ ಕಲ್ಪನೆ ಎನ್ನುವುದು ನಿಂತುಹೋಗುತ್ತದೆ ಈ ತ್ಯಾಗಿಗಳು ತಮ್ಮ ವೃತ್ತಿಯಿಂದಲೇ ತಮ್ಮ ಹೊಟ್ಟೆ ಹೊರೆದುಕೊಳ್ಳುವುದು ನಿಸ್ಸಂದೇಹ ಆದರೆ ಹೊಟ್ಟೆಹೊರೆದುಕೊಳ್ಳುವುದು ಅವರ ಧ್ಯೇಯವಲ್ಲ ಅವರ ವೃತ್ತಿಯ ಒಂದು ಉಪಫಲ ತ್ಯಾಗಮಯ ಜೀವನ ಕಲೆಯ ಶೃಂಗ, ನೈಜ ಆನಂದ ಅದರಲ್ಲಿ ತುಂಬಿಕೊಂಡಿದೆ

ಸೇವೆ ಗೈಯುಲಿರುವವನಿಗೆ ಸ್ವಂತ ನೆಮ್ಮದಿಯನ್ನು ಕುರಿತ ಒಂದು ಯೋಚನೆಯಾದರೂ ವ್ಯರ್ಥವೆಂದೇ ಭಾವನೆ, ಅದನ್ನು ಮೇಲಿರುವ ಒಡೆಯನ ಚಿತ್ತಕ್ಕೆ-ಆತ ಅದಕ್ಕೆ ಗಮನವೀಯಲಿ ಅಥವಾ ಉಪೇಕ್ಷೆಗೈಯಲಿ ಬಿಟ್ಟುಬಿಡುತ್ತಾನೆ, ಹಾದಿಯಲ್ಲಿ ತನಗೆ ಸಿಕ್ಕಿದುದನ್ನೆಲ್ಲ ತೆಗೆದುಕೊಂಡು ಹೊರೆಮಾಡಿಕೊಳ್ಳುವುದಿಲ್ಲ, ತನಗೆ ಅತ್ಯಂತ ಆವಶ್ಯಕವಾದಷ್ಟನ್ನು ಮಾತ್ರ ಇಟ್ಟುಕೊಂಡು ಉಳಿದದ್ದನ್ನು ಬಿಟ್ಟುಬಿಡುವ ಒಂದು ಪಕ್ಷ ತಾನು ಮುಜಗರದಲ್ಲಿ ಇರಬೇಕಾಗಿಬಂದರೂ ಸಮಾಧಾನದಿಂದ ಕ್ರೋಧರಹಿತನಾಗಿ ಕ್ಷೋಭೆಗೊಳ್ಳದೆ ನಿಲ್ಲುವನು ಸದ್ಗುಣಕ್ಕಿಂತೋ ಅಂತೇ ಸೇವೆಗೆ ಸೇವೆಯೇ ಪ್ರತಿಫಲ, ಅಷ್ಟರಿಂದಲೇ ಅವನಿಗೆ ಸಂತೃಪ್ತಿ,

ಸ್ವಂತ ಇಚ್ಛೆಯಿಂದ ಪರಸೇವೆ ಎಸಗುವುದಕ್ಕೆ ಎಷ್ಟನ್ನು ಮಾಡಲು

ಶಕ್ಯವೋ ಅಷ್ಟನ್ನೂ ಮಾಡಬೇಕಾಗುತ್ತದೆ ಅದು ಮೊದಲು, ಸ್ವಂತಸೇವೆಯ ವಿಚಾರ ಆಮೇಲೆ ದಿಟವಾಗಿ ಪರಿಶುದ್ಧ ಸೇವಾಜೀವಿ ಯಾವ ಬಗೆಯ ಮಾನಸಿಕ ಸಂಕೋಚವನ್ನು ಇಟ್ಟುಕೊಳ್ಳದೆ ಮಾನವಸೇವೆಯಲ್ಲಿ ಬದ್ಧ ಮನನಾಗುತ್ತಾನೆ (ಮಂಗಳ ಪ್ರಭಾತ)

ತ್ಯಾಗಕ್ಕೆ ಬಹುಶಃ ನಾನಾ ಬಗೆ ಅವುಗಳಲ್ಲಿ ಹೊಟ್ಟೆಗಾಗಿ ದುಡಿಯು ವುದು ಒಂದೆನ್ನಬಹುದು ಎಲ್ಲರೂ ತಮ್ಮ ತಮ್ಮ ಹೊಟ್ಟೆಗೋಸ್ಕರವೇ ಆದರೂ ದುಡಿದರೆ, ಎಲ್ಲರಿಗೂ ಸಾಕಷ್ಟು ಆಹಾರವೂ ಸಾಕಷ್ಟು ವಿರಾಮವೂ ಬೇಕು ಆಗ ಪ್ರಜಾಬಾಹುಳ್ಯವೆಂಬ ಕೂಗಾಗಲೀ ರೋಗರುಜಿನವಾಗಲೀ ಇದು ನಮ್ಮ ಸುತ್ತಲೂ ಕಾಣಬರುವ ಕೊರಗಾಗಲೀ ಇರದು. ಇಂಥ ದೇಹಶ್ರಮವು ತ್ಯಾಗದ ಪರಮೋತ್ಕೃಷ್ಟ ರೂಪ ಶಾರೀರಕವಾಗಿಯೋ ಮಾನಸಿಕವಾಗಿಯೋ ಮನುಷ್ಯರು ಇದಲ್ಲದೆ ಇನ್ನೂ ಎಷ್ಟೋ ಕರ್ಮಗಳನ್ನು ಮಾಡುವುದರಲ್ಲಿ ಸಂಶಯವಿಲ್ಲ, ಆದರೆ ಅದೆಲ್ಲವೂ ಲೋಕಹಿತಕ್ಕಾಗಿ ನಂದ ಪ್ರಿಯ ಕೆಲಸವಾಗುವುದು, ಆಗ ಬಡವನೂ ಇರುವುದಿಲ್ಲ, ಶ್ರೀಮಂತನೂ ಇರುವುದಿಲ್ಲ, ಯಾರೂ ಮೇಲಲ್ಲ, ಯಾರೂ ಕೀಳಲ್ಲ, ಸ್ಪೃಶ್ಯನಿಲ್ಲ, ಅಸ್ಪೃಶ್ಯನಿಲ್ಲ

ಇದು ಸಾಧಿಸಲಸಾಧ್ಯವೆನಿಸುವ ಒಂದು ಆದರ್ಶವಿರಬಹುದು. ಆದ ಕ್ಕಾಗಿ ಶ್ರಮಿಸುವುದನ್ನು ನಾವು ಬಿಡಬೇಕಾಗಿಲ್ಲ ನಮ್ಮ ಇರವಿನ ಮೂಲ ತತ್ವವಾದ ತ್ಯಾಗಧರ್ಮವನ್ನು ಸಂಪೂರ್ಣವಾಗಿ ಪರಿಪಾಲಿಸಲಶಕ್ತರಾದರೂ ನಮ್ಮ ನಿತ್ಯದೂಟಕ್ಕೆ ಸಾಕಾಗುವಷ್ಟು ದೈಹಿಕ ಕೆಲಸವನ್ನು ನಾವು ಮಾಡಿದ್ದೇ ಆದರೆ ಆದರ್ಶದ ದಾರಿಯಲ್ಲಿ ದೂರ ಸಾಗಿದ ಹಾಗೆ

ಹಾಗೆ ನಾವು ಮಾಡಿದರೆ ನಮಗೆ ಬೇಕಾದ ವಸ್ತುಗಳು ಮಿತಿಯಾಗು ವುವು, ನಮ್ಮ ಆಹಾರ ಸರಳವಾಗುವುದು ಆಗ ಜೀವಿಸುವುದಕ್ಕೆ ಉಣ್ಣು ವೆವೇ ಹೊರತು, ಉಣ್ಣುವುದಕ್ಕಾಗಿ ಜೀವಿಸಲಾರೆವು ಈ ನಿರ್ಧಾರ ಖಚಿ ತವೆ, ಎಂದು ಸಂಶಯ ಪಡುವಾತ ತನ್ನ ಹೊಟ್ಟೆಗಾಗಿ ಬೆವರು ಹರಿಸಲಿ, ಆ ಗೆಯ್ಮೆಯ ಉತ್ಪಾದನ ಅವನಿಗೆ ಬಹಳ ರುಚಿಯಾಗಿ ತೋರುತ್ತದ ಅವನ ಆರೋಗ್ಯ ಉತ್ತಮವಾಗುತ್ತದೆ ತಾನು ಉಪಯೋಗಿಸುತ್ತಿದ್ದ ಅನೇಕ ವಸ್ತುಗಳು ಸುಮ್ಮನೆ ಹೆಚ್ಚೆಂದು ಅವ ಕಂಡುಕೊಳ್ಳುತ್ತಾನೆ

ಹೊಟ್ಟೆಗಾಗಿ ದುಡಿಯುವ ನೇಮವನ್ನು ಅನುಸರಿಸಿದರೆ ಸಮಾಜದ ವ್ಯವಸ್ಥೆಯಲ್ಲಿ ಕ್ರಾಂತಿಯುಂಟಾಗುವುದು. ಬದುಕುವುದಕ್ಕಾಗಿ ಹೋರಾಡುವ ಬದಲು ಪರಸ್ಪರ ಉಪಕಾರಕ್ಕಾಗಿ ಹೋರಾಡುವುದನ್ನು ಬಳಕೆಗೆ ತಂದಲ್ಲಿ ಮನುಷ್ಯರಿಗೆ ದೊಡ್ಡ ವಿಜಯ. ಪಾಶವೀ ಪದ್ಧತಿ ಹೋಗಿ ಮಾನವೀ ಪದ್ಧತಿ ಸ್ಥಾಪನೆಯಾಗುವುದು. (ಹರಿಜನ, ೨೯-೫-೩೫)

ಅಗತ್ಯ ಪದಾರ್ಥಗಳನ್ನು ಎಷ್ಟು ಕಡಮೆ ಮಾಡಿಕೊಳ್ಳಬಹುದೋ ಅಷ್ಟು ಮಾಡಿಕೊಂಡು ಹರ್ಷಪಡುವ ಮಾನವ ಮಾದರಿ ಭಾರತದಲ್ಲಿದ್ದಾನೆ. ಆತ ತನ್ನ ಅಂಗವಸ್ತ್ರದಲ್ಲಿ ಸ್ವಲ್ಪ ಹಿಟ್ಟು, ಚಿಟಿಕೆ ಉಪ್ಪು, ಮೂರು ನಾಲ್ಕು ಮೆಣಸಿನಕಾಯನ್ನು ಕಟ್ಟಿಕೊಂಡು ತನ್ನ ಜೊತೆ ಇಟ್ಟುಕೊಂಡಿರುವ. ಅವನ ಬಳಿ ಒಂದು ಲೋಟ, ಭಾವಿಯಿಂದ ನೀರೆಳೆಯುವ ಹುರಿ. ಇವಲ್ಲದೆ ಮತ್ತೇನೂ ಬೇಡ. ಪಾದಚಾರಿಯಾಗಿ ದಿನಕ್ಕೆ ೧೦-೧೨ ಮೈಲಿ ನಡೆಯುತ್ತಾನೆ. ಎಲ್ಲಾದರೊಂದೆಡೆ ಕೆಲವು ಪುಳ್ಳೆಗಳನ್ನು ಶೇಖರಿಸಿ ಬೆಂಕಿಹಚ್ಚಿ ಬಂದ ಕೆಂಡಗಳಲ್ಲಿ ನಾದಿದ ಹಿಟ್ಟನ್ನು ಸುಡುತ್ತಾನೆ. ಅದಕ್ಕೆ 'ಬಟಿ' ಎಂದು ಹೆಸರು. ಅದರ ರುಚಿ ಅದರಲ್ಲಿಯೂ, ಪ್ರಾಮಾಣಿಕ ಜೀತ ಮನಸ್ತೃಪ್ತಿ ಎಬ್ಬಿಸುವ ಕ್ಷುಧೆಯಲ್ಲಿದೆ. ಇಂಥ ಪುರುಷ ತನ್ನ ಸಂಗಾತಿಯಾಗಿ ಸ್ನೇಹಿತನಾಗಿ ದೇವರನ್ನು ಪಡೆದುಕೊಂಡಿದ್ದಾನೆ, ದೊರೆಗಿಂತ, ಚಕ್ರವರ್ತಿಗಿಂತ ತಾನೇ ಅಧಿಕ ಭಾಗ್ಯವಂತನೆಂದು ಅವನ ಭಾವ. ಅನ್ಯರ ಸಿರಿಗಾಗಿ ಒಳಗೊಳಗೇ ಹಂಬಲಿಸುವವರ ಮಿತ್ರನಲ್ಲ ದೇವರು. ಪ್ರತಿಯೊಬ್ಬನೂ ಈ ಉದಾಹರಣೆಯನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡು ಅನಿರ್ವಚನೀಯ ಶಾಂತಿಸೌಖ್ಯಗಳನ್ನು ತಾನೇ ಅನುಭೋಗಿಸಿ ಇತರರಿಗೂ ಅದನ್ನು ಬೀರುವುದಕ್ಕೆ ಶಕ್ತ. ಇದಕ್ಕೆ ಪ್ರತಿಯಾಗಿ, ಐಶ್ವರ್ಯಕ್ಕೆ ಹಾತೊರೆಯುವವರ ಪರಶೋಷಣೆಗೆ ಕೈಹಾಕಲೇ ಬೇಕು, ಅದಕ್ಕೆ ಯಾವ ಹೆಸರನ್ನಿಟ್ಟಾದರೂ ಕರೆಯಲಿ. ಅಂತು ಮಾಡಿದರೂ ಕೂಡ ಕೋಟ್ಯಾಂತರ ಮಂದಿ ಲಕ್ಷಾಧೀಶ್ವರರಾಗಲಾರರು. ತೃಪ್ತಿ ಮತ್ತು ಕೆಳತನಗಳಲ್ಲಿ ಮಾತ್ರ ಕುಳಿತಿದೆ ನೈಜ ಸೌಖ್ಯ. (ಹರಿಜನ, ೨೧-೭-೪೬)

ತನ್ನಲ್ಲಿ ತಾನೇ ತೃಪ್ತಿಪಟ್ಟುಕೊಳ್ಳುವ ಜಾಯಮಾನ ಯಾರನ್ನು ಆವರಿಸುತ್ತಿತೆಯೋ ಅವನಿಗೆ ಬೆಳವಣಿಗೆ ಇಲ್ಲ, ಆದ್ದರಿಂದ ಅವನು ಸ್ವಾತಂ

ತ್ರ್ಯಕ್ಕೆ ಅನರ್ಹ ನಮ್ರತೆಯಿಂದಲೂ, ಧರ್ಮಬುದ್ಧಿಯಿಂದಲೂ ಅಲ್ಪವಾದುದೊಂದು ತ್ಯಾಗವನ್ನು ಮಾಡಿದ ಮನುಷ್ಯ ಜಾಗ್ರತೆಯಾಗಿ ಅದರ ಅಲ್ಪತ್ವವನ್ನು ಮನಗಾಣುತ್ತಾನೆ ಒಮ್ಮೆ ತ್ಯಾಗಪಥದಲ್ಲಿ ಕಾಲಿಟ್ಟರೆ ಸಾಕು ನಮ್ಮ ಸ್ವಾರ್ಥದ ಪ್ರಮಾಣ ಅರಿವಾಗುತ್ತದೆ, ನಮಗೆ ಹೆಚ್ಚು-ಹೆಚ್ಚಾಗಿ ಕೊಡಬೇಕೆಂದು ಸಂತತವಾಗಿ ಅಪೇಕ್ಷಿಸುತ್ತ, ಕಟ್ಟಕಡೆಯ ಪರಿಪೂರ್ಣ ಆತ್ಮಾರ್ಪಣೆ ಜರುಗುವವರೆಗೂ ತೃಪ್ತರಾಗಬಾರದು

(ಯಂಗ್ ಇಂಡಿಯಾ ೨೯-೯-೨೧)

ನಮ್ಮ ಅಹಮಿಕೆಯೆಲ್ಲ, ಪೂರ್ತಿ ಭಸ್ಮವಾದಲ್ಲದೇ ನಮ್ಮಲ್ಲಿರುವ ಕೆಟ್ಟತನವನ್ನು ಗೆಲ್ಲಲಾರೆವು ನಾವು ವಾಸ್ತವಿಕವೂ ಬಯಸತಕ್ಕದ್ದೂ ಆದ ಸ್ವಾತಂತ್ರ್ಯ ಒಂದೇ ಅದನ್ನು ಕೊಡುವುದಕ್ಕೆ ದೇವರು ಪರಿಪೂರ್ಣ ಆತ್ಮಸಮರ್ಪಣೆಗೆ ಕಡಿಮೆಯಾದ ಖರೀದಿ ಸಾಲದೆಂದು ಹೇಳುತ್ತಾನೆ ಹೀಗೆ ತನ್ನನ್ನು ಮನುಷ್ಯ ಮುಳುಗಿಸಿಕೊಂಡಾಗ ಸಕಲ ಜೀವಿಗಳ ಸೇವೆಯಲ್ಲಿ ಪುನಃ ಏಳುತ್ತಾನೆ ಆದರಲ್ಲಿಯೇ ಅವನ ಸಂತೋಷ, ಅವನ ಮನರಂಜನೆ. ಅವನೊಬ್ಬ ಹೊಸಮನುಷ್ಯ, ಭಗವಂತನ ಸೃಷ್ಟಿಯ ಸೇವೆಗೆ ತನ್ನನ್ನು ಮಾರುಗೊಡುವುದರಲ್ಲಿ ಅವನಿಗೆಂದೂ ದಣಿವಿಲ್ಲ

(ಯಂಗ್ ಇಂಡಿಯಾ. ೨೦-೧೨-೨೮)

## ಪ್ರೇಮಧರ್ಮ

ನಿಮಗೆ ನನ್ನ ಪ್ರಾರ್ಥನೆ ಇದು ಹೃದಯಗಳನ್ನು ಶುಚಿಮಾಡಿಕೊಳ್ಳಿ, ಕೃಪಾನ್ವಿತರಾಗಿ ಸಾಗರದಷ್ಟು ಅಗಲವಾಗಲಿ ನಿಮ್ಮ ಹೃದಯ ಇತರರಲ್ಲಿ ಹುಳುಕೆಣಿಸಬೇಡಿ, ಅವರು ನಿಮ್ಮ ಹುಳುಕನ್ನು ಎತ್ತಿ ಆಡಿಯಾರು ನಿಮ್ಮನ್ನು ನೇಣುಹಾಕಬಲ್ಲ ಪರಮನ್ಯಾಯಾಧೀಶನಿದ್ದಾನೆ ಆದರೆ ನಿಮ್ಮನ್ನು। ಆತ ಉಳಿಯಗೊಟ್ಟದಾನೆ ನಿಮ್ಮ ಒಳಗೂ ಸುತ್ತಲೂ ಎಷ್ಟೋ ಮಂದಿ ಅರಿಗಳಿದ್ದಾರೆ, ಆತನು ನಿಮ್ಮನ್ನು ಸಂರಕ್ಷಿಸುತ್ತ, ದಯಾಲೋಚನದಿಂದ ನೋಡುತ್ತಿರುವ

(ಯಂಗ್ ಇಂಡಿಯಾ. ೧-೧-೨೫)

ಅಶಕ್ತರು ಎಂದಿಗೂ ಕ್ಷಮಿಸಲಾರರು ಕ್ಷಮೆ ಬಲಿಷ್ಠರ ಮನೋಧರ್ಮ.

(ಯಂಗ್ ಇಂಡಿಯಾ. ೨-೪-೩೧)

ಪ್ರೇಮದಿಂದ ಪ್ರತಿಭಟನೆ ಎಂಬುದೊಂದು ಶಕ್ತಿ, ಅದನ್ನು ವ್ಯಕ್ತಿ

ಗಳು, ಜನಸಮುದಾಯಗಳು ಪ್ರಯೋಗಿಸಬಹುದು ಗೃಹಕೃತ್ಯದ ವ್ಯವಹಾರಗಳಲ್ಲಿಯೋ ಅಲ್ಲದೇ ರಾಜಕೀಯ ವ್ಯವಹಾರಗಳಲ್ಲಿಯೂ ಅದನ್ನು ಪ್ರಯೋಗಿಸಬಹುದು ಅದರ ಸಾರ್ವತ್ರಿಕಾನ್ವಯ ಲಕ್ಷಣ ಅದರ ಶಾಶ್ವತತೆಯನ್ನೂ ಅಜೇಯತ್ವವನ್ನೂ ಪ್ರದರ್ಶಿಸುತ್ತದೆ ಗಂಡಸರು, ಹೆಂಗಸರು, ಮಕ್ಕಳೆಲ್ಲರೂ ಸಮಾನವಾಗಿ ಅದನ್ನು ಉಪಯೋಗಿಸಬಹುದು ಹಿಂಸೆಯನ್ನು ಹಿಂಸೆಯಿಂದ ಎದುರಿಸುವ ಸಾಮರ್ಥ್ಯ ತಮಗೆ ಇಲ್ಲದಿರುವವರೆಗೆ ಅಶಕ್ತರು ಬಳಸಿಕೊಳ್ಳುವ ಶಕ್ತಿ ಅದೆಂದು ಹೇಳುವುದು ಪೂರ್ಣ ಅಸತ್ಯ ಕತ್ತಲೆಗೆ ಬೆಳಕು ಹೇಗೋ ಹಾಗೆ ಎಲ್ಲ ಹಿಂಸೆ ದಬ್ಬಾಳಿಕೆ ಅನ್ಯಾಯಗಳಿಗೆ ಈ ಶಕ್ತಿ, (ಯಂಗ್ ಇಂಡಿಯಾ ೧೦-೧೧-೩೧)

ಬಾಳಿನ ಈ ಮಹೋನ್ನತ ನೇಮ ಅನುಸರಿಸುವುದು ಎಷ್ಟು ಕಷ್ಟವೆಂಬುದು ನನಗೆ ಗೊತ್ತು ಆದರೆ ಎಲ್ಲ ಮಹತ್ತರವಾದ ಸತ್ಕಾರ್ಯಗಳು ಆಚರಿಸಲು ಕಷ್ಟವಲ್ಲವೇ? ದ್ವೇಷಿಸುವವನನ್ನು ಪ್ರೀತಿಸುವುದು ಎಲ್ಲಕ್ಕಿಂತಲೂ ಅಧಿಕ ಕಷ್ಟ ಅಂಥ ಕಠಿಣಕಾರ್ಯ ಕೂಡ ದೇವರ ಕೃಪೆಯಿಂದ ಮಾಡುವುದಕ್ಕೆ ನಮಗೆ ಸುಲಭವಾಗುತ್ತದೆ (ಪತ್ರವೊಂದರಿಂದ)

ನನ್ನ ಅಂತಿಮ ಗುರಿ ಇಡೀ ಪ್ರಪಂಚದೊಡನೆ ಮೈತ್ರಿಭಾವ ಅತ್ಯಂತ ಪ್ರೇಮವನ್ನು, ಕೆಡುಕನ್ನು ಕುರಿತ ಅತ್ಯಂತ ವಿರೋಧನೊಡನೆ ಜೊತೆಗೂಡಿಸಬಲ್ಲೆ (ಯಂಗ್ ಇಂಡಿಯಾ ೧೮-೩-೨೦)

ಪ್ರೇಮ ಎಂದಿಗೂ ಬೇಡುವುದಿಲ್ಲ, ಅದು ಸದಾ ನೀಡುತ್ತದೆ ಪ್ರೇಮ ಯಾವಾಗಲೂ ಬವಣೆ ಪಡುತ್ತದೆ, ಎಂದೂ ಮುಯ್ಯಿ ತೀರಿಸಿಕೊಳ್ಳುವುದಿಲ್ಲ (ಯಂಗ್ ಇಂಡಿಯಾ ೯-೭-೨೫)

## ನಿರ್ಭಯತೆ

ಎಲ್ಲಿ ಭೀತಿ ಇದೆಯೋ ಅಲ್ಲಿ ಧರ್ಮವಿಲ್ಲ

(ಯಂಗ್ ಇಂಡಿಯಾ. ೨-೯-೨೬)

ಈ ಜಗತ್ತಿನಲ್ಲಿ ನಮ್ಮದೆನ್ನುವುದು ಯಾವುದೂ ಇಲ್ಲ ನಾವು ಕೂಡ ಆತನ ವಶವೇ ಹಾಗೆಂದಮೇಲೆ ನಾವು ಭಯಗೊಳ್ಳುವುದೇತಕ್ಕೆ?

(ಯಂಗ್ ಇಂಡಿಯಾ ೧೧-೯-೨೦)

ದೇವರಿಗೆ ಅಂಜೋಣ ಮಾನವನಿಗೆ ಅಂಜುವುದು ನಿಂತುಹೋಗು

ತ್ತದೆ ಪವಿತ್ರ ಗ್ರಂಥಗಳನ್ನು ಪಠಿಸಿ, ತಾತ್ವಿಕ ಚರ್ಚೆಗಳಲ್ಲಿ ಭಾಗವಹಿಸುವ ವಿಚಾರವಲ್ಲ ಆಧ್ಯಾತ್ಮಿಕತೆ ಅದು ಹೃದಯವಿಕಾಸದ ವಿಚಾರ ಅದಕ್ಕೆ ಅಳೆಯಲಾಗದ ಬಲ ಆಧ್ಯಾತ್ಮಿಕತೆಗೆ ನಿರ್ಭೀತಿ ಪ್ರಥಮ ಆವಶ್ಯಕತೆ ಹೇಡಿಗಳು ಎಂದಿಗೂ ನೀತಿವಂತರಾಗಲಾರರು

(ಯಂಗ್ ಇಂಡಿಯಾ. ೧೩-೧೦-೨೧)

ಪ್ರತಿ ಪ್ರಾತಃಕಾಲ ನಮ್ಮ ಮೊದಲನೆಯ ಕಾರ್ಯ ಈ ಸಂಕಲ್ಪ ವನ್ನು ಆ ದಿವಸಕ್ಕಾಗಿ ಮಾಡೋಣ

'ಈ ಪೃಥ್ವಿಯಲ್ಲಿ ಯಾರಿಗೂ ನಾನು ಅಂಜುವುದಿಲ್ಲ ದೇವರೊಬ್ಬ ನಿಗೆ ಮಾತ್ರ ಅಂಜುತ್ತೇನೆ ಯಾವೊಬ್ಬನನ್ನೂ ನಾನು ದ್ವೇಷಿಸುವುದಿಲ್ಲ, ಯಾರಿಂದ ಆದರೂ ಅನ್ಯಾಯಕ್ಕೆ ನಾನು ಮಣಿಯಲಾರೆ ಅಸತ್ಯವನ್ನು ಸತ್ಯದಿಂದ ಜಯಿಸುತ್ತೇವೆ ಅಸತ್ಯವನ್ನು ಪ್ರತಿಬಿಂಬಿಸುವಾಗ ಸಂಭವಿ ಸುವ ಎಲ್ಲ ಬವಣೆಯನ್ನು ನಾನು ನಹಿಸುತ್ತೇನೆ'

(ಸತ್ಯಾಗ್ರಹ ಕರಪತ್ರ. ೪-೫-೧೯)

## ಭಗವಂತನಲ್ಲಿ ಭರವಸೆ

ಧರ್ಮಶೀಲವಾದ ಯುದ್ಧದಲ್ಲಿ ದಂಡಯಾತ್ರೆಗಳನ್ನು ನಿಯೋಜಿಸಿ ಕದನಗಳನ್ನು ನಡೆಸುವವ ದೇವರು ತಾನು ಧರ್ಮಯುದ್ಧ ಹೂಡಬೇಕಾ ದರೆ ದೇವರ ಹೆಸರಿನಲ್ಲಿ ಮಾತ್ರವೇ ತೀರ ನಿಸ್ಸಹಾಯಕನೆಂದೂ ಇನ್ನೇನು ತನ್ನ ಅಳವಿನ ಅಂತ್ಯ ಒದಗಿದೆಯೆಂದೂ ದಟ್ಟ ಕತ್ತಲೆ ತನ್ನನ್ನು ಸುತ್ತುವರಿ ದಿದೆಯೆಂದೂ ಯಾವಾಗ ಸತ್ಯಾಗ್ರಹಿ ಭಾವಿಸುತ್ತಾನೋ ಆಗ ದೇವರು ಪಾರುಮಾಡಲು ಬರುತ್ತಾನೆ (ದ ಆಫ್ರಿಕದಲ್ಲಿ ಸತ್ಯಾಗ್ರಹ)

ಈ ಒಂದು ಪಾಠವನ್ನು ನಾನು ಕಲಿತಿದ್ದೇನೆ ನರನಿಗೆ ಅಸಾಧ್ಯ ವಾದದ್ದು ದೇವರಿಗೆ ಅತಿ ಸುಲಭ ತನ್ನದೇ ಆದ ಸಾಕ್ಷಿಯು ಒಂದು ಕೀಟದ ಅದೃಷ್ಟವನ್ನೂ ಕೂಡ ತನ್ನ ಕೈಯಲ್ಲಿಟ್ಟುಕೊಂಡಿರುವ ದೇವತತ್ವ ದಲ್ಲಿ ನಮಗೆ ನಂಬಿಕೆಯೊಂದಿದ್ದರೆ ಎಲ್ಲ ಘಟನೆಗಳೂ ಸಾಧ್ಯವೆಂಬುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ ಆ ಕೊನೆಯ ಭರವಸೆಯಲ್ಲಿ ನಾನು ಬಾಳುತ್ತ ಕಾಲವನ್ನು ನೂಕುತ್ತಿದ್ದೇನೆ

(ಯಂಗ್ ಇಂಡಿಯಾ. ೧೦-೧೦-೩೧)

## ಆತ್ಮ-ವೇದನೆಯ ಪ್ರಭಾವ

ದಿಟವಾಗಿ ಮುಖ್ಯವಾದ ಈ ಮೂಲನಿರ್ಧಾರಕ್ಕೆ ನಾನು ಬಂದಿದ್ದೇನೆ ಯಾವುದೇ ಒಂದು ಕಾರ್ಯ ನಿನಗಾಗಿ ಯಾರಿಂದಲೇ ಆಗಬೇಕಾದರೆ, ಆತನ ಬುದ್ಧಿವಿವೇಕವನ್ನು ಸಮಾಧಾನಗೊಳಿಸಿದಲ್ಲಿ ಮಾತ್ರ ಸಾಲದು, ಜೊತೆಗೆ ಅವನ ಹೃದಯ ಮಿಡಿಯುವಂತೆ ಮಾಡಬೇಕು ಬುದ್ಧಿವಿವೇಕದ ಪ್ರಭಾವ ಹೆಚ್ಚಾಗಿ ಮೆದುಳಿನ ಮೇಲೆ, ಹೃದಯವನ್ನು ಕೊರೆದು ನಾಟಬೇಕಾದರೆ ಸಂಕಟ ಆಗತ್ಯ ಅದು ಮನುಷ್ಯನಲ್ಲಿನ ಅಂತರಾಳದ ತಿಳಿವಳಿಕೆಯನ್ನು ಎಬ್ಬಿಸುತ್ತದೆ (ಯಂಗ್ ಇಂಡಿಯಾ. ೫-೧೧-೩೧)

ಈ ಮನೋಗತ ನನ್ನಲ್ಲಿ ವೃದ್ಧಿಸುತ್ತಿದೆ. ಜನಸಮುದಾಯಕ್ಕೆ ಅವಶ್ಯಕವಾದ ಅಧಿಷ್ಠಾನಕ್ಷೇಮಗಳು ಕೇವಲ ವಿಚಾರಶಕ್ತಿಯಿಂದ ಪಡೆಯಲಸಾಧ್ಯ, ಅವನ್ನು ಕೊಳ್ಳುವುದಕ್ಕೆ ಅವರು ನರಳಲೇಬೇಕು ನರಳಾಟ ಮಾನವಜೀವಿಗೆ ಕಟ್ಟಳೆ, ಯುದ್ಧ ಕಾಡಿನ ಕಟ್ಟಳೆ ವಿರೋಧಿಯನ್ನು ಪರಿವರ್ತನೆಗೊಳಿಸಿ ಮತ್ತೆಲ್ಲದಕ್ಕೂ ಸಾಮಾನ್ಯವಾಗಿ ಮುಚ್ಚಿಸುವ ಆವನ ಕಿವಿಗಳನ್ನು ವಿವೇಕದ ದನಿಗೆ ತೆರೆಸುವುದಕ್ಕೆ ಕಾಡಿನ ಕಟ್ಟಳೆಗಿಂತ ಸಂಕಟ ಸಾಮರ್ಥ್ಯದಲ್ಲಿ ಅನಂತಪ್ರಮಾಣದಲ್ಲಿ ಮಿಗಿಲು

(ಯಂಗ್ ಇಂಡಿಯಾ. ೫-೧೧-೩೧)

ಕ್ರೋಧವಿಲ್ಲದ, ಕೃತ್ರಿಮವಿಲ್ಲದ, ವೇದನೆಯೆಂಬ ಉದಯರವಿಯ ಎದುರು ಕಠಿಣತಮ ಹೃದಯವೂ ಗಾಢತಮ ಅಜ್ಞಾನವೂ ಮಾಯವಾಗಲೇಬೇಕು (ಯಂಗ್ ಇಂಡಿಯಾ. ೧೯-೨-೨೫)

ನನ್ನ ವೈಯಕ್ತಿಕ ಧರ್ಮ ಯಾರನ್ನೇ ಆಗಲಿ ದ್ವೇಷಿಸುವುದನ್ನು ನಿಷೇಧಿಸುತ್ತದೆ ಈ ಸರಳವೂ ಭವ್ಯವೂ ಆದ ಸಿದ್ಧಾಂತವನ್ನು ನನಗೆ ಹನ್ನೆರಡು ವರುಷ ಆಗಿದ್ದಾಗ ಶಾಲಾ ಪುಸ್ತಕವೊಂದರಿಂದ ನಾನು ಕಲಿತ, ಅದರ ನಿಶ್ಚಿತತ್ವ ಈ ಹೊತ್ತಿನವರೆಗೂ ಉಳಿದುಬಂದಿದೆ ದಿನದಿನವೂ ಅದರ ಪ್ರಭಾವಕ್ಕೆ ವೃದ್ಧಿ ನನ್ನಲ್ಲಿ ಅದು ನನಗೊಂದು ಪ್ರಜ್ವಲಿಸುವ ರಾಗ

## ವಿರಕ್ತಿ ಮತ್ತು ವಿಶ್ವಶಾಂತಿ

ಪ್ರಪಂಚ ಗುರುತಿಸಿರುವ ನರನಾಯಕರು ತಮ್ಮ ಆಧೀನದಲ್ಲಿಟ್ಟು

ಕೊಂಡಿರುವ ಮಾದಕಯಂತ್ರಗಳ ಪ್ರಯೋಗಕ್ಕೆ ಪೂರ್ತಿ ಪ್ರಮುಖರಾದರೆ ಹಾಗೆ ಮಾಡುವುದರ ಪರಿಣಾಮವನ್ನು ಚೆನ್ನಾಗಿ ತಿಳಿದುಕೊಂಡು ಶಾಶ್ವತ ಶಾಂತಿಯನ್ನು ಗಳಿಸಬಹುದು ಜೀವಂತ ದೇವರಲ್ಲಿ ಜೀವಂತ ನಂಬಿಕೆ ಇಲ್ಲದಿರುವುದೇ ಆ ಕೆಡುಕಿನ ಬೇರೆಂದು ನನ್ನ ನಿಶ್ಚಯ ಯೇಸುವನ್ನು ಶಾಂತಿಯ ದೊರೆಯೆಂದು ಬಣ್ಣಿಸುತ್ತ ಆವನ ಸಂದೇಶದಲ್ಲಿ ತಮಗೆ ನಂಬಿಕೆ ಯಿದೆಯೆಂದು ಹೇಳಿಕೊಳ್ಳುವ ತಮ್ಮ ವಾಸ್ತವಿಕ ಜನಾಂಗಗಳು ವ್ಯವಹಾರ ದಲ್ಲಿ ಅದನ್ನು ಒಂದಿಷ್ಟೂ ತೋರದಿರುವುದು ಪ್ರಥಮ ದರ್ಜೆಯ ಒಂದು ಮಾನವೀಯ ವಿಷಾದ ನಾಟಕ ನಿಷ್ಠಾವಂತ ಕ್ರೈಸ್ತ ಪುರೋಹಿತರು ಯೇಸುವಿನ ಬೋಧೆಯನ್ನು ವ್ಯಕ್ತಿಗಳಿಗೆ ಅನ್ವಯಿಸಿ ಮೊಟಕುಮಾಡು ವುದನ್ನು ನೋಡಿದರೆ ನೋವು ಮಾನವ ವರ್ಗದ ಮೂಲಭೂತ ಸದ್ಗುಣ ಗಳನ್ನು ಎಂಥ ಅಲ್ಪ ಮನುಷ್ಯರಾದರೂ ಬೆಳಸಿಕೊಳ್ಳಲಶಕ್ತರೆಂಬುದನ್ನು ಕೇವಲ ಚಿಕ್ಕ ವಯಸ್ಸಿನಲ್ಲಿಯೇ ನನಗೆ ಕಲಿಸಿದರು ಅನುಭವದಿಂದ ಅದರ ಸತ್ಯಾಂಶವನ್ನು ಪರೀಕ್ಷಿಸಿದ್ದೇನೆ ನಿಸ್ಸಂಶಯವಾದ ಈ ಸಾರ್ವತ್ರಿಕ ಸಾಧ್ಯತೆ ಮಾನವನನ್ನು ಇತರ ದೈವಸೃಷ್ಟಿಯಿಂದ ಬೇರ್ಪಡಿಸಿ ತೋರಿಸು ತ್ತದೆ ಒಂದು ಜನಾಂಗ ಸಾಕು, ಯಾವ ಷರತ್ತೂ ಇಲ್ಲದೆ ಈ ಪರಮ ತ್ಯಾಗವನ್ನು ಕೈಗೊಂಡಲ್ಲಿ ನಮ್ಮಲ್ಲನೇಕರು ತಮ್ಮ ಜೀವಿತ ಕಾಲದಲ್ಲಿಯೇ ಭೂಮಿಯಮೇಲೆ ದೃಗ್ಗೋಚರ ಶಾಂತಿ ನೆಲಸುವುದನ್ನು ಕಂಡೇವು

(ಹರಿಜನ. ೧೮-೬-೩೮)

## ಸಸ್ಯಾಹಾರ

ಒಂದು ಕುರಿಮರಿಯ ಜೀವ ಒಬ್ಬ ಮನುಷ್ಯನ ಜೀವಕ್ಕಿಂತ ಕಡಮೆ ಅಮೂಲ್ಯವಲ್ಲವೆಂದು ನನಗನಿಸುತ್ತದೆ ಮನುಜ ದೇಹದ ಪೋಷಣೆಗಾಗಿ ಒಂದು ಕುರಿಮರಿಯ ಪ್ರಾಣವನ್ನು ತೆಗೆಯಲು ನಾನು ಒಪ್ಪಲಾರೆ ಒಂದು ಜಂತು ಹೆಚ್ಚು ನಿಸ್ಸಹಾಯಕವಾದಷ್ಟೂ ಮನುಷ್ಯನ ರಕ್ಷಣೆ ಪಡೆಯಲು ಅದಕ್ಕೆ ಹೆಚ್ಚು ಅಧಿಕಾರ. (ಆತ್ಮಕಥೆ)

ತಪ್ಪೋ ಸರಿಯೋ ಮನುಷ್ಯ ಮಾಂಸ ಮೊಟ್ಟೆ ಮೊದಲಾದುವನ್ನು ತಿನ್ನಲಾಗದೆಂಬುದು ನನ್ನ ಧಾರ್ಮಿಕ ನಿರ್ಧಾರದ ಒಂದು ಭಾಗ ನಮ್ಮ ಜೀವಗಳನ್ನು ಉಳಿಸಿಕೊಳ್ಳುವುದಕ್ಕೆ ಉಪಯುಕ್ತವಾಗುವ ಸಾಧನಗಳಿಗೂ

ಕೂಡ ಒಂದು ಮಿತಿ ಇದ್ದೇ ಇರಬೇಕು ಕೇವಲ ಪ್ರಾಣರಕ್ಷಣೆಗಾಗಿಯೂ ಕೆಲವು ಕಾರ್ಯಗಳನ್ನು ನಾವು ಮಾಡಕೂಡದು. [ಆತ್ಮಕಥೆ)

ಯಾವ ಮಟ್ಟದಲ್ಲೇ ಆಗಲಿ, ಸಾಧಾರಣವಾಗಿ ಮನುಷ್ಯಜಂತು ಜೀವಿಸಲು ಸಾಧ್ಯವಾಗುವ ಯಾವ ಭೂಸ್ಥಿತಿಯಲ್ಲೇ ಆಗಲಿ, ಮಾಂಸಾಹಾರ ನನಗೆ ಆವಶ್ಯಕವೆಂದು ನಾನು ಭಾವಿಸಿಲ್ಲ ನಮ್ಮ ಪ್ರಾಣಿಪ್ರಭೇದಕ್ಕೆ ಮಾಂಸಾಹಾರ ಅಯುಕ್ತವೆಂದು ನನ್ನ ಅಭಿಪ್ರಾಯ. ತಿರ್ಯಗ್ಜಂತುಗಳಿಗಿಂತ ನಾವು ಮೇಲಾಗಿದ್ದರೆ ಅವನ್ನು ನಾವು ಅನುಕರಣ ಮಾಡುವುದು ತಪ್ಪು ರಾಗದ್ವೇಷಗಳನ್ನು ದಮನಮಾಡಲು ಬಯಸುವವರಿಗೆ ಮಾಂಸಾಹಾರ ಸಲ್ಲದೆಂಬುದು ಅನುಭವವೇದ್ಯ

ಶೀಲನಿರ್ಮಾಣದಲ್ಲಿ ಅಥವಾ ಇಂದ್ರಿಯನಿಗ್ರಹದಲ್ಲಿ ಆಹಾರದ ಮುಖ್ಯತೆಯನ್ನು ಅತಿಯಾಗಿ ಹೆಚ್ಚಿಸುವುದು ಸರಿಯಲ್ಲ ಮಿತಾಹಾರವೊಂದು ಪ್ರಬಲ ಸಂಗತಿ, ಅದನ್ನು ಅಲಕ್ಷಿಸಲಾಗದು ಆದರೆ ಭಾರತದಲ್ಲಿ ಅನೇಕ ವೇಳೆ ಎಸಗುವಂತೆ ಮಿತಾಹಾರದಲ್ಲಿ ಇಡೀ ಧರ್ಮವನ್ನು ಸಂಗ್ರಹ ಮಾಡಿಬಿಡುವುದು ಮಿತಾಹಾರದ ವಿಚಾರ ಎಲ್ಲ ನಿರ್ಬಂಧವನ್ನೂ ಉದಾಸೀನಗೈದು ಜಿಹ್ವಾ-ಚಾಪಲ್ಯವನ್ನು ಹೇಗೆ ಬೇಕಾದರೂ ಹೋಗಲೆಂದು ಬಿಡುವಷ್ಟೇ ಅನ್ಯಾಯ ಹಿಂದೂಧರ್ಮದ ಅಮೂಲ್ಯ ವರಗಳಲ್ಲಿ ಸಸ್ಯಾಹಾರವೂ ಒಂದು ಅದನ್ನು ಲಘುಬುದ್ಧಿಯಿಂದ ಬಿಟ್ಟುಕೊಡಬಾರದು ಆದ್ದರಿಂದ ಸಸ್ಯಾಹಾರ ನಮ್ಮನ್ನು ಮನಸ್ಸಿನಲ್ಲಿ ಅಥವಾ ದೇಹದಲ್ಲಿ ದುರ್ಬಲಗೊಳಿಸಿದಯೆಂದೂ ಕ್ರಿಯೆಯಲ್ಲಿ ನಿರುತ್ಸಾಹಿಗಳನ್ನಾಗಿ ಅಥವಾ ಆಲಸರನ್ನಾಗಿ ಮಾಡಿದೆಯೆಂದೂ ಬಗೆಯುವ ತಪ್ಪಭಿಪ್ರಾಯವನ್ನು ತಿದ್ದಬೇಕಾಗಿದೆ ಹಿಂದೂಧರ್ಮದ ಮಹಾಸುಧಾರಕರು ತಮ್ಮ ಕಾಲಮಾನಿನಲ್ಲಿ ಎಲ್ಲರಿಗಿಂತ ಅತ್ಯಂತ ತೀವ್ರ ಕ್ರಿಯಾಶೀಲರಾಗಿದ್ದರು, ಕ್ರಮವಾಗಿ ಅವರೆಲ್ಲರೂ ಸಸ್ಯಾಹಾರಿಗಳೇ ಶಂಕರ ಅಥವಾ ದಯಾನಂದಸರಸ್ವತಿಗಿಂತ ಹೆಚ್ಚಾಗಿ ಆಯಾ ಅವಧಿಯಲ್ಲಿ ಯಾರು ಚಟುವಟಿಕೆಯನ್ನು ಮೆರೆಯ ಬಲ್ಲವನಾಗಿದ್ದ?

ಸೂಕ್ತಾಹಾರದ ಆಯ್ಕೆ ನಂಬಿಕೆಯ ಮೇಲೆ ನಿಲ್ಲುವ ವಿಷಯವಲ್ಲ ಪ್ರತಿಯೊಬ್ಬನೂ ವಿಚಾರಮಾಡಿ ತೀರ್ಮಾನಿಸಬೇಕಾದ ಅಂಶ ಅದು

ಪಾಶ್ಚಾತ್ಯದೇಶಗಳಲ್ಲಿ ಸಸ್ಯಾಹಾರದ ಬಗೆಗೆ ರಾಶಿಯಾಗಿ ಬೆಳೆದಿರುವ ಸಾಹಿತ್ಯವನ್ನು ಯಾವ ಸತ್ಯಾನ್ವೇಷಿಯಾದರೂ ಓದಿ ಲಾಭ ಪಡೆಯ ಬಹುದು ಅನೇಕ ದಕ್ಷ ವೈದ್ಯರು ಈ ಸಾಹಿತ್ಯಕ್ಕೆ ಕಾಣಿಕೆ ನೀಡಿದ್ದಾರೆ ಇಲ್ಲಿ ಭಾರತದಲ್ಲಿ ಸಸ್ಯಾಹಾರವನ್ನು ಕುರಿತು ಯಾವ ಪ್ರೋತ್ಸಾಹವೂ ಬೇಕಾಗಿಲ್ಲ ಏಕೆಂದರೆ ಈವರೆಗೂ ಅದು ಅತ್ಯಂತ ಅಪೇಕ್ಷಣೀಯವೂ ಅತ್ಯಂತ ಗೌರವಯುತವೂ ಆದುದೆಂದು ಅಂಗೀಕರಿಸಲ್ಪಟ್ಟಿದೆ

(ಯಂಗ್ ಇಂಡಿಯಾ ೭-೧೦-೨೬)

ನಮ್ಮೊಳಗಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಅನೃತ ವೆಂಬ ಆರು ಮಾರಕ ವೈರಿಗಳನ್ನು ಸೋಲಿಸಲು ಕೇವಲ ಜೀವದಯೆ (ಪ್ರಾಣಿಗಳಲ್ಲಿ ದಯೆ) ನೆರವಾಗಲಾರದೆಂಬುದನ್ನು ಜ್ಞಾಪಕದಲ್ಲಿಡಬೇಕು ಪೂರ್ಣವಾಗಿ ಸ್ವಾರ್ಥವನ್ನು ಗೆದ್ದು ಎಲ್ಲರ ವಿಷಯದಲ್ಲಿಯೂ ಪ್ರೇಮ ನಿಯಮಕ್ಕೆ ಆಳ್ವಿಕೆಯನ್ನು ಕೊಟ್ಟಿರುವ ಪುರುಷನನ್ನು ನನಗೆ ತೋರಿ ನಾನೊಬ್ಬನಾದರೋ ಆತ ಮಾಂಸಾಹಾರಿಯಾದರೂ ಅವನಿಗೆ ಪೂಜ್ಯತೆ ಯಿತ್ತು ಗೌರವಿಸಿಯೇನು ಇದಕ್ಕೆ ಪ್ರತಿಯಾಗಿ ಕಾಮಕ್ರೋಧಗಳಲ್ಲಿ ಮುಳುಗಿ ದಿನವೂ ಇರುವೆಗಳಿಗೂ ಆಹಾರ ಎರಚುತ್ತ ಪ್ರಾಣಿಹತ್ಯವನ್ನು ಮಾಡದ ವ್ಯಕ್ತಿಯು ಜೀವದಯೆಯಲ್ಲಿ ಮೆಚ್ಚತಕ್ಕದ್ದು ಏನೂ ಬಹುಶಃ ಇಲ್ಲ ಅದೊಂದು ಯಾಂತ್ರಿಕ ಕಾರ್ಯ, ಅದರಲ್ಲಿ ಆಧ್ಯಾತ್ಮಿಕ ಮೌಲ್ಯ ವಿಲ್ಲ ಅಷ್ಟೇ ಅಲ್ಲದೆ, ಇನ್ನೂ ಕೀಳೆನ್ನಬಹುದು ಅದನ್ನು ಒಳಗಣ ಕೊಳೆತದ ಬೂಟಾಟಿಕೆ (ಹರಿಜನ ೧೫-೯-೪೦)

## ಜೀವಂತ ದೇಹಚ್ಛೇದ

ಜೀವಂತ ದೇಹಚ್ಛೇದವೆಂದರೆ ನನ್ನ ಇಡೀ ಅಂತರಾತ್ಮಕ್ಕೆ ಅಸಹ್ಯ ವಿಜ್ಞಾನದ ಹೆಸರಿನಲ್ಲಿ ಹಾಗೆಂದು ಕರೆದುಕೊಳ್ಳುವ ಮಾನವತೆಯ ಹೆಸರಿನಲ್ಲಿ ನಡೆಯುವ ನಿರಪರಾಧಿ ಜೀವಿಗಳ ಅಕ್ಷಮ್ಯ ಗುಂಪುಕೊಲೆಗೆ ನನ್ನ ಧಿಕ್ಕಾರ. ನಿರಪರಾಧಿ ನೆತ್ತರಿನಿಂದ ಮಲಿನವಾದ ಎಲ್ಲ ವೈಜ್ಞಾನಿಕ ಶೋಧನೆಗಳೂ ಏನೂ ಬೆಲೆ ಇಲ್ಲದ್ದವೆಂದು ನನ್ನ ಎಣಿಕೆ ಜೀವಂತ ಪ್ರಾಣಿಚ್ಛೇದ ವಿನಾ ರಕ್ತಪರಿಚಲನೆಯ ಸಿದ್ಧಾಂತವನ್ನು ಕಂಡುಹಿಡಿಯಲು ಅಶಕ್ಯವಾಗಿದ್ದಿದ್ದರೆ ಅದಿಲ್ಲದೆ ಮನುಕುಲ ಬಾಳಿಯೇ ಬಾಳುತ್ತಿತ್ತು

ಪ್ರಾಮಾಣಿಕ ಪಾಶ್ಚಾತ್ಯ ವಿಜ್ಞಾನಿ ಜ್ಞಾನಾನ್ವೇಷಣೆಯ ಆಧುನಿಕ ವಿಧಾನಗಳಿಗೆ ಮಿತಿಗಳನ್ನು ಇಡುವ ಕಾಲದ ಅರುಣೋದಯ ನನಗೆ ಸ್ಪಷ್ಟವಾಗಿ ಕಾಣುತ್ತಿದೆ ಮುಂದೆ ಆಳೆಯುವ ಕ್ರಮ ಮಾನವ ಕುಟುಂಬವನ್ನು ಮಾತ್ರ ಗಣನೆಗೆ ತಂದುಕೊಳ್ಳದೆ ಸಮಸ್ತ ಜೀವರಾಶಿಯನ್ನೂ ಪರಿಗಣನೆಗೆ ತಂದುಕೊಳ್ಳುವುದು ಹೇಗೆ ಹಿಂದೂಗಳು ತಮ್ಮ ಐದನೇ ಒಂದು ಭಾಗದ ದಳಿತ ಸ್ಥಿತಿಯ ಮೂಲಕ ತಾವು ದಷ್ಟಪುಷ್ಟರಾಗಬಲ್ಲವೆಂಬುದು ತಪ್ಪೆಂದು ನಿಧಾನವಾಗಿ ಆದರೆ ಖಂಡಿತವಾಗಿ, ಅರಿತುಕೊಳ್ಳುತ್ತಿರುವರೋ, ಹೇಗೆ ಪಾಶ್ಚಾತ್ಯ ಜನಾಂಗಗಳು ಪೂರ್ವದ ಮತ್ತು ಆಫ್ರಿಕಾಖಂಡದ ಜನಾಂಗಗಳನ್ನು ಶೋಷಣೆಗೂ ದಳಿತಸ್ಥಿತಿಗೂ ದಬ್ಬಿ ತಾವು ದಷ್ಟಪುಷ್ಟರಾಗಬಲ್ಲೆವೆಂಬುದು ತಪ್ಪೆಂದು ಅರಿತುಕೊಳ್ಳುತ್ತಿರುವರೋ, ಹಾಗೆಯೇ ಸೃಷ್ಟಿಯ ತಿರ್ಯಗ್ಜಂತುಗಳಮೇಲೆ ನಮ್ಮ ಆಧಿಪತ್ಯ ಇರುವುದು ಅವುಗಳ ಸಾಮೂಹಿಕ ಸಂಹಾರಕ್ಕಲ್ಲ, ನಮ್ಮ ಪ್ರಯೋಜನಕ್ಕೆಷ್ಟೋ ಅಷ್ಟೇ, ಅವುಗಳ ಪ್ರಯೋಜನಕ್ಕಾಗಿ ಎಂಬುದನ್ನು ನಾವು ಯಥಾಕಾಲದಲ್ಲಿ ಮನಗಾಣುತ್ತೇವೆ ಏಕೆಂದರೆ ಅವು ಆತ್ಮದಿಂದ ಕೂಡಿಕೊಂಡಿವೆಯೆಂಬುದು ನನ್ನ ಮನಸ್ಸಿಗೆ ನಾನು ಇರುವೆಯೆಂಬಷ್ಟೇ ಖಚಿತ

## ಭೂಮಿಗೆ ಪ್ರಣಾಮ

ಭೂಮಿತಾಯಿ ಹೇಗೆ ವಿನೀತಳಾಗಿರುವಳೋ ಹಾಗೆ ನಾವು ವಿನೀತರಾಗಿರುವುದನ್ನು ಭೂ ಪ್ರಣಾಮದಿಂದ ನಾವು ಕಲಿಯುತ್ತೇವೆ, ಅಥವಾ ಕಲಿಯಬೇಕು ತನ್ನನ್ನು ಕಾಲಿನಿಂದ ತುಳಿಯುವ ಜೀವಿಗಳನ್ನು ಆಕೆ ಕಾಪಾಡುತ್ತಾಳೆ ಆದ್ದರಿಂದಲೇ ಆಕೆ ವಿಷ್ಣುವಿಗೆ ಪತ್ನಿಯಾಗಿರುವುದು ಉಚಿತ ಈ ಕಲ್ಪನೆಯಿಂದ ಸತ್ಯಕ್ಕೆ ಧಕ್ಕೆ ಬಾರದೆಂದು ನನ್ನ ಭಾವನೆ ಅದಕ್ಕೂ ಹೆಚ್ಚಾಗಿ, ಅದು ಸುಂದರವಾಗಿದೆ, ದೇವರು ಸರ್ವವ್ಯಾಪಿ ಎಂಬ ಅಭಿಪ್ರಾಯದೊಡನೆ ಪೂರ್ತಿ ಹೊಂದಿಕೊಂಡಿದೆ ನಿರ್ಜೀವ ವಸ್ತು ಒಂದೂ ಇಲ್ಲ ದೇವರಿಗೆ ನಾವು ಭೂಮಿಯ ಭೌತರು ಭೂಮಿ ಇಲ್ಲವಾದರೆ ನಾವೂ ಇಲ್ಲ ಭೂಮಿಯ ಮುಖಾಂತರ ದೇವರನ್ನು ಗ್ರಹಿಸುವುದರಿಂದ ಆತನಿಗೆ ಇನ್ನೂ ಹತ್ತಿರ ಸುಳಿದಂತೆ ನನಗೆ ಭಾಸವಾಗುತ್ತದೆ ಭೂಮಿಗೆ ನಮಸ್ಕರಿಸಿದ ಕೂಡಲೆ ದೇವರಿಗೆ ನನ್ನಿಂದ ಸಲ್ಲಬೇಕಾದ ಋಣವನ್ನು ಮನಗಾಣು

ತ್ತೇನೆ ಆ ತಾಯಿಯ ಯೋಗ್ಯ ಶಿಶು ನಾನಾದರೆ ತಕ್ಷಣವೇ ನನ್ನನ್ನು ಧೂಳಿಗೆ ಸಮಮಾಡಿಕೊಳ್ಳುವೆ, ತನ್ಮೂಲಕ ಮನುಷ್ಯರಲ್ಲಿ ಕನಿಷ್ಠರಾದವರೊಡನೆ ಮಾತ್ರವಲ್ಲದೆ ಸೃಷ್ಟಿಯ ಕನಿಷ್ಠವರ್ಗಗಳೊಡನೆ ಕೂಡ ಬಾಂಧವ್ಯವನ್ನು ಸ್ಥಾಪಿಸಿಕೊಂಡು ನಲಿಯುವೆ, ಅವು ಧೂಳಾಗುವುದು ವಿಧಿಬದ್ಧ, ನನ್ನ ಪಾಲಿಗೂ ಅದೇ ವಿಧಿಯಲ್ಲವೇ? ನನ್ನ ಆತ್ಮಕ್ಕೆಂತೋ ಅಂತೆಯೇ ಸೃಷ್ಟಿಯ ಕನಿಷ್ಠವಸ್ತುವಿಗೂ ಅಳಿವಿಲ್ಲ (ಮೀರಾಗೆ ಬಾಪೂ ಪತ್ರಗಳು)

---

## ಅಧ್ಯಾಯ ೪

# ನನ್ನ ಧರ್ಮಾಚರಣೆಗೆ ಸಹಾಯಕಗಳು

### ಉಪವಾಸ ಮತ್ತು ಪ್ರಾರ್ಥನೆ

ಉಪವಾಸವೊಂದು ಪ್ರಾಚೀನ ಸಂಪ್ರದಾಯ ಯಥಾರ್ಥ ಉಪವಾಸ ದೇಹ ಬುದ್ಧಿ ಆತ್ಮಗಳನ್ನು ತೊಳೆಯುತ್ತದೆ ದೇಹವನ್ನೊಂದು ಬಗೆ ಶಿಲುಬೆಗೇರಿಸಿ ಅಷ್ಟರ ಮಟ್ಟಿಗೆ ಆತ್ಮಕ್ಕೆ ಬಿಡುಗಡೆ ಈಯುತ್ತದೆ ಒಂದು ಋಜು ಪ್ರಾರ್ಥನೆ ಅದ್ಭುತಗಳನ್ನು ಮಾಡಬಲ್ಲದು ಅದು ಇನ್ನೂ ಹೆಚ್ಚು ಪರಿಶುದ್ಧವಾಗಬೇಕೆಂಬ ಆತ್ಮದ ತೀಕ್ಷ್ಣ ಹಂಬಲ ಹೀಗೆ ಲಭಿಸಿದ ಪರಿಶುದ್ಧಿ ಉದಾತ್ತ ಉದ್ದೇಶಕ್ಕೆ ಅದನ್ನು ವಿನಿಯೋಗಿಸಿದರೆ ಪ್ರಾರ್ಥನೆಯಾಗುತ್ತದೆ ಆದ್ದರಿಂದ ಉಪವಾಸ ಪ್ರಾರ್ಥನೆಗಳು ಅತ್ಯಂತ ಪ್ರಭಾವವುಳ್ಳ ಪರಿಶುದ್ಧಿಕ್ರಮ ಯಾವುದು ಶುದ್ಧಿಗೊಳಿಸುತ್ತದೆಯೋ ಅದು ನಮ್ಮ ಕರ್ತವ್ಯವನ್ನು ಹೆಚ್ಚು ನೇರ್ಪಾಗಿ ಎಸಗುವುದಕ್ಕೂ ಗುರಿಯನ್ನು ಸೇರುವುದಕ್ಕೂ ಅಗತ್ಯವಾಗಿ ಸಹಾಯಕವಾಗುತ್ತದೆ ಅವು ಒಮ್ಮೊಮ್ಮೆ ನಿಷ್ಪ್ರಯೋಜಕವಾಗಿ ಕಂಡುಬಂದಲ್ಲಿ ಅವಲ್ಲಿ ಏನೂ ಇಲ್ಲವೆಂದಲ್ಲ, ಅವುಗಳ ಹಿಂದಿರುವ ಚಿತ್ತವೃತ್ತಿ ಸರಿಯಾದ್ದಲ್ಲ

ನಾವೇ ಎತ್ತಿಡಲಾಗದ ಬೇಗುದಿ ಬಂದಾಗ ಉಪವಾಸವಿದ್ದು ಪ್ರಾರ್ಥಿಸಲೇಬೇಕೆಂದು ನನ್ನ ಧರ್ಮ ಬೋಧಿಸುತ್ತದೆ

(ಯಂಗ್ ಇಂಡಿಯಾ. ೨೫-೯-೨೪)

ಇಂದ್ರಿಯಗಳನ್ನು ಎಷ್ಟರಮಟ್ಟಿಗೆ ದಮನಗೈಯುತ್ತೇವೆಯೋ ಅಷ್ಟರ ಮಟ್ಟಿಗೆ ಆತ್ಮಬಲ ವರ್ಧಿಸುತ್ತದೆಂದು ನನ್ನ ದೃಢ ನಂಬಿಕೆ

(ಯಂಗ್ ಇಂಡಿಯಾ ೨೩-೧೦-೨೪)

ದೈವಭಕ್ತನಾಗಿ ಬಾಳಲಿಚ್ಛಿಸಿ, ದೇವರ ಸಂದರ್ಶನವನ್ನು ಬಯಸುವ ಅನ್ವೇಷಕನಿಗೆ ಚಿತ್ತಸಂಯಮ, ವಾಕ್‌ಸಂಯಮಗಳು ಹೇಗೋ ಹಾಗೆ ಆಹಾರದ ಪ್ರಮಾಣದಲ್ಲಿಯೂ ಗುಣದಲ್ಲಿಯೂ ಸಂಯಮ ಅತಿಮುಖ್ಯ

(ಆತ್ಮಕಥೆ)

ಉಪವಾಸ ವಿಶಾಲ ವ್ಯಾಪಕ ಸ್ವರೂಪವುಳ್ಳದ್ದಾಗಬೇಕು, ಶರೀರದ ನಿರಾಹಾರದ ಜೊತೆಯಲ್ಲಿ ಇಂದ್ರಿಯಗಳ ನಿರಾಹಾರವೂ ಕೂಡಿ ನಡೆಯಬೇಕು ಶರೀರದ ನಿರಾಹಾರವೂ ಆಗುತ್ತದೆ ಗೀತೆ ಅಪ್ಪಣೆ ಮಾಡುವುದು ಅಲ್ಪಾಹಾರ, ಗೀತೆಯ ಕೃಶಗ್ರಾಸವೆಂದರ ತಿಂಡಿತೀರ್ಥದ ಮಿತ ಸೇವನೆಯಲ್ಲ, 'ಅತ್ಯಲ್ಪಾಹಾರ' ಅತ್ಯಲ್ಪವೆಂದರೆ ಒಂದು ನಿತ್ಯೋಪವಾದ ಯಾವ ಸೇವೆ ಮಾಡಲೋಸುಗ ಈ ದೇಹ ನಿರ್ಮಿತವಾಗಿದೆಯೋ ಅದನ್ನು ಮಾಡಲು ಶಕ್ತಿಯಿರುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ತೆಗದು ಕೊಳ್ಳುವುದೇ 'ಅತ್ಯಲ್ಪಾಹಾರ' ಇನ್ನೊಂದು ವಿಧದಲ್ಲಿ ಇದನ್ನು ನಿರೂಪಿಸಬಹುದು ನಿಯತ ಅಳತೆಯಲ್ಲಿ ಔಷಧಿಯನ್ನು ಸೇವಿಸುವಂತೆ ಆಹಾರವನ್ನು ಶರೀರದ ಕ್ಷೇಮಕ್ಕೋಸ್ಕರ ಕ್ಲ್ಪಪ್ತಕಾಲದಲ್ಲಿ ಅಗತ್ಯವಾದಂತೆ ತೆಗೆದುಕೊಳ್ಳಬೇಕೇ ವಿನಾ ರುಚಿ ಮೋಹದಿಂದ ಕೂಡದು ಆದ್ದರಿಂದ 'ಗಡದ್ದಾಗಿ' ತಿನ್ನುವುದು ದೇವರೆದುರು, ಮನುಷ್ಯರೆದುರು ಅಪರಾಧ-ಮನುಷ್ಯರೆದುರು ಏಕೆಂದರೆ, ಅತಿಯೂಟ ನೆರೆಯವರಿಗೆ ಭಾಗವಿಲ್ಲದಂತೆ ಮಾಡುತ್ತದೆ ಔಷಧಿಯ ಕ್ಲ್ಪಪ್ತ ಅಳತೆಯಲ್ಲಿ ಎಲ್ಲರ ಆವಶ್ಯಕತೆಗೆ ಸಾಕಷ್ಟು ಆಹಾರವನ್ನು ಒದಗಿಸುತ್ತದೆ ದೇವರ ಆರ್ಥಿಕ ವ್ಯವಸ್ಥೆ. ನಾವೆಲ್ಲ ಹೊಟ್ಟೆತುಂಬ ಉಣ್ಣುವವರ ಬಣ್ಣಕ್ಕೆ ಸೇರಿದವರು ಔಷಧಿ ಪ್ರಮಾಣದಲ್ಲಿ ತೆಗೆದುಕೊಳ್ಳುವಷ್ಟನ್ನು ಸಹಜವಾಗಿ ಅರಿತುಕೊಳ್ಳುವುದು

ಭಗೀರಥ ಪ್ರಯತ್ನ, ಏತಕ್ಕೆಂದರೆ ತಾಯಿತಂದೆಗಳ ಶಿಕ್ಷಣದಿಂದ ನಾವು ತಿಂಡಿಪೋತರು. ಹೇಗಾಗಿ ಇನ್ನೇನು ಕಾಲಮಿಂಚಿಹೋಯಿತೋ ಎನ್ನುವಾಗ, ಆಹಾರದ ತಯಾರಿಕೆ ಭೋಗಕ್ಕಲ್ಲವೆಂದೂ ಶರೀರವನ್ನು ನಮ್ಮ ಗುರಿಯಲ್ಲಿ ಇರಿಸಿಕೊಳ್ಳುವುದಕ್ಕೆಂದೂ ಅಭಿಪ್ರಾಯ ನಮ್ಮಲ್ಲಿ ಕೆಲವರಿಗೆ ಜನಿಸುತ್ತದೆ. ಅಂದಿನಿಂದ ಭೋಗಕ್ಕಾಗಿ ಉಣ್ಣಬೇಕೆಂಬ ಅಭ್ಯಾಸ ಅನುವಂಶಿಕವೂ ಗಳಿಸಿಕೊಂಡದ್ದೂ ಆದ ಅಭ್ಯಾಸ ಅದು—ಕರೋರಸಂಗ್ರಾಮ. ಆದ್ದರಿಂದಲೇ ಗೊತ್ತಾದ ಅವಧಿಯಲ್ಲಿನ ಪೂರ್ಣ ಉಪವಾಸಕ್ಕೂ ಸದಾ ಅರ್ಧ ಉಪವಾಸಕ್ಕೂ ಇರುವ ಆವಶ್ಯಕತೆ. ಅರ್ಧ ಉಪವಾಸವೇ ಗೀತೆಯ ಅತ್ಯಲ್ಪ ಆಹಾರ ಅಥವಾ ತೂಕಮಾಡಿದ ಆಹಾರ.

'ಕೃಶಗ್ರಾಸ' ಎಂಬುದು ಒಳ್ಳೆಯ ಸೂಕ್ತಿ. 'ಅಲ್ಪ' ಎಂದರೆ ಸಾಕಾದಷ್ಟಕ್ಕಿಂತ ಕಡಿಮೆ ಎಂದರ್ಥ. ಎಷ್ಟು ಸಾಕು ಎನ್ನುವುದು ಊಹೆಯ ವಿಷಯ. ಆದ್ದರಿಂದ ನಮ್ಮದೇ ಆದ ಮಾನಸಿಕ ಚಿತ್ರ ಅದು. ಸತ್ಯಾನ್ವೇಷಕನಿಗೆ ಗೊತ್ತು, ನರ ಯಾವಾಗಲೂ ದೇಹದ ಮೇಲೆ ವಾತ್ಸಲ್ಯವುಳ್ಳವನೆಂಬುದು. ಆ ಭೋಗಾಪೇಕ್ಷೆಯನ್ನು ಪ್ರತಿರೋಧಿಸಲೋಸುಗ ಆತ ನುಡಿದ: ಒಬ್ಬ ತನಗೆ ಎಷ್ಟು ಸಾಕೆಂದು ಭಾವಿಸಿಕೊಳ್ಳುವನೋ ಅದಕ್ಕಿಂತ ಕಡಿಮೆ ಆಹಾರ ಸೇವಿಸಬೇಕು, ಹಾಗೆ ಮಾಡಿದರೆ ತನಗೆಷ್ಟು ಆವಶ್ಯಕವೋ ಅಷ್ಟನ್ನೇ ದಿಟವಾಗಿ ಸೇವಿಸುವ ಸಂಭವವುಂಟು. ನಾವು ಅನೇಕ ವೇಳೆ ಯಾವುದನ್ನು 'ನಾಲ್ಕಗುಳು' ಅಥವಾ 'ಅತಿಕೊಂಚ' ಎಂದು ಕರೆಯುತ್ತೇವೋ ಅದು ನಮಗೆ ಬೇಕಾದಷ್ಟಕ್ಕಿಂತ ಹೆಚ್ಚಾಗಿಯೇ ಆಗಿರುವುದು ಸಂಭವ. ಅತಿಯಾಗಿ ತಿನ್ನುವುದರಿಂದಲೂ ಕ್ರಮತಪ್ಪಿ ತಿನ್ನುವುದರಿಂದಲೂ ನಿಶ್ಶಕ್ತರಾಗುವಷ್ಟು ಮಂದಿ ಕಡಮೆ ತಿನ್ನುವುದರಿಂದ ಆಗಲಾರರು. ಸರಿಯಾದ ಆಹಾರಮಿತಿಯನ್ನು ನಾವು ಕಂಡುಹಿಡಿದುಕೊಂಡರೆ ಎಷ್ಟೊಂದು ಅಸಾಧಾರಣವಾದ ಅಲ್ಪ ಅಳತೆಯಲ್ಲಿ ಆಹಾರ ಸಾಕಾಗುತ್ತದೆಂಬುದು ನಮಗೆ ಆಶ್ಚರ್ಯವೆನಿಸೀತು. **(ಮೀರಾರಿಗೆ ಬಾಪೂ ಪತ್ರಗಳು)**

ದೇಹದಲ್ಲಿ ವಿಷಯಾಸಕ್ತಿ ಕೆರಳಿ ಅದು ನಮ್ಮೆದುರು ದಂಗೆ ಎದ್ದಾಗ, ದೇಹದಂಡನೆ ಅಗತ್ಯ ಕರ್ತವ್ಯ. ವಿಷಯ ದಮನಗೊಂಡು ದೇಹ ಅಧೀನವಾಗಿ ಸೇವೆಗೆ ಸಾಧನವಾಗಬಲ್ಲದಾಗಿರುವಾಗ ಪಾಪ. ಬೇರೆ ಮಾತಿನಲ್ಲಿ

ಹೇಳಬೇಕಾದರೆ, ದೇಹದಂಡನೆಯಲ್ಲಿ ಆಂತರಿಕವಾದ ಯಾವ ಸುಗುಣವೂ ಇಲ್ಲ (ಹರಿಜನ- ೨-೧೧-೩೫)

ಆಧ್ಯಾತ್ಮಿಕ ಪ್ರಗತಿಗೆ ಕಾಯಶಿಕ್ಷೆ ಒಂದು ಉಪಾಧಿಯೆಂದು ಜಗತ್ತಿನಲ್ಲೆಲ್ಲ ಅಭಿಪ್ರಾಯ ಏರ್ಪಟ್ಟಿದೆ ನನಗಾದರೋ ವೈಯಕ್ತಿಕ ಮತ್ತು ಸಾರ್ವಜನಿಕ ಉಪವಾಸದ ವಿಧಾನದಲ್ಲಿ ಗಾಢ ನೆಚ್ಚಿಕೆಯಿದೆ

(ಹರಿಜನ ೧೫-೪-೩೩)

ಅದೆಷ್ಟೇ ಸ್ವಲ್ಪವಾಗಿರಲಿ, ಉಪವಾಸವಿಲ್ಲದೆ ಪ್ರಾರ್ಥನೆಯಿಲ್ಲ ಎಂಬುದು ಈಗ ನನಗೆ ಮೊದಲಿಗಿಂತಲೂ ಹೆಚ್ಚು ವಿವರವಾಗಿ ಅರಿವಾಗಿದೆ ಈ ಉಪವಾಸ ಬರಿ ನಾಲಗೆಗೆ ಸಂಬಂಧಪಟ್ಟುದಲ್ಲ, ಸಕಲ ಇಂದ್ರಿಯಗಳಿಗೂ ಅಂಗಾಂಗಗಳಿಗೂ ಸಂಬಂಧಪಟ್ಟುದು ಪ್ರಾರ್ಥನೆಯಲ್ಲಿ ಪೂರ್ತಿಯಾಗಿ ತಲ್ಲೀನರಾಗಬೇಕೆಂದರೆ ಶಾರೀರಿಕ ಚಟುವಟಿಕೆಗಳನ್ನು ಪೂರ್ತಿಯಾಗಿ ಹೊರದೂಡಿ, ನಮ್ಮ ಇಡೀ ಇರುವಿಕೆಯನ್ನು ಪ್ರಾರ್ಥನೆಗೆ ವಶಪಡಿಸಿ ಎಲ್ಲ ಭೌತಚಲನೆ ವಲನೆಗಳ ಮೇಲೇರಿ ಅವಿಂದ ನಿಸ್ಸಂಗರಾಗಬೇಕು ಇಂಥ ಸ್ಥಿತಿ ಆತ್ಮಸಂತೋಷದಿಂದ ಅನವರತ ನಡೆಸಿದ ಕಾಯದಂಡನೆಯಿಂದ ಮಾತ್ರ ಮುಟ್ಟಲಾದೀತು ಎಂದರೆ, ಉಪವಾಸಗೈಯುವುದೆಲ್ಲ ಆಧ್ಯಾತ್ಮಿಕ ಕ್ರಿಯೆಯಾದರೆ ಒಂದು ಉದ್ರಿಕ್ತ ಪ್ರಾರ್ಥನೆ ಪರಮಾರ್ಥ ಸತ್ಯದಲ್ಲಿ ಐಕ್ಯವಾಗಲು ಆತ್ಮನ ತೀವ್ರ ಹಂಬಲಿಕೆ ಅದು

(ಹರಿಜನ, ೮-೭-೩೩)

ಯಾತನೆ ಪಡುವುದಕ್ಕೆ ಸಿದ್ಧನಾಗಿರುವವ ಮಾತ್ರ ದೇವರಿಗೆ ಪ್ರಾರ್ಥನೆ ಮಾಡಬಲ್ಲನೆಂದು ನನ್ನ ಧರ್ಮ ತಿಳಿಸುತ್ತದೆ ಉಪವಾಸ ಮತ್ತು ಪ್ರಾರ್ಥನೆ ನನ್ನ ಧರ್ಮದ ಸಾಮಾನ್ಯ ಸೂತ್ರಗಳು ಈ ಬಗೆಯ ಪಶ್ಚಾತ್ತಾಪ ಸಂಸ್ಕಾರ ಇಸ್ಲಾಂ ಧರ್ಮದಲ್ಲಿ ಕೂಡ ಇದೆಯೆಂದು ನಾಬಲ್ಲೆ ಪ್ರವಾದಿಯ ಜೀವನದಲ್ಲಿ ನಾನು ಓದಿದ್ದೇನೆ ಅನೇಕ ಸಲ ತಾನು ಉಪವಾಸಗೈದು ಪ್ರಾರ್ಥನೆ ಸಲ್ಲಿಸಿದರೂ ಮತ್ತು ಇತರರು ತನ್ನನ್ನು ಅನುಕರಿಸಬಾರದೆಂದು ನಿಷೇಧಿಸಿದ. ತಾನು ಮಾಡುವ ಕೆಲಸವನ್ನು ಇತರರೂ ಮಾಡಲು ಏಕೆ ಸಮ್ಮತಿ ಕೊಡುವುದಿಲ್ಲವೆಂದು ಅವನನ್ನು ಯಾವನೋ ಒಬ್ಬ ಪ್ರಶ್ನಿಸಿದ ಆತ ಹೇಳಿದ "ಕಾರಣ, ದೈವಿಕ ಆಹಾರವನ್ನುಂಡು

ನಾನು ಜೀವಿಸುವೆ  ಉಪವಾಸ ಮತ್ತು ಪ್ರಾರ್ಥನೆಯ ಸಹಾಯದಿಂದ ಆತ ತನ್ನ ಮಹಾ ಕಾರ್ಯಗಳಲ್ಲಿ ಬಹುಭಾಗವನ್ನೆಸಗಿದ  ಯಾವಾತನಿಗೆ ದೇವರಲ್ಲಿ ಎಂದಿಗೂ ಮುಗಿಯದ ನಂಬಿಕೆ ಇದೆಯೋ ಅವ ಮಾತ್ರ ಉಪವಾಸವಿರಬಲ್ಲನೆಂಬುದನ್ನು ಅವನಿಂದ ನಾನು ಕಲಿತುಕೊಂಡೆ  ವಿಶ್ರಾಂತಿಯಲ್ಲಿದ್ದಾಗ ಸುಖಲೋಲುಪತೆಯ ಗಳಿಗೆಯಲ್ಲಿ, ಆ ಪ್ರವಾದಿಗೆ ದಿವ್ಯ ದರ್ಶನಗಳು ಬರಲಿಲ್ಲ  ಉಪವಾಸವಿದ್ದು, ಪ್ರಾರ್ಥನೆಗೈಯುತ್ತ ಹಲವಾರು ರಾತ್ರಿ ಒಟ್ಟಿಗೆ ಎಚ್ಚರವಾಗಿದ್ದು ನಿಶಿಯ ಘಂಟೆಗಳಲ್ಲೆಲ್ಲ ಕಾಲಿನ ಮೇಲೆ ನಿಂತುಕೊಂಡು ದಿವ್ಯದರ್ಶನಗಳನ್ನು ಸ್ವೀಕರಿಸಿದೆ  ಹೀಗೆ ಉಪವಾಸ ಪ್ರಾರ್ಥನೆಗಳಲ್ಲಿ ಮಗ್ನನಾದ ಪೈಗಂಬರನ ಚಿತ್ರ ಈ ನಿಮಿಷದಲ್ಲಿ ಕೂಡ ನನ್ನ ಕಣ್ಣೆದುರಿಗೆ ಕಟ್ಟನಿಂತಿದೆ  ವಿಷಯಾಸಕ್ತಿ ನಿನ್ನಲ್ಲಿ ಕುಗ್ಗಿದಷ್ಟೂ ಆತ್ಮಶಕ್ತಿ ವೃದ್ಧಿಯಾಗುವುದೆಂದು ನನ್ನ ಸ್ವಂತ ದೃಢ ನಂಬಿಕೆ

(ಯಂಗ್ ಇಂಡಿಯಾ. ೨೩-೧೦-೨೪)

## ಪ್ರಾರ್ಥನೆ

ಪ್ರಾರ್ಥನೆ ನಿಜವಾಗಿ ಧರ್ಮದ ಆತ್ಮ ಮತ್ತು ಸಾರ  ಆದ್ದರಿಂದ ಅದು ಮಾನವ ಜೀವಿತದ ನೈಜ ಕೇಂದ್ರವಾಗಬೇಕು, ಧರ್ಮವಿಲ್ಲದೆ ಯಾವ ಪುರುಷನೂ ಬದುಕಲಾರ  (ಯಂಗ್ ಇಂಡಿಯಾ. ೨೩-೧-೩೧)

ವಿನಾಶಹೊಂದುವ ದೇಹಕ್ಕೆ ನಾವು ಆಹಾರ ಒದಗಿಸುತ್ತೇವೆಂದ ಮೇಲೆ ಅವಿನಾಶಿಯಾದ ಆತ್ಮಕ್ಕೆ ಆಹಾರವನ್ನು ಒದಗಿಸುವುದು ನಮ್ಮ ಪ್ರಥಮ ಕರ್ತವ್ಯ, ಅಲ್ಲವೆ ? ಅಂಥ ಆಹಾರ ಪ್ರಾರ್ಥನೆ  ಪ್ರಾರ್ಥನೆಯ ಮಾಂತ್ರಿಕತೆಯನ್ನು ಅನುಭವಿಸಿದ ವ್ಯಕ್ತಿ ದಿವಸಗಟ್ಟಲೆ ಆಹಾರವಿಲ್ಲದೆ ಇರಬಹುದಾದರೂ ಒಂದು ಕ್ಷಣವೂ ಪ್ರಾರ್ಥನೆ ಇಲ್ಲದೆ ಇರಲಾರ ಏಕೆಂದರೆ ಪ್ರಾರ್ಥನೆಯಿಲ್ಲದೆ ಒಳಶಾಂತಿ ಇಲ್ಲ

ದೇವರ ಪೂಜೆ ಎಂದರೆ ಆತನನ್ನು ನುತಿಸಿ ಕೊಂಡಾಡುವುದು  ನಮ್ಮ ಅಯೋಗ್ಯತೆಯನ್ನೂ ಅಶಕ್ತಿಯನ್ನೂ ಬಿನ್ನಯಿಸಿಕೊಳ್ಳುವುದೇ ಪ್ರಾರ್ಥನೆ

ದೇವರಿಗೆ ಸಹಸ್ರನಾಮ, ಅಥವಾ ಆತ ನಾಮರಹಿತ. ನಮಗೆ ಪ್ರಿಯವೆನಿಸಿದ ಯಾವ ನಾಮದಿಂದಲಾದರೂ ಅವನನ್ನು ಪೂಜಿಸಬಹುದು,

ಪ್ರಾರ್ಥಿಸಬಹುದು. ಕೆಲವರು ಅವನನ್ನು 'ರಾಮ'ನೆಂದು ಕರೆಯುತ್ತಾರೆ, ಕೆಲವರು 'ಕೃಷ್ಣ' ಎನ್ನುತ್ತಾರೆ ಇತರರು 'ರಹೀಂ' ಎನ್ನುತ್ತಾರೆ, ಮತ್ತೂ ಕೆಲವರು 'ದೇವರು' ಎಂದು ಕರೆಯುವುದುಂಟು ಎಲ್ಲರೂ ಒಂದೇ ಚೈತನ್ಯವನ್ನೇ ಆರಾಧಿಸುವರು, ಆದರೆ ಹೇಗೆ ಎಲ್ಲ ಬಗೆಯ ಆಹಾರಗಳೂ ಎಲ್ಲರಿಗೂ ಸಹ್ಯವಾಗದೋ ಹಾಗೆಯೇ ಎಲ್ಲ ನಾಮಗಳೂ ಎಲ್ಲರಿಗೂ ಉಲ್ಲಾಸ ನೀಡಲಾರವು ತನ್ನಲ್ಲಿರುವ ಸಂಗತಿಗಳಿಗೆ ತಕ್ಕಂತೆ ಪ್ರತಿಯೊಬ್ಬನೂ ಹೆಸರನ್ನು ಆರಿಸಿಕೊಳ್ಳುತ್ತಾನೆ ದೇವರು ಅಂತರ್ಯಾಮಿಯೂ ಸರ್ವಶಕ್ತನೂ ಸರ್ವಜ್ಞನೂ ಆದ್ದರಿಂದ ನಮ್ಮ ಹೃದಯಾಂತರಾಳದ ಭಾವಗಳನ್ನು ಬಲ್ಲ ನಮ್ಮ ಯೋಗ್ಯತೆಗೆ ತಕ್ಕಹಾಗೆ ಉತ್ತರಕೊಡುವ

ಮಿರಾಬಾಯಿಯ ಗೀತೆಯಲ್ಲಿ ಭಗವನ್ನಾಮಾಮೃತವನ್ನು ಚೆನ್ನಾಗಿ ಈಂಟೆಂದು ಭಕ್ತ ತನ್ನ ಆತ್ಮವನ್ನು ಕೇಳಿಕೊಳ್ಳುತ್ತಾನೆ ಭೌತಿಕ ಅನ್ನಪಾನ ಸಂತೃಪ್ತಿಯನ್ನು ತರುತ್ತದೆ ಅತಿಯಾಗಿ ಭುಂಜಿಸಿದರೆ ಕಾಹಿಲೆಯನ್ನು ತರುತ್ತದೆ ದೇವನಾಮದ ಸುಧೆಗಾದರೋ ಅಂತ ಪರಿಮಿತಿಯೇ ಇಲ್ಲ. ಅದನ್ನು ಹೆಚ್ಚು ಹೆಚ್ಚು ಕುಡಿದಷ್ಟೂ ಅದಕ್ಕಾಗಿ ಬಾಯಾರಿಕೆ ಹೆಚ್ಚು ಹೆಚ್ಚಾಗುತ್ತದೆ ಆದರೆ ಅದು ಹೃದಯದ ತಳಕ್ಕೆ ಇಳಿಯಬೇಕು ಹಾಗೆ ಆದಾಗ ಎಲ್ಲ ಶಾಂತಿ ವ್ಯಾಮೋಹ ಕಾಮ ಮಾತ್ಸರ್ಯಗಳೂ ನಮ್ಮಿಂದ ಕಳಚಿಬೀಳುತ್ತವೆ ಎಂದರೆ ನಾವು ಪಟ್ಟು ಹಿಡಿಯಬೇಕು, ತಾಳ್ಮೆಯಿಂದಿರಬೇಕು ಅಂಥ ಪ್ರಯತ್ನಕ್ಕೆ ವಿಜಯ ಅನಿವಾರ್ಯವಾದ ಪರಿಣಾಮ

(ಒಂದು ಪ್ರಾರ್ಥನೋತ್ತರ ಭಾಷಣ ೨೮-೬-೪೬)

ಆರಾಧನೆ ಅಥವಾ ಪ್ರಾರ್ಥನೆಯನ್ನು ತುಟಿಗಳಿಂದ ಎಸಗತಕ್ಕದ್ದಲ್ಲ ಹೃದಯದಿಂದ ಮೂಡಬೇಕು ಆ ಕಾರಣದಿಂದಲೇ ಮೂಕನೂ ಬಿಕ್ಕುವವನೂ ಅಜ್ಞಾನಿಯೂ ಪೆದ್ದನೂ ಪ್ರಾರ್ಥನೆಯನ್ನು ಸಲ್ಲಿಸಲಾಪ ಯಾರ ರಸನೆಗಳು ಮಧುವಿನಿಂದ ಕೂಡಿದ್ದರೂ ಹೃದಯಗಳಲ್ಲಿ ವಿಷ ತುಂಬಿದೆಯೋ ಅವರ ಪ್ರಾರ್ಥನೆ ಯಾವೊತ್ತೂ ದೇವರಿಗೆ ಕೇಳಿಸದು. ಮೊರೆಯಿಡಲಾಶಿಸುವವ ತನ್ನ ಎದೆಯನ್ನು ಚೊಕ್ಕಟಗೊಳಿಸಬೇಕು. ಯಾರಾದರೂ ಪ್ರಶ್ನಿಸಬಹುದು ಇಷ್ಟರ ಮಟ್ಟಿಗೆ ಹೃದಯವನ್ನು ಶುಚಿಗೊಳಿಸುವುದು ಹೇಗೆ? ಬಾಯಿಮಾತಿನ ಭಾಷೆಯನ್ನು ಸುಲಭವಾಗಿ ಕಲಿಸಬಹುದು, ಎದೆಯ ಭಾಷೆ

ಯನ್ನು ಕಲಿಸ ಬಲ್ಲವರಾರು? ಅದನ್ನು ಅಕುಟಿಲ ಉಪಾಸಕ ಭಕ್ತನೊಬ್ಬನೇ ಅರಿತವ, ಅವನೇ ಅದನ್ನು ಹೇಳಿಕೊಡಬಲ್ಲ. ಮೂರು ಕಡೆಯೂ ಅವನ ಪ್ರಸ್ತಾಪ ಸಾಧಾರಣವಾಗಿ ಎಲ್ಲ ಕಡೆಯೂ ಬರುತ್ತದೆ ಆದರೆ ಭಕ್ತನ ವಿವರಣೆಯನ್ನು ತಿಳಿದುಕೊಂಡ ಪಕ್ಷಕ್ಕೆ ಸಾಕಷ್ಟು ಮಾರ್ಗದರ್ಶನ ಸಿಕ್ಕಿತೆಂದು ಹೇಳಲಾಗದು ಈ ಪೃಥ್ವಿಯಲ್ಲಿ ಭಕ್ತರು ಅಪರೂಪ ಆದ್ದರಿಂದ ಸೇವಾಧರ್ಮವೇ ಸಾಧನಾಪಥವೆಂದು ನಾನು ಸಲಹೆ ಮಾಡಿದ್ದೇನೆ ಸಹಮಾನವರ ಸೇವೆಯಲ್ಲಿ ತೊಡಗಿರುವವನ ಹೃದಯವನ್ನು ತನ್ನ ಪೀಠಕ್ಕಾಗಿ ದೇವರು ತಾನೇ ಹುಡುಕಿಕೊಂಡು ಬರುತ್ತಾನೆ. ಪ್ರಾರ್ಥನಾಪರವಾದ ಹೃದಯವೇ ವಾಹನ, ಸೇವೆಯಿಂದ ಹೃದಯ ಪ್ರಾರ್ಥನಾಪರವಾಗುತ್ತದೆ

(ಯಂಗ್ ಇಂಡಿಯಾ. ೨೪-೯-೨೫)

ಲಕ್ಷಾಂತರ ಹಿಂದೂಗಳೂ ಮುಸಲ್ಮಾನರೂ ಕ್ರೈಸ್ತರೂ ಎಹೂದ್ಯರೂ ಪ್ರತಿದಿನವೂ ಸೃಷ್ಟಿಕರ್ತನ ಆರಾಧನೆಗೆಂದು ಬೇರೆಗೈದಿಟ್ಟಿರುವ ಸಮಯದಲ್ಲಿ ಮಾಡುವುದಾದರೂ ಏನು? ಸೃಷ್ಟಿಕರ್ತನೊಡನೆ ಒಂದಾಗಬೇಕೆಂಬ ಎದೆಯ ಹಂಬಲ ಅದೆಂದು ತೋರುತ್ತದೆ ನನಗೆ, ಹಾಗೂ ಅವನ ಆಶೀರ್ವಾದಕ್ಕಾಗಿ ಬೇಡಿಕೆ ಇದೊಂದು ವಿಚಾರದಲ್ಲಿ ದೃಷ್ಟಿಕೋನಕ್ಕೆ ಪ್ರಾಧಾನ್ಯ, ವಟುಗುಟ್ಟಿದ ಅಥವಾ ಗೊಣಗುಟ್ಟಿದ ಶಬ್ದಗಳಿಗಲ್ಲ ಪುರಾತನ ಯುಗದಿಂದ ಪದಗಳೊಡನೆ ಕೂಡಿಕೊಂಡು ಇಳಿದುಬಂದಿರುವ ಆವರಣಕ್ಕೆ ಇರುವ ಪ್ರಭಾವ ಎಷ್ಟೋ ವೇಳೆ ಆ ಪದಗಳನ್ನು ನಮ್ಮ ತಾಯ್ನುಡಿಗೆ ಅನುವಾದ ಮಾಡಿದಾಗ ಪೂರ್ತಿ ನಷ್ಟವಾಗುತ್ತದೆ ಉದಾಹರಣೆಗೆ ಗಾಯತ್ರೀ ಮಂತ್ರವನ್ನು ಗುಜರಾತಿಗೆ ತರ್ಜುಮೆಗೈದು ಉಚ್ಚರಿಸಿದರೆ ಮೂಲದ ಪ್ರಭಾವ ಅದಕ್ಕೆ ಬರುವುದಿಲ್ಲ ‘ರಾಮ’ ಶಬ್ದವನ್ನು ಉಚ್ಚರಿಸಿದ ಕೂಡಲೇ ಲಕ್ಷೋಪಲಕ್ಷ ಹಿಂದೂಗಳಿಗೆ ಭಾವೋತ್ಕರ್ಷವಾಗುತ್ತದೆ, ಅದೇ ‘ದೇವರು’ ಎಂಬ ಶಬ್ದವನ್ನು ಉಚ್ಚರಿಸಿದಾಗ ಅವರಿಗೆ ಅರ್ಥವಾಗಬಹುದಾದರೂ ಅವರನ್ನು ಅದು ಹಿಡಿಯಲಾರದು. ಏನೆಂದರೇನು, ಬಹುಕಾಲದ ಪ್ರಯೋಗದಿಂದ ಶಬ್ದಗಳು ಸತ್ಯವನ್ನೂ ರೂಢಿಯೊಂದಿಗೆ ಪವಿತ್ರತೆಯನ್ನೂ ಗಳಿಸಿಕೊಳ್ಳುತ್ತವೆ ಆದ್ದರಿಂದ ವಿಶೇಷ ಬಳಕೆಯಲ್ಲಿರುವ ಮಂತ್ರಗಳ ಪದ್ಯಪಂಕ್ತಿಗಳಿಗೂ ಹಿಂದಣ ಸಂಸ್ಕೃತದ ವಿಹಿತಕ್ರಮವನ್ನು ಇಟ್ಟುಕೊಳ್ಳ

ಬೇಕೆಂಬ ವಾದದಲ್ಲಿ ತುಂಬ ಹುರುಳಿದೆ ಅವುಗಳ ಸರಿಯಾದ ಅರ್ಥವನ್ನು ಅರಿತುಕೊಳ್ಳಲೇಬೇಕೆಂದು ಬೇರೆ ಹೇಳಬೇಕಾಗಿಲ್ಲ

ಈ ಉಪಾಸನಾ ವಿಧಿಗಳಿಗೆ ಎಷ್ಟು ಕಾಲವನ್ನು ಕೊಡಬೇಕು ಎಂಬುದಕ್ಕೆ ನಿಷ್ಕೃಷ್ಟ ಸೂತ್ರವನ್ನು ನೇಮಿಸಲಾಗದು ಅದು ಅವರವರ ಮನಃಪರಿಪಾಕದ ಮೇಲೆ ನಿಂತದ್ದು ಇವು ನಮ್ಮ ಬಾಳಿನ ಅಮೂಲ್ಯ ಸಮಯ ಈ ಅಭ್ಯಾಸಗಳಿಂದ ನಮ್ಮಲ್ಲಿ ನಮ್ರತೆಯೂ ಸಮಚಿತ್ತವೂ ಜನಿಸಬೇಕು ಜೊತೆಗೆ, ಆತನಿಚ್ಛೆಯಿಲ್ಲದೆ ಏನೊಂದೂ ಆಗದು ನಾವು ಕುಂಬಾರನ ಕೈಯಲ್ಲಿರುವ ಒರಿ ಜೇಡಿಮಣ್ಣು ಎಂಬುದನ್ನು ಮನಗಾಣುವುದಕ್ಕೆ ಇವು ನೆರವಾಗಬೇಕು ಈಗತಾನೆ ಮುಗಿದ ಹಿಂದಿನದನ್ನು ವಿಮರ್ಶಿಸುತ್ತ, ಲೋಪವನ್ನು ಒಪ್ಪಿಕೊಂಡು, ಕರ್ಮವನ್ನು ಯೋಜಿಸಿ, ಉತ್ತಮವಾಗಿರುವುದಕ್ಕೂ ಉತ್ತಮವಾದದ್ದನ್ನು ಮಾಡುವುದಕ್ಕೂ ಅಗತ್ಯವಾದ ಸಾಮರ್ಥ್ಯವನ್ನು ಬೇಡುವ ಘಳಿಗೆಗಳುಂಟು ಕೆಲವರಿಗೆ ಒಂದೇ ನಿಮಿಷ ಸಾಕಾಗಬಹುದು, ಮತ್ತೆ ಕೆಲವರಿಗೆ ಇಪ್ಪತ್ತುನಾಲ್ಕು ಘಂಟೆಗಳು ಅತಿ ಕಡಮೆಯಾಗಬಹುದು ಯಾರು ಭಗವಂತ ತಮ್ಮಲ್ಲಿರುವನೆಂಬ ಭಾವದಿಂದ ತುಂಬಿರುವರೋ ಅವರಿಗೆ ಕಾಯಕವೇ ಪ್ರಾರ್ಥನೆ ಅವರ ಜೀವನ ಸಂತತವಾದೊಂದು ಪ್ರಾರ್ಥನೆ ಅಥವಾ ಆರಾಧನಕ್ರಿಯೆ ಪಾಪಾಚರಣೆ, ವಿಷಯಲಾಂಪಟ್ಯ, ಸ್ವಾರ್ಥ ಸಾಧನೆಗಳಿಗಾಗಿ ಮಾತ್ರ ಕಾರ್ಯೋದ್ಯುಕ್ತರಾಗುವ ಇತರ ಮಂದಿಗಾದರೋ ಪ್ರಾರ್ಥನೆಯ ಕಾಲ ಎಷ್ಟಿದ್ದರೂ ಅಧಿಕವಲ್ಲ ಅವರಿಗೆ ಶಾಸ್ತ್ರ, ಭಜನ, ಪರಿಶುದ್ಧರಾಗಬೇಕೆಂಬ ಸಂಕಲ್ಪ ಇದ್ದ ಪಕ್ಷದಲ್ಲಿ ಅವರು ತಮ್ಮ ಅಂತರಂಗದಲ್ಲಿ ಶುದ್ಧಿಗೈಯುವ ಪರಮಾತ್ಮ ಸಾನ್ನಿಧ್ಯವನ್ನು ಅನುಭವಿಸುವವರೆಗೂ ಪ್ರಾರ್ಥನೆ ಗೈಯುತ್ತ ಹೋಗಿಯಾರು ಸಾಮಾನ್ಯ ಮರ್ತ್ಯರಾದ ನಮಗೆ ಈ ಎರಡು ಅತಿರೇಕಗಳ ನಡುವೆ ಒಂದು ಮಧ್ಯಮಾರ್ಗ ಇದ್ದೇ ಇರಬೇಕು ನಾವು ಮಾಡುವ ಕರ್ಮವೆಲ್ಲ ಭಗವದಾರಾಧನೆಯೆಂದು ಹೇಳುವುದಕ್ಕೆ ನಮ್ಮನ್ನು ತಟುವಷ್ಟರ ಔನ್ನತ್ಯ ನಮಗಿಲ್ಲ ಹಾಗೂ ಶುದ್ಧಾಂಗವಾಗಿ ಸ್ವಾರ್ಥಕ್ಕೋಸ್ಕರವೇ ಬದುಕಿರುವಷ್ಟು ದೂರ ಪ್ರಾಯಶಃ ನಾವು ಕೆಳಗಿಳಿದಿಲ್ಲ ಇದರಿಂದಲೇ ಸರ್ವಧರ್ಮಗಳೂ ಸಾಧಾರಣ ಉಪಾಸನೆಗೆ ಮುಹೂರ್ತಗಳನ್ನು ಮೀಸಲಾಗಿ ಇಟ್ಟಿವೆ

ದುರಾದೃಷ್ಟವಶಾತ್ ಈ ಕಾಲದಲ್ಲಿ ಅವು ಇಲ್ಲ ಬೂಟಾಟಿಕೆ, ಇಲ್ಲ, ಕೇವಲ ಯಾಂತ್ರಿಕ ಮತ್ತು ಸಾಂಪ್ರದಾಯಿಕ ಅರ್ಚನೆಗಳೊಡನೆ ಸರಿಯಾದ ಮನೋಭಾವ ಇರುವುದು ಅಗತ್ಯ ಸಮಸ್ತ ಜೀವರಾಶಿಯನ್ನು ಕುರಿತು ನ್ಯಾಯದಿಂದ ನಾವು ವರ್ತಿಸುವಂತೆ ಮಾಡೆಂದು ದೇವರಲ್ಲಿ ಕೇಳಿಕೊಳ್ಳುವುದಕ್ಕಿಂತ ಮಹೋನ್ನತವಾದದ್ದು ಒಂದೂ ಇಲ್ಲ (ಯಂಗ್ ಇಂಡಿಯಾ ೧೦-೬ ೨೬)

ಜೀರ್ಣ ವಾಡಿಕೆಗಳನ್ನು ಸೋಲಿಸಿ, ತನ್ನಲ್ಲಿರುವ ದುರುಳತನವನ್ನು ನೆಲಕ್ಕೆ ಕೆಡವಿ, ಒಳ್ಳೆಯದನ್ನು ಅದರ ಯಥಾರ್ಥ ಜಾಗದಲ್ಲಿ ಪುನಃ ಸ್ಥಾಪಿಸುವುದೇ ಮಾನವನ ವಿಧಿಬದ್ಧ ಉದ್ದೇಶ ಈ ಜಯವನ್ನು ಹೇಗೆ ಸಂಪಾದಿಸಬೇಕೆಂಬುದನ್ನು ಧರ್ಮ ನಮಗೆ ಕಲಿಸದಿದ್ದರೆ ಅದು ಏನನ್ನೂ ನಮಗೆ ಕಲಿಸದಂತೆಯೇ. ಜೀವನದ ಸಾಹಸೋದ್ಯಮಗಳಲ್ಲಿ ಅತ್ಯಂತ ಮೇಲಾದ ಉದ್ಯಮದಲ್ಲಿ ಸಫಲರಾಗುವುದಕ್ಕೆ ರಾಜಮಾರ್ಗವೆಂಬುದಿಲ್ಲ ಬಹುಶಃ ಹೇಡಿತನ ನಮ್ಮನ್ನು ಕಾಡುವ ಅತ್ಯಂತ ದೊಡ್ಡ ಅವಗುಣ ಅತ್ಯಂತ ದೊಡ್ಡ ಹಿಂಸೆಯೂ ಅದೇ ಆಗಿರುವುದು ಸಾಧ್ಯ ಸಾಧಾರಣವಾಗಿ ಹಿಂಸೆ ಎಂಬ ಗುಂಪಿಗೆ ಸೇರಿಕೊಳ್ಳುವ ರಕ್ತಪಾತ ಇತ್ಯಾದಿಗಳೆಲ್ಲಕಿಂತಲೂ ನಿಶ್ಚಯವಾಗಿ ಹೆಚ್ಚಿನ ಹಿಂಸೆ ಎನ್ನಬಹುದು ದೇವರಲ್ಲಿ ಅಪನಂಬಿಕೆಯಿಂದ ಆತನ ಲಕ್ಷಣಗಳ ಅಜ್ಞಾನದಿಂದ ಅದು ಉತ್ಪನ್ನವಾಗುತ್ತದೆ ಹೇಡಿತನವನ್ನೂ ಇತರ ಎಲ್ಲ ಹಳೆಯ ಕೆಟ್ಟ ನಡೆವಳಿಕೆಗಳನ್ನೂ ನೆಲಕ್ಕೆ ಕೆಡವಬೇಕಾದರೆ ಹೃದಯಪೂರ್ವಕವಾದ ಪ್ರಾರ್ಥನೆ ಮಾನವನಿಗಿರುವ ಅತ್ಯಂತ ಬಲಿಷ್ಠ ಸಾಧನ, ಸಂದೇಹ ಬೇಡ, ಎಂದು ನಾನೇ ಸಾಕ್ಷ್ಯವಿತ್ತು ಹೇಳಬಲ್ಲೆ. ಅಂತರ್ಯಾಮಿಯಾದ ಭಗವಂತನಲ್ಲಿ ಸಚೇತನ ನಂಬಿಕೆಯಿಲ್ಲವಾದರೆ ಪ್ರಾರ್ಥನೆ ಅಸಾಧ್ಯ

ಆಸುರೀ ಶಕ್ತಿಗಳೋ ದೈವೀ ಶಕ್ತಿಗಳೋ ಯಾವುದರೊಂದಿಗೆ ಸಖ್ಯ ಬೆಳಸುವುದು ನಮಗೆ ಸರಿಯೆಂಬುದನ್ನು ನಾವು ಆರಿಸಿಕೊಳ್ಳಬೇಕು. ಕತ್ತಲಿನ ಅರಸಾದ ಸೈತಾನನ ಮುಷ್ಟಿಗಳಿಂದ ಬಿಡುಗಡೆ ಹೊಂದುವುದಕ್ಕೆ ಮಾರ್ಗವಾದ ದೇವರು ಮನುಷ್ಯರ ನಡುವಣ ಪವಿತ್ರ ಸಖ್ಯವಲ್ಲದೆ ಮತ್ತೊಂದಲ್ಲ ಪ್ರಾರ್ಥನೆ, ಆದರೆ ತುಂಬುಹೃದಯದ ಪ್ರಾರ್ಥನೆ ಬಾಯಿಯಿಂದಾಗುವ ಪುನಶ್ಚರಣೆಯಲ್ಲ ಅದೊಂದು ಒಳಗಣ ಹಂಬಲಿಕೆ,

ವ್ಯಕ್ತಿಯ ಪ್ರತಿಯೊಂದು ಮಾತು ಪ್ರತಿಯೊಂದು ಕೆಲಸ, ಪ್ರತಿಯೊಂದು ಚಿಂತನೆಯಲ್ಲಿಯೂ ಅದು ರೂಪುಗೊಳ್ಳುತ್ತದೆ ದುಷ್ಟಭಾವನೆಯೊಂದು ಅವನನ್ನು ಮುತ್ತಿ ಸೋಲಿಸಿದರೆ ತಾನು ಅರ್ಪಿಸಿದ್ದು ಬರಿ ಅಧರ ಪ್ರಾರ್ಥನೆಯೆಂದು ಅವ ತಿಳಿದುಕೊಳ್ಳಬೇಕು, ಅದೇ ರೀತಿಯಲ್ಲಿಯೇ ಅರಿಯಬೇಕು ದುಷ್ಟನುಡಿಯೊಂದು ತುಟಿಗಳನ್ನು ದಾಟಿ ಹೋದರೆ, ತನ್ನಿಂದ ಒಂದು ದುಷ್ಕೃತ್ಯ ನಡೆದರೆ ಸತ್ಯವಾದ ಪ್ರಾರ್ಥನೆ ಈ ದೌರ್ಜನ್ಯತ್ರಯಕ್ಕೆ ಎದುರಾಗಿ ನಿಲ್ಲುವ ಅಭೇದ್ಯ ಗುರಾಣಿ ಮತ್ತು ರಕ್ಷಣೆ ಇಂಥ ಸತ್ಯವೂ ಸಚೇತನವೂ ಆದ ಪ್ರಾರ್ಥನೆಯನ್ನು ಎಸಗಬೇಕೆಂಬ ಮೊಟ್ಟಮೊದಲಿನ ಪ್ರಯತ್ನಕ್ಕೆ ಯಾವಾಗಲೂ ಸಾಫಲ್ಯ ದೊರೆಯುತ್ತದೆಂದು ಹೇಳಲಾಗದು ಅದಕ್ಕಾಗಿ ನಮ್ಮೊಡನೆಯೇ ಹೋರಾಡಬೇಕು ನಮ್ಮನ್ನು ವಿರೋಧಿಸಿಕೊಂಡೇ ನಂಬಬೇಕು, ಮಾಸಗಳು ಸಂವತ್ಸರಗಳಾಗಿ ತೋರಬಹುದು ನಮಗೆ ಆದ್ದರಿಂದ ಪ್ರಾರ್ಥನೆಯ ದಕ್ಷತೆಯನ್ನು ಕಂಡುಕೊಳ್ಳಬೇಕಾದರೆ ನಾವು ಅಪಾರ ತಾಳ್ಮೆಯನ್ನು ಅಭ್ಯಸಿಸಬೇಕು ಕತ್ತಲೆ, ಹತಾಶೆ ಅವಕ್ಕಿಂತಲೂ ಕೆಟ್ಟವು ಪ್ರಾಪ್ತಿಸುವುವು, ಹೇಡಿತನಕ್ಕೆ ತುತ್ತಾಗದೆ ಇವೆಲ್ಲದರೆದುರಿಗೆ ಕದನಗೈಯುವ ಧೈರ್ಯ ನಮ್ಮಲ್ಲಿ ಇರಬೇಕು ಪ್ರಾರ್ಥನಾಪರನಿಗೆ ಹಿಮ್ಮೆಟ್ಟುವುದೆಂಬ ವಸ್ತು ಇಲ್ಲವೇ ಇಲ್ಲ ನಾನು ಒಕ್ಕಣಿಸುತ್ತಿರುವುದು ಅಡುಗೂಲಜ್ಜಿ ಇಲ್ಲದ ಸಲ್ಲದ ಒಂದು ಚಿತ್ರವನ್ನು ನಾನು ರಚಿಸಿಲ್ಲ ಊರ್ಧ್ವಪಥದಲ್ಲಿ ಏರುವಾಗ ತಮಗಿದಿರಾದ ಪ್ರತಿಯೊಂದು ಕಷ್ಟವನ್ನೂ ಪ್ರಾರ್ಥನೆಯಿಂದ ಜಯಿಸಿದ ಪುರುಷರ ಸಾಕ್ಷ್ಯವನ್ನು ನಾನು ಒಟ್ಟುಗೂಡಿಸಿದ್ದೇನೆ ಜೊತೆಗೆ ನನ್ನದೇ ಆದ ಅನುಭವದ ಈ ಸಾಕ್ಷ್ಯವನ್ನು ಸೇರಿಸಿದ್ದೇನೆ ನನ್ನ ಜೀವಿತಕಾಲ ಹೆಚ್ಚಿದಷ್ಟೂ ನಂಬಿಕೆ ಪ್ರಾರ್ಥನೆಗಳಿಗೆ ನಾನೆಷ್ಟು ಋಣಿಯೆಂಬುದರ ಅರಿವು ನನ್ನಲ್ಲಿ ಹೆಚ್ಚಾಗುತ್ತಿದೆ, ನನ್ನ ಭಾಗಕ್ಕೆ ಅವೆರಡೂ ಒಂದೇ ನಾನು ಉದ್ಧರಿಸುತ್ತಿರುವುದು ನನ್ನ ಅನುಭವ, ಕೆಲವೇ ಘಂಟೆಗಳ ಮಿತಿಯಿಂದ ಸಂಕೋಚವಾದದ್ದಲ್ಲ, ದಿವಸ ಅಥವಾ ವಾರಗಳದಲ್ಲ ಅದು ಅವಿಚ್ಛಿನ್ನವಾಗಿ ಹತ್ತಿರ ಹತ್ತಿರ ನಲವತ್ತು ವರುಷಗಳ ಅವಧಿಯಲ್ಲಿ ನಡೆದುಬಂದಿದೆ ನನಗೆ ದಕ್ಕಿದ ನನ್ನ ಪಾಲಿನವಾದ ಆಶಾಭಂಗಗಳು, ಕೊಟ್ಟ ಕೊನೆಯ ಕಾರ್ಗತ್ತಲೆ ಹತಾಶೆಯ ಸಲಹೆ

ಗಳು, ಎಚ್ಚರಿಕೆಯ ಸಲಹೆಗಳು ಗರ್ವದ ಅತಿಸೂಕ್ಷ್ಮ ದಾಳಿಗಳು ಆದರೂ ನಾನು ಹೀಗೆನ್ನಬಲ್ಲೆ. ನನ್ನ ನಂಬಿಕೆ ಅದು ಇನ್ನೂ ಬಲು ಕಡಮೆಯೆಂದು ಗೊತ್ತು ನನಗೆ, ಎಷ್ಟು ದೊಡ್ಡದಾಗಿರಬೇಕೆಂದು ನಾನು ಅಪೇಕ್ಷಿಸುವೆನೋ ಅಷ್ಟಿಲ್ಲ—ಈ ಸಂಕಷ್ಟಗಳಲ್ಲಿ ಪ್ರತಿಯೊಂದನ್ನೂ ಕಡೆಗೆ ಗೆದ್ದಿದೆ ಇಂದಿನವರೆಗೂ ನಮ್ಮಲ್ಲಿ ನಂಬಿಕೆ ಇದ್ದರೆ ನಮ್ಮ ಹೃದಯ ಪ್ರಾರ್ಥನೆಯಿಂದ ಭರಿತವಾಗಿದ್ದರೆ, ನಾವು ದೇವರನ್ನು ಪರೀಕ್ಷಿಸಕೂಡದು, ಅವನೊಂದಿಗೆ ಕರಾರು ಮಾಡಿಕೊಳ್ಳಕೂಡದು

ನಮ್ಮನ್ನು ನಾವು ಸೊನ್ನೆ ಮಾಡಿಕೊಳ್ಳಬೇಕು ನಾವು ಏನೂ ಅಲ್ಲ ಎಂಬ ಸ್ಥಿತಿಗೆ ಇಳಿಯುವವರೆಗೂ ನಮ್ಮಲ್ಲಿರುವ ದುಷ್ಟತನವನ್ನು ನಾವು ಜಯಿಸಲಾರೆವು ಸಹಾಯ ನೀಡೆಂದು ದೇವರನ್ನು ನೀನು ಕೇಳಲಾಶಿಸಿದರೆ ಪೂರ್ತಿ ಬೆತ್ತಲೆಯಾಗಿ ಅವನಲ್ಲಿಗೆ ನೀನು ಸಾಗುವೆ, ಯಾವ ಸಂಕೋಚವೂ ಇಲ್ಲದೆ ಅವನ ಹತ್ತಿರಕ್ಕೆ ಹೆಜ್ಜೆಯಿಡುವೆ ನಿನ್ನಂಥ ಒಬ್ಬ ಪತಿತನಿಗೆ ಹೇಗೆ ಆತ ಸಹಾಯವಿತ್ತಾನು ಎಂಬ ಭೀತಿಶಂಕೆಗಳು ನಿನ್ನಲ್ಲಿರುವುದಿಲ್ಲ ತನ್ನ ಬಳಿ ಸಾರಿದ ಲಕ್ಷಾಂತರ ಜೀವಿಗಳಿಗೆ ನೆರವಾದವನು ನಿನ್ನನ್ನು ಕೈಬಿಟ್ಟಾನೆ? ಇದನ್ನು ನನ್ನ ಸ್ವಾನುಭವದಿಂದ ಹೇಳುತ್ತಿದ್ದೇನೆ ಆ ಪಾಪಪರಿಹಾರಕ ಲೋಕ (*Purgatory*) ವನ್ನು ಈ ಕೊನೆಯಿಂದ ಆ ಕೊನೆಗೆ ನಾನು ಹಾದು ಬಂದಿದ್ದೇನೆ ದೇವರ ರಾಜ್ಯಕ್ಕಾಗಿ ಮೊದಲು ಹುಡುಕಾಡು, ಸಕಲವೂ ನಿನಗೆ ಬಳುವಳಿಯಾಗಿ ಬರುತ್ತದೆ

(ಯಂಗ್ ಇಂಡಿಯಾ ೪-೪-೨೯)

ನನ್ನ ಶೈಶವದಿಂದಲೂ ಪ್ರಾರ್ಥನೆಯೇ ನನಗೆ ಮಾನಸಿಕ ನೆಮ್ಮದಿಯಾಗಿದೆ, ನನ್ನ ಶಕ್ತಿಯಾಗಿದೆ (ಹರಿಜನ ೧-೬-೩೫)

ಪರೀಕ್ಷಾ ಪ್ರಸಂಗಗಳಲ್ಲೇ ದೇವರು ನನ್ನನ್ನು ಕಾಪಾಡಿದ್ದಾನೆ ವಕೀಲನಾಗಿದ್ದಾಗ, ಸಂಸ್ಥೆಗಳ ಸಂಚಾಲಕನಾಗಿದ್ದಾಗ ರಾಜಕಾರಣದಲ್ಲಿ, ನನಗಾದ ಎಲ್ಲ ಧರ್ಮಸಂಕಟದಲ್ಲಿಯೂ ದೇವರು ಕಾಪಾಡಿದನೆಂದು ಹೇಳಬಲ್ಲೆ ಪ್ರತಿಯೊಂದು ನೆಚ್ಚಿಕೆಯೂ ಗತಿಸಿದಾಗ "ಸಹಾಯಕರು ಸೋತುಹೋಗೆ ಸಂತೈಕೆಗಳು ದೂರವಾಗೆ" ಹೇಗೋ ನನಗೆ ಗೊತ್ತಿಲ್ಲದ ಯಾವಕಡೆಯಿಂದಲೋ ಸಹಾಯ ಬಂದುದನ್ನು ನಾ ಕಂಡಿರುವೆ ದೇವ

ರಿಗೆ ಮೊರೆ ಉಪಾಸನೆ ಪ್ರಾರ್ಥನೆಗಳು ಮೂಢಶ್ರದ್ಧೆಗಳಲ್ಲ, ಅವು ತಿನ್ನುವುದು ಕುಡಿಯುವುದು ಕುಳಿತುಕೊಳ್ಳುವುದು ನಡೆಯುವುದು ಮೊದಲಾದ ಕಾರ್ಯಗಳಿಗಿಂತಲೂ ಹೆಚ್ಚು ವಾಸ್ತವಿಕವಾದವು. ಇವುಗಳೇ ಸತ್ಯವೆಂದು ಉಳಿದದ್ದೆಲ್ಲ ಮಿಥ್ಯವೆಂದೂ ಹೇಳಿದರೆ ಅತಿಶಯೋಕ್ತಿಯಾಗದು.

ಇಂಥ ಅರ್ಚನೆ ಅಥವಾ ಪ್ರಾರ್ಥನೆ ವಾಗ್ಮಿತೆಯ ಹಾರಾಟವಲ್ಲ! ಅಧರ ಎಸಗುವ ಪೂಜೆಯಲ್ಲ. ಹೃದಯದಿಂದ ಅದು ಚಿಮ್ಮಿ ಏಳುತ್ತದೆ. "ಪ್ರೇಮ ವಿನಾ ಮತ್ತಾವುದೂ ಇಲ್ಲಿಲ್ಲ," ಎನ್ನಿಸುವಂತೆ ಹೃದಯ ಪರಿಶುದ್ಧಿಯನ್ನು ನಾವು ಸಾಧಿಸಿದರೆ, ಹೃದಯದ ಎಲ್ಲ ತಂತಿಗಳನ್ನು ತಕ್ಕ ಶ್ರುತಿಯಲ್ಲಿ ಎಳೆದಿಟ್ಟುಕೊಂಡರೆ, "ಅವು ಕಂಪಿಸುತ್ತ ಸಂಗೀತದಲಿ ಸಾಗಿಯಾವು ನೋಟದಾಚೆ" ಮಾತಾಡುವುದು ಪ್ರಾರ್ಥನೆಗೆ ಅನಾವಶ್ಯಕ.

(ಹರಿಜನ, ೧೩-೧೦-೪೬)

ಈ ಮೌನ ಪ್ರಾರ್ಥನೆಗಳನ್ನು ನಾನು ಬಹುವಾಗಿ ಮೆಚ್ಚುತ್ತೇನೆ. ಅವಕ್ಕೆ ನಮ್ಮ ಸಮಯದ ಒಂದು ಭಾಗವನ್ನು ಮೀಸಲಾಗಿಡಬೇಕು. ಅವು ಮನಶ್ಶಾಂತಿಯನ್ನು ಈಯುತ್ತವೆ. ಅದನ್ನು ನನ್ನ ಸ್ವಂತ ಜೀವನದಲ್ಲೇ ಅನುಭವಿಸಿದ್ದೇನೆ. ನನಗೆ ಬಹುಮುಖದ ಚಟುವಟಿಕೆಗಳಿದ್ದರೂ ಸಾಧ್ಯವಾದಷ್ಟು ಹೊತ್ತನ್ನು ಪ್ರಾರ್ಥನೆಗೆ ನಾನು ಮೀಸಲಿಟ್ಟಿರುವೆ.

(ಪ್ರಾರ್ಥನೋತ್ತರ ಭಾಷಣಗಳು ೭-೪-೪೬)

ಮೌನಪ್ರಾರ್ಥನೆಯ ದಕ್ಷತೆಯಲ್ಲಿ ನನ್ನ ನೆಚ್ಚಿಕೆ ಹೆಚ್ಚುತ್ತಿದೆ. ಆದರಷ್ಟಕ್ಕೆ ಅದೇ ಒಂದು ಲಲಿತಕಲೆ—ಪ್ರಾಯಶಃ ಅತಿ ಶ್ರೇಷ್ಠ ಕಲೆ, ಅತ್ಯಂತ ಸುಸಂಸ್ಕೃತವಾದ ಶ್ರದ್ಧೆ ಅದಕ್ಕೆ ಅಗತ್ಯ.

(ಹರಿಜನ ೫-೧೧-೩೮)

ಮೌನಪ್ರಾರ್ಥನೆ ಸ್ವಗತ ಭಾಷಣವಲ್ಲ, ಅದೊಂದು ಸಂವಾದ. ಮೌನದಲ್ಲಿ ನಾವು ಕೇಳಲು ಸಿದ್ಧರಾದಾಗ ಮಾತ್ರ ದೇವರು ನಮ್ಮೊಡನೆ ಮಾತನಾಡುವ.

(ಹರಿಜನ, ೧೦-೧೨-೩೮)

## ಹೊಲಿದ ತುಟಿಗಳ ಮೌನ

ಹೊಲಿದು ಮುಚ್ಚಿದ ತುಟಿಗಳ ಮೌನ ಮೌನವೇ ಅಲ್ಲ ತನ್ನ ನಾಲಗೆಯನ್ನು ಕತ್ತರಿಸಿ ಎಸೆದು ಒಬ್ಬ ಅದೇ ಸ್ಥಿತಿಯನ್ನು ಸಾಧಿಸಬಹುದು, ಅದೂ ಕೂಡ ಮೌನವೆನ್ನಿಸದು ಮಾತನಾಡುವ ಚೈತನ್ಯವಿದ್ದರೂ ಒಂದು ಪೊಳ್ಳುನುಡಿಯನ್ನೂ ನುಡಿಯದವನೇ ನಿಜವಾದ ಮೌನಿ ಕಬೀರನ ಹಾಡನ್ನು ಧ್ಯಾನಿಸಿ

'ಓ ಸಾಧು, ನೈಸರ್ಗಿಕ ಸಂಯೋಗ ಶ್ರೇಷ್ಠ. ದೇವರ ಕೃಪೆಯ ಮೂಲಕ ಅದು ಸಾಧಿತವಾದಂದಿನಿಂದ ಅದು ಬೆಳೆಯುತ್ತಿದೆ

'ನಾನೆಲ್ಲೆಲ್ಲಿ ಸುತ್ತಾಡಿದರೂ ಅದು ವಿಗ್ರಹದ ಸುತ್ತ ಆದ ಪ್ರದಕ್ಷಿಣೆ, ಏನನ್ನು ನಾ ಮಾಡುವೆನೋ ಅದೊಂದು ಸೇವೆಯ ಕಾರ್ಯ, ಪ್ರತಿಸಾರಿ ನಾನು ಕೆಳಗೆ ಮಲಗುವುದೂ ದೇವರ ಮುಂದೆ ಮಾಡಿದೊಂದು ದೀರ್ಘ ನಮಸ್ಕಾರ.

'ನನ್ನ ಪ್ರತಿಯೊಂದು ನುಡಿಯೂ ದೇವರ ನಾಮ—ಅನ್ಯದೈವ ವನ್ನು ನಾ ಪೂಜಿಸಲೊಲ್ಲೆ—ಶ್ರವಣವೆಲ್ಲ ಭಗವಂತನ ಸ್ಮರಣೆ

'ತಿನ್ನುವುದೂ ಕುಡಿಯುವುದೂ ಉಪಾಸನಾಕರ್ಮಗಳು ಮನೆ ಯಲ್ಲಿರುವುದು ವನದಲ್ಲಿರುವುದು ಎರಡೂ ನನಗೆ ಒಂದೇ

'ನನ್ನ ಕಣ್ಣುಗಳನ್ನು ನಾ ಮುಚ್ಚುವುದಿಲ್ಲ, ಕಿವಿಗಳೊಳಗೆ ಹತ್ತಿ ಯನ್ನು ಗಿಡಿಯುವುದಿಲ್ಲ ಯಾವೊಂದು ಚಿತ್ರಹಿಂಸೆಗೂ ನನ್ನನ್ನು ಈಡು ಮಾಡಿಕೊಳ್ಳೆ

'ಕಣ್ತೆರೆದು ನೋಡಿದರೆ ದೇವರ ಲಾವಣ್ಯಮಯ ಪ್ರಕಟಣೆ ಎಲ್ಲೆಲ್ಲೂ ನನ್ನನ್ನು ಸ್ವಾಗತಿಸಿ ಸಂತಸಗೊಳಿಸುತ್ತದೆ, ಮತ್ತಾವುದೂ ಕಾಣಿಸದು ನನಗೆ

'ಆತನಲ್ಲೇ ನನ್ನ ಮನಸ್ಸು ನೆಟ್ಟಿರುವುದರಿಂದ ಕೊಳಕು ಚಿಂತನೆ ಯೆಲ್ಲ ಬಿಟ್ಟುಹೋಗಿದೆ ನನ್ನನ್ನ, ಆತನ ಧ್ಯಾನದಲ್ಲಿ ನಾನೆಷ್ಟು ಮಗ್ನ ನಾಗಿರುವೆನೆಂದರೆ ಬೇರೆ ಯಾವುದಕ್ಕೂ ಸ್ಥಳವೇ ಇಲ್ಲ

'ಇಂತೆನುವ ಕಬೀರ, ಈ ಸ್ಥಿತಿಯನ್ನು ಮೌನದಲ್ಲಿ ಅನುಭೋಗಿಸ

ಬೇಕು, ನಾನಾದರೋ ಅದನ್ನು ಕುರಿತು ಹಾಡಲು ಸಾಹಸಗೈದೆ ಅದು ವ್ಯಸನ ಆನಂದಗಳಾಚೆ ಇರುವ ಸ್ಥಿತಿ, ಅದರಲ್ಲಿ ನಾ ಮುಳುಗಿರುವೆ'

(ಹರಿಜನ. ೨೬-೬-೩೩)

ನನ್ನ ಜೀವವನ್ನು ಉಳಿಸಿರುವುದು ಪ್ರಾರ್ಥನೆ. ಅದಿಲ್ಲದಿದ್ದರೆ ನಾನು ಬಲು ಹಿಂದೆಯೇ ಹುಚ್ಚನಾಗಬೇಕಾಗಿತ್ತು ಬಹಿರಂಗ ಅಂತರಂಗಗಳ ಕಡುಕಹಿಯಾದ ಅನುಭವದ ಅಮಿತ ಪಾಲು ನನಗೆ ಬಂದಿದೆಯೆಂಬುದನ್ನು ನನ್ನ ಆತ್ಮಕಥೆ ಹೇಳುತ್ತದೆ ನಿಮಗೆ ಅವು ನನ್ನನ್ನು ತಾತ್ಕಾಲಿಕ ನಿರಾಶೆಗೆ ದೂಡಿದುವು, ಅದನ್ನು ನಿವಾರಿಸಿಕೊಳ್ಳಲು ನಾನು ಸಮರ್ಥನಾದರೆ ಅದಕ್ಕೆ ಕಾರಣ ಪ್ರಾರ್ಥನೆ ಸತ್ಯ ನನ್ನ ಬಾಳಿನ ಅಂಶವೇ ಆಗಿರುವಂತೆ ಪ್ರಾರ್ಥನೆ ಆಗಿಲ್ಲವೆಂದು ಇಂದು ನಿಮಗೆ ತಿಳಿಸಬಹುದು. ಕಟ್ಟುಗ್ರ ಅವಸರದ ದ್ವಾರ ಒದಗಿತು ಆಗ, ದುರವಸ್ಥೆಯಲ್ಲಿ ನಾನು ಸಿಕ್ಕಿಕೊಂಡಾಗ ಅದಿಲ್ಲದಿದ್ದರೆ ನನಗೆ ಸೌಖ್ಯ ಅಸಾಧ್ಯವೆಂದು ಕಂಡುಬಂತು ದೇವರಲ್ಲಿ ನನ್ನ ನಂಬಿಕೆ ಹೆಚ್ಚುತ್ತ ಹೋದಂತೆಲ್ಲ ಪ್ರಾರ್ಥನೆಯ ಹಂಬಲ ಹೆಚ್ಚು ಹೆಚ್ಚಾಗಿ ತಡೆಯಲಾಗದಂತಾಯಿತು ಪ್ರಾರ್ಥನೆ ವಿನಾ ಬಾಳು ಸಪ್ಪೆಯೂ ಶೂನ್ಯವೂ ಆದಂತೆ ಕಂಡಿತು ದಕ್ಷಿಣ ಆಫ್ರಿಕದಲ್ಲಿ ಕ್ರೈಸ್ತರ ಪ್ರಾರ್ಥನಾ ಸಭೆಗೆ ನಾನು ಹೋಗಿದ್ದೆ ಅದು ನನ್ನನ್ನು ಹಿಡಿಯದೆ ಹೋಯಿತು. ಕ್ರೈಸ್ತರೊಂದಿಗೆ ನಾನು ಪ್ರಾರ್ಥನೆಯಲ್ಲಿ ಸೇರಲಾಗಲಿಲ್ಲ ಅವರು ದೇವರನ್ನು ದೈನ್ಯದಿಂದ ಯಾಚಿಸುತ್ತಿದ್ದರು, ನನಗೆ ಆ ರೀತಿ ಮಾಡಲಾಗಲಿಲ್ಲ, ನಾನು ಶುದ್ಧಾಂಗವಾಗಿ ವಿಫಲನಾದೆ ದೇವರಲ್ಲಿಯೂ ಪ್ರಾರ್ಥನೆಯಲ್ಲಿಯೂ ಅಪನಂಬಿಕೆಯನ್ನು ಆರಂಭಿಸಿದೆ ನನ್ನ ಜೀವಿತದ ಇಳಿವಯಸ್ಸಿನ ಘಟ್ಟದ ವರೆಗೂ ಶೂನ್ಯತೆಯಂದದ ಸಂಗತಿಯೊಂದೂ ನನಗೆ ಅರಿವಾಗಲಿಲ್ಲ ಆ ಘಟ್ಟದಲ್ಲಿ ಶರೀರಕ್ಕೆ ಆಹಾರ ಹೇಗೆ ಅತ್ಯಾವಶ್ಯಕವೋ ಹಾಗೆ ಆತ್ಮನಿಗೆ ಪ್ರಾರ್ಥನೆ ಅತ್ಯಾವಶ್ಯಕವೆಂದು ಮನಗಂಡೆ ಹಾಗೆ ನೋಡಿದರೆ, ಪ್ರಾರ್ಥನೆ ಆತ್ಮನಿಗೆ ಎಷ್ಟು ಆವಶ್ಯಕವೋ ಅಷ್ಟೊಂದು ಆವಶ್ಯಕವಲ್ಲ ಆಹಾರ ಶರೀರಕ್ಕೆ ಶರೀರವನ್ನು ಆರೋಗ್ಯದಲ್ಲಿಡಬೇಕಾದರೆ ನಿರಶನ ಆಗಾಗ ಆವಶ್ಯಕ, ಆದರೆ ಪ್ರಾರ್ಥನಾ-ನಿರಶನವೆಂಬುದಿಲ್ಲ ರಾಜಕೀಯ ದಿಗಂತದಿಂದ ನಿರಾಶೆ ನನ್ನನ್ನು ದುರುಗುಟ್ಟಿ ನೋಡುತ್ತಿದ್ದರೂ ನನ್ನ ಮನಶ್ಶಾಂತಿಯನ್ನು

ನಾನೆಂದಿಗೂ ಕಳೆದುಕೊಂಡಿಲ್ಲ ಅಷ್ಟೇ ಅಲ್ಲ, ನನ್ನ ಶಾಂತಿಯನ್ನು ಕುರಿತು
ಅಸೂಯೆ ಪಡುವವರನ್ನು ನಾನು ಕಂಡಿರುವೆ ಅಂಥ ಶಾಂತಿ, ನಾ ಒತ್ತಿ
ಹೇಳುವೆ, ಬರುವುದು ಪ್ರಾರ್ಥನೆಯಿಂದ ವಿದ್ವತ್ತುಳ್ಳ ಮನುಜನಲ್ಲ ನಾನು,
ಆದರೆ ನಾನೊಬ್ಬ ಪ್ರಾರ್ಥನೆಯುಳ್ಳ ಮನುಜನೆಂದು ವಿನೀತನಾಗಿ ಕರೆದು
ಕೊಳ್ಳುತ್ತೇನೆ ಪ್ರಾರ್ಥನೆಯ ವಿಧಾನದ ಬಗೆಗೆ ನಾನು ಉದಾಸೀನ ಆ
ವಿಷಯದಲ್ಲಿ ಅವರವರಿಗೆ ಅವರವರೇ ನ್ಯಾಯವಿಧಾಯಕರು ಆದರೂ
ಚೆನ್ನಾಗಿ ಗುರ್ತು ಮಾಡಿರುವ ಕೆಲವು ಮಾರ್ಗಗಳಿವೆ, ಪ್ರಾಚೀನ ಬೋಧ
ಕರು ನಡೆದುಹೋಗಿರುವ ಹೆದ್ದಾರಿಗಳನ್ನನುಸರಿಸಿ ಪದವಿಡುವುದು ಅಪಾಯ
ರಹಿತ ಇದು ನನ್ನ ವೈಯಕ್ತಿಕ ಸಾಕ್ಷ್ಯ ಅನುದಿನದ ಪ್ರಾರ್ಥನೆಯ
ದೆಸೆಯಿಂದ ತನ್ನ ಬಾಳಿಗೆ ಯಾವುದೋ ಒಂದು ನವೀನವಾದದ್ದನ್ನು,
ಅದರೊಡನೆ ಮತ್ತಾವುದನ್ನೂ ಹೋಲಿಸಲಾಗದಂಥಾದ್ದನ್ನ, ಕೂಡಿಸಿ
ಕೊಳ್ಳುವುದನ್ನು ಪ್ರತಿಯೊಬ್ಬನೂ ಪ್ರಯತ್ನಿಸಿ ಕಂಡುಹಿಡಿದುಕೊಳ್ಳಲಿ

(ಯಂಗ್ ಇಂಡಿಯಾ. ೨೪-೯-೩೧)

## ಪ್ರಾರ್ಥನೆಯ ಅರ್ಥ ಮತ್ತು ಆವಶ್ಯಕತೆ

ಪ್ರಾರ್ಥನೆ ಧರ್ಮದ ಜೀವಶಕ್ತಿಯ ಭಾಗವಾಗಿರುವಂತೆ ಮಾನವನ
ಬಾಳಿನ ನೈಜತಿರುಳೂ ಹೌದು ಪ್ರಾರ್ಥನೆಯೊಂದು ಬಿನ್ನಪವಾಗಬಹುದು.
ಅಥವಾ ಅದರ ವಿಶಾಲ ಅರ್ಥದಲ್ಲಿ ಆಂತರಿಕ ಭಾವೈಕ್ಯವಾಗಬಹುದು
ಅದರಲ್ಲಾಗಲೀ ಇದರಲ್ಲಾಗಲೀ ಅಂತಿಮ ಪರಿಣಾಮ ಒಂದೇ ಬೇಡಿಕೆ
ಯಂತೆ ಅದನ್ನೆಸಗುವಾಗ ಆತ್ಮವನ್ನು ಗುಡಿಸಿ ಶುಚಿಮಾಡೆಂದೂ ಆತ್ಮದ
ಮೇಲಿರುವ ಅಜ್ಞಾನ ಮತ್ತು ಅಂಧಕಾರದ ಪದರಗಳಿಂದ ಅದನ್ನು ಬಿಡ
ಬೇಕು ತನ್ನಲ್ಲಿರುವ ದೈವೀ ಅಂಶವನ್ನು ಎಬ್ಬಿಸಲು ಯಾವಾತ ತೊರೆ
ಯುವನೋ ಅವನು ಪ್ರಾರ್ಥನೆಯನ್ನೇ ಅವಲಂಬಿಸಬೇಕು ಕೇವಲ
ಮಾತುಗಳ ಒಂದು ಅಭ್ಯಾಸವಾಗಲೀ, ಕಿವಿಗಳ ವ್ಯಾಯಾಮವಾಗಲೀ
ಅದಲ್ಲ, ಅರ್ಥವಿಲ್ಲದ ಪದಕ್ರಮದ ಬರಿ ಬಾಯಿಪಾಠವಲ್ಲ ಪ್ರಾರ್ಥನೆ
ಯಲ್ಲಿ ಭಾವರಹಿತ ಮಾತುಗಳಿಗಿಂತ ಮಾತುಗಳಿಲ್ಲದ ಭಾವ ಹೆಚ್ಚು
ಒಳಿತು. ಅದಕ್ಕಾಗಿ ತವಕಗೊಂಡಿರುವ ಅಂತರ್ಯದ ಕೂಗಿಗೆ ಅದು ಸ್ಪಷ್ಟ

ವಾದ ಪ್ರತ್ಯುತ್ತರವಾಗಬೇಕು ಹಸಿವಾದವನು ಹೇಗೆ ಇಷ್ಟಭೋಜನದಿಂದ ಸಂತುಷ್ಟನಾಗುವನೋ ಹಾಗೆ ಹಸಿದ ಆತ್ಮಕ್ಕೆ ಹೃತ್ಪೂರ್ವಕವಾದ ಪ್ರಾರ್ಥನೆ ಇಷ್ಟ ವಿಷಯ ಹೀಗಿದ್ದರೆ ನಮ್ಮ ಬಾಳಿನ ಪ್ರತಿ ಕ್ಷಣದಲ್ಲಿಯೂ ಪ್ರಾರ್ಥನೆ ಸಲ್ಲಿಸುತ್ತಿರಬೇಕಲ್ಲವೆ, ಎಂದು ಯಾರಾದರೂ ಪ್ರಶ್ನಿಸಬಹುದು ಅದಕ್ಕೆ ಯಾವ ಸಂಶಯವೂ ಇಲ್ಲ, ಆದರೆ ತಪ್ಪುಳ್ಳ ಮರ್ತ್ಯರಾದ ನಾವು ಒಂದೇ ಒಂದು ಕ್ಷಣಕಾಲ ಕೂಡ ಅಂತರ್ಮುಖಿಗಳಾಗಿ ಆಂತರಿಕ ಸಂಯೋಗದಲ್ಲಿರಲು ಅಶಕ್ಯರಾಗಿರುವಾಗ ಸದಾ ದೈವಿಕದೊಡನೆ ಸಂಯೋಗದಲ್ಲಿರುವುದು ನಮಗೆ ಅಸಾಧ್ಯ ಆದುದರಿಂದಲೇ ಕೆಲವು ತಾಸುಗಳನ್ನು ಕ್ಲಿಪ್ತಮಾಡಿಕೊಂಡು ಜಗತ್ತಿನ ಬಂಧನಗಳನ್ನು ತುಸು ದೂರತ್ತು ಕಿತ್ತೆಸೆಯುವುದಕ್ಕೆ ಗಂಭೀರ ಪ್ರಯತ್ನವನ್ನು ಮಾಡುತ್ತೇವೆ, ಹೀಗೂ ಹೇಳಬಹುದಾದರೆ, ಆಗ ರಕ್ತಮಾಂಸದಿಂದ ಹೊರಗಡೆ ಇರುವುದಕ್ಕೆ ನಮ್ಮ ಗಂಭೀರ ಸಾಹಸ ಸ್ತೋತ್ರಗೀತವನ್ನು ಕೇಳಿದ್ದೀಯ ದೈವಿಕದೊಂದಿಗೆ ಮಿಲನವಾಗಲು ಆತ್ಮದ ರಾಗವತ್ತಾದ ಕೂಗು ಅದು ನಮ್ಮ ಅಳತೆಯಂತೆ ಆತನೊಬ್ಬ ಸಂತ, ಅವನದ್ದೇ ಆದ ಅಳತೆಯಂತೆ ಅವನೊಬ್ಬ ಪ್ರಕಟಿತ ಪಾತಕಿ ಆಧ್ಯಾತ್ಮಿಕವಾಗಿ ಅವ ನಮಗಿಂತ ಎಷ್ಟೋ ಹರದಾರಿ ಮುಂದೆ, ಆದರೂ ಪರಮಾತ್ಮನಿಂದ ಆದ ವಿಯೋಗ ಎಷ್ಟು ತೀಕ್ಷ್ಣವಾಗಿ ಅವನೆದೆಯನ್ನು ತಟ್ಟಿತೆಂದರೆ, ಅಸಹ್ಯಗೊಂಡು ಹತಾಶೆಹೊಂದಿ ಆ ಆರ್ತನಾದವನ್ನು ಅವ ಹೊರಗೆಡವಲೇಬೇಕಾಯಿತು

(ಯಂಗ್ ಇಂಡಿಯಾ ೨೪-೧-೩೦)

ಪ್ರಾರ್ಥನೆಯೊಂದು ಕೇಳಿಕೆಯಲ್ಲ ಅದು ಆತ್ಮನ ನಿಡುಬಯಕೆ ಪ್ರತಿದಿನವೂ ಮಾಡುವ ತಪ್ಪೊಪ್ಪಿಕೊಳ್ಳುವ ಕೆಲಸ ನಮ್ಮಲ್ಲಿ ಅತ್ಯಂತ ಎತ್ತರದ ವ್ಯಕ್ತಿಗೂ ಕೂಡ ಮರಣ, ರೋಗ, ಮುಪ್ಪು, ಅಪಘಾತ ಮುಂತಾದವುಗಳ ಎದುರು ತಾನು ಏನೂ ಅಲ್ಲವೆಂಬ ಸತ್ಯಾಂಶ ಸದಾ ನೆನಪಾಗುತ್ತಿರುತ್ತದೆ ಸಾವಿನ ನಡುವೆ ನಮ್ಮ ಬಾಳು, "ನಮ್ಮ ನಮ್ಮ ಯೋಜನೆಗಳಿಗಾಗಿ ದುಡಿಯುವುದು" ಎಂಬುದಕ್ಕೆ ಏನು ಬೆಲೆ? ಕಣ್ಣು ಮಿಟುಕಿಸುವಷ್ಟರಲ್ಲಿ ಅವು ತೀರ ನಿಷ್ಪ್ರಯೋಜಕವಾಗಬಹುದು, ಅಥವಾ ಅನಿರೀಕ್ಷಿತವಾಗಿ, ಅಷ್ಟೇ ತ್ವರೆಯಲ್ಲಿ ನಮ್ಮನ್ನು ಅವುಗಳಿಂದ ಆಚೆಗೆ ಕೊಂಡುಹೋಗಬಹುದು

ಅದಕ್ಕೆ ಪ್ರತಿಯಾಗಿ "ನಾವು ದೇವರಿಗಾಗಿ, ಆತನ ಯೋಜನೆಗಾಗಿ ದುಡಿಯುತ್ತೇವೆ" ಎಂದು ಋಜುಮನಸ್ಸಿನಿಂದ ಹೇಳಬಲ್ಲವರಾದರೆ ಬಂಡೆಯಷ್ಟು ಬಲ ನಮಗಿದೆಯೆಂದು ಭಾವಿಸಿಕೊಳ್ಳಬಹುದು. ಆಗ ಎಲ್ಲವೂ ಹಗಲ ಬೆಳಕಿನಂತೆ ಸುಸ್ಪಷ್ಟ. ಆಗ ಯಾವುದಕ್ಕೂ ಅಳಿವಿಲ್ಲ. ಆಗ, ಸಕಲ ಅಳಿಯುವಿಕೆಯೂ ತೋರಿಕೆಯಲ್ಲಿ ಮಾತ್ರ. ಆಗ, ಆಗ ಮಾತ್ರ, ಸಾವು ಸರ್ವನಾಶಗಳಿಗೆ ನಿಜತ್ವವಿಲ್ಲ, ಏಕೆಂದರೆ ಆಗ ಸಾವಾಗಲೀ ಸರ್ವನಾಶವಾಗಲೀ ಅದೊಂದು ಪರಿವರ್ತನೆ ಅಷ್ಟೆ. ಕಲೆಗಾರ ಉತ್ತಮವಾದ ಇನ್ನೊಂದು ಚಿತ್ರವನ್ನು ಸೃಷ್ಟಿಸುವ ಸಲುವಾಗಿ ತನ್ನ ಚಿತ್ರವನ್ನು ನಾಶಮಾಡುತ್ತಾನೆ, ಗಡಿಯಾರ ಮಾಡುವವ ಕೆಟ್ಟುಹೋದ ಸುರುಳಿಯನ್ನು ಕಿತ್ತೆಸೆಯುತ್ತಾನೆ. ಹೊಸದಾದ ಮತ್ತೊಂದನ್ನು ಜೋಡಿಸುವುದಕ್ಕೋಸ್ಕರ.

(ಯಂಗ್ ಇಂಡಿಯಾ. ೨೪-೯-೨೬)

ಪ್ರಾರ್ಥನೆಯ ಆವಶ್ಯಕತೆಯನ್ನು ಕುರಿತು ಮಾತಾಡಿದ್ದಾಯಿತು, ಅದರ ಮೂಲಕ ಪ್ರಾರ್ಥನೆಯ ಸಾರವನ್ನೂ ಕುರಿತು ಪ್ರಸ್ತಾಪಿಸಿದ್ದಾಯಿತು. ನಾವು ಹುಟ್ಟಿ ಬಂದಿರುವುದು, ನಾವು ತುಂಬ ಜಾಗ್ರತರಾಗದಿದ್ದಲ್ಲಿ ಆ ಕಾರ್ಯವನ್ನು ಚೆನ್ನಾಗಿ ಮಾಡಲಾರೆವು. ಮಾನವನ ಎದೆಯಲ್ಲಿ ಕತ್ತಲೆಯ ಶಕ್ತಿಗಳಿಗೂ ಬೆಳಕಿನ ಶಕ್ತಿಗಳಿಗೂ ಒಂದು ಶಾಶ್ವತ ಸಮರ ರಭಸದಲ್ಲಿದೆ, ನಮ್ಮ ನಿಲ್ಲುವುದಕ್ಕೆ ಪ್ರಾರ್ಥನೆಯ ಆಧಾರ ಯಾರಿಗಿಲ್ಲವೋ ಆತ ಕತ್ತಲೆಯ ಶಕ್ತಿಗಳಿಗೆ ಬಲಿಯಾಗುತ್ತಾನೆ. ಪ್ರಾರ್ಥನೆಯುಳ್ಳ ಪುರುಷ ತನ್ನೊಳಗೆ ಸಮಾಧಾನದಿಂದಿರುತ್ತ ವಿಶಾಲ ಪ್ರಪಂಚದೊಂದಿಗೂ ಶಾಂತಿಯಿಂದ ಇರುತ್ತಾನೆ. ಪ್ರಾರ್ಥನಾಭಾವವಿಲ್ಲದೆ ಲೋಕವ್ಯವಹಾರದಲ್ಲಿ ನಿರತನಾಗುವ ಮನುಷ್ಯ ತಾನೂ ತೊಂದರೆ ಪಡುತ್ತ ಲೋಕವನ್ನೂ ಕೂಡ ತೊಂದರೆಗೀಡುಮಾಡುತ್ತಾನೆ. ಮೃತ್ಯುವಿನ ತರುವಾಯ ಮನುಷ್ಯನ ಸ್ಥಿತಿಯ ಮೇಲೆ ಅದಕ್ಕಿರುವ ಪ್ರಭಾವ ಏನಾದರೂ ಇರಲಿ, ಜೀವಿಗಳ ಪ್ರಾರ್ಥನೆಗೆ ಮಾನವನ ಸಲುವಾಗಿ ಗಣನಾತೀತವಾದ ಈ ಪ್ರಪಂಚದಲ್ಲಿ ಬೆಲೆಯುಂಟು. ನಮ್ಮ ನಿತ್ಯಕರ್ಮಗಳಲ್ಲಿ ಸುವ್ಯವಸ್ಥೆಯನ್ನೂ ಶಾಂತಿಯನ್ನೂ ಪರಿವೇದನೆಯನ್ನೂ ನಿಯಂತ್ರಿಸುವುದಕ್ಕೆ ಪ್ರಾರ್ಥನೆಯೊಂದೇ ಉಪಾಯ.

ಆದ್ದರಿಂದ ನಿಮ್ಮ ದಿನಚರಿಯನ್ನು ಪ್ರಾರ್ಥನೆಯಿಂದ ಆರಂಭಮಾಡಿ,

ಅದು ಸಂಜೆಯವರೆಗೂ ನಿಮ್ಮ ಕೂಡೆ ನಿಲ್ಲುವಷ್ಟು ಅತ್ಮವತ್ತಾಗಿರಲಿ ಪ್ರಾರ್ಥನೆಯಿಂದಲೇ ದಿನವನ್ನು ಮುಕ್ತಾಯಗೊಳಿಸಿ, ಹಾಗೆ ಮಾಡಿದರ ನಿಮ್ಮ ರಾತ್ರಿ ಕನಸು ಕೆಟ್ಟ ಕನವರಿಕೆಗಳ ತಂಟೆಯಿಲ್ಲದೆ ಶಾಂತಿಮಯವಾಗಿರುತ್ತದೆ. ಪ್ರಾರ್ಥನೆಯ ಕ್ರಮ ಹೀಗಿರಬೇಕೆಂಬ ಒಗೆಗೆ ಕೊರಗಬೇಡಿ. ಯಾವ ಕ್ರಮವಾದರೂ ಸರಿ, ಅದು ನಮ್ಮನ್ನು ದೈವಿಕ ಚೈತನ್ಯದೊಂದಿಗೆ ಸಂಯೋಗದಲ್ಲಿಡಬೇಕು ಕ್ರಮ ಯಾವುದೇ ಆಗಿರಲಿ, ಪ್ರಾರ್ಥನಾ ಶಬ್ದಗಳು ನಿಮ್ಮ ಬಾಯಿಂದ ಉರುಳಿ ಓಡುತ್ತಿರುವಾಗ ನಿಮ್ಮ ಚಿತ್ತ ಅತ್ತಿತ್ತ ಅಲೆದಾಡದಂತೆ ನೋಡಿಕೊಳ್ಳಿ

ಹತೋಟಿಯಿಂದ ಸ್ವತಂತ್ರವಾದ ಹಾದಿಯನ್ನು, ಎಂದರೆ ಸ್ವೇಚ್ಛಾಚಾರವನ್ನು, ಆರಿಸಿಕೊಳ್ಳುವ ಮನುಷ್ಯ ರಾಗಗಳಿಗೆ ಬರೆದಿಟ್ಟ ಗುಲಾಮನಾಗುತ್ತಾನೆ, ಅಂಕೆ ನಿಯಮಗಳಿಗೆ ತನ್ನನ್ನು ಒಳಪಡಿಸಿಕೊಳ್ಳುವಾತ ತನ್ನ ಬಿಡುಗಡೆಯನ್ನು ಪಡೆದುಕೊಳ್ಳುತ್ತಾನೆ ಚಂದ್ರ, ನಕ್ಷತ್ರ ಇತ್ಯಾದಿ ವಿಶ್ವದ ಸಮಸ್ತ ಪದಾರ್ಥಗಳೂ ಕೆಲವು ವಿಧಿಗಳಿಗೆ ವಿಧೇಯವಾಗಿವೆ ಈ ವಿಧಿಗಳ ನಿಗ್ರಹದ ಪ್ರಭಾವವಿಲ್ಲದಿದ್ದರೆ ಪ್ರಪಂಚದ ವಿದ್ಯಮಾನ ಒಂದು ಕ್ಷಣ ಕೂಡ ನಡೆಯಲಾರದು ಸಹಮಾನವರ ಸೇವೆಯನ್ನು ಜೀವನ ಧ್ಯೇಯವಾಗುಳ್ಳ ನೀವು ಯಾವುದಾದರೂ ಒಂದು ತೆರದ ನಿಸ್ತನ್ನು ನಿಮ್ಮ ಮೇಲೆ ನೀವೇ ಹೊರಿಸಿಕೊಳ್ಳದಿದ್ದರೆ, ಚೂರು ಚೂರಾಗಿ ಒಡೆದು ಬೀಳುವಿರಿ, ಪ್ರಾರ್ಥನೆ ಅಗತ್ಯವಾದ ಒಂದು ಆಧ್ಯಾತ್ಮಿಕ ಶಿಸ್ತು. ಪಶುವಿನಿಂದ ನಮ್ಮನ್ನು ಪ್ರತ್ಯೇಕಿಸುವ ಅಂಶ ಶಿಸ್ತು ಮತ್ತು ಸಂಯಮ ಮನುಷ್ಯರೆನ್ನಿಸಿಕೊಳ್ಳಬೇಕೆಂಬ ಅಪೇಕ್ಷೆ ನಮಗಿರುವುದಾದರೆ, ತಲೆ ಎತ್ತಿಕೊಂಡು ನಾವು ನಡೆಯಬೇಕಾದರೆ, ಚತುಷ್ಪಾದಿಗಳಂತೆ ನಡೆಯದೆ ಇರಬೇಕಾದರೆ, ವಿಚಾರವನ್ನು ಗ್ರಹಿಸೋಣ ಸ್ವಂತ ಇಚ್ಛೆಯಿಂದ ಶಿಸ್ತು ಸಂಯಮಗಳಲ್ಲಿ ನಮ್ಮನ್ನು ನಾವೇ ಇರಿಸಿಕೊಳ್ಳೋಣ

## ಪ್ರಾರ್ಥನೆಯೇತಕೆ ?

ಓ, ಪ್ರಾರ್ಥನೆಯಿಂದೇನು! ದೇವರಿಗೆ—ದೇವರು ಒಬ್ಬನಿದ್ದರೆ—ಜರುಗಿದುದೆಲ್ಲ ಗೊತ್ತಿಲ್ಲವೆ? ತನ್ನ ಕರ್ತವ್ಯವನ್ನು ಆತ ಮಾಡಲು ಶಕ್ತನಾಗುವುದಕ್ಕೆ ನಮ್ಮ ಪ್ರಾರ್ಥನೆ ಅವನಿಗೆ ಆವಶ್ಯಕವೆ ?

ಇಲ್ಲ, ಜ್ಞಾಪಕ ಕೊಡುವುದೇನೂ ದೇವರಿಗೆ ಬೇಡ, ಪ್ರತಿಯೊಬ್ಬನ ಒಳಗೂ ಅವನಿದ್ದಾನೆ ಅವನ ಅಪ್ಪಣೆಯಿಲ್ಲದೆ ಏನೊಂದೂ ಸಂಭವಿಸಲಾರದು ನಮ್ಮ ಪ್ರಾರ್ಥನೆ ಒಂದು ಹೃದಯಶೋಧನೆ. ಅದು ನಮಗೆ ಹೀಗೆ ಜ್ಞಾಪಕ ಕೊಡುತ್ತದೆ ಅವನ ಆಶ್ರಯ ನಮಗಿಲ್ಲದೇಹೋದರೆ ನಾವು ಸಹಾಯಶೂನ್ಯರು ಪ್ರಾರ್ಥನೆ ವಿನಾ ಯಾವ ಪ್ರಯತ್ನವಾದರೂ ಅರ್ಥಂಒರ್ಥ ನಮ್ಮ ಮನಸ್ಸಿನಲ್ಲಿ ಖಂಡಿತವಾಗಬೇಕು ಇದು ಮಾನವನ ಅತ್ಯುತ್ಕೃಷ್ಟ ಉದ್ಯಮವೂ ನಿರರ್ಥಕ ದೇವರ ಹರಕೆ ಹಿಂದಿದ್ದುಕೊಂಡು ಅದನ್ನು ಸಾಗಿಸದಿದ್ದರೆ ನಮ್ರತೆಗೊಂದು ಕರೆ ಪ್ರಾರ್ಥನೆ ಆತ್ಮಶುದ್ಧಿಗೆ, ಅಂತರ್ಯಶೋಧನೆಗ ಅದೊಂದು ಕರೆ (ಹರಿಜನ ೬-೬-೩೫)

ದೇವರನ್ನು ಹರ್ಷಗೊಳಿಸುವುದಲ್ಲ ಪ್ರಾರ್ಥನೆಯ ಉದ್ದೇಶ, ಆತನಿಗೆ ನಮ್ಮ ಪ್ರಾರ್ಥನೆಗಳಾಗಲೀ ಹೊಗಳಿಕೆಯಾಗಲೀ ಬೇಡ, ನಾವು ನಿರ್ಮಲರಾಗುವುದಕ್ಕೆ ಬೇಕು ಪ್ರಾರ್ಥನೆ ಆತನಿಲ್ಲದ ಪರಮಾಣುವೊಂದು ಕೂಡ ಇಲ್ಲ ಬ್ರಹ್ಮಾಂಡದಲ್ಲಿ. ಆತ್ಮಶೌಚದ ಸರಣಿ ಯಾವುದೆಂದರೆ ನಮ್ಮ ಅಂತರಂಗದಲ್ಲಿ ದೇವರ ಸಾನ್ನಿಧ್ಯವಿದೆಯೆಂಬುದನ್ನು ಪ್ರಜ್ಞಾಪೂರ್ವಕವಾಗಿ ಗ್ರಹಿಸುವುದು ಇಂಥ ತಿಳಿವಳಿಕೆ ಈಯುವ ಬಲಕ್ಕಿಂತ ಅತಿಶಯವಾದ ಬಲ ಯಾವುದೂ ಇಲ್ಲ ಜೀವನದ ಪ್ರತಿಯೊಂದು ಶಾಖೆಯಲ್ಲಿಯೂ ದೇವರ ಸಾನ್ನಿಧ್ಯ ಉಂಟೆಂದು ಅರಿವಾಗಬೇಕು (ಹರಿಜನ ೨೬-೫-೪೬)

ಜೀವನದ ಸಾಮಗ್ರಿಗಳ ವಿಚಾರವಾಗಿ ಬರಿ ಬೌದ್ಧಿಕ ಜ್ಞಾನ ಸಾಲದು ಬೌದ್ಧಿಕ ಗ್ರಹಿಕೆಯ ಕೈಗೆ ಸಿಕ್ಕುವುದಿಲ್ಲ ಆಧ್ಯಾತ್ಮಿಕ ಗ್ರಹಿಕೆ, ನಮಗೆ ತೃಪ್ತಿಯುಂಟಾಗುವುದು ಅದೊಂದರಿಂದಲೇ, ಹಣಗಾರರಿಗೂ ಕೂಡ ಅವರ ಬಾಳುಗಳಲ್ಲಿ ವಿಷಮಾವಸ್ಥೆಗಳು ಪ್ರಾಪ್ತಿಸುತ್ತವೆ ಹಣ ಕೊಳ್ಳಬಹುದಾದ, ಅಕ್ಕರೆ ಕೊಡಬಹುದಾದ ವಸ್ತುಗಳೂ ಅವರನ್ನು ಸುತ್ತಿಕೊಂಡಿದ್ದರೂ ಕೆಲವು ಬಾಳಘಳಿಗೆಗಳಲ್ಲಿ ವಿಪರೀತ ಅಸ್ತವ್ಯಸ್ತತೆಯ ಮಧ್ಯೆ ತಾವಿರುವುದನ್ನು ಕಾಣುತ್ತಾರೆ ಇಂಥ ಮುಹೂರ್ತಗಳಲ್ಲಿ ತಾನೇ ನಮಗೆ ಲಭಿಸುವುದು ದೇವರ ಒಂದು ಇಣುಕುನೋಟ, ಅದೇ ಬದುಕಿನಲ್ಲಿ ನಮ್ಮ ಪ್ರತಿ ಹೆಜ್ಜೆಯನ್ನೂ ಹೇಳಿಕೊಟ್ಟು ಇಡಿಸುತ್ತಿರುವ ಆತನ ದರ್ಶನ! ಇದು ಪ್ರಾರ್ಥನೆ. (ಹರಿಜನ. ೧೯-೮-೪೯)

ಪ್ರಶ್ನೆ ದೇವರ ಪೂಜೆಗೆಂದು ವಿನಿಯೋಗಿಸುವ ಕಾಲವನ್ನು ದರಿದ್ರರ ಸೇವೆಗೆ ಮನುಷ್ಯ ಇತ್ತಲ್ಲಿ ಹೆಚ್ಚು ಒಳಿತಲ್ಲವೆ ? ಋಜುಸೇವೆ ಇರುವುದರಿಂದ ಅಂಥವನಿಗೆ ಭಕ್ತಿಯ ಉಪಾಸನೆ ಅನಾವಶ್ಯಕವಲ್ಲವೆ ?

ಉತ್ತರ ಮಾನಸಿಕ ಸೋಮಾರಿತನದ ಹಾಗೂ ಅಜ್ಞೇಯತಾವಾದದ ಕಂಪಿದೆ ಈ ಪ್ರಶ್ನೆಯಲ್ಲಿ ನನಗೆ ಅತ್ಯುಚ್ಚ ಕರ್ಮಯೋಗಿಗಳೂ ಭಕ್ತಿಗೀತೆಗಳನ್ನೂ ಉಪಾಸನೆಯನ್ನೂ ಎಂದಿಗೂ ತ್ಯಜಿಸರು ಆದರ್ಶವಾದದ ದೃಷ್ಟಿಯಿಂದ, ಪ್ರಾಮಾಣಿಕತೆಯಿಂದ ಎಸಗಿದ ಇತರರ ಸೇವೆಯೇ ಆರಾಧನೆಯೆಂದೂ ಅಂಧ ಶ್ರದ್ಧಾಳುಗಳು ಸಂಕೀರ್ತನೆ ಇತ್ಯಾದಿಗಳಲ್ಲಿ ಕಾಲವನ್ನೇನೂ ಕಳೆಯಲಗತ್ಯವಿಲ್ಲವೆಂದೂ ಹೇಳಬಹುದು ವಾಸ್ತವಿಕವಾಗಿಯಾದರೋ ಭಜನೆ ಮುಂತಾದುವು ಸತ್ಯಸೇವೆಗೆ ಒಂದು ನೆರವು, ಅವು ನಿಷ್ಠನ ಹೃದಯದಲ್ಲಿ ದೇವರ ನೆನಪನ್ನು ಹೊಚ್ಚಹೊಸದಾಗಿ ಇಡುತ್ತವೆ

ನಿಜವಾದ ಪ್ರಾರ್ಥನೆ ಮೈಗಳ್ಳತನಕ್ಕೆ ಪೂರ್ವರಂಗವಲ್ಲ ಕೊನೆಯಿಲ್ಲದ, ಸ್ವಾರ್ಥವಿಲ್ಲದ ಕರ್ಮಕ್ಕೆ ಅದೊಂದು ಚೋದಕ ಸ್ವಾರ್ಥ, ಸೋಮಾರಿಗೆ ಎಂದಿಗೂ ಸಲ್ಲದು ಶುಚಿಗೊಳ್ಳುವ ಟಿಸನ, ನಿಸ್ವಾರ್ಥ, ಕಾರ್ಯತತ್ಪರರಿಗೆ ಮಾತ್ರ ಅದು ಒದಗಿಬರುತ್ತದೆ (ಹರಿಜನ ೧೫-೬-೩೫)

ಪ್ರಾರ್ಥನೆಯಿರುವಾಗ ಯಾವ ಆಲಸಿಕೆಯೂ ಇರಲಾರದು.

(ಯಂಗ್ ಇಂಡಿಯಾ. ೫-೧-೨೧)

ಮುದುಕಿಗೆ ಹೊತ್ತುಗಳೆಯುವುದಕ್ಕಾಗಿ ಇರುವ ವಿನೋದವಲ್ಲ ಪ್ರಾರ್ಥನೆ ಸರಿಯಾಗಿ ಅರ್ಥ ಮಾಡಿಕೊಂಡು ಅದನ್ನು ಯುಕ್ತವಾಗಿ ಆಚರಿಸಿದರೆ ಅತ್ಯಂತ ಸತ್ವವುಳ್ಳ ಕಾರ್ಯೋಪಕರಣ ಅದು ಭಗವಂತನಲ್ಲಿ ಜೀವಂತ ನಂಬಿಕೆಯನ್ನು ಪ್ರಾರ್ಥನೆ ಬಯಸುತ್ತದೆ ಎಂಬುದು ನಿಸ್ಸಂದೇಹ

(ಹರಿಜನ. ೧೪-೪-೪೪)

ಹೃದಯದಿಂದೆದ್ದ ಪ್ರಾರ್ಥನೆ ನಮ್ಮ ನರಗಳನ್ನು ದೃಢಗೊಳಿಸುತ್ತದೆ, ವಿನೀತಭಾವವನ್ನು ನಮ್ಮಲ್ಲಿ ಬೆಳೆಸುತ್ತದೆ, ಮುಂದಣ ಹೆಜ್ಜೆಯನ್ನು ಸ್ಪಷ್ಟವಾಗಿ ನಮಗೆ ತೋರಿಸುತ್ತದೆ (ಹರಿಜನ. ೨೨-೬-೩೫)

## "ನಿನ್ನ ಸಂಕಲ್ಪವೇ ನೆರವೇರಲಿ!"

ನಾವು ಸಲ್ಲಿಸಬಹುದಾದ ಪ್ರಾರ್ಥನೆ ದಿಟವಾಗಿ ಇದೊಂದೇ 'ನಿನ್ನ ಸಂಕಲ್ಪವೇ ನೆರವೇರಲಿ'

ಇಂಥ ಪ್ರಾರ್ಥನೆಯನ್ನು ಸಲ್ಲಿಸುವುದರಲ್ಲಿ ಜಾಣ್ಮೆಯೇನಿದೆಯೆಂದು ಯಾವನಾದರೂ ಒಬ್ಬ ಪ್ರಶ್ನಿಸಬಹುದು ಅದಕ್ಕೆ ಇದು ಜವಾಬು ಪ್ರಾರ್ಥನೆಯನ್ನು ಒರಟು ರೀತಿಯಲ್ಲಿ ಅರ್ಥಮಾಡಿಕೊಳ್ಳಬಾರದು ನಮ್ಮ ಹೃದಯದಲ್ಲಿರುವ ದೇವರ ಸಾನ್ನಿಧ್ಯದ ಅರಿವು ನಮಗುಂಟು, ಮಮಕಾರ ವನ್ನು ತೊಡೆದುಹಾಕುವುದಕ್ಕೋಸ್ಕರ ದೇವರನ್ನು ಆ ಘಳಿಗೆ ನಮ್ಮಿಂದ ಪ್ರತ್ಯೇಕವೆಂದು ಭಾವಿಸಿಕೊಂಡು ಅವನಿಗೆ ಮೊರೆಯಿಡುತ್ತೇವೆ ಹಾಗೆಂದರೆ, ನಮ್ಮ ಅ ಸ್ಥಿರ ಬುದ್ಧಿ ಎಳೆಯಬಹುದಾದ ದಾರಿಗೆ ಹೋಗುವುದಕ್ಕೆ ನಮಗೆ ಇಚ್ಛೆಯಿಲ್ಲ, ಆ ಪ್ರಭು ಒಯ್ಯುವತ್ತ ಹೋಗಲಪೇಕ್ಷಿಸುತ್ತೇವೆ ಬದುಕು ವುದು ಒಳ್ಳೆಯದೋ ಸಾಯುವುದು ಒಳ್ಳೆಯದೋ ನಮಗೆ ಗೊತ್ತಿಲ್ಲ ಆದ್ದರಿಂದ ಬದುಕುವುದರಲ್ಲಿ ಆಮೋದ ಹೊಂದಲಾಗದು. ಹಾಗೂ ಮರ ಣದ ಯೋಚನೆ ಬಂದಾಗ ನಡುಗಲಾಗದು ಎರಡರ ಎದುರಿಗೂ ಸಮಾನ ಮನಸ್ಸುಳ್ಳವರಾಗಿರಬೇಕು ಇದು ಆದರ್ಶ, ಅದನ್ನು ಮುಟ್ಟುವುದಕ್ಕೆ ದೀರ್ಘಕಾಲ ಹಿಡಿಯಬಹುದು, ನಮ್ಮಲ್ಲಿ ಕೆಲವು ಮಂದಿ ಮಾತ್ರ ಅದನ್ನು ಸಾಧಿಸಲು ಶಕ್ತರಾದಾರು ಹಾಗಿದ್ದರೂ, ಆ ಆದರ್ಶವನ್ನೇ ಸದಾ ನಮ್ಮ ದೃಷ್ಟಿ ಪಥದಲ್ಲಿಟ್ಟುಕೊಂಡಿರಬೇಕು, ಅದರ ಸಾಧನೆ ಹೆಚ್ಚು ಕ್ಲಿಷ್ಟವೆಂದು ಕಂಡು ಬಂದಷ್ಟೂ ನಾವು ಹೊರತರುವ ಶ್ರಮ ಹೆಚ್ಚು ಹೆಚ್ಚಾಗಬೇಕು

## ಆಶ್ರಮ ಪ್ರಾರ್ಥನೆ

ಪ್ರಾತಃಕಾಲದ ಪ್ರಾರ್ಥನೆಯಲ್ಲಿ "ಆಶ್ರಮ ಭಜನಾವಳಿ" ಯಲ್ಲಿ ಅಚ್ಚಾಗಿರುವ ಶ್ಲೋಕಗಳನ್ನು ಮೊದಲು ಪಠಿಸುತ್ತೇವೆ ಅನಂತರ ಒಂದು ಭಜನೆ, ರಾಮನಾಮದ ಜಪ, ಮತ್ತು ಗೀತಾಪಠನ ನಡೆಯುತ್ತವೆ ಸಾಯಂಕಾಲದ ಪ್ರಾರ್ಥನೆಯಲ್ಲಿ ಭಗವದ್ಗೀತೆಯ ಎರಡನೆಯ ಅಧ್ಯಾಯದ ೧೯ ಶ್ಲೋಕಗಳ ಪಠನ, ಒಂದು ಭಜನೆ ಮತ್ತು ರಾಮನಾಮದ ಜಪ

ಆಗುತ್ತವೆ ತರುವಾಯ ಯಾವುದಾದರೂ ಒಂದು ಪವಿತ್ರಗ್ರಂಥದಿಂದ ಸ್ವಲ್ಪ ಭಾಗವನ್ನು ಓದುತ್ತೇವೆ. (ಆಶ್ರಮನಿಯಮಾವಳಿ, ಇತ್ಯಾದಿ)

ಆಶ್ರಮಪ್ರಾರ್ಥನೆ ತುಂಬ ಜನಪ್ರಿಯವಾಗಿಬಿಟ್ಟಿದೆ ಅದರ ವೃದ್ಧಿ ಅನುದ್ದೇಶಪೂರ್ವಕವಾಗಿ ಆದದ್ದು ಅದರ ಜನನವಾಗಲೀ ಬೆಳವಣಿಗೆಯಾಗಲೀ ಕೃತಕವಾದದ್ದಲ್ಲ ಹೆಚ್ಚುಕಡಿಮೆ ಪ್ರತಿಯೊಂದು ಶ್ಲೋಕಕ್ಕೂ ಆರಿಸಿದ ಪ್ರತಿಯೊಂದು ಭಜನೆಗೂ ಕೂಡಿಕೊಂಡ ಒಂದು ಚರಿತ್ರೆ ಇದೆ ಇತರ ಭಜನೆಗಳೊಂದಿಗೆ ಮುಸ್ಲಿಂ ಸೂಫೀಗಳ ಮತ್ತು ಫಕೀರರ, ಗುರು ನಾನಕನ ಮತ್ತು ಕ್ರೈಸ್ತರ ಸ್ತೋತ್ರಗೀತಾವಳಿಯ ಭಜನೆಗಳು 'ಭಜನಾವಳಿ'ಯಲ್ಲಿ ಅಡಕವಾಗಿವೆ ಪ್ರತಿಯೊಂದು ಧರ್ಮಕ್ಕೂ ಈ ಪ್ರಾರ್ಥನಾ ಪುಸ್ತಕದಲ್ಲಿ ಸ್ವಾಭಾವಿಕ ಸನ್ನಿವೇಶ ದೊರಕಿದಂತಿದೆ

ವೇಳೆವೇಳೆಯಲ್ಲಿ ಚೀಣೀಯರು, ಬರ್ಮೀಯರು, ಎಹೂದ್ಯರು, ಸಿಂಹಳರು, ಮುಸ್ಲಿಮರು, ಪಾರಸೀಕರು, ಐರೋಪ್ಯರು ಮತ್ತು ಅಮೇರಿಕದವರೆಲ್ಲ ಆಶ್ರಮದಲ್ಲಿ ಬಂದು ಬಾಳಿದ್ದಾರೆ ಅದೇ ರೀತಿ ೧೯೩೫ರಲ್ಲಿ ಇಬ್ಬರು ಜಪಾನೀ ಸಾಧುಗಳು ಮಗನ್‌ವಾಡಿಯಲ್ಲಿ ನನ್ನ ಬಳಿಗೆ ಬಂದರು ಅವರಲ್ಲಿ ಒಬ್ಬ ಮೊನ್ನೆ ಜಪಾನಿನೊಡನೆ ಯುದ್ಧವಾರಂಭವಾಗುವವರೆಗೂ ನನ್ನೊಡನಿದ್ದ ಸೇವಾಗ್ರಾಮದ ನಮ್ಮ ಮನೆಯಲ್ಲಿ ಮಾದರಿ ನಿವಾಸಿಯಾಗಿದ್ದ ಆತ ಆಶ್ರಮದ ಪ್ರತಿಯೊಂದು ಕಾರ್ಯಕ್ರಮದಲ್ಲಿಯೂ ಅತ್ಯುತ್ಸಾಹದಿಂದ ಭಾಗವಹಿಸುತ್ತಿದ್ದ ಯಾರೊಂದಿಗಾಗಲೀ ಅವ ಜಗಳವಾಡಿದನೆಂದು ನಾನೆಂದೂ ಕೇಳಲಿಲ್ಲ ಅವನೊಬ್ಬ ಮಾತಾಡದ ಕೆಲಸಗಾರ ತನಗೆ ಸಾಧ್ಯವಾದಷ್ಟು ಹಿಂದೀ ಭಾಷೆಯನ್ನು ಕಲಿತ ತಾ ಹಿಡಿದ ವ್ರತಗಳನ್ನು ತಪ್ಪದೆ ಪಾಲಿಸುತ್ತಿದ್ದ. ಪ್ರತಿದಿನವೂ ಬೆಳಗ್ಗೆ ಮತ್ತು ಸಾಯಂಕಾಲ ತಂಬಟೆ ಬಾರಿಸಿಕೊಂಡು ಮಂತ್ರಪಠನ ಮಾಡುತ್ತಾ ಆತ ಪ್ರದಕ್ಷಿಣೆ ನಡೆಯುವುದನ್ನು ನೋಡಬಹುದಾಗಿತ್ತು ಆತನ ಸಂಧ್ಯಾಕಾಲದ ಪೂಜೆಗೆ ಯಾವಾಗಲೂ ಅವನ ಮಂತ್ರದಿಂದ ಪ್ರಾರಂಭ, ಅದರ ಅರ್ಥ ಇದು 'ನಿಜ ಧರ್ಮದಾನಿ ಬುದ್ಧನಿಗೆ ನಾ ನಮಿಪೆ' ಆಶ್ರಮದಿಂದ ಆತನನ್ನು ಕರೆದುಕೊಂಡು ಹೋಗಲು ಪೋಲೀಸಿನವರು ಸುಳಿವು ಕೊಡದೆ ಬಂದ ದಿವಸ, ತ್ವರೆ, ಸುವ್ಯವಸ್ಥೆ, ಪೂರ್ಣ ಅನಾಸಕ್ತಿಗಳಿಂದ ಆತ ಸಿಧ್ಧ

ನಾದುದನ್ನು ನಾನೆಂದಿಗೂ ಮರೆಯಲಾರೆ ತನ್ನ ವ್ಯಾಮೋಹದ ಮಂತ್ರವನ್ನು ಪಠಿಸಿ, ನನ್ನನ್ನು ಬೀಳ್ಕೊಂಡು, ತನ್ನ ತಂಬಟೆಯನ್ನು ನನ್ನ ಬಳಿ ಬಿಟ್ಟು, ಹೊರಟುಹೋದ 'ನೀನೇನೋ ನಮ್ಮಿಂದ ಅಗಲುತ್ತಿದೀಯೆ, ಆದರೆ ನಿನ್ನ ಮಂತ್ರ ನಮ್ಮ ಆಶ್ರಮಪ್ರಾರ್ಥನೆಯ ಅಂಗವಾಗಿ ಉಳಿಯುತ್ತದೆ' ಈ ಮಾತುಗಳು ಅಯತ್ನಿಕವಾಗಿ ನನ್ನ ಬಾಯಿಗೆ ಬಂದುವು ಅಲ್ಲಿಂದ ಈಚೆ ಆತ ನಮ್ಮ ನಡುವೆ ಇಲ್ಲದಿದ್ದರೂ, ನಮ್ಮ ಬೆಳಗಿನ ಮತ್ತು ಸಂಜೆಯ ಉಪಾಸನೆ ಆ ಮಂತ್ರದಿಂದ ಆರಂಭವಾಗುತ್ತಿದೆ ಆ ಸಾಧು ಕೇಶವನ ಶುಭ್ರತೆಯನ್ನೂ ಏಕಾಗ್ರನಿಷ್ಠೆಯನ್ನೂ ಅದು ಸಂತತವಾಗಿ ನನ್ನ ಜ್ಞಾಪಕಕ್ಕೆ ತರುತ್ತದೆ ಹೌದು, ಆ ಮಂತ್ರದ ಗುಣ ಆತನ ಪವಿತ್ರ ಸ್ಮರಣೆಯಲ್ಲಿದೆ

ಸಾಧು ಕೇಶವ ಇನ್ನೂ ನಮ್ಮೊಡನೆ ಇದ್ದಾಗಲೇ ಬೀಬೀ ರಹಿಯಾನಾ ತಯಾಬ್ಜಿ ಕೂಡ ಸೇವಾಗ್ರಾಮದಲ್ಲಿ ತುಸು ದಿವಸದ ವಾಸಕ್ಕೆಂದು ಬಂದಳು ಆಕೆ ನಿಷ್ಠಾವಂತ ಮುಸ್ಲಿಮಳೆಂದು ನನಗೆ ಗೊತ್ತಿತ್ತು, ಆದರೆ ಆಕೆಯ ವಿಖ್ಯಾತ ಪಿತನ ಮರಣದವರೆಗೂ ಆಕೆ ಕೊರಾನ್ ಷರೀಫ್ ಗ್ರಂಥದಲ್ಲಿ ಅಷ್ಟೊಂದು ಪರಿಣತಳೆಂಬುದು ನನಗೆ ತಿಳಿದಿರಲಿಲ್ಲ ಗುಜರಾತಿನ ರತ್ನದಂತಿದ್ದ ತಯಾಬ್ಜೀ ಸಾಹೇಬ್ ದಿವಂಗತನಾದಾಗ ಆತನ ಕೊಠಡಿಯಲ್ಲಿ ಇದ್ದ ಭಯಭಕ್ತಿಯ ಮೌನವನ್ನು ಯಾವ ರೋದನದ ಶಬ್ದವೂ ಭೇದಿಸಲಿಲ್ಲ ಬೀಬೀ ರಹಿಯಾನಳ ಧ್ವನಿ ಗುಂಫನದ ಕೊರಾನ್ ಶ್ಲೋಕಗಳ ಪುನಶ್ಚರಣೆ ಅಲ್ಲಿ ಪ್ರತಿಧ್ವನಿಗೈಯುತ್ತಿತ್ತು ಅಬ್ಬಾಸ್ ತಯಾಬ್ಜೀ ಸಾಹೇಬರಂಥವರು ಸಾಯಲಾರರು ಆತ ಹಿಂದೆ ಬಿಟ್ಟುಹೋಗಿರುವ ರಾಷ್ಟ್ರಸೇವೆಯ ನಿದರ್ಶನದಲ್ಲಿ ಆತ ಎಂದೆಂದಿಗೂ ಬದುಕಿರುವ ಬೀಬೀ ರಹಿಯಾನಾ ಗಾಯನಪ್ರವೀಣೆ, ಎಲ್ಲ ತರದ ಭಜನೆಗಳ ಪುಷ್ಕಳ ರಾಶಿ ಆವಳ ಬಳಿ ಇದೆ ಪ್ರತಿದಿನವೂ ಗೀತೆಗಳನ್ನು ಹಾಡುವುದು ಆವಳ ವಾಡಿಕೆ, ಅಲ್ಲದೆ ಕೊರಾನಿನಿಂದ ಸುಂದರ ಪದ್ಯಗಳನ್ನೂ ಪಠಿಸುತ್ತಿದ್ದಳು ಅವಲ್ಲಿ ಕೆಲವನ್ನು ಕಲಿಯಬಲ್ಲ ಆಶ್ರಮವಾಸಿ ಯಾರಿಗಾದರೂ ಕಲಿಸೆಂದು ನಾ ಹೇಳಿದೆ, ಆಕೆ ಸಂತಸದಿಂದ ಹಾಗೆ ಮಾಡಿದಳು ನಮ್ಮಲ್ಲಿಗೆ ಬಂದ ಅನೇಕ ಜನರಂತೆ ಆಕೆಯೂ ನಮ್ಮಲ್ಲಿ ಒಬ್ಬಳಾಗಿದ್ದಾಳೆ ತನ್ನ ಭೇಟಿ

ಮುಗಿದ ಮೇಲೆ ರಹಿಯಾನಾ ಹೊರಟುಹೋದರೂ ಅವಳನ್ನು ಪುನಃಪುನಃ ಜ್ಞಾಪಕಕ್ಕೆ ತರುವಂಥ ಪರಿಮಳವನ್ನು ಬಿಟ್ಟುಹೋಗಿದ್ದಾಳೆ ಆಶ್ರಮದ ಉಪಾಸನೆಯಲ್ಲಿ ಪ್ರಖ್ಯಾತವಾದ 'ಅಲ್-ಫ-ತೆಹಾ' ಸೇರಿಸಲ್ಪಟ್ಟಿದೆ.

(ಹರಿಜನ ೧೫-೨ ೪೨)

## ಆಧ್ಯಾತ್ಮಿಕ ಧೂಳನ್ನು ಕೊಡಹಿ ಕಳೆಯಿರಿ

ಮನುಷ್ಯ ತನ್ನ ಆತ್ಮಕ್ಕೆ ಅಂಟಿದ ಎಲ್ಲ ಧೂಳನ್ನೂ ಪ್ರಾರ್ಥನೆ ಸಮಯದಲ್ಲಿ ಕೊಡಹಿ ಕಳೆಯಬೇಕು ಮಂದಿ ನೋಡುತ್ತಿರುವಾಗ ಅನೀತಿಯ ಕೃತ್ಯವನ್ನು ಮಾಡಲು ಆತ ನಾಚಿಕೊಳ್ಳುವಂತೆ ದೇವರ ಸನ್ನಿಧಿಯಲ್ಲಿಯೂ ಹಾಗೆಯೇ ವರ್ತಿಸಬೇಕು ದೇವರಿಗೆ ನಮ್ಮ ಪ್ರತಿಯೊಂದು ಚಿಂತನೆಯೂ ಪ್ರತಿಯೊಂದು ಕಾರ್ಯವೂ ಗೊತ್ತು. ಅವನಿಗೆ ತಿಳಿಯದಂತೆ ಒಂದು ಯೋಚನೆಯನ್ನು ಯೋಚಿಸುವ, ಒಂದು ಕಾರ್ಯವನ್ನು ಮಾಡುವ ನಿಮಿಷ ಒಂದಾದರೂ ಇಲ್ಲ ಹೃದಯದ ತಟ್ಟ ತಳದಿಂದ ಹೀಗೆ ಪ್ರಾರ್ಥನೆಯನ್ನು ಸಲ್ಲಿಸುವಾತ ಕ್ರಮೇಣ ದೇವರ ಚೈತನ್ಯದಿಂದ ತುಂಬಿ, ಪಾಪರಹಿತನಾಗುವನು

(ಮಹದೇವ ದೇಸಾಯಿ ದಿನಚರಿ ೧೭-೭-೩೨)

## ಅಧ್ಯಾಯ ೫

# ನನ್ನ ಧರ್ಮದ ಗುರಿಗಳು—ಸರ್ವೋದಯ

### ಬಾಳಿನ ವೃತ್ತಿಗಳೆಲ್ಲ ಧರ್ಮಮಯವಾಗಬೇಕು

ಮಾನವ ಕರ್ಮದಿಂದ ಪ್ರತ್ಯೇಕವಾದ ಧರ್ಮವನ್ನು ನಾನರಿಯೆ ಧರ್ಮ ಸರ್ವ ಚಟುವಟಿಕೆಗಳಿಗೂ ನೈತಿಕ ತಳಪಾಯವನ್ನು ಒದಗಿಸುತ್ತದೆ, ಹಾಗಾಗದಿದ್ದರೆ ಅದು ಮರೆಯಾಗಿ ಜೀವನ "ಸಪ್ಪಳ ರೋಷಾವೇಶ ಅದರರ್ಥ ಶೂನ್ಯ"ವೆಂಬ ಗೊಂದಲಕ್ಕೆ ಇಳಿಯುತ್ತದೆ (ಹರಿಜನ. ೨೪-೧೨-೩೯)

ಆದ್ದರಿಂದ ನಾನು ಸೇವಾಧರ್ಮವನ್ನು ಸಾಧನವಾಗಿ ಸೂಚಿಸಿದ್ದೇನೆ ಯಾವಾತ ಸಹಮಾನವರಿಗೆ ನೇವೆಗೈಯುವನೋ ಆತನ ಎದೆಯನ್ನು ದೇವರು ತಾನೇ ತನ್ನ ಪೀರಕ್ಕಾಗಿ ಹುಡುಕಿ ಆರಿಸಿಕೊಳ್ಳುವನು ಆದ್ದರಿಂದಲೇ ನರಸಿಂಹ ಮೆಹಧಾ, ಆತ "ಕಂಡ ಮತ್ತು ತಿಳಿದ" ಹೀಗೆ ಹಾಡಿದ "ಪರರ ದುಃಖವನ್ನು ಕಂಡು ಕರಗುವುದನ್ನು ಬಲ್ಲವನೇ ನೈಜ ವೈಷ್ಣವ" ಅಬುಬೆನ್ ಅಧೆಮ್ ಅಂಧವನಾಗಿದ್ದ, ಜೊತೆಮಾನವರನ್ನು ಸೇವಿಸಿದ ಆತ, ಆದ್ದರಿಂದ ಅವನ ಹೆಸರು ಭಗವತ್ಸೇವಕರ ಪಟ್ಟಿಯ ತಲೆಯಲ್ಲಿ ಲಿಖಿತವಾಯಿತು

ದೇವರಿದ್ದಾನೆಂಬುದನ್ನು ನಂಬದ ಮಂದಿ ಇರುವರೆಂದು ನಾ ಬಲ್ಲೆ. ಇಂಗ್ಲೆಂಡಿನಲ್ಲಿ ಅವರನ್ನು ನಾನು ಸಂಧಿಸಿದೆ, ಇಲ್ಲಿಯೂ ಹಲ ಕೆಲವರು ಇರಬಹುದು ಅವರು ಕೇಳುತ್ತಾರೆ "ದೇವರು ಎಲ್ಲಿದ್ದಾನೆ? ದೇವರಿದ್ದರೆ ಜಗತ್ತಿನಲ್ಲಿ ಇಷ್ಟೊಂದು ಸಂಕಟ ಇರುವುದೇತಕ್ಕೆ?" ಆದರೆ ದೇವರನ್ನೂ ಪ್ರಾರ್ಥನೆಯನ್ನೂ ನಂಬಿದವರು ದೇವರನ್ನು ತಂದು ತೋರಿಸಲಾರರು

(ಪ್ರಾರ್ಥನೋತ್ತರ ಭಾಷಣಗಳು. ೧೪-೯-೪೫).

ಪರಮ ಸತ್ವದಲ್ಲಿ ನನಗೆ ನಂಬಿಕೆ ಇರುವುದರಿಂದ ಪ್ರಾರ್ಥನೆ ಮುಖ್ಯವೆಂದು ಹೇಳುತ್ತೇನೆ ಜನ್ಮಧಾರಣೆ ಏನೋ ಒಂದು ಆಕಸ್ಮಿಕವಲ್ಲ ಪ್ರತಿಯೊಬ್ಬ ಮನುಜನೂ ತನ್ನ ಕರ್ಮದ ಫಲವನ್ನು ಪಡೆಯಲೇಬೇಕು. ಜನನ ಮರಣ ಭಗವಂತನ ಕೈಯಲ್ಲಿವೆ ದಿವಸ ಪೂರ್ತಿ ನಾವು ದೇವರ

ಚಿಂತನೆಯಲ್ಲಿ ಇರಬಹುದಾದರೆ ಅದು ಒಳ್ಳೆಯ ಸಂಗತಿಯೇ ಆದೀತು ಆದರೆ ಹಾಗೆಸಗುವುದು ಅಸಾಧ್ಯವಾದದ್ದರಿಂದ ಪ್ರತಿ ದಿನವೂ ತುಸು ಹೊತ್ತಾದರೂ ಅವನನ್ನು ಸ್ಮರಿಸಿಕೊಳ್ಳಬೇಕು ದೈವಾನುಗ್ರಹದ ಯಥೇಷ್ಟ ದಾನಗಳಿಗೆ ಪ್ರತಿ ದಿನವೂ ನಮ್ಮ ಕೃತಜ್ಞತೆಯನ್ನು ಅರ್ಪಿಸದೆ ಹೋದರೆ ನಮ್ಮ ಬಾಳಿನಲ್ಲಿ ಏನೂ ಅರ್ಥವಿರುವುದಿಲ್ಲ

(ಪ್ರಾರ್ಥನಾ ಪ್ರವಚನ. ೩೦-೫-೪೫)

## ಸಾಮಾಜಿಕ ಕ್ಷೇತ್ರದಲ್ಲಿ

ಆನುವಂಶಿಕವಾಗಿಯೋ ಗಳಿಸಿಕೊಂಡೋ ಪಡೆದ ಹಿರಿಮೆಯಿಲ್ಲವೆಂದು ನನ್ನ ಅಭಿಪ್ರಾಯ ಹುಟ್ಟುತ್ತ ಎಲ್ಲ ಮಾನವರೂ ಸಮಾನರೆಂದು ನನ್ನ ನಂಬಿಕೆ ಅವರಿವರು ಎಲ್ಲರೊಳಗೂ ಇರುವ ಆತ್ಮ ಒಂದೇ ಯಾವನೇ ಆಗಲಿ ಜೊತೆಜೀವಿಯೊಂದಕ್ಕಿಂತ ತಾನು ಮೇಲೆಂದು ಹೇಳಿಕೊಳ್ಳುವುದು ನನ್ನ ಮನಸ್ಸಿಗೆ ಪೌರುಷ ಹೀನಕೃತ್ಯ ಹೆಚ್ಚುಗಾರಿಕೆ ಹಕ್ಕೂ ತನಗುಂಟೆಂದು ಹೇಳುವಾತ ತಕ್ಷಣವೇ ಮನುಷ್ಯನೆನ್ನಿಸಿಕೊಳ್ಳುವ ಹಕ್ಕನ್ನು ಕಳೆದುಕೊಳ್ಳುತ್ತಾನೆ ಅದೇ ನನ್ನ ಅಭಿಮತ

(ಯಂಗ್ ಇಂಡಿಯಾ ೨೯-೯-೨೭)

## "ವಿನಮ್ರರು, ಅತಿದೀನರು, ಕೃಬಿಟ್ಟವರು"

ಯಾತನೆಯವರೂ ದುಃಖ ದೂಷಿತರೂ ಯಾರು? ತುಳಿಯಲ್ಪಟ್ಟವರು, ದಾರಿದ್ರ್ಯದಿಂದ ಬಡಿಯಲ್ಪಟ್ಟವರು ಆದ್ದರಿಂದ ಅವರನ್ನು ಭಕ್ತನಾಗಲಾಶಿಸುವವನು ತನ್ನ ದೇಹ ಆತ್ಮ ಬುದ್ಧಿಗಳಿಂದ ಸೇವಿಸಬೇಕು ಯಾವನು "ತುಳಿಯಲ್ಪಟ್ಟವರನ್ನು" ಅಸ್ಪೃಶ್ಯರೆಂದು ಎಂಗಡಿಸುವನೋ ಅವ ಹೇಗೆ ತನ್ನ ಶರೀರದಿಂದ ಅವರಿಗೆ ಸೇವಿಸಬಲ್ಲ? ಬಡವರ ಆಧಾರಕ್ಕಾಗಿ [illegible]ಲುವಷ್ಟು ಕೂಡ ತನ್ನ ಮೈಯನ್ನು ನೋಯಿಸಿಕೊಳ್ಳಲು ಕೆಳಗಿಳಿಯಲಾರದವ ಕುಂಟು ನೆಪ ಹೂಡುವವ, ಸೇವೆಯ ಅಭೀಷ್ಟವನ್ನೇ ಕಂಡರಿಯ ದೇಹದಾರ್ಢ್ಯವುಳ್ಳ ಅಬ್ಬೇಪಾರಿಗೆ ಅರ್ಹತೆ ಇರುವುದು ಭಿಕ್ಷೆಗಲ್ಲ, ರೊಟ್ಟಿಗಾಗಿ ಜೀತಗೈಯೆಂಬ ಹಿತಬೋಧನೆಗೆ ಭಿಕ್ಷೆ ಅವನನ್ನು ಇನ್ನೂ ಹೀನೈಸುತ್ತದೆ ಬಡವರ ಮುಂದೆ ನೂಲುತ್ತ, ಅಂತೆಯೇ

ಮಾಡುವುದಕ್ಕೆ ಅವರಿಗೆ ಆಹ್ವಾನವೀಯುವಾತ ಇತರರು ಯಾರೂ ಎಸಗದಿರುವ ದೈವ ಸೇವೆಯನ್ನು ಎಸಗಿದಂತಾಗುತ್ತದೆ "ಒಂದು ಹಣ್ಣು ಒಂದು ಹೂ, ಕೊನೆಗೆ ಒಂದು ಎಲೆಯಂಥ ಇವುಗಳಲ್ಲಿ ಕಿಂಚಿತ್ತನ್ನು ಭಕ್ತಿಭಾವದಿಂದ ನನಗೆ ಯಾವಾತ ಕೊಡುವನೋ ಆತ ನನ್ನ ಸೇವಕ" ಎನ್ನುತ್ತಾನೆ ಸ್ವಾಮಿ ಭಗವದ್ಗೀತೆಯಲ್ಲಿ "ವಿನಮ್ರರು, ಅತಿ ದೀನರು, ಕೈಬಿಟ್ಟವರು" ಎಲ್ಲಿ ಜೀವಿಸುವರೋ ಅಲ್ಲಿ ಭಗವಂತ ತನ್ನ ಕಾಲುಮಣೆಯನಿಟ್ಟುಕೊಂಡಿದ್ದಾನೆ (ಯಂಗ್ ಇಂಡಿಯಾ. ೨೪-೯-೨೫)

ಪ್ರಾರ್ಥನೆ ಶ್ರೇಷ್ಠತಮ ಸಂಘಟನಾಶಕ್ತಿ, ಮಾನವ ಕುಟುಂಬವನ್ನು ಒಂದುಗೂಡಿಸಿ ಭದ್ರಗೈಯುವ ಕಡೆಗೇ ಅದರ ಒಲವು ಪ್ರಾರ್ಥನೆಯ ಮೂಲಕ ದೇವರಿಗೂ ತನಗೂ ಇರುವ ಹೊಂದಾಣಿಕೆಯನ್ನು ಗ್ರಹಿಸಿಕೊಳ್ಳುವ ಪುರುಷ ಪ್ರತಿಯೊಬ್ಬನನ್ನೂ ತನ್ನಂತೆಯೇ ಕಾಣುತ್ತಾನೆ ಮೇಲು ಕೀಳೆಂಬುದಿರುವುದಿಲ್ಲ, ಸಂಕುಚಿತ ಪ್ರಾದೇಶಿಕತೆಗಳಿರುವುದಿಲ್ಲ, ಭಾಷೆಯ ವಿಷಯದಲ್ಲಿ ಆಂಧ್ರನಿಗೂ ತಮಿಳನಿಗೂ ಕನ್ನಡಿಗನಿಗೂ ಮಳೆಯಾಳಿಗೂ ಕ್ಷುದ್ರ ತಿಕ್ಕಾಟಗಳಿರುವುದಿಲ್ಲ ಸ್ಪೃಶ್ಯ ಅಸ್ಪೃಶ್ಯರೆಂಬ ಹಿಂದೂ ಮುಸಲ್ಮಾನರೆಂಬ ಪಾರ್ಸೀ ಕ್ರೈಸ್ತ ಸಿಕ್ ಎಂಬ ಮಾತ್ಸರ್ಯಪೂರಿತ ವ್ಯತ್ಯಾಸವಾವುದೂ ಇರುವುದಿಲ್ಲ ಹಾಗೆಯೇ ಬೇರೆ ಬೇರೆ ಗುಂಪುಗಳಿಗೆ ಒಂದೇ ಗುಂಪಿನ ಬೇರೆ ಬೇರೆ ವ್ಯಕ್ತಿಗಳಿಗೆ ಸ್ವಂತ ಲಾಭಕ್ಕಾಗಿಯೋ ಅಧಿಕಾರಕ್ಕಾಗಿಯೋ ನಾಮುಂದೆ ತಾಮುಂದೆ ಎನ್ನುವ ಕಚ್ಚಾಟ ಇರುವುದಿಲ್ಲ

(ಹರಿಜನ. ೩೦-೩-೪೬)

ರೂಪಗಳು ಅನೇಕ, ಅಂತಸ್ಥ ಚೈತನ್ಯವಾದರೋ ಏಕ ಹೊರಗೆ ತೋರುವ ವಿವಿಧತೆಯ ಒಳಗಡೆ ಸರ್ವವ್ಯಾಪ್ತಿಯಾದ ಈ ಅಧಿಷ್ಠಾನ ಏಕತ್ವ ಕುಳಿತಿರುವಾಗ ಮೇಲು ಕೀಳು ಎಂಬ ಭೇದಗಳಿಗೆ ಹೇಗೆ ಸ್ಥಳ ಸಿಕ್ಕುತ್ತದೆ? ಅದು ದೈನಂದಿನ ಜೀವನದ ಹೆಜ್ಜೆಹೆಜ್ಜೆಗೂ ನಿನ್ನನ್ನು ಸಂಧಿಸುವ ಯಥಾರ್ಥ ಸತ್ಯ ಎಲ್ಲ ಧರ್ಮಗಳ ಅಂತಿಮ ಗುರಿಯಾಗಿದೆ ಈ ಸಾರಭೂತ ಏಕತ್ವದ ನಿಶ್ಚಿತ ಜ್ಞಾನ (ಹರಿಜನ. ೧೫-೧೨-೩೩)

## ವೈಯಕ್ತಿಕತ್ವವೂ ಸಾಮಾಜಿಕ ಹೊಣೆಯೂ

ವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಲೆ ಕೊಡುತ್ತೇನೆ ನಾನು, ಆದರೆ ಮನುಷ್ಯ ಮುಖ್ಯವಾಗಿ ಸಮಾಜಜೀವಿ ಎಂಬುದನ್ನು ನೀವು ಮರೆಯಬಾರದು ಸಾಮಾಜಿಕ ಅಭಿವೃದ್ಧಿಗೆ ಅನುಗುಣವಾಗಿ ತನ್ನ ವೈಯಕ್ತಿಕ ತತ್ವವನ್ನು ಕಲಿತು ಇಂದಿನ ಹಂತಕ್ಕೆ ಏರಿದ್ದಾನೆ ಅವ ನಿಶ್ಶೃಂಖಲೆಯ ವ್ಯಕ್ತಿಭಾವ ಅರಣ್ಯ ಪಶುವಿನ ಆಚಾರ ವ್ಯಕ್ತಿ ಸ್ವಾತಂತ್ರ್ಯಕ್ಕೂ ಸಾಮಾಜಿಕ ತಡೆಗೂ ಮಧ್ಯದ ಅಂಕೆಯನ್ನು ಕಂಡುಕೊಳ್ಳುವುದು ನಮ್ಮ ಕಲಿಕೆಯಾಗಬೇಕು ಇಡೀ ಸಮಾಜದ ಯೋಗಕ್ಷೇಮಕ್ಕೋಸ್ಕರ ಒಬ್ಬ ಇಚ್ಛಾಪೂರ್ವಕವಾಗಿ ಸಾಮಾಜಿಕ ಕಟ್ಟುಗಳಿಗೆ ತಲೆಬಾಗಿದರೆ ಆದರಿಂದ ಆ ವ್ಯಕ್ತಿಯೂ ಅವ ಸದಸ್ಯನಾಗಿರುವ ಸಮಾಜವೂ ಹೆಚ್ಚಿಗೆ ಪಡೆಯುತ್ತವೆ.

(ಹರಿಜನ ೨೭-೫-೩೯)

ವ್ಯಕ್ತಿ ಕಲ್ಯಾಣ ಒಂದನ್ನೇ ಉದ್ದೇಶವಾಗಿಟ್ಟುಕೊಂಡಿರುವ ಅಥವಾ ಅಷ್ಟರಿಂದಲೇ ತೃಪ್ತಿಹೊಂದುವ ಸದ್ಗುಣ ಒಂದು ಕೂಡ ಇಲ್ಲ ಇದಕ್ಕೆ ವಿಪರ್ಯಾಯವಾಗಿ ವಾಸ್ತವಿಕ ತಪ್ಪಿತಸ್ಥನನ್ನೇ ಅಲ್ಲದೆ ಇತರ ಅನೇಕರನ್ನು ತಟ್ಟದೇ ಇರುವ ನೈತಿಕ ಅಪರಾಧ ಒಂದು ಕೂಡ ಇಲ್ಲ ಆದ್ದರಿಂದ ವ್ಯಕ್ತಿಯೊಬ್ಬನ ಒಳ್ಳೆಯತನ ಅಥವಾ ಕೆಟ್ಟತನ ಅವನೊಬ್ಬನದೆ ಆದ ವ್ಯಾಪಾರವಲ್ಲ, ನಿಜವಾಗಿ ಇಡೀ ಜನಗಣಕ್ಕೆ ಅಷ್ಟೇಕ ಇಡೀ ಪ್ರಪಂಚಕ್ಕೆ ಸಂಬಂಧಿಸಿದ ವಿಚಾರ (ನೀತಿಧರ್ಮ)

ಮನುಜಕುಲ ಮೂಲ ಲಕ್ಷಣದಲ್ಲಿ ಒಂದೇ ಎಂದೂ ಅಷ್ಟೇ ಅಲ್ಲ, ಜೀವರಾಶಿಯೆಲ್ಲ ಅಂತೇ ಎಂದೂ ನನ್ನ ನೆಚ್ಚಿಕೆ. ಆದುದರಿಂದ, ಒಬ್ಬ ಮನುಷ್ಯ ಆಧ್ಯಾತ್ಮಿಕ ಲಾಭವನ್ನು ಹೊಂದಿದರೆ ಜಗತ್ತು ಅವನೊಂದಿಗೆ ಲಾಭ ಹೊಂದುತ್ತದೆ, ಒಬ್ಬ ಪತಿತನಾದರೆ ಸಕಲ ಜಗತ್ತೂ ಅಷ್ಟರಮಟ್ಟಿಗೆ ಪತನವಾಗುತ್ತದೆ ಇದೂ ನನ್ನ ನೆಚ್ಚಿಕೆ (ಯಂಗ್ ಇಂಡಿಯಾ. ೪-೧೨-೨೪)

## ಆರ್ಥಿಕ ಕ್ಷೇತ್ರದಲ್ಲಿ—ಪ್ರೇಮ ಮೂಲಾಧಾರವಾಗಬೇಕು

ಮಾನವನೊಂದು ಯಂತ್ರವಾದರೆ ಆತ್ಮವೇ ಅದರ ಚಾಲಕ ಶಕ್ತಿ. ಈ ವಿಚಿತ್ರಯಂತ್ರದ ಭಾರಿ ಮೊತ್ತದ ಕೆಲಸವನ್ನು ಸಂಬಳಕ್ಕಾಗಿಯಾಗಲೀ ಬಲವಂತಕ್ಕೆ ಒಳಪಟ್ಟಾಗಲೀ ಮಾಡುವುದಿಲ್ಲ ಅಂಥ ಕೆಲಸಕ್ಕೆ ಅದರ

ಚಾಲಕ ಶಕ್ತಿ ಎಂದರೆ ಅದರ ಸಂಕಲ್ಪ ಅಥವಾ ಚೈತನ್ಯ ಎಷ್ಟು ಸಾಧ್ಯವೋ ಅಷ್ಟು ಬಲಗೊಳ್ಳಬೇಕು ಅಂಥ ಬಲ ಬರುವುದು ಆ ಯಂತ್ರಕ್ಕೆ ಸಮಂಜಸವಾದ ಇಂಧನದಿಂದ, ಎಂದರೆ ಒಲವುಗಳಿಂದ ಈ ವಿಚಾರದಲ್ಲಿ ಸಾರ್ವತ್ರಿಕ ನ್ಯಾಯ ಇಷ್ಟೆ ಯಜಮಾನ ಭೃತ್ಯರಲ್ಲಿ ಒಂದು ಮೊತ್ತದ ಸಾಮರ್ಥ್ಯ ಬುದ್ಧಿಗಳಿವೆಯೆಂದು ಇಟ್ಟುಕೊಳ್ಳೋಣ ಅವರಲ್ಲಿ ಪರಸ್ಪರ ಪ್ರೇಮವಿದ್ದರೆ ಅತ್ಯಂತ ಹೆಚ್ಚಿನ ಪ್ರಯೋಜನವಾದೀತೇ ಹೊರತು ಪರಸ್ಪರ ವಿರೋಧದಿಂದ ಆಗಲಾರದು ಸ್ವಾರ್ಥರಹಿತ ವರ್ತನೆಯಿಂದ ಅತ್ಯಂತ ಪ್ರಬಲ ಪ್ರತಿಫಲ ಉತ್ಪತ್ತಿಯಾಗುತ್ತದೆ ಸೇವಕನ ಕೃತಜ್ಞತೆಯಿಂದ ಉಪಯೋಗ ಪಡೆಯುವ ಭಾವನೆಯನ್ನಿಟ್ಟುಕೊಂಡು ಅವನಿಗೆ ದಯೆ ತೋರು, ಪ್ರತಿಯಾಗಿ ನಿನಗೆ ಕೃತಜ್ಞತೆಯಾಗಲೀ ನಿನ್ನ ದಯೆಗೆ ಬೆಲೆಯಾಗಲೀ ದೊರಕುವುದಿಲ್ಲ, ನೀ ಮಾಡಿದ್ದಕ್ಕೆ ಅದೇ ಸರಿಯಾದ ಬಹುಮಾನ ಆರ್ಥಿಕ ಪ್ರಯೋಜನದ ಉದ್ದೇಶವನ್ನು ಬಿಟ್ಟು ದಯೆತೋರು, ಎಲ್ಲ ಆರ್ಥಿಕ ಉದ್ದೇಶಗಳೂ ದಕ್ಕಿಯಾವು. ಇತರ ವಿಚಾರಗಳಂತೆ ಇಲ್ಲಿಯೂ ಪ್ರಾಣವನ್ನು ಉಳಿಸಿಕೊಳ್ಳಲು ಆಸೆಯುಳ್ಳವ ಪ್ರಾಣವನ್ನು ಕಳೆದುಕೊಳ್ಳುವ ಪ್ರಾಣದಾಸೆಯನ್ನು ತೊರೆದವ ಅದನ್ನು ಉಳಿಸಿಕೊಳ್ಳುವ (ಸರ್ವೋದಯ).

## ನ್ಯಾಯವಾದ ಅರ್ಥಶಾಸ್ತ್ರ ನೀತಿ

ಎಲ್ಲ ನೈಜ ನೀತಿ ಶಾಸ್ತ್ರವೂ—ಹೆಸರಿಗೆ ತಕ್ಕಂತೆ ಆದಿರಬೇಕಾದರೆ —ಒಳ್ಳೆಯ ಅರ್ಥಶಾಸ್ತ್ರವೂ ತಾನೇ ಜೊತೆಯಲ್ಲಿ ಆಗಿರುವಂತೆ ನಿಜವಾದ ಅರ್ಥಶಾಸ್ತ್ರ ಅತ್ಯುತ್ತಮ ನೀತಿಶಾಸ್ತ್ರವನ್ನು ಎಂದಿಗೂ ವಿರೋಧಿಸದು ಧನಪಿಶಾಚಿಯ ಪೂಜೆಯನ್ನು ವಿಧಾಯಕಮಾಡಿ, ದುರ್ಬಲರ ಶೋಷಣೆಯಿಂದ ಬಲಿಷ್ಠರು ಐಶ್ವರ್ಯಗಳಿಸುವುದಕ್ಕೆ ಸಹಾಯ ನೀಡುವ ಅರ್ಥಶಾಸ್ತ್ರ ಅನೃತವಾದ 'ಮಬ್ಬುಗವಿದ ವಿಜ್ಞಾನ' ಮೃತ್ಯುವನ್ನು ತರುತ್ತದೆ ಅದು ಅದಕ್ಕೆ ಪ್ರತಿಯಾಗಿ, ಸತ್ಯವಾದ ಅರ್ಥಶಾಸ್ತ್ರ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುತ್ತದೆ ಅತ್ಯಂತ ಅಶಕ್ತರಿಂದ ಹಿಡಿದು ಎಲ್ಲರ ಹಿತವನ್ನು ಹೆಚ್ಚಿಸುತ್ತದೆ, ನಯನಾಗರೀಕ ಜೀವನಕ್ಕೆ ಅದಿಲ್ಲದೆ ಆಗದು

(ಹರಿಜನ. ೯-೧೦-೩೭)

ನ್ಯಾಯ ಪ್ರಧಾನವಾದ ಅರ್ಥಶಾಸ್ತ್ರವೇ ಯಥಾರ್ಥ ಅರ್ಥಶಾಸ್ತ್ರ ನ್ಯಾಯಪಾಲನೆಯನ್ನು, ಋಜುಬಾಳನ್ನು ಎಷ್ಟರವುಟ್ಟಿಗೆ ಜನ ಕಲಿಯುತ್ತಾರೋ ಅಷ್ಟರವುಟ್ಟಿಗೆ ಅವರಿಗೆ ಸೌಖ್ಯ ಉಳಿದದ್ದೆಲ್ಲ ಸುಮ್ಮನೆ ವ್ಯರ್ಥವಷ್ಟೇ ಅಲ್ಲದೆ ವಿನಾಶದತ್ತ ನೇರವಾಗಿ ಕರೆದೊಯ್ಯುತ್ತದೆ ಆ ಹಂಚಿಕೆ ಈ ಹಂಚಿಕೆಯಿಂದ ಧನವಂತರಾಗಿ ಎಂದು ಜನಕ್ಕೆ ಬೋಧಿಸುವುದು ಅವರಿಗೊಂದು ಅಗಾಧ ಕೆಡಕನ್ನು ಮಾಡಿದಂತೆ.

(ಸರ್ವೋದಯದಿಂದ)

## ಸರ್ವೋದಯವೇ ಗುರಿ

ದೇವರ ಪ್ರತಿಬಿಂಬವಾಗಿ ನಮ್ಮನ್ನು ನಿರ್ಮಿಸಿದ್ದರೆ, ಕೆಲವರ ಹಿತವಲ್ಲ, ಬಹುಜನರ ಹಿತವೂ ಅಲ್ಲ, ಸರ್ವರ ಹಿತವನ್ನು ವೃದ್ಧಿಗೊಳಿಸುವುದಕ್ಕಾಗಿ ನಾವು ನಿರ್ಮಿತವಾಗಿದ್ದೇವೆ (ಭಾಷಣಗಳೂ ಬರೆಹಗಳೂ)

## ರಾಜಕೀಯ ಕ್ಷೇತ್ರದಲ್ಲಿ

ಅಹಿಂಸೆಯ ಆಧಾರದ ಮೇಲೆ ರಚಿತವಾದ ಸ್ವರಾಜ್ಯದಲ್ಲಿ ಯಾರಿಗೆ ಯಾರೂ ಶತ್ರುವಲ್ಲ ಗಂಡಸಾಗಲೀ ಹೆಂಗಸಾಗಲೀ ಪ್ರತಿಯೊಬ್ಬ ವ್ಯಕ್ತಿಯೂ ಸಾರ್ವಜನಿಕ ಸೌಖ್ಯಕ್ಕಾಗಿ ತನ್ನ ಪಾಲಿನ ದುಡಿಮೆಯನ್ನು ಮಾಡುತ್ತಾನೆ ಎಲ್ಲರೂ ಓದುಬರಹ ಬಲ್ಲವರು ಅವರ ಜ್ಞಾನ ದಿನದಿಂದ ದಿನಕ್ಕೆ ಹೆಚ್ಚುತ್ತ ಹೋಗುತ್ತದೆ ರೋಗರುಜಿನಗಳನ್ನು ಬಹಳ ಕಡಮೆ ಮಾಡಿ ಇಡುತ್ತಾರೆ ಯಾವೊಬ್ಬನೂ ನಿರ್ಗತಿಕನಲ್ಲ ಕೆಲಸಗಾರನಿಗೆ ಸದಾ ಉದ್ಯೋಗ ದೊರಕುತ್ತದೆ. ಇಂಥ ಪ್ರಭುತ್ವದಲ್ಲಿ ಜೂಜು, ಕುಡಿತ, ಅನೀತಿ, ವರ್ಗದ್ವೇಷಕ್ಕೆ ಜಾಗವೇ ಇಲ್ಲ. (ಹರಿಜನ. ೨೫-೩-೩೯)

## ರಾಷ್ಟ್ರೀಯತೆ—ಅಂತರರಾಷ್ಟ್ರೀಯತೆ

ಇಂದಿನ ದೇಶಾಭಿಮಾನದ ಪಂಥ ವ್ಯಕ್ತಿಯು ಕುಟುಂಬಕ್ಕಾಗಿಯೂ ಕುಟುಂಬವು ಗ್ರಾಮಕ್ಕಾಗಿಯೂ ಗ್ರಾಮವು ಜಿಲ್ಲೆಗಾಗಿಯೂ, ಜಿಲ್ಲೆಯು ಪ್ರಾಂತಕ್ಕಾಗಿಯೂ ಪ್ರಾಂತವು ಸಮಗ್ರದೇಶಕ್ಕಾಗಿಯೂ ಸಾಯಬೇಕಾದ್ದನ್ನು ಕಲಿಸುತ್ತದೆ ಹಾಗೆಯೇ ಸ್ವತಂತ್ರವಾಗಿರಬೇಕು, ಏತಕ್ಕೆಂದರೆ

ಅಗತ್ಯ ಬಿದ್ದಾಗ ಅದು ಪ್ರಪಂಚದ ಪ್ರಯೋಜನಕ್ಕಾಗಿ ಸಾಯಬೇಕು ಇಲ್ಲಿ ಜನಾಂಗದ್ವೇಷಕ್ಕೆ ಜಾಗವೇ ಇಲ್ಲ

(ಭಾರತದ ಹಳ್ಳಿಗಳಲ್ಲಿ ಗಾಂಧೀಜೀ-ಮಹದೇವ ದೇಸಾಯಿ)

ರಾಷ್ಟ್ರನಿರ್ಮಿತ ಗಡಿಗಳಾಚೆ ಇರುವ ನೆರೆಯವರಿಗೂ ನಮ್ಮ ಸೇವೆಗಳನ್ನು ಮುಂದುವರಿಸಲು ಯಾವ ಮಿತಿಯೂ ಇಲ್ಲ ದೇವರು ಅಂಥ ಗಡಿಗಳನ್ನು ಯಾವೊತ್ತೂ ಏರ್ಪಡಿಸಲಿಲ್ಲ (ಯಂಗ್ ಇಂಡಿಯಾ. ೩೧-೧೨-೩೧)

ದೇವರು ಒಬ್ಬನೇ ಎಂಬ ಪಾರಮ್ಯವನ್ನು ನಾನು ನಂಬುತ್ತೇನೆ. ಆದ್ದರಿಂದ ನನಗೆ ಮಾನವಕೋಟಿ ಕೂಡ ಒಂದೇ ನಾನಾ ದೇಹಗಳನ್ನು ಮನುಜರು ಧರಿಸಿದರೇನಾಯಿತು. ನಮಗೆಲ್ಲ ಇರುವುದು ಒಂದೇ ಆತ್ಮ ಪ್ರತಿಫಲನದಿಂದ ಸೂರ್ಯನ ಕಿರಣಗಳು ಅನೇಕ, ಅವೆಲ್ಲಕ್ಕೂ ಮೂಲ ಒಂದೇ

(ಯಂಗ್ ಇಂಡಿಯಾ. ೨೫-೯-೨೯)

ನನ್ನ ಧರ್ಮಕ್ಕೂ ಅದರಿಂದ ಬಂದಿರುವ ನನ್ನ ದೇಶಾಭಿಮಾನಕ್ಕೂ ಎಲ್ಲ ಜೀವನದ ತುಂಬ ವ್ಯಾಪ್ತಿ. (ಯಂಗ್ ಇಂಡಿಯಾ. ೪-೪-೨೯)

ಪರಿಪೂರ್ಣ ನಮ್ರತೆಗೆ ನಮ್ಮನ್ನು ನಾವೇ ಇಳಿಸಿಕೊಂಡು ಶಕ್ತಿಗಾಗಿ ನಮ್ಮಿಂದ ಆಚೆ ನೋಡಬೇಕು, ಆದ್ದರಿಂದ ಇದೇ ಯುವಕರಿಗೆ ನನ್ನ ಸಂದೇಶ ಮತ್ತು ತಮ್ಮ ಬುದ್ಧಿಗೆ ವಿರೋಧವಾಗಿಯೇ, ಅವರನ್ನು ಪ್ರೇಮ ಮತ್ತು ಸತ್ಯದ ಎಲ್ಲವನ್ನೂ ಗೆಲ್ಲುವ ಸಾಮರ್ಥ್ಯದಲ್ಲಿ ನಂಬಿಕೆಯಿಡಲಿ. ನಮ್ಮ ಯುವಕರಿಗೆ ಅಗತ್ಯವಾದದ್ದು ಅಂಥ ನಂಬಿಕೆ ಎಲ್ಲ ಬೌದ್ಧಿಕ ಗರ್ವ ಕೊಡವಿಕೊಂಡು ಭಗವಂತನ ಸಂಕಲ್ಪಕ್ಕೆ ಪೂರ್ತಿ ಶರಣಾಗತರಾದರೆ ಇಂಥ ನಿಷ್ಠೆ ಅವರಿಗೆ ದೊರಕೀತು (ಯಂಗ್ ಇಂಡಿಯಾ. ೨೧-೩-೨೯)

## ಉಪಸಂಹಾರ

ನನ್ನಲ್ಲಿ ಯಾವುದೋ ವಿಶಿಷ್ಟವಾದ ದೈವೀಶಕ್ತಿ ಇದೆಯೆಂದು ಹೇಳಿಕೊಳ್ಳಲಾರೆ. ಪ್ರವಾದಿತ್ವ ನನಗೆ ಬೇಡ ನಾನೊಬ್ಬ ವಿನಮ್ರ ಸತ್ಯಾನ್ವೇಷಕ ಅಷ್ಟೆ ಅದನ್ನು ಕಂಡುಕೊಳ್ಳಲೇ ಬೇಕೆಂದು ನನ್ನ ಶ್ರದ್ಧೆ. ದೇವರ ಮುಖವನ್ನು ಮುಖವೆತ್ತಿ ಈಕ್ಷಿಸುವುದಕ್ಕೋಸ್ಕರ ಎಂಥ ತ್ಯಾಗವನ್ನಾದರೂ ಅತಿಶಯವೆಂದು ನಾನು ಎಣಿಸುವುದಿಲ್ಲ

ನನ್ನ ಮನೆಯ ಸುತ್ತ ಗೋಡೆ ಎಬ್ಬಿಸುವುದಾಗಲೀ, ಕಿಟಕಿಗಳನ್ನು ಗಿಡಿದು ಮುಚ್ಚುವುದಾಗಲೀ ನನಗೆ ಇಷ್ಟವಿಲ್ಲ. ಸಮಸ್ತ ದೇಶಗಳ ಸಂಸ್ಕೃತಿಗಳೂ ಸಾಧ್ಯವಾದಷ್ಟು ಸ್ವಾತಂತ್ರ್ಯದಿಂದ ನನ್ನ ಮನೆಯ ಬಳಿ ಸುಳಿದಾಡಲೆಂದು ನನ್ನ ಅಪೇಕ್ಷೆ. ಆದರೆ ಅವಲ್ಲಿ ಯಾವೊಂದನ್ನೂ ನನ್ನ ನಿಲವನ್ನು ತಪ್ಪಿಸುವುದಕ್ಕೆ ಬಿಡುವುದಿಲ್ಲ. ಸೆರೆಮನೆಯ ಧರ್ಮವಲ್ಲ ನನ್ನ ಧರ್ಮ. ಅದರಲ್ಲಿ ದೈವಸೃಷ್ಟಿಯ ಅತ್ಯಂತ ಚಿಕ್ಕದಕ್ಕೂ ಸ್ಥಾನವಿದೆ. ಹಾಗೂ ಜನಾಂಗ, ಮತಧರ್ಮ ಅಥವಾ ಬಣ್ಣದಿಂದೊಗೆದ ನೂಕ್ಕಿನ ಧಿಕ್ಕಾರಕ್ಕೆ ಅದು ಸಗ್ಗದು.

(ಯಂಗ್ ಇಂಡಿಯಾ. ೧-೬-೨೧)

---

## ಅಧ್ಯಾಯ ೬

# ಮೂರು ಪ್ರಧಾನ ಸದ್ಗುಣಗಳು

ನೀತಿ ನೇಮ, ಸತ್ಯ, ಅಹಿಂಸೆ ಮತ್ತು ಇಂದ್ರಿಯನಿಗ್ರಹಗಳನ್ನು ಒಳಗೊಂಡಿದೆ. ಮಾನವವರ್ಗ ಯಾವೊತ್ತಾಗಲೀ ಅನುಷ್ಠಾನಕ್ಕೆ ತಂದಿರುವ ಪ್ರತಿಯೊಂದು ಸದ್ಗುಣವನ್ನೂ ಈ ಮೂರು ಪ್ರಧಾನ ಸದ್ಗುಣಗಳಿಗೆ ನಿರ್ದೇಶಿಸಬಹುದು ಮತ್ತು ಅವಿಂದ ಉತ್ಪನ್ನವಾದದ್ದೆನ್ನಬಹುದು. ನನ್ನ ಪಾಲಿಗೆ ದೇವರಾಗಿರುವ ಸತ್ಯವೇ ಇಂದ್ರಿಯನಿಗ್ರಹಗಳಿಗೆ ಮೂಲಸ್ಥಾನ. ಇಂದ್ರಿಯಗಳ ಮೇಲೆ ಏನೂ ಹತೋಟಿ ಇಲ್ಲದಿರುವುದು ಚುಕ್ಕಾಣಿ ಹಲಗೆ ಮುರಿದ ಹಡಗಿನ ಯಾನ ಮಾಡಿದ ಹಾಗೆ, ಅದು ಮೊಟ್ಟಮೊದಲನೆಯ ಬಂಡೆಗೆ ತಾಕಿದೊಡನೆ ಅದು ಚೂರುಚೂರಾಗಿ ಒಡೆಯುವುದು ಖಂಡಿತ.

(ಹರಿಜನ. ೩-೯-೩೬)

ನೈತಿಕ ಯೋಗ್ಯತೆಯ ಮಹತ್ವವನ್ನು ನಿಮ್ಮಲ್ಲಿ ಪ್ರತಿಯೊಬ್ಬನೂ ತಿಳಿದುಕೊಳ್ಳಬೇಕು. ನೈತಿಕ ಯೋಗ್ಯತೆಯನ್ನು ಪ್ರಾಪಂಚಿಕ ಯೋಗ್ಯತೆಯಿಂದ ವಿಭೇದಿಸುವುದು ಸುಲಭ. ಒಂದು ನೈತಿಕಮೌಲ್ಯದ ನಿಷ್ಠೆಗೆ

ನಮ್ಮನ್ನು ನಡೆಸುತ್ತದೆ, ಇನ್ನೊಂದು ಧನಪಿಶಾಚಿಯ ಆರಾಧನೆಗೆ ನೈತಿಕ ಯೋಗ್ಯತೆಯನ್ನು ಗುರ್ತಿಸುವುದರಿಂದ ಮಾತ್ರ ಮನುಷ್ಯ ನಾಲ್ಕು ಕಾಲಿನ ಮೃಗದಿಂದ ವ್ಯತ್ಯಸ್ತನಾಗಿರುವ, ಎಂದರೆ ಒಬ್ಬ ಪುರುಷನ ನೈತಿಕ ಯೋಗ್ಯತೆ ಎಷ್ಟು ಅಧಿಕವೋ ಅಷ್ಟು ಅಧಿಕ ಅವನ ವ್ಯತ್ಯಾಸ (ಹರಿಜನ. ೧೪-೮-೪೯)

ನನ್ನ ಬಹಿರಂಗ ಜೀವನದ ಪೂರ್ತ, ಈಗಲೂ, ಈ ಮನವರಿಕೆ ನನಗೆ ಬಂದಿದೆ ನಮಗೆ ಆಗತ್ಯವಾದದ್ದು, ಒಂದು ಜನಾಂಗಕ್ಕೆ ಆಗತ್ಯವಾದದ್ದು, ಪ್ರಪಂಚದ ಎಲ್ಲ ಜನಾಂಗಗಳಿಗಿಂತಲೂ ನಮಗೆ ಈ ಘಳಿಗೆ ಆಗತ್ಯವಾದದ್ದು, ಸೌಶೀಲ್ಯರಚನೆಯಲ್ಲದೆ ಬೇರಾವುದಾಗಲೀ, ಅದಕ್ಕೆ ಕಡಮೆಯಾದುದಾಗಲೀ ಅಲ್ಲ ಆ ಮಹಾದೇಶಾಭಿಮಾನಿ ಗೋಖಲೆ ಪ್ರತಿಪಾದಿಸಿದ ಅಭಿಪ್ರಾಯವೂ ಇದೇ ಸೌಶೀಲ್ಯದ ಬೆಂಬಲವಿಲ್ಲದೆ ನಮಗೆ ಏನೂ ಲಭಿಸಲಾರದೆಂದೂ ಯಾವುದಕ್ಕೂ ನಮಗೆ ಅರ್ಹತೆ ಇಲ್ಲದೇ ಹೋಗುವುದೆಂದೂ ಆತ ತನ್ನ ಅನೇಕ ಭಾಷಣಗಳಲ್ಲಿ ಹೇಳುವುದಾಗಿತ್ತು ಆತನ ವಾಡಿಕೆ ಅದ ರಿಂದಲೇ '**ಭಾರತದ ಸೇವಕರ ಸಂಘ**' ಎಂಬ ಘನಸಂಸ್ಥೆಯನ್ನು ಆತ ಕಟ್ಟಿದ್ದು ಆ ಸಂಸ್ಥೆಯ ವಿಚಾರವಾಗಿ ಪ್ರಕಟಿಸಿರುವ ವಿವರಣಪತ್ರದಲ್ಲಿ ದೇಶದ ರಾಜಕೀಯ ಬದುಕನ್ನು ಆಧ್ಯಾತ್ಮಿಕವಾಗಿಸಬೇಕಾದದ್ದು ಆವಶ್ಯಕ ವೆಂದು ಆತ ಸಾವಧಾನದಲ್ಲಿ ಒತ್ತಿ ಹೇಳಿದ್ದಾನೆ. ಎಷ್ಟೋ ಐರೋಪ್ಯ ಜನಾಂಗಗಳ ನೀತಿಮಟ್ಟಕ್ಕಿಂತ ನಮ್ಮ ಜನಾಂಗದ ನೀತಿಮಟ್ಟ ಕಡಮೆ ಯೆಂದು ಅನೇಕ ಸಾರಿ ಹೇಳುತ್ತಿದ್ದ. ಆತನನ್ನು ಹೆಮ್ಮೆಯಿಂದ ನನ್ನ ರಾಜ ಕೀಯ ಗುರುವೆಂಬುದಾಗಿ ಭಾವಿಸುತ್ತೇನೆ ಅವನ ಆ ಹೇಳಿಕೆಯ ಸತ್ಯಾಂಶ ವಾಸ್ತವಿಕ ಸಮರ್ಥನೆಯನ್ನು ಪಡೆದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ವಿದ್ಯಾವಂತ ಭಾರತೀಯರ ಮಟ್ಟಿಗೆ ಅನೇಕ ಸಂಗತಿಗಳಿಂದ ಅದನ್ನು ಸ್ಥಾಪಿಸಬಹುದೆಂದು ನಾನು ನಂಬುತ್ತೇನೆ ಹಾಗಾಗಿರುವುದು ವಿದ್ಯಾವಂತ ವರ್ಗ ಮುಗ್ಗರಿಸಿದೆಯೆಂಬ ಕಾರಣದಿಂದಲ್ಲ, ನಾವು ಸಂದರ್ಭ ಗಳ ಕೈಗೊಂಬೆಗಳಾಗಿರುವ ಕಾರಣದಿಂದ. ಅದು ಹೇಗಾದರೂ ಇರಲಿ, ಬಾಳಿನ ಸೂತ್ರವನ್ನಾಗಿ ಇದನ್ನು ನಾನು ಅಂಗೀಕರಿಸಿದ್ದೇನೆ ಎಷ್ಟೇ ಮಹತ್ವದ ಮನುಷ್ಯನಾಗಲಿ, ಧರ್ಮದ ಬೆಂಬಲ ಅವನಿಗಿಲ್ಲದಿದ್ದರೆ, ಅವ ಮಾಡಿದ ಕೆಲಸ ಯಾವುದಕ್ಕೂ ದಿಟವಾದ ಉತ್ಕರ್ಷವಿಲ್ಲ.

ಆದರೆ, ಧರ್ಮವೆಂದರೇನು ? ಆ ಪ್ರಶ್ನೆಯನ್ನು ತಕ್ಷಣ ಹಾಕುತ್ತಾರೆ ನಾನೊಬ್ಬನಾದರೋ ಹೀಗೆ ಉತ್ತರ ಕೊಡುವೆ ಜಗತ್ತಿನ ಸಮಸ್ತ ಪವಿತ್ರ ಗ್ರಂಥಗಳನ್ನು ಓದಿದ ಮೇಲೆ ನೀ ಪಡೆಯುವ ಧರ್ಮವಲ್ಲ ಅದು ವಾಸ್ತವಿಕ ವಾಗಿ ಅದು ಮೆದುಳಿನ ಒಂದು ಗ್ರಹಿಕೆಯಲ್ಲ, ಹೃದಯದ ಗ್ರಹಿಕೆ ಅದು ನಮಗೆ ವಿದೇಶೀಯವಾದ ಪದಾರ್ಥವಲ್ಲ, ನಮ್ಮಿಂದ ಹುಟ್ಟಿ ವಿಕಾಸಹೊಂದ ಬೇಕು ಅದು ಯಾವಾಗಲೂ ಅದು ನಮ್ಮೊಳಗೇ ಇದೆ, ಕೆಲವರಿಗೆ ಅದರ ಅರಿವುಂಟು, ಇತರರಿಗೆ ಅದರ ಅರಿವು ಇಲ್ಲವೇ ಇಲ್ಲ ಆದರೆ ಅದು ಅಲ್ಲಿ ಇದ್ದೇಇದೆ ಈ ಧಾರ್ಮಿಕ ಸಹಜಪ್ರವೃತ್ತಿಯನ್ನು ಹೊರಗಣ ಸಹಾಯ ದಿಂದ ನಾವು ಎಚ್ಚರಗೊಳಿಸಬಹುದು ಅಥವಾ ಆಂತರಿಕ ಬೆಳವಣಿಗೆಯಿಂದ. ಅದೆಂತಾದರೂ ಚಿಂತೆಯಿಲ್ಲ, ಅಂತೂ ಆ ಧಾರ್ಮಿಕ ಜಾಗ್ರತಿ ಆಗಲೇ ಬೇಕು, ನೇರ್ಪಾದ ರೀತಿಯಲ್ಲಿ ನಾವು ಏನನ್ನಾದರೂ ಮಾಡಬೇಕಾದರೆ, ಉಳಿದು ನಿಲ್ಲುವ ಏನನ್ನಾದರೂ ಮಾಡಬೇಕಾದರೆ

ನಮ್ಮ ಪವಿತ್ರಗ್ರಂಥಗಳು ಕೆಲವು ನಿಯಮಗಳನ್ನು ಬಾಳಿನ ಸೂತ್ರ ಗಳನ್ನಾಗಿ ವಿಧಿಸಿವೆ, ಆ ಸೂತ್ರಗಳು ಸ್ವತಸ್ಸಿದ್ಧವಾದ ಆಧಾರಸೂತ್ರಗಳು, ಅವನ್ನು ನಾವು ಸ್ವಯಂವ್ಯಕ್ತವಾದ ಸತ್ಯಗಳೆಂದು ಒಪ್ಪಿ ಸ್ವೀಕರಿಸಬೇಕು. ಅವುಗಳಿಗೆ ಅನುಸಾರವಾಗಿ ನಮ್ಮ ಬಾಳನ್ನು ನಡೆಸದಿದ್ದರೆ ಧರ್ಮದ ಸಾಧಾರಣ ತಿಳಿವಳಿಕೆಗೂ ಕೂಡ ನಾವು ಅಶಕ್ಯರಾಗುವೆವೆಂದು ಶಾಸ್ತ್ರಗಳು ತಿಳಿಸುತ್ತವೆ ಅವುಗಳಿಗೆ 'ಯಮ'ಗಳೆಂದು ಹೆಸರು. 'ಯಮ'ಗಳಲ್ಲಿ ಮೊದಲನೆಯದು ಮತ್ತು ಪ್ರಧಾನವಾದದ್ದು ಸತ್ಯ

## ಸತ್ಯ

ಸಾಮಾನ್ಯವಾಗಿ ನಾವು ಸುಮ್ಮನೆ ಸತ್ಯವೆಂದು ತಿಳಿಯುವುದು ಸತ್ಯ ವಲ್ಲ ಎಂದರೆ ಸಾಧ್ಯವಾದಷ್ಟರ ಮಟ್ಟಿಗೆ ಸುಳ್ಳಿನ ಹತ್ತಿರ ಹೋಗದಿರ ಬೇಕು "ಪ್ರಾಮಾಣಿಕತೆ ಶ್ರೇಷ್ಠ ವ್ಯವಹಾರ ಚಾತುರ್ಯ" ಎಂಬ ಹೇಳಿ ಕೆಯ ತಾತ್ಪರ್ಯ ಶ್ರೇಷ್ಠ ವ್ಯವಹಾರ ಚಾತುರ್ಯವಲ್ಲದಿದ್ದರೆ ಪ್ರಾಮಾಣಿಕತೆ ಯನ್ನುಬಿಟ್ಟು ನಾವು ಹೋಗಬಹುದು ಎಂದಾಗುತ್ತದೆ. ಆದ್ದರಿಂದ ಅದೂ ಸತ್ಯವಲ್ಲ, ಇಲ್ಲಿ ಭಾವಿಸಿಕೊಂಡಿರುವ ಸತ್ಯಕ್ಕೆ ಎಂಥ ನಷ್ಟ ಒದಗಿದರೂ

ಸತ್ಯದ ಶಾಸನದಂತೆ ನಮ್ಮ ಜೀವನವನ್ನು ಆಳಿಕೊಳ್ಳಬೇಕು, ಎಂಬ ಅರ್ಥ ಈ ವಿವರಣೆಯನ್ನು ಸ್ಪಷ್ಟಪಡಿಸಲು ಪ್ರಖ್ಯಾತ ಉದಾಹರಣೆಯಾದ ಪ್ರಹ್ಲಾದನ ಜೀವನವನ್ನು ಬಳಸಿಕೊಂಡಿದ್ದೇನೆ ಸತ್ಯಕ್ಕಾಗಿ ಅವನು ತನ್ನ ತಂದೆಯನ್ನೇ ಪ್ರತಿಭಟಿಸುವ ಸಾಹಸಕ್ಕೆ ಮನಸ್ಸನ್ನು ತಂದ. ತನ್ನನ್ನು ಸಮರ್ಥನೆ ಮಾಡಿಕೊಂಡ ಪ್ರತೀಕಾರದ ಮೂಲಕವಲ್ಲ, ತಂದೆಯ ಮೇಲೆ ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವುದರ ಮೂಲಕವಲ್ಲ, ತನಗೆ ತಿಳಿದು ಬಂದ ಸತ್ಯವನ್ನು ರಕ್ಷಿಸುವುದರ ಮೂಲಕ ತನ್ನ ತಂದೆಯಿಂದಾಗಲೀ ತಂದೆಯ ಆಜ್ಞಾಧಾರಕರಿಂದಾಗಲೀ ಬಂದ ಪೆಟ್ಟುಗಳನ್ನು ಹಿಂದಿರುಗಿಸುವ ಯೋಚನೆಯನ್ನೇ ಮಾಡದೆ ಸಾಯುವುದಕ್ಕೆ ಸಿದ್ಧನಾಗಿದ್ದ ಅಷ್ಟೇ ಅಲ್ಲ ಪೆಟ್ಟುಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಯತ್ನಿಸಲಿಲ್ಲ ಅದಕ್ಕೆ ಬದಲಾಗಿ ತುಟಿಗಳ ಮೇಲೆ ತುಸು ನಗುವನ್ನಿರಿಸಿ, ತನ್ನ ಮೇಲೆ ಹೇರಿದ ಅಸಂಖ್ಯ ಚಿತ್ರಹಿಂಸೆಯನ್ನು ಸಹಿಸಿಕೊಂಡ ಅದರ ಪರಿಣಾಮವಾಗಿ, ಕೊನೆಗೆ ಸತ್ಯ ಎದ್ದಿತು ಜಯಶಾಲಿಯಾಗಿ ಸತ್ಯಶಾಸನದಲ್ಲಿ ತಪ್ಪಿಗವಕಾಶವೇ ಇಲ್ಲವೆಂಬುದನ್ನು ತನ್ನ ಜೀವಿತ ಕಾಲದಲ್ಲಿಯೇ ಒಂದಲ್ಲ ಒಂದು ದಿನ ಪ್ರತ್ಯಕ್ಷ ಮಾಡಿ ತೋರಿಸಲು ಸಮರ್ಥನಾಗುವೆನೆಂದು ಅರಿತವನಾದ್ದರಿಂದ ಹಿಂಸೆಗಳನ್ನು ಪ್ರಹ್ಲಾದ ಸಹಿಸಿಕೊಂಡನೆಂದಲ್ಲ ಯಥಾರ್ಥ ಅಲ್ಲಿತ್ತು, ಚಿತ್ರಹಿಂಸೆ ನಡುವೆ ಸತ್ತುಹೋಗಿದ್ದರೂ ಅವನು ಸತ್ಯಕ್ಕೆ ಅಂಟಿಕೊಂಡೇ ಇರುತ್ತಿದ್ದ ನಾನೂ ಅನುಸರಿಸ ಬಯಸುವ ಸತ ಅದೇ. ಈಗ ಅಹಿಂಸೆಗೆ ಬರೋಣ

## ಅಹಿಂಸೆ

ಅಹಿಂಸೆಯ ವಾಚ್ಯಾರ್ಥ ಕೊಲ್ಲದಿರುವುದು ನಗಾದರೋ ಅದಕ್ಕೆ ಒಂದು ಪ್ರಪಂಚದಷ್ಟು ಅರ್ಥವಿದೆ, ಕೊಲ್ಲದಿರುವುದು ಎಂದು ಮಾತ್ರ ಗ್ರಹಿಸಿದರೆ ಯಾವ ಲೋಕಕ್ಕೆ ನಾನು ಏರಬಹುದೋ ಅದಕ್ಕಿಂತ ಬಲು ಎತ್ತರವಾದ, ಅಪರಿಮಿತವಾಗಿ ಎತ್ತರವಾದ ಲೋಕಗಳಿಗೆ ಅದು ನನ್ನನ್ನು ಕೊಂಡೊಯ್ಯುತ್ತದೆ ಅಹಿಂಸೆಯ ನಿಜವಾದ ಅರ್ಥ ಇದು, ಯಾವೊಬ್ಬನನ್ನೂ ನೀನು ನೋಯಿಸಲಾರೆ, ನಿನ್ನನ್ನು ನಿನ್ನ ಶತ್ರುವೆಂದು ಭಾವಿಸಿಕೊಳ್ಳಬಹುದಾದವನ ವಿಷಯದಲ್ಲಿ ಕೂಡ ಗುಟ್ಟಾದ ಯೋಚನೆಯೊಂದಕ್ಕೆ

ನಿನ್ನಲ್ಲಿ ಆಶ್ರಯವೀಯಲಾಗದು ಅಭಿಪ್ರಾಯವನ್ನು ಹೇಳುವುದಕ್ಕೆ ತೆಗೆದುಕೊಂಡಿರುವ ಎಚ್ಚರಿಕೆಯನ್ನು ದಯವಿಟ್ಟು ಗಮನಿಸಿ "ನೀನು ಯಾರನ್ನು ಶತ್ರುವೆಂಬುದಾಗಿ ಭಾವಿಸುವೆಯೋ" ಎಂದು ನಾ ಹೇಳುತ್ತಿಲ್ಲ- "ಯಾರು ತನ್ನನ್ನು ನಿನ್ನ ಶತ್ರುವೆಂಬುದಾಗಿ ಭಾವಿಸಿಕೊಳ್ಳಬಹುದೋ ಎಂದು ಹೇಳುತ್ತಿದ್ದೇನೆ ಅಹಿಂಸಾತತ್ವವನ್ನು ಹಿಂಬಾಲಿಸುವವನಿಗೆ ಶತ್ರು ಇರುವುದಕ್ಕೆ ಅವಕಾಶವೇ ಇಲ್ಲ, ಶತ್ರು ಇರುವನೆಂದು ಅವನೊಪ್ಪ ಆದರೆ ಅವನ ಶತ್ರುಗಳೆಂದು ತಮ್ಮನ್ನು ಭಾವಿಸಿಕೊಳ್ಳುವವರು ಇರ ಬಹುದು, ಅದಕ್ಕೆ ಅವನೇನೂ ಮಾಡುವಂತಿಲ್ಲ ಅಂಥ ಜನರ ವಿಷಯ ದಲ್ಲಿಯೂ ಕೂಡ ಕೆಟ್ಟ ಭಾವನೆಯನ್ನು ನಾವು ಇಟ್ಟುಕೊಳ್ಳಬಾರದೆಂದೇ ಸೂತ್ರಿಸಬೇಕು ಪೆಟ್ಟಿಗೆ ಪ್ರತಿಯಾಗಿ ಪೆಟ್ಟು ಕೊಟ್ಟರೆ ಅಹಿಂಸಾತತ್ವದಿಂದ ದೂರ ಸರಿಯುತ್ತೇವೆ ಇನ್ನೂ ಮುಂದೆ ಹೋಗುತ್ತೇನೆ ನಾನು ಸ್ನೇಹಿತನ ಅಥವಾ ಶತ್ರುವಾಗಿ ತೋರುವವನ ಕೃತ್ಯದ ಬಗೆಗೆ ನಾವು ಅಸಮಾಧಾನ ಪಟ್ಟುಕೊಂಡರೆ ಅಹಿಂಸಾ ತತ್ವದಿಂದ ಕೆಳಗಿದ್ದಂತೆ ಅಸಮಾಧಾನಪಟ್ಟು ಕೊಳ್ಳಬಾರದೆಂದು ನಾನು ನುಡಿಯುವಾಗ ನನ್ನ ಅನುಮತಿಯನ್ನು ಈಯಬೇಕೆಂದು ನಾ ನುಡಿಯುತ್ತಿಲ್ಲ ಅಸಮಾಧಾನ ಪಡುವುದೆಂದರೆ ಶತ್ರುವಿಗೆ ಯಾವುದಾದರೂ ಆಗಬೇಕೆಂದೋ ಅಥವಾ ನಾವೇ ಎಸಗುವ ಯಾವುದೋ ಕಾರ್ಯದಿಂದಲ್ಲ, ಮತ್ತೆ ಯಾವನೋ ಒಬ್ಬನ ಕಾರ್ಯದಿಂದ ಅಥವಾ ದೈವಿಕ ಸಾಧನದಿಂದಲೋ ಅವ ನಮ್ಮ ಹಾದಿಯಿಂದ ತೊಲಗಿ ಹಾಳಾಗಲೆಂದೋ ಕೋರುವುದು ಈ ಭಾವನೆಯಾಗಲಿ ಬಂದು ಮನ ಸ್ಸನ್ನು ಹೊಕ್ಕರೆ ಅಹಿಂಸಾಭಂಗವನ್ನು ನಾವು ನಡಸಿದಂತೆ ಆಶ್ರಮ ವನ್ನು ಸೇರುವವರು ಆ ಅರ್ಥವನ್ನು ಅಕ್ಷರಶಃ ಸ್ವೀಕರಿಸಬೇಕು ಅಷ್ಟ ರಿಂದ ಈ ತತ್ವವನ್ನು ಸಂಪೂರ್ಣವಾಗಿ ನಾವು ಪಾಲಿಸುತ್ತಿದ್ದೇವೆಂದು ವ್ಯಕ್ತವಾಗುವುದು ಹಾಗಲ್ಲವೇ ಅಲ್ಲ ನಾವು ಮುಟ್ಟಬೇಕಾಗಿರುವ ಒಂದು ಆದರ್ಶ ಅದು, ನಮ್ಮಲ್ಲಿ ಆ ಸಾಮರ್ಥ್ಯವಿದ್ದಿದ್ದರೆ ಈ ನಿಮಿಷ ದಲ್ಲಿಯೇ ಮುಟ್ಟಬೇಕಾದ ಆದರ್ಶ ಕಂಠಪಾಠಕ್ಕೆ ಸಿಗುವಂಥ ರೇಖಾ ಗಣಿತದ ಒಂದು ಪ್ರತಿಜ್ಞೆಯಲ್ಲ ಅದು, ಪ್ರೌಢಗಣಿತದ ಕ್ಲಿಷ್ಟ ಸಮಸ್ಯೆ ಗಳಿಗೆ ಉತ್ತರವನ್ನು ಕಂಡು ಹಿಡಿಯುವಂತೆಯೂ ಅಲ್ಲ ಅಂಥದಕ್ಕಿಂತ

ಮೀರಿಸಿ ಅದು ಅಪಾರ ಕ್ಲಿಷ್ಟ. ಅಂಥ ಸಮಸ್ಯೆಗಳನ್ನು ಪೂರೈಸಲು ನಿಮ್ಮಲ್ಲಿ ಅನೇಕರು ನಡುರಾತ್ರಿಯಲ್ಲಿ ದೀಪ ಉರಿಸಿದ್ದೀರಿ ಈ ತತ್ತ್ವವನ್ನು ಅನುಸರಿಸಬೇಕಾದರೆ ನಡುರಾತ್ರಿ ದೀಪವನ್ನು ಉರಿಸುವುದಕ್ಕಿಂತ ಎಷ್ಟೋ ಹೆಚ್ಚಾದುವನ್ನು ನೀವು ಮಾಡಬೇಕು ನಿದ್ದೆಯಿಲ್ಲದೆ ಅನೇಕಾನೇಕ ರಾತ್ರಿಯನ್ನು ಕಳೆಯಬೇಕು, ಅನೇಕಾನೇಕ ಮಾನಸಿಕ ಹಿಂಸೆ ಮತ್ತು ಸಂಕಟದ ಮೂಲಕ ಹಾದು ಹೋಗಬೇಕು, ಈಗ ಈ ಗುರಿಯಿಂದ ಕೊಂಚ ಅಳೆಯಬಹುದಾದಷ್ಟು ದೂರದಲ್ಲಿ ನೀವಿರಬಲ್ಲಿರಿ. ಅದೇ ಗುರಿ, ಅದಕ್ಕಿಂತ ಕಡಮೆಯಾದದ್ದು ಒಂದೂ ಅಲ್ಲ, ನೀವೂ ನಾನೂ ಮುಟ್ಟಬೇಕಾದದ್ದು ಧಾರ್ಮಿಕ ಬಾಳು ಎಂಬುದು ನಮಗೆ ಅರ್ಥವಾಗಬೇಕಾದಲ್ಲಿ ಈ ತತ್ತ್ವದ ವಿಚಾರ ನಾನು ಏನೂ ಹೇಳುವುದಿಲ್ಲ. ಈ ವಾಕ್ಯಕ್ಕಿಂತ ಹೆಚ್ಚಾಗಿ ಈ ತರದ ಸತ್ಯದಲ್ಲಿ ಯಾವಾತನಿಗೆ ಪೂರ್ಣ ನಂಬಿಕೆಯಿದೆಯೋ ಆತ ಗುರಿಯನ್ನು ಇನ್ನೇನು ಮುಟ್ಟಲಿರುವ ಕಡೆಯ ಮಜಲಿನಲ್ಲಿ ಇಡೀ ಜಗತ್ತು ತನ್ನ ಅಡಿಗಳಿಗೆ ಮಣಿಯುತ್ತಿರುವುದನ್ನು ನೋಡುತ್ತಾನೆ ಎಂದರೆ, ಇಡೀ ಜಗತ್ತು ಪಾದಾಕ್ರಾಂತವಾಗುವುದು ಅವನಿಗೆ ಬೇಡ, ಆದರೆ ವಿಧಿಯ ಸಂಘಟನೆ ಹಾಗೆ. ನಿನ್ನ ಪ್ರೇಮ ಅಥವಾ ಅಹಿಂಸೆ ಶತ್ರುವೆನಿಸಿಕೊಳ್ಳುವವನನ್ನು ನಾಚಿ ಅಚ್ಚಳಿಯದೆ ನಿಲ್ಲುವ ಪರಿಯಲ್ಲಿ ರೂಪಿತವಾದರೆ, ಅವನೂ ಹಿಂತಿರುಗಿಸಬೇಕು ಇದರಿಂದ ಇಷ್ಟೊಂದು ಆಲೋಚನೆ ಹೊರಬರುತ್ತದೆ. ಈ ನೇಮದ ಕೆಳಗಡೆ ವ್ಯವಸ್ಥಿತ ಕೂಟಗಳಿಗೆ ಜಾಗವಿಲ್ಲ, ಬಹಿರಂಗವಾಗಿ ಕೂಡ ಎಸಗುವ ಹತ್ಯೆಗಳಿಗೆ ಜಾಗವಿಲ್ಲ, ನಿಮ್ಮ ದೇಶಕ್ಕಾಗಿ ಕೂಡ ನಿಮ್ಮ ರಕ್ಷಣೆಯಲ್ಲಿರುವ ಅಮೂಲ್ಯ ಸಂಬಂಧಿಗಳ ಮಾನವನ್ನು ಕಾಯುವುದಕ್ಕಾಗಿ ಕೂಡ, ರೋಷರಭಸಕ್ಕೆ ಅವಕಾಶವಿಲ್ಲ ಅಯ್ಯೋ, ಹಾಗೆ ಮಾಡುವುದು ಬಡಕಲು ಮಾನಸಂರಕ್ಷಣೆ! ದೈವದ್ರೋಹವನ್ನು ಮಾಡಲೆಣಿಸುವ ಪುರುಷನ ಕೈಯಿಗೆ ನಮ್ಮನ್ನೇ ವಶಗೊಳಿಸಿಕೊಳ್ಳುವುದರ ಮೂಲಕ ನಮ್ಮ ರಕ್ಷಣೆಯಲ್ಲಿರುವವರ ಮಾನರಕ್ಷಣೆಯನ್ನು ಮಾಡಬೇಕೆಂದು ಅಹಿಂಸಾ ತತ್ತ್ವ ನಮಗೆ ಬೋಧಿಸುತ್ತದೆ ಅದಕ್ಕೆ ಏಟುಗಳನ್ನು ಕೊಡುವುದಕ್ಕಿಂತ ಅಧಿಕವಾದ ದೈಹಿಕ ಮತ್ತು ಮಾನಸಿಕ ಧೈರ್ಯ ಆವಶ್ಯಕ ನಿನ್ನಲ್ಲಿ ಯಾವುದೋ ಒಂದು ಮಟ್ಟದ ಶಾರೀರಿಕ ಶಕ್ತಿ ಧೈರ್ಯವೆಂದು ನಾ ಹೇಳುವುದಿಲ್ಲ, ಇತ

ಬಹುದು, ಅದನ್ನು ನೀನು ಬಳಸಿಕೊಳ್ಳಬಹುದು. ಅದು ಖರ್ಚಾದ ತರು ವಾಯ, ಆಗುವುದೇನು? ಆ ಇನ್ನೊಬ್ಬ ಸಿಟ್ಟಾಗಿ ರೋಷಭರಿತನಾಗುತ್ತಾನೆ ನಿನ್ನ ಹಿಂಸೆಯನ್ನು ಅವನ ಹಿಂಸೆಗೆದುರಾಗಿ ಜೋಡಿಸಿ ಅವನ ಉಗ್ರತೆ ಯನ್ನು ಹೆಚ್ಚಿಸಿದ್ದೀಯೆ, ಮೊದಲು ನಿನ್ನನ್ನು ನಾಯಬಡಿದು, ಆಮೇಲೆ ನಿನ್ನ ರಕ್ಷಿತರನ್ನು ಬಡಿಯುತ್ತದೆ, ಅವನಲ್ಲಿ ಮಿಕ್ಕುಳಿದ ಹಿಂಸಾರಭಸ. ಆದರೆ ನೀನು ಏಟಿಗೆ ಏಟನ್ನು ಕೊಡದೆ ನಿನ್ನ ರಕ್ಷಿತರಿಗೂ ಎದುರಾಳಿಗೂ ಮಧ್ಯೆ ದೃಢವಾಗಿ ನಿಂತು, ಪ್ರತಿಭಟನೆ ಮಾಡದೆ ಅವನ ಏಟುಗಳನ್ನು ಸ್ವೀಕರಿಸಿದರೆ, ಆಗುವುದೇನು? ನಿನಗೆ ನನ್ನ ಭರವಸೆ ಕೊಡುವೆ ಅವನ ರೋಷವಷ್ಟೂ ನಿನ್ನ ಮೇಲೆ ವ್ಯಯವಾಗಿ ಮುಗಿದು, ನಿನ್ನ ರಕ್ಷಿತರು ನಿರ್ಬಾಧಿತರಾಗಿರುತ್ತಾರೆ

## ಬ್ರಹ್ಮಚರ್ಯ

ಗಂಡಾಗಲೀ ಹೆಣ್ಣಾಗಲೀ ಕಾಮಪಿಪಾಸೆಯನ್ನು ಗೆಲ್ಲುವುದೇ ಜೀವ ನದ ಅತಿ ಶ್ರೇಷ್ಠ ಉದ್ಯಮ ಅದನ್ನು ಗೆಲ್ಲದೆ ಮನುಷ್ಯ ತನ್ನ ಮೇಲಣ ಆಧಿಪತ್ಯವನ್ನು ಪಡೆಯುವ ಆಸೆಯಿಲ್ಲ. ಅಂಥ ಸ್ವಯಮಾಧಿಪತ್ಯ ಇಲ್ಲದೇ ಹೋದಲ್ಲಿ ಯಾವ ಸ್ವರಾಜ್ಯವೂ ರಾಮರಾಜ್ಯವೂ ಲಭಿಸದು ನಮ್ಮನ್ನು ನಾವೇ ಆಳಿಕೊಳ್ಳದೆ ಎಲ್ಲರನ್ನೂ ಆಳುವುದು ಖಂಡಿತವಾಗಿ ಮೋಸ, ಆಶಾ ಭಂಗ ಅದು ಬಣ್ಣ ಬಳಿದ ಆಟದ ಮಾವಿನಕಾಯಿಯಂತೆ. ಹೊರಗಿನಿಂದ ನೋಡುವುದಕ್ಕೆ ಅದು ರಮ್ಯ, ಆದರೆ ಅದರೊಳಗೆ ಟೊಳ್ಳು, ಶೂನ್ಯ ಮಹಾ ಸಂಕಲ್ಪಗಳಿಗೆ ಆಧ್ಯಾತ್ಮಿಕ ಪ್ರಯತ್ನ ಅಥವಾ ಆತ್ಮಶಕ್ತಿ ಆವಶ್ಯಕ ಆತ್ಮಶಕ್ತಿ ಭಗವಂತನ ಕೃಪೆಯಿಂದ ಮಾತ್ರ ಬರುತ್ತದೆ ಕಾಮಪಿಪಾಸೆಗೆ ಗುಲಾಮನಾದವನ ಮೇಲೆ ಭಗವಂತನ ಕೃಪೆ ಎಂದಿಗೂ ಬೀಳುವುದಿಲ್ಲ

ಬ್ರಹ್ಮಚರ್ಯವೆಂದರೆ ಒಟ್ಟು ಜ್ಞಾನೇಂದ್ರಿಯಗಳ ಮೇಲಿನ ಹತೋಟಿ ಒಂದು ಇಂದ್ರಿಯವನ್ನು ಮಾತ್ರ ಹತೋಟಿಯಲ್ಲಿಡಲು ಪ್ರಯತ್ನಿಸಿ ಇತರ ಎಲ್ಲವನ್ನೂ ಸ್ವೇಚ್ಛೆಯಾಗಿ ಹರಿಬಿಟ್ಟಾತ ತನ್ನ ಕೆಲಸವಾದ್ದನ್ನು ನಿರರ್ಥಕ ಈಕ್ಷಿಸಲೇ ಬೇಕು ಕೆಟ್ಟ ಕಥೆಗಳನ್ನು ಕಿವಿಗಳಿಂದ ಕೇಳುತ್ತ, ಕೆಟ್ಟ ದೃಶ್ಯಗಳನ್ನು ಕಣ್ಣುಗಳಿಂದ ನೋಡುತ್ತ, ನಾಲಗೆಯಿಂದ ಮಾದಕ ಆಹಾರ

ವನ್ನು ಸೇವಿಸುತ್ತ, ಕೈಗಳಿಂದ ಉದ್ರೇಕಿಸುವ ವಸ್ತುಗಳನ್ನು ಸ್ಪರ್ಶಿಸುತ್ತ ಅದೇ ಕಾಲದಲ್ಲಿ ಉಳಿದಿರುವ ಒಂದೇ ಒಂದು ಇಂದ್ರಿಯವನ್ನು ನಿಗ್ರಹಿಸುವ ಪ್ರಯತ್ನ ಬೆಂಕಿಯೊಳಕ್ಕೆ ಕೈಯಿಕ್ಕಿ ಸುಡುಗಾಯಗಳನ್ನು ತಪ್ಪಿಸಿಕೊಳ್ಳುವ ಟಿಸನಕ್ಕೆ ಸಮ ಎಲ್ಲ ಕಡೆಗಳಲ್ಲಿಯೂ ಏಕಕಾಲದಲ್ಲಿ ಆತ್ಮಸಂಯಮವನ್ನು ನಾವು ಅಭ್ಯಾಸಮಾಡಿದರೆ ಅದು ವೈಜ್ಞಾನಿಕವಾದದ್ದು, ಅದಕ್ಕೆ ಜಯ ಸುಲಭ ಪ್ರಾಯಶಃ ರಸನೇಂದ್ರಿಯವೇ ಪ್ರಧಾನ ಪಾತಕಿ ಅದರ ಅಂಕೆಗೆ ಆಚರಣೆಗಳಲ್ಲಿ ಪ್ರತ್ಯೇಕವಾದೊಂದು ಸ್ಥಾನವನ್ನು ನಾವು ಗೊತ್ತುಮಾಡಿದ್ದೇವೆ

ಬ್ರಹ್ಮಚರ್ಯ ಬರಿ ಶಾರೀರಕವಾದ ಸ್ವನಿರ್ಬಂಧವಲ್ಲ, ಅದಕ್ಕಿಂತ ಬಹಳ ಹೆಚ್ಚಾದದ್ದು. ಸಕಲ ಇಂದ್ರಿಯಗಳ ಮೇಲೂ ಪೂರ್ತಿ ಆಧಿಪತ್ಯ ಇರಬೇಕೆಂಬುದು ಅದರ ತಾತ್ಪರ್ಯ ಹೀಗೆ ಮಲಿನ ಚಿಂತನೆಯೆಲ್ಲ ಬ್ರಹ್ಮಚರ್ಯದ ಉಲ್ಲಂಘನೆ ಜೀವಸೃಷ್ಟಿಗೆ ಹೊಣೆ ಹೊತ್ತಿರುವ ಚೇತನ ಶಕ್ತಿಯ ಪರಿಶೀಲನೆ ಮತ್ತು ಉತ್ತಮೀಕರಣದಿಂದ ಎಲ್ಲ ಸಾಮರ್ಥ್ಯದ ಉದಯ ಚೇತನ ಶಕ್ತಿಯನ್ನು ಪೋಲು ಮಾಡುವುದರ ಬದಲು ಹಾಳತಗ್ಗೆದು ರೂಢಿಸಿದರೆ ಅದು ಅತಿ ಉಚ್ಚವರ್ಗದ ರಚನಾತ್ಮಕ ತೇಜಸ್ಸಾಗಿ ಪರಿವರ್ತನೆ ಪಡೆಯುತ್ತದೆ. ದುಷ್ಟಚಿಂತನೆಯಿಂದ ಈ ಚೇತನ ಶಕ್ತಿಗೆ ದುರ್ವ್ಯಯ ಎಲ್ಲ ವಾಕ್ಕಿಗೆ ಎಲ್ಲ ಕರ್ಮಕ್ಕೆ ಆಲೋಚನೆಯೇ ಬೇರಾದುದರಿಂದ ಅವುಗಳ ಲಕ್ಷಣ ಅದರ ಲಕ್ಷಣಕ್ಕೆ ಸರಿಹೋಂದುತ್ತದೆ ಆದ್ದರಿಂದ ಪರಿಪೂರ್ಣ ಹತೋಟಿಗೆ ಒಳಪಟ್ಟ ಚಿಂತನೆಗೆ ಉಚ್ಚತಮ ಸತ್ವದ ಅಪುರ್ವಂಟು, ಅದು ಸ್ವಯಂಚಾಲಕವಾಗಬಲ್ಲುದು. ಇಂದ್ರಿಯ ಶಕ್ತಿಯನ್ನು ಪೋಲು ಮಾಡುವವನಿಗೆ ತೂತು ಮಡಕೆಯಲ್ಲಿಟ್ಟ ಆವಿ ಹೇಗೆ ಯಾವ ಶಕ್ತಿಯನ್ನೂ ನೀಡಲಾರದೋ ಹಾಗೆ ಅಂಥ ಸಾಮರ್ಥ್ಯ ಅಸಾಧ್ಯ (ಹರಿಜನ. ೨೩-೭-೩೮)

ಆಲೋಚನೆಯಲ್ಲಿ, ಮಾತಿನಲ್ಲಿ, ಕ್ರಿಯೆಯಲ್ಲಿ ಬ್ರಹ್ಮಚರ್ಯ ಆಚರಿಸಲ್ಪಡಬೇಕು ಮನಸ್ಸನ್ನು ಅಡ್ಡದಾರಿಗೆ ಹೋಗಗೊಟ್ಟು ಅದೇ ಸಮಯ ಶರೀರವನ್ನು ದಮನಮಾಡುವುದು ಅಪಾಯಕರ ಮನಸ್ಸು ಅತ್ತಿತ್ತ ಅಲೆಯುವಾಗ ಶರೀರ ಈಗಲೋ ಆಗಲೋ ಅದನ್ನು ಹಿಂಬಾಲಿಸಲೇಬೇಕು ಇದರಲ್ಲಿ ಒಂದು ಸೂಕ್ಷ್ಮಭೇದವನ್ನು ಅರಿತು ಮೆಚ್ಚುವುದು ಆವಶ್ಯಕ

ಅಶುದ್ಧ ಭಾವನೆಗಳಿಗೆ ನಮ್ಮ ಮನಸ್ಸು ಅಡಗುವ ಜಾಗ ಕೊಡುವುದು ಒಂದು ಸಂಗತಿ, ನಮ್ಮ ನಿರೋಧಗಳನ್ನು ಮೀರಿ ಅದು ಅವುಗಳ ನಡುವೆ ನುಳಿದಾಡುವುದು ತುಂಬ ಬೇರೆಯಾದ ಇನ್ನೊಂದು ಸಂಗತಿ. ಈ ದುರುಳ ಹವ್ಯಾಸದಲ್ಲಿ ಮನಸ್ಸಿನೊಡನೆ ನಾವು ಅಸಹಕಾರ ಹೂಡಿದರೆ ಕಡೆಯಲ್ಲಿ ನಮಗೆ ವಿಜಯ ಆದ್ದರಿಂದ ಶರೀರವನ್ನು ಕೂಡಲೇ ಕೈವಶಗೊಳಿಸಿ ಕೊಳ್ಳಬೇಕು ಅನಂತರ ಮನಸ್ಸನ್ನು ನಿಗ್ರಹಕ್ಕೆ ಬಗ್ಗಿಸಲು ಸಂತತ ಕಾರ್ಯಶ್ರದ್ಧೆಯನ್ನು ಹಿಡಿಯಬೇಕು ಮಾಡಲಾರೆವು ನಾವು ಇದಕ್ಕಿಂತ ಹೆಚ್ಚು ಏನನ್ನೂ, ಕಡಮೆ ಏನನ್ನೂ

ಬ್ರಹ್ಮಚಾರಿಯ ಜೀವನಕ್ಕೂ ಬ್ರಹ್ಮಚಾರಿಯಲ್ಲದವನ ಜೀವನಕ್ಕೂ ನಡುವೆ ಸ್ಫುಟವಾದ ಗೆರೆಯೊಂದು ಕಾಣಿಸಬೇಕು ಇಬ್ಬರ ಜೀವನಕ್ಕೂ ಏನಾದರೂ ಸಾಮ್ಯ ಇದ್ದರೆ ಅದು ಕೇವಲ ತೋರಿಕೆಯಲ್ಲಿ ಮಾತ್ರ. ವೈಷಮ್ಯವಾದರೋ ಹಗಲಿನ ಬೆಳಕಿನಷ್ಟು ಸ್ಪಷ್ಟವಾಗಿರತಕ್ಕದ್ದು ಇಬ್ಬರೂ ಕಣ್ಣೋಟವನ್ನು ಉಪಯೋಗಿಸುತ್ತಾರೆ ಬ್ರಹ್ಮಚಾರಿ ದೇವರ ವೈಭವಗಳನ್ನು ಅವಲೋಕಿಸುವುದಕ್ಕೆ ಅದನ್ನು ಉಪಯೋಗಿಸಿದರೆ ಇನ್ನೊಬ್ಬ ತನ್ನ ಸುತ್ತಲೂ ಇರುವ ಹುಡುಗಾಟಿಕೆಗಳನ್ನು ನೋಡುವುದಕ್ಕೆ ಉಪಯೋಗಿಸುತ್ತಾನೆ ಇಬ್ಬರೂ ತಮ್ಮ ಕರ್ಣಗಳಿಗೆ ಕೃಷಿಕೊಡುವರು ಒಬ್ಬ ದೇವರ ಸ್ತುತಿಗಳನ್ನಲ್ಲದೆ ಮತ್ತಾವುದನ್ನೂ ಆಲಿಸದಿರುವ, ಇನ್ನೊಬ್ಬ ಅಸಭ್ಯತೆಯನ್ನು ತಂದುಕೊಟ್ಟು ತನ್ನ ಕಿವಿಗಳಿಗೆ ಹಬ್ಬ ಮಾಡುವ ಅನೇಕ ಸಲ ಇಬ್ಬರೂ ರಾತ್ರಿ ಬಹಳ ಹೊತ್ತು ಎಚ್ಚೆತ್ತಿರುತ್ತಾರೆ. ಒಬ್ಬ ದೇವರ ಪ್ರಾರ್ಥನೆಗೆ ಕಾಲವನ್ನು ಮೀಸಲಾಗಿಟ್ಟರೆ, ಇನ್ನೊಬ್ಬ ಅದನ್ನು ಉನ್ಮತ್ತ ದುಂದು ವಿನೋದದಲ್ಲಿ ಹರಿದೆಸೆಯುವ ಇಬ್ಬರೂ ತಿಂಡಿ ಹಾಕುತ್ತಾರೆ ಹೊಟ್ಟೆಗೆ ಆದರೆ ಒಬ್ಬ ಹಾಗೆಸಗುವುದು ದೇವರ ಗುಡಿಯನ್ನು ಛಿದ್ರಗಿದ್ರ ವಿಲ್ಲದಂತೆ ಅಚ್ಚುಕಟ್ಟಾಗಿ ಇಟ್ಟುಕೊಳ್ಳುವುದಕ್ಕೆ ಮಾತ್ರ, ಇನ್ನೊಬ್ಬ ನಾದರೋ ಬಕಬಕ ತಿಂದು ಆ ಪವಿತ್ರ ಕಳಶವನ್ನು ದುರ್ನಾತದ ಚರಂಡಿ ಯಂತೆ ಮಾಡುತ್ತಾನೆ ಹೀಗೆ ಇಬ್ಬರೂ ಬಾಳುತ್ತಾರೆ ಈ ಧ್ರುವದಿಂದ ಆ ಧ್ರುವಕ್ಕೆ ಇರುವಷ್ಟು ದೂರ ದೂರ. (ಮಂಗಳ ಪ್ರಭಾತ)

ಈ ವಿಧಿಗಳನ್ನು ಆಚರಣೆಗೆ ತಂದುಕೊಂಡ ತರುವಾಯ—ಆಗ

ಮಾತ್ರ, ಅಲ್ಲಿಯವರೆಗೂ ಕೂಡದು—ನೀನು ರಾಜಕೀಯಕ್ಕೆ ಕಾಲಿಟ್ಟೆಯೆಂದು ಭಾವಿಸಿಕೋ, ಅದರಲ್ಲಿ ನಿನ್ನೆದೆ ತಣಿಯುವಷ್ಟು ಆಟವಾಡು, ಆಗ ನೀನೆಂದೂ ತಪ್ಪು ಮಾಡಲಾರೆ, ಖಂಡಿತ ಧರ್ಮಬಾಹಿರವಾದ ರಾಜಕಾರಣ ಸಂಪೂರ್ಣವಾಗಿ ಅರ್ಥಶೂನ್ಯ ವಿದ್ಯಾರ್ಥಿಪ್ರಪಂಚ ಈ ದೇಶದ ರಾಜಕೀಯ ವೇದಿಕೆಗಳ ಮೇಲೆ ಗುಂಪು ಕೂಡುವುದು ನನ್ನ ಮನಸ್ಸಿಗೇನೋ ಜನಾಂಗದ ಅಭಿವೃದ್ಧಿಗೆ ಆವಶ್ಯಕ ಆರೋಗ್ಯ ಸೂಚನೆಯಲ್ಲ ಹಾಗೆಂದರೆ ನೀವು, ನಿಮ್ಮ ವಿದ್ಯಾರ್ಥಿ ದೆಸೆಯಲ್ಲಿ ರಾಜ್ಯಶಾಸ್ತ್ರವನ್ನು ಪರಿಸ ಕೂಡದೆಂದು ಅರ್ಥವಲ್ಲ ರಾಜಕಾರಣ ನಮ್ಮ ಜೀವನದ ಒಂದು ಭಾಗ ನಮ್ಮ ರಾಷ್ಟ್ರೀಯ ಸಂಸ್ಥೆಗಳನ್ನು ತಿಳಿದುಕೊಳ್ಳಬೇಕು ನಾವು, ನಮ್ಮ ರಾಷ್ಟ್ರಿಯ ಬೆಳವಣಿಗೆಯನ್ನೂ ಅದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ತಿಳಿದುಕೊಳ್ಳಬೇಕು ನಾವು ನಮ್ಮ ಎಳೆ ವಯಸ್ಸಿನಿಂದಲೇ ಅದನ್ನು ಮಾಡಬಹುದು ಆದ್ದರಿಂದ ನಮ್ಮ ಆಶ್ರಮದಲ್ಲಿ ಪ್ರತಿಯೊಂದು ಮಗುವಿಗೂ ರಾಷ್ಟ್ರದ ರಾಜಕೀಯ ಸಂಸ್ಥೆಗಳನ್ನು ಪರಿಚಯ ಮಾಡಿಕೊಳ್ಳುವುದಕ್ಕೂ ಮತ್ತು ಹೇಗೆ ನೂತನ ಭಾವ ನೂತನ ಆಶೋತ್ತರ ನವಜೀವನಗಳಿಂದ ನಮ್ಮ ರಾಷ್ಟ್ರ ಮಿಡಿಯುತ್ತಿದೆಯೆಂಬುದನ್ನು ತಿಳಿಯುವುದಕ್ಕೂ ಕಲಿಸುತ್ತೇವೆ ಇವುಗಳ ಜೊತೆಗೆ ಧರ್ಮ ಶ್ರದ್ಧೆಯ ಅಚಲವಾದ ಬೆಳಕು ನಮಗೆ ಬೇಕು ಕೇವಲ ಬುದ್ಧಿಗೆ ಆಕರ್ಷಣೆ ನೀಡುವ ಶ್ರದ್ಧೆಯಲ್ಲ, ಹೃದಯದಲ್ಲಿ ಅಚ್ಚಳಿಯದಂತೆ ಕೊರೆದು ನಿಲ್ಲುವ ಶ್ರದ್ಧೆ ಮೊದಲು ಅಂಥ ಧಾರ್ಮಿಕ ಜಾಗೃತಿಯನ್ನು ಮನಗಾಣುವುದು ನಮ್ಮ ಅಪೇಕ್ಷೆ, ಒಮ್ಮೆ ಅದನ್ನು ಆಗಮಾಡಿಸಿದೆವೆಂದರೆ ಜೀವನದ ಎಲ್ಲ ಇಲಾಖೆಗಳೂ ನಮಗೆ ತೆರೆದಂತೆ

(ಆಶ್ರಮ ನಿಯಮಗಳ ಅನುಷ್ಠಾನ, ಪರಿಶಿಷ್ಟ)

# ಅಧ್ಯಾಯ ೭

# ಒಳ್ಳೆಯ ಜೀವನದ ಮಾರ್ಗ—ಆತ್ಮಸಂಯಮ

ಇಂದು ನಮ್ಮ ಯುವಕರು ಮೋಕ್ಷಕ್ಕೂ, ಸ್ವಾತಂತ್ರ್ಯಕ್ಕೂ ಕರೆದೊಯ್ಯುವ ಆತ್ಮಸಂಯಮದ ಹಾದಿಯನ್ನೋ ಪೂರ್ಣ ವಿನಾಶಕ್ಕೆ ಕರೆದೊಯ್ಯುವ ವಿಷಯಲೋಲುಪತೆ ಮತ್ತು ಹಾಯಾಗಿರುವಿಕೆಯ ಹಾದಿಯನ್ನೋ ಆರಿಸಿಕೊಳ್ಳಬೇಕಾಗಿದೆ ದಾರಿ ಕವಲೊಡೆಯುವ ರಾವಿನಲ್ಲಿ ಅವರು ನಿಂತಿದ್ದಾರೆ. ವಿಷಯಲೋಲುಪತೆಯು ನಂಜಿನಿಂದ ತುಂಬಿದ ಸಾಹಿತ್ಯ, ಆಕರ್ಷಕ ರೂಪಗಳಲ್ಲಿ ಒದಗುತ್ತ ಪಶ್ಚಿಮದಿಂದ ಬಂದು ನಮ್ಮ ನಾಡಿನ ಮೇಲೆ ಪ್ರವಹಿಸುತ್ತಿದೆ, ನಮ್ಮ ಯುವಕರು ಎಚ್ಚರಗೊಂಡಿರಬೇಕಾದದ್ದು ಅತ್ಯಂತ ಅವಶ್ಯಕವಾಗಿದೆ ವರ್ತಮಾನ ಕಾಲ ಅವರಿಗೆ ಧ್ಯೇಯಗಳ ಸಂಕ್ರಮದ ಮತ್ತು ವಿಷಮ ಪರೀಕ್ಷೆಗಳ ಅವಧಿಯಾಗಿದೆ, ಈ ಉತ್ಕಟ ಸ್ಥಿತಿಯಲ್ಲಿ ಅವರಿಗೆ ಅಗತ್ಯವಾದದ್ದು ಒಂದೇ, ಕ್ರಮೇಣ ವರ್ಧಿಸುವ ಆತ್ಮಸಂಯಮ ಅದೊಂದೇ ಅವರನ್ನೂ ಅವರ ದೇಶವನ್ನೂ ಮತ್ತು ಪ್ರಪಂಚವನ್ನೂ ನೈಜಸ್ವಾತಂತ್ರ್ಯಕ್ಕೆ ಕರೆದೊಯ್ಯಲಾದೀತು ಯುವಕರ ಮುಂದೆ ಇರುವ ಪರೀಕ್ಷೆ ಇದು ಬಾಳಿನ ವಿಶ್ವವಿದ್ಯಾನಿಲಯದಿಂದ ತಮ್ಮ ಪ್ರಶಸ್ತಿಪತ್ರವನ್ನು ಪಡೆಯಬೇಕಾಗಿದೆ, ಆ ವಿಶ್ವವಿದ್ಯಾನಿಲಯವೋ ಬಲೆಗಳು ಕುಳಿಗಳು ಕಠಿಣ ಸಂಕಟಗಳಿಂದ ನಿಬಿಡವಾಗಿದೆ, ಆದರೆ ಆ ಪ್ರಶಸ್ತಿ ಇಲ್ಲವಾದರೆ, ವಿದ್ವಾಂಸಪದವಿ ನಿರರ್ಥಕ

ವಿದ್ಯಾರ್ಥಿಜೀವನವನ್ನು ಸಂನ್ಯಾಸಿಯ ಜೀವನಕ್ಕೆ ಯುಕ್ತವಾಗಿಯೇ ಹೋಲಿಸಲಾಗಿದೆ. ಸರಳ ಬದುಕಿನ ಹಾಗೂ ಉದಾತ್ತ ಚಿಂತನೆಯ ಮೂರ್ತಿಯಾಗಬೇಕು, ಅವನು ಶಿಸ್ತಿನ ಅವತಾರವಾಗಬೇಕು ತನ್ನ ವ್ಯಾಸಂಗದಿಂದಲೇ ಅವನಿಗೆ ಸಂತೋಷ ವ್ಯಾಸಂಗ, ವಿದ್ಯಾರ್ಥಿ ತೆರಬೇಕಾದ ಕಂದಾಯವಾಗದಿದ್ದಲ್ಲಿ, ಅದು ಸಂತೋಷವನ್ನು ಒದಗಿಸುತ್ತದೆ ಜ್ಞಾನದಿಂದ ಜ್ಞಾನಕ್ಕೆ ವಿದ್ಯಾರ್ಥಿ ಹೆಜ್ಜೆ ಹಾಕುತ್ತಾನೆ ಎನ್ನುವುದಕ್ಕಿಂತ ಹೆಚ್ಚಿನ ಸಂತೋಷ ಯಾವುದು ? (ಹರಿಜನ ೭-೫-೪೭)

ಮಿಲ್ಟನ್ ಹೇಳುವಂತೆ, ಮನಸ್ಸು ನರಕವನ್ನು ಸ್ವರ್ಗವನ್ನಾಗಿಯೂ ಸ್ವರ್ಗವನ್ನು ನರಕವನ್ನಾಗಿಯೂ ಮಾಡಬಲ್ಲುದು ಹಾಗಾದರೆ ಸ್ವರ್ಗ ಮೇಘಗಳ ಮೇಲೆ ಎಲ್ಲಿಯೋ ಒಂದು ಕಡೆ ಇಲ್ಲ ನರಕ ಭೂಮಿಯ ಕೆಳಗೆ ಎಲ್ಲಿಯೋ ಒಂದು ಕಡೆ ಇಲ್ಲ ಸಂಸ್ಕೃತದ ಒಂದು ಸೂಕ್ತಿ ಅದೇ ಅಭಿಪ್ರಾಯವನ್ನು ನಿರೂಪಿಸುತ್ತದೆ. 'ಮನಯೇವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ'. ಮನುಷ್ಯನ ಮನಸ್ಸಿನ ಸ್ಥಿತಿಗೆ ತಕ್ಕಂತೆ ಅವನಿಗೆ ಸ್ವಾತಂತ್ರ್ಯಕ್ಕೆ ಅಧಿಕಾರ ಇದರಿಂದ ಎದ್ದು ಬರುವ ಅಭಿಪ್ರಾಯ ಒಬ್ಬ ವ್ಯಕ್ತಿ ನಿರೋಗವಾಗಿರುವುದೋ ಅಥವಾ ರೋಗಿಷ್ಟನಾಗಿರುವುದೋ ಅವನನ್ನೇ ಅವಲಂಬಿಸಿದೆ ರೋಗ ನಮ್ಮ ಸ್ವಂತ ಕರ್ಮಗಳ ಫಲ ಮಾತ್ರವೇ ಅಲ್ಲದೇ ನಮ್ಮ ಸ್ವಂತ ಆಲೋಚನೆಗಳ ಫಲವೂ ಹೌದು ಒಬ್ಬ ಹೆಸರಾಂತ ವೈದ್ಯ ಹೇಳಿರುವಂತೆ ವ್ಯಾಧಿಗಳಿಂದ ಸಾಯುವುದಕ್ಕಿಂತಲೂ ಹೆಚ್ಚು ಜನ ಖಾಹಿಲೆಯ ಅಂಜಿಕೆಯಿಂದಲೇ ಸಾಯುವರು ಹೇಡಿಗಳು ತಮ್ಮ ಸಾವಿಗೆ ಮುಂಚೆ ಅನೇಕ ಸಲ ಸಾಯುವರೆಂಬುದು ಕಠಿಣ ಸತ್ಯ. (ಆರೋಗ್ಯ ಮಾರ್ಗದರ್ಶಿನೀ)

ದೇವರ ನಿಯಮಗಳಿಗೆ ವಿಧೇಯರಾಗಿ ಬಾಳುವುದರಿಂದಲೂ, ಸೈತಾನನ ಸಾಮರ್ಥ್ಯವನ್ನು ಎದುರಿಸುವುದರಿಂದಲೂ ಪೂರ್ಣ ಆರೋಗ್ಯವನ್ನು ಸಾಧಿಸಿಕೊಳ್ಳಬಹುದು. ಸಮರ್ಪಕ ಆರೋಗ್ಯವಿಲ್ಲದೇ ನಿಜವಾದ ಸುಖ ಅಸಾಧ್ಯ, ರಸನೇಂದ್ರಿಯದ ನಿಷ್ಠುರನಿಗ್ರಹವಿಲ್ಲದೆ ಸಮರ್ಪಕ ಆರೋಗ್ಯ ಅಸಾಧ್ಯ. ರಸನೇಂದ್ರಿಯವನ್ನು ಅಂಕೆಯಲ್ಲಿಟ್ಟುಕೊಂಡರೆ ಎಲ್ಲ ಇಂದ್ರಿಯಗಳೂ ತಪ್ಪದೇ ತಾವಾಗಿಯೇ ನಮ್ಮ ಅಧೀನಕ್ಕೆ ಬರುವುವು ತನ್ನ ಇಂದ್ರಿಯಗಳನ್ನು ಗೆದ್ದವನು ದಿಟವಾಗಿ ಇಡೀ ಜಗತ್ತನ್ನು ಗೆದ್ದಂತೆ, ಹಾಗೂ ದೇವರಲ್ಲಿ ಆತ ಒಂದು ಭಾಗವಾಗುವ.

ಯಾರೇ ಆಗಲೀ ದೇಹ ಸರಿಯಾಗಿ ಕೆಲಸ ಮಾಡುವುದಕ್ಕಾಗಿ ಊಟ ಮಾಡಬೇಕೇ ಹೊರತು ಅಂಗುಳಿನ ರುಚಿಯನ್ನು ತೃಪ್ತಿಪಡಿಸುವುದಕ್ಕಲ್ಲ ಪ್ರತಿಯೊಂದು ಜ್ಞಾನೇಂದ್ರಿಯವೂ ಶರೀರಕ್ಕೆ ಅಧೀನವಾದಾಗ ಶರೀರದ ಮೂಲಕ ಆತ್ಮಕ್ಕೆ ಅಧೀನವಾದಾಗ ಅದರ ವಿಶಿಷ್ಟ ಚಾಂಚಲ್ಯ ಮಾಯವಾಗುತ್ತದೆ, ಆಗ ಮಾತ್ರ ಅದು ಪ್ರಕೃತಿಯ ಉದ್ದೇಶಕ್ಕನುಸಾರ

ವಾಗಿ ತನ್ನ ಕ್ರಿಯೆಯನ್ನು ಎಸಗುತ್ತದೆ ಪ್ರಕೃತಿಯೊಂದಿಗೆ ಈ ಸಾಮರಸ್ಯವನ್ನು ಸಿದ್ಧಿಸಿಕೊಳ್ಳುವುದಕ್ಕೆ ಎಷ್ಟು ಸಂಖ್ಯೆಯ ಪ್ರಯೋಗಗಳಾದರೂ ಅತಿ ಕಡಿಮೆ, ಎಂಥ ತ್ಯಾಗವಾದರೂ ಹೆಚ್ಚಲ್ಲ (ಆತ್ಮಕಥೆ)

ಹೆಚ್ಚಿನ ಆತ್ಮಾಭಿವ್ಯಕ್ತಿಗಾಗಿಯೂ ಕಾಯದ ಮೇಲೆ ಆತ್ಮದ ಪರಮಾಧಿಕಾರವನ್ನು ಸ್ಥಾಪಿಸುವುದಕ್ಕಾಗಿಯೂ ಕೈಗೊಂಡ ಉಪವಾಸ ನಮ್ಮ ಪ್ರಗತಿಗೆ ಸತ್ವಯುಕ್ತ ಸಾಧನಗಳಲ್ಲೊಂದು

ಪೂರ್ಣ ಉಪವಾಸ ಪೂರ್ಣವಾದ ವಾಸ್ತವಿಕವಾದ ಸ್ವಾರ್ಥ-ನಿರಾಕರಣೆ ಒಂದು ಅತ್ಯಂತ ಸತ್ಯವಾದ ಪ್ರಾರ್ಥನೆ ಅದು 'ಇದೋ, ಕೊಳ್ಳಿನ್ನ ಬಾಳನ್ನ, ಅದು ಎಂದೆಂದಿಗೂ ನಿನ್ನದು ಮಾತ್ರ ಆಗಿರಲಿ' ಎಂಬುದು ಬರಿ ಬಾಯಿನ ಅಲಂಕಾರೋಕ್ತಿಯಾಗಬಾರದು ಅದು ಲಕ್ಷ್ಯವಿಲ್ಲದೆ ಉಲ್ಲಾಸದಿಂದ ಕೊಡುವ ಯಾವೊಂದು ಕಿರಿಕಿರಿಯೂ ಇಲ್ಲದ ಕೊಡುಗೆಯಾಗಬೇಕು (ಯಂಗ್ ಇಂಡಿಯಾ. ೧೬-೨-೨೨)

ನನ್ನ ಅನುಭವಕ್ಕೇ ಅಲ್ಲದೆ ನನ್ನ ಅನೇಕ ಸಹಚಾರಿಗಳ ಅನುಭವಕ್ಕೂ ಬಂದಿರುವ ಈ ಕೆಲವು ಸರಳ ನಿಯಮಗಳನ್ನು ವಾಚಕರ ಮುಂದಿಡುತ್ತೇನೆ.

೧ ಬಾಲಕರೂ ಬಾಲಕಿಯರೂ ಸರಳವೂ ನೈಸರ್ಗಿಕವೂ ಆದ ರೀತಿಯಿಂದ ಬೆಳೆಯುತ್ತ ಬರಬೇಕು, ಆಗ ಅವರಿಗೆ ನಿಷ್ಕಲ್ಮಶರಾಗಿ ಇರಬಲ್ಲೆವೆಂಬ ಪೂರ್ಣ ನಂಬಿಕೆ

೨ ಉಷ್ಣಗೊಳಿಸುವ ಮತ್ತು ಉದ್ರೇಕಜನಕವಾದ ಅಡುಗೆಗಳನ್ನು ಮೆಣಸಿನಕಾಯಿ ಇತ್ಯಾದಿ ಸಂಬಾರಗಳನ್ನೂ ಕೊಬ್ಬುಳ್ಳ ಅತಿಘಟ್ಟಿ ತಿಂಡಿಗಳನ್ನು ಸಿಹಿ ಮತ್ತು ಹುರಿದ ಪದಾರ್ಥಗಳನ್ನೂ ಎಲ್ಲರೂ ವರ್ಜಿಸಬೇಕು

೩ ಸತಿಪತಿಗಳು ಪ್ರತ್ಯೇಕ ಕೊಠಡಿಗಳಲ್ಲಿ ವಾಸಮಾಡುತ್ತ ಗೋಪ್ಯತೆಯನ್ನು ಬಿಟ್ಟುಬಿಡಬೇಕು

೪. ಶರೀರವೂ ಮನಸ್ಸೂ ಆರೋಗ್ಯಕರ ಚಟುವಟಿಕೆಯಲ್ಲಿ ಸದಾ ಪ್ರವೃತ್ತವಾಗಿಬೇಕು

೫. ಯಾವೊಂದು ಅಶ್ಲೀಲಸಾಹಿತ್ಯದ ಹತ್ತಿರಕ್ಕೂ ಹೋಗಬಾರದು ಅಶ್ಲೀಲಭಾವನೆಗಳಿಗೆ ಪ್ರತಿಯಾದ ಸಿದ್ಧೌಷಧ ಸದ್ಭಾವನೆಗಳು.

೬ ಮುಂಚಿತವಾಗಿ ಮಲಗಿ ಮುಂಚಿತವಾಗಿ ಏಳುವ ಅಭ್ಯಾಸ ವನ್ನು ತಪ್ಪದೆ ನಡೆಸಬೇಕು

೭ ಕಾಮೋದ್ರೇಕ ಮಾಡುವ ನಾಟಕಶಾಲೆ ಚಲಚ್ಚಿತ್ರಮಂದಿರ ಮುಂತಾದುವಕ್ಕೆ ಬೆನ್ನು ತಿರುಗಿಸಬೇಕು.

೮ ಸ್ವಪ್ನಸ್ಖಲನಗಳಿಗಾಗಿ ಏನೂ ಚಿಂತಿಸಬೇಕಾಗಿಲ್ಲ. ಬಲಿಷ್ಠರಾದ ಪುರುಷನಿಗೆ ಅಂಥ ಪ್ರಸ್ತಾಪದಲ್ಲಿ ತಣ್ಣೀರಿನ ಸ್ನಾನ ಒಂದು ಅತ್ಯುತ್ತಮ ತಡೆ ಆಗ ಈಗ ಕೈಗೊಂಡ ಅಯುಕ್ತಿತ ಸ್ಖಲನಗಳಿಂದ ರಕ್ಷಣೆಯೆಂದು ಭಾವಿಸುವುದು ತಪ್ಪು

೯ ಎಲ್ಲಕ್ಕಿಂತ ಹೆಚ್ಚಾಗಿ ಜಿತೇಂದ್ರಿಯತ್ವ, ಸತಿಪತಿಗಳ ನಡುವೆ ಕೂಡ, ವ್ಯವಹಾರ ಸಾಧ್ಯವಲ್ಲದಷ್ಟು ಕಷ್ಟವೆಂದು ಯಾರೂ ಭಾವಿಸ ಬಾರದು ಇದಕ್ಕೆ ಪ್ರತಿಯಾಗಿ ಇಂದ್ರಿಯನಿಗ್ರಹ ಜೀವನದಲ್ಲಿ ಸಾಮಾ ನ್ಯವೂ, ಸ್ವಾಭಾವಿಕವೂ ಆದ ಅಭ್ಯಾಸವೆಂದು ಭಾವಿಸಬೇಕು

೧೦ ಪ್ರತಿದಿನವೂ ಪರಿಶುದ್ಧಿಗಾಗಿ ಹೃತ್ಪೂರ್ವಕವಾಗಿ ಪ್ರಾರ್ಥಿಸಿ ದರೆ ಹೆಚ್ಚು ಹೆಚ್ಚು ಶುದ್ಧರಾಗಬಹುದು

ದಮನವೆಂದಿಗೂ ಆರೋಗ್ಯವನ್ನು ಕೆಡಿಸುವುದಿಲ್ಲ ಆರೋಗ್ಯ ಹಾಳಾಗುವುದು ಸಂಯಮದಿಂದಲ್ಲ ಕೇವಲ ಹೊರಗಣ ನಿರೋಧದಿಂದ. ನಿಜವಾಗಿ ಆತ್ಮಸಂಯಮವನ್ನು ಸಾಧಿಸಿದ ವ್ಯಕ್ತಿ ದಿನಕಳೆದಂತೆ ವರ್ಧಿಸು ತ್ತಾನೆ ಶಕ್ತಿಯಿಂದ ಶಕ್ತಿಗೆ, ಶಾಂತಿಯಿಂದ ಶಾಂತಿಗೆ ಚಿಂತನೆಗಳನ್ನು ಹತೋಟಿಗೆ ತರುವುದು ಇಂದ್ರಿಯನಿಗ್ರಹದ ಪ್ರಪ್ರಥಮ ಹೆಜ್ಜೆ. ನಿಮ್ಮ ಇತಿಮಿತಿಗಳನ್ನು ಅರಿತುಕೊಳ್ಳಿ, ನಿಮ್ಮ ಕೈಲಾದಷ್ಟನ್ನು ಎಸಗಿ ಸಮ ಕೋನದ ಆದರ್ಶವನ್ನು ನಿಮ್ಮ ಮುಂದಿಟ್ಟಿದ್ದೇನೆ ನೀವು ಸೋತರೆ ವ್ಯಸ ನಕ್ಕಾಗಲೀ ನಾಚಿಕೆಗಾಗಲೀ ಕಾರಣವಿಲ್ಲ ನನ್ನ ಉಪದೇಶದಿಂದ ಗಾಬರಿ ಗೊಳ್ಳಬೇಡಿ, ಕುಸಿದು ಬೀಳಬೇಡಿ ಘನ ಆದರ್ಶದ ಕವಚವನ್ನು ಧರಿಸಿ ನೀವು ಇಲ್ಲಿಂದ ಹೊರಹೊರಡಬೇಕೆಂದು ನನ್ನ ಇಷ್ಟ, ನಿಮಗೆ ಭರವಸೆ ಕೊಡಬಲ್ಲೆ, ಯಾವ ಪ್ರಲೋಭನೆಯೂ ನಿಮ್ಮನ್ನು ತೊಂದರೆ ಪಡಿಸಲಾ ರದು, ಯಾವ ಅಶುಚಿಯೂ ನಿಮ್ಮನ್ನು ಮುಟ್ಟಲಾರದು.

(ಹರಿಜನ. ೨೪-೪.೩೭)

ನಿರಂತರ ಪ್ರಾಯಶ್ಚಿತ್ತದ ಹೊರತು ದುಷ್ಟಭಾವನೆಯ ಪೂರ್ಣನಾಶ ಸಾಧ್ಯವಿಲ್ಲ. ಇದನ್ನು ಸಾಧಿಸಲು ಇರುವ ಮಾರ್ಗ ಒಂದೇ ಮನಸ್ಸಿನಲ್ಲಿ ಒಂದು ಕೆಟ್ಟ ಭಾವನೆ ಹುಟ್ಟಿದ ಕೂಡಲೇ ಅದನ್ನು ಒಂದು ಒಳ್ಳೆಯ ಭಾವನೆಯಿಂದ ಎದುರಿಸಿ. ಇದು ಸಾಧ್ಯವಾಗುವುದು ಭಗವಂತನ ಕೃಪೆಯಿಂದ ಮಾತ್ರ, ಅನವರತವೂ ಅವನೊಡನೆ ಸಲ್ಲಾಪಗೈಯುತ್ತ ಪೂರ್ತಿಯಾಗಿ ಆತ್ಮಾರ್ಪಣೆ ಮಾಡಿಕೊಂಡರೆ ಬರುತ್ತದೆ. ಭಗವಂತನ ಕೃಪೆ ಆರಂಭದಲ್ಲಿ ಈ ಸಲ್ಲಾಪ ಆತನ ನಾಮದ ಬರೀ ಬಾಯಿಪಾಠವಾಗಿರಬಹುದು, ಅಶುದ್ಧ ಯೋಚನೆಗಳಿಂದಲೂ ಕೂಡಿರಬಹುದು ಆದರೆ ಹಾಗೆ ತುಟಿಗಳಲ್ಲಿರುವುದು ಕೊನೆಗೆ ಹೃದಯವನ್ನು ಹೊಕ್ಕು ಸ್ವಾಧೀನ ಮಾಡಿಕೊಳ್ಳುವುದು

ಮನಸ್ಸಿನಲ್ಲಿ ನೆನಪಿಡಬೇಕಾದ ಒಂದು ಅಂಶವಿದೆ ಮನಸ್ಸು ಎಲ್ಲಿಗೆ ಬೇಕಾದರೂ ಹರಿಯಲಿ, ಆದರೆ ಇಂದ್ರಿಯಗಳು ಮಾತ್ರ ಹರಿಯದಿರಲಿ ಮನಸ್ಸು 'ಬನ್ನಿ ನನ್ನ ಹಿಂದೆ' ಎಂದ ಕಡೆಗೆ ಇಂದ್ರಿಯಗಳು ಹೋದರೆ ನಾವು ಮುಗಿದಂತೆಯೇ. ದೇಹೇಂದ್ರಿಯಗಳನ್ನು ತನ್ನ ಅಂಕೆಗೆ ತಂದಿಟ್ಟುಕೊಂಡವ ಒಂದಲ್ಲ ಒಂದುದಿನ ಅಶುದ್ಧ ಭಾವನೆಗಳನ್ನೂ ಅಂಕೆಯಲ್ಲಿಟ್ಟುಕೊಳ್ಳಲು ಶಕ್ತನಾಗುತ್ತಾನೆ

ದುಷ್ಟಯೋಚನೆಗಳು ಬರುತ್ತವೆಂಬ ದಿಗಿಲಿನಿಂದ ನಿರುತ್ಸಾಹಿಗಳಾಗಬೇಡಿ ಪ್ರಯತ್ನರಾಜ್ಯದ ಅಳರಸರು ನಾವು ಪರಿಣಾಮರಾಜ್ಯದ ಒಬ್ಬನೇ ಆಳರಸ ಭಗವಂತ ನಿಮ್ಮ ಸುತ್ತಮುತ್ತ ಒಂದು ಸ್ವಚ್ಛ ವಾತಾವರಣವನ್ನು ಸೃಷ್ಟಿಸಲು ಏನು ಮಾಡಬೇಕೆಂದು ನಿಮಗೆ ಗೊತ್ತು ಅಲ್ಪ ಆಹಾರ, ನೆಲದ ಮೇಲೆ ನೆಟ್ಟ ದೃಷ್ಟಿ, ನಿಮ್ಮ ಕುರಿತೇ ಅಸಹನೆ, ಕೊನೆಗೆ ಏನಾದರೂ ತಪ್ಪು ಮಾಡಿದರೆ ನಿಮ್ಮ ಕಣ್ಣನ್ನು ಕಿತ್ತೆಸೆಯುವಷ್ಟು ದೂರ.

(ಹರಿಜನ, ೨೨-೨-೪೨)

ದೇಹದ ಅನ್ಯೂನ ಆರೋಗ್ಯಕ್ಕೆ ಅನ್ಯೂನಮನಸ್ಸೇ ಜವಾಬ್ದಾರ ಅನ್ಯೂನ ಮನಸ್ಸು ಅನ್ಯೂನ ಹೃದಯದಿಂದ ಬರುತ್ತದೆ, ಎಂದರೆ ವೈದ್ಯನ ಸ್ಟೆತಸ್ಕೋಪಿಗೆ ಗೊತ್ತಿರುವ ಹೃದಯವಲ್ಲ, ದೇವರ-ಗದ್ದಿಗೆಯಾದ ಹೃದಯ, ಹೃದಯದಲ್ಲಿ ಭಗವಂತನ ಸಾಕ್ಷಾತ್ಕಾರವನ್ನು ಮಾಡಿಕೊಂಡರೆ

ಹೊಲಸಾದ ಅಥವಾ ನಿರರ್ಥಕವಾದ ಯಾವೊಂದು ಯೋಚನೆಯೂ ಮನಸ್ಸನ್ನು ಹಾದುಹೋಗಲಾರದೆಂದು ನನ್ನ ವಾದ ಪವಿತ್ರ ಆಲೋಚನೆ ಇರುವ ಕಡೆಯಲ್ಲಿ ಜಾಡ್ಯವಿರಲು ಸಾಧ್ಯವಿಲ್ಲ ಇಂಥ ಸ್ಥಿತಿಯನ್ನು ಸೇರುವುದು ಕಷ್ಟವಾಗಿರಬಹುದು ಆದರೂ ಅದನ್ನು ಅರಿತುಕೊಂಡಲ್ಲಿ ಆರೋಗ್ಯದ ಆರೋಹಣದಲ್ಲಿ ಮೊದಲ ಮೆಟ್ಟಲನ್ನು ಹತ್ತಿದಂತೆ ತದನುಸಾರವಾಗಿ ಪ್ರಯತ್ನವನ್ನು ಎಸಗಿದರೆ ಅದೇ ಮುಂದಣ ನಮ್ಮ ಬಾಳನ್ನು ಹೀಗೆ ತಟ್ಟಿ ತಳದಿಂದ ಬದಲಾಯಿಸಿದಲ್ಲಿ ಇದುವರೆಗೆ ಮಾನವನಿಂದ ಕಂಡು-ಹಿಡಿಯಲ್ಪಟ್ಟಿರುವ ಎಲ್ಲ ನಿಸರ್ಗನಿಯಮಗಳ ಅನುಸರಣೆಯು ಜೊತೆಯಲ್ಲಿಯೇ ಸ್ವಾಭಾವಿಕವಾಗಿ ಆಗುತ್ತದೆ ಅವುಗಳೊಂದಿಗೆ ಸದರದಲ್ಲಿ ಆಟವಾಡಿದವನು ಶುದ್ಧ ಹೃದಯಿ ಎಂದು ಯಾವನೂ ಹೇಳಿಕೊಳ್ಳಲಾರ ರಾಮನಾಮ ಜಪದಿಂದ ಸಾಧಿಸಬಹುದಾದದ್ದನ್ನು ನಿಷ್ಕಳಂಕ ಹೃದಯದಿಂದ ಸಾಧಿಸಬಹುದೆಂದು ಹೇಳುವುದು ನ್ಯಾಯವಲ್ಲ ಏತಕ್ಕೆಂದರೆ ಅದನ್ನು ಬಿಟ್ಟು ಪರಿಶುದ್ಧಿ ಹೊಂದುವುದಕ್ಕೆ ಬೇರೊಂದು ಪಥವನ್ನು ನಾನರಿಯೆ. ಹಾಗೂ ಜಗತ್ತಿನ ಎಲ್ಲ ದಿಕ್ಕಿನಲ್ಲೂ ಹಿಂದಣ ಜ್ಞಾನಿಗಳು ಅದೇ ಪಥವನ್ನೇ ತುಳಿದಿದ್ದಾರೆ ಅವರು ಮೂಢನಂಬಿಕೆಯುವರಲ್ಲ, ಅಡ್ಡ ಕಸಬಿಗಳಲ್ಲ, ದೇವರಿಗೆ ಸೇರಿದ ಪುರುಷರು (ಹರಿಜನ ೯-೬-೪೬)

ರಾಗೋದ್ರೇಕಗಳು ನಿನ್ನನ್ನು ಸೋಲಿಸಬಹುದೆಂಬ ಅಪಾಯಸೂಚನೆ ತೋರಿದಾಗ ಮಂಡಿಯೂರಿ ಬಗ್ಗಿ ಸಹಾಯಕ್ಕೆ ಬಾ ಎಂದು ದೇವರಿಗೆ ಮೊರೆಯಿಡು

## ಆತ್ಮಸಂಯಮ

ನಮ್ಮ ಮೇಲೆ ನಾವು ಇಟ್ಟುಕೊಳ್ಳುವ ಹತೋಟಿ ನಮ್ಮ ಇರುವಿಕೆಯ ನೇಮ ಇಂದ್ರಿಯನಿಗ್ರಹ ಬಾಳನ್ನು ನಿಯಂತ್ರಿಸುವ ಸೂತ್ರಗಳಿಗೂ ಇಂದ್ರಿಯಲೋಲುಪತೆಯ ಬಾಳಿಗೂ ಅಂತರವಿರುವುದು ಅನಿವಾರ್ಯ ಆದ್ದರಿಂದ ನಿನ್ನ ಸಂಗ, ನಿನ್ನ ವ್ಯಾಸಂಗ, ನಿನ್ನ ಮನೋರಂಜನೆಯ ಬೀಡುಗಳು ನಿನ್ನ ತಿಂಡಿತೀರ್ಥಗಳನ್ನು ನೀನು ಸುವ್ಯವಸ್ಥೆಗೊಳಿಸಿಕೊಳ್ಳುವೆ ಸಜ್ಜನರ ಮತ್ತು ಶುಚಿಪುರುಷರ ಸಂಗವನ್ನು ನೀನು ಕೋರುವೆ ರಾಗೋದ್ರೇಕವನ್ನು ಉತ್ಪತ್ತಿಗೈಯುವ ಕಾದಂಬರಿಗಳನ್ನೂ ಪತ್ರಿಕೆಗಳನ್ನೂ ದೃಢ

ನಿರ್ಧಾರದಿಂದ ಓದದೆ ನಿಂತು ಮನುಷ್ಯರನ್ನು ಪರಿಪೋಷಿಸುವ ಗ್ರಂಥಗಳನ್ನು ಪರಿಸುತ್ತೀಯೆ ಒಂದು ಗ್ರಂಥವನ್ನು ನಿನ್ನನ್ನು ಬಿಟ್ಟು ಎಂದೂ ಅಗಲದ ಸಂಗಾತಿಯನ್ನಾಗಿ ಮಾಡಿಕೊಳ್ಳುವೆ, ಆದರತ್ತ ಪುನಃ ಪುನಃ ನೋಡುವೆ, ಅದು ನಿನಗೆ ಮಾರ್ಗದರ್ಶಿ ನಾಟಕಶಾಲೆಗಳಿಗೂ ಚಲಚ್ಚಿತ್ರ ಮಂದಿರಗಳಿಗೂ ನೀ ಹೋಗುವುದಿಲ್ಲ ಎಲ್ಲಿ ನಿನ್ನನ್ನು ದುರ್ವ್ಯಯಕ್ಕೆ ಈಡು ಮಾಡಿಕೊಳ್ಳದೇ ಪುನರುಜ್ಜೀವನಪಡಿಸಿಕೊಳ್ಳಬಲ್ಲೆಯೋ ಅಲ್ಲಿದೆ ಮನರಂಜನೆ ಎಲ್ಲಿ ಶಬ್ದವೂ ರಾಗವೂ ನಿನ್ನ ಆತ್ಮವನ್ನು ಎತ್ತುತ್ತವೆಯೋ ಆ ಭಜನಮಂಡಲಿಗಳಿಗೆ ನೀ ಹೋಗುವೆ ಹಸಿವನ್ನು ತೃಪ್ತಿಪಡಿಸಲು ಊಟ ಮಾಡುವೆಯೇ ಹೊರತು ತೃಪ್ತಿಗಲ್ಲ ವಿಷಯಪಟು ಬದುಕುವುದು ಉಣ್ಣುವುದಕ್ಕಾಗಿ ವಿಷಯ ಸಂಯಮಿ ಉಣ್ಣುತ್ತಾನೆ ಬದುಕುವುದಕ್ಕಾಗಿ ಆದ್ದರಿಂದ ಕೆರಳಿಸುವ ಎಲ್ಲಬಗೆಯ ಸಂಬಾರ ಪದಾರ್ಥಗಳನ್ನೂ ನರಗಳನ್ನು ಉದ್ರೇಕಗೊಳಿಸುವ ಮಾದಕ ವಸ್ತುವನ್ನೂ ಸರಿ ತಪ್ಪೆಂಬ ವಿವೇಚನೆಯನ್ನು ಮೃತಪ್ರಾಯಗೊಳಿಸುವ ಮಾಂದ್ಯ ಗುಳಿಗೆಗಳನ್ನೂ ನೀ ತ್ಯಜಿಸುವೆ. ಭೋಜನದ ಕಾಲ ಮತ್ತು ಪ್ರಮಾಣವನ್ನು ನೀ ನಿಗದಿ ಮಾಡಿಕೊಳ್ಳುವೆ.

ಆತ್ಮಸಂಯಮವೆಂದಿಗೂ ಒದಗಿಬರಲಾರದು ಅಂಜುಕುಳಿಗಳಿಗೆ ಎಚ್ಚರಿಕೆಯ ಮತ್ತು ಪ್ರಾರ್ಥನೆ ಉಪವಾಸಗಳ ರೂಪದ ಸಂತತ ಪ್ರಯತ್ನದ ಸುಂದರ ಫಲ ಅದು ಆ ಪ್ರಾರ್ಥನೆ ನಿರರ್ಥಕ ಪುನಶ್ಚರಣೆಯಲ್ಲ, ಆ ಉಪವಾಸ ನಿರಶನದಿಂದಾಗುವ ಶರೀರ ಕ್ಷಯವಲ್ಲ ನಂಬಿಕೆಯ ಮೂಲಕ ಭಗವಂತನನ್ನು ಅರಿತ ಹೃದಯದಿಂದ ಪ್ರಾರ್ಥನೆ ಏಳಬೇಕು, ಕೆಟ್ಟ ಅಥವಾ ಕೆಡುಕು ಮಾಡುವ ಯೋಚನೆ, ಚಟುವಟಿಕೆ ಅಥವಾ ಆಹಾರತ್ಯಾಜ್ಯ, ಉಪವಾಸ, ನಾನಾ ಭಕ್ಷ್ಯ ಭೋಜ್ಯಗಳನ್ನು ಚಿತ್ತದಲ್ಲಿ ಬಯಸುತ್ತಾ ದೇಹವನ್ನು ಕ್ಷೀಣಿಸುವುದು ನಿಷ್ಫಲಕ್ಕಿಂತ ಕೀಳು

(ಹರಿಜನ, ೧೦-೪ ೩೭)

ಕಂಡಹಾಗೆ ವಿಷಯೋಪಭೋಗ ಎಂದಿಗೂ ಒಂದು ಧ್ಯೇಯವಾಗಲಾರದು ಧ್ಯೇಯದ ಅಭ್ಯಾಸಕ್ಕೆ ಪರಿಮಿತಿಯೆಂಬುದೇ ಇಲ್ಲ. ಆದರೆ ಅಪರಿಮಿತ ವಿಷಯೋಪಭೋಗವನ್ನು ಹಿಡಿದ ವ್ಯಕ್ತಿಗೋ ಜನಾಂಗಕ್ಕೋ ವಿನಾಶ

ಖಂಡಿತವೆಂಬುದನ್ನು ಎಲ್ಲರೂ ಒಪ್ಪುವರು ಎಂದ ಮೇಲೆ ಆತ್ಮಸಂಯಮ ವೊಂದೇ ನಮ್ಮ ಧ್ಯೇಯವಾದೀತು, ಅತ್ಯಂತ ಹಿಂದಿನ ಕಾಲದಿಂದಲೂ ಧ್ಯೇಯವೆಂದು ತಿಳಿದಿರುವುದು ಅದನ್ನೇ. ಆದ್ದರಿಂದ ನಾವು ಅದನ್ನು ಸಾಧಿಸಿ ಕೇಳುವ ವಿಧಾನಗಳನ್ನು ಪರಿಶೋಧಿಸಬೇಕೇ ಹೊರತು ಅದರ ಸುತ್ತ ಸುತ್ತಿ ಉಲ್ಲಂಘಿಸುವ ಉಪಾಯಗಳನ್ನಲ್ಲ. (ಹರಿಜನ ೨೦-೩-೩೬)

ಮಾನವನಿಗೂ ಮೃಗಕ್ಕೂ ಸಾದೃಶ್ಯ ತಂದಿಡುವುದು ಸರಿಯಲ್ಲ, ವಾದವನ್ನೆಲ್ಲ ಪೂರ್ತಿ ಕೆಡಿಸುತ್ತದೆ ಆ ಸಾದೃಶ್ಯ ತನ್ನ ನೈತಿಕ ಸಹಜ ಗುಣಗಳಲ್ಲಿ ನೈತಿಕ ಸಂಸ್ಥೆಗಳಲ್ಲಿ ಮಾನವ ಮೃಗಕ್ಕಿಂತ ಮೇಲ್ಪಟ್ಟವನ, ಒಂದಕ್ಕೆ ಅನ್ವಯಿಸುವ ನೈಸರ್ಗಿಕ ನಿಯಮಕ್ಕೂ ಇನ್ನೊಂದಕ್ಕೆ ಅನ್ವಯಿಸುವುದಕ್ಕೂ ಭೇದವಿದೆ ವಿಚಾರ ಶಕ್ತಿ, ಯುಕ್ತಾಯುಕ್ತ ವಿವೇಚನೆ ಒಂದಿಷ್ಟಾದರೂ ಸಂಕಲ್ಪ ಸ್ವಾತಂತ್ರ್ಯ ಮಾನವನಲ್ಲಿವೆ ಅಂಥಾದ್ದಾವುದೂ ಇಲ್ಲ ಮೃಗಕ್ಕೆ ಅದು ಸ್ವತಂತ್ರವಾಗಿ ವರ್ತಿಸಲಾರದು, ಸದ್ಗುಣ ದುರ್ಗುಣ, ಒಳ್ಳೆಯದು ಕೆಟ್ಟದು ಎಂಬ ವ್ಯತ್ಯಾಸದ ಜ್ಞಾನವಿಲ್ಲ ಅದಕ್ಕೆ. ಸ್ವತಂತ್ರ ಕರ್ತೃತ್ವವುಳ್ಳ ಮಾನವನಿಗೆ ಈ ವ್ಯತ್ಯಾಸಗಳು ಗೊತ್ತು. ಅವನು ತನ್ನ ನೀಚಪ್ರಕೃತಿಯನ್ನು ಹಿಂಬಾಲಿಸಿದಾಗ ಮೃಗಕ್ಕಿಂತಲೂ ತಾನು ಕೀಳೆಂದು ತೋರಿಸಿಕೊಳ್ಳುತ್ತಾನೆ. ಪ್ರಪಂಚದಲ್ಲಿ ಅತ್ಯಂತ ಅನಾಗರಿಕವೆಂದು ಎಣಿಸಲ್ಪಟ್ಟಿರುವ ಬುಡಕಟ್ಟುಗಳೂ ಕೂಡ ಲೈಂಗಿಕ ಸಂಬಂಧಗಳ ವಿಚಾರ ಕೆಲವು ವಿರೋಧಗಳನ್ನು ಒಪ್ಪುತ್ತವೆ ಈ ವಿರೋಧವೇ ಕಾಡುತನವೆನ್ನುವುದಾದರೆ ಯಾವೊಂದು ತಡೆಯೂ ಇಲ್ಲದಿರುವುದೇ ಮಾನವ ಧರ್ಮವಾಗಬೇಕು ಆ ನಿಯಮರಹಿತ ನೇಮವನ್ನು ಎಲ್ಲ ಮನುಷ್ಯರೂ ಅನುಸರಿಸಿ ನಡೆದರೆ ಸಂಪೂರ್ಣ ಅವ್ಯವಸ್ಥೆ ಏರ್ಪಡುವುದಕ್ಕೆ ಇಪ್ಪತ್ತುನಾಲ್ಕು ಘಂಟೆ ಸಾಕು ಸ್ವಾಭಾವಿಕವಾಗಿಯೇ ಪ್ರಾಣಿಗಿಂತ ಮನುಷ್ಯ ಹೆಚ್ಚು ಕಾಮುಕ ಪ್ರವೃತ್ತಿಯುಳ್ಳವನಾದ್ದರಿಂದ ಪ್ರತಿಬಂಧಕವೆಲ್ಲವನ್ನೂ ತೆಗೆದ ತಕ್ಷಣವೇ ಸ್ವಚ್ಛಂದ ಕಾಮದ ಜ್ವಾಲಾಮುಖಿ ಪ್ರವಾಹ, ಭೂಮಂಡದಲ್ಲೆಲ್ಲ ಹರಡಿ ಹರಿದು ನರವರ್ಗವನ್ನೇ ನಾಶಗೊಳಿಸುತ್ತದೆ ಆತ್ಮಸಂಯಮ ಮತ್ತು ಆತ್ಮತ್ಯಾಗಕ್ಕೆ ಸಮರ್ಥನಾಗಿರುವುದರಿಂದ ಮಾನವ ಪಶುವಿಗಿಂತ ಉತ್ತಮ ಆ ಸಾಮರ್ಥ್ಯವಿಲ್ಲ ಅದಕ್ಕೆ

(ಯಂಗ್ ಇಂಡಿಯಾ. ೩-೬-೨೬)

ಇತರರೊಂದಿಗೆ ಹೋಲಿಸಿದರೆ, ನಾನು ದೀರ್ಘ ಅವಧಿಗಳ ಪೂರ್ತ ನಿರೋಗನಾಗಿರುವುದಕ್ಕೂ ನೋಡಿದವರು ಲೋಕೋತ್ತರವೆಂದು ಬಣ್ಣಿಸಿರುವ ನನ್ನ ಅಪೂರ್ವಕಾರ್ಯಗಳ ಮೊತ್ತಕ್ಕೂ ಆತ್ಮಸಂಯಮವೇ ಕಾರಣವೆಂಬುದನ್ನು ಕುರಿತು ನನ್ನಲ್ಲಿ ಯಾವ ಬಗೆಯ ಶಂಕೆಯೂ ಇಲ್ಲ

ಮಾನವ ನಿಜವಾಗಿಯೂ ಒಬ್ಬ ಕಲೆಗಾರ ಮತ್ತು ಸೃಷ್ಟಿಕರ್ತ. ಅವನಿಗೆ ಅಂದವೂ ಬಣ್ಣವೂ ಅಗತ್ಯವಾಗಿ ಬೇಕೆಂಬುದು ನಿಸ್ಸಂದೇಹ ಅವನ ಕಲಾತ್ಮಕ ಮತ್ತು ಸೃಷ್ಟ್ಯಾತ್ಮಕ ಗುಣ ಅತ್ಯುಚ್ಚವಾದಾಗ ಆತ್ಮನಿಗ್ರಹದಲ್ಲಿ ಕಲೆಯೂ ಸೃಷ್ಟಿಯ ಉದ್ದೇಶವಿಲ್ಲದ ಕೂಟದಲ್ಲಿ ಕುರೂಪವೂ ಉಂಟೆಂದು ಅವನಿಗೆ ಬೋಧಿಸಿತು. ಹಾಗೆಯೇ ಯಾವುದೋ ವರ್ಣಗಳ ಮಿಶ್ರಣ ಸೌಂದರ್ಯದ ಕುರುಹಲ್ಲವೆಂಬುದನ್ನು ವಿವೇಚಿಸಿ ತಿಳಿದುಕೊಳ್ಳುವಂತೆ ಅವನ ಕಲಾತ್ಮಕ ಚೈತನ್ಯ ಮಾಡಿತು. ಉಪಯುಕ್ತತೆಯಲ್ಲಿ ಆಮೋದವನ್ನು ಕಾಣೆಂದು ಅವನ ಕಲಾದೃಷ್ಟಿ ಹೇಳಿಕೊಟ್ಟಿತು ಇನ್ನೂ ತನ್ನ ವಿಕಾಸದ ಆರಂಭದ ಘಟ್ಟದಲ್ಲಿದ್ದಾಗಲೇ ನಮ್ಮಲ್ಲಿ ಕೆಲವರು ಇನ್ನೂ ಮಾಡುವಂತೆ, ತಿನ್ನುವುದಕ್ಕಾಗಿ ತಿನ್ನುವುದು ಕೂಡದೆಂದೂ ಅವ ಕಲಿತ. ಇನ್ನೂ ಮುಂದಿನ ಘಟ್ಟದಲ್ಲಿ ಬರೀ ಬಾಳಿನಲ್ಲಿಯೇ ಸೌಂದರ್ಯವಾಗಲೀ ಸಂತೋಷವಾಗಲೀ ಇಲ್ಲವೆಂದೂ ತನ್ನ ಸಹಜೀವಿಗಳಿಗೆ ಸೇವೆ ಸಲ್ಲಿಸಿ ತನ್ಮೂಲಕ ತನ್ನ ಸೃಷ್ಟಿಕರ್ತನ ಸೇವೆಯನ್ನು ಎಸಗುವುದಕ್ಕೋಸ್ಕರ ಬಾಳಬೇಕೆಂದೂ ಆಮೇಲೆ ಕಲಿತುಕೊಂಡ ಅದೇ ರೀತಿ ಸಂಭೋಗಸೌಖ್ಯದ ವ್ಯಾಪಾರವನ್ನು ಕುರಿತು ಚಿಂತನೆ ಮಾಡಿ, ಇತರ ಪ್ರತಿಯೊಂದು ಜ್ಞಾನೇಂದ್ರಿಯಕ್ಕೂ ಇರುವಂತೆ ಜನನೇಂದ್ರಿಯಕ್ಕೂ ಸದುಪಯೋಗ ದುರುಪಯೋಗ ಉಂಟೆಂಬುದನ್ನು ಕಂಡುಹಿಡಿದ ಸಂತಾನೋತ್ಪತ್ತಿಗೆ ಮಾತ್ರ ಅದನ್ನು ಬಳಸುವುದೇ ಅದರ ನೈಜ ಧರ್ಮ, ಅದರ ಯುಕ್ತ ಉಪಯೋಗವೆಂಬುದು ಗೋಚರವಾಯ್ತು ಅವನಿಗೆ ಬೇರೆ ರೀತಿಯ ಬಳಕೆ ವಿಕಾರವಾಗಿ ತೋರಿತು, ಅಷ್ಟೇ ಅಲ್ಲದೆ ಅದರಿಂದ ವ್ಯಕ್ತಿಗೂ ಜನಾಂಗಕ್ಕೂ ಕೆಟ್ಟ ಪರಿಣಾಮಗಳಾಗುವ ಸಂಭವವುಂಟೆಂದು ಅವನಿಗೆ ಭಾಸವಾಯಿತು ಈ ವಾದವನ್ನು ನಾನು ಹೆಚ್ಚು ವಿಸ್ತರಿಸುವುದು ಏತಕ್ಕೆ ? (ಹರಿಜನ. ೪-೪-೩೬)

ಹಾಳತಪುರುಷನಿಂದ ವಿಷಯಸಾಮಗ್ರಿ ವಿಮುಖವಾಗಿ ನಡೆಯು

ತ್ತವೆ, ರುಚಿಯನ್ನು ಹಿಂದೆ ಬಿಟ್ಟು ಪರಾತ್ಪರದ ತಿಳಿವಳಿಕೆಯಾಗುತ್ತ ಆಗುತ್ತ ಆ ರುಚಿಯೂ ಮಾಯವಾಗುತ್ತದೆ ಆದ್ದರಿಂದ ದೇವರ ನಾಮವೂ ದೇವರ ಕೃಪೆಯೂ ಮೋಕ್ಷಾಭಿಲಾಷಿಗೆ ಕಟ್ಟಕಡೆಯ ನಿಧಿ
(ಆತ್ಮಕಥೆ)

ಆತ್ಮಸಂಯಮದಲ್ಲಿ ನಂಬಿಕೆಯುಳ್ಳವರು ವಿಷಣ್ಣಮನಸ್ಕರಾಗ ಬಾರದು ನನಗೆ ಬರುವ ಪತ್ರಗಳು, ಪತ್ರ ಲೇಖಕರಲ್ಲಿ ಅನೇಕರು ಇಂದ್ರಿಯನಿಗ್ರಹವನ್ನು ಅಭ್ಯಸಿಸಲೆತ್ನಿಸಿ ಜಯ ದೊರಕದಿದ್ದುದಕ್ಕೆ ಒಳಗೆ ಚಿಂತಿಸುತ್ತ ಕುದ್ದುಕೊಳ್ಳುವುದನ್ನು ಪ್ರಕಟಿಸುತ್ತವೆ ಒಳ್ಳೆಯದಾದದ್ದು ಪ್ರತಿಯೊಂದಕ್ಕೂ ಬೇಕಾಗುವಂತೆ ಇಂದ್ರಿಯನಿಗ್ರಹಕ್ಕೂ ಕೂಡ ಮುಗಿಸ ಲಾಗದ ತಾಳ್ಮೆಯ ಭಂಡಾರ ಅವಶ್ಯಕ ಹತಾಶರಾಗುವುದಕ್ಕೆ ಏನೊಂದು ಕಾರಣವೂ ಖಂಡಿತ ಇಲ್ಲವೇ ಇಲ್ಲ ಚಿಂತಾಕುಲತೆ ಕೂಡದೇ ಕೂಡದು ಮಲಿನ ಯೋಚನೆಗಳನ್ನು ಹೊಡೆದಟ್ಟುವುದಕ್ಕೆ ಬುದ್ಧಿಪೂರ್ವಕವಾದ ಯಾವ ಪ್ರಯತ್ನವೂ ಇರಬಾರದು ಅಂಥ ಕ್ರಮವೇ ಒಂದು ಬಗೆಯ ವಿಷಯಾಸಕ್ತಿಯಾದೀತು

ಪ್ರಾಯಶಃ ಅದಕ್ಕೆ ಪ್ರತಿಭಟನಾರಾಹಿತ್ಯವೇ ಉತ್ಕೃಷ್ಟ ಮದ್ದು, ಕೆಟ್ಟ ಯೋಚನೆಗಳ ಇರುವಿಕೆಯನ್ನು ನಿರ್ಲಕ್ಷಿಸಿ ನಮ್ಮ ಕೈಹತ್ತಿರ ಇರುವ ಕರ್ತವ್ಯಗಳಲ್ಲಿ ಅನವರತ ನಿಮಗ್ನರಾಗಬೇಕು ಹೀಗೆಂದರೆ ನಮ್ಮ ಮನಸ್ಸು ಆತ್ಮ ದೇಹಗಳನ್ನು ಅದರ ಮೇಲೆ ನೆಡಬಹುದಾದ, ಎಲ್ಲವನ್ನೂ ಸೆಳೆದುಕೊಳ್ಳಬಲ್ಲ, ಯಾವುದೇ ಒಂದು ತೆರದ ಸೇವೆ ನಮಗಿದೆ ಎಂದ ರಾಯಿತು 'ಸೋಮಾರಿ ಕರಗಳಿಗೆ ಯಾವಾಗಲು ಸಿಕ್ಕುವುದು ಎಸಗಲಾ ವುದೋ ತಂಟೆ' ಎಂಬುದು ಇಲ್ಲಿಗೆ ಅನ್ವಯಿಸುವಂತೆ ಮತ್ತೆಲ್ಲಿಗೂ ಅನ್ವಯಿಸದು ಕರ್ಮದಲ್ಲಿ ನಾವು ಹೀಗೆ ಪೂರ ನಿಮಗ್ನರಾದರೆ ದುರುಳಯೋಚನೆಗಳು ಮೇಲಾಗಿ ಕೆಟ್ಟ ದುರುಳ ಕೃತ್ಯಗಳೂ ಅಸಂಭವ, ವೈಯಕ್ತಿಕ ಪ್ರಗತಿಗೆ ಅನಿವಾರ್ಯವಾದ ಇಂದ್ರಿಯ ನಿಗ್ರಹ ಸೂತ್ರಕ್ಕೆ ವಿಧೇ ಯರಾಗಿರುವವರು ತಮ್ಮ ರಟ್ಟೆಯ ಬಲಕ್ಕನುಗಣವಾಗಿ ಕಾಯಕದಲ್ಲಿ ತೊಡಗಬೇಕಾದದ್ದು ಅತ್ಯಗತ್ಯ. (ಯಂಗ್ ಇಂಡಿಯಾ ೩-೮-೨೮)

ಕಷ್ಟಗಳು ಹೆಚ್ಚಿದಷ್ಟೂ ಹೆಚ್ಚಬೇಕು ನಮ್ಮ ಶ್ರದ್ಧೆ
(ಹರಿಜನ, ೬-೪-೪೦)

ದೈವಸೃಷ್ಟಿಯ ಜೀವರಾಶಿಯಲ್ಲೆಲ್ಲ ತನ್ನನ್ನು ಮಾಡಿದವನನ್ನು ತಿಳಿದುಕೊಳ್ಳಲೆಂದು ಸೃಷ್ಟಿಯಾಗಿರುವ ಜೀವಿ ಮಾನವನೊಬ್ಬನೇ ಆದ್ದರಿಂದ ಮನುಷ್ಯನಿಗೆ ಜೀವನದ ಉದ್ದೇಶ ತನ್ನ ಪ್ರಾಪಂಚಿಕ ಬಡತಿಯನ್ನೂ ಪ್ರಾಪಂಚಿಕ ಆಸ್ತಿಪಾಸ್ತಿಯನ್ನೂ ದಿನದಿನವೂ ಹೆಚ್ಚು ಮಾಡಿಕೊಳ್ಳುವುದಲ್ಲ, ದಿನದಿನಕ್ಕೂ ತನ್ನ ಸೃಷ್ಟಿಕರ್ತನ ಹೆಚ್ಚು ಹೆಚ್ಚು ಹತ್ತಿರಕ್ಕೆ ಸರಿಯುವುದು ಅವನ ಪ್ರಧಾನ ಉದ್ಯೋಗ (ಯಂಗ್ ಇಂಡಿಯಾ. ೨೦-೧೦-೨೦)

ಐಶ್ವರ್ಯಕ್ಕಿಂತ ಬುದ್ಧಿ ಮುಂದೆ ಹೋಗುತ್ತದೆಂಬ ಸಂಗತಿಯನ್ನು ಕುರಿತು ಭಿನ್ನಾಭಿಪ್ರಾಯವಿಲ್ಲ ಬುದ್ಧಿಗಿಂತ ಹೃದಯ ಕಡೆಯಲ್ಲಿ ಮುಂದಿರುವುದೆಂಬುದನ್ನೂ ಹಾಗೆಯೇ ಒಪ್ಪಿಕೊಳ್ಳಬಹುದು ಪರೀಕ್ಷಾ ಸಮಯ ಬಂದಾಗ ನೆರವಾಗಿ ನಿಲ್ಲುವುದು ಸೌಶೀಲ್ಯ, ಮೆದುಳಲ್ಲ

(ಯಂಗ್ ಇಂಡಿಯಾ. ೧೯-೯-೨೧)

ಶೀಲಶುದ್ಧಿಯೂ ಮೋಕ್ಷವೂ ಹೃದಯಶುದ್ಧಿಯನ್ನವಲಂಬಿಸಿವೆ ನಿಮ್ಮ ಸಮಸ್ತ ಜ್ಞಾನ. ಕಲಿಕೆ ಮತ್ತು ಪಾಂಡಿತ್ಯಗಳನ್ನು ತಕ್ಕಡಿಯ ಒಂದು ತಟ್ಟೆಯಲ್ಲಿಯೂ ಸತ್ಯ ಮತ್ತು ಪರಿಶುದ್ಧಿಯನ್ನು ಇನ್ನೊಂದು ತಟ್ಟೆಯಲ್ಲಿಯೂ ಇಟ್ಟರೆ ಎರಡನೆಯದು ಮೊದಲನೆಯದಕ್ಕಿಂತ ಬಹಳ ಹೆಚ್ಚು ತೂಕ ತೂಗುತ್ತದೆ. ಶೀಲರಹಿತವಾದ ಜ್ಞಾನಕ್ಕೆ ಇರುವುದು ಕೆಡುಕು ಮಾಡುವ ಸಾಮರ್ಥ್ಯವೊಂದೇ, ಅದು ಜಗತ್ತಿನಲ್ಲಿ ಕಂಡುಬರುವ ಅನೇಕ 'ಮೇಧಾವಂತ ಚೋರರೂ' 'ಗೃಹಸ್ಥ ಪೋಕರಿಗಳೂ' ಇದಕ್ಕೆ ನಿದರ್ಶನಗಳು [ಯಂಗ್ ಇಂಡಿಯಾ. ೨೧-೨-೨೯)

'ನಿನ್ನ ಕಾಸುಗಳನ್ನು ಎಚ್ಚರದಿಂದ ಕಾಪಾಡಿಕೊ, ರೂಪಾಯಿಗಳು ತಮ್ಮನ್ನು ತಾವೇ ಕಾಪಾಡಿಕೊಳ್ಳುತ್ತವೆ' ಎಂಬುದು ಆರ್ಥಿಕ ಮಿತವ್ಯಯಕ್ಕೆ ಮಾತ್ರ ಸೂಕ್ತಿಯಲ್ಲ, ನೀತಿಸೂತ್ರವೂ ಆಗಿದೆ ನೀನು ಮಾಡಬೇಕಾದ್ದ ಕೆಲಸ ಎಷ್ಟೇ ಅಲ್ಪವಿಷಯವಾದರೂ ನಿನ್ನ ಕೈಲಾದಷ್ಟು ಹಸನಾಗಿ ಅದನ್ನೆಸಗು, ಅತ್ಯಂತ ಹಿರಿದೆಂದು ಭಾವಿಸುವ ವಿಷಯಕ್ಕೆ ನೀನು ಕೊಡುವಷ್ಟೇ ಎಚ್ಚರಿಕೆಯನ್ನೂ ಗಮನವನ್ನೂ ಅದಕ್ಕೂ ನೀಡು. ಏತಕ್ಕೆಂದರೆ, ನಿನ್ನ ಸತ್ವಪರೀಕ್ಷೆಯಾಗುವುದು ಆ ಸಣ್ಣ ವಿಷಯಗಳಿಂದಲೇ

[ಹರಿಜನ. ೭-೭-೩೫)

## ಶಿಸ್ತಿನ ಆವಶ್ಯಕತೆ

ತ್ಯಾಗ, ಶಿಸ್ತು, ಆತ್ಮಸಂಯಮಗಳಿಲ್ಲದಿದ್ದರೆ ಬಂಧನವಿಮೋಚನೆಯೂ ಇಲ್ಲ, ಆಶೆಯೂ ಇಲ್ಲ ಶಿಸ್ತಿಲ್ಲದ ಬರಿ ತ್ಯಾಗದಿಂದ ಪ್ರಯೋಜನವಿಲ್ಲ

(ಯಂಗ್ ಇಂಡಿಯಾ. ೯-೧-೨೬)

ಭವಿಷ್ಯವನ್ನು ಅರಿಯುವ ಶಕ್ತಿ ನಮಗೆ ದತ್ತವಾಗಿಲ್ಲ ನಮ್ಮ ಪಾತ್ರವನ್ನು ಚೆನ್ನಾಗಿ ನಿರ್ವಹಿಸುವುದು ಹೇಗೆಂಬುದನ್ನು ಗೊತ್ತುಮಾಡಿ ಕೊಳ್ಳುವುದು ನಮ್ಮಲ್ಲಿ ಪ್ರತಿಯೊಬ್ಬನಿಗೂ ದತ್ತವಾಗಿದೆ ಹಾಗಾದರೆ, ನಾವು ಸಂಕಲ್ಪವೊಂದನ್ನು ಮಾಡಿದರೆ ಯಾವುದು ನಮ್ಮಿಂದ ಸಾಧ್ಯವೆಂದು ಬಲ್ಲೆವೋ ಅದನ್ನು ಮಾಡೋಣ.

ಮಹತ್ತಾದದ್ದೂ ಉಳಿಯತಕ್ಕದ್ದೂ ಆದ ಯಾವೊಂದನ್ನು ಸಾಧಿಸ ಬೇಕಾದರೂ ಕಬ್ಬಿಣದಂತೆ ಗಡುಸಾದ ಶಿಸ್ತು ಬೇಕೇಬೇಕು. ಅಂಥ ಶಿಸ್ತು ಬರಿ ವಿದ್ವಾಂಸಸಹಜ ವಾದದಿಂದಾಗಲೀ ಬುದ್ಧಿವಿವೇಕ ಮತ್ತು ತರ್ಕಕ್ಕೆ ಮನವಿ ಮಾಡುವುದರಿಂದಾಗಲೀ ಲಭಿಸಲಾರದು. ಕಷ್ಟನಿಷ್ಠುರದ ಶಾಲೆಯಲ್ಲಿ ಶಿಸ್ತನ್ನು ಕಲಿಯಬೇಕು, ಇತರರ ಬಲಾತ್ಕಾರದಿಂದ ನಾವು ಅದನ್ನು ಕಲಿಯಲು ಸಾಧ್ಯವಿಲ್ಲ. ಶಿಸ್ತನ್ನು ಪಾಲಿಸಲಾರದ ಜನಾಂಗ ವೆಂಬ ಹೆಸರು ನಮಗೆ ಬರದಿರಲಿ. ಅಶಿಸ್ತು ಎಂದರೆ ವಿಪತ್ತೇ.

(ಯಂಗ್ ಇಂಡಿಯಾ. ೧೨-೩-೩೧)

ಬಿರುಗಾಳಿಗಳಿಗೂ ಅತಿ ಪ್ರವಾಹಗಳಿಗೂ, ಅಲೆಕಟ್ಟುಗಳೂ ಏರಿಗಳೂ ಹೇಗೊ ಅವ್ಯವಸ್ಥೆಗೆ ಶಿಸ್ತು ಹಾಗೆ (ಯಂಗ್ ಇಂಡಿಯಾ ೧೪-೫-೩೧)

ಆಜ್ಞೆಗಳು ವಿಚಾರ ಸಮ್ಮತವಾಗಿರದಿದ್ದರೂ ಕೂಡ ಅವುಗಳನ್ನು ಉತ್ಸಾಹದಿಂದ ಪಾಲಿಸುತ್ತದೆ ನಿಜವಾದ ಶಿಸ್ತು ಸ್ವಯಂಸೇವಕ ತನ್ನ ಸೇನಾಧಿಪತಿಯನ್ನು ಆರಿಸಿಕೊಳ್ಳುವಾಗ ತನ್ನ ಬುದ್ಧಿ ವಿವೇಚನೆಗೆ ಕೃಷಿ ಕೊಡುತ್ತಾನೆ. ಅನಂತರ ಪ್ರತಿಯೊಂದು ಆಣತಿಯನ್ನೂ ಅನುಸರಿಸುವ ಮುನ್ನ ಅದನ್ನು ತಿಕ್ಕಿ ನೋಡುವುದರಲ್ಲಿಯೂ ಬುದ್ಧಿಯ ಕುಲುಮೆಯ ಮೇಲಿಟ್ಟು ಕುಟ್ಟಿ ಪರೀಕ್ಷಿಸುವುದರಲ್ಲಿಯೂ ತನ್ನ ಸಮಯ ಸಾಮರ್ಥ್ಯ ಗಳನ್ನು ವ್ಯಯಮಾಡುವುದಿಲ್ಲ ಏಕೆಂದು ತರ್ಕಿಸುವುದು ಅವನ ಕೆಲಸವಲ್ಲ.

(ಹರಿಜನ. ೩-೩-೪೦)

ಮೂಲತತ್ವಗಳ ವಿಷಯದಲ್ಲಿ ನಾನು ಎಂದಾದರೂ ದೌರ್ಬಲ್ಯವನ್ನಾಗಲೀ ಬಿಟ್ಟು ಕೊಡುವಿಕೆಯನ್ನಾಗಲೀ ಸಲಹೆ ಮಾಡಿರುವನೆಂದೋ ಪ್ರೇರಿಸಿರುವನೆಂದೋ ಯಾವೊಬ್ಬನೂ ನನ್ನನ್ನು ಆಕ್ಷೇಪಿಸದಿರಲಿ ಆದರೆ ಪ್ರತಿಯೊಂದು ಕ್ಷುಲ್ಲ ವಿಚಾರವನ್ನೂ ಮೂಲ ತತ್ವದ ಹಂತಕ್ಕೆ ಏರಿಸಿ ಗೌರವಿಸಕೂಡದೆಂದು ನಾನು ಹಿಂದೆ ಹೇಳಿದ್ದೇನೆ, ಈಗಲೂ ತಿರುಗಿ ಹೇಳುತ್ತೇನೆ (ಯಂಗ್ ಇಂಡಿಯಾ. ೨೨-೧೦-೨೫)

ಹಾಗೆ ನೋಡಿದರೆ, ಚೆನ್ನಾಗಿ ಅರ್ಥ ಮಾಡಿಕೊಳ್ಳದ ತತ್ವ ಅರಗಿಸಿಕೊಳ್ಳದ ಆಹಾರಕ್ಕಿಂತ ಹೆಚ್ಚು ಕೆಟ್ಟದು ಇದು ಶರೀರಕ್ಕೆ ಮಾತ್ರ ಅಪಾಯ, ಔಷಧಿಯಿಂದ ಗುಣಪಡಿಸಬಹುದು ಅದು ಆತ್ಮವನ್ನು ಕುಲಗೆಡಿಸುತ್ತದೆ, ಅದಕ್ಕೆ ಯಾವ ಮದ್ದೂ ಇಲ್ಲ

(ಯಂಗ್ ಇಂಡಿಯಾ. ೧-೫-೩೭)

## ನಿಜವಾದ ನಂಬಿಕೆ

ನಂಬಿಕೆಯೂ ಸಂಕಲ್ಪವೂ ಉಳ್ಳ ಮನುಷ್ಯ ತನ್ನ ಭರವಸೆಯನ್ನು ಕಳೆದುಕೊಳ್ಳಲು ಏನೂ ಕಾರಣವಿಲ್ಲ

(ಯಂಗ್ ಇಂಡಿಯಾ. ೧೬-೮-೨೪)

ಅಪ್ಪೇಕೆ ಮುಂದೆ ಕಾಣುವ ದಿಗಂತ ಕಪ್ಪಾಗಿ ಕಂಡು ಬಂದಾಗ ನಮ್ಮ ಯೋಜನೆ ಮತ್ತು ಕಾರ್ಯವಿಧಾನಗಳಲ್ಲಿ ನಮಗಿರುವ ಶ್ರದ್ಧೆಗೆ ನಿಶ್ಚಯ ಪರೀಕ್ಷೆ (ಯಂಗ್ ಇಂಡಿಯಾ. ೩-೪-೨೪)

ನಿಶ್ಚಲವಾಗಿ ನಿಲ್ಲುವುದಕ್ಕೆ ಪ್ರಶಸ್ತ ಹವಾಮಾನವನ್ನು ಬಯಸುವ ಶ್ರದ್ಧೆ ಒಂದು ಬಡಶ್ರದ್ಧೆಯೇ ಸರಿ ಅತಿ ಕರಾಳ ಹವಾಮಾನವನ್ನೆದುರಿಸಿ ನಿಲ್ಲಬಲ್ಲ ಶ್ರದ್ಧೆಯೊಂದೇ ನಿಜವಾದದ್ದು.

(ಯಂಗ್ ಇಂಡಿಯಾ. ೨೦-೧೧-೨೪)

ಕುರುಡು ಉತ್ಸಾಹವೂ ಕುರುಡು ನಿಷ್ಠೆಯೂ ಶಾಶ್ವತ ಒಳಿತನ್ನು ಮಾಡಲಾರವು ಸಮುದ್ರಕ್ಷೋಭೆಗಳ ಮೂಲಕ ನಮ್ಮನ್ನು ಕೊಂಡೊಯ್ಯುವುದು ನಂಬಿಕೆ, ಪರ್ವತಗಳು ಚಲಿಸುವಂತೆ ಮಾಡುವುದು ನಂಬಿಕೆ. ಮಹಾಸಾಗರವನ್ನು ಲಂಘಿಸುವುದು ನಂಬಿಕೆ ನಮ್ಮೊಳಗಿರುವ ದೇವರಲ್ಲಿ

ನಮಗಿರುವ ಜೀವಂತವಾದ ಎಚ್ಚತ್ತ ತಿಳಿವಳಿಕೆಯೇ ಆ ನಂಬಿಕೆ. ಅಂಥ ನಂಬಿಕೆಯನ್ನು ಸಿದ್ಧಿಸಿಕೊಂಡವನಿಗೆ ಮತ್ತಾವುದೂ ಬೇಡ

(ಯಂಗ್ ಇಂಡಿಯ. ೨೯-೯-೨೫)

ಇತರರಲ್ಲಿ ಶ್ರದ್ಧೆಯನ್ನು ಹೊತ್ತಿಸಬೇಕಾದರೆ ಮೊದಲು ನಮ್ಮ ಶ್ರದ್ಧೆ ಉಜ್ವಲವಾಗಿಯೂ ಬುದ್ಧಿ ಚಾತುರ್ಯವುಳ್ಳುದೂ ಆಗಿರಲೇಬೇಕು

(ಯಂಗ್ ಇಂಡಿಯಾ. ೨೨-೧೦-೨೫)

ಅತ್ಯಂತ ಕಠಿಣ ಪರೀಕ್ಷೆಗಳಲ್ಲಿ ಜಗ್ಗದೆ ನಿಲ್ಲುವುದಾದರೆ ಆ ನಂಬಿಕೆಗೆ ಏನಾದರೂ ಬೆಲೆಯುಂಟು ಇಡೀ ಪ್ರಪಂಚದ ದುರಪವಾದಕ್ಕೆ ಎದುರಾಗಿ ನಿಲ್ಲಲಾರದೇ ಹೋದರೆ ನಿನ್ನ ನಂಬಿಕೆ ಒಂದು ಸುಣ್ಣ ಬಳಿದ ಗೋರಿ.

(ಯಂಗ್ ಇಂಡಿಯಾ. ೨೫-೪-೨೯)

ಯಾರೊಬ್ಬರೂ ನಂಬಿಕೆಯನ್ನು ನಮಗೆ ನೀಡಲಾರರು ಅದು ಅಂತರಂಗದಿಂದ ಎದ್ದು ಬರಬೇಕು ದೇವರಲ್ಲಿಡುವ ನಂಬಿಕೆ ನನ್ನನ್ನೇ ಕುರಿತ ನಂಬಿಕೆಗೆ ತಾಯಿ (ಹರಿಜನ. ೨೬-೧೨-೩೬)

## ಅಧ್ಯಾಯ ೮

# ನಾಗರಿಕತೆಯೂ ಇಂದ್ರಿಯನಿಗ್ರಹವೂ

ನಾಗರಿಕತೆಯ ವಾಸ್ತವಿಕ ಅರ್ಥ ಆವಶ್ಯಕ ವಸ್ತುಗಳನ್ನು ಬಹಳ ಮಾಡಿಕೊಳ್ಳುವುದಲ್ಲ ಸಾವಧಾನವಾಗಿ ಯೋಚಿಸಿ ಸ್ವಂತ ಇಚ್ಛೆಯಿಂದ ಅವನ್ನು ಕಡಮೆ ಮಾಡಿಕೊಳ್ಳುವುದು ಇದರಿಂದ ಮಾತ್ರ ಯಥಾರ್ಥವಾದ ಸೌಖ್ಯ ತೃಪ್ತಿಗಳ ಪ್ರಚೋದನೆ ಹಾಗೂ ಸೇವಾಸಾಮರ್ಥ್ಯದ ವೃದ್ಧಿ

(ಮಂಗಳ ಪ್ರಭಾತ)

ಒಂದು ಮಟ್ಟದ ಹೊರಗಣ ಹೊಂದಿಕೆಯೂ ಪ್ರಾಪಂಚಿಕ ಸೌಕರ್ಯವೂ ಆವಶ್ಯಕ, ಆ ಮಟ್ಟವನ್ನು ಮೀರಿದರೆ ಅದರಿಂದ ಸಹಾಯಕ್ಕೆ ಬದಲಿಗೆ ಅಡಚಣೆ ಆದ್ದರಿಂದ ಆಸೆಗಳನ್ನು ಮಿತಿಯಿಲ್ಲದ ಸಂಖ್ಯೆಯಲ್ಲಿ ಹುಟ್ಟಿಸಿಕೊಂಡು ಅವುಗಳನ್ನು ತೀರಿಸಿಕೊಳ್ಳುತ್ತ ಹೋಗುವ ಧ್ಯೇಯ ಕೇವಲ ಭ್ರಮೆ ಮತ್ತು ಮಾಯಾಜಾಲ ದೈಹಿಕ ಅಗತ್ಯಗಳ ತೃಪ್ತಿ ಹಾಗೂ ಸಂಕೋಚಾರ್ಥದ ನಮ್ಮ ವ್ಯಕ್ತಿತ್ವದ ಬೌದ್ಧಿಕ ಅಗತ್ಯಗಳ ತೃಪ್ತಿ ಕೂಡ ಯಾವುದೋ ಒಂದು ನೆಲೆಯನ್ನು ಮುಟ್ಟಿ ಮುಂದಕ್ಕೆ ಹೋಗಲಾರದೇ ನಿಲ್ಲಲೇಬೇಕು ಮುಂದುವರಿದರೆ ಅವು ದೈಹಿಕ ಅಥವಾ ಬೌದ್ಧಿಕ ಲಂಪಟತೆಯಾಗಿ ಕೆಳಕ್ಕಿಳಿಯುತ್ತವೆ. ಪುರುಷ ತನ್ನ ಪ್ರಾಪಂಚಿಕ ಮತ್ತು ಸಾಂಸ್ಕೃತಿಕ ಪರಿಸರಗಳನ್ನು ಮಾನವಸೇವೆಗೆ ಅಡ್ಡಿಬರದ ರೀತಿಯಲ್ಲಿ ಅಳವಡಿಸಿಕೊಳ್ಳಬೇಕು, ಸೇವೆಯಲ್ಲಿ ತನ್ನ ಸರ್ವ ಸಾಮರ್ಥ್ಯವನ್ನೂ ಕೇಂದ್ರೀಕರಿಸಬೇಕು

(ಹರಿಜನ. ೨೯-೮-೩೬)

ಒಂದು ವಸ್ತುವಿನಿಂದ ಆಂತರಿಕ ಸಹಾಯ, ನೆಮ್ಮದಿ ಎಲ್ಲಿಯವರೆಗೆ ನಿನಗೆ ದೊರಕುವುದೆಂಬ ಆಸೆಯಿದೆಯೋ ಅಲ್ಲಿಯವರೆಗೂ ಅದನ್ನು ನಿನ್ನ ಬಳಿ ಇಟ್ಟುಕೊಳ್ಳಬೇಕು ಉಗ್ರ ಕರ್ತವ್ಯನಿಷ್ಠೆಯಿಂದುದಿಸಿದ ಆತ್ಮತ್ಯಾಗದ ಮನೋಭಾವದಲ್ಲಿ ಒಂದು ವಸ್ತುವನ್ನು ತ್ಯಜಿಸಿದಲ್ಲಿ ಅದು ಪುನಃ ಬೇಕೆಂಬ ಅಪೇಕ್ಷೆ ನಿನ್ನಲ್ಲಿ ಇದ್ದೇ ಇರುತ್ತದೆ, ತೀರದಿರುವ ಅಪೇಕ್ಷೆಯಿಂದ ನಿನಗೆ ತೊಂದರೆ ಯಾವುದೋ ಇನ್ನೊಂದು ಚಿತ್ತವೃತ್ತಿ ನಿನಗೆ ಅತ್ಯಗತ್ಯ

ವಾಗಿ ಕಂಡು ಬಂದು ನಿನ್ನ ಬಳಿಯಿರುವ ಪದಾರ್ಥದ ಆಕರ್ಷಣೆ ಪ್ರೀತಿ ಮರೆಯಾದಾಗ ಅಥವಾ ಆ ಹೆಚ್ಚು ಅಪೇಕ್ಷಿತವಾದ ಚಿತ್ತವೃತ್ತಿಗೆ ಅದು ಅಡಚಣೆ ತಂದೊಡ್ಡುವುದೆಂದು ತೋರಿಬಂದಾಗ ಮಾತ್ರ ಅದನ್ನು ತ್ಯಜಿಸು

(ಹರಿಜನ. ೧೦-೧-೩೩)

ಸರಳತೆಯೆಂದರೆ ಕಾರ್ಪಣ್ಯವಲ್ಲ ಲಾವಣ್ಯವನ್ನೂ, ಕಲೆಯನ್ನೂ ಓಡುತ್ತಿರುವವ ಕೂಡ ನೋಡಬಲ್ಲ ನೀಟಾಗಿ, ಶುಭ್ರವಾಗಿ, ಗಂಭೀರವಾಗಿ ಇರುವುದಕ್ಕೆ ಹಣಬೇಕಿಲ್ಲ ಆಡಂಬರವೂ ಅಟ್ಟಹಾಸಪ್ರದರ್ಶನವೂ ಅನೇಕ ವೇಳೆ ಒಡ್ಡತನಕ್ಕೆ ಸಮಾನ.

ಮಾನವ ಸಮಾಜಕ್ಕಿದೆ ಅಂತ್ಯವಿಲ್ಲದ ಬೆಳವಣಿಗೆ, ಅದೊಂದು ಆಧ್ಯಾತ್ಮಿಕ ಪ್ರಕಾಶನದ ಅರಳುವಿಕೆ.

ಲೌಕಿಕ ಐಶ್ವರ್ಯದ ಪರಮಾವಧಿಯನ್ನು ಮುಟ್ಟಿದಾಗ ರೋಮನ್ ಸಾಮ್ರಾಜ್ಯಕ್ಕಾಯಿತು ನೈತಿಕಪತನ ಈಜಿಪ್ಟಿಗೂ ಅಂತೆಯೇ ಆಯಿತು ಚರಿತ್ರೆಯ ಅಧಿಕೃತ ವರದಿಯಿಂದ ಕೂಡಿದ ಸುಮಾರು ಎಲ್ಲ ದೇಶಗಳಿಗೂ ಬಹುಶಃ ಅದೇ ಗತಿ ರಾಜನೂ ದೇವತೆಯೂ ಆದ ಕೃಷ್ಣನ ಬಂಧುಗಳು ಮತ್ತು ಸಂತತಿಯವರು ಬಿದ್ದದ್ದೂ ಐಶ್ವರ್ಯದಲ್ಲಿ ಉರುಳಾಡುತ್ತಿರುವಾಗಲೇ ಪ್ರಪಂಚದ ರಾಕ್‌ಫೆಲರ್‌ಗಳಿಗೂ ಕಾರ್ನೆಗೀಗಳಿಗೂ ನೀತಿ ನೇಮದ ಒಂದು ಸಾಧಾರಣ ಪ್ರಮಾಣ ಕೂಡ ಇಲ್ಲವೆಂದು ನಾವು ಹೇಳುವುದಿಲ್ಲ, ಅವರನ್ನು ಔದಾರ್ಯದಿಂದ ವಿಮರ್ಶಿಸುವುದು ನಮಗೆ ಹರ್ಷ ನನ್ನ ತಾತ್ಪರ್ಯ ಇಷ್ಟೆ ನೀತಿನಿಷ್ಠೆಯ ಅತ್ಯುಚ್ಚ ಪ್ರಮಾಣವನ್ನು ಅವರು ತೋರಿಸುತ್ತಾರೆಂಬ ನಿರೀಕ್ಷೆ ಕೂಡ ನಮಗಿಲ್ಲ, ಲೌಕಿಕ ಲಾಭ ಅವರಿಗೆ ಬಂತೆಂದರೆ ನೈತಿಕ ಲಾಭ ಬಂತು ಎಂದಲ್ಲ ಅರ್ಥ ದಕ್ಷಿಣ ಆಫ್ರಿಕಾದಲ್ಲಿ ಸಹಸ್ರಾಸಹಸ್ರ ಭಾರತೀಯ ದೇಶಬಾಂಧವರೊಡನೆ ಆತ್ಮೀಯ ಸಂಪರ್ಕ ಪಡೆಯುವ ಪಗೌರವ ನನ್ನದಾಗಿತ್ತು, ಆಗ ಐಶ್ವರ್ಯಸಂಪಾದನೆ ಹೆಚ್ಚಿದಷ್ಟೂ ನೈತಿಕ ನೀಚತನ ಹೆಚ್ಚುತ್ತಿದ್ದುದನ್ನು ಹೆಚ್ಚುಕಡಮೆ ಎಲ್ಲ ನಿದರ್ಶನಗಳಲ್ಲಿಯೂ ನಾನು ಅವಲೋಕಿಸಿದೆ ಅತಿ ಕಡಮೆಯಾಗಿ ಬಣ್ಣಿಸಿ ಹೇಳುವುದಾದರೆ ನೈತಿಕ ಹೋರಾಟವಾದಕ್ಕೆ ಸಾತ್ವಿಕ ಪ್ರತಿಭಟನೆಯನ್ನು ಅಲ್ಲಿನ ಬಡವರು ಮುಂದುವರಿಸಿದಂತೆ ನಮ್ಮ ಹಣವಂತರು ಮಾಡಲಿಲ್ಲ. ಕಡುಬಡವ

ನಿಗೆ ಉಂಟಾದಷ್ಟು ಆತ್ಮವಿಶ್ವಾಸದ ನೋವು ಹಣವಂತನಿಗೆ ಉಂಟಾಗಲಿಲ್ಲ ಅಪಾಯ ಕ್ಷೇತ್ರದಲ್ಲಿ ಕಾಲಿಡುವ ಅಂಜಿಕೆ ನನಗಿಲ್ಲದಿದ್ದರೆ, ನಮ್ಮಲ್ಲಿನ ಆಗು ಹೋಗುಗಳಿಗೇ ಬಂದು ಐಶ್ವರ್ಯಪ್ರಾಪ್ತಿ ನಿಜವಾದ ಪ್ರಗತಿಗೆ ಹೇಗೆ ಅಡ ಚಣೆಯಾಗಿದೆಯೆಂಬುದನ್ನು ತೋರಿಸುತ್ತಿದ್ದೆ

ನೀತಿಯ ಮೂಲ್ಯಗಳನ್ನು ಅಲಕ್ಷಿಸುವ, ದುರ್ಲಕ್ಷಿಸುವ ಅರ್ಥಶಾಸ್ತ್ರ ವೆಲ್ಲ ಅಸತ್ಯ ಅಹಿಂಸೆಯ ನಿಯಮವನ್ನು ಅರ್ಥಶಾಸ್ತ್ರದ ಆಧಿಪತ್ಯಕ್ಕ ವಿಸ್ತರಿಸುವುದೆಂದರೆ ಅಂತರರಾಷ್ಟ್ರೀಯ ವಾಣಿಜ್ಯ ನಿಯಮಕ್ಕೆ ನೀತಿಯ ಮೂಲ್ಯಗಳ ಅನ್ವಯವೂ ವಿಚಾರಣೀಯ ಅಂಶವೆನ್ನುವುದಕ್ಕೆ ಚಾಚೂ ಕಡಮೆಯಲ್ಲ (ಯಂಗ್ ಇಂಡಿಯಾ ೨೮-೧೨-೨೪)

---

## ಅಧ್ಯಾಯ ೯

# ವ್ರತದೀಕ್ಷೆಯ ನೀತಿನಿಷ್ಠೆ

ಯಾರು ಉಕ್ಕಿನ ಖಡ್ಗದ ಪ್ರಾಮಾಣಿಕತೆಯನ್ನು ಕಲಿಯದಿರು ವರೋ ಯಾರು ಕೊಟ್ಟ ಭಾಷೆಗಳನ್ನು 'ಮೀಡ್ ಮತ್ತು ಪರ್ಷಿಯನ್ ಕಾನೂನಿ'ನಂತೆ ಬಗ್ಗಿಸಲಾರದವು ಒಡೆಯಲಾರದವು ಎಂಬ ಅಭಿಪ್ರಾಯ ಪ್ರಪಂಚಕ್ಕಿರುವುದಿಲ್ಲವೋ ಅಂಥ ಜನಗಡಣ ತಮ್ಮನ್ನು ಒಂದು ಜನಾಂಗ ವನ್ನಾಗಿಸಿಕೊಳ್ಳಲಾರದು ಮಹತ್ಕಾರ್ಯಗಳನ್ನು ಮಾಡಲಾರರು ಇದು ನನ್ನ ಪೂರ್ತಿ ನಿಶ್ಚಿತ (ಒಂದು ಭಾಷಣದಿಂದ. ೨೭-೩-೨೭)

'ನಮ್ಮ ವಾಗ್ದಾನ'ವನ್ನು ಎಷ್ಟೇ ನಷ್ಟವಾಗಲೀ ನಡೆಸಿಕೊಡುವುದು ಅಗತ್ಯವೆಂದು ನನ್ನ ನಂಬಿಕೆ ಉತ್ಸಾಹ ಬಂದು ಬಡಿದಾಗ ಮಾತುಕೊಟ್ಟು ಸ್ವಲ್ಪಕಾಲ ಅವನ್ನಿಟ್ಟುಕೊಂಡು ತರುವಾಯ ಅದನ್ನು ಪೂರ್ತಿ ಮರೆತು ಬಿಡುವುದು ಈ ದೇಶದ ನಮ್ಮಲ್ಲಿ ಒಂದು ವಾಡಿಕೆ

(ಯಂಗ್ ಇಂಡಿಯಾ. ೭-೭-೨೭)

ಎಲ್ಲಕ್ಕಿಂತ ಮೇಲಾಗಿ ನಿಮ್ಮನ್ನು ಶುಚಿಯಾಗಿ ಶುದ್ಧವಾಗಿಟ್ಟುಕೊಳ್ಳಿ. ಜೀವವನ್ನಾದರೂ ತೆತ್ತು ಆಡಿದ ಮಾತನ್ನು ನಡೆಸಿಕೊಡುವವರಾಗಿ. (ಯಂಗ್ ಇಂಡಿಯಾ ೧೦-೧೧-೨೭)

ಇತ್ತ ಭಾಷೆಯನ್ನು ಮುರಿಯುವುದು ತಂದ ಸಾಲವನ್ನು ತೀರಿಸಲು ನಿರಾಕರಿಸುವುದಕ್ಕಿಂತ ಕಡಮೆಯಾದ ದಿವಾಳಿತನದ ಕೃತ್ಯವೇನಲ್ಲ.
(ಯಂಗ್ ಇಂಡಿಯಾ ೧೬-೯-೩೦)

ಭಾಷೆಯನ್ನು ಮುರಿವರೆ ಸತ್ಯವನ್ನು ಕೀಳಾಗಿ ಬಿಟ್ಟುಕೊಟ್ಟಂತೆ
(ಯಂಗ್ ಇಂಡಿಯಾ ೧-೫-೩೦)

ನನಗೆ ತಿಳಿದಿರುವಂತೆ ನನ್ನ ವೈಯಕ್ತಿಕ ಮತ್ತು ಸಾರ್ವಜನಿಕ ಉದ್ಯೋಗಗಳಲ್ಲಿ ನಾನೆಂದೂ ಕೊಟ್ಟ ಭಾಷೆಯನ್ನು ಭಂಗವಮಾಡಿಲ್ಲ
(ಹರಿಜನ ೨೨-೪-೩೭)

ದೀಕ್ಷೆ ಹಿಡಿಯುವುದು ಶುದ್ಧಾಂಗವಾಗಿ ಒಂದು ಧಾರ್ಮಿಕ ಕ್ರಿಯೆ, ಉದ್ವೇಗ ಬಂದು ತಟ್ಟಿದಾಗ ಅದನ್ನು ಅಂಗೀಕರಿಸಬಾರದು ಪರಿಶುದ್ಧವೂ ಸಮಾಧಾನವೂ ಆದ ಮನಸ್ಸಿನಿಂದ ದೇವರನ್ನು ಸಾಕ್ಷಿಯಾಗಿಟ್ಟುಕೊಂಡು ಅದನ್ನು ಕೈಗೊಳ್ಳಬೇಕು. ಸಾಮಾನ್ಯ ವಿರಕ್ತಿಯಿಂದ ಸಾಧ್ಯವಾಗದಿರುವ ಕೆಲಸಗಳು ಅಪೂರ್ವ ತ್ಯಾಗವನ್ನು ಅಪೇಕ್ಷಿಸುವ ಶಪಥಗಳ ಸಹಾಯದಿಂದ ಎಸಗಬಹುದು ಆದ್ದರಿಂದ ದೀಕ್ಷೆಗಳು ನಮ್ಮನ್ನು ಎತ್ತರಗೊಳಿಸಬಲ್ಲವೆಂದು ನಂಬಲಾಗಿದೆ

ಒಂದು ವ್ರತ ತೊಟ್ಟು ಅದನ್ನು ಭಂಗಮಾಡುವುದಕ್ಕಿಂತ ತೊಡದಿರುವುದೇ ಖಂಡಿತವಾಗಿ ಉತ್ತಮ, ಯಾವೊಬ್ಬನಾಗಲೀ ಶಪಥ ಮಾಡಿಕೊಳ್ಳುವಾಗ ಎಷ್ಟು ಎಚ್ಚರಿಕೆಯಿಂದಿದ್ದರೂ ಸಾಲದು ಆದರೂ ದೊಡ್ಡ ಜನ ಸಮೂಹಗಳಿಗೆ ಪ್ರತಿಜ್ಞೆಗಳ ಬಿರೋಧ್ಬಂಧಿ ಅವಶ್ಯಕವೆಂದು ನಮ್ಮ ಅಭಿಮತ. ಅವು ಮನುಷ್ಯನ ಗುಣಶೀಲವನ್ನು ವಿರಚಿಸುತ್ತವೆ ಅವು ಇತ್ತ ಕಡೆ ಮನಸ್ಸು, ಚಿತ್ತ ಚಂಚಲವೆಂಬುದನ್ನು ತಿಳಿಸುತ್ತವೆ ಅತ್ತ ಕಡೆ ಬಲಿಷ್ಠ ಮನಸ್ಸುಗಳಿಗೆ ಅವಿಂದ ಇನ್ನೊಂದು ಬೆಂಬಲ. ಮದ್ಯಪಾನ ವರ್ಜನೆಯ ಪ್ರತಿಜ್ಞೆಗಳಿಂದ ಆಗಿರುವ "ಉತ್ಕೃಷ್ಟ" ಪರಿಣಾಮ ಪ್ರತಿಯೊಬ್ಬನಿಗೂ ಗೊತ್ತು ಅಂಥವು ಒದಗಿಸಿದ ಆಶ್ರಯದಿಂದ ಅನೇಕರು ಕುಡಿತದ ಸೆಳವಿಗೆ ತುತ್ತಾಗಿದ್ದಾರೆ

ದೀಕ್ಷಾ ಪ್ರತಿಜ್ಞೆಗೆ ಒಂದು ಕಾರ್ಯವನ್ನು ನಿಶ್ಚಯವಾಗಿ ತಪ್ಪದೆ ಮಾಡಿಯೇ ತೀರುವೆನೆಂಬ ಸಂಕಲ್ಪ ಘನ ಉದ್ದೇಶಕ್ಕೆ ಸಂಬಂಧಿಸಿರಬೇಕು ಉದ್ದೇಶ ಸಂಕಲ್ಪಗೊಳ್ಳುವವನನ್ನು ಮೇಲಕ್ಕೆತ್ತಲು ಶಕ್ತವಾಗಿರಬೇಕು ಒಂದು ಸಮಕೋನ ಇತರ ಕೋನಗಳಿಗೆ ಹೇಗೋ ದೀಕ್ಷಾ ಪ್ರತಿಜ್ಞೆ ಇತರ ಉಪೇಕ್ಷೆಯ ಮನೋನಿಶ್ಚಯಗಳಿಗೆ ಹಾಗೆ. ಅಗೋಚರವಾದ ಕರಾರು ವಾಕ್ಕು ಅಳತೆಯನ್ನು ಹೇಗೆ ಸಮಕೋನ ತೋರಿಸುತ್ತದೆಯೋ ಹಾಗೆ ಶಪಥವನ್ನು ಕೈಕೊಂಡು ಅದನ್ನು ಸರಿಯಾಗಿ ಅನುಷ್ಠಾನ ಮಾಡುವ ಪುರುಷ ಅನಿವಾರ್ಯವಾದ ಕರಾರುವಾಕ್ಕು ಅಳತೆಯನ್ನು ತನ್ನಲ್ಲಿಯೇ ತೋರಿಸಿಕೊಡುತ್ತಾನೆ (ಯಂಗ್ ಇಂಡಿಯಾ, ೨೯-೬-೧೯)

ಯಾವಾತ ದೈವಭೀರುವಾಗಿ, ದೇವರಲ್ಲಿ ದುರ್ಜೇಯ ನಂಬಿಕೆಯನ್ನು ಇಟ್ಟಿರುವನೋ ಆತ ಮಾತ್ರ ಮಹಾಪ್ರತಿಜ್ಞೆಗಳನ್ನು ಸ್ವೀಕರಿಸಬಲ್ಲ. (ಹರಿಜನ. ೧೭-೭-೩೮)

ಭಾಷೆಯನ್ನು ಒಂದು ಸಾರಿ ಕೊಟ್ಟಮೇಲೆ ಯೋಗ್ಯ ಉದ್ದೇಶದಿಂದ ದೀಕ್ಷೆಯನ್ನು ಒಂದು ಸಾರಿ ತೊಟ್ಟ ಮೇಲೆ ಅದನ್ನು ಮುರಿಯಬಾರದೆಂದು ನನ್ನ ಧರ್ಮ ಬೋಧಿಸುತ್ತದೆ ನನಗೆ (ಯಂಗ್ ಇಂಡಿಯಾ. ೯-೯-೨೪)

ಕೆರಳಿಸುವ ಯಾವುದೋ ಪ್ರಭಾವಕ್ಕೆ ಸಿಕ್ಕಿ ವ್ರತ ಹಿಡಿಯುವುದು ಸುಲಭವೇ ಸರಿ ಆದರೆ ಮುಂದೆ ಮುಖ್ಯವಾಗಿ ಪ್ರಲೋಭನೆಗಳ ನಡುವೆ ಅದನ್ನು ಉಳಿಸಿಕೊಳ್ಳುವುದು ಕಷ್ಟ

(ಯಂಗ್ ಇಂಡಿಯಾ. ೨೨-೯-೨೫)

ನನ್ನ ಸ್ವಂತ ಅಭಿಪ್ರಾಯದಂತೆ, ಇತರ ಅನೇಕರ ಅಭಿಪ್ರಾಯದಂತೆ ನಮ್ಮಲ್ಲಿ ವಿಶೇಷ ಘಟ್ಟಿಗರಾದವರಿಗೂ ಭಾಷೆ ದೀಕ್ಷೆಗಳು ಅವಶ್ಯಕ ಕೊಟ್ಟಮಾತು ಸಮಕೋನದಂತೆ ಹತ್ತಿರ ಹತ್ತಿರ ೯೦ ಡಿಗ್ರಿಯಲ್ಲ, ಖಚಿತವಾಗಿ ಆಚೆ ಈಚೆ ಅತ್ಯಲ್ಪ ಒಲೆದರೂ ಅದು ಸಮಕೋನ ಸಲ್ಲಿಸುವವ ಹೋನ್ನತ ಉದ್ದೇಶಕ್ಕೆ ಅಪ್ರಯೋಜಕ ಆತ್ಮಸಂತೋಷದಿಂದ ಕೊಟ್ಟ ಭಾಷೆ ತೂಗುಗುಂಡಿನಂತೆ ಮನುಷ್ಯನನ್ನು ನೇರವಾಗಿ ಇರಿಸಿ ಎಲ್ಲಾದರೂ ತಪ್ಪು ಹೆಜ್ಜೆ ಇಡುತ್ತಿದ್ದರೆ ಎಚ್ಚರಿಸುತ್ತದೆ. ಸಾರ್ವತ್ರಿಕ ವ್ಯಾಪ್ತಿಯುಳ್ಳ ನೇಮಗಳ ಅಪೇಕ್ಷೆ ಬೇರೆ, ವ್ಯಕ್ತಿಯೊಬ್ಬನಿಗೆ ಅನ್ವಯಿಸುವ ಶಪಥದ

ಅಭೀಪ್ಸೆ ಬೇರೆ ಆದ್ದರಿಂದಲೇ ಎಲ್ಲ ಭಾರಿ ಸುವ್ಯವಸ್ಥಿತ ಸಂಸ್ಥೆಗಳಲ್ಲಿಯೂ ನೇಮಘೋಷಣೆಯ ಪದ್ಧತಿ ಅನುಸರಣೆಯಲ್ಲಿದೆ. ಅದೂ ಅಲ್ಲದೆ ಲಿಖಿತವಾದ ಕರಾರು ನಾವು ಮಾಡುವುದಾಗಿ ಒಪ್ಪಿರುವುದನ್ನು ನಮ್ಮ ನೆನಪಿಗೆ ಪುನಃ ತರುತ್ತದೆ. ಜ್ಞಾಪಕಶಕ್ತಿ ಬಲು ಕೃಶವಾದ ಪದಾರ್ಥ.

(ಯಂಗ್ ಇಂಡಿಯಾ. ೧-೧೦-೨೫)

ದೀಕ್ಷಾಪ್ರತಿಜ್ಞೆಗಳನ್ನು ಪ್ರತಿದಿನವೂ ಪುನರುಚ್ಚರಿಸುವುದು ಬೇರೆ ಪಂಗಡಕ್ಕೆ ಸೇರುತ್ತದೆ. ದಿನವೂ ಏಳುವಾಗ ಮಲಗುವಾಗ ಶ್ರದ್ಧೆಯ ಸಾಧಕನಿಗೆ ಅದು ಅವನ ನಡವಳಿಕೆಯನ್ನು ವ್ಯವಸ್ಥೆಗೊಳಿಸುವ ಹನ್ನೊಂದು ಶಪಥಗಳಿಗೆ ಅವನು ವಿಧೇಯನೆಂಬುದನ್ನು ನೆನಪಿಗೆ ತರುತ್ತದೆ. ಸುಮ್ಮನೆ ಪಠಿಸುವುದರಿಂದಲೂ ಪುಣ್ಯ ಬರುತ್ತದೆಂಬ ಭ್ರಾಂತಿಯಿಂದ ಅವನು ಯಾಂತ್ರಿಕ ರೀತಿಯಲ್ಲಿ ಉಚ್ಚರಿಸಿದರೆ ಅದರ ಪ್ರಭಾವ ನಷ್ಟವಾಗುವುದೇನೋ ದಿಟ. ನೀನು ಕೇಳಬಹುದು "ಪ್ರತಿಜ್ಞಾ ಪುನಶ್ಚರಣೆಯಿಂದೇನು? ಅವನ್ನು ಹೂಡಿರುವೆಯೆಂಬುದು ನಿನಗೆ ಗೊತ್ತು, ಅವನ್ನು ನೀನು ಆಚರಿಸಲೇಬೇಕು" ಈ ವಾದದಲ್ಲಿ ಶಕ್ತಿಯಿದೆ. ಆದರೂ ಸಾವಧಾನದಿಂದ ಮಾಡಿದ ಪುನಶ್ಚರಣೆ ಮನೋನಿಶ್ಚಯಕ್ಕೆ ಉತ್ತೇಜನ ನೀಡುತ್ತದೆಂಬುದು ಅನುಭವದ ಮಾತು. ಬಲವರ್ಧಕ ಪಾನೀಯಗಳು ನಿರ್ಬಲ ಶರೀರಕ್ಕೆ ಹೇಗೋ ದೀಕ್ಷಾ ಶಪನಗಳು ನಿರ್ಬಲ ಮನಸ್ಸಿಗೂ ಆತ್ಮಕ್ಕೂ ಹಾಗೆ. ಆರೋಗ್ಯ ಶರೀರಕ್ಕೆ ಬಲವರ್ಧಕಗಳು ಅನಾವಶ್ಯಕವಾಗಿರುವಂತೆ ಘಟ್ಟಿ ಮನಸ್ಸು ಶಪಥಗಳೂ ಅವುಗಳ ದಿನಚರಿ ಜ್ಞಾಪಕವೂ ಇಲ್ಲದೆ ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳಬಲ್ಲುದು. ಹೀಗಿದ್ದರೂ ಶಪಥ ವಿಚಾರವನ್ನು ಪರೀಕ್ಷಿಸಿದರೆ, ಅವುಗಳ ಆಗತ್ಯ ನಮಗೆ ಇರುವಷ್ಟುಮಟ್ಟಿಗೆ ಸುಮಾರಾಗಿ ನಾವೆಲ್ಲರೂ ನಿರ್ಬಲರಾಗಿರುವುದು ಪ್ರಕಟವಾಗುತ್ತದೆ.

(ಹರಿಜನ. ೨೭-೫-೪೬)

ಚಿಕ್ಕಂದಿನಿಂದಲೇ ವ್ರತ ಕೈಗೊಳ್ಳುವುದು ನನ್ನ ರೂಢಿ ಆಗಿರುವುದರಿಂದ ಆ ಅಭ್ಯಾಸವನ್ನು ಕುರಿತು ನನಗೆ ಬಲವಾದ ಪಕ್ಷಪಾತ. ಇದು ನನ್ನನ್ನು ಅನೇಕ ಉತ್ಕಟ ಸ್ಥಿತಿಗಳಲ್ಲಿ ಸಂರಕ್ಷಿಸಿದೆ. ಹಳ್ಳಕ್ಕೆ ಬೀಳುವುದರಲ್ಲಿದ್ದ ಇತರರನ್ನೂ ಅದು ಉದ್ಧರಿಸಿರುವುದನ್ನು ನಾ ಕಂಡಿದ್ದೇನೆ.

ವ್ರತರಹಿತ ಜೀವನವು ಲಂಗರಿಲ್ಲದ ಹಡಗಿನಂತೆ ಅಥವಾ ಘನವಾದ ಬಂಡೆಯನ್ನು ಬಿಟ್ಟು ಕುಸಿಯುವ ಉಸುಕಿನ ಮೇಲೆ ಕಟ್ಟಿದ ಭವನದಂತೆ. ಶೀಲ ಧರ್ಮಕ್ಕೆ ಸ್ಥಿರತೆಯನ್ನು ನಿಲುಭಾರವನ್ನೂ ದೃಢತೆಯನ್ನೂ ಕೊಡುತ್ತದೆ ವ್ರತದೀಕ್ಷೆ. ಈ ಬಹುಮುಖ್ಯ ಗುಣಗಳಿಲ್ಲದ ವ್ಯಕ್ತಿಯ ಮೇಲೆ ಯಾವ ಭರವಸೆಯನ್ನು ಇಡಬಹುದು? ಒಂದು ಒಪ್ಪಂದ ಪರಸ್ಪರ ಪ್ರತಿಜ್ಞೆಗಳ ವಿನಿಮಯವೇ ಹೊರತು ಬೇರೆ ಏನೂ ಅಲ್ಲ, ಒಬ್ಬ ಮತ್ತೊಬ್ಬನಿಗೆ ಮಾತುಕೊಟ್ಟ ಸಮಯದಲ್ಲಿಯೇ ಒಪ್ಪಂದಕ್ಕೆ ಒಳಗಾದಂತೆಯೇ ಸರಿ.

ಹಿಂದಣ ಕಾಲದಲ್ಲಿ ಅತಿಪ್ರಖ್ಯಾತ ಪುರುಷವಚನಕ್ಕೆ ಕರಾರು ಪತ್ರದಷ್ಟೇ ಬೆಲೆಯೆಂಬ ಭಾವನೆಯಿತ್ತು. ಲಕ್ಷಾಂತರ ರೂಪಾಯಿಗಳ ವ್ಯವಹಾರವನ್ನು ಬಾಯಿಮಾತಿನ ಒಡಂಬಡಿಕೆಯಿಂದಲೇ ಮುಗಿಸುತ್ತಿದ್ದರು. ಅವರು ಯಥಾರ್ಥವಾಗಿ ನಮ್ಮ ಇಡೀ ಸಾಮಾಜಿಕ ರಚನೆ ಆಡಿದ ಮಾತಿನ ವ್ರತದ ಮೇಲೆ ನಿಂತಿದೆ. ಪರಸ್ಪರ ಮಾಡಿಕೊಂಡ ಒಪ್ಪಂದಗಳ ಬಗೆಗೆ ಇಂಥ ಸ್ಥಿರತ್ವದ ಅಥವಾ ಅಂತಿಮತೆಯ ಅಂಶವಿಲ್ಲದಿದ್ದರೆ ಪ್ರಪಂಚ ಚೂರು ಚೂರಾದೀತು. ಹಿಮಾಚಲ ಪರ್ವತಶ್ರೇಣಿ ತಮ್ಮ ತಮ್ಮ ನೆಲೆಯಲ್ಲಿ ನಿಶ್ಚಲವಾಗಿ ನಿಲ್ಲಿಸಲ್ಪಟ್ಟಿವೆ ಅನಂತಕಾಲಕ್ಕೆ. ಹಿಮಾಚಲದ ಸ್ಥಿರತ್ವ ತಪ್ಪಿದರೆ ಭಾರತಕ್ಕೆ ಅಂತ್ಯ. ಸೂರ್ಯಚಂದ್ರರೂ ಇತರ ಸ್ವರ್ಗೀಯ ಪದಾರ್ಥಗಳೂ ಎಳ್ಳಷ್ಟೂ ಕ್ರಮಲೋಪವಿಲ್ಲದೆ ಚಲಿಸುತ್ತವೆ. ಹಾಗಿಲ್ಲದೇ ಹೋಗಿದ್ದರೆ ಮಾನವನ ವಿದ್ಯಮಾನವೆಲ್ಲ ಸ್ತಬ್ಧವಾಗುತ್ತಿತ್ತು. ಹಿಂದಣ ಅಗಣಿತ ಯುಗಗಳಲ್ಲಿ ಸೂರ್ಯ ತನ್ನ ಕ್ಲ್ಪಪ್ತ ಮುಹೂರ್ತದಲ್ಲಿ ತಪ್ಪದೆ ಉದಯಿಸಿದನೆಂಬುದು ನಮಗೆ ಗೊತ್ತು, ಯುಗಾಂತರದಿಂದ ವೃದ್ಧಿಯಾಗುವುದು ಕ್ಷೀಣಿಸುವುದು ಹೀಗೆ ಗಡಿಯಾರದ ಕ್ರಮದಲ್ಲಿ ಎಸಗಿದುದನ್ನು ಮುಂದೆಯೂ ಯಾವಾಗಲೂ ಎಸಗುತ್ತಾನೆ. ಆದುದರಿಂದಲೇ ನಮ್ಮ ವ್ಯವಹಾರಗಳಲ್ಲಿ ಸೂರ್ಯ ಚಂದ್ರರನ್ನು ಸಾಕ್ಷಿಗಳಾಗಿ ಕರೆಯುತ್ತೇವೆ. ಅವುಗಳ ಚಲನೆಯನ್ನನುಸರಿಸಿ ನಮ್ಮ ಪಂಚಾಂಗವನ್ನು ರಚಿಸುತ್ತೇವೆ, ಅವುಗಳ ಹುಟ್ಟುವಿಕೆ ಮುಳುಗುವಿಕೆಗಳಂತೆ ನಮ್ಮ ಕಾಲವನ್ನು ವಿಧಾಯಕ ಮಾಡಿಕೊಳ್ಳುತ್ತೇವೆ.

ಈ ದೈವಿಕ ಕಾರ್ಯಗಳನ್ನು ಆಳುವ ಸೂತ್ರ ಸಮಾನವಾಗಿ ಅನ್ವಯಿ

ಸುತ್ತದೆ ಮನುಷ್ಯರಿಗೂ. ಪ್ರತಿಜ್ಞೆಗಳಿಗೆ ಕಟ್ಟು ಬೀಳದ ವ್ಯಕ್ತಿಯ ಮೇಲೆ ಎಂದಿಗೂ ಪೂರ್ಣ ಭರವಸೆ ಇಡಲಾಗದು ಹೀಗೆ ಹೇಳುವುದು ಅತಿ ಹೆಮ್ಮೆಯ ದುರಹಂಕಾರ: ಈ ವಿಷಯ ಸ್ವಾಭಾವಿಕವಾಗಿದೆ ನನಗೆ. ಶಪಥ ಗಳಿಂದ ನನ್ನನೇಕೆ ಶಾಶ್ವತವಾಗಿ ಬಂಧಿಸಿಕೊಳ್ಳಬೇಕು? ಉತ್ಕಟ ಸಮಯದಲ್ಲಿ ನನ್ನನ್ನು ನಾನು ಪಸಂದಾಗಿ ರಕ್ಷಿಸಿಕೊಳ್ಳಬಲ್ಲೆ. ದ್ರಾಕ್ಷಾ ರಸವನ್ನು ಕುಡಿಯುವುದಿಲ್ಲವೆಂದು ನಾನೇಕೆ ಪರಮಪ್ರತಿಜ್ಞೆಯನ್ನು ಮಾಡಲಿ? ನಾನೆಂದಿಗೂ ಪಾನೋನ್ಮತ್ತನಾಗುವುದಿಲ್ಲ. ಆಗ ಈಗ ಸಂದ ರ್ಭವೊದಗಿದಾಗ ಬರುವ ಒಕ್ಕುಡಿತದ ಆಮೋದವನ್ನು ನಾನೇಕೆ ವೃಥಾ ಕಳೆದುಕೊಳ್ಳಲಿ? ಹೀಗೆ ತರ್ಕ ಮಾಡುವ ಪುರುಷನನ್ನು ಅವನ ಚಾಳಿ ಯಿಂದ ಬಿಡಿಸಲಾಗುವುದಿಲ್ಲ ಎಂದಿಗೂ

ಪ್ರತಿಜ್ಞಾಧಾರಣೆಯಿಂದ ಕಳ್ಳ ತಪ್ಪಿಸಿಕೊಳ್ಳುವುದು ಅನುಮಾನ ಪ್ರಕೃತಿಯ ಮತ್ತು ನಿರ್ಧಾರಾಭಾವದ ಕುರುಹು ನಿರ್ಧಾರರಹಿತನಾಗಿ ದ್ದಲ್ಲಿ ಪುರುಷ ಉಳಿಯುವಂಥ ಏನನ್ನೂ ಈ ಭೂಮಿಯ ಮೇಲೆ ಸಾಧಿಸ ಲಾರ ಉದಾಹರಣೆಗೆ, ದೃಢನಿಶ್ಚಯವಿಲ್ಲದೆ, ಚಿತ್ತಸ್ಥೈರ್ಯವಿಲ್ಲದೆ "ನನ್ನ ಕೈಯಲ್ಲಾಗುವವರೆಗೆ ಕಾಯುತ್ತೇನೆ" ಎಂದು ಹೇಳುವ ದಂಡನಾಯಕ ನಲ್ಲಿಯೋ ಸೈನಿಕನಲ್ಲಿಯೋ ಯಾವ ನಂಬಿಕೆಯನ್ನು ನೀನಿಡುವೆ? ಮನೆಯ ಕಾವಲುಗಾರ ತನ್ನ ಕೈಲಾದಷ್ಟು ಕಾವಲಿರುವೆನೆಂದು ನುಡಿದರೆ ಅವನ ಯಜಮಾನ ನೆಚ್ಚಿಕೆಯಿಂದ ಯಾವತ್ತೂ ನಿದ್ರಿಸಲಾರ. "ತನ್ನ ಕೈಯ ಲ್ಲಾದಷ್ಟು ರಕ್ಷಣೆ" ಎಂಬ ತತ್ವವನ್ನು ಹಿಂಬಾಲಿಸಿದ ಯಾವ ದಂಡ ನಾಯಕನೂ ಎಂದೂ ಗಳಿಸಲಿಲ್ಲ ವಿಜಯವನ್ನು

ಶಪಥ ಒಂದು ಸಮಕೋನದಂತೆ ಗಣನೆಗೆ ಬಾರದೆ ಎಲ್ಲೋ ಮೂಲೆಯಲ್ಲಿರುವ ಒಂದು ಸಮಕೋನದಿಂದ ಒಂದು ಬೃಹದಾಕೃತಿಯ ವಿರಚನೆ, ಇಲ್ಲ ವಿಕಾರ, ಇಲ್ಲ ಸೊಗಸು, ಇಲ್ಲ ಸುಭದ್ರ, ಇಲ್ಲ ಅಭದ್ರ. ಹಾಗೆಯೇ ಒಂದು ಬಾಳಗತಿಯ ಸ್ಥಿರತೆ ಅಥವಾ ಅಸ್ಥಿರತೆ ಶುಚಿ ಅಥವಾ ಅಶುಚಿಗಳು ಒಂದು ವ್ರತನಿಷ್ಠೆಯನ್ನು ಅವಲಂಬಿಸಿರಬಹುದು

ಮಿತಬುದ್ಧಿಯೂ ಚಿತ್ತಸ್ವಾಸ್ಥ್ಯವೂ ವ್ರತಾಚರಣೆಯ ನೈಜ ತಿರು ಳೆಂದು ಬೇರೆ ಹೇಳಬೇಕಾಗಿಲ್ಲ, ಮಾಡಲಸಾಧ್ಯವಾದ ಅಥವಾ ತನ್ನ ಅಳ

ವನ್ನು ಮೀರಿದ ವ್ರತವನ್ನು ಆಚರಿಸಲೆತ್ನಿಸುವುದು ವಿಚಾರಶೂನ್ಯತೆಗು ಮತ್ತು ಸಮತೆಯ ಅಭಾವದ ಲಕ್ಷಣ ಹಾಗೆಯೇ ಒಂದು ಪ್ರತಿಜ್ಞೆಗೆ ಆದರ ಸದ್ಗುಣವಾಗಲೀ ಪರಿಣಾಮದಕ್ಷತೆಯಾಗಲೀ ಕುಂದದಂತೆ ಒಂದು ನಿಷೇಧವನ್ನಿಡುವುದು ಸಾಧ್ಯ ಉದಾಹರಣೆಗೆ ಪ್ರಯಾಣದ, ಕಾಯಿಲೆಯ ಕಾಲಗಳನ್ನು ಬಿಟ್ಟು ಉಳಿದ ಕಾಲದಲ್ಲಿ ಪ್ರತಿದಿನವೂ ಕಡೆಗೆ ಒಂದು ಘಂಟೆಯಾದರೂ ನೂತು ೨೦೦ ಗಜಕ್ಕೆ ಕೊರೆಯಾಗದಂತೆ ನೂಲನ್ನು ಉತ್ಪತ್ತಿಮಾಡುವೆನೆಂದು ಪ್ರತಿಜ್ಞೆಗೈಯುವುದು ಏನೂ ತಪ್ಪಲ್ಲ. ಇಂಥ ವ್ರತ ಕ್ರಮಕ್ಕೆ ಅನುಗುಣವಾಗಿರುವುದಲ್ಲದೆ ಅನುಷ್ಠಾನಕ್ಕೂ ಸುಲಭವಾಗಿ ರುತ್ತದೆ. ಒಂದು ವ್ರತದ ತಿರುಳು ಇರುವುದು ಅದರ ಆಚರಣೆಯ ಕಷ್ಟದ ಲ್ಲಲ್ಲ, ಅದರ ನಿತ್ಯಾಭ್ಯಾಸದಲ್ಲಿ ಎದುರಾಗುವ ಕಷ್ಟನಿಷ್ಠುರಗಳಿಗೆ ಜಗ್ಗದೆ ಆದನ್ನು ಬಿಡದೆ ಹಿಡಿಯುವ ಮನೋದಾರ್ಢ್ಯದಲ್ಲಿ

(ಯಂಗ್ ಇಂಡಿಯಾ. ೨೨-೮-೨೯)

ಆತ್ಮಸಂಯಮವು ಪ್ರತಿಜ್ಞಾಧಾರಣೆಯ ನೀತಿ ನಿಯಮಕ್ಕೆ ಕೀಲುಗಲ್ಲು ಉದಾಹರಣೆಗೆ ಯಾವೊಬ್ಬನೂ ಆಣೆಯಿಟ್ಟುಕೊಳ್ಳಲಾರ ವಿಷಯ ಸ್ವೇಚ್ಛೆಗೆ ತಿಂದು ಕುಡಿದು ಮರೆಯುವುದಕ್ಕೆ ಮನಸ್ಸಿಗೆ ಬಂದಂತೆ ಮಾಡುವುದಕ್ಕ ಈ ಎಚ್ಚರಿಕೆ ಆವಶ್ಯಕ, ಏತಕ್ಕೆಂದರೆ ಶಪಥಗಳ ಮೂಲಕ ಸಂದೇಹಾಸ್ಪದ ಅರ್ಥವುಳ್ಳ ಕೃತ್ಯಗಳನ್ನು ಎಸಗುವ ಪ್ರಯತ್ನ ನಡೆದ ನಿದರ್ಶನ ನನ್ನ ಅರಿವಿಗೆ ಬಂದಿದೆ. ಕೂಲಂಕಷವಾಗಿ ವಿವೇಚನೆ ಮಾಡಿದರೆ ಅನೀತಿ ತತ್ವಕ್ಕೆ ನೆರವಾಗುವುದಕ್ಕೋಸ್ಕರ ಅದನ್ನು ಸಮರ್ಥಿಸುವುದಕ್ಕೋಸ್ಕರ ವ್ರತವನ್ನು ಉಪಯೋಗಿಸಬಾರದೆಂಬುದು ಗೋಚರವಾಗುತ್ತದೆ. ವ್ರತ ವೃತ್ತಿಯನ್ನು ಕೊಂಡೊಯ್ಯಬೇಕು ಊರ್ಧ್ವದೆಸೆಗೆ, ಎಂದೆಂದೂ ನರಕದ ದಿಕ್ಕಾದ ಅಧೋಗತಿಗಲ್ಲ

ಆದ ತಪ್ಪನ್ನು ತಿಳಿದುಕೊಂಡರೆ ಇನ್ನೊಮ್ಮೆ ಆದನ್ನು ಮಾಡುವುದಿಲ್ಲ ವೆಂದು ದೃಢಪ್ರತಿಜ್ಞೆ ತೆಗೆದುಕೊಂಡಂತೆ, ಅದೇ ಸಾಕಷ್ಟು ಪ್ರಾಯಶ್ಚಿತ್ತ, ಹಾವು ತನ್ನ ಪೊರೆಯನ್ನು ಬಿಟ್ಟು ಕಳೆಯುವಂತೆ ಮನುಷ್ಯನೂ ತನ್ನ ದುರಭ್ಯಾಸಗಳನ್ನು ಕಳೆದೆಸೆದು ತನ್ಮೂಲಕ ಪರಿಶುದ್ಧವಾಗುತ್ತಾನೆ. ಇಂಥ ಆತ್ಮ ಶುದ್ಧಿ ತಾನೇ ತಪಸ್ಸಿನ ಪೂರಯಿಕೆ ಆದರೆ ತಪ್ಪು ಅಭ್ಯಾಸಕ್ಕೆ ಬಿದ್ದವನು

ಆದರಿಂದ ಸುಲಭವಾಗಿ ಬಿಡಿಸಿಕೊಳ್ಳಲಾರ ಅಂಥವರಿಗೆಲ್ಲ ವಿವೇಚನಾ ಪೂರ್ವಕವಾಗಿ ಸಾಂಪ್ರದಾಯಿಕ ಅರ್ಥದ ಪ್ರಾಯಶ್ಚಿತ್ತ ವಿಶೇಷ ಸಹಾಯವನ್ನೀಯುವ ಸಂಭವವುಂಟು (ಹರಿಜನ. ೧೦-೯-೪೦)

ಪರಿಪೂರ್ಣತೆ ಅಥವಾ ಪಾಪಶೂನ್ಯತೆ ಬರುವುದು ದೇವರ ಕೃಪೆಯಿಂದ ಮಾತ್ರ ಯಾವ ಸಂಕೋಚವನ್ನೂ ಇಟ್ಟುಕೊಳ್ಳದೆ ಮೊರೆಹೊಕ್ಕ ಹೊರತು ಆಲೋಚನೆಯ ಮೇಲೆ ಪೂರ್ಣ ಯಾಜಮಾನ್ಯ ಅಸಾಧ್ಯ ಇದೇ ಪ್ರತಿಯೊಂದು ದೊಡ್ಡ ಧರ್ಮಗ್ರಂಥದ ಬೋಧೆ (ಆತ್ಮಕಥೆ)

ಗುರಿ ಸದಾ ನಮ್ಮಿಂದ ಆಚೆ ಸರಿಯುತ್ತದೆ ನಾವು ಹೆಚ್ಚು ಪ್ರಗತಿ ಹೊಂದಿದಷ್ಟೂ ನಮ್ಮ ಅಯೋಗ್ಯತೆ ಹೆಚ್ಚು ಅರಿವಾಗುತ್ತದೆ ಪ್ರಯತ್ನದಲ್ಲಿ ಕುಳಿತಿದೆ ತೃಪ್ತಿ ಗುರಿಯನ್ನು ತಲಪುವುದರಲ್ಲಲ್ಲ ತುಂಬು ಪ್ರಯತ್ನವೇ ತುಂಬು ವಿಜಯ (ಯಂಗ್ ಇಂಡಿಯಾ. ೯-೩-೨೨)

ಕಲ್ಪಿತವಾದ ಹೊರಗಣ ವೈರಿಗಳೊಡನೆ ಹೋರಾಡುತ್ತ, ಒಳಗಿರುವ ಅಸಂಖ್ಯಾತ ವೈರಿಗಳ ಮೇಲೆ ತನ್ನ ಕಿರುಬೆರಳನ್ನೂ ಎತ್ತಲು ಸಾಮರ್ಥ್ಯವಿಲ್ಲದವ ಅಥವಾ ಇನ್ನೂ ಕೆಟ್ಟದಾಗಿ ಅವನ್ನು ಮಿತ್ರರೆಂದು ತಪ್ಪು ತಿಳಿದುಕೊಳ್ಳುವನ, ಯೋಧನೇ ಅಲ್ಲ (ಹರಿಜನ ೬-೪-೩೬)

ಇಂದ್ರಿಯನಿಗ್ರಹವೂ ಜಿತೇಂದ್ರಿಯತ್ವವೂ ತಪ್ಪೆಂದೂ ಲೈಂಗಿಕ ಪಿಪಾಸೆಯನ್ನು ತಡೆಯಿಲ್ಲದೆ ತೀರಿಸಿಕೊಳ್ಳುವುದೂ ಅನಿರ್ಬಂಧ ಪ್ರೇಮವೂ ಅತಿ ನೈಸರ್ಗಿಕವಾದ ಸಂಗತಿಯೆಂದು ಈಗ ಹೇಳಲಾಗುತ್ತಿದೆ · ಇದಕ್ಕಿಂತ ಹೆಚ್ಚು ವಿನಾಶಕಾರಕವಾದ ಮೂಢನಂಬಿಕೆ ಮತ್ತೊಂದಿಲ್ಲ ಆದರ್ಶವನ್ನು ಸಾಧಿಸುವುದಕ್ಕೆ ನೀನು ಅಸಮರ್ಥನಾಗಿರಬಹುದು, ನಿನ್ನ ಮನುಷ್ಯಸ್ವಭಾವ ನಿರ್ಬಲವಾಗಿರಬಹುದು, ಆದರೆ ಆ ಕಾರಣದಿಂದ ಆದರ್ಶವನ್ನು ಕೆಳಕ್ಕಿಳಿಸಬೇಡ, ಅಧರ್ಮವನ್ನು ನಿನ್ನ ಧರ್ಮವನ್ನಾಗಿ ಮಾಡಿಕೊಳ್ಳಬೇಡ. (ಹರಿಜನ ೨೪-೪ ೩೭)

ಗಂಡಸು ಹೆಂಗಸರಿಬ್ಬರೂ ಇದನ್ನು ತಿಳಿದುಕೊಳ್ಳಬೇಕು. ಲೈಂಗಿಕ ಹಸಿವನ್ನು ತೀರಿಸದೆ ನಿಲ್ಲುವುದರ ಫಲವಾಗಿ ಉಂಟಾಗುವುದು ರೋಗವಲ್ಲ, ಆರೋಗ್ಯ ಮತ್ತು ಕಸುವು, ಎಂದರೆ ಮನಸ್ಸು ದೇಹದೊಡನೆ ಸಹಕರಿಸಬೇಕು, ಅಷ್ಟೆ. (ಯಂಗ್ ಇಂಡಿಯಾ. ೨೬-೯-೨೧)

ಹಿಮಾಚಲವನ್ನು ಹತ್ತಿದ್ದರಿಂದ ಆಬ್ಬಬ್ಬ ಎಂದರೆ ಉಲ್ಲಾಸೋತ್ಕರ್ಷದ ಭವ್ಯ ವಿಜಯದ ಒಂದು ತಾತ್ಕಾಲಿಕ ಭಾವ ಒದಗಬಹುದು. ಆದರೆ ಸ್ವಾರ್ಥವನ್ನು ಗೆದ್ದರೆ ಬರುವ ಬಹುಮಾನ ಆಧ್ಯಾತ್ಮಿಕ ಆನಂದ, ಕ್ಷಯವನ್ನು ಕಂಡರಿಯದು ಅದು, ಯಾವಾಗಲೂ ಹೆಚ್ಚು ಹೆಚ್ಚಾಗುತ್ತ ಹೋಗುತ್ತದೆ (ಹರಿಜನ ೨೦-೪-೪೭)

ದೇವರು ತನ್ನ ಭಕ್ತರನ್ನು ಹೇಗೂ ಹಾಗೂ ಚೆನ್ನಾಗಿ ದಂಡಿಸುತ್ತಾನೆ, ಆದರೆ ದಂಡನ ಎಂದಿಗೂ ಅವರಿಗಿರುವ ಸಹಿಸುವ ಸಾಮರ್ಥ್ಯಕ್ಕೆ ಮೀರಿದುದಲ್ಲ, ತಾನು ಅವರಿಗೆ ವಿಧಿಸುವ ಮಹಾಕ್ಲೇಶವನ್ನು ಈ ಕಡೆಯಿಂದ ಆ ಕಡೆಗೆ ದಾಟುವುದಕ್ಕೆ ಸಾಕಾದ ಶಕ್ತಿಯನ್ನು ನೀಡುತ್ತಾನೆ.

(ಯಂಗ್ ಇಂಡಿಯಾ. ೧೯-೨-೨೫)

ಕೆಲವು ವೇಳೆ ತಾನು ಯಾವ ನರನನ್ನು ಅನುಗ್ರಹಿಸಬೇಕೆಂದಿರುವನೋ ಅವನಿಗೆ ಸಂಕಟದ ಪರಾಕಾಷ್ಠೆಯನ್ನು ಕೊಡುತ್ತಾನೆ

(ಯಂಗ್ ಇಂಡಿಯಾ. ೧೧-೬-೨೧)

ದೇವರ ಕೈವಶದಲ್ಲಿರುವ ತೃಣಗಳು ನಾವು, ಅಷ್ಟೆ ಎತ್ತ ಬೇಕಾದರೂ ನಮ್ಮನ್ನು ಊದಿಬಿಡುವುದು ಅವನ ಇಚ್ಛೆಗೆ ಮಾತ್ರ ಸೇರಿದ್ದು ಅವನ ಸಂಕಲ್ಪವನ್ನು ವಿರೋಧಿಸುವ ಸಾಮರ್ಥ್ಯ ನಮಗಿಲ್ಲ

(ಯಂಗ್ ಇಂಡಿಯಾ. ೧೫-೪-೨೪)

ಮನುಷ್ಯ ಏನೇನೂ ಅಲ್ಲ ನೆಪೋಲಿಯನ್ ಬಹಳ ನಿಯೋಜನೆಗೈದು ಸೆಂಟ್ ಹಲೀನಾದಲ್ಲಿ ತಾನೊಬ್ಬ ಬಂದಿಯಾದದ್ದನ್ನು ಕಂಡ ಬಲಶಾಲಿ ಕೈಸರ್ ಯೂರೋಪಿನ ಕಿರೀಟಕ್ಕಾಗಿ ಹೆಬ್ಬಯಕೆ ತೊಟ್ಟ, ಇಷ್ಟಮಿತ್ರರಿಲ್ಲದ ಒಬ್ಬ ಸಾಧಾರಣ ಗೃಹಸ್ಥನ ದರ್ಜೆಗೆ ಅವನನ್ನು ಇಳಿಸಿ ಕೂರಿಸಿದರು ದೈವಸಂಕಲ್ಪ ಹಾಗಿತ್ತು ಇಂಥ ನಿದರ್ಶನಗಳನ್ನು ಮನನಗೈದು ವಿನೀತರಾಗೋಣ ನಾವು (ಯಂಗ್ ಇಂಡಿಯಾ. ೯-೧೦-೨೪)

ಅಧ್ಯಾಯ ೧೦

# ನಮ್ರತೆಯ ಸದ್ಗುಣ

ನೀರನ್ನು ನೋಡಿ ಜಲರೂಪದಲ್ಲಿರುವಾಗ ಅದು ನೆಲದ ಮೇಲೆ ಇದ್ದಲ್ಲಿಯೇ ಇರುತ್ತದೆ ಆವಿಯ ರೂಪಕ್ಕೆ ತೆಳುಗೊಳಿಸಿದ ಹೊರತೂ ಅದು ಮೇಲಕ್ಕೇರದು ಆವಿಯಾಗಿ ತೆಳುಗೊಂಡಿತೆಂದರೆ ತಕ್ಷಣವೇ ಅದು ಗಗನಕ್ಕೇರಿ ಅಲ್ಲಿ ಮೇಘಗಳಾಗಿ ಆಕೃತಿ ಮಾರ್ಪಾಟನ್ನು ಪಡೆದು, ಮಳೆಯ ತೆರನಾಗಿ ಕೆಳಕ್ಕೆ ಧುಮ್ಮಿಕ್ಕಿ ಭೂಮಿಯನ್ನು ಫಲಪುಷ್ಪವನ್ನಾಗಿ ಮಾಡಿ ಹರಸುತ್ತದೆ ನಾವೂ ನೀರಿನಂತೆ ನಮ್ಮಲ್ಲಿರುವ ಸ್ವಾರ್ಥತೆ ಅಳಿಯುವುದಕ್ಕೆ ಎಷ್ಟೆಷ್ಟು ಬೇಕೋ ಅಷ್ಟಷ್ಟು ತೆಳುವಾಗಲು ಶ್ರಮಿಸಿ ಶಾಶ್ವತ ಸರ್ವೋದಯಕ್ಕೋಸ್ಕರ ಲೀನರಾಗಬೇಕು ಅನಂತದಲ್ಲಿ, ಕಡೆಗೆ

(ಯಂಗ್ ಇಂಡಿಯಾ. ೧೨-೧-೨೮)

ತಾನೇ ಒಂದು ಆಚಾರವಾಗಲಾರದು ನಮ್ರತೆ ಪ್ರಯತ್ನಪೂರ್ವಕವಾಗಿ ಅಭ್ಯಾಸಗೈಯುವುದಕ್ಕೆ ಒಗ್ಗುವುದಿಲ್ಲ ಅದು ಹೀಗಿದ್ದರೂ ಅದು ಅಹಿಂಸೆಗೆ ಬಿಡಲಾಗದ ಒಂದು ಪರೀಕ್ಷೆ ಅಹಿಂಸೆ ಯಾರಲ್ಲಿದೆಯೋ ಅವನಿಗೆ ಸ್ವಭಾವದ ಒಂದು ಭಾಗವೇ ಆಗಿಬಿಡುತ್ತದೆ ಅದು

ನಮ್ರತೆ ಆಚಾರಗಳಲ್ಲಿ ಒಂದಾಗಿರದಿದ್ದರೂ ಅವಲ್ಲಿ ಯಾವೊಂದನ್ನು ತೆಗೆದುಕೊಂಡರೂ ಅದರಷ್ಟೇ ಅದು ಮುಖ್ಯ, ಪ್ರಾಯಶಃ ಅದಕ್ಕಿಂತ ಹೆಚ್ಚು ಮುಖ್ಯ ಎಂದರೆ, ಅದು ಎಂದೂ ಅಭ್ಯಾಸದಿಂದ ಯಾವೊಬ್ಬನಿಗೂ ಬಂದಿಲ್ಲ ಪ್ರೇಮದ ಹಾಗೆ ಸತ್ಯವನ್ನೂ ಅಭ್ಯಾಸದಿಂದ ಬೆಳೆಸಿಕೊಳ್ಳಬಹುದು ಆದರೆ ನಮ್ರತೆಯನ್ನು ಬೆಳೆಸಿಕೊಳ್ಳುವುದು ಠಕ್ಕತನವನ್ನು ಬೆಳೆಸಿಕೊಳ್ಳುವುದಕ್ಕೆ ಜೋಡಿ ಇಲ್ಲಿ ಹಸನಾದ ನಡೆವಳಿಕೆ ಅಥವಾ ನಾಗರಿಕ ವಿನಯದೊಡನೆ ಸೇರಿಸಿ ಭ್ರಮೆಗೊಳ್ಳಲಾಗದು ಎದೆ ತುಂಬ ಅತಿಕಹಿ ಒಬ್ಬನ ಮೇಲೆ ಹುದುಗಿದ್ದರೂ ಅವನ ಮುಂದೆ ಕೆಲವು ಸಾರಿ ಉದ್ದಕ್ಕೆ ಅಡ್ಡಬೀಳುವ ಮನುಷ್ಯನುಂಟು ಇದು ನಮ್ರತೆಯಲ್ಲ, ಕೃತ್ರಿಮ. ಪುರುಷನೊಬ್ಬ ಪೂರ್ತಿ ರಾಮನಾಮ ಜಪಿಸುತ್ತಲೋ ಅಥವಾ

ಜಪಮಣಿಗಳನ್ನು ಎಣಿಸುತ್ತಲೋ ಜ್ಞಾನಿಯಂತೆ ಜನಗಳ ನಡುವೆ ಆಡ್ಡಾಡಬಹುದು, ಆದರೆ ಅವನ ಹೃದಯದಲ್ಲಿ ಸ್ವಾರ್ಥವಿದ್ದರೆ ಅವನು ಸಾಧುವಲ್ಲ, ಬರೀ ಡಾಂಭಿಕ

ನಮ್ರವ್ಯಕ್ತಿಗೆ ತನ್ನ ನಮ್ರತೆಯ ಅರಿವೇ ಇರುವುದಿಲ್ಲ ಸತ್ಯ, ಅದರಂಥ ಇತರ ಗುಣಗಳು ಪ್ರಾಯಶಃ ಅಳತೆಗೆ ಸಿಕ್ಕುತ್ತವೆ, ಆದರೆ ನಮ್ರತೆ ಸಿಕ್ಕಲಾರದು ಒಳಗೆ ಹುಟ್ಟಿದ ಸಹಜ ನಮ್ರತೆ ಯಾವಾಗಲೂ ಗುಪ್ತವಾಗಿರಲಾರದು, ಆದರೂ ಕೂಡ ಅದನ್ನು ಹೊಂದಿರುವ ವ್ಯಕ್ತಿಗೆ ಅದಿದೆಯೆಂಬುದು ಗೊತ್ತಿಲ್ಲ ವಸಿಷ್ಠ ವಿಶ್ವಾಮಿತ್ರರ ಕಥೆ ಈ ಪ್ರಸ್ತಾಪದಲ್ಲಿ ಒಂದು ಬಲು ಸೊಗಸಿನ ನಿದರ್ಶನ ನಮ್ರತೆಯುಳ್ಳವನನ್ನು ತಾನು ಏನೊಂದೂ ಅಲ್ಲವೆಂದು ಅಂದುಕೊಳ್ಳುವಂತೆ ಮಾಡಬೇಕು ನಮ್ರತೆ ಯಾವನೋ ಒಬ್ಬ ತನ್ನಲ್ಲಿ ಏನೋ ವಿಶೇಷ ಗುಣವಿದೆಯೆಂದು ಊಹಿಸಿಕೊಂಡ ಕೂಡಲೇ ಅಲ್ಲಿಗೆ ನೇರವಾಗಿ ಬರುತ್ತದೆ ಅಹಂಭಾವ ಆಚಾರ ನಿಷ್ಠೆಯುಳ್ಳ ವ್ಯಕ್ತಿಯೊಬ್ಬ ತನ್ನ ನಿಷ್ಠೆಯನ್ನು ಕುರಿತು ಗರ್ವಪಟ್ಟರೆ, ಆದರ ಬೆಲೆಯಲ್ಲಿ ಎಲ್ಲವನ್ನೂ ಅಲ್ಲದಿದ್ದರೆ ಬಹಳ ಭಾಗವನ್ನು ಕಳೆದುಕೊಳ್ಳುತ್ತಾನೆ. ತನ್ನ ಸದ್ಗುಣದಿಂದ ಗರ್ವಿತನಾದವ ಅನೇಕ ವೇಳೆ ಸಮಾಜಕ್ಕೆ ಒಂದು ಪೀಡೆ ಆದಕ್ಕಾಗಿ ಅವನಿಗೆ ಸಮಾಜದಿಂದ ಪುರಸ್ಕಾರವಿಲ್ಲ ಅವನಿಗೂ ಅದರಿಂದ ಲಾಭವೇನೂ ದೊರಕಲಾರದು ಸ್ವಲ್ಪ ಯೋಚನೆ ಮಾಡಿ ನೋಡಿದರೆ ಸಾಕು ನಮಗೆ ಮಂದಟ್ಟಾಗುತ್ತದೆ ಜೀವರಾಶಿಯೆಲ್ಲ ಈ ವಿಶ್ವದಲ್ಲಿ ಕೇವಲ ಒಂದು ಅಣುವಿಗಿಂತ ದೊಡ್ಡದಲ್ಲ ದೇಹ ಹೊತ್ತ ಜೀವಿಗಳಾಗಿ ನಾವು ಇರುವುದು ಶುದ್ಧಾಂಗವಾಗಿ ಕ್ಷಣಿಕ. ಅನಂತ ಕಾಲದಲ್ಲಿ ನೂರು ವರ್ಷಗಳು ಯಾವ ಲೆಕ್ಕ? ಅಹಂಭಾವದ ಸಂಕೋಲೆಯನ್ನು ಕಡಿದು ಹಾಕಿ ನಮ್ರತೆಯ ಮಹಾರ್ಣವದಲ್ಲಿ ಮುಳುಗಿ ಲೀನರಾದರೆ ಆದರ ಗಂಭೀರ ಗೌರವದಲ್ಲಿ ನಮಗೆ ಪಾಲುಂಟು ನಾವು ಏನೋ ಗಣ್ಯವ್ಯಕ್ತಿಗಳೆಂದು ಭಾವಿಸಿಕೊಳ್ಳುವುದು ದೇವರಿಗೂ ನಮಗೂ ಮಧ್ಯೆ ಒಂದು ತಡೆಗಟ್ಟನ್ನು ಎಬ್ಬಿಸಿಕೊಂಡಂತೆ ನಾವು ಗಣ್ಯವ್ಯಕ್ತಿಗಳೆಂದು ಭಾವಿಸುವುದನ್ನು ನಿಲ್ಲಿಸಿದಾಗ ದೇವರೊಡನೆ ಒಂದಾಗುತ್ತೇವೆ ಉದಧಿಯಲ್ಲಿರುವ ಒಂದೊಂದು ತೊಟ್ಟಿಗೂ ತಂದೆಯ ಮಹತ್ವದಲ್ಲಿ ಕಿಂಚಿ

ದ್ದಾಗವುಂಟು, ಆ ವಿಷಯ ಅದಕ್ಕೆ ಅರಿವಿಲ್ಲದಿದ್ದರೂ ಆದರೆ ಉದಧಿಯಿಂದ ಸ್ವತಂತ್ರ ಇರುವಿಕೆಯನ್ನು ಅದು ಕೈಗೊಂಡ ತಕ್ಷಣವೇ ಪೂರಾ ಒಣಗಿಹೋಗುತ್ತದೆ ಇಹದ ಬಾಳು ಬರೀ ನೀರ್ಗುಳ್ಳೆಯೆಂದು ನಾವು ಹೇಳುವಾಗ ಅತಿಶಯೋಕ್ತಿಯನ್ನು ಎಸಗುವುದಿಲ್ಲ ಸೇವೆಯ ಜೀವನವು ನಮ್ರತೆಯ ಜೀವನವಾಗಿರಬೇಕು ಇತರರಿಗಾಗಿ ತನ್ನನ್ನೇ ಬಲಿದಾನ ಕೊಡಲಿರುವವನಿಗೆ ತನಗಾಗಿ ಒಂದು ಬೆಚ್ಚನೆಯ ಪ್ರತ್ಯೇಕ ಸ್ಥಾನವನ್ನು ಕಾದಿರಿಸಿಕೊಳ್ಳುವುದಕ್ಕೆ ಕೊಂಚವೂ ವೇಳೆಯಿಲ್ಲ ಹಿಂದೂ ಧರ್ಮದಲ್ಲಿ ಕಂಡುಬಂದಿರುವ ಜಡತ್ವವನ್ನು ತಪ್ಪಾಗಿ ನಮ್ರತೆಯೆಂದು ತಿಳಿಯಬಾರದು ಮಾನವಕುಲದ ಸೇವೆಯೊಂದೇ ದಿಕ್ಕಾಗಿರಲು ನಡೆಸುವ ಅತ್ಯಂತ ತ್ರಾಸಯುಕ್ತವೂ ನಿರಂತರವೂ ಆದ ಉದ್ಯಮವೇ ನೈಜ ನಮ್ರತೆ ಎನ್ನಿಸೀತು. (ಮಂಗಳ ಪ್ರಭಾತ)

ತನ್ನನ್ನು ತಾನು ತೊಡೆದುಹಾಕುವುದು ನಮ್ರತೆಗೆ ನಿಜವಾದ ಸೂಚಕಾರ್ಥ ಅಂಥ ಸ್ವಾರ್ಥನಾಶವೇ ಮೋಕ್ಷ ನಮ್ರತೆಯಿಲ್ಲದ ಸೇವೆ ಸ್ವಾರ್ಥತೆ ಹಾಗೂ ಅಹಂಭಾವ (ಆತ್ಮಕಥೆ)

## ಅಧ್ಯಾಯ ೧೧

## ಕಾಯಕವೇ ಪೂಜೆ

ತನ್ನ ಜನರನ್ನು ಸೃಷ್ಟಿಸಿ ಬ್ರಹ್ಮ ಯಜ್ಞಕರ್ಮದ ಕರ್ತವ್ಯವನ್ನು ಅವರ ಮೇಲಿಟ್ಟು ಹೀಗೆ ಹೇಳಿದ "ಇದರಿಂದ ನೀವು ಅಭ್ಯುದಯ ಪಡೆಯಿರಿ ಇದು ನಿಮ್ಮ ಬಯಕೆಯೆಲ್ಲವನ್ನೂ ತೀರಿಸಲಿ ಈ ಯಜ್ಞಕರ್ಮವನ್ನು ನೆರವೇರಿಸದೆ ಯಾವಾತ ಊಟ ಮಾಡುವನೋ ಆತ ಕದ್ದ ಅನ್ನವನ್ನು ತಿನ್ನುತ್ತಾನೆ? ಇದು ಗೀತೆಯ ವಾಕ್ಯ "ಹಣೆಯಿಂದ ಬೆವರು ಹರಿಸಿ ನಿನ್ನ ರೊಟ್ಟಿಯನ್ನು ಸಂಪಾದಿಸಿಕೊ" ಇದು ಬೈಬಲಿನ ವಾಕ್ಯ ಯಜ್ಞಕರ್ಮದಲ್ಲಿ ನಾನಾ ಬಗೆ ಅವುಗಳಲ್ಲೊಂದನ್ನು 'ರೊಟ್ಟಿಗಾಗಿ ದುಡಿಮೆ' ಎನ್ನಬಹುದು ಮನುಷ್ಯರು ಬುದ್ಧಿಶ್ರಮದಿಂದ ತಮ್ಮ ಅನ್ನವನ್ನು ಸಂಪಾದಿಸಿಕೊಳ್ಳಬಾರದೇ? ಕೂಡದು ಶರೀರದ ಅವಶ್ಯಕತೆಗಳನ್ನು ಶರೀರವೇ ಒದಗಿಸಬೇಕು "ಸೀಝರನಿಗೆ ಸಲ್ಲತಕ್ಕದನ್ನು ಸೀಝರನಿಗೇ ಸಲ್ಲಿಸು" ಎಂಬ ತತ್ವ ಪ್ರಾಯಶಃ ಇಲ್ಲಿಗೂ ಕೂಡ ಅನ್ವಯಿಸು

ತ್ತದೆ ಕೇವಲ ಮಾನಸಿಕ ಎಂದರೆ ಬೌದ್ಧಿಕ ಕರ್ಮ ಇರುವುದು ಆತ್ಮ ಕ್ಕಾಗಿ, ತನ್ನಿಂದಲೇ ಅದಕ್ಕೆ ತೃಪ್ತಿ ಪ್ರತಿಫಲವನ್ನು ಅದು ಕೇಳಲೇ ಬಾರದು ಆದರ್ಶರಾಜ್ಯದಲ್ಲಿ ವೈದ್ಯರು, ನ್ಯಾಯವಾದಿಗಳು ಅವರಂಥ ಇತರರು ಸಮಾಜದ ಪ್ರಯೋಜನಕ್ಕಾಗಿ ಮಾತ್ರ ಶ್ರಮಿಸುವರು ತಮ ಗಾಗಿ ಅಲ್ಲ ಅನ್ನಕ್ಕಾಗಿ ದುಡಿಯುವ ಎಲ್ಲರೂ ಶಾಸನಕ್ಕೆ ವಿಧೇಯರಾದರೆ ಅದರಿಂದ ಸಮಾಜ ರಚನೆಯಲ್ಲಿ ಸದ್ದಿಲ್ಲದ ಒಂದು ಆಂದೋಳನವಾದೀತು ಬದುಕುವುದಕ್ಕಾಗಿ ನಡೆಯುವ ಹೋರಾಟದ ಬದಲು ಪರಸ್ಪರ ಸೇವೆಗಾಗಿ ನಡೆವ ಹೋರಾಟ ಏರ್ಪಟ್ಟರೆ ಅದು ಮಾನವನ ಘನವಿಜಯ ಆಗ ಪಾಶವೀ ನಿಯಮದ ಜಾಗವನ್ನು ಮಾನವೀಯ ನಿಯಮ ತೆಗೆದುಕೊಳ್ಳುತ್ತದೆ

(ಹರಿಜನ. ೨೯-೬-೩೫)

ದೇವರ ಹೆಸರಿನಲ್ಲಿ ಮಾಡಿದ, ದೇವರಿಗಾಗಿ ಮುಡುಪಾದ, ಯಾವ ಕರ್ಮವೂ ಕಿರಿದಲ್ಲ ಹಾಗೆ ಮಾಡಿದ ಸಮಸ್ತ ಕರ್ಮಕ್ಕೂ ಸಮಾನ ಬೆಲೆ ದೊರಕುತ್ತದೆ ದೇವರ ಸೇವೆಯೆಂದು ಕೆಲಸಮಾಡುವ ಜಲಗಾರನಿಗೂ ದೇವರ ಹಸರಿನಲ್ಲಿ ತನ್ನ ಶಕ್ತಿಸಾಮರ್ಥ್ಯಗಳನ್ನು ಪರರಿಗಾಗಿ ಅವನ್ನು ನೋಡಿಕೊಳ್ಳುವವ ತಾನೆಂದು ತಿಳಿದು ಉಪಯೋಗಿಸುವ ರಾಜನಿಗೂ ಸಮಾನ ಖ್ಯಾತಿ (ಯಂಗ್ ಇಂಡಿಯಾ ೨೫-೧೧-೨೫)

ಕೊನೆಗೆ ದಿನಕ್ಕೆ ಒಂದು ಘಂಟೆಯಷ್ಟಾದರೂ ಬಡವರು ಮಾಡಬೇ ಬೇಕಾದ ಕೆಲಸವನ್ನು ನಾವೆಲ್ಲರೂ ಮಾಡುತ್ತ ಅವರೊಂದಿಗೂ ಅವರ ಮೂಲಕ ಇಡೀ ಮಾನವ ವರ್ಗದೊಂದಿಗೂ ಆತ್ಮೀಯವಾಗಿ ಒಂದಾದರೆ ಅದಕ್ಕಿಂತಲೂ ಘನತರವಾದ ಅಥವಾ ಹೆಚ್ಚು ರಾಷ್ಟ್ರೀಯವೆನ್ನಿಸುವ ಯಾವೊಂದನ್ನೂ ನಾ ಊಹಿಸಲಾರೆ ಬಡವರಿಗಾಗಿ ಬಡವರು ಮಾಡು ವಂತೆಯೇ ಕಾಯಕವನ್ನು ದೇವರ ಹೆಸರಿನಲ್ಲಿ ನಾನು ಮಾಡುವುದಕ್ಕಿಂತ ಹಿರಿದಾದ ದೇವೋಪಾಸನೆಯನ್ನು ನಾ ಊಹಿಸಲಾರೆ

(ಯಂಗ್ ಇಂಡಿಯಾ. ೨೦-೧೦-೨೧)

ಕಾಯಕಕ್ಕೆ ಅತಿ ಹೆಚ್ಚು ಅವಧಾರಣೆಯ ಪ್ರಾಧಾನ್ಯತೆಯನ್ನು ಕೊಟ್ಟೆವೆಂದು ಎಂದೂ ಹೇಳುವಂತಿಲ್ಲ. ಗೀತೆ ಉಪದೇಶಿಸುವ ಸದ್ವಾಕ್ಯ ವನ್ನು ನಾನು ತಿರುಗಿ ಬಾಯಿ ಪಾರ ಹೇಳುತ್ತಿದ್ದೇನೆ, ನಮ್ಮ ಸ್ವಾಮಿ

ಎನ್ನುತ್ತಾನೆ: "ನಿದ್ರೆಯಿಲ್ಲದೆ ನಾನು ಯಾವಾಗಲೂ ಕರ್ಮದಲ್ಲಿ ನಿರತನಾಗದೇ ಹೋದರೆ ಮನುಷ್ಯವರ್ಗಕ್ಕೆ ತಪ್ಪು ದೃಷ್ಟಾಂತವನ್ನು ನಾನು ಇತ್ತಂತೆ". (ಹರಿಜನ. ೨-೧೧-೩೬)

ದೇಹದಾರ್ಢ್ಯವುಳ್ಳ ಒಬ್ಬ ಪುರುಷನಾಗಲೀ ಸ್ತ್ರೀಯಾಗಲೀ ಉದ್ಯೋಗವಿಲ್ಲದೆ ಅಥವಾ ಆಹಾರವಿಲ್ಲದೇ ಇರುವುದು ಎಂದಿನವರೆಗೆ ಅಳಿಸಿಹೋಗುವುದಿಲ್ಲವೋ ಅಂದಿನವರೆಗೆ ವಿರಾಮ ಪಡೆಯುವುದರಿಂದ ಅಥವಾ ಹೊಟ್ಟೆ ತುಂಬ ತಿನ್ನುವುದರಿಂದ ನಮಗೆ ನಾಚಿಕೆ ಆಗಬೇಕು.

(ಯಂಗ್ ಇಂಡಿಯಾ. ೬-೧೦-೨೧)

ಪುರುಷನಾಗಲೀ ಸ್ತ್ರೀಯಾಗಲೀ ಸೇವಾದೃಷ್ಟಿಯಿಂದ ದೈಹಿಕ ಕರ್ಮ ಮಾಡಿದರೆ ಮಾತ್ರ ಬದುಕುವ ಹಕ್ಕನ್ನು ಹೊಂದಿಯಾರು

(ಯಂಗ್ ಇಂಡಿಯಾ, ೨೦-೯-೨೮)

## ಅಧ್ಯಾಯ ೧೨

# ನನ್ನ ಧ್ರುವನಕ್ಷತ್ರ

ಅತ್ಯಂತ ವ್ಯಾವಹಾರಿಕವೂ ಅತ್ಯಂತ ಗೌರವಯುಕ್ತವೂ ಆದ ರೀತಿಯಲ್ಲಿ ಪ್ರಪಂಚದ ನಡುವೆ ಬಾಳಬೇಕಾದರೆ ನಾವು ಜನರು ತಮ್ಮನ್ನೆಂತು ವರ್ಣಿಸಿಕೊಳ್ಳುವರೋ ಅಂತೆಯೇ ಅವರೆಂದು ನಂಬೋಣ, ಅದರ ವ್ಯತಿರೇಕವನ್ನು ಸಮರ್ಥಿಸುವ ಆಧಾರ ನಮ್ಮಲ್ಲಿ ಯಾವುದೂ ಇಲ್ಲದಿರುವಾಗ ಮಾನವ ಸ್ವಭಾವದ ಪ್ರವೃತ್ತಿ ಯಾವಾಗಲೂ ಕೆಳದಿಕ್ಕಿಗೆ ಎಂಬುವನ್ನು ನಂಬಲು ನಿರಾಕರಿಸುತ್ತೇನೆ ನಾನು (ಯಂಗ್ ಇಂಡಿಯಾ, ೨೬-೧೨-೨೬)

ಯಾರು ತಾವೇ ಆತ್ಮಸಂತೋಷದಿಂದ ಒಂದು ವೇದನೆಯ ಸರಣಿಯನ್ನು ಅನುಭವಿಸುವರೋ ಆ ಮಂದಿ ತಮ್ಮನ್ನೂ ಇಡೀ ಮಾನವ ಕುಲವನ್ನೂ ಉನ್ನತ ಮಟ್ಟಕ್ಕೆತ್ತುವರೆಂದು ನಾ ಬಲ್ಲೆ ಹಾಗೆಯೇ ಯಾರು

ತಮ್ಮ ವಿರೋಧಿಗಳ ಮೇಲೆ ಜಯವನ್ನು ಪಡೆಯಲೋಸುಗ ಹೂಡುವ ಅತಿದಾರುಣ ಪ್ರಯತ್ನಗಳಿಂದ ಅಥವಾ ತಮಗಿಂತ ದುರ್ಬಲರಾದ ಜನಾಂಗವನ್ನೋ ದುರ್ಬಲವ್ಯಕ್ತಿಗಳನ್ನೋ ಶೋಷಣೆಗೆ ಒಳಪಡಿಸುವುದರಿಂದ ಪಶು ತನಕ್ಕಿಳಿಯುವ ಮಂದಿ ತಮ್ಮನ್ನೇ ಅಲ್ಲದೆ ಮನುಜಕುಲವನ್ನೂ ಕೆಳಕ್ಕೆ ಎಳೆದುಕೊಳ್ಳುತ್ತಾರೆಂದು ಕೂಡ ನಾ ಬಲ್ಲೆ ನನಗಾಗಲೀ ಇತರ ಯಾರಿಗೇ ಆಗಲೀ ಮಾನವ ಸ್ವಭಾವವನ್ನು ಕೆಸರಿನಲ್ಲಿ ಎಳೆದಾಡುವುದು ಸಂತಸದ ಸಂಗತಿಯಾಗಲಾರದು (ಯಂಗ್ ಇಂಡಿಯಾ ೨೦-೧೦-೩೧)

ಮನುಷ್ಯನ ಪ್ರಕೃತಿ ಮೂಲತಃ ಕೆಟ್ಟುದಲ್ಲ ಪ್ರೇಮದ ಪ್ರಭಾವಕ್ಕೆ ಪಶು ಸ್ವಭಾವದ ವಿಚಾರದಲ್ಲಿ ಎಂದಿಗೂ ನಿರಾಶೆಗೊಳ್ಳಬಾರದು (ಯಂಗ್ ಇಂಡಿಯಾ ೪-೧೧-೨೮)

ಮಾನವೀಯವಾಣ ಬೇಕಾದರೆ ಪಾಶವೀಯತೆಯನ್ನೂ ಪಶು ಕ್ರೌರ್ಯವನ್ನೂ ಬಿಟ್ಟು ನಿಲ್ಲಬೇಕೆಂಬುದು ಪೂರ್ತಿಯಾಗಿ ಮಂದಟ್ಟಾದಾಗ ಮಾತ್ರ ಮಾನವ ಸ್ವಭಾವ ತನ್ನನ್ನು ಕಂಡುಕೊಳ್ಳುತ್ತದೆ ಮನುಷ್ಯಾಕಾರ ನಮಗಿದ್ದರೂ ಅಹಿಂಸಾ ಸದ್ಗುಣವನ್ನು ನಾವು ಸಾಧಿಸಿಕೊಳ್ಳದಿದ್ದರೆ, ನಮ್ಮ ಅತಿ ಪುರಾತನ ಪೂರ್ವಜನೆಂದು ಕೀರ್ತಿತವಾಗಿರುವ ಒರ್‍ಯಾಂಗೋಟಾಂಗಿನ ಲಕ್ಷಣಗಳಲ್ಲಿ ಇನ್ನೂ ಭಾಗವುಂಟು ನಮಗೆ (ಹರಿಜನ ೮-೧೦-೩೮)

ಅಹಿಂಸೆಯ ಸತ್ವದಲ್ಲಿ ನನಗಿರುವ ನೆಚ್ಚಿಗೆ ಮಾನವ ಸ್ವಭಾವ ಎಂದಿಗೂ ಬಗ್ಗಲಾರದಷ್ಟು ಗಡುಸಾಗಿದೆ'ಯೆಂಬ ಸಿದ್ಧಾಂತವನ್ನು ನಿರಾಕರಿಸುತ್ತದೆ (ಹರಿಜನ ೭-೬-೪೨)

ಕಾಯಕದ ಬಗೆಗೆ ದೇವರು ಅತಿ ಕಠಿಣ ಯಜಮಾನ ಬಾಣ ಬಿರುಸುಗಳ ಪ್ರದರ್ಶನದಿಂದ ಅವನಿಗೆಂದಿಗೂ ಬರದು ತೃಪ್ತಿ, ಅವನ ಯಂತ್ರಗಳು ಒಂದೇ ಸಮವಾಗಿಯೂ ತಪ್ಪದೆಯೂ ವಿಪರೀತ ವೇದನೆಯನ್ನು ಹುಟ್ಟಿಸುವಷ್ಟು ನಿಧಾನವಾಗಿ ತಿರುಗೀತು ಅವಸರ ಅವಸರವಾಗಿ ತೆಗೆದುಕೊಂಡ ಪ್ರಾಣ ಪಣದಿಂದ ಅವನೆಂದಿಗೂ ನೆಮ್ಮದಿ ಹೊಂದ ಅತ್ಯಂತ ಪರಿಶುದ್ಧವಾದ ತ್ಯಾಗವೇ ಅವನಿಗೆ ಬೇಕು, ಆದ್ದರಿಂದ ನೀವೂ ನಾನೂ ಪ್ರಾರ್ಥನೆಗೈಯುತ್ತ ಕಷ್ಟಯಾತ್ರೆ ನಡೆಯಲೇ ಬೇಕು, ನಾವು

ಬದುಕಿರಬೇಕೆಂಬ ನಿರೂಪ ಎಲ್ಲಿಯವರೆಗೂ ಇದೆಯೋ ಅಲ್ಲಿಯವರೆಗೂ ಇದ್ದು ಮುಗಿಸಲೇಬೇಕು ಬಾಳನ್ನು (ಯಂಗ್ ಇಂಡಿಯಾ, ೨೨-೬-೨೭)

ಆಗಾಗ ದೇವರು ಕಳುಹಿಸುವ ಸಂಜ್ಞೆಗಳನ್ನು ಓದಿ ಅರ್ಥಮಾಡಿಕೊಳ್ಳಲಾರದಷ್ಟು ಗಾಢ ಮೌಢ್ಯ ಮನುಜವರ್ಗಕ್ಕಿರುವುದು ಸುಪ್ರಸಿದ್ಧ. ಉರೆಮೂರ್ಛೆಯಿಂದ ಎದ್ದು ಎಚ್ಚರಿಕೆಯ ವಾಣಿಯನ್ನು ಆಲಿಸಿ, ನಮ್ಮನ್ನು ನಾವು ಕಳೆದುಕೊಳ್ಳುವುದೊಂದೇ ನಮ್ಮನ್ನು ನಾವು ಪಡೆದುಕೊಳ್ಳುವುದಕ್ಕೆ ಮಾರ್ಗವೆಂಬುದನ್ನು ಕಾಣಬೇಕಾದರೆ, ನಮ್ಮ ಕಿವಿಗಳೊಳಕ್ಕೆ ನಗಾರಿಗಳನ್ನು ತಾಟಿಸುವುದು ಆವಶ್ಯಕ (ಯಂಗ್ ಇಂಡಿಯಾ, ೨೫-೮-೨೭)

## ಪೇಚಾಟದಿಂದ ಬಿಡುಗಡೆ

ಪೇಚಾಟದಂತೆ ದೇಹವನ್ನು ಕ್ಷೀಣಗೊಳಿಸುವುದು ಮತ್ತಾವುದೂ, ಇಲ್ಲ ದೇವರಲ್ಲಿ ಏನಾದರೂ ನಂಬಿಕೆಯಿಟ್ಟುಕೊಂಡಿರುವಾತ ಯಾವ ತೆರದ ವಿಚಾರವೇ ಆಗಲೀ ಅದಕ್ಕಾಗಿ ಆತಂಕ ಪಡುವುದಿಲ್ಲ ಇದೊಂದು ಪ್ರಯಾಸದ ಸೂತ್ರ ಹೌದು, ಏತಕ್ಕೆಂದರೆ ಮನುಜಕುಲದ ಬಹುಮಂದಿಗೆ ದೈವನಿಷ್ಠೆ ಇಲ್ಲ ಕೇವಲ ಬೌದ್ಧಿಕವಾದ ನಂಬಿಕೆ, ಇಲ್ಲ ಕುರುಡುನಂಬಿಕೆ, ಅಥವಾ ಯಾವುದೋ ಅನಿರ್ದೇಶ್ಯವಾದದ್ದನ್ನು ಕುರಿತ ಮೂಢ ಭೀತಿ ಆಗಿರುವ ಸರಳ ಕಾರಣದಿಂದ ಚಿಂತೆಯಿಂದ ಪರಿಪೂರ್ಣ ವಿಮೋಚನೆಯನ್ನು ಸ್ಥಿರಗೊಳಿಸಿಕೊಳ್ಳಬೇಕಾದರೆ ಜೀವಂತವಾದ ಪರಮ ಭರವಸೆ ಅಗತ್ಯ ಅದೋ ಇನ್ನೇನು ಅಗೋಚರವೋ ಎಂಬಂತೆ ತೋರುವ ವಿಳಂಬ ಬೆಳೆತವುಳ್ಳ ಗಿಡದಂತೆ, ಪದೇ ಪದೇ ಅದಕ್ಕೆ ಅಪ್ಪಟ ಪ್ರಾರ್ಥನೆಯ ಜೊತೆಯಲ್ಲಿ ಬರುವ ಕಂಬನಿಗಳಿಂದ ನೀರೆರೆಯಬೇಕು ಅವು ಪ್ರೇಯಸಿಯಿಂದ ಒಂದು ಕ್ಷಣದ ವಿಯೋಗವನ್ನು ಸಹಿಸಲಾರದ ಪ್ರೇಮಿಯ ಕಣ್ಣೀರು ಅಥವಾ ಮಾಲಿನ್ಯದ ಯಾವುದೋ ಕುರುಹಿನ ಪರಿಣಾಮವಾಗಿ ಪ್ರೀತಿಯ ವಸ್ತುವಿನಿಂದ ತಾನು ದೂರವಿರುವ ಸಂಗತಿಯನ್ನು ತಿಳಿದು ಪಶ್ಚಾತ್ತಾಪ ಪಡುವ ಪಾಪಿಯ ಕಣ್ಣೀರು (ಹರಿಜನ ೧೭-೧೦-೩೭)

ದೇವರನ್ನು ಎದುರಿಗೇ ನೋಡುವುದೆನ್ನುವುದು ಆತ ನಮ್ಮ ಹೃದಯದಲ್ಲಿ ಸಿಂಹಾಸನಸ್ಥನಾಗಿರುವನೆಂಬ ಭಾಗ, ಹೇಗೆ ಕೂಸು ಯಾವೊಂದು

ಪ್ರದರ್ಶನವಿಲ್ಲದಿದ್ದರೂ ತಾಯಿಯ ಅಕ್ಕರೆಯನ್ನು ಅನುಭವಿಸುವುದೋ ಹಾಗೆ ತಾಯಿ—ಪ್ರೇಮದ ಇರವನ್ನು ಶಿಶು ತರ್ಕಮಾಡಿ ತಿಳಿದುಕೊಳ್ಳುತ್ತದೆಯೇ? ಅದನ್ನು ಇತರರಿಗೆ ಅದು ರುಜುವಾತು ಮಾಡಿಕೊಡಬಲ್ಲುದೇ? 'ಅದು ಇದೆ' ಎಂದು ಮಾತ್ರ ಹರ್ಷೋತ್ಕರ್ಷದಿಂದ ಘೋಷಿಸುತ್ತದೆ ಮಗು ದೇವರ ಅಸ್ತಿತ್ವದ ಬಗೆಗೂ ಹಾಗೆಯೇ ಆಗಬೇಕು ಅವನು ತರ್ಕಾತೀತ, ಆದರೆ ಅನುಭವಗವ್ಯ ಲೌಕಿಕ ಉಪಾಧ್ಯಾಯರ ಅನುಭವವನ್ನು ನಾವು ಹೇಗೆ ನಿರಾಕರಿಸುವುದಿಲ್ಲವೋ ಹಾಗೆಯೇ ತುಲಸೀದಾಸ, ಚೈತನ್ಯ, ರಾಮದಾಸ ಮತ್ತು ಇತರ ಆಧ್ಯಾತ್ಮಿಕ ಗುರುಸಂದೋಹದ ಅನುಭವವನ್ನು ನಿರಾಕರಿಸದಿರೋಣ (ಯಂಗ್ ಇಂಡಿಯಾ. ೧೨-೧೨-೨೭)

ನೈತಿಕ ದಿವಾಳಿತನವನ್ನು ಸಾಮಾನ್ಯ ವಿಧಾನಗಳಿಂದ ಎದುರಿಸುವುದಾಗಲೀ ತಡೆಗಟ್ಟುವುದಾಗಲೀ ಅಸಾಧ್ಯ, ಅನೀತಿಯನ್ನು ಸದ್ಗುಣವೆಂದು ಕರೆಯುವಾಗ ಅದರಲ್ಲಿಯೂ ನೀತಿನಿಷ್ಠೆ ಒಂದು ನ್ಯೂನತೆಯೆಂದೂ ಮೂಢ ನಂಬಿಕೆಯೆಂದೂ ಅಥವಾ ಅದೇ ಅನೀತಿಯೆಂದೂ ಹಳಿಯಲ್ಪಡುವಾಗ ಖಂಡಿತ ಸಾಧ್ಯ ಇಂಥ ಪರಿಸ್ಥಿತಿಯಲ್ಲಿ ಅನುಮತಿ ಪಡೆದ ದುರ್ನಡತೆಯನ್ನು ಹದ್ದಿನಲ್ಲಿಡುವುದಕ್ಕೆ ಧರ್ಮದ ನೆರವೊಂದೇ ಪ್ರಬಲ ಸಾಧನ ಇಲ್ಲಿ ಧರ್ಮವೆಂದರೆ ಸಂಕುಚಿತವಾದ ಗ್ರಾಮಪರಿಮಿತಿಯ ಧರ್ಮವೆಂದಲ್ಲ ಅರ್ಥ ನಿಜವಾದ ಧರ್ಮ, 'ವ್ಯಕ್ತಿಜೀವನ' ಹಾಗೂ 'ಕೂಟಜೀವನ'ದಲ್ಲಿ ಅತ್ಯಂತ ತಳಮಳ ಹುಟ್ಟಿಸುವ ಅಂಶ ಧರ್ಮಜಾಗೃತಿಯೆಂದರೆ ಒಂದು ಕ್ರಾಂತಿ, ಒಂದು ಆಮೂಲಾಗ್ರ ಪರಿವರ್ತನೆ, ಒಂದು ಹೊಸ ಹುಟ್ಟು

(ಹರಿಜನ. ೨೨-೬-೩೭)

ಈ ದಿವಸಗಳ ಶಾಂತಚಿಂತನೆಯಿಂದ ಯಥೇಷ್ಟವಾಗಿ ನಾನು ಕಲಿತಿದ್ದೇನೆ ಸತ್ಯಪರತೆಯೇ ಪ್ರಭು ಜೀವನದ ಅತ್ಯಂತ ಅಲ್ಪ ವಿಷಯಗಳಲ್ಲಿ ಕೂಡ ಸತ್ಯವತ್ತಾಗಿ ವ್ಯವಹರಿಸುವುದೊಂದೇ ಪವಿತ್ರ ಬಾಳಿನ ಗುಟ್ಟು ಅಂಥ ಪ್ರಸಂಗಗಳಲ್ಲಿ 'ವೈಷ್ಣವ ಜನತೋ ತೇನೆ ಕಹಿಯೆ' (ಅವನೇ ನೈಜ ವೈಷ್ಣವ ಇತ್ಯಾದಿ) ಎಂಬ ಸ್ತೋತ್ರಪಾರದಿಂದ ನನಗೆ ಸ್ಫೂರ್ತಿ ಭಗವದ್ಗೀತೆ ನನಗೆ ಮರೆತುಹೋದರೂ ಕೂಡ ಈ ಒಂದು ಸ್ತೋತ್ರ ನನ್ನ ಪರಿಪೋಷಣೆಗೆ ಸಾಕು ನಿಜವನ್ನು ನಿಮ್ಮಲ್ಲಿ ಹೇಳುವು

ದಾದರೆ ಇದಕ್ಕೂ ಸರಳವಾದ ಇನ್ನೊಂದು ಸಂಗತಿಯಿದೆ, ಅದನ್ನು ಅರ್ಥ ಮಾಡಿಕೊಳ್ಳಲು ನಿಮಗೆ ಬಹುಶಃ ಕಷ್ಟವಾಗಬಹುದು ಆದರೆ ಅದು ನನ್ನ ಜೀವನಪ್ರಯಾಣಮುದ್ದಕ್ಕೂ ನನ್ನ ಧ್ರುವನಕ್ಷತ್ರವಾಗಿದೆ. ಸತ್ಯವೇ ದೇವರು, ಅಸತ್ಯ ಆತನ ನಿರಾಕರಣೆ ಎಂಬ ದೃಢನಿಶ್ಚಯ

## ತಾಳ್ಮೆ

ಒಳ್ಳೆಯದು ಪಯಣ ಮಾಡುತ್ತದೆ ಶಂಬುಕದ ಗತಿಯಲ್ಲಿ. ಒಳ್ಳೆಯದನ್ನು ಮಾಡಬಯಸುವವರು ಸ್ವಾರ್ಥಿಗಳಲ್ಲ. ಅವರಿಗೆ ಆ ಅರವಿಲ್ಲ ಜನತೆಯಲ್ಲಿ ಒಳ್ಳೆಯದು ಊರುವಂತೆ ಎಸಗುವುದಕ್ಕೆ ದೀರ್ಘಕಾಲ ಬೇಕೆಂಬುದನ್ನು ಅವರು ಬಲ್ಲರು (ಹಿಂದ್ ಸ್ವರಾಜ್ಯ)

ಇದು ಅಹಿಂಸೆಯ ಪಥ ಆದರಲ್ಲಿ ಅವಿಶ್ರಾಂತವಾಗಿ ನರಳಬೇಕಾದೀತು, ಅಂತ್ಯವಿಲ್ಲದ ತಾಳ್ಮೆಯನ್ನು ಬೆಳೆಸಿಕೊಳ್ಳಬೇಕಾದೀತು. ಹೀಗೆ ಹೆಜ್ಜೆಯಿಂದ ಹೆಜ್ಜೆಯಿಡುತ್ತ ಸಮಸ್ತ ಪ್ರಪಂಚದೊಡನೆ ಮೈತ್ರಿಯಿಂದಿರುವುದನ್ನು ಕಲಿಯುತ್ತೇವೆ ನಾವು, ದೇವರ ಅಥವಾ ಸತ್ಯದ ಹಿರಿಮೆ ನಮಗೆ ಚೆನ್ನಾಗಿ ಅರಿವಾಗುತ್ತದೆ ಎಷ್ಟೇ ನರಳಾಟವಿದ್ದರೂ ನಮ್ಮ ಮನಶ್ಶಾಂತಿ ಹೆಚ್ಚುತ್ತ ಹೋಗುತ್ತದೆ, ನಾವು ಹೆಚ್ಚು ಧೈರ್ಯಶಾಲಿಗಳೂ ಸಾಹಸಪ್ರಿಯರೂ ಆಗುತ್ತೇವೆ ಶಾಶ್ವತವಾದದ್ದು ಶಾಶ್ವತವಲ್ಲದ್ದು ಇವುಗಳಿಗಿರುವ ವ್ಯತ್ಯಾಸ ಹೆಚ್ಚು ಸ್ಪಷ್ಟವಾಗಿ ಗೊತ್ತಾಗುತ್ತದೆ ನಮಗೆ, ಯಾವುದು ನಮ್ಮ ಕರ್ತವ್ಯ ಯಾವುದಲ್ಲ ಎಂದು ವಿವೇಚಿಸುವ ತಿಳವಳಿಕೆ ಬರುತ್ತದೆ ನಮ್ಮ ಗರ್ವ ಕರಗಿಹೋಗುತ್ತದೆ, ವಿನಮ್ರರಾಗುತ್ತೇವೆ ನಾವು. ನಮ್ಮ ಪ್ರಾಪಂಚಿಕ ಬಂಧನಗಳು ಕಡಮೆಯಾಗುತ್ತವೆ, ಹಾಗೆಯೇ ಕೆಟ್ಟದ್ದೂ ಕರಗುತ್ತದೆ ದಿವಸ ದಿವಸಕ್ಕೆ (ಮಂಗಳಪ್ರಭಾತ)

ತಾಳ್ಮೆಯನ್ನು ಕಳೆದುಕೊಂಡರೆ ಕಾಳಗವನ್ನು ಕಳೆದುಕೊಂಡಂತೆ ತಾಳ್ಮೆಯಲ್ಲಿ ಏನಾದರೂ ಸತ್ವವಿದ್ದರೆ ಅದು ಕಾಲ ಮುಗಿಯುವವರೆಗೂ ಉಳಿದಿರಬೇಕು ಸಚೇತನ ಶ್ರದ್ಧೆ ಅತ್ಯಂತ ಕರಾಳವಾದ ಗಾಳಿಮಳೆಗಳ ಮಧ್ಯದಲ್ಲಿ ಉಳಿದಿರುವುದು (ಯಂಗ್ ಇಂಡಿಯಾ. ೧೪-೧೨-೨೭)

ತಾಳ್ಮೆ ನರಳುವಿಕೆಗೆ ಇನ್ನೊಂದು ಹೆಸರು ಅದು ಹೆಚ್ಚಿದಷ್ಟೂ ನಮ್ಮ ಬಲ ಹೆಚ್ಚುತ್ತದೆ (೧೯-೭-೩೧)

## ಅಧ್ಯಾಯ ೧೩

# ನೀತಿ ಧರ್ಮ*

### ಪ್ರಾಸ್ತಾವಿಕ

ನಮ್ಮದು ವಂಚನೆ ಕಾಪಟ್ಯಗಳ ಕಾಲ ಯಾವ ಧರ್ಮದವರೇ ಆಗಲಿ, ಜನ ಕೇವಲ ಬಾಹ್ಯಾಚಾರ ಪ್ರಿಯರಾಗಿ ಧರ್ಮದ ಮೂಲತತ್ತ್ವಗಳಿಗೆ ತಿಲಾಂಜಲಿ ಕೊಟ್ಟಿದ್ದಾರೆ ತಮ್ಮ ಲೋಭದಿಂದ ಸಂಗ್ರಹ ಬುದ್ಧಿಯಿಂದ ಇತರರಿಗೆ ತೊಂದರೆಯಾಗುತ್ತದೆ, ಆದೀತು ಎಂಬ ಸಂಗತಿ ಅವರಿಗೆ ನೆನಪೇ ಆಗದು ರಾಕ್ ಫೆಲರ್ ಇಡೀ ಲೋಕಕ್ಕೆ ಶ್ರೀಮಂತ ಚಕ್ರವರ್ತಿ ಎನ್ನುತ್ತಿದ್ದರು ಹಣ ಗಳಿಸುವಾಗ ಆತ ನೀತಿ ರೀತಿ ಯಾವುದನ್ನೂ ಲೆಕ್ಕಿಸುತ್ತಿರಲಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ ಯುರೋಪಿನಲ್ಲೂ ಅಮೆರಿಕಾದಲ್ಲೂ ಧರ್ಮ ವಿರೋಧಿಗಳು ಎಷ್ಟೋ ಜನ ಇದಾರೆ ಅವರಿಗೆ ಯಾವ ಧರ್ಮವೂ ಬೇಡ ಈ ಲೋಕದಲ್ಲಿರುವ ಅಗಾಧವಾದ ಪಾಪ, ದುಷ್ಟತನಗಳನ್ನು ನೋಡಿ, ಧರ್ಮ ಎಂಬುದು ಬರೀ ಸುಳ್ಳು ಎನ್ನಲು ಇದಕ್ಕಿಂತ ಬೇರೆ ಸಾಕ್ಷ್ಯ ಬೇಕೆ ಎನ್ನುತ್ತಾರೆ? ಈ ಅಭಿಪ್ರಾಯ ಶುದ್ಧ ತಪ್ಪು ಕುಣಿಯಬಾರದವರು ನೆಲ ಡೊಂಕು ಎಂದಂತಿದೆ ಈ ತರ್ಕ ತಮ್ಮ ಪಾಪ ಕೃತ್ಯದ ಹೊಣೆಯನ್ನು ಧರ್ಮಕ್ಕೆ ಗಂಟು ಹಾಕಿ, ತಮ್ಮ ಸ್ವೇಚ್ಛಾವಿಹಾರ, ಸ್ವೈರಜೀವನಕ್ಕೆ ಸಲೀಸು ದಾರಿ ಮಾಡಿಕೊಳ್ಳುತ್ತಾರೆ

ಈ ವಿಶೃಂಖಲತೆ ಹರಡುತ್ತಿರುವುದನ್ನು ನೋಡಿ ಬೆದರಿ, ಕೆಲವರು ಇದನ್ನು ಬಹಿರಂಗವಾಗಿಯೆ ವಿರೋಧಿಸ ತೊಡಗಿದಾರೆ. ಮನುಷ್ಯನ ಮನಸ್ಸಿಗೆ ಧರ್ಮದ ಅಂಕುಶವಿಲ್ಲದಿದ್ದರೆ ಲೋಕವೇ ಹಾಳಾದೀತು ಎಂದು ಅವರಿಗೆ ಭಯ. ನ್ಯಾಯವೆ ನೀತಿಮಾರ್ಗದಲ್ಲಿ ಜನ ನಡೆಯಲಿ ಎಂದು ಅವರು ಬಹಳ ಕಷ್ಟಪಡುತ್ತಿದಾರೆ ಅವರು ಒಂದು ಸಂಸ್ಥೆ ಮಾಡಿಕೊಂಡಿದಾರೆ. ಎಲ್ಲಾ ಧರ್ಮಗಳ ಮೂಲಕ ತತ್ತ್ವಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಎಲ್ಲ ಧರ್ಮಗಳೂ ಒಂದೇ, ಅವೇ ನೀತಿ ನಿಯಮಗಳೇ ಎಲ್ಲಕ್ಕೂ

---

* ಗಾಂಧೀಜೀ ಬರೆದ *Ethical Religion* ಎಂಬ ಪ್ರಬಂಧದ ಕನ್ನಡರೂಪ.

ಆಧಾರ ಎಂಬುದನ್ನು ತೋರಿಸಿದಾರೆ ಒಂದರ ಹಾಗೆ ಇನ್ನೊಂದು. ಆದು ದರಿಂದ ಯಾವ ಧರ್ಮವನ್ನೇ ನಂಬಿರಲಿ, ನೀತಿ ನಿಯಮವನ್ನು ಮನುಷ್ಯ ಅತಿಕ್ರಮಿಸಲಾರ ಮೀರಿದವನಿಗೆ ವಿನಾಶ ತಪ್ಪಿದ್ದಲ್ಲ ನಮ್ಮ ಈ ಕಾಲ ದಲ್ಲಿ, ಅದೇನು ದುರ್ದೈವವೋ, ಧರ್ಮವೆಂದರ ಯಾರಿಗೂ ಗೌರವವಿಲ್ಲ ದಂತಾಗಿದೆ ಈ ಅವಿನಯವನ್ನು ಹೋಗಲಾಡಿಸುವುದೇ ಆ ಸಂಸ್ಥೆಯ ಉದ್ದೇಶ ಎಲ್ಲ ಧರ್ಮಗಳಿಗೂ ಸಾಮಾನ್ಯಾಧಾರವಾದ ನೀತಿಸೂತ್ರ ಗಳನ್ನು ಆ ಸಂಸ್ಥೆಯ ಸದಸ್ಯರು ಪರಿಶೋಧಿಸುತ್ತಿದಾರೆ ಆ ಪರಿಶೋಧ ನೆಯ ಫಲವಾಗಿ ನೀತಿಧರ್ಮವೆಂಬ ಹೊಸ ಪಂಥವೊಂದು ಹೊರಟಿದೆ. ಲೋಕದ ಸ್ತ್ರೀ ಪುರುಷರೆಲ್ಲರಿಗೂ ಯಾವ ಭೇದವೂ ಇಲ್ಲದೆ ಶಾಶ್ವತವಾಗಿ ಅನ್ವಯಿಸುವ ನೀತಿಸೂತ್ರಗಳ ಪಂಥ ಅದು ಈ ಸೂತ್ರಗಳನ್ನು ಅನು ಸರಿಸಿದರೇನೆ ಮಾನವ ಸಮಾಜದ ಯೋಗಕ್ಷೇಮ, ಇಲ್ಲದಿದ್ದರೆ ಇಲ್ಲ

ಈ ಚಿಕ್ಕ ಪುಸ್ತಕ ಆ ಸೂತ್ರಗಳನ್ನು ವಿವರಿಸುವ ಪ್ರಯತ್ನ ಓದು ಗರು ತಮತಮಗೆ ರುಚಿಸಿದ ತತ್ವಗಳನ್ನು ರೂಢಿಗೆ ತರಬೇಕೆಂದು ಬೇಡು ತ್ತೇನೆ ಅದೇ ನನಗೆ ಬೇಕಾದ ಫಲ

## ನೀತಿಯ ಅಗತ್ಯ

ಮನುಷ್ಯನ ಮನಸ್ಸಿಗೆ ಎರಡು ಗವಾಕ್ಷಿಗಳಿವೆ ಒಂದರಲ್ಲಿ ತಾನು ಇದ್ದಂತೆಯೆ ಕಾಣಬರುತ್ತಾನೆ ಇನ್ನೊಂದರಲ್ಲಿ ತಾನು ಇರಬೇಕಾದ ಎರಕ ದಂತೆ ಕಾಣಬರುತ್ತಾನೆ ಸಾಮಾನ್ಯವಾದ ವಿಜ್ಞಾನಶಾಸ್ತ್ರವೆಲ್ಲ ಈ ಲೋಕವನ್ನು ಇರುವ ಹಾಗೆಯೆ ಚರ್ಚಿಸುತ್ತದೆ ಈ ಲೋಕ ಹೇಗೆ ಇರ ಬೇಕೆಂಬುವನ್ನು ಚರ್ಚಿಸುವುದು ನೀತಿಶಾಸ್ತ್ರ

ಪ್ರತಿಯೊಬ್ಬರೂ ತಮ್ಮೊಳಗೆ ತಾವು ನೋಡಿಕೊಳ್ಳಬೇಕು, ತಮ್ಮ ನಿಜ ಸ್ವರೂಪವನ್ನು ಅರಿಯಬೇಕು, ತಮ್ಮ ತನು ಮನ ಅಂತಃಕರಣ ಗಳನ್ನು ಹದಗೊಳಿಸಿ ಉತ್ತಮಗೊಳಿಸಬೇಕು ಅನ್ಯಾಯ, ಅಹಂಕಾರ, ದುಷ್ಟತನಗಳಿಂದ ಲೋಕದಲ್ಲಿ ಆಗಿರುವ ಅನಿಷ್ಟವನ್ನು ಅರ್ಥಮಾಡಿ ಕೊಂಡು 'ದುಷ್ಕೃತಿವಿನಾಶ'ಕ್ಕಾಗಿ ಹೊರಡಬೇಕು. ಆಯ ಶಾಸ್ತ್ರ,

ಮನೆಯ ನಕ್ಷೆಗಳಿಂದ ಏನು ಪ್ರಯೋಜನ? ಮನೆ ಕಟ್ಟುವ ರೀತಿಯನ್ನು ಅವು ಹೇಳಿಕೊಡುತ್ತವೆ ನೀತಿಶಾಸ್ತ್ರವೂ ಅಷ್ಟೆ. ನಮ್ಮ ಬಾಳನ್ನು ಆ ನೀತಿಸೂತ್ರಗಳ ಪ್ರಕಾರ ನಡಸಿದರೆ ಅದರ ಪ್ರಯೋಜನ ನಡಸಲಾರದ ನಿಯಮ ವ್ಯರ್ಥ ಎಷ್ಟೋ ಜನ ನೀತಿಸೂತ್ರಗಳನ್ನು ಬಾಯಿಪಾಠ ಮಾಡಿ ಅವನ್ನು ಕುರಿತು ದೊಡ್ಡದಾಗಿ ಉಪನ್ಯಾಸ ಮಾಡುತ್ತಾರೆ, ಅದರಂತೆ ನಡೆಯುವ ಯೋಚನೆ ಮಾತ್ರ ಎಳ್ಳಷ್ಟೂ ಇಲ್ಲ ಇನ್ನು ಕೆಲವರು ಇದಾರೆ, ಅವರ ಪಾಲಿಗೆ ನೀತಿಸೂತ್ರಗಳೆಂದರೆ ಪರಲೋಕದಲ್ಲಿ ಆಚರಿಸಬೇಕಾದ ಧರ್ಮ ನಿಜವಾಗಿ ನೋಡಿದರೆ, ನೀತಿ ನಿಯಮಗಳಿಗೆ ವಿಧೇಯನಾಗಿ ನಡೆಯಲಾರದವನು ಪೂರ್ಣಾರ್ಥದಲ್ಲಿ ಮನುಷ್ಯನೇ ಅಲ್ಲ ಎಷ್ಟೇ ಕಷ್ಟ ಬರಲಿ ನಷ್ಟವಾಗಲಿ ಸತ್ಯ, ಶೀಲಗಳಲ್ಲೇ ಸುಖವನ್ನು ಅನುಭವಿಸುವಂತೆ ಆಗಬೇಕು

ದೇವರು ಸರ್ವಶಕ್ತ, ಪರಿಪೂರ್ಣತೆಯ ಪರಾಕಾಷ್ಠ ವಿಗ್ರಹ ದೇವರ ದಯೆಗೆ, ನ್ಯಾಯಕ್ಕೆ ಮಿತಿಯೆ ಇಲ್ಲ, ಯಾರೂ ಮಿತಿ ಕಟ್ಟಲಾರರು ಅಂಥದರಲ್ಲಿ ನೀತಿಯ ನಿಯಮಗಳನ್ನು ಮೀರಿ ನಡೆಯಬಲ್ಲೆವೆ, ದೇವರ ಭೃತ್ಯರೆನಿಸಿಕೊಳ್ಳುವ ನಾವು? ಅಷ್ಟು ಎದೆಯೆ? ಆದರೆ ಏನೋ ಪ್ರತಿಫಲದ ಆಸೆ ಇಟ್ಟುಕೊಂಡು ನೀತಿವಂತರಾಗಬಾರದು ಒಳ್ಳೆ ಫಲ ಸಿಕ್ಕೀತೆಂದು ನಾವು ನೀತಿವಂತರೂ ಸಚ್ಚರಿತ್ರರೂ ಆಗಬೇಕಾಗಿಲ್ಲ, ಸನ್ಮಾರ್ಗವೇ ಶಾಶ್ವತಮಾರ್ಗ, ವಿಕಾರರಹಿತವಾದ ಪ್ರಕೃತಿಯ ಸ್ಥಿರಮಾರ್ಗ, ಆದುದರಿಂದ ನಾವು ಸಚ್ಚರಿತ್ರರಾಗಬೇಕು ಅನ್ನ ಬಟ್ಟೆಗಿಂತ ನಮಗೆ ಸತ್ಕಾರ್ಯ ಹೆಚ್ಚಿನದು ಹಸಿದು ಬಂದಾಗ ನಮಗೆ ಒಂದು ತುತ್ತು ನೀಡಿದ ದಾನಿಗಿಂತ ಒಂದು ಸತ್ ಕೃತಿ ಮಾಡಲು ಇಂಬುಗೊಟ್ಟ ಉಪಕಾರಿಯೇ ದೊಡ್ಡವನು ಅವನ ಋಣವೇ ಹೆಚ್ಚು.

ಬರೀ ಆಡಂಬರಪ್ರಿಯನಾದವನು ಕೀರ್ತಿಕಾಮಿಯಾದವನು ನಿಜವಾಗಿ ನೀತಿವಂತನಾಗಲಾರ ನೀತಿವಂತಿಕೆ ಶುಚಿಯಲ್ಲಾಗಲಿ ಕರ್ಮರತೆಯಲ್ಲಾಗಲಿ ಜ್ಞಾನದಲ್ಲಾಗಲಿ ಇಲ್ಲ ನೀತಿವಂತಿಕೆಗೆ ಇವೆಲ್ಲವೂ ಬೇಕು, ಇವು ನೀತಿಯ ಅಂಗ ಆದರೆ ಇವುಗಳಿಂದಲೇ ನೀತಿವಂತಿಕೆ ಬಾರದು ನಿಜವಾಗಿ ನೀತಿವಂತನಾದ ಮನುಷ್ಯ ಶುಭ ಫಲಾಪೇಕ್ಷೆಯಿಂದ ನೀತಿಯ

ದಾರಿ ತುಳಿಯುವುದಿಲ್ಲ, ಅದು ಅವನ ಜೀವನ ಧರ್ಮ, ಅವನ ಎದೆಯ ಉಸಿರು ಒಂದೇ ಮಾತಿನಲ್ಲಿ, ಗುಣಕ್ಕೆ ಗುಣವೇ ಫಲ

## ಅತ್ಯುನ್ನತ ನೀತಿ

ನೀತಿಯ ಬಗ್ಗೆ ಜನರ ವಿಚಾರವೀಗ ಪಕ್ವವೂ ಅಲ್ಲ, ಗಂಭೀರವೂ ಅಲ್ಲ ಕೆಲವರು ಮನುಷ್ಯನಿಗೆ ನೀತಿಯೇ ಬೇಕಾಗಿಲ್ಲ ಎನ್ನುತ್ತಾರೆ! ಕೆಲವರು ನೀತಿಗೂ ಧರ್ಮಕ್ಕೂ ಸಂಬಂಧವಿಲ್ಲ ಎನ್ನುತ್ತಾರೆ ಆದರೆ ನೀತಿಯಿಲ್ಲದೆ ಧರ್ಮವೆ ಇಲ್ಲ, ಇರಲಾರದು. ಯಾವ ಫಲಾಪೇಕ್ಷೆಯೂ ಇಲ್ಲದೆಯೆ ನೀತಿವಂತರಾಗಿ ನಡೆವವರು ನಿಜವಾಗಿಯೂ ಧರ್ಮಿಷ್ಠರು ತಮ್ಮ ದೇಶಕ್ಕಾಗಿ ಪ್ರಾಣವನ್ನು ಬಲಿಕೊಡಲು ಸಿದ್ಧರಾದವರು ಉತ್ತಮ ಗುಣಿಗಳು ನೀತಿ ನಿಪುಣರು ಜೆರಿಮಿ ಬೆಂಥಾಮ್ ಜನಸಾಮಾನ್ಯರಲ್ಲಿ ಶಿಕ್ಷಣ ಪ್ರಸಾರ ಮಾಡಲು ಬಹುಪರಿ ಕಷ್ಟಪಟ್ಟ, ನೆರೆಯಾಳುಗಳ ಬಾಳು ಮೇಲಾಗಲೆಂದು ಸತತವೂ ದಣಿವುಗಾಣದೆ ದುಡಿದ, ತನ್ನನಾಡಿನ ಜನಕ್ಕಾಗಿ ಎಷ್ಟೋ ಒಳ್ಳೇ ಶಾಸನಗಳನ್ನು ಮಾಡಿಸಿದ ಆತನಲ್ಲವೆ ನಿಜವಾಗಿ ಅತ್ಯುನ್ನತ ನೀತಿವಂತ

ಎಲ್ಲರೂ ತುಳಿದ ದಾರಿಯನ್ನೇ ತುಳಿವುದು ನೀತಿ—ಕುಶಲತೆಯಲ್ಲ. ನಾವೇ ನಮ್ಮ ದಾರಿ ಅರಿತುಕೊಂಡು ನಿರ್ಭಯವಾಗಿ ಅದನ್ನು ಹಿಡಿಯಬೇಕು ಹಾಗೆ ಗಾಢಪ್ರಯತ್ನದಿಂದ ಸತ್ಯಾನ್ವೇಷಣೆ ಮಾಡದೆ ನಿಜವಾದ ಪ್ರಗತಿಯೆ ಸಾಧ್ಯವಿಲ್ಲ ಪ್ರಗತಿ ಪುರೋಗತಿಗಳಿಗೂ ನೀತಿವಂತಿಕೆಗೂ ಶಾಶ್ವತವಾದ ಬ್ರಹ್ಮಗಂಟು ಇದೆ

ನಮ್ಮ ಆಸೆ ಉದ್ದೇಶಗಳು ಎರಡು ಪರಿ—ಸ್ವಾರ್ಥ, ನಿಸ್ವಾರ್ಥ. ಸ್ವಾರ್ಥದ ಆಸೆಯೆಲ್ಲವೂ ಅನೀತಿ ಇತರರಿಗೆ ಸೇವೆ ಸಲ್ಲಿಸಲು ನಾನು ಶಕ್ತನಾಗಬೇಕೆಂಬ ಆಸೆ ನೀತಿಯದು ನಾವು ಮಾಡಿದ ಸೇವೆಯ ಬಗ್ಗೆ ಬಡಾಯಿಕೊಚ್ಚಿದರೆ ಅದರಿಂದ ನಮಗೆ ಕೊಂಚ ಹೆಮ್ಮೆ ಬಂದರೂ ಸಾಕು. ನಮ್ಮ ನೀತಿ ಮಣ್ಣು ಮುಕ್ಕಿ ಹೋಯಿತು ಒಳ್ಳೇ ಕೆಲಸ ಮಾಡುವುದೇ ಒಂದು ರುಚಿಯಾಗಬೇಕು, ಆ ರುಚಿಗಾಗಿಯೇ ಒಳ್ಳೆಯ ಕೆಲಸ ಮಾಡಬೇಕು, ಅದನ್ನು ಅವಿಶ್ರಾಂತವಾಗಿ ಸಾಧಿಸುತ್ತಿರುವುದೆ ಕಲ್ಯಾಣ ಕೃತಿಯ ಲಕ್ಷಣ.

ಸಿಟ್ಟು ಸುಳ್ಳು ಜಗಳ ಮುಂತಾದವು ಅನೀತಿಯ ಬೀಜ ಈ ಬೀಜದ ಬಿತ್ತನೆಗೆ ಅವಕಾಶಕೊಟ್ಟರೆ ವ್ಯಕ್ತಿಗಾಗಲಿ ಕುಟುಂಬಕ್ಕಾಗಲಿ ಸರ್ವನಾಶ ಸಿದ್ಧ ಒಳ್ಳೇ ಕೆಲಸವನ್ನು ಮಾಡುವ ಬಲ ನಮಗೆ ಎಲ್ಲಿಂದಲೋ ಬರುವು ದಿಲ್ಲ. ನಮ್ಮೊಳಗೇ ಆ ಶಕ್ತಿ ಅಡಗಿದೆ, ಸರಿಯಾದ ಸಾಧನದಿಂದ ಅದನ್ನು ಬೆಳೆಸಬೇಕು ಜಗದ್ಧಿತಕ್ಕಾಗಿ ಅನವರತವೂ ದುಡಿಯುವುದೇ ಅತ್ಯುನ್ನತ ನೀತಿ ನಿಯಮ ಈ ಕೀಲಕ-ತತ್ವ ಅರ್ಥವಾದರೆ ಉಳಿದ ಎಲ್ಲ ನೀತಿ ನಿಯಮಗಳೂ ಅಂಗೈನೆಲ್ಲಿಕಾಯಿ

## ನೀತಿ ಕೃತಿ ಯಾವುದು ?

ನಾವು ಹೆಚ್ಚಾಗಿ ಸಂಪ್ರದಾಯ ಶರಣರು ನಾವು ಮಾಡುವ ಕೆಲಸ ಗಳಲ್ಲಿ ಸಾಧಾರಣವಾಗಿ ನೀತಿಯ ಪ್ರಶ್ನೆ ಹುಟ್ಟುವುದೇ ಇಲ್ಲ, ಅನೇಕ ವಿಷಯಗಳಲ್ಲಿ ಸಂಪ್ರದಾಯವನ್ನು ಅನುಸರಿಸುವುದು ಅಗತ್ಯವೇ ಸರಿ ಪ್ರತಿ ಯೊಬ್ಬನೂ ತನ್ನ ದಾರಿ ಹಿಡಿದರೆ ಲೋಕದಲ್ಲಿ ಬರೀ ಅವ್ಯವಸ್ಥೆಯಾಗಿ ಪ್ರಳಯವಾದೀತು ಹಾಗೆಂದು ಕಣ್ಣು ಮುಚ್ಚಿ ಸಂಪ್ರದಾಯದಂತೆ ನಡೆ ವುದು ನೀತಿಗೆ ವಿರೋಧ

ಸ್ವತಂತ್ರವಲ್ಲದ, ಆತ್ಮಸಂತೋಷ ಪ್ರೇರಿತವಲ್ಲದ ಕೃತಿ ನೀತಿಕೃತಿ ಯಲ್ಲ ಯಂತ್ರದಂತೆ ನಡೆದರೆ ನೀತಿಯ ಮಾತೇನು ಬಂತು? ಯಾವುದ ನ್ನಾದರೂ ನೈತಿಕ ಕೃತಿಯೆನ್ನಲು ಆ ಕೃತಿ ಮನಃಪೂರ್ಣವಾಗಿ, ಕರ್ತವ್ಯ ಭಾವನೆಯಿಂದ ಮಾಡಿದ್ದಾಗಬೇಕು ಯಂತ್ರದಂತೆ ಕೆಲಸ ಮಾಡುವುದ ರಲ್ಲಿ ಎರಡು ಪರಿ ಕಣ್ಣುಮುಚ್ಚಿ ಮಾಡಬಹುದು, ಕಣ್ಣು ತೆರೆದು ತಿಳಿದೂ ಮಾಡಬಹುದು ಅಪರಾಧಿಯನ್ನು ಕ್ಷಮಿಸಿದ ದೊರೆ ಒಳ್ಳೆ ಕೆಲಸಮಾಡಿದ, ಕ್ಷಮೆಯ ಈ ಸಂದೇಶವನ್ನು ಹೊತ್ತು ತಂದ ಆಳು ಬರೀ ಯಂತ್ರ. ಅವೇ ಆಳೇ ಈ ಸಂದೇಶ ತಿಳಿಸುವುದು ತನ್ನ ಕರ್ತವ್ಯವೆಂದು ತಿಳಿದು ಮಾಡಿದರೆ ಆಗ ಯಾಂತ್ರಿಕತೆ ತಪ್ಪಿ ಅವನ ಕೃತಿ ನೀತಿಕೃತಿಯಾಗುತ್ತದೆ.

ಇದು ಸರಿಯೆ ತಪ್ಪೆ ಎಂದು ಆಲೋಚಿಸದೆ ನಾಲ್ಕು ಜನ ನಡೆದ ದಾರಿಗೆ ನುಗ್ಗುವವನಿಗೆ ನೀತಿಯೆಂದರೇನೋ ಸದ್ಗುಣವೆಂದರೇನೋ ಗೊತ್ತಿಲ್ಲ ಸಂಪ್ರದಾಯಕ್ಕೆ ವಿರುದ್ಧವಾಗಿ ನಡೆದವರೇ, ಜಗದ್ಧಿತಕ್ಕಾಗಿ ಹೊಸ ದಾರಿ ತುಳಿದು ಹೊಸ ಮೇಲ್ಪಂಕ್ತಿ ಹಾಕಿದವರೇ ಲೋಕದಲ್ಲಿ ಶ್ರೇಷ್ಠ

ರೆನಿಸಿದಾರೆ, ನಾಯಕರೆನಿಸಿದಾರೆ ನಿರ್ಭಯವಾಗಿ ಯೋಚಿಸಲಾರದ, ಯೋಚಿಸಿದ್ದನ್ನು ನಿರ್ಭಯವಾಗಿ ಹೇಳಲಾರದ ಮನುಷ್ಯ, ತನ್ನ ಅಂತ ರಾತ್ಮ ಹೇಳಿದಂತೆ ಹಿಂಜರಿಯುವೆ ಮಾಡಲಾರದ ಮನುಷ್ಯ ನೀತಿವಂತ ನಾಗಲಾರ ತನ್ನ ಅಂತರ್ವಾಣಿ ದೈವವಾಣಿಯೆಂದು ಅರಿಯದಿದ್ದರೆ, ಪ್ರತಿ ಯೊಂದು ಕ್ರಿಯೆಗೂ ವಿಚಾರಕ್ಕೂ ಆ ಅಂತರ್ವಾಣಿಯೇ ಸರಿ ತಪ್ಪು ಎಂದು ನೀತಿನಿರ್ಣಯ ಮಾಡುವ ಪರಮಾಧಿಕಾರಿ ಎಂದು ಗುರುತಿಸ ದಿದ್ದರೆ, ಆ ನಿರ್ಭಯ ದಿಟ್ಟತನ ಬಾರದು

ಇದು ನೀತಿ ಇದು ಅನೀತಿ ಎಂದು ನಿರ್ಧರಿಸಲು ಆ ಕೆಲಸ ಮಾಡಿ ದವನ ಉದ್ದೇಶವನ್ನು ಗಮನಿಸಬೇಕು ಉದ್ದೇಶ ಬೇರೆಬೇರೆಯಾದರೆ ಅದೇ ಕೆಲಸ ಇಲ್ಲಿ ನೀತಿ ಅಲ್ಲಿ ಅನೀತಿ ಆಗಬಹುದು ಒಬ್ಬ ಕನಿಕರದಿಂದ ಬಡವರಿಗೆ ಅನ್ನ ನೀಡುತ್ತಾನೆ, ಇನ್ನೊಬ್ಬ ತನ್ನ ಮರ್ಯಾದೆಗಾಗಿಯೋ ಕೀರ್ತಿ ಸಂಪಾದನೆಗಾಗಿಯೋ ಮತ್ತಾವ ಸ್ವಾರ್ಥಕ್ಕಾಗಿಯೋ ಅನ್ನದಾನ ಮಾಡು ತ್ತಾನೆ ಕೆಲಸವೇನೋ ಒಂದೇ ಒಂದು ಶುದ್ಧ ನೀತಿ, ಇನ್ನೊಂದು ಶುದ್ಧ ಅನೀತಿ ಅಂತೇ ನೈತಿಕ ಉದ್ದೇಶದಿಂದ ಮಾಡದ ಕೆಲಸ ಯಾವುದೂ ನೀತಿವಂತವಾಗಲಾರದು ಫಲ ಒಳಿತಾದರೂ ಉದ್ದೇಶ ಸಾಧುವಲ್ಲದಿದ್ದರೆ ಅದು ನೀತಿಸಮ್ಮತವಲ್ಲ ಫಲದಿಂದ ಉದ್ದೇಶ ನಿರ್ದುಷ್ಟವಾಗದು

ಅನೇಕಸಲ ನೈತಿಕ ಕೃತಿಯ ಫಲ ನಮಗೆ ಕಾಣಬರುವುದಿಲ್ಲ, ಒಮ್ಮೊಮ್ಮೆ ಅನಿಷ್ಟ ಫಲವೂ ಸಿಗುತ್ತದೆ. ನಮ್ಮ ಕೆಲಸದ ಫಲ ಏನಾದೀ ತೆಂದು ಯೋಚಿಸುವುದು ನಮ್ಮ ಕೆಲಸವಲ್ಲ ನಮ್ಮ ಉದ್ದೇಶ ನಿರ್ದುಷ್ಟ ವಾಗಿದ್ದು ಮಾಡುವ ಕೆಲಸ ಒಳ್ಳೆಯದಾದರಾಯಿತು, ಉಳಿದುದು ದೈವ ಚಿತ್ತ ಸಿಕಂದರ್ ಚಕ್ರವರ್ತಿಯನ್ನು ಇತಿಹಾಸಕಾರರು 'ಶ್ರೇಷ್ಠ' ಎಂದು ಕರೆದಿದಾರೆ ತಾನು ಹೋದಲ್ಲೆಲ್ಲ ಆತ ಕಲೆ, ವಿಜ್ಞಾನ, ಯವನಸಂಸ್ಕೃತಿ ಸಂಪ್ರದಾಯ, ಶಿಕ್ಷಣಗಳನ್ನು ಬಿತ್ತಿದ ಅದರಿಂದ ಶುಭ ಪರಿಣಾಮವೂ ಆಯಿತು ಇವೆಲ್ಲವನ್ನೂ ಅವನು ಮಾಡಿದುದು ಕೀರ್ತಿಯ ಆಸೆಯಿಂದ, ಅವನ ನಡತೆ ನೀತಿಪೂರ್ಣವೆನ್ನಲಾದೀತೆ? ಸಿಕಂದರ್ ಶ್ರೇಷ್ಠ ಯೋಧ ನಾಗಿರಬಹುದು, ಶ್ರೇಷ್ಠ ರಾಜನಾಗಿರಬಹುದು, ಆದರೆ ಶ್ರೇಷ್ಠಪುರುಷ, ಸತ್ಪುರುಷ ಎನ್ನಲಾಗದು

ಎಂದರೆ-ಮಾಡಿದ ಕೆಲಸ ಒಳ್ಳೆಯದೇ ಆದರೂ ಸದುದ್ದೇಶದಿಂದಲೇ ಮಾಡಿದ್ದಾದರೂ ಆ ಕೆಲಸ ಸಂಪೂರ್ಣ ಸ್ವತಂತ್ರವೂ ಆತ್ಮ ಸಂತೋಷಾರ್ಥವೂ ಅಲ್ಲದಿದ್ದರೆ ಅದು ನೀತಿವಂತವಲ್ಲ ತಡಮಾಡಿ ಕಚೇರಿಗೆ ಹೋದರೆ ಕೆಲಸ ಹೋದೀತಲ್ಲ ಎಂದು ಬೆಳಗು ಮುಂಜಾನೆ ಎದ್ದರೆ ಅದರಲ್ಲಿ ಸದ್ಗುಣವೇನಿಲ್ಲ ಭೋಗ ವಿಲಾಸಕ್ಕೆ ಗತಿಯಿಲ್ಲದೆ ನಾನೂ ಸರಳ ಜೀವನ ನಡೆಸುತ್ತೇನೆಂದರೆ ಅದೊಂದು ಗುಣವೆನ್ನಲು ಆದೀತೆ? ಹಣವಂತನಾಗಿದ್ದರೂ ನೆರೆಹೊರೆಯ ಒಡವರಿಗೆ ಇಲ್ಲದುದನ್ನು ಅನುಭವಿಸುವುದು ಪಾಪ ಎಂಬ ಬುದ್ಧಿಯಿಂದ ಸರಳ ಜೀವನವನ್ನು ಸಂಕಲ್ಪಪೂರ್ವಕ ನಡೆಸಿದರೆ ಆಗ ನಾ ಮಾಡಿದ ಕೆಲಸ ನೀತಿವಂತವಾದದು ಕೆಲಸ ಬಿಟ್ಟು ಹೋದಾರಲ್ಲ ಎಂದು ಹೆದರಿ ನೌಕರರಿಗೆ ಹೆಚ್ಚು ಸಂಬಳ ಕೊಟ್ಟರೆ ನಾನು ಪುಣ್ಯಶಾಲಿಯಲ್ಲ ನಾನು ಗಳಿಸಿದುದರಲ್ಲಿ ಅವರಿಗೂ ಒಂದು ಪಾಲು ಇರಲಿ ಎಂದು ನಾನು ಹಾಗೆ ಮಾಡಿದರೆ ಅದು ಕಲ್ಯಾಣಕೃತಿ ಹೆದರಿಕೆಯಿಂದಲೋ ಬೆದರಿಕೆಯ ದೆಸೆಯಿಂದಲೋ ಬಲವಂತಕ್ಕಾಗಿಯೋ ಮಾಡಿದ ಕೆಲಸದಲ್ಲಿ ನೀತಿಯಿಲ್ಲ

ಹಾಗೆಯೆ, ಸ್ವಾರ್ಥದ ಸೋಂಕು ತಗಲಿದರೆ ಎಂಥ ಉತ್ತಮ ಕಾರ್ಯವಾದರೂ ನೀತಿಯ ಜಾಡು ಬಿಡುತ್ತದೆ ಸ್ವಾರ್ಥಕೃತ್ಯವೆಲ್ಲವೂ ಪಾಪ ಕೃತ್ಯವಲ್ಲ, ಆದರೆ ಅವನ್ನು ನೈತಿಕ ಕೃತ್ಯವೆಂದರೆ ನೀತಿಗೆ ದ್ರೋಹ ಮಾಡಿದಂತೆ ಪ್ರಾಮಾಣಿಕತೆಯೇ ಹೆಚ್ಚು ಲಾಭದಾಯಕವೆಂದು ಪ್ರಾಮಾಣಿಕನಾದವನು ನಿಜವಾಗಿ ಪ್ರಾಮಾಣಿಕನಲ್ಲ ಪ್ರೀತಿ ದಿವ್ಯಗುಣ, ಆದರೆ ಲಾಭಾಪೇಕ್ಷೆಯಾದ ಪ್ರೀತಿ ಗುಣವೇ ಅಲ್ಲ

ಪರಲೋಕದಲ್ಲಿ ಸುಖ ಸಿಗಲೆಂದು ಮಾಡುವ ಶುಭಕಾರ್ಯಗಳಾವುವೂ ನೀತಿಪೂರ್ಣವಲ್ಲ ಇದು ನ್ಯಾಯವಾದ್ದರಿಂದ ಈ ದಾರಿಯೇ ಸರಿ ಎಂದು ನ್ಯಾಯ ಮಾರ್ಗದಲ್ಲಿ ನಡೆದವನೇ ನಿಜವಾಗಿ ಸತ್ಪುರುಷ, ಗುಣಶಾಲಿ ಭಕ್ತಿಗೆ ಫಲ ಕೇಳದವನೇ ನಿಜವಾದ ಭಕ್ತ ಆದ್ದರಿಂದ ಗೆಳೆಯರಿಗೆ ಸತ್ಯವಂತ, ವೈರಿಗಳಿಗೆ ಅಸತ್ಯವಾದಿ ಆದವನು ಧೀರನಲ್ಲ, ಹೇಡಿ.

ಸಾರಾಂಶ ನೀತಿ ಅನೀತಿಗಳ ಮುದ್ರೆ ಒತ್ತುವುದು ಉದ್ದೇಶ ಆ ಕಾರ್ಯ ನೀತಿವಂತವೇ ಅಲ್ಲವೆ ಎಂದು ತೀರ್ಮಾನಿಸುವುದು ಅದನ್ನು

ಮಾಡಿದ ಉದ್ದೇಶ ಆದರೆ ಮನುಷ್ಯರ ಮನಸ್ಸಿನೊಳಗೆ ಹೊಕ್ಕು ಅವರ ಆಲೋಚನೆಯೇನೋ ತಿಳಿಯಲು ಸಾಧ್ಯವೆ? ಆದರಿಂದ ಯಾವ ಕೃತಿಯನ್ನೂ ಹೀಗೆ ಎಂದು ನಿರ್ಧರಿಸುವುದೂ ಕಷ್ಟ. ಆದರೆ ಎಷ್ಟೇ ಕಷ್ಟಸಾಧ್ಯವಾದರೂ ಅದೇ ಪರಮ ಸೂತ್ರ, ಅದನ್ನೇ ನಾವು ಅನುಸರಿಸಬೇಕು

## ಎಲ್ಲ ನಿಯಮಗಳಿಗೆ ಮೀರಿದ ನಿಯಮ

ಒಂದು ಕೆಲಸ ಒಳ್ಳೆಯದು ಕೆಟ್ಟದು ಎಂದು ನಿರ್ಧರಿಸುವಾಗ ಸಹಜವಾಗಿಯೇ ನೀತಿಯ ತಕ್ಕಡಿಯಲ್ಲಿ ಅದನ್ನು ತೂಗುತ್ತೇವೆ ಆ ಕೆಲಸದಿಂದ ಒಳ್ಳೆಯ ಫಲವಾಗುತ್ತದೆಯೆ ಕೆಟ್ಟ ಫಲವಾಗುತ್ತದೆಯೆ ಎಂಬುದಲ್ಲ ನಮ್ಮ ಒರೆಗಲ್ಲು ಒಳಿತು ಕೆಡಕು ಎಂದು ತೀರ್ಮಾನಿಸಲು ಪುರಾತನ ಕಾಲದಿಂದಲೂ ಕೆಲವು ಸೂತ್ರ, ವಿಚಾರ ನಮಗೆ ರಕ್ತಗತವಾಗಿ ಬಂದಿವೆ. ಯಾರಾದರೂ ಮತ್ತೊಬ್ಬರಿಗೆ ನೋವು ಕೊಟ್ಟರೆ, ತೊಂದರೆ ಮಾಡಿದರೆ ಆ ನೋವು ತೊಂದರೆ ನಮಗೆ ಆಲ್ಲದಿದ್ದರೂ, ಅವನ ಕೆಲಸವನ್ನು ತಪ್ಪು ಎನ್ನುತ್ತೇವೆ ಎಲ್ಲಾ ಕೆಲಸಗಳ ಉದ್ದೇಶ ನಮಗೆ ತಿಳಿಯುವದಿಲ್ಲ. ಅದರಿಂದ ನಮ್ಮ ನಿರ್ಣಯ ಎಷ್ಟೋಸಲ ತಪ್ಪಾಗಬಹುದು ಆದರೂ ಕೆಟ್ಟ ಕೆಲಸ ಕೆಟ್ಟ ಕೆಲಸವೇ, ಅದರಿಂದ ಸ್ವಲ್ಪ ಒಳ್ಳೇ ಫಲ ದೊರೆತರೂ ಅದು ಕೆಟ್ಟ ಕೆಲಸ ಅಕಾರ್ಯ-ಎಂದೇ ಹೇಳುತ್ತೇವೆ

ಆದ್ದರಿಂದ ನಮ್ಮ ಇಷ್ಟಾನಿಷ್ಟಗಳಿಗೂ ರುಚಿ ಅರುಚಿಗಳಿಗೂ ಯಾವುದಾದರೊಂದು ಕೆಲಸದ ನೈತಿಕ ಬೆಲೆಗೂ ಸಂಬಂಧವಿಲ್ಲವೆಂಬುದು ಸ್ಪಷ್ಟ. ಎಷ್ಟೋ ಸಲ ನಮ್ಮ ರುಚಿ, ಪ್ರೀತಿ ನಿಜವಾದ ನೀತಿಗೆ ವಿರುದ್ಧವಾಗಿ ಇರುತ್ತದೆ ಮಗುವಿಗೆ ಯಾವುದೋ ಪದಾರ್ಥವನ್ನು ಕೊಡುವಂತೆ ನಮ್ಮ ಮಮತೆ ಪ್ರೇರಿಸುತ್ತದೆ ಆ ಪದಾರ್ಥ ಮಗುವಿಗೆ ಅಪಾಯಕರವಾದರೆ ಅದನ್ನು ಕೊಡುವುದು ನೀತಿ ವಿರುದ್ಧ ನೀತಿನಿಯಮಗಳನ್ನು ಪಾಲಿಸದಿದ್ದರೆ ಪ್ರೀತಿಯೇ ವಿಷವಾದೀತು.

ನೀತಿನಿಯಮದ ಇನ್ನೊಂದು ಲಕ್ಷಣ ನಿತ್ಯ ನಿರ್ವಿಕಾರತ್ವ, ಅದಕ್ಕೆ ಏಳಿಲ್ಲ, ವ್ಯತ್ಯಾಸವಿಲ್ಲ. ಅದಕ್ಕೆ ದೇಶ ಜಾತಿ ಭೇದವಿಲ್ಲ. ಎಲ್ಲ ದೇಶ

ಗಳಿಗೂ ಎಲ್ಲ ಜಾತಿಗಳಿಗೂ ಒಂದೇ ಪರಿ ಸೂರ್ಯ ಕಣ್ಣು ತೆರೆದರೆ ಕಾಣುತ್ತಾನೆ, ಮುಚ್ಚಿದರೆ ಮರೆಯಾಗುತ್ತಾನೆ ಇದರಿಂದ ಸೂರ್ಯನಲ್ಲಿ ಏನೂ ವ್ಯತ್ಯಾಸವಿಲ್ಲ, ವ್ಯತ್ಯಾಸ ನಮ್ಮ ನೋಟದಲ್ಲಿ ಇದೇ ರೀತಿ, ಅಜ್ಞಾನದಿಂದ ನಮ್ಮ ಕಣ್ಣು ಕುರುಡಾಗಿರುವವರೆಗೆ ನೀತಿನಿಯಮ ನಮಗೆ ತಿಳಿಯಲಾರದು, ನಮ್ಮ ಕಣ್ಣು ಜ್ಞಾನದಿಂದ ನಿಚ್ಚಳವಾದರೆ ಸುಲಭವಾಗಿಯೆ ತಿಳಿಯುತ್ತದೆ ಏನೂ ಕಷ್ಟವಾಗದು ಅನೇಕರಿಗೆ ಏನೂ ಕಷ್ಟವಾಗದು ಅನೇಕರಿಗೆ ಬುದ್ಧಿ ಸ್ವಾರ್ಥ ದುಷ್ಟ, ಅದರಿಂದ ಅವರ ದೃಷ್ಟಿ ವಿಕೃತ ಅವರಿಗೆ ಅನೀತಿ ನೀತಿಯಾಗಿ, ತಪ್ಪು ಒಪ್ಪಾಗಿ, ಪಾಪ ಪುಣ್ಯವಾಗಿ ಕಾಣುತ್ತದೆ ಆದರೆ ಸ್ವಾರ್ಥವನ್ನೆಲ್ಲ ಬದಿಗೆ ಸರಿಸಿ ನೀತಿ ನಿಯಮವನ್ನೇ ಎಲ್ಲರೂ ಲಕ್ಷ್ಯವಾಗಿ ನೋಡುವ ಕಾಲ ಬರಲಿದೆ, ಬೇಗನೆ ಬರುತ್ತದೆ ನೀತಿಶಾಸ್ತ್ರ ಇನ್ನೂ ಶೈಶವಾವಸ್ಥೆಯಲ್ಲಿದೆ ಇಲ್ಲಿಯವರೆಗೆ ಬಾಹ್ಯ ಪ್ರಪಂಚದ ಪ್ರಕೃತಿಯ ಪರಿಶೋಧನೆಯಲ್ಲಿಯೆ ಜನ ಹೆಚ್ಚು ಆಸಕ್ತರಾಗಿದ್ದಾರೆ ನೀತಿಯ ಲೋಕದಲ್ಲಿ ನಿರ್ಭಯವಾಗಿ ಪರಿಶೋಧನೆ ಮಾಡುವ ಧೀರರು ಇನ್ನೂ ಹುಟ್ಟಿಲ್ಲ ಪ್ರಕೃತಿ ವಿಜ್ಞಾನದ ಜಿಜ್ಞಾಸೆಯಲ್ಲಿ ತೋರುತ್ತಿರುವ ಅನಾಸಕ್ತ ಶ್ರದ್ಧೆಯನ್ನು ನಾವು ನೀತಿಯ ಜಿಜ್ಞಾಸೆಯಲ್ಲಿ ತೋರಲು ಸಿದ್ಧರಾದರೆ ನಮಗೆ ನೀತಿ ಸೂತ್ರಗಳ ನಿಜ ಪರಿಚಯವಾಗುತ್ತದೆ, ಆಗ ಅವನ್ನು ಸಿದ್ಧಾಂತವಾಗಿ ಘೋಷಿಸಬಹುದು ನೀತಿ ಪ್ರಪಂಚದ ನಿಯಮಗಳು ನಮ್ಮ ಭಾವನೆ ಅಭಿಪ್ರಾಯಗಳಿಗೆ ಅಧೀನವಲ್ಲ, ಪೂರ್ಣ ಸ್ವತಂತ್ರ ಮಾನವ ಶಾಸನದಂತೆ ಅಸ್ಥಿರವಲ್ಲ, ಶಾಶ್ವತ, ನಿತ್ಯ, ಸತ್ಯ ಆದ್ದರಿಂದ ರಾಜಶಾಸನಕ್ಕಿಂತಲೂ ಹೆಚ್ಚಾಗಿ ನೀತಿಯ ಶಾಸನಕ್ಕೆ ನಾವು ತಲೆಬಾಗಬೇಕು ರಾಜಶಾಸನವನ್ನು ತಿರಸ್ಕರಿಸಿ ದೇವರ ಆಗ್ರಹಕ್ಕೆ ಗುರಿಯಾದರೆ ಸರ್ವನಾಶವೇ ಅಷ್ಟೇ ಅಲ್ಲ, ದೈವ ನಿಯಮಕ್ಕೆ, ಧರ್ಮಾನುಶಾಸನಕ್ಕೆ ರಾಜಶಾಸನ ವಿರುದ್ಧವಾದರೆ ಅದನ್ನು ಮೀರುವುದು ಅಗತ್ಯ ಕರ್ತವ್ಯವಾದೀತು

ರಾಜಶಾಸನಕ್ಕೂ ಧರ್ಮಶಾಸನಕ್ಕೂ ಬಹಳ ವ್ಯತ್ಯಾಸವಿದೆ ನೀತಿಯ ಶಾಸನ ಪೀಠ, ಧರ್ಮಪೀಠ ಮಾನವನ ಅಂತರಂಗದಲ್ಲೇ ಇದೆ ಸತ್ಯ ನಮ್ಮೊಳಗೇ ಇದೆ ನಮ್ಮಲ್ಲಿ, ಪ್ರತಿಯೊಬ್ಬರೂ ಅಂತರಂತರ್ ಸ್ಥಾನ

ಒಂದು ಇದೆ, ಅಲ್ಲಿ ಸತ್ಯ ಪರಿಪೂರ್ಣವಾಗಿ ಪ್ರಕಾಶಿಸುತ್ತಿದೆ ತಾನು ತಪ್ಪು ಮಾಡುತ್ತಿದ್ದೇನೆ ಎಂದು ಪ್ರತಿಯೊಬ್ಬ ತಪ್ಪುಗಾರನಿಗೂ ಗೊತ್ತು, ಅಸತ್ಯವನ್ನು ಸತ್ಯವೆಂದು ಯಾರೂ ಭ್ರಾಂತಿಗೊಳ್ಳರು ನೀಚಾತಿನೀಚರಾಗಿ ನೀತಿ ನಿಯಮವನ್ನು ಪಾಲಿಸದವರೂ ಸಹ ತಾವು ನೀತಿವಂತರೆಂದು ಸದ್ಗುಣಿಗಳೆಂದು ಜಂಭ ಕೊಚ್ಚುತ್ತಾರೆ, ನೀತಿಯ ಹಿರಿತ ಅವರಿಗೂ ಗೊತ್ತು ನೀತಿಯ ನಿಯಮದ ವೈಭವವೇ ಅಂಥದು ರೂಢಿ ಸಂಪ್ರದಾಯ ಜನಾಭಿಪ್ರಾಯಗಳಿಗೆ ಅದು ಎಂದೂ ಮನ್ನಣೆ ಕೊಡುವುದಿಲ್ಲ ಎಷ್ಟೋ ಸಲ ಸಂಪ್ರದಾಯಕ್ಕೂ ನೀತಿಗೂ ತಾಳ ಹೊಂದುವುದೇ ಇಲ್ಲ ಜನಕ್ಕೆ ತಿಳಿದಿದ್ದ ಸತ್ಯವೇ ಬೇರೆ, ಸಾಕ್ರಟೀಸನಿಗೆ ತಿಳಿದಿದ್ದ ಸತ್ಯವೇ ಬೇರೆ, ಆದ್ದರಿಂದ ಸಾಕ್ರಟೀಸ್ ಬಲಿದಾನ ಕೊಡಬೇಕಾಯಿತು ಆದರೆ ಯಾವ ಸತ್ಯಕ್ಕಾಗಿ ಆತ ಬಲಿದಾನ ಕೊಟ್ಟನೋ ಅದೇ ಶಾಶ್ವತ ಸತ್ಯ, ಎಂದೆಂದಿಗೂ ಅದೇ ಸತ್ಯವಾಗಿದ್ದೀತು ದೈವನಿರ್ಮಿತ ಪ್ರಪಂಚದಲ್ಲಿ ಸತ್ಯ ಸನ್ಮಾರ್ಗಗಳೇ ನಿಯಮ, ಅದೇ ಶಾಸನ

ನೀತಿಯ ನಿಯಮವನ್ನು ಧರ್ಮಶಾಸನವನ್ನು ವ್ಯಕ್ತಿಯಾಗಲಿ ರಾಷ್ಟ್ರವಾಗಲಿ ಯಾರೂ ನಿರ್ಲಕ್ಷ್ಯವಾಗಿ ತಿರಸ್ಕರಿಸಲಾರರು ಕದ್ದವನು ಏನು ಕದ್ದ? ತನ್ನ ಪುಣ್ಯವನ್ನೇ ಕದ್ದ ಮೋಸಗಾರ ತನಗೇ ಮೋಸ ಮಾಡಿದ ಅಸತ್ಯ ಅಧರ್ಮ ಒಂದೆರಡು ಗಳಿಗೆ ವಿಜೃಂಭಿಸಿಯಾವು, ಮುಂದೆ ಅದಕ್ಕೆ ವಿನಾಶ ಕಾದೇ ಇದೆ ಅಸ್ಸೀರಿಯಾ, ಬೇಬಿಲಾನ್ ಸಾಮ್ರಾಜ್ಯಗಳು ಅಧರ್ಮದಿಂದ ನಾಶವಾದವು ಗ್ರೀಸೂ ರೋಮೂ ನೀತಿಪಥವನ್ನು ಬಿಟ್ಟಾಗ ಆ ದೇಶಗಳ ಉತ್ತಮೋತ್ತಮ ವಿವೇಕಿಗಳು ಕೂಡ ಅವನ್ನು ಉಳಿಸಲಾಗಲಿಲ್ಲ ಫ್ರೆಂಚರ ಕ್ರಾಂತಿ ಬಹು ದೀರ್ಘಕಾಲದ ದುರ್ನೀತಿ ದುಷ್ಟತನಗಳ ಫಲ ಆದೇ ನೀತಿಮಾರ್ಗದಲ್ಲಿ ನಡೆದವನು ಯಾವಾಗಲೂ ಉತ್ತಮನಾಗುತ್ತಾನೆ, ಉನ್ನತಿಗೆ ಏರುತ್ತಾನೆ, ನೀತಿಯ ದಾರಿಯಲ್ಲಿ ನಡೆದ ಕುಟುಂಬ, ಸಮಾಜ ವೃದ್ಧಿಯಾಗುತ್ತದೆ, ಧರ್ಮಶಾಸನದಂತೆ ನೀತಿ ನಿಯಮದಂತೆ ನಡೆದ ಜನಾಂಗಕ್ಕೆ ಶಾಂತಿ ಸುಖ ಸ್ವಾತಂತ್ರ್ಯಗಳು ತಪ್ಪದೆ ಲಭಿಸಿಯಾವು

## ಧರ್ಮವೂ ನೀತಿಯೂ

ಸಾಧಾರಣವಾಗಿ ಧರ್ಮವೇ ಬೇರೆ ನೀತಿಯೇ ಬೇರೆ, ಒಂದಕ್ಕೊಂದು ಸಂಬಂಧವಿಲ್ಲ ಎಂಬ ಭಾವನೆಯಿದೆ ಈ ಪುಸ್ತಕದಲ್ಲಿ ಅಂಥ ಭೇದವನ್ನು ಒಪ್ಪಿಲ್ಲ ಧರ್ಮ ನೀತಿಯ ಅಂಗವಲ್ಲ ಎಂದು ತಿಳಿದವರೂ ನೀತಿಯಿದ್ದರೆ ಧರ್ಮ ಅಗತ್ಯವಿಲ್ಲ ಎಂಬವರೂ ಇದಕ್ಕಾಗಿ ನನ್ನನ್ನು ಬೈದಾರು ಆದರೂ ಇವೆರಡರ ಸಂಬಂಧ ಬಹು ಮುಖ್ಯವಾದುದು, ದೇಹಾತ್ಮನ್ಯಾಯದಂಥದ್ದು

ಸಾಮಾನ್ಯವಾಗಿ ನೀತಿನಿಯಮಗಳಿಗೆ ಧರ್ಮ ಅತೀತವೆಂದು ಜನ ತಿಳಿಯುತ್ತಾರೆ ಮಾಡುವ ಕೆಲಸ ದುರ್ನೀತಿಪೂರ್ಣವಾದರೂ ತಾವು ಧರ್ಮಿಷ್ಠರೆಂದು ಹೇಳಿಕೊಳ್ಳುವ ಜನ ಅನೇಕರಿದ್ದಾರೆ ಲೋಕದಲ್ಲಿ ಅದೇ ರೀತಿ ಪೂರ್ಣ ಸದ್ಗುಣಿಗಳೂ ನೀತಿವಂತರೂ ಆಗಿದ್ದರೂ ನಾನು ನಾಸ್ತಿಕ ಎಂದು ಹೇಳುವ ಬ್ರಾಡ್‌ಲಾನಂಥವರೂ ಇದ್ದಾರೆ. ಇವೆರಡೂ ಅಭಿಪ್ರಾಯ ತಪ್ಪು ಆದರೆ ನೀತಿಗೆಟ್ಟ ಧರ್ಮಾತ್ಮರು ಲೋಕಕ್ಕೆ ವೈರಿಗಳು, ಧರ್ಮದ ವೇಷದಲ್ಲಿ ತಮ್ಮ ದುಷ್ಟತನವನ್ನು ಮರೆಮಾಡುವ ಗೋಮುಖವ್ಯಾಘ್ರರು. ಧರ್ಮ-ನೀತಿ ಎರಡೂ ಜೊತೆಯಾಗಿಯೇ ಇರುತ್ತವೆ, ಬಿಡಿಬಿಡಿಯಾಗಲ್ಲ

ಪೂರ್ವಕಾಲದಲ್ಲಿ ಜನಕ್ಕೆ ಕುಲಕಟ್ಟಳೆ, ದೇಶಾಚಾರವೇ ಸಾಕಾಗಿತ್ತು ಸಮಾಜಕ್ಕೆ, ಬಾಳು-ಬದುಕಿಗೆ ಏನು ಬೇಕೋ ಅದನ್ನು ಮಾತ್ರ ಅವರು ಗಮನಿಸುತ್ತಿದ್ದರು ದುರ್ಗುಣವನ್ನು ಕ್ರಮೇಣ, ಕೊನೆಗೆ ಸದ್ಗುಣ ಗೆದ್ದೇ ಗೆಲ್ಲುತ್ತದೆ ದುಷ್ಟನಿಗೆ ವಿನಾಶ ಬಂದೇ ಬರುತ್ತದೆ ಎಂಬುದನ್ನು ಅರಿತುಕೊಂಡರು ಹೀಗಾಗಿ ಆತ್ಮಸಂರಕ್ಷಣಾರ್ಥವೆಂದು ಮನುಷ್ಯನಲ್ಲಿ ನೈತಿಕ ಬುದ್ಧಿ ಬೆಳೆಯಿತು ಆದರೆ ಧರ್ಮದ ವಿಚಾರ ಮಾತ್ರ ನಮ್ಮಲ್ಲಿ ಬೇರೂರಿಲ್ಲ ಯಾವುದಾದರೂ ವಿಪತ್ತು ಬಂದಾಗಲೇ ನಮಗೆ ಧರ್ಮದ ಯೋಚನೆ ಸಂಕಟ ಬಂದರೆ ವೆಂಕಟರಮಣ ಭಯದಿಂದ ಹುಟ್ಟಿದ ಭಕ್ತಿ ಭಕ್ತಿಯೇ ಅಲ್ಲ. ಆದರೆ ಸತ್ಯ ಅಸತ್ಯಗಳಲ್ಲಿ ಯಾವುದನ್ನಾದರೂ ಆರಿಸಿಕೊಳ್ಳುವ ಸಂದರ್ಭವೊಂದು ಎಲ್ಲರಿಗೂ ಖಂಡಿತವಾಗಿ ಬಂದೇಬರುತ್ತದೆ ಆಗ ಬಂದದ್ದೆಲ್ಲಾ ಬರಲಿ, ಆದದ್ದೆಲ್ಲಾ ಆಗಲಿ, ಪಾಪವದು ಬೇಡ, ಪುಣ್ಯವೇ ನನಗಿರಲಿ ಎಂದು ಧೀರಸಂಕಲ್ಪ ಮಾಡಬಹುದು ಹಾಗೆ ಮಾಡಿದರೆ ಆಗ ನೀತಿಯ ಅರ್ಥ ತಿಳಿದಂತೆ ಅಂತೇ ಧರ್ಮ ಬಿಟ್ಟ ನೀತಿ ಬರೀ ಕಪಟನೀತಿ.

ಪರರಿಗೆ ಕೆಡಕು ಮಾಡಿದರೆ ನಮಗೆ ಕೊಂಚ ಒಳಿತಾಗುವಂತಿದ್ದರೂ ಅದನ್ನು ಮಾಡಬಾರದು ಕೆಡಕು ಮಾಡಿ ಪಡೆದ ಒಳಿತು ಸ್ಥಿರವಲ್ಲ, ಕ್ಷಣಿಕವಾದುದು ಮೂರು ಲೋಕವನ್ನೂ ಗೆದ್ದೇನು ಫಲ, ಆತ್ಮಹೀನ ನಾದರೆ? ಜರ್ಮನಿ ವೃದ್ಧಿಗೆ ಬರಬೇಕೆಂದು ಬಿಸ್‌ಮಾರ್ಕ್ ಎಷ್ಟೋ ಪಾಪಕಾರ್ಯಗಳನ್ನು ಮಾಡಿದ ದಿನ ಬೆಳಗಾದರೆ ತರುಣರಿಗೆ ತಾನು ಉಪದೇಶಿಸುತ್ತಿದ್ದ ನೀತಿಸೂತ್ರಗಳೆಲ್ಲ ತನಗೇ ಮರೆತು ಹೋದವೆ? ಪರರಿಗೆ ಉಪದೇಶ ಮಾಡಿದ ದನ್ನು ತಾನೇ ಆಚರಿಸಬೇಕೆಂಬ ಯೋಚನೆಯೇಕೆ ಆತನಿಗೆ ತಟ್ಟಲಿಲ್ಲ? ಆಡಿದಂತೆ ಮಾಡಲಿಲ್ಲವೇಕೆ? ಆತನ ನೀತಿ ನಿಜವಾದ ನೀತಿಯಲ್ಲ, ಧರ್ಮಹೀನವಾದ ನೀತಿ ನಿಜವಾದ ನೀತಿಯಲ್ಲ ಇದೇ ಆ ನಡತೆಗೆ ಕಾರಣ ನೆಲದಲ್ಲಿ ಬಿತ್ತಿದ ಬೀಜಕ್ಕೆ ನೀರು ಇದ್ದಂತೆ ನೀತಿಗೆ ಧರ್ಮ ಬೀಜ ನೀರ ನ್ಯಾಯ ಅದು ನೀರುಹನಿಸದಿದ್ದರೆ ನೆಲದೊಳಗೆ ಬೀಜ ಉಸಿರುಗಟ್ಟಿ ಸಾಯುತ್ತದೆ ಧರ್ಮದ ಪ್ರಾಣದಾಯಕ ಪ್ರಭಾವ ವಿಲ್ಲದಿದ್ದರೆ ನೀತಿ ಬರಡಾಗಿ ಬಡಕಲಾಗಿ ಒಣಗಿ ಸತ್ತುಹೋಗುತ್ತದೆ ನಿಜವಾದ ಧರ್ಮ ನಿಜವಾದ ನೀತಿ ಒಂದಕ್ಕೊಂದು ವಾಗರ್ಥಗಳಂತೆ ಹೆಣೆದುಕೊಂಡಿವೆ ಧರ್ಮವಲ್ಲದ ನೀತಿ ಬರೀ ಬಯಲು, ಶೂನ್ಯಲೋಕ

ಪ್ರಪಂಚದ ಎಲ್ಲ ಶ್ರೇಷ್ಠ ಧರ್ಮಗಳೂ ಹೇಳಿರುವ ನೀತಿ ನಿಯಮ ಗಳೂ ನಡೆವಳಿಯ ಕಟ್ಟುಗಳೂ ಎಲ್ಲವೂ ಒಂದೇ ನೀತಿಯೇ ಧರ್ಮದ ಆಧಾರ ಎಂದು ಎಲ್ಲ ಧರ್ಮಸಂಸ್ಥಾಪಕರೂ ಆಚಾರ್ಯರೂ ಹೇಳಿದಾರೆ ತಳಹದಿಯನ್ನು ಅಲ್ಲಾಡಿಸಿದರೆ ಕಟ್ಟಡವೇ ಕುಸಿದು ಬೀಳುವಂತೆ ನೀತಿಯ ನೆಲೆಗಟ್ಟನ್ನು ಸಡಲಿಸಿದರೆ ಎಲ್ಲ ಧರ್ಮಗಳೂ ಮಣ್ಣು ಮುಕ್ಕಬೇಕಾದೀತು

ಮೇಲೆ ಹೇಳಿದುದರಿಂದ ನಿಜವಾದ ಧರ್ಮ ನಿಜವಾದ ನೀತಿ ಎರಡೂ ಒಂದೇ ಎಂಬುದು ಸ್ಪಷ್ಟವಾಗುತ್ತದೆ ಸತ್ಯಕ್ಕಿಂತ, ಶೀಲಕ್ಕಿಂತ ಮೇಲಾದ ಧರ್ಮವಿಲ್ಲ 'ಸತ್ಯಾನ್ನಾಸ್ತಿ ಪರೋಧರ್ಮಃ' ಮಾಡುವುದು ಅನಾಚಾರ ಮನೆಯ ಮುಂದೆ ಬೃಂದಾವನ ಆದರೆ, ಬಾಯಲ್ಲಿ ರಾಮನಾಮ ಮನಸ್ಸಿನಲ್ಲಿ ಕೀಳುಕಾಮ ಆದರೆ, ದೇವರ ಅನುಗ್ರಹ ದೊರೆತೀತೆ? ಆಸ್ತಿಕನೆಂದು ಹೇಳಿ ಕೊಳ್ಳುವ ಅನಾಚಾರಿ ಅಸತ್ಯವಾದಿ, ದೇವರ ಹೆಸರೂ ತಿಳಿಯದ ಸದಾಚಾರಿ ಸತ್ಯವಾದಿ ಇಬ್ಬರಲ್ಲಿ ಯಾರು ನಿಜವಾಗಿ ಧರ್ಮಾತ್ಮರು,

ನೀತಿವಂತರು? ಇದರಲ್ಲಿ ಸಂದೇಹವುಂಟೆ? ಬಾಯಾಡಂಬರದ ಮಿಥ್ಯಾಚಾರಿ ನಾಸ್ತಿಕ, ನಾಸ್ತಿಕನಿಗಿಂತಲೂ ಕೀಳು, ದೈವನಿಯಾಮಕದಂತೆ ನಿತ್ಯ ನಿರ್ವಿಕಾರ ನಿಯಮದಂತೆ ನಡೆಯುವ ಮತ್ತೊಬ್ಬ ನಿಜವಾಗಿಯೂ ಆಸ್ತಿಕ, ಭಕ್ತ. ಧರ್ಮ ಬೇರೆ ನೀತಿಪಾಲನೆ ಬೇರೆ ಅಲ್ಲ, ನೀತಿಪಾಲನೆಯೇ ಧರ್ಮಾಚರಣೆ, ನೈತಿಕ ಜೀವನವೆ ಧಾರ್ಮಿಕ ಜೀವನ

## ಡಾರ್ವಿನ್‌ನೂ ನೀತಿಯೂ

ನ್ಯಾಯವಾದುದನ್ನು ಯಾವ ಪ್ರೇರಣೆಯೂ ಇಲ್ಲದೆ ನಾವಾಗಿಯೇ ಸ್ವತಂತ್ರವಾಗಿ ಮಾಡುವುದೇ ನಿಜವಾದ ಸಾತ್ವಿಕತೆ ಮನಸ್ಸಿನಲ್ಲಿ ಮೂಡುವ ಕ್ಷಣಭಂಗುರ ಭಾವೋತ್ಸಾಹಕ್ಕೆ ಬಲಿಯಾಗದೆ, ಅಕಸ್ಮಾತ್ತಾಗಿ ಬೀಸುವ ಭಾವನೆಯ ಬಿರುಗಾಳಿಗೆ ಮಣಿಯದೆ, ತನಗೆ ಸರಿಯಾದ ದಾರಿಯೆಂದು ತೋರಿದುದನ್ನೆ ಅನುಸರಿಸುವ ಸಂಕಲ್ಪಬಲ, ಸಾಮರ್ಥ್ಯ ಇರುವವನೇ ಮನುಷ್ಯ ಎಲ್ಲ ವಿಷಯಗಳಲ್ಲೂ ನಮಗೆ ನಾವೇ ಒಡೆಯರಲ್ಲವಲ್ಲ ನಮ್ಮ ಪರಿಸ್ಥಿತಿಗೆ ತಕ್ಕಂತೆ ನಾವೇ ಹೊಂದಿಕೊಳ್ಳಬೇಕು ಹಾಗೆ ಪರಿಸ್ಥಿತಿಗೆ ಹೊಂದಿಕೊಳ್ಳುವಾಗ ನೀತಿ ಸೂತ್ರಗಳನ್ನು ದೃಢವಾಗಿ ಅನುಸರಿಸಬೇಕೋ ಬೇಡವೋ ಎಂಬುದೇ ಪ್ರಶ್ನೆ ನಾವೇನು ಬರೀ ಪರಿಸ್ಥಿತಿ ನಿರ್ಮಿತ ಪ್ರಾಣಿಗಳೆ?

ಈ ಸಂದರ್ಭದಲ್ಲಿ ಡಾರ್ವಿನ್‌ನ ಸಿದ್ಧಾಂತವನ್ನು ವಿಮರ್ಶಿಸೋಣ ಆತನ ಅಭಿಪ್ರಾಯದಂತೆ ಬಲಿಷ್ಠವಾದುದು ಮಾತ್ರ ಉಳಿಯುತ್ತದೆ ಅದೇ ಪ್ರಕೃತಿಯ ನಿಯಮ ಎಂದರೆ, ಮನುಷ್ಯನೂ ಉಳಿದ ಪ್ರಾಣಿಗಳೂ ಆತ್ಮಸಂರಕ್ಷಣೆಗಾಗಿ ಸದಾ ಯುದ್ಧ ಮಾಡುತ್ತಿವೆ, ಅವರಲ್ಲಿ 'ಬಲಿಷ್ಠ'ವಾದುದು ಮಾತ್ರ ಉಳಿಯುತ್ತದೆ, ಬಲಹೀನವಾದುದು ದಯಾರಹಿತವಾಗಿ ಧ್ವಂಸವಾಗಿ ಹೋಗುತ್ತದೆ ಉಳಿಯಲು ಬೇಕಾದ ಯೋಗ್ಯತೆ ಕೇವಲ ಬೌದ್ಧಿಕ ಶಾರೀರಿಕ ಮಾತ್ರವಾದರೆ ಮಾನವ ಲೋಕದ ವ್ಯವಹಾರದಲ್ಲಿ ನೀತಿಗ ಸ್ಥಾನವೇ ಇಲ್ಲ ಆದರೆ ನಿಜವಾಗಿ ಲೋಕ ಹಾಗಿದೆಯೆ? ನೀತಿ ನಿಯಮಕ್ಕೂ ಬಾಹ್ಯ ಜಗತ್ತಿಗೂ ನಿಕಟ ಸಂಬಂಧವಿದೆಯೆಂದು ಡಾರ್ವಿನ್ ಹೇಳಿದಾನೆ

ಕರಡಿ ಕೋಣ ಗೂವಲಾದ ಪ್ರಾಣಿಗಳಿಗಿಂತ ಮನುಷ್ಯ ದೇಹಬಲ ದಲ್ಲಿ ಕೀಳು ದೇಹಬಲದ ಪೋಟಿಯಲ್ಲಿ ಸೋಲು ಇವನಿಗೇ ಖಂಡಿತ ಆದರೂ ತನ್ನ ಬುದ್ಧಿಬಲದಿಂದ ಆ ಪ್ರಾಣಿಗಳ ಮೇಲೆ ಯಾಜಮಾನ್ಯ ಗಳಿಸಿ ಕೊಂಡಿದ್ದಾನೆ ಹಾಗೆಯೇ ಮಾನವಸಮೂಹದಲ್ಲಿ ಪೋಟಿ ಬಿದ್ದರ ಬರೀ ಸಂಖ್ಯಾಬಲಕ್ಕೆ ಗೆಲವು ಸಾಧ್ಯವಲ್ಲ ಯಾವ ಪಕ್ಷದ ನಾಯಕ ಹೆಚ್ಚು ಬುದ್ಧಿಶಾಲಿಯೋ ಆ ಪಕ್ಷಕ್ಕೆ ಎಷ್ಟೇ ಆತಂಕವಿದ್ದರೂ ಗೆಲವು ಸುಲಭಸಾಧ್ಯ ಅಂತೇ ದೇಹಬಲಕ್ಕಿಂತ ಬುದ್ಧಿಬಲ ನಿರ್ವಿವಾದವಾಗಿ ಶ್ರೇಷ್ಠ

ಬುದ್ಧಿಬಲಕ್ಕಿಂತ ನೀತಿಬಲ ಶ್ರೇಷ್ಠ, ಡಾರ್ವಿನ್ನೇ ಇದನ್ನು ಒಪ್ಪಿ ಕೊಂಡಿದಾನೆ ಈ ಜಗತ್ತಿನಲ್ಲಿ ಉಳಿಯುವವರು ನೈತಿಕಯೋಗ್ಯತೆ ಯುಳ್ಳವರೇ ಡಾರ್ವಿನ್ ಹೇಳಿದುದು ಪ್ರಕೃತಿನಿಯಮಗಳ ಸರ್ವಶ್ರೇಷ್ಠತೆ, ಆದ್ದರಿಂದ ಈ ಲೋಕದಲ್ಲಿ ನೀತಿನಿಯಮಗಳಿಗೆ ಸ್ಥಾನವೇ ಇಲ್ಲ ಎಂದು ಕೆಲವರು ತಿಳಿದಿದ್ದಾರೆ ಇದು ಶುದ್ಧಾಂಗವಾಗಿ ತಪ್ಪು ಜಗತ್ತಿನ ಇತಿಹಾಸವನ್ನು ಓದಿದರೆ ನೀತಿನಿಯಮದ ಶಾಸನ ನಿತ್ಯ ಶಿಲಾಶಾಸನ, ಆಚಂದ್ರತಾರಾರ್ಕಪರ್ಯಂತವಿರುವ ಶಾಸನ ಎಂಬ ಸತ್ಯ ಹೊಳೆಯುತ್ತದೆ 'ಸತ್ಯಮೇವ ಜಯತೇ, ನಾನೃತಂ' ಕಡೆಗೂ ಸತ್ಯವೇ ಗೆಲ್ಲುತ್ತದೆ, ಸುಳ್ಳು ಅಲ್ಲ ಸತ್ಯ ಧರ್ಮ ಕಡೆತನಕ ಬಾಳುತ್ತವೆ, ಒದುಕುತ್ತವೆ ಸುಳ್ಳು ಅಧರ್ಮ ಬಹುಕಾಲ ಬದುಕಲೂಬಹುದು, ಆದರೆ ಅದಕ್ಕೆ ವಿನಾಶ ಕಾಲ ಬಂದೇಬರುತ್ತದೆ ಜಗತ್ತಿನ ಕ್ರಾಂತಿಗಳೇ ಇದಕ್ಕೆ ಸಾಕ್ಷಿ.

ನೀತಿನಿಯಮದ ಉತ್ಕೃಷ್ಟತೆಯನ್ನು ತೋರಿಸಲು ದಿನಚರಿ ಜೀವನ ದಿಂದಲೂ ದೃಷ್ಟಾಂತಗಳನ್ನು ತೋರಿಸಬಹುದು ವಿನಯ ನೀತಿಗುಣ ಗರ್ವಿಯೂ ಅಹಂಕಾರಿಯೂ ಆದವನು ಕೆಲವು ದಿನ ಮೆರೆದಾನು, ಕಡೆಗೆ ಸಂಕಟ ಅನುಭವಿಸಲೇಬೇಕು ಭೋಗವಿಲಾಸವನ್ನು ದೂರೀಕರಿಸುವ ನಿಗ್ರಹ ಮತ್ತೊಂದು ನೀತಿಗುಣ ಇಂಗ್ಲೆಂಡಿನಲ್ಲಿ ೩೮–೩೫ರ ವಯಸ್ಸಿನಲ್ಲಿ ಕುಡಿತವನ್ನು ಕಲಿತವನಿಗೆ ಮುಂದೆ ೧೩–೧೪ ವರ್ಷ ಮಾತ್ರ ವಯಸ್ಸು ಹಾದರ ಕಡುಕೀಳು ನೈತಿಕಾಪರಾಧ ಈ ವ್ಯಸನಪೀಡಿತರು ಸಾಧಾರಣ ವಾಗಿ ಅಕಾಲಮರಣಕ್ಕೆ ತುತ್ತಾಗುತ್ತಾರೆ ಅವರ ಸಂತಾನ ದುರ್ಬಲ, ನಿಶ್ಶಕ್ತ ವಯಸ್ಸಾದ ಹಾಗೆ ಅವರೇ ನಪುಂಸಕರಾಗಿ ಹೋಗುತ್ತಾರೆ

ಬೇರೆ ಬೇರೆ ಜನಾಂಗಗಳನ್ನು ನೋಡಿದರೂ ನೀತಿಯ ಶಾಸನ ಎಷ್ಟು ಅಸ್ಖಲಿತವೋ ಅವಿಚಲವೋ ತಿಳಿಯುತ್ತದೆ ಅಂಡಮಾನ್ ದ್ವೀಪಗಳಲ್ಲಿ ಮಗು ಹೆತ್ತ ಕೂಡಲೆ ಹೆಣ್ಣನ್ನು ಗಂಡು ಕೈಬಿಡುತ್ತಾನೆ ಹಡೆವತನಕ ಹೆಂಡತಿ ಇದು ಕೇವಲ ಸ್ವಾರ್ಥ, ನೀತಿವಿರುದ್ಧ ಇದರ ಫಲವಾಗಿ ಅವರ ಜಾತಿಯೇ ನಿರ್ನಾಮವಾಗುತ್ತಿದೆ ಡಾರ್ವಿನ್ ಹೇಳುವಂತೆ ತೀರ ಚಿಕ್ಕ ಜಂತುಗಳಲ್ಲೂ ನೀತಿಯ ಬುದ್ಧಿ ಇದೆ ಎಂಥ ಹೇಡಿ ಜಂತುವಾಗಲಿ ತನ್ನ ಮರಿಗಳಿಗಾಗಿ ಹೋರಾಡುತ್ತದೆ ತನ್ನ ಪ್ರಾಣ ಕೊಟ್ಟಾದರೂ ಮರಿಗಳನ್ನು ಕಾಪಾಡಲು ಯತ್ನಿಸುತ್ತದೆ ಎಲ್ಲ ಜೀವಜಂತುಗಳಿಗೂ ನೀತಿಬುದ್ಧಿ ಇದೆ ಇಲ್ಲದಿದ್ದರೆ ಜಗತ್ತಿನಲ್ಲಿ ಜೀವರಾಶಿಯೇ ಇರುತ್ತಿರಲಿಲ್ಲ, ನಾಶವಾಗುತ್ತಿತ್ತು ಜಗತ್ತು ಮರಳುಗಾಡಾಗುತ್ತಿತ್ತು ತಿರ್ಯಗ್ಜಂತು ಗಳಿಗಿಂತ ಮನುಷ್ಯನಲ್ಲಿ ನೀತಿದೃಷ್ಟಿ ಸೂಕ್ಷ್ಮ, ತನ್ನ ಕುಟುಂಬಕ್ಕಾಗಿ, ಕುಲಕ್ಕಾಗಿ, ದೇಶಕ್ಕಾಗಿ ಅವನು ತನ್ನ ಪ್ರಾಣವನ್ನೇ ಕೊಡಬಲ್ಲ ಈ ನೀತಿಬಲವೇ ಮನುಷ್ಯನ ಶ್ರೇಷ್ಠತೆಗೆ ಕಾರಣ ಹೀಗೆ ಡಾರ್ವಿನ್‌ನ 'ಸತ್ತ್ವಕ್ಕೆ ಮಾತ್ರವೇ ಉಳಿಗಾಲ' ಎಂಬ ತತ್ತ್ವದ ಪ್ರಕಾರವೂ ಮನುಷ್ಯ ತಾನು ಮಾಡುವ ಎಲ್ಲಾ ಕೆಲಸದಲ್ಲಿಯೂ ನೀತಿಯನ್ನು ಪಾಲಿಸ ಬೇಕೆಂದಾಯಿತು ರಾಶಿ ರಾಶಿ ಒಟ್ಟಿದ ಐಶ್ವರ್ಯವಲ್ಲ, ದೇಶ ದೇಶಗಳನ್ನು ಸುಡುವ ಫಿರಂಗಿ ಸುರಂಗಿಗಳಲ್ಲ, ಮನುಷ್ಯನ ಸರ್ವಶ್ರೇಷ್ಠತೆಗೆ ಕಾರಣ, ಅವನ ಸತ್ಯಸಂಧತೆ, ಸದ್ಗುಣಶೀಲತೆ.

## ನೀತಿಯೂ ಜಗದ್ಧಿತವೂ

ಇಷ್ಟು ಹೇಳಿದ ಮೇಲೆ ಮಾನವಲೋಕದ ಯೋಗಕ್ಷೇಮವೂ ನೀತಿ ಪಾಲನೆಯೂ ಒಂದಕ್ಕೊಂದು ತಳುಕು ಹಾಕಿಕೊಂಡಿದೆ ಎಂಬುದು ಸ್ಪಷ್ಟ ವಾಗಿ ಕಾಣುತ್ತದೆ ಪ್ರೀತಿ, ಔದಾರ್ಯ, ಕೃತಜ್ಞತೆ, ದೇಶಭಕ್ತಿ ಮೊದಲಾದ ಎಲ್ಲ ನೈತಿಕ ಗುಣಗಳಿಗೂ ಮಾನವಲೋಕದ ಕಲ್ಯಾಣವೇ ಅಂತಿಮ ಲಕ್ಷ್ಯ ಕೇವಲ ಒಬ್ಬ ವ್ಯಕ್ತಿಯ ಹಿತವನ್ನು ಮಾತ್ರವೇ ಸಾಧಿಸುವ ಸದ್ಗುಣ ಒಂದೂ ಇಲ್ಲ ಅದೇ ರೀತಿ ತಪ್ಪು ಮಾಡಿದವನ ಜೊತೆಗೆ ಹಲವಾರು ಜನ ಇತರರಿಗೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನೋವು

ಕೊಡದ ನೈತಿಕ ಅಪರಾಧವೇ ಇಲ್ಲ. 'ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಸರ್ವ ಜನಾಃ' ಒಬ್ಬ ಮಾಡಿದ ಪಾಪದ ಫಲ ಎಲ್ಲರೂ ಉಣ್ಣಬೇಕು, ತಪ್ಪಿದ್ದಲ್ಲ ಅಂತೇ ನನ್ನ ಪಾಡಿಗೆ ನಾನು, ನಾನು ಪಾಪಿಯಾದರೇನು, ಯಾರಿಗೇನು ಎನ್ನಲು ಬಾರದು ಅವರವರ ಪಾಪಪುಣ್ಯ ಅವರಿಗೆ ಮಾತ್ರ ವಲ್ಲ, ಇಡೀ ಸಮಾಜಕ್ಕೆ, ಅಷ್ಟೇ ಅಲ್ಲ ಲೋಕಕ್ಕೇ ಸೇರಿದುದು

ಕುಲಕಟ್ಟಳೆ, ಸಮಾಜ ನಿಯಮಗಳನ್ನು ಮುರಿದು ಕುಲದ ಹೊರಗೆ ಹೋಗಿ ನಿಂತರೂ ಹಾಗೆ ಮಾಡಿದವನ ಕ್ರಿಯಾಫಲ, ಅವನ ಪ್ರಭಾವ ಎಲ್ಲರಿಗೂ ಸೇರುತ್ತದೆ ಭಾವ ಪ್ರಪಂಚಕ್ಕೆ ವಿಚಾರ ಲೋಕಕ್ಕೆ ಯಾವ ಬಗೆಯ ಎಲ್ಲೆಯೂ ಇಲ್ಲ ಇಂಥ ಸಂಪ್ರದಾಯ ತಪ್ಪು ಎಂದು ಮನಸ್ಸಿಗೆ ನಿರ್ಧಾರವಾದರೆ, ತನ್ನ ಅಭಿಪ್ರಾಯವನ್ನು ಯಾರೇ ಒಪ್ಪಲಿ ಬಿಡಲಿ, ಧೀರನಾದವನು ಆ ಸಂಪ್ರದಾಯವನ್ನು ತಿರಸ್ಕರಿಸಿಯೇ ತೀರುತ್ತಾನೆ ತಾನು ತಪ್ಪೆಂದು ತಿಳಿದುದರ ಸಂಬಂಧವನ್ನು ಕಡಿದು ಹಾಕುವುದು ಮೊಟ್ಟ ಮೊದಲನೆಯ ಕೆಲಸ ಆಮೇಲೆ ಇತರರನ್ನು ತನ್ನ ದಾರಿಗೆ ತಿರುಗಿಸುವ ಕೆಲಸ ವೀರಾಧಿವೀರರೂ ಋಷಿಗಳೂ ಪ್ರವಾದಿಗಳೂ ಈ ಎಲ್ಲರೂ ಈ ಬಗೆಯ ಜನ ಅವರು ನಿರ್ಮಲಜೀವನ, ನಿಶ್ಚಲದಾರ್ಢ್ಯ, ಸತ್ಯಾನ್ವೇಷಣ ಮತ್ತು ತಪಸ್ಸುಗಳಿಂದ ಲೋಕದ ವಿಚಾರಪದ್ಧತಿಯಲ್ಲಿ ಎಷ್ಟೋ ಪರಿವರ್ತನೆಗಳನ್ನು ಮಾಡಿದಾರೆ

ಪರರ ಸುಖ ಸಂತೋಷದ ಪರಿವೆಯೇ ಇಲ್ಲದ ನೀಚ ಸ್ವಾರ್ಥಿಯು ಪಶುವಿಗಿಂತಲೂ ಹೀನ ತನ್ನ ಕುಟುಂಬದ ಹಿತಚಿಂತನೆ ಮಾಡತೊಡಗಿದರೆ ಪಶುತ್ವದ ಮೆಟ್ಟಿಲನ್ನು ಬಿಟ್ಟು ಮೇಲೇರಿದಂತೆ ತನ್ನ ಕುಲವೆಲ್ಲವೂ ಜಾತಿಯೆಲ್ಲವೂ ತನ್ನ ಕುಟುಂಬ ಎಂದು ತಿಳಿದರೆ ಮೆಟ್ಟು ಇನ್ನೂ ಮೇಲೇರಿತು ಕಾಡುಜನರು ಅನಾಗರಿಕರು ಕೂಡ ನಮ್ಮವರೇ ಎಂದುಕೊಂಡರೆ ಇನ್ನೂ ಮೇಲು ಮೆಟ್ಟಿಲಿಗೆ ಏರಿದಂತೆ ಲೋಕ ಕಲ್ಯಾಣಕ್ಕಾಗಿ ಜಗದ್ಧಿತಕ್ಕಾಗಿ ಎಷ್ಟೆಷ್ಟು ದುಡಿಯುತ್ತಾನೋ ಅಷ್ಟಷ್ಟು ಮಟ್ಟಿಗ ಮನುಷ್ಯ ಶ್ರೇಷ್ಠನಾಗುತ್ತಾನೆ, ಉತ್ತಮನಾಗುತ್ತಾನೆ

ಮಾನವ ಲೋಕದ ಪ್ರತಿಯೊಬ್ಬ ವ್ಯಕ್ತಿಯಲ್ಲೂ ನಮಗೆ ಸಹಾನುಭೂತಿ ಹುಟ್ಟದೆ ನೀತಿ ನಿಯಮ ನಮಗೆ ಅರ್ಥವಾಯಿತೆನ್ನಲಾಗದು.

ಉನ್ನತ ನೀತಿ ವಿಶ್ವವ್ಯಾಪ್ತಿ ವಿಶ್ವತೋಮುಖಿ ಜಗತ್ತಿನಲ್ಲಿರುವ ಪ್ರತಿಯೊಬ್ಬ ಜೀವಿಗೂ ನಮ್ಮಿಂದ ಸೇವೆ ಮಾಡಿಸಿಕೊಳ್ಳುವ ಅಧಿಕಾರವಿದೆ ಎಲ್ಲ ರೀತಿಗಳಲ್ಲೂ ನಾವು ಶ್ರದ್ಧಾಪೂರ್ವಕವಾಗಿ ಲೋಕಸೇವೆ ಮಾಡಬೇಕು ತಮ್ಮ ಪಾಡಿಗೆ ತಾವು ಎಂಬುವರು ಉನ್ನತ ಗುಣಿಗಳಾಗಲಾರರು ತನ್ನ ಯೋಗಕ್ಷೇಮವನ್ನು ತಾನು ನೋಡಿಕೊಳ್ಳದವನು ಜೀವನ ಸಂಗ್ರಾಮದಲ್ಲಿ ಉರುಳಿ ಬೀಳುತ್ತಾನೆ ಎಂಬುದು ಮೂಢಾಭಿಪ್ರಾಯ, ಅಪಾಯಕರ ವಿಚಾರ ಒಂದೇ ಗುರಿಯಿಟ್ಟು ಪವಿತ್ರ ಬುದ್ಧಿಯಿಂದ ಲೋಕಸೇವೆ ಮಾಡು ವವರನ್ನು ದೇವರು ಕೈಬಿಡುವುದಿಲ್ಲ 'ಯೋಗಕ್ಷೇಮಂ ವಹಾಮ್ಯಹಂ' ಎಂದು ಹೇಳಿಲ್ಲವೆ

ಎಲ್ಲರೂ ನೀತಿಯ ನಿಯಮಕ್ಕೆ ಅಧೀನರೇ ಆದುದರಿಂದ ಮಾನವ ರೆಲ್ಲ ಒಂದೇ, ಒಂದೇ ಮಾನವ ಲೋಕ ದೇವರ ದೃಷ್ಟಿಯಲ್ಲಿ ಎಲ್ಲರೂ ಒಂದೇ, ಎಲ್ಲರೂ ಸಮಾನರೇ ಜಾತಿ ಕುಲ ಪದವಿಗಳ ಭೇದವಿದೆ ಆದರೆ ಎಷ್ಟೆಷ್ಟು ಉನ್ನತಸ್ಥಾನವೋ ಅಷ್ಟಷ್ಟು ಹೆಚ್ಚು ಜವಾಬ್ದಾರಿ ಮನುಷ್ಯನಿಗೆ ನಾವು ಉನ್ನತ ಸ್ಥಾನದಲ್ಲಿದ್ದರೆ ನಮ್ಮ ಆಧಿಕ್ಯದ ಬಡಾಯಿ ಕೊಚ್ಚಿಕೊಳ್ಳ ಬಾರದು, ಕೆಳಗಿನವರನ್ನು ಹೀನನಾಗಿ ಕಾಣಬಾರದು ಅವರ ಕೆಲಸ ಅವರಿಗೆ, ನಮ್ಮ ಕೆಲಸ ನಮಗೆ ಎಲ್ಲರೂ ಮಾಡುವುದೂ ಒಂದೇ ನಿಟ್ಟಿನ ಕೆಲಸ–ಮಾನವ ಲೋಕದ ಯೋಗಕ್ಷೇಮದ ಕೆಲಸ ಹೀಗಲ್ಲದೆ ಅನ್ಯಥಾ ಭಾವಿಸಿದರೆ ನಾವು ನೀತಿವಂತರಾಗಲಾರೆವು

ತನ್ನ ಲಾಭಕ್ಕಾಗಿ ಒಂದು ದೇಶ ಇನ್ನೊಂದು ದೇಶವನ್ನು ಕೈಮುಷ್ಟಿ ಲ್ಲಿಟ್ಟುಕೊಳ್ಳುವುದು ನೀತಿಯಲ್ಲ, ತಪ್ಪು ಎಂದು ಇದರಿಂದ ತಿಳಿಯುತ್ತದೆ ಚೆನ್ನಾಗಿ ಮುಂಬರಿದು ವೃದ್ಧಿಗೊಂಡ ದೇಶದ ಅಧೀನದಲ್ಲಿ ಅಷ್ಟು ವೃದ್ಧಿ ಯಾಗಿರದ ದೇಶ ಇದ್ದರೆ, ಅಧೀನ ದೇಶದ ಜನರನ್ನು ತನ್ನ ಜನರ ಮಟ್ಟಕ್ಕೆ ಹತ್ತಿಸಲು ಸರ್ವ ಪ್ರಯತ್ನವನ್ನೂ ಮಾಡಬೇಕಾದುದು ವೃದ್ಧಿಗೊಂಡ ದೇಶದ ವಿಧಿ ಹೀಗೆಯೆ, ದೊರೆ ತನ್ನ ಪ್ರಜೆಗಿಂತ ತಾನು ಶ್ರೇಷ್ಠ ಎಂದು ತಿಳಿಯಬಾರದು, ವಿಚಾರಿಸಿ ನೋಡಿದರೆ ದೊರೆ ಪ್ರಜಾಸೇವಕ ಅಧಿಕಾರ ವಿದ್ದವರು ಲೋಕಹಿತಕ್ಕಾಗಿ ಪರೋಪಕಾರಕ್ಕಾಗಿ ಅದನ್ನು ಉಪಯೋಗಿಸ

ಬೇಕು ನೀತಿಯು ತಳಹದಿಯ ಮೇಲೆ ಕಟ್ಟಿದ, ನೀತಿವಂತ ನಿಸ್ವಾರ್ಥಿ ಸ್ತ್ರೀಪುರುಷರಿಲ್ಲದ ಪ್ರಜಾತಂತ್ರ ನಿರಂಕುಶಾಧಿಕಾರಕ್ಕಿಂತಲೂ ಅಧಮ.

ಆಯಾ ಜಾತಿಯಲ್ಲಿ ಆಯಾ ದೇಶದಲ್ಲಿ ಬಲಶಾಲಿಗಳಾದವರು ದುರ್ಬಲರನ್ನು ದಲಿತರನ್ನು ಕಾಪಾಡಬೇಕು ಈ ರೀತಿಯ ಅಭಯಪ್ರಧಾನ ಅವರ ಮುಖ್ಯ ಕರ್ತವ್ಯ ವಿಧಿ ಎಂದು ತಿಳಿಯಬೇಕು ಸೇವಾಧರ್ಮ ಎಲ್ಲರಿಗೂ ಅರ್ಥವಾದರೆ, ತಮ್ಮ ಕರ್ತವ್ಯ ಸೇವೆಮಾಡುವುದು ಎಂದು ಎಲ್ಲರಿಗೂ ಅರಿವಾದರೆ, ಆಗ ಧನ ಸಂಗ್ರಹ ಮಾಡುವುದು ಪಾಪವೆಂದು ತಿಳಿದುಕೊಂಡಾರು ಆಗ ಬಡವ ಬಲ್ಲಿದ, ರಾಯ ರಂಕರ ಭೇದ ಇಲ್ಲವಾದೀತು ಅದರ ಫಲವಾಗಿ ಬರಗಾಲ ಉಪವಾಸ ಮಾಯವಾದಾವು ಲೋಕದಲ್ಲಿ ನೀತಿ ಅಪರೂಪವಲ್ಲ, ನೀತಿವಂತರು ಬಹಳಿಲ್ಲವಲ್ಲ ಎಂದು ನೀತಿಪಥಗಾಮಿಗಳು ಅಧೀರರಾಗಬಾರದು ಸಲ್ಲುವದನ್ನು ಮಾಡುವುದು ಅವರ ಕೆಲಸ, ಉಳಿದುದು ದೇವರ ಭಾರ ತಾವು ಮಾಡಿದ ಕೆಲಸದ ಫಲದ ಯೋಚನೆ ಅವರಿಗೆ ಸಲ್ಲದು, ಚೆನ್ನಾಗಿ ಮಾಡಿದ ಕೆಲಸಕ್ಕೆ ಮಾಡಿದ್ದೇ ಫಲ

## ಕೊನೆ ಮಾತು

ಪ್ರತಿಯೊಬ್ಬರಿಗೂ ಅವರವರ ಜವಾಬುದಾರಿ, ಅವರವರ ಕರ್ತವ್ಯ ಇದ್ದೇ ಇದೆ 'ಇದು ನಿನ್ನ ಕರ್ತವ್ಯ ಗೆಲ್ಲುವದಕ್ಕೂ ಸೋಲುವದಕ್ಕೂ ನಿನಗೆ ನೀನೇ ಕಾರಣ ಯಾಕೆಂದರೆ ನಿನ್ನಂತೆ ಇರುವವನು ನೀನೊಬ್ಬನೇ ಒಂದೇ ವಿಧವಾದ ಎರಡು ಪದಾರ್ಥಗಳನ್ನು ಸೃಷ್ಟಿಸುವುದು ಪ್ರಕೃತಿಯ ಲಕ್ಷಣವಲ್ಲ ಅಂತೇ ನಿನ್ನ ಕೆಲಸವನ್ನು ನೀನು ಮಾಡದಿದ್ದರೆ ಇತರರು ಯಾರೂ ಮಾಡರು, ಎಂದೆಂದಿಗೂ ಆ ಕೆಲಸ ಹಾಗೇ ಬಿದ್ದಿರುತ್ತದೆ' ಎಂದು ಯಾವಾಗಲೂ ಒಳಗಿನ ಒಳದನಿಯೊಂದು ಮೆಲುವಾಗಿ ಪ್ರತಿಯೊಬ್ಬನ ಕಿವಿಯಲ್ಲೂ ಹೇಳುತ್ತಿರುತ್ತದೆ

ಸ್ವಾರ್ಥರಹಿತನಾಗಿ ಪರರ ಸೇವೆ ಮಾಡುವುದು ಮನುಷ್ಯನ ಕರ್ತವ್ಯ. ಆ ಸೇವೆಯನ್ನು ಉಪಕಾರ ಬುದ್ಧಿಯಿಂದ ಮಾಡಬಾರದು ಅದು ತನ್ನ ಜೀವನ ಧರ್ಮವೆಂದು ಮಾಡಬೇಕು ಇದು ನಮ್ಮ ಸ್ವಂತ ವಿಷಯ, ಯಾರಿಗೂ ಏನೂ ಸಂಬಂಧವಿಲ್ಲ, ನಮಗೆ ಮನಬಂದಂತೆ ಮಾಡಬಹುದು.

ಎಂದು ಕೆಲವರು ತಿಳಿಯುತ್ತಾರೆ ಆದರೆ ಸಹಜೀವಿಗಳ ಯೋಗಕ್ಷೇಮಕ್ಕೆ ನೇರವಾಗಿಯೋ ಓರೆಯಾಗಿಯೋ ಸಂಬಂಧಿಸದ ಕೆಲಸ ಲೋಕದಲ್ಲಿ ಯಾವುದೂ ಇಲ್ಲ

ಎಷ್ಟೇ ಗುಪ್ತವಾಗಿ ಆಲೋಚನೆ ಮಾಡಲಿ ನಮ್ಮ ಮೇಲೂ ಇತರರ ಮೇಲೂ ನಮ್ಮ ಯೋಚನೆಯ ಪರಿಣಾಮ ಆಗಿಯೇ ಆಗುತ್ತದೆ ಇದು ನೆನಪಿರಲಿ ಆದ್ದರಿಂದ ದುಷ್ಟ ವಿಚಾರಗಳನ್ನೆಲ್ಲಾ ಮನಸ್ಸಿನಿಂದ ಅಟ್ಟಿ, ಶ್ರೇಷ್ಠ, ಉದಾತ್ತ, ವಿಚಾರಗಳಿಗೆ ಮಾತ್ರವೇ ಇಂಬುಗೊಡುವಂತೆ ಆತ್ಮ ನಿಗ್ರಹವನ್ನು ಅಭ್ಯಾಸ ಮಾಡಬೇಕು ತನುಮನಗಳೆರಡನ್ನೂ ಶುಚಿಯಾಗಿ ನಿಷ್ಕಳಂಕವಾಗಿ ಇಟ್ಟುಕೊಳ್ಳಬೇಕು ನಮ್ಮ ನಮ್ಮ ಮನಸ್ಸಿನಂತೆ ನಾವು ನಮ್ಮ ವಿಚಾರಭಾವಗಳೇ ನಮ್ಮನ್ನು ರೂಪಿಸುವ ಶಿಲ್ಪಿಗಣ ಅಂತೇ ಪಾಪಬುದ್ಧಿಯನ್ನು, ಹೀನವಾದುದರ ಆಸೆಯನ್ನು ನಿರ್ದಾಕ್ಷಿಣ್ಯವಾಗಿ ಅಡಗಿಸಬೇಕು ಸಂಪೂರ್ಣ ಇಂದ್ರಿಯನಿಗ್ರಹವಿಲ್ಲದ, ವಾಸನೆಯನ್ನು ಜಯಿಸದ, ಮನುಷ್ಯ ಏನೂ ಪ್ರಯೋಜಕನಾಗಲಾರ, ಏನನ್ನೂ ಪಡೆಯಲಾರ

ಮನಸ್ಸನ್ನು ನಿರ್ಮಲವಾಗಿಟ್ಟುಕೊಂಡವನಿಗೆ ತನ್ನ ಬಾಳಗುರಿ ಏನೆಂಬುದು ಸ್ಪಷ್ಟವಾಗಿ ತಿಳಿದಿರಬೇಕು ಗೊತ್ತಾದ ಗುರಿಯೇ ಇಲ್ಲದೆ ಬಾಳನ್ನು ಮೊದಲುಮಾಡಿದವನು ತನ್ನ ಸಾವ ಧ್ಯೈರ್ಯವನ್ನು ವ್ಯರ್ಥಗೊಳಿಸಿ ಕಡೆಗೆ ಹಾಳಾಗಿಹೋಗುತ್ತಾನೆ ಚುಕ್ಕಾಣಿಯಿಲ್ಲದ ದೋಣಿ ಕಡಲಿನ ಅಲೆಗಳಿಗೆ ಸಿಕ್ಕಿ, ಅತ್ತಿತ್ತ ಹೊಯ್ದಾಡಿ ಕಡೆಗೆ ಮುಳುಗಿಹೋಗುವಂತೆ ಗುರಿಗಳಲ್ಲೆಲ್ಲ ಭಗವದಾರಾಧನೆಯೇ ಶ್ರೇಷ್ಠ ಗುರಿ ನೀತಿಯ ಶಾಸನಕ್ಕೆ ವಿಧೇಯನಾಗಿ ಬಾಳಿ ದೈವೀಕಾರ್ಯವನ್ನು ನಿರ್ವಹಿಸುತ್ತ ಲೋಕಕ್ಕೆ ನಿಷ್ಕಾಮಸೇವೆ ಸಲ್ಲಿಸುವುದೇ ಉತ್ತಮ ಆರಾಧನೆ ಸಾವಿರಾರು ಜನ ಪಾಪಿಗಳೂ ದುಷ್ಟರೂ ದೇವರ ಹೆಸರನ್ನು ಜಪಿಸುತ್ತಾರೆ, ಏನು ಫಲ? ಗಿಣಿಗೂ ದೇವರನಾಮ ಕಲಿಸಬಹುದು, ಅದೂ ಜಪಿಸೀತು, ಅದನ್ನು ಪುಣ್ಯಶಾಲಿ, ಭಕ್ತಿವಂತ ಎಂದಾರೆ? ಎಂಥ ಸಂದರ್ಭದಲ್ಲಿಯೂ ಎಲ್ಲ ಪರಿಸ್ಥಿತಿಯಲ್ಲಿಯೂ ಲೋಕಸೇವೆ ಸಾಧ್ಯ ಸೇವೆಯೇ ಉನ್ನತೋನ್ನತ ಧರ್ಮ

ಎಂದು ತಿಳಿದವನು ಉತ್ತಮ ನೀತಿವಂತನಾಗಲೇಬೇಕು, ಆಗದಿರುವುದು ಸಾಧ್ಯವಿಲ್ಲ ಲೋಕದ ಕ್ಷೇಮಕ್ಕೂ ನೀತಿಜೀವನಕ್ಕೂ ಅಂಥ ಸಂಬಂಧವಿದೆ.

ಮನುಷ್ಯರ ಕೆಲಸವನ್ನು ಪರಿಶೀಲಿಸಿ ಬೆಲೆಕಟ್ಟಬೇಕಾದರೆ ಲೋಕ ಹಿತಕ್ಕೆ ಅದು ಸಾಧನವೆ ಅಲ್ಲವೆ ಎಂದು ನೋಡಬೇಕು, ಅದು ಒರೆಗಲ್ಲು. ಗಿರಾಕಿಗಳನ್ನು ಹಿಂಡಿಹಾಕಿ ವರ್ತಕ ಲಾಭ ಸೆಳೆಯಬಾರದು ತಮ್ಮ ಸಂಪಾದನೆಗಿಂತ ಕಕ್ಷಿಗಾರರ ಹಿತವೇ ಮುಖ್ಯವಾಗಬೇಕು ವಕೀಲರಿಗೆ, ವೈದ್ಯರಿಗೆ ದುರಭಿಮಾನದಿಂದ, ಮಿಥ್ಯಾವ್ಯಾಮೋಹದಿಂದ ಮಗು ಬಾಧೆ ಪಡದಂತೆ ತಾಯಿ ನೋಡಿಕೊಳ್ಳಬೇಕು ಅನ್ಯಾಯ ಮಾಡಿ ಹಣ ಸಂಪಾದಿಸಿದ ಬುದ್ಧಿವಂತ ವಕೀಲ, ವೈದ್ಯ, ವರ್ತಕನಿಗಿಂತ ನಿರಕ್ಷರ ಕುಕ್ಷಿಯಾದ ಸಾಮಾನ್ಯ ಕೆಲಸಗಾರನೇ ಶ್ರೇಷ್ಠ ಈ ಸೂತ್ರಗಳನ್ನು ನಮ್ಮ ನಮ್ಮ ಬಾಳಿನಲ್ಲಿ ಅನುಸರಿಸಲು ನಮ್ಮಲ್ಲಿ ಕ್ಷುದ್ರಾತಿಕ್ಷುದ್ರರಿಗೂ ಸಾಧ್ಯವೆಂಬುದನ್ನು ಮರೆಯಬಾರದು ಐಶ್ವರ್ಯ ಪದವಿಗಳ ಎಲ್ಲೆಯನ್ನು ಮೀರಿ ಅಲ್ಪರಾದವರೂ ಕೂಡ ಬೆಳೆದು ನಿಲ್ಲಬಹುದು ಮನುಷ್ಯನ ಶ್ರೇಷ್ಠತೆಗೆ ಐಶ್ವರ್ಯ, ಪದವಿ ಕಾರಣವಲ್ಲ, ಬಾಳು ಬದುಕು, ನೀತಿ ನಡತೆ ಕಾರಣ ಯಾರನ್ನಾದರೂ ಬೆಲೆ ಕಟ್ಟಲು ಅವರ ಮನಸ್ಸನ್ನು ಒಳಹೊಕ್ಕು ನೋಡಬೇಕು ಇದಿರಿನಿಂದ ತೊಲಗಿಹೋಗಲಿ ಎಂದು ತಿರುಕನಿಗೆ ಒಬ್ಬ ಒಂದು ರೂಪಾಯಿ ಬಿಸುಟಾನು, ಇನ್ನೊಬ್ಬ ದಯೆಯಿಂದ, ಕನಿಕರದಿಂದ ನಾಲ್ಕಾಣೆ ಕೊಟ್ಟಾನು ಇಬ್ಬರಲ್ಲಿ ಕಡಮೆ ಹಣ ಕೊಟ್ಟರೂ ದಯಾವಂತನೇ ಶ್ರೇಷ್ಠ

ಸಾರಾಂಶ ಯಾರ ಮನಸ್ಸು ಸ್ವಾರ್ಥ ದ್ವೇಷಗಳಿಂದ ಲೇಪಿತವಾಗಿಲ್ಲವೋ, ಯಾರು ನಿಷ್ಕಾಮಸೇವೆ ಮಾಡುತ್ತ ನಿರ್ಮಲ ಜೀವನ ನಡೆಸುತ್ತಾರೋ ಅವರು ನಿಜವಾಗಿ ನೀತಿವಂತರು ಅವರೇ ನಿಜವಾಗಿ ಐಶ್ವರ್ಯವಂತರು, ಸುಖಿಗಳು ಅಂಥವರೇ ಲೋಕಕ್ಕೆ ಕಲ್ಯಾಣ ಮಾಡಬಲ್ಲವರು ಯಾಕೆಂದರೆ ಶುಭವಾಗುದಕ್ಕೆ ಶ್ರೇಷ್ಠವಾದುವಕ್ಕೆ ಎಲ್ಲಕ್ಕೂ ಸತ್ಯವೇ ಮೂಲ ನಿಜವಾದ ಲೋಕಸೇವಕನಿಗೆ ಸೇವೆಗೆ ಯಾವುದು ಉತ್ತಮ ಮಾರ್ಗ ಎಂಬ ಯೋಚನೆಯೇ ಬಾರದು ನೀತಿನಿಯಮದ ವೈಭವ ನಮಗೆ ಅರ್ಥವಾದರೆ ನಮ್ಮ ಸುಖದುಃಖಕ್ಕೂ ನಮ್ಮ ಆರೋಗ್ಯ,

ಐಶ್ವರ್ಯ, ಕೀರ್ತಿ, ವಿಜಯಗಳಿಗೂ ಎಷ್ಟು ಅಲ್ಪ ಸಂಬಂಧ ಎಂಬುದು ತಿಳಿಯುತ್ತದೆ ಎಮರ್ಸನ್ ಹೇಳಿದ ಹಾಗೆ, ಸತ್ಪುರುಷರ ನೋವು ಅಳಲುಗಳು ಕೂಡ ಅವರ ಸುಖಕ್ಕೇ ಸಾಧಕವಾಗುತ್ತವೆ, ದುಷ್ಟರ ಧನ, ಕೀರ್ತಿ ಸಹ ಅವರಿಗೂ ಲೋಕಕ್ಕೂ ಬಾಧಕವಾಗುತ್ತವೆ

'ಎಲ್ಲವನ್ನೂ ಬಿಟ್ಟು ಮೊದಲು ನನಗೆ ಶರಣು ಬಾ, ನಿನ್ನ ಯೋಗಕ್ಷೇಮ ನನ್ನದು' ಎಂಬುದು ಭಗವಂತನ ವಾಕ್ಯ

# ಈಶ್ವರಸ್ವರೂಪ

## ಧ್ಯೇಯ

### (೧) ಜೀವನದ ಅಂತಿಮಗುರಿ

ದೇವರ ಸಾಕ್ಷಾತ್ಕಾರವೇ ಮಾನವನ ಅಂತಿಮ ಗುರಿ ಮತ್ತು ದೇವ ದರ್ಶನದ ಈ ಅಂತಿಮ ಗುರಿಯನ್ನು ಅನುಲಕ್ಷಿಸಿಯೇ ಅವನ ಎಲ್ಲ ಸಾಮಾಜಿಕ ರಾಜಕೀಯ ಹಾಗೂ ಧಾರ್ಮಿಕ ಚಟುವಟಿಕೆಗಳೂ ಸಾಗತಕ್ಕದ್ದು

(ಹರಿಜನ ೨೮ ೮-೩೬)

ನಾನು ಸಾಧಿಸಬಯಸುವುದು, ಸಾಧಿಸಲು ಹಾತೊರೆಯುತ್ತ ಹೆಣಗುತ್ತಿರುವುದು, ಆತ್ಮಸಾಕ್ಷಾತ್ಕಾರವನ್ನು, ಪರಮಾತ್ಮನ ಪ್ರತ್ಯಕ್ಷ ದರ್ಶನವನ್ನು, ಮೋಕ್ಷವನ್ನು ಈ ಗುರಿಯನ್ನನುಸರಿಸುವುದಕ್ಕಾಗಿಯೇ ನಾನು ಬಾಳುತ್ತಿರುವುದು, ಚಲಿಸುತ್ತಿರುವುದು, ಅಸ್ತಿತ್ವವನ್ನು ಧರಿಸಿರುವುದು ನನ್ನ ಮಾತು ಬರಹದ ಕಾರ್ಯಗಳೆಲ್ಲವೂ ರಾಜಕೀಯ ಕ್ಷೇತ್ರದ, ಸಾಹಸಗಳೆಲ್ಲವೂ ಇದೇ ನೆಲೆಯ ಕಡೆಗೆ ಚೋದಕವಾಗಿವೆ (ಆತ್ಮಕಥೆ)

ಯಾರ ಸಂತಾನ ನಾನಾಗಿರುವೆನೋ, ನನ್ನ ಪೂರ್ತಿ ತಿಳಿವಳಿಕೆಯಂತೆ ನನ್ನ ಬದುಕಿನ ಪ್ರತಿಯೊಂದು ಉಸಿರನ್ನೂ ಯಾರು ಆಳುತ್ತಿರುವರೋ, ಆತನಿಂದ ಇನ್ನೂ ಅಷ್ಟೊಂದು ದೂರ ನಾನಿರುವುದಕ್ಕಾಗಿ ನನಗೆ ನಿರಂತರ ಪೇಚಾಟ (ಆತ್ಮಕಥೆ)

### (೨) ಭಗವಂತ ಇದ್ದಾನೆ

ನಂಬಿಕೆಯುಳ್ಳವರಿಗೆ ಭಗವಂತನ ಅಸ್ತಿತ್ವ ಕೇವಲ ಸುಲಭವಾದ ವಿಚಾರ ಅವನು ಎಲ್ಲರಿಗೆ ಎಲ್ಲ ವಸ್ತುಗಳಾಗಿ ತೋರಬರುವ ಅವನು ನಮ್ಮೊಳಗಿರುವ ಹಾಗೂ ನಮ್ಮ ಮೇಲೆಯೂ ಆಚೆಗೂ ನೆಲಸಿರುವ

'ದೇವರು' ಎಂಬ ಪದವನ್ನು ಯಾರಾದರೂ ಹೊರದೂಡಬಹುದು, ಆದರೆ ಆ ಪದಾರ್ಥವನ್ನೇ ಹೊರದೂಡುವ ಸಾಮರ್ಥ್ಯ ಯಾರಿಗೂ ಇಲ್ಲ

ಇಡೀ ಪ್ರಪಂಚವೇ ಭಗವಂತನನ್ನು ನಿರಾಕರಿಸಿದರೂ ಕೂಡ ಆತ ಇದ್ದೇ ಇರುವ ಜನತೆಯ ಬೆಂಬಲವಿಲ್ಲದಿದ್ದರೂ ಕೂಡ ನಿಂತೇ ನಿಲ್ಲುವುದು ಸತ್ಯ ಸತ್ಯ ಸ್ವಯಂಪೋಷಿತವಾದದ್ದ

(ಯಂಗ್ ಇಂಡಿಯಾ ೯-೩-೨೩)

## (೩) ಭಗವಂತ ಒಬ್ಬನೆ

ದೇವರು ಖಂಡಿತವಾಗಿ ಒಬ್ಬನೆ ಅವನು ಅದ್ವಿತೀಯ ಅವನು ಅಗಾಧ, ಅಜ್ಞೇಯ, ಮಾನವಕುಲದ ಬಹು ಭಾಗಕ್ಕೆ ಅಜ್ಞಾತ ಎಲ್ಲೆಲ್ಲಿಯೂ ಅವನಿರುವ ಆತ ನೇತ್ರವಿಲ್ಲದೆ ನೋಡುವ, ಕರ್ಣವಿಲ್ಲದೆ ಕೇಳುವ ಅವನಿಗೆ ಆಕೃತಿಯಿಲ್ಲ, ಅವ ಅಗೋಚರ ಅಜಾತನಾದ ಆತನಿಗೆ ತಂದೆ ತಾಯಿ ಅಥವಾ ಮಗು ಯಾರೂ ಇಲ್ಲ ಆದರೂ ತಂದೆ ತಾಯಿ ಹೆಂಡತಿ ಮಗು ಎಂಬದಾಗಿ ತನ್ನನ್ನು ಆರಾಧಿಸಲು ಆಸ್ಪದವಿತ್ತುಕೊಂಡಿರುವ ತನ್ನನ್ನು ಮರ, ಕಲ್ಲು ಎಂದು ಬಗೆದು—ಅಂಥ ವಸ್ತು ಯಾವೊಂದೂ ತಾನಾಗದಿದ್ದರೂ— ಹಾಗೆ ಪೂಜೆಗೊಳ್ಳುವ ನುಣುಚಿಕೊಳ್ಳುವುದರಲ್ಲಿ ಅವನು ಅತ್ಯಂತ ಚತುರ ನಮಗೆ ಅತಿ ಹತ್ತಿರದಲ್ಲಿ ಅವನಿರುವ, ಆ ಸಂಗತಿಯನ್ನು ನಾವು ಅರಿಯಲಿಚ್ಛಿಸಿದರೆ ಆದರೆ ಅವನ ಸರ್ವವ್ಯಾಪಿತ್ವವನ್ನು ಮನಗಾಣುವುದು ನಮಗೆ ಬೇಕಿಲ್ಲದಿರುವಾಗ ಅವನ ಇರುವಿಕೆ ನಮ್ಮಿಂದ ತೀರ ದೂರ ವೇದಗಳಲ್ಲಿ ಅನೇಕ ದೇವತೆಗಳಿದ್ದಾರೆ—ಬೇರೆ ಧರ್ಮಗ್ರಂಥಗಳು ಅವರನ್ನು ದೇವದೂತರೆಂದು ಕರೆಯುತ್ತವೆ—ಆದರೆ ವೇದಗಳು ಹಾಡುವುದು ಒಬ್ಬ ದೇವರನ್ನು ಮಾತ್ರ

(ಯಂಗ್ ಇಂಡಿಯಾ ೨೫-೯-೨೪)

ಹಿಂದೂಗಳು ನಾನಾ ದೇವರುಗಳನ್ನು ನೆಚ್ಚುತ್ತಾರೆ, ಅವರು ಅವಿಚಾರಿ ವಿಗ್ರಹಾರಾಧಕರು, ಎಂಬ ವರ್ಣನೆಗೆ ನನ್ನ ವಿರೋಧ ಅನೇಕ ದೇವತೆಗಳಿರುವರೆಂದೇನೋ ಅವರು ಹೇಳುತ್ತಾರೆ, ಜೊತೆಯಲ್ಲಿಯೇ, ಇರುವ ದೇವರು ಒಬ್ಬನೇ, ದೇವರುಗಳ ದೇವರು, ಎಂದೂ ನಿಸ್ಸಂದಿಗ್ಧ

ವಾಗಿ ಸಾರಿಹೇಳುತ್ತಾರೆ ಆದ್ದರಿಂದ ಹಿಂದೂಗಳಿಗೆ ದೇವರನೇಕರಲ್ಲಿ ನಂಬಿಕೆಯೆಂದು ಸೂಚಿಸುವುದು ನ್ಯಾಯವಲ್ಲ ನಾನಾ ಲೋಕಗಳನ್ನು ಅವರು ನಂಬುವುದು ದಿಟ ಮಾನವರು ವಾಸಿಸುವ ಒಂದು ಲೋಕ, ಪಶುಗಳು ವಾಸಿಸುವ ಇನ್ನೊಂದು, ಇರುವಂತೆಯೇ ದೇವತೆಗಳೆಂಬ ನಾವು ಧ್ಯೇಯದ ಮೇಲ್ತರಗತಿಯ ಜೀವಿಗಳ ಲೋಕವೂ ಕೂಡ ಉಂಟು, ನಮಗೆ ಕಾಣಿಸದೇ ಹೋದರೂ ಅವರಿದ್ದಾರೆ ಈ ಎಲ್ಲ ಚೇಷ್ಟೆ ಉದ್ಭವಿಸಿರುವುದು 'ದೇವ' ಅಥವಾ 'ದೇವತೆ'ಯೆಂಬ ಪದಕ್ಕೆ ಮಾಡಿರುವ ಇಂಗ್ಲಿಷ್ ತರ್ಜುಮೆಯಿಂದ, ಅದಕ್ಕೆ ನೀವು 'ಗಾಡ್ಸ್' (*gods*) ಎಂಬುದಕ್ಕಿಂತ ಹೆಚ್ಚು ಸೂಕ್ತವಾದ ಪದವೊಂದನ್ನು ಕಂಡುಹಿಡಿದಿಲ್ಲ ದೇವರಾದರೋ ಈಶ್ವರ, ದೇವಾಧಿದೇವ, ದೇವರಿಗೆ ದೇವರು ಆದ್ದರಿಂದ, ನೋಡಿ, ಬೇರೆ ಬೇರೆ ದೈವಿಕ ಜೀವಿಗಳನ್ನು ಬಣ್ಣಿಸಲು ಉಪಯೋಗಿಸಿರುವ 'ಗಾಡ್' ಶಬ್ದ ಉತ್ಪತ್ತಿಗೈದಿದೆ ಇಂಥ ಭ್ರಾಂತಿಯನ್ನು ನಾನೊಬ್ಬ ಪಕ್ಕಾ ಹಿಂದೂ ಎಂದೇ ನನ್ನ ಭರವಸೆ, ಆದರೆ ನಾನಾ ದೇವರುಗಳನ್ನು ನಾನೆಂದೂ ನಂಬಲಾರೆ ನನ್ನ ಶೈಶವದಲ್ಲಿ ಕೂಡ ಯಾವೊತ್ತೂ ಆ ನಂಬಿಕೆಯನ್ನು ತಳೆಯಲಿಲ್ಲ ನಾನು, ಹಾಗೆ ತಳೆಯೆಂದು ನನಗಾರೂ ಎಂದೂ ಬೋಧಿಸಲಿಲ್ಲ (ಹರಿಜನ ೧೩-೩-೩೭)

ಮುಹಮ್ಮದೀಯ ಎನ್ನುತ್ತಾನೆ "ಅವನಿದ್ದಾನೆ, ಬೇರೆ ಯಾರೂ ಇಲ್ಲ" ಕ್ರಿಸ್ತಮತೀಯ ಎನ್ನುವುದೂ ಇದನ್ನೇ, ಅಂತೆಯೇ ಹಿಂದೂವೂ ಕೂಡ. ಹೀಗೆ ನುಡಿಯುವ ಸಾಹಸವನ್ನು ಎಸಗಬಹುದಾದರೆ ಬುದ್ಧ ಕೂಡ ಅದೇ ಸಂಗತಿಯನ್ನು ಹೇಳುತ್ತಾನೆ, ಮಾತುಗಳು ಮಾತ್ರ ಪ್ರತ್ಯೇಕ

'ದೇವರು' ಎಂಬುದಕ್ಕೆ ನಮ್ಮಲ್ಲಿ ಪ್ರತಿಯೊಬ್ಬನೂ ತನ್ನದೇ ಆದ ತಾತ್ಪರ್ಯಗ್ರಹಿಕೆಯನ್ನು ಇಟ್ಟುಕೊಂಡಿರಬಹುದೇನೋ ನಿಜ. ಅತ್ಯಗತ್ಯವಾಗಿ ನಾವು ಹಾಗೆ ಮಾಡಲೇಬೇಕು, ಏತಕ್ಕೆಂದರೆ, ದೇವರು ನಮ್ಮ ಈ ಪುಟ್ಟ ಗೋಳವನ್ನೇ ಅಲ್ಲದೆ, ಇಂಥ ಲಕ್ಷೋಪಲಕ್ಷ ಗೋಳಗಳನ್ನೂ, ಲೋಕಗಳ ಆಚೆಯ ಲೋಕಗಳನ್ನೂ ಅಪ್ಪಿಕೊಂಡಿದ್ದಾನೆ

(ಸಿಂಹಳದಲ್ಲಿ ಗಾಂಧೀಜೀ)

## (೪) ಸರ್ವವ್ಯಾಪಿ, ಸರ್ವಜ್ಞ, ಸರ್ವಸಮರ್ಥ

ನಮ್ಮ ಹೊರಗಡೆಯಿರುವ, ಅಥವಾ ವಿಶ್ವದಿಂದ ಆಚೆ ದೂರದಲ್ಲಿರುವ, ಒಬ್ಬ ಪುರುಷನಲ್ಲ ಭಗವಂತ, ಆತನು ಪ್ರತಿಯೊಂದರ ಒಳಗೂ ವ್ಯಾಪಿಸಿರುವ, ಸರ್ವಜ್ಞನೇ ಅಲ್ಲದೆ ಸರ್ವಸಮರ್ಥನೂ ಹೌದು ಯಾವ ಪ್ರಶಂಸೆಯಾಗಲೀ ಬೇಡಿಕೆಗಳಾಗಲೀ ಬೇಡ ಆತನಿಗೆ ಸಕಲ ಜೀವಿಗಳಲ್ಲಿಯೂ ಅಂತರ್ಗತನಾಗಿರುವುದರಿಂದ ಎಲ್ಲವನ್ನೂ ಆಲಿಸುತ್ತಾನೆ ಅವ ನಮ್ಮ ಅಂತರ್ಯದ ತಟ್ಟತಳದ ಚಿಂತನೆಗಳನ್ನೂ ತಿಳಿಯುತ್ತಾನೆ ಆವನ ಸ್ಥಿರನಿವಾಸ ನಮ್ಮ ಹೃದಯ, ಬೆರಳಿಗೆ ಉಗುರೆಷ್ಟು ಸಮೀಪವೋ ಅದಕ್ಕಿಂತ ಹೆಚ್ಚು ಸಮೀಪ ಆತ ನಮಗೆ

ಎಂದಮೇಲೆ, ದೇವರು ಒಬ್ಬ ವ್ಯಕ್ತಿಯಲ್ಲ, ಆವನೊಂದು ಸರ್ವವ್ಯಾಪಿಯಾದ ಸರ್ವಸಮರ್ಥವಾದ ಅಂತಸ್ಸತ್ವ ಯಾವನೇ ಆಗಲಿ ತನ್ನ ಹೃದಯದಲ್ಲಿ ಆತನನ್ನು ಧರಿಸಿಕೊಂಡರೆ ಅಲ್ಲಿಗೆ ಬಂದು ಕೂಡುತ್ತದೆ ಅದ್ಭುತವಾದುದೊಂದು ಶಕ್ತಿ ಅಥವಾ ಚೈತನ್ಯ ಪರಿಣಾಮದಲ್ಲಿ ಆ ಶಕ್ತಿ ಆವಿ ವಿದ್ಯುತ್‌ಗಳಂಥ ಭೌತಶಕ್ತಿಗಳನ್ನು ಹೋಲುತ್ತಿದ್ದರೂ ಅದು ವಿಶೇಷ ಸೂಕ್ಷ್ಮತರ. (ಹರಿಜನ ೧೪-೭-೫೬)

ಭಗವಂತ ವಿವರಣಾತೀತವಾದ ಏನೋ ಒಂದು, ನಮ್ಮೆಲ್ಲರಿಗೂ ಅದು ಭಾವವೇದ್ಯ, ಆದರೂ ಅದನ್ನರಿಯೆವು ನಾವು

## (೫) ನಿಗೂಢ ಸತ್ತ್ವ

ಪ್ರತಿಯೊಂದನ್ನೂ ವ್ಯಾಪಿಸಿರುವ ಒಂದು ವಿವರಣಾತೀತ ರಹಸ್ಯ ಸತ್ತ್ವವುಂಟು ನನ್ನ ಭಾವಕ್ಕೆ ಅದು ಬರುತ್ತದೆ, ಅದನ್ನು ನಾನು ಕಾಣದಿದ್ದರೂ. ಈ ಅಗೋಚರ ಸತ್ತ್ವ ಭಾವಗ್ರಾಹಿಕೆಗೆ ಸಿಕ್ಕಿದರೂ ಸಮರ್ಥನೆಯನ್ನೆಲ್ಲ ಮೂದಲಿಸುತ್ತದೆ ಅದು, ಏಕೆಂದರೆ, ನನ್ನ ಜ್ಞಾನೇಂದ್ರಿಯಗಳ ಮೂಲಕ ನಾನು ಅವಲೋಕಿಸುವುದಕ್ಕಿಂತಲೂ ಅದು ತೀರ ವಿಭಿನ್ನ. ಅದು ಇಂದ್ರಿಯಾತೀತ

ಯಥಾರ್ಥ ಸಂಗತಿಯೇನೆಂದರೆ, ದೇವರೇ ಆ ಶಕ್ತಿ ಆವನು ಜೀವನದ ತಿರುಳು ಆವನು ಕಳಂಕರಹಿತವಾದ ಪರಿಶುದ್ಧ ಪ್ರಜ್ಞೆ

ಅವನೆಂದೆಂದಿಗೂ ಇರುವ  ಆದರೂ ಎಂಥ ಸೋಜಿಗ, ಆ ಸರ್ವವ್ಯಾಪಿಯಾದ ಜೀವಂತ ಸನ್ನಿಧಿಯಿಂದ ಹಿತವನ್ನಾಗಲೀ, ಆ ಸನ್ನಿಧಿಯೊಳಗೆ ಆಶ್ರಯವನ್ನಾಗಲೀ, ಎಲ್ಲರೂ ಪಡೆಯಲು ಶಕ್ಯರಲ್ಲ  ವಿದ್ಯುತ್ತು ಒಂದು ಸಮರ್ಥ ಶಕ್ತಿ  ಎಲ್ಲರೂ ಆದರಿಂದ ಪ್ರಯೋಜನ ಹೊಂದಲಾರರು ನಿಯಮಗಳನ್ನು ಅನುಸರಿಸಿದರೆ ಮಾತ್ರ ಉತ್ಪತ್ತಿ ಮಾಡಬಹುದು ಅದನ್ನು ಅದೊಂದು ನಿರ್ಜೀವ ಶಕ್ತಿ  ಅದರ ನಿಯಮಗಳ ತಿಳಿವಳಿಕೆಯನ್ನು ಗಳಿಸುವುದಕ್ಕೆ ಎಷ್ಟು ಬೇಕೋ ಅಷ್ಟು ಶ್ರದ್ಧೆಯಿಂದ ಶ್ರಮಿಸಿದಲ್ಲಿ ಅದನ್ನು ಉಪಯೋಗಿಸಿಕೊಳ್ಳಬಲ್ಲ ಮನುಷ್ಯ  ಅದೇ ಮೇರೆಗೆ ನಾವು ದೇವರೆಂದು ಅಂಕಿತ ಮಾಡುವ ಜೀವಂತ ಶಕ್ತಿಯಿಂದ ಉಪಯೋಗ ಪಡೆಯಬಹುದು, ಎಂದರೆ, ಆತನನ್ನು ನಮ್ಮೊಳಗೆ ಅರಸಿ ಕಾಣುವುದಕ್ಕೆ ನಮ್ಮನ್ನು ಕೊಂಡೊಯ್ಯುವ ಆತನ ಶಾಸನವನ್ನು ಅರಿತು ಹಿಂಬಾಲಿಸಬೇಕು

(ಹರಿಜನ ೨೨-೬-೪೭)

ನಮ್ಮ ಅಂತರ್ಗೃಹದಲ್ಲಿ ವಾಸಿಸುತ್ತಿರುವ ಒಂದು ಅದೃಶ್ಯ ಸತ್ತ್ವ ಭಗವಂತ  ನಾನಾ ಸತ್ತ್ವಗಳು ಹುದುಗಿ ಮಲಗಿವೆ ನಮ್ಮೊಳಗೆ, ನಿರಂತರ ಹೆಣಗಾಟದಿಂದ ಅವನ್ನು ನಾವು ಕಂಡುಕೊಳ್ಳುತ್ತೇವೆ  ಅದೇ ರೀತಿ, ಆತನನ್ನು ಮುಟ್ಟಬೇಕೆಂಬ ದೃಢಸಂಕಲ್ಪದಿಂದ ಉದ್ಯೋಗಶೀಲರಾಗಿ ನಾವು ಅನ್ವೇಷಣಗೈದಲ್ಲಿ, ಈ ಪರಮ ಸತ್ತ್ವ ಸಿಗಬಹುದು ನಮಗೆ

(ಹರಿಜನ ೨೪-೩-೩೩)

ಮೇಲೆ ಎತ್ತರದಲ್ಲಿ ವಾಸಿಸುತ್ತಿಲ್ಲ ನನ್ನ ದೇವರು  ಅವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಭೂಮಿಯ ಮೇಲೆಯೇ  ಅವನಿರುವ ಇಲ್ಲಿಯೇ, ನಿಮ್ಮೊಳಗೆ, ನನ್ನೊಳಗೆ  ಆತ ಸರ್ವತ್ರ, ಸರ್ವವ್ಯಾಪಿ  ಪರಲೋಕದ ವಿಚಾರ ನೀವು ಯೋಚಿಸುವುದು ಅನಗತ್ಯ  ಇಲ್ಲಿ ನಮ್ಮ ಕರ್ತವ್ಯವನ್ನು ನೆರವೇರಿಸಲು ನಾವು ಶಕ್ತರಾದರೆ, ಪರಲೋಕದ ಯೋಗಕ್ಷೇಮ ನೇರ್ಪಾಡಂತೆ

ಈ ಸತ್ತ್ವ ಉಪಕಾರಿಯೋ ಉಪದ್ರವಕಾರಿಯೋ ? ನನ್ನ ದೃಷ್ಟಿಗೆ ಅದು ಶುದ್ಧಾಂಗವಾಗಿ ಉಪಕಾರಿ  ಹೇಗೆಂದರೆ, ನಾನು ನೋಡಬಲ್ಲಂತೆ, ಅಸತ್ಯದ ಮಧ್ಯೆ ಸತ್ಯ ಪಟ್ಟುಹಿಡಿದು ನಿಲ್ಲುತ್ತದೆ, ಕತ್ತಲೆಯ ಮಧ್ಯೆ ಬೆಳಕು

ಪಟ್ಟುಹಿಡಿದು ನಿಲ್ಲುತ್ತದೆ ಆದ್ದರಿಂದ, ನನ್ನ ತೀರ್ಮಾನದಂತೆ ದೇವರು ಜೀವನ, ಸತ್ಯ, ಬೆಳಕು ಆತ ಪ್ರೇಮ ಆತನೇ ಪರಮ ಪುರುಷಾರ್ಥ

(ಯಂಗ್ ಇಂಡಿಯಾ. ೧೧-೧೦-೨೮)

## (೬) ಅಣೋರಣೀಯ, ಮಹತೋಮಹೀಯ

ಆತ ಏಕ, ಹಾಗಿದ್ದರೂ ಅನೇಕ ಪರಮಾಣುವಿಗಿಂತ ಸಣ್ಣವ ಆವ, ಮತ್ತು ಹಿಮಾಲಯಶ್ರೇಣಿಗಿಂತ ದೊಡ್ಡವ ಮಹಾಸಾಗರದ ಒಂದೇ ಒಂದು ಹನಿಯೊಳಗೆ ಕೂಡ ಅವ ಅಡಕವಾಗಿರುವ, ಹಾಗಿದ್ದರೂ ಸಪ್ತಸಮುದ್ರಗಳು ಒಟ್ಟಾದರೂ ಆವರಿಸಲಾರವು ಅವನನ್ನು ಅವನನ್ನು ಅರಿತುಕೊಳ್ಳುವ ಸಾಮರ್ಥ್ಯವಿಲ್ಲ ಬುದ್ಧಿವಿವೇಕಕ್ಕೆ ಬುದ್ಧಿವಿವೇಚನೆ ಎಟುಕಿಸಿಕೊಳ್ಳುವುದನ್ನು, ಹಿಡಿದುಕೊಳ್ಳುವುದನ್ನು ಮೀರಿ ಇದ್ದಾನೆ ಆತ

## (೭) ದೇವರು ಸತ್ಯ ಮತ್ತು ಪ್ರೇಮ

ದೇವರು ಸತ್ಯ ಮತ್ತು ಪ್ರೇಮ ನನಗೆ, ದೇವರು ನೀತಿಶಾಸ್ತ್ರ ಮತ್ತು ನೀತಿನೇಮ, ದೇವರು ನಿರ್ಭೀತಿ, ದೇವರು ಬೆಳಕು ಮತ್ತು ಜೀವನಗಳ ಮೂಲ—ಹೀಗಿದ್ದರೂ ಇವೆಲ್ಲವನ್ನೂ ಮೀರಿ ದೂರವಿರುವ ಆತ ದೇವರು ಅಂತಃಸಾಕ್ಷಿ ಅವನು ನಾಸ್ತಿಕನ ನಾಸ್ತಿಕತೆ ಕೂಡ ಅವನ ಸಂಸ್ಪರ್ಶ ಅಗತ್ಯವಾದವರಿಗೆ ಆವನು ಪುರುಷರೂಪಿನ ಭಗವಂತ ಪರಿಶುದ್ಧತಮ ವಾದ ಸಾರ ಅವ ಕೆಟ್ಟುದನ್ನು ನೋಡುತ್ತ ದೀರ್ಘಕಾಲ ಸುಮ್ಮನೆ ನಿಲ್ಲುವ ಅವ ಸಹನೆಯುಳ್ಳವ, ಆದರೆ ಭಯಂಕರಸ್ವರೂಪನೂ ಹೌದು ಪ್ರಜೆಗಳೇ ಪ್ರಭುಗಳು ಎನ್ನುವವರಲ್ಲಿ ಪ್ರಪಂಚ ಅರಿತಂತೆ ಅವನೇ ಅತಿ ಶ್ರೇಷ್ಠ, ಇದುವರೆಗೂ ಆಗಿಬಂದ ನಿರಂಕುಶ ಪ್ರಜಾಪೀಡಕರಲ್ಲಿ ಅವ ಅತ್ಯಂತ ಪ್ರಭಾವಶಾಲಿ. ನಾವಿಲ್ಲ, ಅವನೊಬ್ಬನೇ ಇದ್ದಾನೆ

(ಯಂಗ್ ಇಂಡಿಯಾ. ೫-೩-೨೫)

## (೮) ಸತ್–ಚಿತ್–ಆನಂದ

ವಾಸ್ತವಿಕವಾಗಿ ಸತ್ಯ ಹೊರತು ಮತ್ತಾವುದೂ ಇಲ್ಲ, ಮತ್ತಾವುದಕ್ಕೂ ಅಸ್ತಿತ್ವವಿಲ್ಲ ಅದಕ್ಕೋಸ್ಕರವೇ ಸತ್ ಅಥವಾ ಸತ್ಯ ಪ್ರಾಯಶಃ ಮುಖ್ಯ ತಮವಾದ ದೇವರ ಹೆಸರು. ಯಥಾರ್ಥ ಸಂಗತಿಯನ್ನು ನೋಡಿದರೆ,

'ದೇವರು ಸತ್ಯ' ಎನ್ನುವುದಕ್ಕಿಂತ 'ಸತ್ಯವೇ ದೇವರು' ಎನ್ನುವುದರಲ್ಲಿ ತಪ್ಪು ಕಡಿಮೆ ಹೆಚ್ಚು ಆಳವಾಗಿ ಯೋಚಿಸಿದರೆ, ಸತ್ ಅಥವಾ ಸತ್ಯವೊಂದೇ ಏನೂ ತಪ್ಪಿಲ್ಲದ ಮತ್ತು ಪೂರ್ತಿ ಅರ್ಥವತ್ತಾದ ನಾಮಧೇಯ ಭಗವಂತನಿಗೆ, ಎಂಬುವನ್ನು ಮನಗಾಣಬಹುದು

ಸಂತತವಾದ ಸಂತೋಷವನ್ನು ಕೊಡುತ್ತದೆ ಸತ್ಯ, ಸಂಸ್ಕೃತದಲ್ಲಿ ಸತ್-ಚಿತ್-ಆನಂದ ಎಂಬ ಪದವಿದೆ ಅದೊಂದು ನಾಜೂಕು ಸಮುಚ್ಚಯ ಮೂರೂ ಕೂಡಿಕೊಂಡು ಆಗಿದೆ ಒಂದು ಪದ ಸತ್ಯ ಜ್ಞಾನವೂ ಹೌದು ಅದು ಬಾಳುವೆಯೂ ಹೌದು ನಿನ್ನಲ್ಲಿ ಸತ್ಯ ಸೇರಿಕೊಂಡಾಗ ಚೈತನ್ಯ ನಿನ್ನಲ್ಲಿದೆಯೆಂಬ ಅನುಭವ ನಿನಗಾಗುತ್ತದೆ ಅಲ್ಲದೆ, ಅದು ಪರಮಸುಖವನ್ನು ಈಯುತ್ತದೆ ಅದು ನಿನ್ನ ಬಳಿ ಸದಾ ಇರುವ ಪದಾರ್ಥ, ನಿನ್ನಿಂದ ಅದನ್ನು ಯಾರೂ ಹೊಡೆದು ಕಿತ್ತುಕೊಳ್ಳಲಾರರು ಗಲ್ಲಿಗೇರಿಸಬಹುದು ನಿನ್ನನ್ನು, ಚಿತ್ರಹಿಂಸಗೆ ಗುರಿಮಾಡಬಹುದು, ಆದರೆ ಸತ್ಯ ನಿನ್ನಲ್ಲಿ ನೆಲೆಸಿದ್ದರೆ, ಆಂತರಿಕ ಸಂತಸವನ್ನು ನೀನು ಅನುಭವಿಸುವೆ
(ಗಾಂಧೀಜಿಯ ಸಂಭಾಷಣೆ)

ಎಲ್ಲಿ ಸತ್ಯವಿದೆಯೋ ಅಲ್ಲಿ ಜ್ಞಾನವೂ ಇದೆ, ಅದು ಯಥಾರ್ಥಜ್ಞಾನ ಎಲ್ಲಿ ಸತ್ಯವಿಲ್ಲವೋ ಅಲ್ಲಿ ನೈಜ ಜ್ಞಾನ ಇರಲಾರದು ಆದ್ದರಿಂದಲೇ 'ಚಿತ್' ಅಥವಾ 'ಜ್ಞಾನ'ವೆಂಬ ಶಬ್ದವನ್ನು ಭಗವನ್ನಾಮದೊಡನೆ ಕೂಡಿಸಿದೆ ಎಲ್ಲಿ ಸತ್ಯ ಜ್ಞಾನವಿದೆಯೋ ಅಲ್ಲಿ ಆನಂದವಾಗಲೂ ಇರುತ್ತದೆ ಪರಮಸುಖ ದುಃಖಕ್ಕೆ ಅಲ್ಲಿ ಎಡೆಯೇ ಇಲ್ಲ ಹೇಗೆ ಸತ್ಯ ಶಾಶ್ವತವಾದದ್ದೋ ಹಾಗೆ ಅದರಿಂದ ಹುಟ್ಟಿದ ಪರಮಸುಖವೂ ಶಾಶ್ವತ ಆದ್ದರಿಂದ, ದೇವರನ್ನು ಸತ್-ಚಿತ್-ಆನಂದನೆಂಬುದಾಗಿ ನಾವು ತಿಳಿಯುತ್ತೇವೆ, ತನ್ನಲ್ಲಿಯೇ ಸತ್ಯ ಜ್ಞಾನ ಮತ್ತು ಪರಮಸುಖಗಳನ್ನು ಕೂಡಿಸಿಟ್ಟುಕೊಂಡಿರುವಾತ.
(ಮಂಗಳಪ್ರಭಾತ)

## (೯) ಸನಾತನ ವಿಧಿ

ಭಗವಂತನನ್ನು ಒಬ್ಬ ವ್ಯಕ್ತಿಯೆಂದು ನಾನು ಎಣಿಸುವುದಿಲ್ಲ ನನಗೆ ಸತ್ಯವೇ ದೇವರು ಭಗವಂತನ ಶಾಸನವೂ ಭಗವಂತನೂ ವಿಭಿನ್ನ ವಸ್ತುಗಳಲ್ಲ, ವಿದ್ಯಮಾನಗಳಲ್ಲ, ಪೃಥವಿಯ ಒಬ್ಬ ದೊರೆಯೂ ಅವನ ಕಾನೂನೂ

ವಿಭಿನ್ನವಾಗಿರುವ ಬಗೆಯಲ್ಲಿ ದೇವರು ವಿಧಿಭಂಗ ಎಸಗುತ್ತಾನೆಂದು ಊಹಿಸುವುದೂ ಅಸಾಧ್ಯ ಆದ್ದರಿಂದ ನಮ್ಮ ಕರ್ಮಗಳ ಮೇಲೆ ಆಧಿಪತ್ಯ ನಡೆಸಿ ಆಚೆ ಸರಿಯುವುದಿಲ್ಲ ಆತ ನಮ್ಮ ಕರ್ಮಗಳ ಅಧಿಪತಿ ಅವನು ಎಂದೆನ್ನುವಾಗ ನಾವು ಕೇವಲ ಮನುಷ್ಯ ಭಾಷೆಯನ್ನು ಬಳಸುತ್ತಿದ್ದೇವೆ, ಮತ್ತು ಆತನನ್ನು ಮಿತಗೊಳಿಸುವುದಕ್ಕೆ ಯತ್ನಿಸುತ್ತಿದ್ದೇವೆ ಅವನ್ನು ನಾವು ಬಿಟ್ಟಲ್ಲಿ, ಅವನೂ ಅವನ ನಿಯಮವೂ ಎಲ್ಲೆಲ್ಲಿಯೂ ನೆಲೆಸಿವೆ, ಪ್ರತಿಯೊಂದನ್ನೂ ನಿಯಮಿಸುತ್ತವೆ ಆದ್ದರಿಂದಲೇ ನಾನು ಹೀಗೆ ಆಲೋಚಿಸುತ್ತೇನೆ ನಮ್ಮ ಪ್ರತಿಯೊಂದು ಬಿನ್ನಪದ ಪ್ರತಿಯೊಂದು ಅಂಶವನ್ನೂ ಪೂರೈಸುವುದಿಲ್ಲ ಅವ, ಆದರೆ ನಮ್ಮ ಕರ್ಮಗಳ ನಿಯಾಮಕ ಅವನೆಂಬುದು ನಿಸ್ಸಂದೇಹ ಅವನ ಸಂಕಲ್ಪವಿಲ್ಲದೆ ಒಂದು ಹುಲ್ಲುಗರಿಕೆಯೂ ಬೆಳೆಯಲಾರದು, ಕಂಪಿಸಲಾರದು, ಎಂಬುದರಲ್ಲಿ ನನಗೆ ಅಕ್ಷರಶಃ ನಂಬಿಕೆ ಹಡಗಿನ ಮೇಲೆ ಜನಸಂದಣಿಯಲ್ಲಿರುವ ಪ್ರಯಾಣಿಕನಿಗೆ ಇರುವುದಕ್ಕಿಂತಲೂ ಕಡಮೆ ನಾವು ಹೊಂದಿರುವ ಇಚ್ಛಾಸ್ವಾತಂತ್ರ್ಯ

ಹೀಗಿದೆ ನನ್ನ ಎದೆಯರಿವು, ವಿಶ್ವದಲ್ಲಿ ಒಂದು ಓರಣವಿದೆ, ಮಾರ್ಪಾಟನ್ನು ಕಾಣದ ಒಂದು ಶಾಸನವಿದೆ, ಇರುವ ಪ್ರತಿಯೊಂದನ್ನೂ, ಬಾಳುವ ಪ್ರತಿ ಜೀವಿಯನ್ನೂ ಆಳುತ್ತದೆ ಕುರುಡು ಕಟ್ಟಳೆಯಲ್ಲ ಅದು, ಏತಕ್ಕೆಂದರೆ, ಯಾವ ಕುರುಡು ಕಟ್ಟಳೆಯೂ ಸಚೇತನ ಜೀವಿಗಳ ನಡೆವಳಿಯನ್ನು ಆಳಲಾರದು ಜಡಪದಾರ್ಥದಲ್ಲಿಯೂ ಚೈತನ್ಯವಿದೆಯೆಂದು ಪ್ರಮಾಣಪೂರ್ವಕ ಸಮರ್ಥಿಸಬಹುದು ಈಗ, ಸರ್ ಜೆ ಸಿ ಬೋಸರ ಅದ್ಭುತ ಸಂಶೋಧನೆಗಳಿಗೆ ಕೃತಜ್ಞತೆ ಸಲ್ಲತಕ್ಕದ್ದು ಇಡೀ ಜೀವಸೃಷ್ಟಿಯನ್ನು ನಿಯಂತ್ರಿಸುವ ಆ ಶಾಸನವೇ ದೇವರು. ಶಾಸನವೂ ಶಾಸಕನೂ ಒಂದೇ ಅದನ್ನಾಗಲೀ ಅವನನ್ನಾಗಲೀ ನಾನು ಅರಿತಿರುವುದು ಅತ್ಯಲ್ಪವೆಂಬ ಕಾರಣದಿಂದಲೇ ನಿಯಮವನ್ನೂ ನೇಮಕವನ್ನೂ ನಾನು ಇಲ್ಲವೆನ್ನಲಾಗದು ನನ್ನ ನಿರಾಕರಣೆ ಅಥವಾ ಅಜ್ಞಾನದಿಂದ ಪೃಥಿವಿಯ ಒಂದು ಆರಸೊತ್ತಿಗೆಗೆ ಏನೂ ಬಾಧೆ ಹೇಗೆ ಆಗದೋ, ಹಾಗೆ ಭಗವಂತ ಮತ್ತು ಅವನ ವಿಧಿಯನ್ನು ನಾನು ನಿರಾಕರಿಸಿದ ಪಕ್ಷಕ್ಕೆ ಅದರ ಕಾರ್ಯನಿರ್ವಹಣೆಯಿಂದ ನನಗಾಗಲಿಲ್ಲ ವಿಮೋಚನೆ ಪ್ರಾಪಂಚಿಕ ದೌಲತ್ತನ್ನು

ಅಂಗೀಕರಿಸಿದರೆ ಅದರ ಕೈಕೆಳಗೆ ನಮ್ಮ ಬದುಕು ಹೇಗೆ ಹೆಚ್ಚು ಸುಲಭವಾಗುವುದೋ ಹಾಗೆ ದೈವಿಕ ಆಳಿಕೆಯ ಏನಮ್ರ ಮೂಲಕ ಸ್ವೀಕಾರದಿಂದ ಹೆಚ್ಚು ಸುಲಭವಾಗುವುದು ಬಾಳಪಯಣ

(ಯಂಗ್ ಇಂಡಿಯಾ. ೯-೩-೩೨)

## (೧೦) ಆತನ ಅವತಾರಗಳು

ದೇವರೊಬ್ಬ ವ್ಯಕ್ತಿಯಲ್ಲ ಮನುಷ್ಯ ಜೀವಿಯ ರೂಪದಲ್ಲಿ ತಿರುತಿರುಗಿ ಅವ ಭೂಮಿಗಿಳಿಯುವನೆಂದು ಹೇಳುವುದು ಅರ್ಧಂಬರ್ಧ ಸತ್ಯ, ಅದರ ತಾತ್ಪರ್ಯ ಇಷ್ಟೆ ಅಂಥ ಪುರುಷ ಭಗವಂತನ ಸನಿಯದಲ್ಲಿ ತನ್ನ ಬಾಳನ್ನು ಸಾಗಿಸುತ್ತಿರುವ ಎಲ್ಲ ಕಡೆಯಲ್ಲಿಯೂ ಪರಮಾತ್ಮ ಇರುವುದರಿಂದ ಪ್ರತಿಯೊಬ್ಬ ಮಾನವನ ಅಂತರ್ಯದಲ್ಲಿಯೂ ಅವ ನೆಲಸಿರುವ, ಆದ್ದರಿಂದ ಎಲ್ಲ ಮಾನವರೂ ಅವನ ಅವತಾರಗಳೇ ಎಂದೆನ್ನಲು ಅಡ್ಡಿಯಿಲ್ಲ ಆದರೆ ಅದರಿಂದ ಏನೊಂದೂ ಫಲವನ್ನು ನಾವು ಪಡೆಯಲಾರೆವು ರಾಮ ಕೃಷ್ಣ ಮುಂತಾದವರಿಗೆ ನಾವು ದೈವೀ ಗುಣಗಳನ್ನು ಆರೋಪಿಸುವುದರಿಂದ ಅವರಿಗೆ ದೇವರ ಅವತಾರಗಳೆಂದು ಹೆಸರು ಅವರು ಪ್ರತ್ಯಕ್ಷ ಜೀವಿಸಿದ್ದರೋ ಇಲ್ಲವೋ ಎಂಬ ವಿಚಾರ ಮಾನವನ ಮನಸ್ಸಿನಲ್ಲಿ ಇರುವ ಅವರ ಚಿತ್ರವನ್ನು ಬಾಧಿಸಲರಿಯದು (ಹರಿಜನ. ೨೨-೬-೧೯೪೭)

## (೧೧) ಆತನ ಅಪಾರ ಕರುಣೆ

ಆದರೆ ಆತನ ಅಸ್ತಿತ್ವವನ್ನು ನಿರಾಕರಿಸ ಬಯಸುವವರಿಗೆ ಹಾಗೆ ಮಾಡಲು ಅಭ್ಯಂತರವಿಲ್ಲ ಅವನು ಕರುಣೆಯುಳ್ಳವ, ಅನುಕಂಪವುಳ್ಳವ ತನ್ನ ಪ್ರಭುತ್ವವನ್ನು ನಾವು ಸ್ವೀಕರಿಸುವಂತೆ ಮಾಡುವುದಕ್ಕೆ ಸೈನ್ಯಬಲವನ್ನು ಅಪೇಕ್ಷಿಸುವ ಪಾರ್ಥಿವ ಅರಸನಲ್ಲ ಆತ ನಮಗೆ ಸ್ವಾತಂತ್ರ್ಯವನ್ನು ದಯಪಾಲಿಸಿರುವ, ಆದರೂ ಅವನ ಅನುಕಂಪ ಅವನಿಚ್ಛೆಗೆ ವಿಧೇಯರಾಗಿರುವಂತೆ ನಮ್ಮನ್ನು ಬಗ್ಗಿಸುತ್ತದೆ ಆದರೆ ನಮ್ಮಲ್ಲಿ ಯಾವನೋ ಒಬ್ಬ ಅವನ ಸಂಕಲ್ಪಕ್ಕೆ ತಲೆಬಾಗುವುದು ತನ್ನ ಮಾನಕ್ಕೆ ಕಡಮೆಯೆಂದು ಭಾವಿಸಿದರೆ, ಆತನೆನ್ನುವ "ಹಾಗೆಯೇ ಆಗಲಿ ನಿನ್ನ ಮೇಲೆ ಹೊಳೆಯುವ ನನ್ನ ಸೂರ್ಯ ಬೆಳಕನ್ನು ಕುಗ್ಗಿಸುವುದಿಲ್ಲ, ನಿನ್ನ ಮೇಲೆ ಮಳೆ ಕರೆ

ಯುವ ನನ್ನ ಮೋಡಗಳು ಕೊರೆ ಮಾಡುವುದಿಲ್ಲ ಮಳೆಯನ್ನು ನನ್ನ ಪ್ರಭುತ್ವವನ್ನು ಸ್ವೀಕರಿಸೆಂದು ನಿನ್ನನ್ನು ಒತ್ತಾಯ ಪಡಿಸಲಗತ್ಯವಿಲ್ಲ ನನಗೆ" ಇಂಥ ದೇವರ ಅಸ್ತಿತ್ವವನ್ನು ಕುರಿತು ತಿಳಿಗೇಡಿಗಳು ವಾದ ಗೈಯಲಿ, ಅವನಲ್ಲಿ ನಂಬಿಕೆಯನ್ನಿಟ್ಟಿರುವ ಲಕ್ಷಾಂತರ ಬುದ್ಧಿವಂತರಲ್ಲಿ ನಾನೊಬ್ಬ ಅವನಿಗೆ ನಮಸ್ಕರಿಸಿ ಅವನ ವೈಭವವನ್ನು ನುತಿಸುವುದರಲ್ಲಿ ನನಗೆ ಬಳಲಿಕೆಯಿಲ್ಲ ಎಂದಿಗೂ (ಯಂಗ್ ಇಂಡಿಯಾ. ೨೧-೧-೨೫)

ನನ್ನ ತಿಳಿವಳಿಕೆಯ ಮೇರೆಗೆ, ಜನರನ್ನು ದುಡಿಸುವವರಲ್ಲಿ ಭಗವಂತ ಪ್ರಪಂಚದಲ್ಲೆಲ್ಲ ನಿಸ್ಸುರತನು ಅವ ನಿನ್ನನ್ನು ಒಳಗೂ ಹೊರಗೂ ಕೂಲಂಕಷವಾಗಿ ಪರೀಕ್ಷೆಗೈಯುತ್ತಾನೆ ನಿನ್ನ ಶ್ರದ್ಧೆ ಕುಸಿಯುತ್ತಿರುವಂತೆಯೂ ನಿನ್ನ ಶರೀರ ನಿನ್ನನ್ನು ಕೈಬಿಡುತ್ತಿರುವಂತೆಯೂ ತೋರಿ ಬಂದು ನೀನು ಎದೆಗುಂದಿರುವಾಗ ಅಂತೆಯೋ ಇಂತೆಯೋ ಅಂತೂ ನಿನ್ನ ನೆರವಿಗೆ ಆತ ಬರುವ, ಹಾಗೂ ಶ್ರದ್ಧೆಯನ್ನು ನೀನು ಕಳೆದುಕೊಳ್ಳಬಾರದು, ನೀ ಕೂಗಿದಾಗ ಅವ ಬರುವುದಕ್ಕೆ ಸದಾ ಸಿದ್ಧನಾಗಿರುವ, ಎಂದರೆ ತನ್ನ ಪರತ್ತಿನಂತೆ ನಿನ್ನದರಂತಲ್ಲ, ಎಂಬುದನ್ನು ಸಮರ್ಥಿಸುವ

(ಭಾಷಣ, ಬರಹ)

ನೆಲದಲ್ಲಿ ಹರಿದಾಡುವ ಅಲ್ಪ ಜಂತುಗಳಾದ ನಾವು ಆತನ ಹಿರಿಮೆಯನ್ನೂ ಅಪರಿಮಿತ ಪ್ರೀತಿಯನ್ನೂ ಅನಂತ ಕನಿಕರವನ್ನೂ ಅಳೆಯುವುದು ಹೇಗೆ ಸಾಧ್ಯ ?

ಆತನ ಅಪಾರ ಪ್ರೀತಿಯೂ ಮರುಕವೂ ಎಷ್ಟು ದೊಡ್ಡವೆಂದರೆ, ಔದ್ಧತ್ಯದಿಂದ ತನ್ನನ್ನು ಇಲ್ಲವೆನ್ನುವುದಕ್ಕೂ ತನ್ನನ್ನು ಕುರಿತು ವಾಕ್ಕಾಳಗ ನಡೆಸುವುದಕ್ಕೂ ಸಹಮಾನವರ ಕೊರಳನ್ನು ಕತ್ತರಿಸುವುದಕ್ಕೂ ಮನುಷ್ಯನಿಗೆ ಆಸ್ಪದವಿತ್ತಿರುವ (ಸಿಂಹಳದಲ್ಲಿ ಗಾಂಧೀಜೀ)

## (೧೨) ನಾನಾ ನಾಮಗಳು

ದೇವರು ಎಂತಿರುವನೆಂದು ನನಗೆ ನಂಬಿಕೆಯಿದೆಯೋ ಖಚಿತವಾಗಿ ಅಂತೆಯೇ ಅವನನ್ನು ಕುರಿತ ನನ್ನ ಮಾತು ವಾಸ್ತವಿಕ ವಿಷಯವೇನೆಂದರೆ, ಆಲೋಚನೆಗೆ ನಿಲುಕದ್ದನ್ನು ನಾವೆಲ್ಲ ಯೋಚಿಸುತ್ತಿರುವೆವು, ಬಣ್ಣಿಸಲಾಗದ್ದನ್ನು ಬಣ್ಣಿಸುತ್ತಿರುವೆವು, ಅಜ್ಞಾತವಾದದ್ದನ್ನು ಅರಿಯಲರ

ಸುತ್ತಿರುವೆವು, ಆ ಕಾರಣದಿಂದಲೇ ನಮ್ಮ ಮಾತು ತತ್ತರಿಸುತ್ತದೆ, ಕೊರತೆಯಾಗಿದೆ, ಅಷ್ಟೇಕೆ, ಎಷ್ಟೋ ಸಲ ಅದರಲ್ಲಿ ಪೂರ್ವಾಪರ ವಿರೋಧವಿದೆ ಅದಕ್ಕಾಗಿಯೇ ವೇದಗಳು ಬ್ರಹ್ಮನನ್ನು "ಇದಲ್ಲ" "ಇದೂ ಅಲ್ಲ" ಎಂದು ಬಣ್ಣಿಸುತ್ತವೆ ಆದರೆ ಅವನೋ ಅಥವಾ ಅದೋ ಇದಲ್ಲದಿದ್ದರೂ ಅವನೋ ಅಥವಾ ಅದೋ ಇದೆ ನಾವು ಇರುವುದಾದರೆ, ನಮ್ಮ ತಾಯಿ ತಂದೆಗಳೂ ಅವರ ತಾಯಿತಂದೆಗಳೂ ಇದ್ದಿದ್ದಾದರೆ, ಇಡೀ ಸೃಷ್ಟಿಗೆ ತಂದೆಯುಂಟೆಂದು ನಂಬುವುದು ಸುಯೋಗ್ಯ ಅವನು ಇಲ್ಲವೆಂದಾದರೆ ನಾವು ಇರುವುದೆಲ್ಲಿ? ಆ ಕಾರಣದಿಂದಲೇ, ನಾವೆಲ್ಲ ಒಕ್ಕೊರಲಿನಿಂದ ಒಬ್ಬನೇ ಭಗವಂತನನ್ನು ಪರಮಾತ್ಮ, ಈಶ್ವರ, ಶಿವ, ವಿಷ್ಣು, ರಾಮ, ಅಲ್ಲಾ, ಖುದಾ, ದಾದಾಹಾರ್ಮುಜ್ದ, ಯೆಹೋವ, ಗಾಡ್ ಇತ್ಯಾದಿ ಅಸಂಖ್ಯಾತ ಬಗೆಯ ಹೆಸರುಗಳಿಂದ ಬೇರೆ ಬೇರೆ ಕರೆಯುತ್ತೇವೆ ಅವನು ಏಕ, ಆದರೂ ಅನೇಕ (ಯಂಗ್ ಇಂಡಿಯಾ. ೨೧ ೧-೨೬)

ಸರ್ವಶಕ್ತನಾದ ಸರ್ವವ್ಯಾಪಿಯಾದ ಪರಮಾತ್ಮ ಒಬ್ಬ ಮಾತ್ರ ಇರುವ ಅವನಿಗೆ ವಿವಿಧ ನಾಮಧೇಯ ನಮಗೆ ಅತ್ಯಂತ ಪರಿಚಿತವಾದ ಹೆಸರಿನಿಂದ ಅವನನ್ನು ನಾವು ನೆನೆಯುತ್ತೇವೆ ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಅತ್ಯಂತ ರುಚಿಯೆಂದು ಭಾಸವಾಗುವ ಹೆಸರನ್ನು ಆರಿಸಿಕೊಳ್ಳಬಹುದು ಈಶ್ವರ, ಅಲ್ಲಾ, ಖುದಾ, ಗಾಡ್ ಎಲ್ಲಕ್ಕೂ ಅರ್ಥ ಒಂದೇ

(ಹರಿಜನ. ೩-೩-೪೬)

ಭಗವಂತನಿಗೆ ಸಹಸ್ರ ನಾಮ, ಮೇಲಾಗಿ, ಅವ ನಾಮರಹಿತ ನಮ್ಮನ್ನು ಹರ್ಷಗೊಳಿಸುವ ಯಾವ ಹೆಸರಿನಿಂದ ಬೇಕಾದರೂ ನಾವು ಆತನನ್ನು ಪ್ರಾರ್ಥಿಸಬಹುದು, ಪೂಜಿಸಬಹುದು ಎಲ್ಲರೂ ಪೂಜಿಸುವುದು ಅದೊಂದೇ ಚೈತನ್ಯವನ್ನ, ಆದರೆ ಎಲ್ಲ ಆಹಾರಗಳೂ ಎಲ್ಲರಿಗೂ ಸರಿಹೋಗದಂತೆ, ಎಲ್ಲ ಹೆಸರುಗಳೂ ಎಲ್ಲರಿಗೂ ಹಿಡಿಸುವುದಿಲ್ಲ ಪ್ರತಿಯೊಬ್ಬನೂ ತನ್ನ ಭಾವನಾಗಡಣಕ್ಕೆ ತಕ್ಕಂತೆ ನಾಮಧೇಯವನ್ನು ಆರಿಸುವ ಆತ ಅಂತರ್ನಿವಾಸಿ, ಸರ್ವಸಮರ್ಥ ಹಾಗೂ ಸರ್ವಜ್ಞನಾಗಿರುವುದರಿಂದ ನಮ್ಮ ಅಂತರತಮ ಭಾವಗಳನ್ನು ಬಲ್ಲ, ನಮ್ಮ ಯೋಗ್ಯತೆಗೆ ತಕ್ಕಂತೆ ಮಾರುತ್ತರಗೊಡುವ.

ನನ್ನ ಅಭಿಪ್ರಾಯದ ಮೇರೆಗೆ, ರಾಮ, ರಹಮಾನ್, ಆಹುರಮಜ್ದ, ಗಾಡ್ ಅಥವಾ ಕೃಷ್ಣ ಇವೆಲ್ಲ ಆ ಅಗೋಚರ ಶಕ್ತಿಯನ್ನು ಹೆಸರಿಸುವ ಮಾನವ ಪ್ರಯತ್ನಗಳು, ಇವು ಬರಿ ವರ್ಣನೆ ಮಾತ್ರ ಅಲ್ಲದೆ, ಅದನ್ನು ವರ್ಣಿಸುವ ಮನುಷ್ಯ ಪ್ರಯಾಸವಾವುದೂ ಆ ಚೈತನ್ಯಕ್ಕೆ ಬೇಡ ತನ್ನ ಮನಸ್ಸಿನ ಮಿತಿಗಳ ವರ್ತುಳಗಳೊಳಗೆ ಮಾತ್ರ ಪರಮಾತ್ಮನನ್ನು ಭಾವಿಸಿಕೊಳ್ಳಬಲ್ಲ ಮನುಜ ಎಂದ ಮೇಲೆ, ಆತನನ್ನು ಒಬ್ಬಾತ ಪುರುಷನೆಂದೂ ಇನ್ನೊಬ್ಬ ಶಕ್ತಿಯೆಂದೂ ಬಗೆದು ಆರಾಧಿಸಿದರೆ ಏನು ಪ್ರಮಾದ? ತಮ್ಮ ತಮ್ಮ ಅರಿವಿಗನುಗುಣವಾಗಿ ಇಬ್ಬರೂ ಸರಿಯಾದದ್ದನ್ನು ಎಸಗುವರು ಶಕ್ತಿಗಳಲ್ಲೆಲ್ಲ ಶಕ್ತಿ ದೇವರು ಎಂಬುದನ್ನು ಮಾತ್ರ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು ಉಳಿದೆಲ್ಲ ಶಕ್ತಿಗಳೂ ಭೌತಶಕ್ತಿಗಳು ದೇವರಾದರೋ ಸಮಸ್ತವನ್ನೂ ವ್ಯಾಪಿಸಿರುವ ಸಮಸ್ತವನ್ನೂ ಅಪ್ಪಿಕೊಂಡಿರುವ ಪ್ರಾಣಶಕ್ತಿ ಅಥವಾ ಚೈತನ್ಯ, ಆದ್ದರಿಂದ ಮಾನವ ಜ್ಞಾನಕ್ಕೆ ಅತೀತ

(ಹರಿಜನ ೧೮-೮-೪೬)

ಇಸ್ಲಾಂ ಧರ್ಮದ ಅಲ್ಲಾ ಎಂದರೆ ಕ್ರೈಸ್ತ ಮತೀಯರ ಗಾಡ್ ಮತ್ತು ಹಿಂದೂಗಳ ಈಶ್ವರ ಹಿಂದೂಧರ್ಮದಲ್ಲಿ ಪರಮಾತ್ಮನಿಗೆ ಅನೇಕ ನಾಮಗಳಿರುವಂತೆ ಅಷ್ಟೇ ನಾಮಗಳುಂಟು ಅವನಿಗೆ ಇಸ್ಲಾಂ ಧರ್ಮದಲ್ಲಿ ಆ ಹೆಸರುಗಳು ಸೂಚಿಸುವುದು ವ್ಯಕ್ತಿವೈಶಿಷ್ಟ್ಯವನ್ನಲ್ಲ, ಗುಣಗಳನ್ನಲ್ಲ ಅಲ್ಪಮಾನವ ತನ್ನ ವಿನಮ್ರ ರೀತಿಯಲ್ಲಿ ಗುಣಾರೋಪಣೆಯ ಮುಖಾಂತರ ಬಣ್ಣಿಸಲೆತ್ನಿಸಿದ್ದಾನೆ ಮಹಿಮಾವಂತ ಭಗವಂತನನ್ನ ಆತ ಸಮಸ್ತ ಗುಣಗಳಿಂದ ಅತಿ ಮೇಲೆ, ಅವರ್ಣನೀಯ, ಭಾವನಾತೀತ, ಅಮೇಯ

(ಹರಿಜನ. ೧೪-೫-೩೮)

ಮನುಷ್ಯ ಪ್ರಜ್ಞೆ ಆಳವನ್ನು ಕಂಡುಹಿಡಿಯಲಾಗದ, ಹೆಸರಿಸಲಾಗದ ದೇವರನ್ನು ಗುರ್ತಿಸಲು ಮಾನವ ಕುಲ ಉಪಯೋಗಿಸುವ ಲಕ್ಷಾಂತರ ಹೆಸರುಗಳಲ್ಲಿ ದರಿದ್ರನಾರಾಯಣ ಒಂದು ಅದರ ಅರ್ಥ ಬಡವರ ದೇವ, ಬಡವರ ಹೃದಯಗಳಲ್ಲಿ ಪ್ರತ್ಯಕ್ಷವಾಗುವ ದೇವ

(ಯಂಗ್ ಇಂಡಿಯಾ. ೫-೫-೨೭)

## (೧೩) ನಾವು ದೇವರ ಅಂಶ

ನಾವು ದೇವರಲ್ಲದಿರಬಹುದು, ಆದರೆ ದೇವರವರಾಗಿದ್ದೇವೆ, ಒಂದು ಸಣ್ಣ ಹನಿ ನೀರು ಸಾಗರದ್ದಾಗಿರುವಂತೆ ಅದನ್ನು ಸಾಗರದಿಂದ ಕಿತ್ತು ಬೇರ್ಪಡಿಸಿ ಲಕ್ಷಾಂತರ ಮೈಲಿ ಆಚೆ ಎಸೆದಿರುವರೆಂದು ಭಾವಿಸಿ ಅದು ನಿಸ್ಸಹಾಯಕವಾಗುತ್ತದೆ ತನ್ನ ಪರಿಸರದಿಂದ ಕಿತ್ತು ಬೇರ್ಪಟ್ಟಾಗ ಅದು ನಿಸ್ಸಹಾಯಕವಾಗುತ್ತದೆ, ಸಾಗರದ ಸಾಮರ್ಥ್ಯ ವೈಭವವನ್ನು ಅದು ಅನುಭವಿಸಲರಿಯದು ಆದು ಸಾಗರದ್ದೆಂದು ಯಾರಾದರೂ ಅದಕ್ಕೆ ಕಾಣಿಸಿಕೊಟ್ಟರೆ, ಅದರ ಭವಸೆ ಪುನರುಜ್ಜೀವಿತವಾಗುತ್ತದೆ, ಅದು ನಲಿಯುತ್ತ ಕುಣಿದಾಡುವುದು, ಮತ್ತು ಸಾಗರದ ಸಾಮರ್ಥ್ಯ ವೈಭವ ಪ್ರತಿಬಿಂಬಿತವಾಗುವುದು ಅದರಲ್ಲಿ

## (೧೪) ಭಗವಂತನ ಪ್ರತಿಬಿಂಬ ಮಾನವ

ಕೇವಲ ಮಂಗನೊಡನೆಯೇ ಅಲ್ಲದೆ ಕುದುರೆ ಕುರಿಯೊಡನೆಯೂ ಸಿಂಹ ಚಿರತೆಯೊಡನೆಯೂ ಹಾವು ಚೇಳಿನೊಡನೆಯೂ ನನಗೆ ನೆಂಟತನ ವಿದೆಯೆಂದು ಹೇಳುವುದಷ್ಟೇ ಅಲ್ಲದೆ ಅದನ್ನು ಒಪ್ಪಿಕೊಳ್ಳಲೇಬೇಕೆಂದು ಬಲಾತ್ಕರಿಸುತ್ತದೆ ನನ್ನ ನೀತಿನೇಮ ನನ್ನ ಜೀವನವನ್ನು ನಿಯಂತ್ರಿಸುವ ಕಠಿಣ ನೀತಿನೇಮ—ಆದು ಪ್ರತಿ ಗಂಡಸಿನ ಹೆಂಗಸಿನ ಜೀವನವನ್ನು ನಿಯಂತ್ರಿಸಬೇಕೆಂಬ ನನ್ನ ಅಭಿಮತ—ಈ ಏಕಪಕ್ಷೀಯ ಹೊಣೆಗಾರಿಕೆಯನ್ನು ಹೊರಿಸುತ್ತದೆ ನಮ್ಮ ಮೇಲೆ ಅದನ್ನು ಹಾಗೆ ಹೊರಿಸಿರುವುದಕ್ಕೆ ಕಾರಣ ಮನುಷ್ಯನೊಬ್ಬನೇ ದೇವರ ಪ್ರತಿಬಿಂಬವಾಗಿ ನಿರ್ಮಿತವಾಗಿರುವುದು ನಮ್ಮಲ್ಲಿ ಕೆಲವರಿಗೆ ನಮ್ಮ ಆ ಗೌರವಸ್ಥಾನದ ತಿಳಿವಳಿಕೆ ಇಲ್ಲದಿದ್ದರೆ ಅದರಿಂದ ಒಂದು ಬಾಧೆಯು ಹೊರತು ಮತ್ತಾವ ಬಾಧೆಯೂ ಇಲ್ಲ, ಅದಾವುದೆಂದರೆ, ಆ ಸ್ಥಾನದ ಲಾಭ ನಮಗೆ ಸಿಕ್ಕುವುದಿಲ್ಲ, ಕುರಿಗಳ ಬಳಗದಲ್ಲಿ ಬೆಳೆದ ಸಿಂಹಕ್ಕೆ ತನ್ನ ಸ್ಥಾನ ಯಾವುದೆಂಬ ಅರಿವಿಲ್ಲದಿರಬಹುದು, ಅದರ ಪ್ರಯೋಜನ ಅದಕ್ಕಿಲ್ಲ ಆದರೂ ಕೂಡ ಸಿಂಹ ಸಿಂಹವೆ ಅದನ್ನು ಅರಿತ ತಕ್ಷಣವೇ ಕುರಿಗಳ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಲು ಶುರು ಮಾಡುತ್ತದೆ ಆದರೆ ಸಿಂಹದ ಸೋಗು ಹಾಕಿಕೊಂಡು

ಮೆರೆಯುವ ಯಾವ ಕುರಿಯೂ ಸಿಂಹದ ಸ್ಥಾನಮಾನವನ್ನು ಸಾಧಿಸಲಾರದು. ಮಾನವನನ್ನು ಭಗವಂತನ ಪ್ರತಿಬಿಂಬವಾಗಿ ನಿರ್ಮಿಸಲಾಗಿದೆ ಎಂಬ ಪ್ರಮೇಯವನ್ನು ಸಮರ್ಥನೆಗೈಯುವುದಕ್ಕೆ ಎಲ್ಲ ಮನುಷ್ಯರೂ ತಪ್ಪು ತಮ್ಮ ಆಕೃತಿಯಲ್ಲಿ ಆ ಪ್ರತೀಕವನ್ನು ಸುವ್ಯಕ್ತವಾಗಿ ಪ್ರದರ್ಶಿಸುವರೆಂದು ತೋರಿಸಬೇಕಾದದ್ದು ಖಂಡಿತವಾಗಿ ಅನಗತ್ಯ. ಕನಿಷ್ಠ ಪಕ್ಷಕ್ಕೆ ಒಬ್ಬ ಮನುಷ್ಯನಾದರೂ ಹಾಗೆ ಮಾಡಿದ್ದಾನೆಂದು ತೋರಿಸಿದರೆ ಸಾಕು ಮಾನವಕುಲದ ಶ್ರೇಷ್ಠ ಧಾರ್ಮಿಕ ಗುರುಗಳು ತಮ್ಮ ಆಕೃತಿಗಳಲ್ಲಿ ಭಗವಂತನ ಪ್ರತಿಮೆಯನ್ನು ಪ್ರದರ್ಶಿಸಿದ್ದಾರೆಂಬುದನ್ನು ಅಲ್ಲಗಳೆಯಲಾದೀತೆ?

(ಯಂಗ್ ಇಂಡಿಯಾ. ೮-೭ ೩೬)

## (೧೫) ಪ್ರಪಂಚ ನಶ್ವರ

ನಮ್ಮ ಹತ್ತಿರದಲ್ಲಿಯೂ ಸುತ್ತಮುತ್ತಲೂ ಕಾಣಿಸುವುದು ಮತ್ತು ಒದಗಲಿರುವುದಲ್ಲ ಅನಿಶ್ಚಿತ, ಕೇವಲ ಅಶಾಶ್ವತ. ಪರಾತ್ಪರ ಚೇತನವೊಂದು ಅವಲ್ಲಿ ಅಡಗಿರುವದೆಂಬ ಸಂಗತಿ ನಿಶ್ಚಿತ. ಆ ಖಂಡಿತತ್ವದ ಒಂದು ಕಿರುನೋಟವನ್ನು ಗಳಿಸಿ, ಅದರ ದಿಕ್ಕಿಗೆ ತನ್ನ ಬಂಡಿಯನ್ನು ತಿರುಗಿಸಿದಲ್ಲಿ ಮನುಷ್ಯ ಧನ್ಯ. ಆ ಸತ್ಯಕ್ಕಾಗಿ ಅರಸುವುದು ಬಾಳಿನ ಪರಮ ಶ್ರೇಯಸ್ಸು.

## (೧೬) ದುರುಳತೆಯ ಸಮಸ್ಯೆ

ತರ್ಕಸಮ್ಮತವಾದ ಯಾವ ಪದ್ಧತಿಯಿಂದಲೂ ದುರುಳತೆ ಏಕಿರುವುದೆಂದು ಸಮರ್ಪಕ ವಿವರಣೆಯನ್ನು ನಾ ಕೊಡಲಾರೆ. ಹಾಗೆ ಮಾಡಬಯಸುವುದು ಭಗವಂತನ ಜೊತೆಗೆ ಸಮಾನ ಶಾಸಕನಾದಂತೆ. ಆದ್ದರಿಂದ, ಕೇಡಿಗತನವನ್ನು ಕೆಟ್ಟದೆಂದು ಮನಗಾಣುವುದಕ್ಕೆ ಸಾಕಷ್ಟು ನಮ್ರತೆ ನನ್ನಲ್ಲಿದೆ. ಜಗತ್ತಿನಲ್ಲಿ ದುರುಳತೆಯನ್ನು ದೇವರು ಇರಗೊಟ್ಟಿರುವನೆಂಬ ಖಚಿತ ಕಾರಣಕ್ಕಾಗಿಯೇ ಆತನನ್ನು ದೀರ್ಘಕಾಲ ನಿಧಾನಿಸುವವ, ತಾಳ್ಮೆಯುಳ್ಳವನೆಂದು ನಾನು ಕರೆಯುವೆ. ಆತನಲ್ಲಿ ಯಾವ ಕೇಡಿಗತನವೂ ಇಲ್ಲವೆಂದು ನಾ ಬಲ್ಲೆ, ಆದರೂ ದುರುಳತೆ ಇದ್ದೇ ಇದ್ದರೆ ಆತ ಅದರ ನಿರ್ಮಾಪಕ, ಹಾಗೂ ಅದರಿಂದ ನಿರ್ಲಿಪ್ತ.

ನನಗೆ ಇದೂ ಗೊತ್ತು, ದುಷ್ಟತೆಗೆ ಎದುರಾಳಿಯಾಗಿ ಪ್ರಾಣವನ್ನು
ತೆರುವುದಕ್ಕೂ ಕೂಡ ಹಿಂಜರಿಯುವೆ ಆದರೊಡನೆ ಮಲ್ಲಯುದ್ಧ ಗೈಯದಿ
ದ್ದರೆ ನಾನೆಂದಿಗೂ ಪರಮಾತ್ಮನನ್ನು ತಿಳಿಯಲಾರೆ ನನ್ನ ನಮ್ರ ಹಾಗೂ
ಮಿತವಾದ ಅನುಭವದಿಂದ ನನ್ನ ಈ ನೆಚ್ಚಿಗೆ ಒಲಗೊಂಡಿದೆ.

ಪ್ರಪಂಚದಲ್ಲಿ ಆದೇತಕ್ಕೆ ಕೇಡಿಗತನವಿದೆ? ಉತ್ತರಕೊಡಲು ಕಷ್ಟ
ವಾದ ಪ್ರಶ್ನೆ ಇದು ಹಳ್ಳಿಗನದ್ದೆಂದು ಕರೆಯುಬಹುದಾದ ಉತ್ತರವನ್ನು
ಮಾತ್ರ ನಾ ಕೊಡಬಲ್ಲೆ ಒಳಿತು ಇದ್ದಲ್ಲಿ, ಕೆಡುಕೂ ಕೂಡ ಇರಲೇ
ಬೇಕು, ಹೇಗೆಂದರೆ, ಎಲ್ಲಿ ಬೆಳಕಿದೆಯೋ ಅಲ್ಲಿ ಕತ್ತಲೆ ಕೂಡ ಇದೆ.
ಆದರೆ ಇದು ಮರ್ತ್ಯಮಾನವರಾದ ನಮಗೆ ಸಂಬಂಧಿಸಿದಂತೆ ಮಾತ್ರ
ನಿಜ ಭಗವಂತನ ಎದುರು ಯಾವುದೂ ಒಳಿತಲ್ಲ, ಯಾವುದೂ ಕೆಡು
ಕಲ್ಲ ಆತನ ವಿಧಿ ವಿಧಾನಗಳನ್ನು ಕುರಿತು ಮಾನವೀಯ ಪರಿಭಾಷೆ
ಯಲ್ಲಿ ನಾವು ಮಾತನಾಡಬಹುದು, ಆದರೆ ನಮ್ಮ ಭಾಷೆ ದೇವರದ್ದಲ್ಲ.

(ಹರಿಜನ ೭-೯-೩೫)

ನಿಷ್ಠುರವಾದ ವೈಜ್ಞಾನಿಕ ಅರ್ಥದಲ್ಲಿ, ಒಳ್ಳೆಯದು ಕೆಟ್ಟದು ಎರ
ಡರ ಬುಡದಲ್ಲಿಯೂ ಪರಮಾತ್ಮನಿದ್ದಾನೆ ಶಸ್ತ್ರಚಿಕಿತ್ಸಕನ ಚಾಕನ್ನು ನಡೆ
ಸುತ್ತಾನೆ ಅವ, ಹಿಂದೆಗೆಯದೆ ಕೊಲೆಗಡುಕನ ಚಾಕನ್ನೂ ನಡೆಸುತ್ತಾನೆ
ಇದೆಲ್ಲ ಹಾಗಿದ್ದರೂ, ಮಾನವೀಯ ವ್ಯವಹಾರಗಳಲ್ಲಿ ಸೌಜನ್ಯ ದೌರ್ಜನ್ಯ
ಗಳು ಪರಸ್ಪರ ವ್ಯತ್ಯಸ್ತ, ಒಂದಕ್ಕೊಂದು ಅಸಂಗತ, ಬೆಳಕು ಕತ್ತಲೆ, ಭಗ
ವಂತ ಸೈತಾನ, ಅಹ್ರಿಮನ್ ಅಹುರ ಮಜ್ದಗಳಂತೆ ಅವೆರಡೂ ಸಂಕೇತ
ಪ್ರತಿಸಂಕೇತ. (ಹರಿಜನ. ೨೦-೩-೩೭)

ಒಳ್ಳೆಯದರ ಹಿಂದೆ ಪರಮಾತ್ಮನ ಹಸ್ತವಿದೆ, ಆದರೆ ಪರಮಾತ್ಮನ
ಹಸ್ತದಲ್ಲಿ ಅದು ಬರಿ ಒಳ್ಳೆಯದೇ ಅಲ್ಲ. ಕೆಟ್ಟದರ ಹಿಂದೆಯೂ ಅವನ
ಹಸ್ತವಿದೆ, ಆದರೆ ಇನ್ನು ಮುಂದೆ ಅದು ಕೆಡುಕಲ್ಲ. 'ಒಳ್ಳೆಯದು'
'ಕೆಟ್ಟದು' ಎಂಬುದು ನಮ್ಮ ಸ್ವಂತ ಸದೋಷ ನುಡಿ. ಸೌಜನ್ಯ ದೌರ್ಜನ್ಯ
ವೆರಡನ್ನೂ ಮೀರಿರುವ ಭಗವಂತ

ಅವನ ಅನುಮತಿಯಿಲ್ಲದೆ ಇರಲು ಯಾವುದಕ್ಕಾದರೂ ಅಸಾಧ್ಯ
ಅವನು ಅನೇಕ ವಿಪರ್ಯಸ್ತ ಪದಾರ್ಥಗಳನ್ನು ನಿರ್ಮಿಸುವ, ಅವುಗಳನ್ನು

ಸಂಪಾದಿಸುವುದು ಆವಶ್ಯಕ ಆ ಪ್ರಕ್ರಿಯೆಯನ್ನು ನಾವು ಹಿಂದುಮುಂದು ಮಾಡಬೇಕು ಪರಮಾತ್ಮ ಅಂತಃಪ್ರಜ್ಞೆಯನ್ನು ನಮಗೆ ದಯಪಾಲಿಸಿದ್ದಾನೆ ಯುಕ್ತವಾದದ್ದನ್ನು ಎಸಗುವ ಸಾಮರ್ಥ್ಯವನ್ನು ನೀಡಿದ್ದಾನೆ ನಿನ್ನ ಅನುಮತಿಯನ್ನು ಹೊಂದಿ ನಿನ್ನ ಒಡವೆಯನ್ನು ನಾನು ತೆಗೆದುಕೊಂಡರೆ ಅದು ಕಳ್ಳತನ, ಆ ಒಡವೆಯನ್ನು ಅದರ ಸ್ವಂತ ಜಾಗದಲ್ಲಿ ನಾನು ಮರಳಿ ಇಡತಕ್ಕದ್ದು (ಗಾಂಧೀಜಿಯೊಡನೆ ಸಂಭಾಷಣೆ)

ಸಚ್ಚಿಂತನೆ ದುಷ್ಟಚಿಂತನೆಗಳಿಗಿರುವ ವ್ಯತ್ಯಾಸಕ್ಕೆ ಮಹತ್ವವಿಲ್ಲದಿಲ್ಲ. ಈ ಯೋಚನೆಗಳೇನೂ ಹೇಗೋ ಹಾಗೆ ಬರುವವಲ್ಲ ಅವು ಒಂದು ಕಟ್ಟಳೆಯನ್ನು ಅನುಸರಿಸುತ್ತವೆ, ಆ ಕಟ್ಟಳೆಯನ್ನು ಸ್ಪಷ್ಟವಾಗಿ ನಿರೂಪಿಸುವುದಕ್ಕೆ ಧರ್ಮಗ್ರಂಥಗಳು ಯತ್ನಿಸಿವೆ ಗಣಿತಶಾಸ್ತ್ರದ ಯಾವುದೋ ಕೆಲವು ಸಮಸ್ಯೆಗಳಿವೆ, ಅವನ್ನು ಬಿಡಿಸಬೇಕಾದರೆ ವ್ಯವಹಾರಕ್ಕನುಕೂಲಿನುವ ಕೆಲವು ಗೃಹೀತ ಸಿದ್ಧಾಂತಗಳನ್ನು ಇಟ್ಟುಕೊಳ್ಳುವುದು ಆಗತ್ಯ. ಸಮಸ್ಯಾಪೂರಣಕ್ಕೆ ಅವು ನೆರವಾಗುತ್ತವೆ, ಆದರೆ ಅವು ಶುದ್ಧಾಂಗವಾಗಿ ಕಾಲ್ಪನಿಕ, ಅವಿಂದ ಮತ್ತಾವ ಕ್ರಿಯಾತ್ಮಕ ಉಪಯೋಗವೂ ಇಲ್ಲ ಅದೇ ಮೇರೆಗೆ, ಈ ವಿಶ್ವದಲ್ಲಿ ಪರಸ್ಪರ ವಿರುದ್ಧ ಶಕ್ತಿಗಳೆರಡು ಒಂದರೊಡನೊಂದು ಹೋರಾಡುತ್ತಿರುವುವೆಂದು ಮತ್ತು ಅವಲ್ಲಿ ಒಂದು ದೈವೀ ಶಕ್ತಿ ಇನ್ನೊಂದು ಆಸುರೀಶಕ್ತಿಯೆಂದು ಗೃಹೀತ ಸಿದ್ಧಾಂತವನ್ನಿಟ್ಟುಕೊಂಡು ಮನಶ್ಶಾಸ್ತ್ರಜ್ಞರು ಮುಂದುವರಿದಿದ್ದಾರೆ ಜಗತ್ತಿನ ಸಕಲ ಧರ್ಮಗ್ರಂಥಗಳಲ್ಲಿಯೂ ಈ ಭೇದವನ್ನು ಸೂಚಿಸಿದೆ ನಾನಾದರೋ ಈ ಭೇದ ಕಾಲ್ಪನಿಕವೆಂದು ಸಾರುತ್ತೇನೆ ದೇವರು ಒಬ್ಬನೆ, ದ್ವಿತೀಯರಹಿತ ಅವನೊಬ್ಬ ಮಾತ್ರ ಇರುವ ಅವನು ವಿವರಣಾವಾಕ್ಯಕ್ಕೆ ಸಿಕ್ಕ ಯಥಾರ್ಥ ಸಂಗತಿಯೇನೆಂದರೆ, ಸೈತಾನನೊಡನೆ ಸಮರಗೈಯುತ್ತಿರುವ ದೇವರೇ ಇಲ್ಲ, ನಾವು ಭಗವಂತ ಸೈತಾನ ಸಮರವೊಂದು ಜರುಗುತ್ತಿದೆಯೆಂದು ಊಹಿಸಿಕೊಂಡಿದ್ದೇವೆ ಮಹಾಭಾರತದ ಗ್ರಂಥಕರ್ತ ಪಾಂಡವ ಕೌರವರ ವಿರುದ್ಧ ಬಲಗಳ ನಡುವೆ ಆದ ಯುದ್ಧವನ್ನು ಒಣ್ಣಿಸಿದ್ದಾನೆ, ಹಾಗೂ ಎರಡನೆಯದರೊಡನೆ ಅಸಹಕಾರ ಮಾಡಿರೆಂದು ಬೋಧಿಸಿದ್ದಾನೆ ಜನರಿಗೆ.

ಆಲೋಚನೆಗಳಿಗೆ ಕರೆಕಳಿಸುವವರು ನಾವು, ಹಾಗೂ ಅವನ್ನು ತಳ್ಳಿ ನೂಕುವವರೂ ನಾವೇ ಈ ರೀತಿ, ನಮ್ಮ ವಿರುದ್ಧವಾಗಿಯೇ ಹೆಣಗಾಡಬೇಕು ನಾವು ಆದ್ದರಿಂದಲೇ ಧರ್ಮಗ್ರಂಥಗಳು ಪ್ರಪಂಚದಲ್ಲೊಂದು ದ್ವಂದ್ವ ಕಾಳಗವಿದೆಯೆಂದು ಹೇಳಿವೆ ಈ ಕಾಳಗ ಕಾಲ್ಪನಿಕ, ದಿಟವಲ್ಲ. ಹೀಗಿದ್ದರೂ ಸಹ ಈ ಕಾಲ್ಪನಿಕ ದ್ವಂದ್ವ ಕಾಳಗ ಆಗುತ್ತಿರುವುದು ಯಥಾರ್ಥವೆಂದು ಅಂಗೀಕರಿಸಿದರೆ ಮಾತ್ರ ಈ ಜಗತ್ತಿನಲ್ಲಿ ಬದುಕುವುದಕ್ಕೆ ನಮಗೆ ಆಧಾರ (ಗಾಂಧೀಜಿಯ ಜೀವನದೃಷ್ಟಿ)

ಕೆಟ್ಟುದಕ್ಕೆ ಪ್ರಪಂಚದಲ್ಲಿರಲು ಅಪ್ಪಣೆಯನ್ನು ದೇವರು ಕೊಟ್ಟಿರುವನೆಂಬ ಹೇಳಿಕೆ ಕಿವಿಗೆ ಸಂತಸವಾಗಿಲ್ಲದಿರಬಹುದು ಆದರೆ ಒಳ್ಳೆಯದಕ್ಕೆ ಅವನು ಜವಾಬ್ದಾರನೆಂದು ನಾವು ಭಾವಿಸಿವರೆ ಕೆಟ್ಟುದಕ್ಕೂ ಸಹ ಅವ ಜವಾಬ್ದಾರನಾಗಬೇಕಾಗದ್ದು ಕ್ರಮಬದ್ಧ ಅಸದೃಶವಾದ ಒಲದ ಪ್ರದರ್ಶನಕ್ಕೆ ರಾವಣನಿಗೆ ಆಸ್ಪದ ಕೊಡಲಿಲ್ಲವೆ ಭಗವಂತ? ಈ ವಿಚಾರಗೊಂದಲಕ್ಕೆ ಮೂಲ ಕಾರಣ ಪ್ರಾಯಶಃ ಜನಿಸಿ ಬರುವುದು ಯಾವುದು ದೇವರೆಂಬುವರ ಖಚಿತಜ್ಞಾನದ ಅಭಾವದಿಂದ ಭಗವಂತನೊಬ್ಬ ಪುರುಷನಲ್ಲ ಆತ ವರ್ಣನಾತೀತ ಆತ ಶಾಸನಕರ್ತ, ಹಾಗೂ ಶಾಸನವೂ ಅವನೆ, ಶಾಸನ ನಿರ್ವಾಹಕನೂ ಅವನೆ ಯಾವ ಮಾನವ ಜೀವಿಯಾದರೂ ಈ ಅಧಿಕಾರಗಳು ತನ್ನವೆಂದು ಪ್ರತಿಷ್ಠೆಪಡುವುದು ತಪ್ಪು ಹಾಗೊಬ ಪ್ರತಿಷ್ಠೆಪಟ್ಟರೆ, ಅವನನ್ನು ಅಮಿಶ್ರ ಸರ್ವಾಧಿಕಾರಿಯೆಂದು ತಿಳಿಯುತ್ತಾರೆ ಮಂದಿ ಯಾರನ್ನು ನಾವು ದೇವರೆಂದು ಉಪಾಸನೆಗೈಯುತ್ತೇವೋ ಆತನಿಗೆ ಮಾತ್ರ ಆ ಅಧಿಕಾರಗಳು ಸಮಂಜಸ ಇದೇ ಯಥಾರ್ಥ

(ಹರಿಜನ ೨೪-೨-೪೬)

## ೧೭ ಆಪತ್ತಿನ ಅನುಗ್ರಹ

ಯಾವುದನ್ನು ಪ್ರಾಪಂಚಿಕ ಅನಾಹುತಗಳೆಂದು ಕರೆಯುತ್ತಾರೋ ಅವು ಪ್ರಾರ್ಥನಾಪರನಾದ ಮನುಷ್ಯನ ಭಾವನೆಯಲ್ಲಿ ದೈವಿಕವಾದೊಂದು ಶಿಕ್ಷೆ ಆ ಶಿಕ್ಷೆ ವ್ಯಕ್ತಿಗಳಿಗೆಂತೋ ಅಂತೆಯೇ ಜನಾಂಗಗಳಿಗೂ ಅನ್ವಯಿಸುತ್ತದೆ ಎಲ್ಲ ದಂಡನೆಗಳೂ ಒಂದೇ ಬಗೆಯಲ್ಲಿ ಉಪಯೋಗವಾಗುವುದಿಲ್ಲ ಜನರಿಗೆ ಕೆಲವು, ವ್ಯಕ್ತಿಗಳನ್ನು ಮಾತ್ರ ತಟ್ಟುತ್ತವೆ. ಮತ್ತೆ ಕೆಲವು,

ರಾಷ್ಟ್ರಗಡಣಗಳನ್ನು ಕೇವಲ ಸೌಮ್ಯವಾಗಿ ತಟ್ಟುತ್ತವೆ ಕ್ವೆಟ್ಟಾದ ಭೂಕಂಪದಂಥ ವಿಪತ್ತು ನಮ್ಮನ್ನು ದಿಙ್ಮೂಢಗೊಳಿಸುತ್ತದೆ ಪ್ರತಿನಿತ್ಯದ ಘಟನೆಯಾದ ಸಾಧಾರಣ ಕೇಡಿನ ಅತಿ ಪರಿಚಯ ಅವನ್ನು ಕುರಿತು ತಿರಸ್ಕಾರವನ್ನು ಹುಟ್ಟಿಸುತ್ತದೆ ಭೂಕಂಪಗಳು ಪ್ರತಿನಿತ್ಯದ ವಿದ್ಯಮಾನಗಳಾಗಿದ್ದ ಪಕ್ಷದಲ್ಲಿ ಅವನ್ನು ನಾವು ಲೆಕ್ಕಿಸುತ್ತಲೇ ಇರಲಿಲ್ಲ

ಆದರೆ ಪ್ರತಿಯೊಂದು ಆಪತ್ತೂ ವಿವೇಕವುಳ್ಳವನನ್ನು ಮಂಡಿಯೂರುವಂತೆ ಮಾಡುತ್ತದೆಂಬುದು ಎಲ್ಲರಿಗೂ ಬಂದ ಅನುಭವ ತನ್ನ ಪಾಪಗಳಿಗೆ ಅದು ಪರಮಾತ್ಮನ ಜವಾಬೆಂದೂ ಇನ್ನು ಮುಂದೆ ತನ್ನ ನಡತೆ ಉತ್ತಮಗೊಳ್ಳಬೇಕೆಂದೂ ಅವ ಯೋಚಿಸುತ್ತಾನೆ ಪಾತಕಗಳು ಅವನನ್ನು ವಿಪರೀತ ದುರ್ಬಲಗೊಳಿಸಿಬಿಟ್ಟಿವೆ, ತನ್ನ ದೌರ್ಬಲ್ಯದಲ್ಲಿ ಕುಗ್ಗಿ, ನೆರವಾಗೆಂದು ಭಗವಂತನಿಗೆ ಆರ್ತನಾದ ಮಾಡುತ್ತಾನೆ ಅವ, ಈ ರೀತಿ ಲಕ್ಷೋಪಲಕ್ಷ ಮನುಷ್ಯ ಪ್ರಾಣಿಗಳು ತಮ್ಮ ವೈಯಕ್ತಿಕ ಆಪತ್ತುಗಳನ್ನು ಆತ್ಮೋನ್ನತಿಗೆ ಬಳಸಿಕೊಂಡಿವೆ ಅನಾಹುತಗಳು ತಮ್ಮನ್ನು ಬಂದು ಹಿಡಿದಾಗ ಪರಮಾತ್ಮನ ನೆರವನ್ನು ಜನಾಂಗಗಳೂ ಕೂಡ ಕೋರಿಗುವುದು ತಿಳಿದ ವಿಚಾರ ಭಗವಂತನ ಮುಂದೆ ತಮ್ಮನ್ನು ತುಚ್ಛೀಕರಿಸಿಕೊಂಡು ಸಾಮೂಹಿಕ ದೈನ್ಯತೆ ಪ್ರಾರ್ಥನೆ ಮತ್ತು ಶುದ್ಧೀಕರಣಗಳಿಗೆ ವಾಸರಗಳನ್ನು ಗೊತ್ತುಮಾಡಿವೆ ಅವು

ಅಂತರ್ಯವನ್ನು ನಿರ್ಮಲಗೊಳಿಸುವ ಆವಶ್ಯಕತೆಯನ್ನು ಯಾರು ಮೆಚ್ಚುವರೋ ಅವರು ಈ ಪ್ರಾರ್ಥನೆಯಲ್ಲಿ ಭಾಗವಹಿಸಲಿ ಎಂದು ನಾನು ಕೇಳಿಕೊಳ್ಳುವೆ, ಪ್ರಾಪ್ತಿಸಿದ ಆಪಘಾತಗಳ ಹಿಂದಿರುವ ದೈವೇಚ್ಛೆಯನ್ನು ನಾವು ಅರಿಯುವಂತಾಗಲಿ, ಅವು ನಮ್ಮನ್ನು ವಿನೀತಗೊಳಿಸಿ ಸೃಷ್ಟಿಕರ್ತನ ಕರೆ ಯಾವಾಗ ಬಂದರೂ ಸರಿಯೆ ಅವನ ಮುಂದೆ ನಿಲ್ಲುವುದಕ್ಕೆ ಸಿದ್ಧಪಡಿಸಲಿ, ನಮ್ಮ ಸಹಮಾನವರು ಯಾರೇ ಆಗಿರಲಿ ಅವರ ಸಂಕಟಗಳಲ್ಲಿ ಪಾಲನ್ನು ಹಂಚಿಕೊಳ್ಳಲು ನಾವು ಸರ್ವದಾ ತಯಾರಾಗಿರುವಂತಾಗಲಿ

(ಹರಿಜನ, ೮-೬-೩೫)

ಭಾಗ ೨

# ನೈತಿಕ ಸಾಧನ

## ೧ ಹೃದಯಶುದ್ಧಿ

### (೧೮) ಪರಿಶುದ್ಧಿ ಮತ್ತು ಪರಿಪೂರ್ಣತೆ

ಈ ಭೂಮಿಯಲ್ಲಿ ಪರಿಪೂರ್ಣತೆಯನ್ನು ಪಡೆಯುವುದು ಅಸಾಧ್ಯ ವೆನ್ನುವುದು ದೇವರನ್ನು ನಿರಾಕರಿಸಿದಂತೆ ಪಾಪದಿಂದ ವಿಮುಕ್ತರಾಗುವು ದರ ಅಸಾಧ್ಯತೆಯನ್ನು ಕುರಿತ ಹೇಳಿಕೆ ಬಾಳಿನ ಒಂದು ಅವಸ್ಥೆಗೆ ಸಂಬಂಧಿ ಸಿರುವುದು ಸುಸ್ಪಷ್ಟ ನನ್ನ ಈ ವಾಕ್ಯದ ಸಮರ್ಥನೆಗಾಗಿ ಧರ್ಮಗ್ರಂಥ ಗಳನ್ನು ಶೋಧಿಸಬೇಕಾದ್ದಿಲ್ಲ ಪ್ರಯತ್ನ ಮತ್ತು ಸಂಯಮಗಳಿಗೆ ಒಳಗಾದ ಮಂದಿ ಸಂತತವಾಗಿ ಹೆಚ್ಚು ಸಜ್ಜನರಾಗುತ್ತಿರುವುದು ನಮ್ಮ ಕಣ್ಣಿಗೆ ಬೀಳುತ್ತಿದೆ ಸುಧಾರಣಾಸಾಮರ್ಥ್ಯಕ್ಕೆ ಪರಿಮಿತಿಯನ್ನು ಗೊತ್ತು ಮಾಡುವ ಪ್ರಸಂಗವೇ ಇಲ್ಲ ಭೂಮಿಯ ಮೇಲೆ ಪರಿಪೂರ್ಣ ಪ್ರೀತಿ ಯನ್ನು ನಾನು ಮುಟ್ಟಲಾರೆನೆಂದು ನನಗೆ ಮನವರಿಕೆಯಾದ ಪಕ್ಷದಲ್ಲಿ ಜೀವನ ತನ್ನ ಸ್ವಾರಸ್ಯವೆಲ್ಲವನ್ನೂ ನಷ್ಟಪಡಿಸಿಕೊಂಡೀತು ನನ್ನ ಭಾಗಕ್ಕೆ ಏನಾದರೇನು, ನಮ್ಮ ಪ್ರೀತಿಯ ಪಾತ್ರ ಯಾವಾಗಲೂ ವಿಸ್ತಾರವಾಗುತ್ತ ಹೋಗುವುದೆಂಬುದು ಸತ್ಯಯುಕ್ತ ಸಂಗತಿ ಅದು ನಿಧಾನವಾದ ಪ್ರಕ್ರಿಯೆ. ಸತ್ಕಾರ್ಯದಲ್ಲಿ ಕೂಡ ನಿನ್ನನ್ನು ತಡೆಗಟ್ಟುವ ಜನರನ್ನು ಹೇಗೆ ನೀನು ಪ್ರೀತಿಸೀಯೆ ? ಆದರೂ ಅದೇ ನಿನ್ನ ಪರಮಪರೀಕ್ಷೆಯ ಸಮಯ.

(ನನ್ನ ಪ್ರಿಯ ಮಗ.ವಿಗೆ. ಪು. ೨೪-೨೫)

ಪ್ರಪಂಚದ ಸಮಸ್ತ ಹಿರಿಯ ಧರ್ಮಗಳೂ, ಪರಸ್ಪರ ಎಷ್ಟೇ ಭಿನ್ನ ವಾದರೂ, ಈ ಮೂಲಭೂತ ವಿಷಯದಲ್ಲಿ ಸಂಪೂರ್ಣವಾಗಿ ಅಭಿನ್ನ. ಮಲಿನ ಹೃದಯದ ಯಾವ ಗಂಡಸು ಹೆಂಗಸೇ ಆಗಲಿ ಆ ಮಹಾಶ್ವೇತ ಸಿಂಹಾಸನದ ಮುಂದೆ ಹಾಜರಾಗುವ ಸಂಭವವೇ ಇಲ್ಲ.

(ಯಂಗ್ ಇಂಡಿಯಾ. ೮-೯-೨೭)

ಯುವಕರ ಓಲೆಗಳ ಪ್ರವಾಹ ನನ್ನ ಮೇಲೆ ಕೊಚ್ಚಿ ಹರಿಯುತ್ತಿದೆ ಅವರು ತಮ್ಮ ಕೆಟ್ಟ ಚಾಳಿಗಳನ್ನು ಕುರಿತೂ ಅಶ್ರದ್ಧೆಯ ಮೂಲಕ ತಮ್ಮ ಬಾಳಿನಲ್ಲಾಗಿರುವ ಶೂನ್ಯವನ್ನು ಕುರಿತೂ ಮುಚ್ಚುಮರೆಯಿಲ್ಲದೆ ಬರೆಯುತ್ತಿದ್ದಾರೆ ಅವರಿಗೆ ನೆಮ್ಮದಿಯನ್ನು ತಂದೀಯಲಾರದು ಬರಿ ವೈದ್ಯಕೀಯ ಸಲಹೆ ನಾನವರಿಗೆ ಇಷ್ಟನ್ನು ಮಾತ್ರ ಹೇಳಬಲ್ಲೆ. ಭಗವಂತನಿಗೆ ಕೈವಶರಾಗಿ ಆತನಲ್ಲಿಯೂ ಆತನ ಕೃಪೆಯಲ್ಲಿಯೂ ಭರವಸೆಯನ್ನಿಡುವುದಲ್ಲದೆ ಬೇರಾವ ದಾರಿಯೂ ಇಲ್ಲ. ಜೀವಂತ ಧರ್ಮಕ್ಕೆ ನಮ್ಮ ಬದುಕಿನಲ್ಲಿ ಯೋಗ್ಯಸ್ಥಾನವನ್ನು ಕೊಟ್ಟು, ಈ ಪ್ರಸ್ತಾಪವ ಸದುಪಯೋಗವನ್ನು ಮಾಡಿಕೊಳ್ಳೋಣ ಅಖೋ ಭಗತ್ ಹೀಗೆ ನುಡಿದಿಲ್ಲವೆ

ಅಪೇಕ್ಷೆ ಬಂದಂತೆ, ಆದರು ಇಂತೆ
ಬಾಳಿ, ದೇವರನು ಮನಗಾಣುವಂತೆ

(ಯಂಗ್ ಇಂಡಿಯಾ. ೩೦-೮-೨೮)

## (೧೯) ಸತ್ಯಪಥ

ಯಾವ ಉದ್ದೇಶಕ್ಕಾದರೂ ಆಗಲಿ ಅಸತ್ಯವನ್ನು ಆಶ್ರಯಿಸುವ ಮತ್ತು ವಿಶ್ವಾಸ ಜಿಗುಪ್ಸೆಗಳಿಂದ ತುಂಬಿಕೊಂಡ ಪುರುಷ ಪರಾತ್ಪರವನ್ನು ಎಂದಿಗೂ ಸಿದ್ಧಿಸಿಕೊಳ್ಳಲಾರ (ಹರಿಜನ ೨೯-೬-೩೬)

ಆದ್ದರಿಂದ ಸತ್ಯವನ್ನು ಹುಡುಕಿಕೊಂಡು ನಡೆಯುವುದೇ ನೈಜ ಭಕ್ತಿ ದೇವರೆಡೆಗೆ ಒಯ್ಯುವ ಹಾದಿ ಅದು ಅದರಲ್ಲಿ ಹೇಡಿತನಕ್ಕೆ ಜಾಗವಿಲ್ಲ, ಸೋಲಿಗೆ ಜಾಗವಿಲ್ಲ ಅದೊಂದು ತಾಯಿತಿ, ಅದರ ಬಲದಿಂದ ಮರಣವೇ ಅಮರಜೀವನಕ್ಕೆ ಹೆಬ್ಬಾಗಿಲಾಗುತ್ತದೆ.

(ಮಂಗಳಪ್ರಭಾತ)

## (೨೦) ಶುದ್ಧ ಪ್ರೇಮ ತೀರ ಕಠಿನ

ಅತ್ಯಂತ ನಿಷ್ಕಳಂಕ ಪ್ರೀತಿಯನ್ನು ರೂಪಿಸಿ ತೋರುವುದು ಕತ್ತಿಯ ಅಲುಗಿನ ಮೇಲೆ ನಡೆಯುವಂತೆ 'ನನ್ನದೇನೂ ಇಲ್ಲ, ಎಲ್ಲವೂ ನಿನ್ನದೈ' ಎಂದು ಹಾಡುವುದು ಮಾಡುವುದಕ್ಕಿಂತ ಹೆಚ್ಚು ಸುಲಭ ನಾವು ಪ್ರೇಮಪೂರ್ಣರೆಂದು ಊಹಿಸುವಾಗಲೂ ಕೂಡ ಯಾವಾಗ ನಾವು ಸ್ವಾರ್ಥರಹಿತ

ರೆಂಬುದನ್ನು ನಾವೆಂದೂ ಅರಿಯೆವು ಅದನ್ನು ಕುರಿತು ನಾನು ಹೆಚ್ಚು ಚಿಂತಿಸಿದಷ್ಟೂ ನಾನು ಮೇಲಿಂದಮೇಲೆ ಹೇಳಿರುವುದರ ಸತ್ಯ ನನಗೆ ಹೆಚ್ಚು ಭಾಸವಾಗುತ್ತದೆ ಒಂದೇ ನಾಣ್ಯದ ಎರಡು ಮಗ್ಗುಲು ಪ್ರೇಮ ಮತ್ತು ಸತ್ಯ, ಆಚರಣೆಗೆ ತರಲು ಎರಡೂ ಕಷ್ಟತಮ, ಬಾಳಿದರೆ ಅವಕ್ಕಾಗಿ ಮಾತ್ರ ಬಾಳಬೇಕು ಪರಮಾತ್ಮಸೃಷ್ಟಿಯ ಎಲ್ಲ ಜೀವಿಗಳಲ್ಲಿಯೂ ಮಮತೆ ಇಡದ ಪುರುಷ ಸತ್ಯವಂತನಾಗಲಾರ. ಆದ್ದರಿಂದ ಸತ್ಯ ಪ್ರೇಮಗಳೇ ಪೂರ್ಣ ತ್ಯಾಗ (ನನ್ನ ಪ್ರಿಯ ಮಗುವಿಗೆ)

ಭಗವಂತನನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ ಮಾನವನ ಶ್ರೇಷ್ಠತಮ ಉದ್ಯಮವಾಯಿತು ಮನುಷ್ಯ ಕೈಗಳು ಕಟ್ಟಿದ ಗುಡಿಗಳು ವಿಗ್ರಹಗಳು ಅಥವಾ ಪೂಜಾಮಂದಿರಗಳಲ್ಲಿ ಅವ ದೊರಕಲಿಲ್ಲ, ವರ್ಜನೆಗಳ ಮೂಲಕವೂ ಅವ ದೊರಕಲಿಲ್ಲ ಅವ ಸಿಕ್ಕಿದ್ದು ಒಂದರ ಮೂಲಕವೇ, ಪ್ರೀತಿ, ಎಂದರೆ ಪಾರ್ಥಿವ ಪ್ರೀತಿಯಲ್ಲ, ದೈವಿಕ ಅಂಥ ಪ್ರೀತಿಯನ್ನು ಮೀರಾಬಾಯಿ ಬಾಳಿದಳು, ಪ್ರತಿಯೊಂದರಲ್ಲಿಯೂ ಆಕೆ ದೇವರನ್ನು ಕಂಡಳು, ಭಗವಂತನೇ ಆಕೆಗೆ ಸಾರಸರ್ವಸ್ವ (ಹರಿಜನ. ೨೪-೧೧-೪೭)

---

## ೨. ನಿಸ್ಸ್ವಾರ್ಥಸೇವೆ

### (೨೧) ಸತ್ಕ್ರಿಯಾ ಸೇವೆಯೆಂಬ ಧರ್ಮ

ಯಾವೊಂದು ಪ್ರತ್ಯೇಕ ದೈವೀಗುಣವಾದರೂ ನನ್ನಲ್ಲಿದೆಯೆಂದು ನಾ ಹೇಳಲಾರೆ ಪ್ರವಾದಿತ್ವಕ್ಕೆ ಹಕ್ಕಿಲ್ಲ ನನಗೆ ಸತ್ಯವನ್ನು ಅರಸುತ್ತಿರುವ ನಮ್ರ ಅನ್ವೇಷಕ ಮಾತ್ರ ನಾನು, ಅದನ್ನು ಪಡೆಯುವುದೇ ನನ್ನ ತೀವ್ರ ಉದ್ದೇಶ ದೇವರ ಪ್ರತ್ಯಕ್ಷ ದರ್ಶನದ ಸಲುವಾಗಿ ಎಂಥ ತ್ಯಾಗವಾದರೂ ಅದು ಹೆಚ್ಚೆಂದು ನಾ ಎಣಿಸುವುದಿಲ್ಲ ನನ್ನ ಚಟುವಟಿಕೆಯೆಲ್ಲ, ಅದನ್ನು ಸಾಮಾಜಿಕ, ರಾಜಕೀಯ, ದಯಾಪ್ರೇರಿತ, ನೈತಿಕವೆಂದು

ಹೇಗೆ ಬೇಕಾದರೂ ಕರೆಯಲಿ, ಆ ಗುರಿಯನ್ನು ಅನುಲಕ್ಷಿಸಿಯೇ ಸಾಗಿದೆ ಕನಿಷ್ಠತಮ ಜೀವಿಗಳಲ್ಲಿ ಶ್ರೇಷ್ಠ ಬಲಿಷ್ಠರಿಗಿಂತಲೂ ಎಷ್ಟೋ ಹೆಚ್ಚು ಸಾರಿ ಭಗವಂತ ಕಾಣಬರುವನೆಂಬುದು ಗೊತ್ತು ನನಗೆ ಅವುಗಳ ಪದವಿಯನ್ನು ಸೇರುವುದಕ್ಕೆ ನಾನು ಹೆಣಗುತ್ತಿರುವೆ ಅವುಗಳಿಗೆ ಸೈಗೈಯದೆ ನಾನದನ್ನು ಮುಟ್ಟಲಾರೆ ಆದ್ದರಿಂದಲೇ ದಲಿತ ವರ್ಗಗಳ ಸೇವೆಗಾಗಿ ನನ್ನ ವ್ಯಾಮೋಹ ರಾಜಕಾರಣಕ್ಕೆ ಪ್ರವೇಶಿಸದೆ ಈ ಸೇವೆ ನನ್ನಿಂದ ಆಗದು, ಅದಕ್ಕಾಗಿ ರಾಜಕಾರಣದಲ್ಲಿ ನಾನಿರುವುದು ಹೀಗೆ, ನಾನೇನೂ ಒಡೆಯನಲ್ಲ ನಾನು ಇಂಡಿಯದ–ತನ್ಮೂಲಕ ಮಾನವಕುಲದ—ಎಡಹುತ್ತ ಹೆಣಗಾಡುವ ಒಬ್ಬ ವಿನೀತ ಸೇವಕ ಅಷ್ಟೆ (ಯಂಗ್ ಇಂಡಿಯಾ, ೨೫-೫-೨೧)

ಒಬ್ಬ ಪುರುಷ ಕ್ರಿಯಾಶೀಲನಾಗಿಲ್ಲದಿದ್ದರೆ, ಅವನು ಹಿಡಿದಿರುವ ಹಾದಿಯ ಬಗೆಗೆ ಏನನ್ನಾದರೂ ನಾವು ಹೇಳುವುದೆಂತು? ಸತ್ಯ ಪಥದಲ್ಲಿ ಪದವಿಡುವುದೆಂದರೆ ಮನುಷ್ಯ ಪ್ರಪಂಚದಲ್ಲಿ ನಡೆಸುವ ಸಕ್ರಿಯ ಜೀವನವೆಂದು ಸೂಚಿತವಾಗುತ್ತದೆ ಅಂಥ ಚಟುವಟಿಕೆ ಇಲ್ಲದಿರುವಾಗ ಸತ್ಯವನ್ನು ಹಿಂಬಾಲಿಸುದಕ್ಕಾಗಲೀ ಆದರಿಂದ ಹೊರಳಿಕೊಳ್ಳುವುದಕ್ಕಾಗಲೀ ಅವಕಾಶವೇ ಇರದು ಒಂದೇ ಒಂದು ಕ್ಷಣ ಕೂಡ ನರ ಕ್ರಿಯೆಗೈಯದೆ ಇರಲಾರನೆಂದು ಗೀತೆ ಸ್ಪಷ್ಟಪಡಿಸಿದೆ ಭಗವಂತನಿಗೆ ಭಕ್ತನಾದ ಮನುಷ್ಯನಿಗೂ ಭಕ್ತನಲ್ಲದವನಿಗೂ ಇರುವ ಅಂತರವೇನೆಂದರೆ, ಮೊದಲನೆಯವ ಪರರ ಸೇವೆಯಲ್ಲಿ ನಿರತ, ಕಾರ್ಯಕ್ರಮದ ನಡುವೆ ಸತ್ಯವನ್ನು ಬಿಟ್ಟುಕೊಡುವುದಿಲ್ಲ, ಮತ್ತು ಕ್ರಮಕ್ರಮವಾಗಿ ತನಗೆ ಇಷ್ಟವಾದುವು ಇಷ್ಟವಲ್ಲದುವು ಎಂಬುದನ್ನು ಗೆಲ್ಲುವ, ಎರಡನೆಯವ ಸ್ವಾರ್ಥದ ದೆಸೆಯಿಂದ ಕಾರ್ಯಶೀಲ ಸ್ವಂತ ಉದ್ದೇಶಗಳನ್ನು ಪೂರೈಸಿಕೊಳ್ಳುವುದಕ್ಕೆ ಬಳಸುವ ಸಾಧನಗಳ ವಿಚಾರದಲ್ಲಿ ಯಾವ ತೆರೆದ ಅಳುಕೂ ಅವನಿಗಿಲ್ಲ ಪ್ರಪಂಚ ತನ್ನಷ್ಟಕ್ಕೆ ತಾನೆ ದುಷ್ಟವಾದದ್ದೇನೂ ಅಲ್ಲ, ಏತಕ್ಕೆಂದರೆ ದೇವರ ಸಾಕ್ಷಾತ್ಕಾರವೆಂಬ ಗುರಿಯನ್ನು ಮುಟ್ಟುವುದಕ್ಕೆ ಪ್ರಪಂಚದಲ್ಲಿ ಕ್ರಿಯಾತ್ಮಕವಾದ ಬಾಳನ್ನು ಬಾಳುವುದೊಂದೇ ಸಹಾಯಕ ಇಂಥ ಚಟುವಟಿಕೆ ಇತರರ ಹಿತದ ಕಡೆಗೆ ತಿರುಗಿರಬೇಕು ಸ್ವಾರ್ಥ ಕಾರ್ಯಪರತೆ ಖಂಡನೆಗೆ ಮಾತ್ರ ಯುಕ್ತ, ಅದನ್ನು ತ್ಯಜಿಸಲೇ ಬೇಕು (ಮಹದೇವ ದೇಸಾಯಿ ದಿನಚರಿ)

## (೨೨) ಸೃಷ್ಟಿಯೆಲ್ಲದರ ಸೇವೆ ಪರಮಾತ್ಮನ ಸೇವೆ

ಪರಮಾತ್ಮನಿಗೆ ವೈಯಕ್ತಿಕ ಸೇವೆ ಅನಗತ್ಯ ತನಗಾಗಿ ಯಾವ ಮರುಸೇವೆಯನ್ನೂ ಬೇಕೇಬೇಕೆಂದು ಕೇಳದೆ ಅವ ತನ್ನ ಪ್ರಾಣಿಗಳ ಸೇವೆಯನ್ನು ಮಾಡುತ್ತಾನೆ ಬೇರೆ ವಿಷಯದಲ್ಲಿಯೂ ಅವ ಸಾಟಿಯಿಲ್ಲದವ. ಆದ್ದರಿಂದ ಆವನ ಪ್ರಾಣಿಗಳಿಗೆ ಅವರು ನೀಡುವ ಸೇವೆಯಿಂದ ಭಗವಂತನ ಸೇವಕರನ್ನು ಗುರುತಿಸಬೇಕು (ಹರಿಜನ ೧೯-೧೧-೩೩)

ದೇವರನ್ನು ನಾವು ಅರಿಯದಿರಬಹುದು ಆದರೆ ಅವನ ಸೃಷ್ಟಿ ನಮಗೆ ಗೊತ್ತು ಅವನ ಸೃಷ್ಟಿಯ ಸೇವೆಯೆ ಅವನ ಸೇವೆ ಆತನ ಸೃಷ್ಟಿಯ ಯಾವ ಭಾಗ ನಮಗೆ ತೀರ ಸಮೀಪವೂ ತುಂಬ ಪರಿಚಿತವೂ ಆಗಿದೆಯೋ ಅದನ್ನು ಮಾತ್ರ ನಾವು ಸೇವಿಸಬಲ್ಲೆವು ನೆರೆಮನೆಯವನ ಸೇವೆಯಿಂದ ನಾವು ಪ್ರಾರಂಭಮಾಡಬಹುದು ನಮ್ಮ ಅಂಗಳವನ್ನಷ್ಟೆ ಸ್ವಚ್ಛವಾಗಿಟ್ಟುಕೊಂಡು ತೃಪ್ತರಾಗಬಾರದು ನಾವು, ನಮ್ಮ ನೆರೆಯವನ ಅಂಗಳವೂ ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು ನಮ್ಮ ಕುಟುಂಬವನ್ನು ಸೇವಿಸಬೇಕು ನಾವು ಹೌದು, ಆದರೆ ಕುಟುಂಬಕ್ಕಾಗಿ ಗ್ರಾಮವನ್ನು ಬಲಿಕೊಡಲಾಗದು ನಮ್ಮ ಸ್ವಂತ ಗ್ರಾಮದ ಗೌರವವನ್ನು ಕಾಯುವುದರಲ್ಲಿಯೇ ಇದೆ ನಮ್ಮ ಸ್ವಂತ ಗೌರವ ಆದರೆ ನಮ್ಮಲ್ಲಿ ಪ್ರತಿಯೊಬ್ಬನೂ ತನ್ನ ತನ್ನ ಇತಿಮಿತಿಯನ್ನು ಗ್ರಹಿಸಿಕೊಳ್ಳಬೇಕು ನಾವು ಬಾಳುತ್ತಿರುವ ಪ್ರಪಂಚವನ್ನು ಕುರಿತ ನಮ್ಮ ತಿಳಿವಳಿಕೆ ಅಯತ್ನಿತವಾಗಿ ನಮ್ಮ ಸೇವಾಸಾಮರ್ಥ್ಯವನ್ನು ಮಿತಗೊಳಿಸುತ್ತದೆ ಈ ವಿಚಾರವನ್ನು ಸಾಧ್ಯವಾದಷ್ಟು ಸರಳತಮ ನುಡಿಯಲ್ಲಿ ಅರುಹಗೊಡಿ ನಮ್ಮ ವಿಚಾರವಾಗಿ ಕಡಮೆ ಚಿಂತಿಸೋಣ, ನಮ್ಮ ಮಗ್ಗುಲಮನೆಯವನ ವಿಚಾರವಾಗಿ ಹೆಚ್ಚು ಚಿಂತಿಸೋಣ ನಮ್ಮ ಅಂಗಳದ ಕಸವನ್ನು ನೆರೆಯವನ ಅಂಗಳದಲ್ಲಿ ತಿಪ್ಪೆ ಹಾಕುವುದು ಮಾನವ ಸೇವೆಯಲ್ಲ, ಅಪಸೇವೆ ನೆರೆಯವನ ಸೇವೆಯಿಂದ ನಾವು ಶುರು ಮಾಡೋಣ (ಹರಿಜನ. ೨೨-೮-೩೬)

ನಾನಿಲ್ಲಿಗೆ ಬಂದಿರುವುದು ಇನ್ನಾರನ್ನೂ ಸೇವಿಸುವುದಕ್ಕಲ್ಲ, ನನ್ನನ್ನೇ ಈ ಹಳ್ಳಿಗಾಡವರ ಸೇವೆಯ ಮೂಲಕ ನನ್ನ ಸ್ವಂತ ಆತ್ಮಸಾಕ್ಷಾತ್ಕಾರ

ವನ್ನು ಗಳಿಸುವುದಕ್ಕೆ ಭಗವಂತನನ್ನು ಮನಗಾಣುವುದೇ ಮನುಷ್ಯನ ಅಂತಿಮಗುರಿ, ಅವನ ಸಾಮಾಜಿಕ ರಾಜಕೀಯ ಧಾರ್ಮಿಕ ಕಾರ್ಯಭಾರವೆಲ್ಲವನ್ನೂ ದೇವರ ದರ್ಶನದ ಕೊಟ್ಟ ಕೊನೆಯ ಅಭೀಷ್ಟವೇ ನಡೆಸತಕ್ಕದ್ದು ಮಾನವ ಜೀವಿಗಳ ಈ ಕ್ಷಣದ ಸೇವೆ ಆ ಉದ್ಯಮದ ಒಂದು ಆವಶ್ಯಕ ಅಂಗವಾಗುತ್ತದೆ, ಅದಕ್ಕೆ ಕಾರಣ ಸುಲಭ, ದೇವರನ್ನು ಕಂಡುಹಿಡಿಯುವ ಏಕಮೇವ ಮಾರ್ಗ ಅವನ ಸೃಷ್ಟಿಯಲ್ಲಿ ಅವನನ್ನು ಕಂಡು ಅದರೊಡನೆ ಒಂದಾಗುವುದೇ ಈ ಕೆಲಸ ಸ್ವದೇಶದ ಮುಖಾಂತರ ಮಾತ್ರ ಎಸಗಲುಸಾಧ್ಯ ಸಮಷ್ಟಿಯ ಅವಿಭಾಜ್ಯ ಭಾಗ ನಾನು, ಮಿಕ್ಕ ಮಾನವತೆಯಿಂದ ಆಚೆ ಆತನನ್ನು ನಾನು ಕಾಣಲಾರೆ ನನ್ನ ದೇಶಬಾಂಧವರು ನನಗೆ ಅತಿ ಹತ್ತಿರದ ನೆರೆಹೊರೆ ಅವರು ತೀರ ನಿಸ್ಸಹಾಯಕರೂ ತೀರ ನಿರ್ಗತಿಕರೂ ತೀರ ಜಡರೂ ಆಗಿರುವುದರಿಂದ ಅವರ ಸೇವೆಯ ಮೇಲೆ ನನ್ನ ಚಿತ್ತವನ್ನು ನಾನು ಕೇಂದ್ರೀಕರಿಸಬೇಕು ಯಾವುದೋ ಒಂದು ಹಿಮಾಲಯದ ಗುಹೆಯಲ್ಲಿ ಆತ ಸಿಕ್ಕಬಲ್ಲನೆಂದು ನನ್ನನ್ನು ನಾನೇ ಒಪ್ಪಿಸಿಕೊಳ್ಳಬಹುದಾದರೆ ಅಲ್ಲಿಗೆ ಈ ಕೂಡಲೇ ತೆರಳುವೆ ಆದರೆ ನಾಬಲ್ಲೆ, ಮಾನವತೆಯ ಹೊರಗೆ ಆತ ನನಗೆ ಸಿಕ್ಕಲಾರ

ಭಗವಂತನ, ಎಂದರೆ ಮಾನವವರ್ಗದ, ಸೇವೆ ನನ್ನ ಮತಸೂತ್ರ ನಾನೊಬ್ಬ ಭಾರತೀಯನಾಗಿ ಭಾರತಕ್ಕೆ ಸೇವೆ ಮಾಡದಿದ್ದರೆ, ಒಬ್ಬ ಹಿಂದೂವಾಗಿ ಭಾರತದ ಮುಸಲ್ಮಾನರಿಗೆ ಸೇವೆ ಮಾಡದಿದ್ದರೆ, ದೇವರನ್ನಾಗಲೀ ಮಾನವವರ್ಗವನ್ನಾಗಲೀ ನಾನು ಸೇವಿಸಲರಿಯೆ ಸ್ವಯಂಪ್ರೇರಿತ ಸೇವೆಯ ಅರ್ಥ ಪರಿಶುದ್ಧ ಪ್ರೀತಿ

ಪರಮಾತ್ಮನ ನಿರುಪಾಧಿಕ ಏಕತ್ವದಲ್ಲಿ, ಆದ್ದರಿಂದ ಮಾನವವರ್ಗದ ಏಕತ್ವದಲ್ಲಿ, ನನಗೆ ನಂಬಿಕೆ (ಯಂಗ್ ಇಂಡಿಯಾ, ೨೯-೯-೨೪)

'ಆಹುತಿಯನ್ನು ನೀಡದೆ, ಎಂದರೆ ದಾನಗೈಯದೆ, ಉಣ್ಣುವವ ಒಬ್ಬ ಕಳ್ಳ' ಎಂದು ಉಸುರುವ ಒಂದು ಶ್ಲೋಕವಿದೆ ಪರಮಾತ್ಮ ನಮಗೆ ಸಾಮರ್ಥ್ಯವನ್ನೂ ಸಂಪತ್ತನ್ನೂ ಕೊಟ್ಟರೆ, ನಮ್ಮ ನರಬಾಂಧವರ

ಹಿತಕ್ಕಾಗಿ ಅವನ್ನು ಉಪಯೋಗಿಸುವುದಕ್ಕಾಗಿ, ನಮ್ಮ ಸ್ವಂತ ವಿಷಯೋಪಭೋಗಕ್ಕಲ್ಲ, ಅವನ್ನು ಆತ ಕೊಡುವುದು

(ಯಂಗ್ ಇಂಡಿಯಾ. ೬-೧೦-೨೭)

ಸಹಮಾನವರಿಗೆ ಸೇವೆ ಎಸಗುವವನ ಹೃದಯಕ್ಕೆ ಭಗವಂತ ತಾನೇ ತನ್ನ ಆಸನಕ್ಕಾಗಿ ಹುಡುಕಿಕೊಂಡು ಬರುವ

(ಯಂಗ್ ಇಂಡಿಯಾ ೨೪-೯-೨೫)

## (೨೩) ಚರಖಾ ಜಪಸರಕ್ಕಿಂತ ಮೇಲು

ಮುಸಲ್ಮಾನ ತನ್ನ ತಸ್ಬಿಯ ಮಣಿಗಳನ್ನೂ ಕ್ರಿಸ್ತಮತೀಯ ತನ್ನ ಜಪಮಾಲೆಯ ಮಣಿಗಳನ್ನೂ ಎಣಿಕೆಗೈಯುತ್ತಾನೆ ದಿಟ ಆದರೆ, ಆಘಾತಕ್ಕೆ ಸಿಕ್ಕಿ ಉರುಳಿಬಿದ್ದಿರುವ ಒಬ್ಬನ, ಉದಾಹರಣೆಗೆ ಹಾವು ಕಡಿದವನ ಎನ್ನೋಣ, ರಕ್ಷಣೆಗೆ ಅವರು ಧಾವಿಸುವುದನ್ನು ಅವರ ತಸ್ಬಿಯೂ ಜಪಮಾಲೆಯೂ ತಪ್ಪಿಸಿದರೆ ತಾವು ಧರ್ಮಚ್ಯುತರಾದೆವೆಂದು ಅವರಿಬ್ಬರೂ ತಿಳಿಯತಕ್ಕದ್ದು ಕೇವಲ ವೇದವಿದ್ಯೆ ನಮ್ಮ ಬ್ರಾಹ್ಮಣರನ್ನು ಆಧ್ಯಾತ್ಮಿಕ ಉಪಾಧ್ಯಾಯರನ್ನಾಗಿಸದು ಹಾಗೆ ಅದು ಮಾಡಬಹುದಾಗಿದ್ದರೆ ಮ್ಯಾಕ್ಸ್ ಮುಲ್ಲರನೂ ಒಬ್ಬನಾಗುತ್ತಿದ್ದ ಈ ಹೊತ್ತಿನ ಧರ್ಮವನ್ನರಿತ ಬ್ರಾಹ್ಮಣ ನಿಶ್ಚಿತವಾಗಿ ವೇದಪಾಂಡಿತ್ಯಕ್ಕೆ ಎರಡನೆಯ ಸ್ಥಾನವನ್ನು ಕೊಡುವ, ಮತ್ತು ಚರಖದ ಧರ್ಮವನ್ನು ಪ್ರಸಾರ ಮಾಡುವ, ಹೊಟ್ಟೆಗಿಲ್ಲದೆ ಸಾಯುತ್ತಲಿರುವ ಲಕ್ಷೋಪಲಕ್ಷ ತನ್ನ ದೇಶಬಾಂಧವರ ಹಸಿವನ್ನು ಇಂಗಿಸುವ, ಆಮೇಲೆ, ಅಲ್ಲಿಯವರೆಗೂ ಅಲ್ಲ, ವೇದಾಭ್ಯಾಸದಲ್ಲಿ ತನ್ನನ್ನೇ ಮರೆತುಕೊಳ್ಳುವ.

ಪಂಗಡಪ್ರಧಾನವಾದ ಧರ್ಮಾಚರಣೆಗಳಿಗಿಂತ ನೂಲುವುದು ಮೇಲೆಂಬುದು ನನ್ನ ಖಂಡಿತ ಭಾವನೆ ಆದರೆ ಅವನ್ನು ಬಿಟ್ಟುಬಿಡಬೇಕೆಂದು ನನ್ನ ತಾತ್ಪರ್ಯವಲ್ಲ ನನ್ನ ಅಭಿಪ್ರಾಯ ಇಷ್ಟೆ ಮತಶ್ರದ್ಧೆಯುಳ್ಳವರು ಹಿಂಬಾಲಿಸಬೇಕಾದ ಯಾವ ಧರ್ಮವಿದೆಯೋ ಅದು ಅವರನ್ನು ಮೀರಿದೆ ಆದ್ದರಿಂದಲೇ ನಾನು ಹೀಗೆನ್ನುವುದು ಬ್ರಾಹ್ಮಣ ಇನ್ನೂ ಒಳ್ಳೆಯ ಬ್ರಾಹ್ಮಣನೂ ಮುಸಲ್ಮಾನ ಇನ್ನೂ ಒಳ್ಳೆಯ ಮುಸಲ್ಮಾನನೂ

ವೈಷ್ಣವ ಇನ್ನೂ ಒಳ್ಳೆಯ ವೈಷ್ಣವನೂ ಆಗುತ್ತಾನೆ, ಸೇವಾಭಾವದಿಂದ ಅವನು ರಾಟೆಯನ್ನು ತಿರುಗಿಸಿದರೆ

ಯಾವಾಗ ರಾಮನ ತದೇಕಧ್ಯಾನಕ್ಕೆ ಅದು ನೆರವಾಗುತ್ತದೆಯೋ ಆಗ ನಾನು ಜಪಸರವನ್ನು ಎಣಿಸುತ್ತೇನೆ ದಿಟ ಆದರೆ ನನ್ನ ಏಕಾಗ್ರತೆ ಉಚ್ಚಸ್ಥಾನಕ್ಕೆ ಏರಿ ಅದಕ್ಕೆ ಜಪಸರ ಅನುವಾಗುವುದರ ಬದಲು ಅಡಚಣೆ ಯಾದಾಗ ಅದನ್ನು ನಾನು ಕೆಳಕ್ಕೆ ಹಾಕುವೆ ಹಾಸಿಗೆಯಲ್ಲಿಯೂ ರಾಟೆ ಯನ್ನು ತಿರುಗಿಸುವುದು ನನ್ನ ಕೈಯಲ್ಲಾದರೆ, ಅದರಿಂದ ದೇವರ ಮೇಲೆ ನನ್ನ ಮನಸ್ಸನ್ನು ನಿಶ್ಚಲವಾಗಿ ನೆಡುವುದಕ್ಕೆ ಸಹಾಯವುಂಟೆಂದು ನನಗೆ ಮನವರಿಕೆಯಾದರೆ, ನಾನು ಖಂಡಿತವಾಗಿಯೂ ಜಪಸರವನ್ನು ಬದಿಗೊತ್ತಿ ತಿರುಗಿಸುವೆ ರಾಟೆಯನ್ನು ರಾಟೆಯನ್ನು ತಿರುಗಿಸಲು ಸಾಕಷ್ಟು ಬಲ ನನ್ನಲ್ಲಿದ್ದು, ರುದ್ರಾಕ್ಷಿಗಳ ಎಣಿಕೆ, ರಾಟೆಯನ್ನು ಸುತ್ತುವಿಕೆ ಎರಡರಲ್ಲಿ ಒಂದನ್ನು ಮಾತ್ರ ನಾನು ಆರಿಸಿಕೊಳ್ಳಬೇಕಾದರೆ, ರಾಟೆಯ ಪರವಾಗಿ ನನ್ನ ತೀರ್ಮಾನ ಖಂಡಿತ ಎಲ್ಲಿನ ತನಕ ಬಡತನ ಹಸಿವಿನಿಂದ ಸಾವು ಗಳು ನಾಡನ್ನು ಅಟ್ಟಿ ಪೀಡಿಸುವುದು ನನ್ನ ಕಣ್ಣಿಗೆ ಬೀಳುವುದೋ ಅಲ್ಲಿನ ವರೆಗೂ ಚರಖವನ್ನೇ ನನ್ನ ರುದ್ರಾಕ್ಷಿ ಮಾಲೆಯನ್ನಾಗಿ ಮಾಡಿಕೊಳ್ಳ ಬಯಸುವೆ ರಾಮನಾಮದ ಪುನಶ್ಚರಣ ಕೂಡ ಒಂದು ಅಡ್ಡಿಯಾಗುವ ಸಮಯವನ್ನು ನಾನು ಕಾಯುತ್ತಿರುವೆ ವಚನಕ್ಕೆ ಕೂಡ ಅತೀತನಾದವ ರಾಮನೆಂಬುದನ್ನು ನಾನು ಮನಗಂಡಾಗ, ಹೆಸರಿನ ಪುನರುಚ್ಚಾರಣೆ ಅನಗತ್ಯವಾಗುತ್ತದೆ ನನಗೆ ಚರಖ, ಜಪಮಾಲೆ, ರಾಮನಾಮವೆಲ್ಲ ನನಗೆ ಒಂದೇ ಅವೆಲ್ಲ ಒಂದೇ ಉದ್ದೇಶಕ್ಕೆ ವಿಧೇಯವಾದುವು, ಸೇವಾ ಧರ್ಮವನ್ನು ಆಚರಿಸದೆ ಅಹಿಂಸೆಯನ್ನು ನಾನು ಆಚರಿಸಲಾರೆ, ಅಹಿಂಸಾ ಧರ್ಮವನ್ನು ಆಚರಿಸದೆ ಸತ್ಯವನ್ನು ನಾನು ಕಂಡುಕೊಳ್ಳಲಾರೆ

(ಯಂಗ್ ಇಂಡಿಯಾ. ೧೪-೮-೨೧)

## (೨೪) ಬಾಹ್ಯರೂಪಕ್ಕಿಂತ ಅಂತಸ್ಸತ್ತ್ವ ಮೇಲು

ನಿಸ್ಸಹಾಯಕರ ಸೇವೆಯೇ ಧರ್ಮ. ದಿಕ್ಕಿಲ್ಲದವರ ಮತ್ತು ಪೀಡೆ ಗೊಂಡವರ ಆಕೃತಿಯಲ್ಲಿ ದೇವರು ತನ್ನನ್ನು ತೋರಿಸಿಕೊಳ್ಳುತ್ತಾನೆ ನಮಗೆ

ಆದರೆ ನಾವು, ನಮ್ಮ ಹಣೆಗಳ ಮೇಲೆ ಲಾಂಛನಗಳನ್ನು ಧರಿಸಿಕೊಂಡಿದ್ದರೂ, ಒಂದಿಷ್ಟೂ ಗಮನಿಸುವುದಿಲ್ಲ ಅವರನ್ನು, ಅರ್ಥಾತ್ ಭಗವಂತನನ್ನು. ಭಗವಂತ ವೇದಗಳಲ್ಲಿ ಇರುವ, ಹಾಗೂ ಇಲ್ಲದಿರುವ ವೇದಗಳ ಭಾವಾರ್ಥವನ್ನು ಗ್ರಹಿಸುವವ ಅವುಗಳೊಳಗೆ ದೇವರನ್ನು ಈಕ್ಷಿಸುವ. ವೇದಗಳ ಅಕ್ಷರವನ್ನು ಬಿಮ್ಮಗೆ ಹಿಡಿದವ ವೈದಿಕ ಪದಗ್ರಾಹಿ ಅಷ್ಟೆ. ನರಸಿಂಹ ಮೆಹತ ರುದ್ರಾಕ್ಷಿಸರವನ್ನು ಹೊಗಳಿ ಹಾಡಿರುವುದುಂಟು, ಯಾವುದನ್ನು ಹೊಗಳಿದ್ದಾನೆಯೋ ಅದು ಹೊಗಳಿಕೆಗೆ ಚೆನ್ನಾಗಿ ಅರ್ಹ. ಆದರೆ ಅದೇ ನರಸಿಂಹ ಹೀಗೂ ಹಾಡಿದ್ದಾನೆ.

'ತಿಲಕದಿಂದ, ತುಳಸಿಯಿಂದ ಏನು ಉಪಯೋಗ? ಜಪಮಾಲೆ ನಾಮಸ್ಮರಣದಿಂದ ಏನು ಉಪಯೋಗ? ವೇದಕ್ಕೆ ವ್ಯಾಕರಣಾರ್ಥ ಎಸಗಿದರೆ ಏನು ಉಪಯೋಗ? ಅಕ್ಷರಕೌಶಲದಿಂದ ಏನು ಉಪಯೋಗ? ಇವೆಲ್ಲ ಹೊಟ್ಟೆಯನ್ನು ತುಂಬಿಕೊಳ್ಳಲು ಉಪಾಯಗಳು, ಪರಬ್ರಹ್ಮ ಸಾಧನೆಗೆ ಅನುವಾಗದಿದ್ದಲ್ಲಿ ಅವಕ್ಕಿಲ್ಲ ಬೆಲೆ.'

## (೨೫) ನಿಸ್ಸಹಾಯಕರ ನೋವನ್ನು ಕಳೆಯಿರಿ

ದಿನಚರಿ ಪ್ರಾರ್ಥನೆಯ ಪ್ರಾರಂಭದಲ್ಲಿ ನಾವು ಉಚ್ಚರಿಸುವ ಈಶೋಪನಿಷತ್ತಿನ ಪ್ರಥಮ ಶ್ಲೋಕ ವಿಧಿಸುತ್ತದೆ. ಯಾವೊಬ್ಬನಾಗಲೀ ಸಮಸ್ತವನ್ನೂ ದೇವರಿಗೆ ಮುಡುಪಾಗಿಟ್ಟು ತರುವಾಯ ಅದನ್ನು ಆವಶ್ಯಕವಾದಷ್ಟು ಮಾತ್ರ ಉಪಯೋಗಿಸತಕ್ಕದ್ದು. ಇತರರ ಸೊತ್ತಾಗಿರುವ ಯಾವುದಕ್ಕೂ ದುರಾಶೆ ಪಡಲಾಗದು ಎಂಬುದು ಇನ್ನೊಂದು ಪ್ರಧಾನ ನೇಮ. ಈ ಎರಡು ಸೂತ್ರಗಳಲ್ಲಿ ಅಡಕವಾಗಿದೆ ಹಿಂದೂಧರ್ಮದ ಭಟ್ಟಿಯಿಳಿಸಿದ ಸಾರ.

ನಮ್ಮ ಬೆಳಗಿನ ಪ್ರಾರ್ಥನೆಯಲ್ಲಿ ಪಠಿಸುವ ಇನ್ನೊಂದು ಶ್ಲೋಕದಲ್ಲಿ ಹೀಗೆ ಹೇಳಿದೆ. 'ಐಹಿಕಪ್ರತಾಪ ನನಗೆ ಬೇಡ, ಸ್ವರ್ಗಾರೋಹಣವೂ ಬೇಡ, ನಿರ್ವಾಣಪ್ರಾಪ್ತಿ ಕೂಡ ನನಗೆ ಬೇಡ. ಯಾತನೆಪಡುತ್ತಿರುವವರ ಯಾತನೆಯನ್ನು ಉಪಶಮನಗೊಳಿಸುವ ಶಕ್ತಿ ನನಗಾಗಲೆಂಬುದು ನನ್ನ ಕೋರಿಕೆ'. ನೋವು ದೈಹಿಕವೋ, ಮಾನಸಿಕವೋ, ಆಧ್ಯಾತ್ಮಿಕವೋ

ಆಗಿರಬಹುದು ರಾಗಗಳಿಗೆ ಗುಲಾಮರಾಗುವುದರಿಂದ ಜನಿಸುವ ಆಧ್ಯಾತ್ಮಿಕ ನರಳಾಟ ಕೆಲವು ಸಲ ಶಾರೀರಕ ನರಳಾಟಕ್ಕಿಂತ ಪ್ರಬಲಕರ

ಆದರೆ ವೇದನೆಯನ್ನು ತೊಡೆಯುವುದಕ್ಕೆ ಪರಮಾತ್ಮ ದೇಹ ಹೊತ್ತು ಕೆಳಗಿಳಿದು ಬರುವುದಿಲ್ಲ ಆತ ಮನುಷ್ಯ ನಿಯೋಗದ ಮುಖಾಂತರ ಕೆಲಸ ಮಾಡುತ್ತಾನೆ. ಆದ್ದರಿಂದ, ಅನ್ಯರ ವೇದನೆಯನ್ನು ತೊಡೆಯಬಲ್ಲ ಶಕ್ತಿಗಾಗಿ ದೇವರಲ್ಲಿ ಪ್ರಾರ್ಥಿಸುವುದು ಎಂದರೆ ಆ ಉದ್ಯೋಗದಲ್ಲಿ ದುಡಿಯುವ ತೀವ್ರಾಭಿಲಾಷೆಯೂ, ಸಿದ್ಧವಾಗಿರುವುದೂ ನಮ್ಮಲ್ಲಿದೆಯೆಂದು ಅರ್ಥವಾಗಬೇಕು (ಹರಿಜನ. ೨೮-೪-೪೬)

## (೨೬) ದೇಹ—ಆತನ ಸೇವೆಯ ಆಯುಧ

ನಿನ್ನ ಶರೀರವನ್ನು ನೀನು ಸರಿಯಾಗಿ ಇಟ್ಟುಕೊಳ್ಳತಕ್ಕದ್ದು, ಹೇಗೆ ಕೈಗೆಲಸಗಾರನಿಗೆ ತನ್ನ ಉಪಕರಣಗಳನ್ನು ಸರಿಯಾಗಿಟ್ಟುಕೊಳ್ಳತಕ್ಕದ್ದು ಪ್ರಥಮ ಕರ್ತವ್ಯವೋ ಹಾಗೆ ಈ ಶರೀರವನ್ನು ಭಗವಂತ ನಮಗೆ ದಯಪಾಲಿಸಿರುವುದು ಆತನ ಸೇವೆಯಲ್ಲಿ ಅದನ್ನೊಂದು ದಕ್ಷ ಉಪಕರಣವನ್ನಾಗಿ ಉಪಯೋಗಿಸುವುದಕ್ಕೆ, ಅದನ್ನು ಅತಿಲಾಲನೆಗೈಯುವುದಕ್ಕಲ್ಲ, ಮೆತ್ತನೆಯ ಹತ್ತಿಯಲ್ಲಿಟ್ಟು ಜತನಮಾಡುವುದಕ್ಕಲ್ಲ, ಹಾಗೂ ಅಲಕ್ಷ್ಯದಿಂದ ಅದನ್ನು ದುರುಪಯೋಗಪಡಿಸಿ ಕೆಡಿಸುವುದಕ್ಕೂ ಅಲ್ಲ

(ಮಹದೇವ ದೇಸಾಯಿ ದಿನಚರಿ)

ಭಾಗ ೩

# ಪಾರಮಾರ್ಥಿಕ ಸಾಧನ

## ೧. ಶ್ರದ್ಧೆ

### (೨೭) ಅಶ್ರದ್ಧೆಯು ಒಂದು ರೋಗ

ಇತ್ತೀಚೆಗೆ ಪರಮಾತ್ಮನನ್ನು ಜೀವನದಿಂದ ಪೂರ್ತಿಯಾಗಿ ತಳ್ಳಿಬಿಡುವದು ಹಾಗೂ ಸಜೀವ ಪರಮಾತ್ಮನಲ್ಲಿಯ ಸಜೀವ ಶ್ರದ್ಧೆಯ ಆವಶ್ಯಕತೆ ಇಲ್ಲದೆ, ಜೀವನದ ಉನ್ನತತಮ ಮಟ್ಟವನ್ನು ಮುಟ್ಟುವ ಶಕ್ಯತೆಯನ್ನು ಒತ್ತಿ ಹೇಳುವುದು ಒಂದು ಶಿಷ್ಟ ಸಂಪ್ರದಾಯವಾಗಿದೆ ತಮಗಿಂತ ಅನಂತಪಟ್ಟು ಶ್ರೇಷ್ಠವಾದ ಶಕ್ತಿಯ ಆವಶ್ಯಕತೆ ಇಲ್ಲದವರಿಗೆ ಹಾಗೂ ಅದರಲ್ಲಿ ಶ್ರದ್ಧೆಯಿಲ್ಲದವರಿಗೆ, ಅದರ ಶಾಸನದ ಸತ್ಯತೆಯ ಬಗೆಗೆ ಅವರ ಮನವರಿಕೆಯನ್ನು ಮಾಡಿಕೊಡಲರಿಯೆನೆಂಬುದನ್ನು ನಾನೊಪ್ಪಿಕೊಳ್ಳುವೆ ಯಾವ ಜೀವಂತ ಶಾಸನಕ್ಕೆ ವಿಧೇಯವಾಗಿ ಇಡೀ ವಿಶ್ವವು ಅಲೆಯುವದೋ ಅದರಲ್ಲಿಯ ಅಚಲ ಶ್ರದ್ಧೆಯ ಹೊರತು, ಪರಿಪೂರ್ಣ ಜೀವನವು ಸಾಧ್ಯವಿಲ್ಲ ಎಂಬ ಅರಿವು ನನ್ನ ಅನುಭವದಿಂದ ನನಗೆ ಲಭಿಸಿರುವದು. ಈ ಶ್ರದ್ಧೆಯಿಲ್ಲದ ಮಾನವನು, ಕಡಲಿನಿಂದ ಹೊರಗೆ ಎಸೆಯಲಾದ ಹನಿಯಂತೆ ನಾಶಹೊಂದುವದು ಖಂಡಿತ ಕಡಲಲ್ಲಿಯ ಪ್ರತಿಯೊಂದು ಹನಿಯೂ, ಅದರ ವೈಭವವನ್ನು ಪಡೆಯುವದು ನಮ್ಮ ಜೀವನಕ್ಕೆ ನವಚೈತನ್ಯವನ್ನು ಕೊಡುವ 'ಓಝೋನ' ಆಗಿ ಗೌರವವನ್ನು ಪಡೆಯುವದು (ಹರಿಜನ. ೨೫-೯-೩೬)

ಪರಮಾತ್ಮನು, ಶಿಕ್ಷೆಯ ಅಂಜಿಕೆಯಿಲ್ಲದೆ, ತನ್ನ ಬಗೆಗೆ ಬೇಕಾದುದನ್ನು ಅನ್ನಲು ಅಪ್ಪಣೆಯನ್ನು ಕೊಡುವ ಮೂಲಕ, 'ನಾನು ದೇವನನ್ನು ನಂಬುವದಿಲ್ಲ' ಎಂದು ಹೇಳುವದು ತೀರ ಸುಲಭವಾಗಿರುವದು. ಅವನು ನಮ್ಮ ಕೃತಿಗಳನ್ನು ನೋಡುವ ಮತ್ತು ಆತನ ಶಾಸನದ ಉಲ್ಲಂಘನವು ಒಡನೆಯೆ ಸೇಡಿನ ಶಿಕ್ಷೆಯನ್ನಲ್ಲ, ವಿಶುದ್ಧೀಕರಣದ ಶಿಕ್ಷೆಯನ್ನು ವಿಧಿಸುವದು ಪರಮಾತ್ಮನ ಅಸ್ತಿತ್ವವನ್ನು ಸಿದ್ಧ ಮಾಡಲು ಬರುವದಿಲ್ಲ, ಅದನು

ಸಿದ್ಧ ಮಾಡುವ ಆವಶ್ಯಕತೆಯೂ ಇಲ್ಲ, ಪರಮಾತ್ಮನು ಖಂಡಿತ ಇರುವ, ಆವನು ನಮ್ಮ ಭಾವನೆಗೆ ಅಗೋಚರನಾದರೆ, ಅದು ನಮ್ಮ ತಪ್ಪು ಆ ಭಾವನೆಯ ಅಭಾವವು ಒಂದು ರೋಗ ಅದನ್ನು ನಾವು ಇಂದಿಲ್ಲ ನಾಳೆ, ಮನಸ್ಸಿರಲಿ, ಇಲ್ಲದಿರಲಿ, ಎಸೆದುಬಿಡುವದರಲ್ಲಿ ಸಂದೇಹವಿಲ್ಲ

(ಹರಿಜನ ೨೨-೬-೪೭)

## (೨೮) ಶ್ರದ್ಧೆಯ ಅರ್ಥವೂ ಸಾಮರ್ಥ್ಯವೂ

ಪ್ರಪಂಚವು ಪರಮಾತ್ಮನಲ್ಲಿರಿಸಿದ ಶ್ರದ್ಧೆಯನ್ನು ನಾನು ಅಂಗೀಕರಿಸಿರುವೆನು ಮತ್ತು ನನ್ನ ಶ್ರದ್ಧೆಯು ಅಳಿಸಲು ಬಾರದಂತಹದು ಇರುವುದರಿಂದ, ನಾನು ಅನುಭವವೆಂದೆ ಬಗೆಯುವೆನು ಆದಾಗ್ಯೂ, ಶ್ರದ್ಧೆಯನ್ನು ಅನುಭವವೆಂದು ಬಣ್ಣಿಸುವದು, ಸತ್ಯದೊಡನೆ ಚೆನ್ನಾಟವಾಡಿದಂತೆ ಎಂದು ಜನರು ಅನಬಹುದಾದ್ದರಿಂದ, ಪರಮಾತ್ಮನಲ್ಲಿಯ ನನ್ನ ಶ್ರದ್ಧೆಯನ್ನು ಬಣ್ಣಿಸಲು ನನ್ನ ಹತ್ತಿರ ಶಬ್ದಗಳೇ ಇಲ್ಲ ಎಂದು ಹೇಳುವುದೆ ಒಂದುವೇಳೆ ಹೆಚ್ಚು ಸಮರ್ಪಕವಾಗಬಹುದು (ಆತ್ಮಕಥೆ)

ಅಂತರಂಗದಲ್ಲಿಯ ಪರಮಾತ್ಮನ ತುಂಬ ಜಾಗೃತವಾದ ಜೀವಂತ ಅರಿವೆ ಶ್ರದ್ಧೆಯು (ಯಂಗ್ ಇಂಡಿಯಾ. ೨೪-೯-೨೫)

ಆದರೆ ನಾನು ನಂಬಲಿರುವ ಪರಮಾತ್ಮನನ್ನೆಯೆ ನೀವು ನಂಬಬೇಕೆಂದು ಸೂಚಿಸುವದು ಸ್ವಲ್ಪವೂ ನನ್ನ ಉದ್ದೇಶವಲ್ಲ ಪರಮಾತ್ಮನ ನನ್ನ ವ್ಯಾಖ್ಯೆಯಿಂದ ನಿಮ್ಮ ವ್ಯಾಖ್ಯೆಯು ಭಿನ್ನವಿರಬಹುದು ಆದರೆ ಆ ನಿಮ್ಮ ದೇವರಲ್ಲಿಯ ಶ್ರದ್ಧೆಯೆ ನಿಮ್ಮ ಅಂತಿಮ ಆಶ್ರಯವಾಗಬೇಕು ಆವನು ಒಂದು ಪರಮಶಕ್ತಿಯಿರಬಹುದು ಇಲ್ಲವೆ ಬಣ್ಣಿಸಬಾರದ ಒಂದು ಜೀವಿಯಿರಬಹುದು ಪರಮಾತ್ಮನಿಂದ ದೊರೆತ ಬಲದ ಹೊರತು, ಎಲ್ಲ ಮಾದರಿಯ ಹಿಂಸೆಗಳನ್ನು ಗೊಣಗುಟ್ಟದೆ ಇಲ್ಲವೆ ಮುನಿಯದೆ ಸಹಿಸುವದು ಮಾನವನಿಗೆ ಅಸಾಧ್ಯವಿರುವದು. ಆತನ ಬಲದಿಂದಲೆ ನಮಗೆ ಬಲ—ನಾವು ಬಲವಂತರು, ಮತ್ತು ಆ ಅಮೋಘವಾದ ಶಕ್ತಿಗೆ ತಮ್ಮ ಚಿಂತೆ ಭೀತಿಗಳನ್ನು ಒಪ್ಪಿಸಿದವರೇ ಪರಮಾತ್ಮನಲ್ಲಿ ಶ್ರದ್ಧೆಯನ್ನು ತಳೆಯಬಲ್ಲರು

(ಹರಿಜನ. ೩-೬-೩೯)

ತನ್ನ ಸ್ವಂತ ಜೀವನದಲ್ಲಿ ಪರಮಾತ್ಮನ ಸಾನ್ನಿಧ್ಯದ ಸತ್ಯತೆಯನ್ನು ಪರೀಕ್ಷಿಸಬಯಸುವವನು, ಜೀವಂತ ಶ್ರದ್ಧೆಯಿಂದಲೇ ಅದನ್ನು ಮಾಡಬಲ್ಲ ಮತ್ತು ಬಾಹ್ಯಪ್ರಮಾಣದಿಂದ, ಶ್ರದ್ಧೆಯ ಅಸ್ತಿತ್ವವನ್ನೆಯೆ ಸಿದ್ಧಗೊಳಿಸಲು ಬಾರದ್ದರಿಂದ ಪ್ರಪಂಚದ ನೈತಿಕ ಶಾಸನದ ಪ್ರಭುತ್ವವನ್ನು ನಂಬುವದೇ ಸುರಕ್ಷಿತತಮವಾದ ಉಪಾಯ. ಸತ್ಯ ಪ್ರೇಮಗಳಿಗೆ ವಿರುದ್ಧವಾದವುಗಳನ್ನೆಲ್ಲ ನಿಷ್ಠುರವಾಗಿ ನಿರಾಕರಿಸುವ ದೃಢ ನಿಶ್ಚಯವುಳ್ಳವರಿಗೆ ಶ್ರದ್ಧೆಯ ಆಚರಣೆಯು ಸುಲಭವಾಗುವದು ಸುರಕ್ಷಿತವಾಗುವದು.

ನಾನು ಹೆಚ್ಚು ಹೆಚ್ಚು ಶುದ್ಧನಾಗಲು ಯತ್ನಿಸಿದಂತೆ, ದೇವರನ್ನು ಹೆಚ್ಚು ಹೆಚ್ಚು ಸಮೀಪಿಸುವೆನು, ಎಂದು ನನಗೆ ಅನಿಸುವದು. ಆದರೆ ಈಗಿರುವಂತೆ ನನ್ನ ಶ್ರದ್ಧೆಯು ಬರಿ ಹೆಸರಿನ ಶ್ರದ್ಧೆ ಉಳಿಯದೆ, ಹಿಮಾಲಯದ ಹಾಗೆ ಅಚಲವೂ, ಅದರ ಶಿಖರಗಳ ಮೇಲಿನ ಹಿಮದಂತೆ ಶುಭ್ರವೂ, ಉಜ್ವಲವೂ ಆದಾಗ, ನಾನು ಅದೆಷ್ಟು ಹೆಚ್ಚು ಅವನ ಸಮೀಪ ಹೋಗಬಲ್ಲೆ ! (ಯಂಗ್ ಇಂಡಿಯಾ ೧೧ ೧೦-೨೫)

## (೨೯) ಶ್ರದ್ಧೆಯ ಬೆಳವಣಿಗೆ

ಮೊದಮೊದಲು ನಾನು ಶ್ರದ್ಧಾವಿರಹಿತನಿದ್ದೆ. ಆದರೆ ನಾನದನ್ನು ಧ್ಯಾನದಿಂದಲೂ, ಧರ್ಮದ ಅಧ್ಯಯನದಿಂದಲೂ ಪಡೆದೆ. ದಿನದಿನಕ್ಕೆ ಅದು ಹೆಚ್ಚೆಚ್ಚು ಪ್ರಬಲವಾಗಲಿರುವದು. ಯಾಕೆಂದರೆ, ಪರಮಾತ್ಮನು ನನ್ನ ಅಂತರಂಗದಲ್ಲಿ ನೆಲೆಸಿರುವನೆಂಬ ಮಾತಿನ ಅರಿವು ನನ್ನಲ್ಲಿ ಬೆಳೆಯುತ್ತಲಿದೆ. ಈ ದಾರಿಯಲ್ಲಿ ಒಬ್ಬನಿಗೆ ಲಭಿಸಿದ ಅನುಭವವು ಇನ್ನೊಬ್ಬನಿಗೆ ಉಪಯುಕ್ತವಾಗುವದಿಲ್ಲ. ಶ್ರದ್ಧಾಜನಿತವಾದ ಸತತ ಪ್ರಯತ್ನದಿಂದಲೇ ಶ್ರದ್ಧೆಯು ಬಲಿಯುವದು. (ಮಹದೇವ ದೇಸಾಯಿ ದಿನಚರಿ)

ನಾನು ಶ್ರದ್ಧಾಯುತನೂ, ಪ್ರಾರ್ಥನಾಪ್ರೇಮಿಯೂ ಇರುವೆನೆಂದು ಸಾಧಿಸಬಲ್ಲೆ. ಮತ್ತು ತುಂಡರಿಸಲ್ಪಟ್ಟರೂ ಪರಮಾತ್ಮನು ನನಗೆ ಆತನನ್ನು ನಿರಾಕರಿಸದಿರಲು—ಅಷ್ಟೇ ಅಲ್ಲ—ಆತನ ಇರುವಿಕೆಯನ್ನು ಸಮರ್ಥಿಸಲು, ಸಾಮರ್ಥ್ಯವನ್ನು ಕೊಡುವನೆಂದು ನಾನು ದೃಢವಾಗಿ ನಂಬುವೆ.

(ಸಿಂಹಳದಲ್ಲಿ ಗಾಂಧೀಜೀ)

ನೀನು ಹಾಗೂ ನಾನು ಈ ಕೋಣೆಯಲ್ಲಿ ಕುಳಿತಿರುವ ಸಂಗತಿಗಿಂತಲೂ, ಪರಮಾತ್ಮನ ಅಸ್ತಿತ್ವವು ನನಗೆ ಹೆಚ್ಚು ನಿಜವಾದದ್ದು ಅನಿಸುವುದು. ತರುವಾಯ, ಗಾಳಿ-ನೀರುಗಳಿಲ್ಲದೆ ನಾನು ಬಾಳಬಲ್ಲೆ, ಆದರೆ ಪರಮಾತ್ಮನನ್ನುಳಿದು ಬಾಳಲರಿಯೆ ಎಂಬುದನ್ನು ಪ್ರಮಾಣದಿಂದ ತೋರಿಸಬಲ್ಲೆ. ನೀವು ನನ್ನ ಕಂಗಳನ್ನು ಕೀಳಬಹುದು, ಆದರೆ ಅದು ನನ್ನನ್ನು ಕೊಲ್ಲಲರಿಯದು. ನೀವು ನನ್ನ ಮೂಗನ್ನು ಕೊಯ್ಯಬಹುದು, ಆದರೆ ಅದರಿಂದಲೂ ನಾನು ಸಾಯಲಾರೆ. ಆದರೆ ಪರಮಾತ್ಮನಲ್ಲಿಯ ನನ್ನ ನಂಬಿಕೆಯನ್ನು ಅಳಿಸಿರಿ! ಅಂದರೆ ಕೂಡಲೆ ನಾನು ಮೃತನಾಗುವೆ. ನೀವಿದನ್ನು ಧರ್ಮಭ್ರಮೆಯೆಂದು ಕರೆಯಬಹುದು. ಬಾಲ್ಯದಲ್ಲಿ ಅಂಜಿಕೆ ಹಾಗೂ ಗಂಡಾಂತರದ ಸಂದರ್ಭ ಒದಗಿದಾಗ, ನಾನು ರಾಮನಾಮವನ್ನು ಆಶ್ರಯಿಸಿದಂತೆ, ನಾನು ಈ ಧರ್ಮಭ್ರಮೆಯನ್ನು ಅಪ್ಪಿಕೊಳ್ಳುವೆ ಎಂಬುದನ್ನು ಒಪ್ಪುವೆ. (ಹರಿಜನ ೧೪-೫-೩೮)

## (೩೦) ಶ್ರದ್ಧೆಯು ಕುರುಡು ಇರಕೂಡದು

ಶ್ರದ್ಧೆಯು ವಿವೇಕರಹಿತ ಇರಕೂಡದು, ಕುರುಡು ಇರಕೂಡದು. ಇದಕ್ಕೆ ನಿದರ್ಶನ: ಮಾನವನ ಬುದ್ಧಿಯಿಂದ ಬಿಡಿಸಲು ಬರುವ ಪ್ರಶ್ನೆಯನ್ನು ಕುರಿತು, ಒಬ್ಬನು ಹೀಗೆನ್ನಬಹುದು, ಈ ವಿಷಯದಲ್ಲಿ ಬುದ್ಧಿಯ ಹೇಳಿಕೆಯನ್ನು ನಾನು ಲೆಕ್ಕಿಸುವದಿಲ್ಲ, ಶ್ರದ್ಧಾಜನಿತವಾದ ಒಂದು ವಿಶೇಷ ನಂಬಿಕೆಯನ್ನೆ ನೆಮ್ಮುವೆನು. ಇಂಥ ಸಂದರ್ಭದಲ್ಲಿ ಇವನ ಶ್ರದ್ಧೆಯು ವಿನಯದಿಂದ ಕೂಡಿರುವದಿಲ್ಲ. ಪೃಥಿವಿಯು ದುಂಡವಿರುವದೊ ಇಲ್ಲವೆ ಸಮತಲವಿರುವದೊ ಎಂಬುದನ್ನು ನಿರ್ಣಯಿಸುವ ಕೆಲಸವು ಮಾನವನ ಬುದ್ಧಿಯದು. ಹೀಗಿರಲು, ಅದು ಸಮತಲವಿರುವುದೆಂಬುದನ್ನು ನಾನು ಪೂರ್ತಿಯಾಗಿ ನಂಬುವೆ ಎಂದು ಯಾರಾದರೂ ಹೇಳಿದರೆ, ಅವನ ನಂಬಿಕೆಯು ವಿನಯರಹಿತವಿರುವದು. (ಮಹದೇವ ದೇಸಾಯಿ ದಿನಚರಿ)

ಧರ್ಮಾಧ್ಯಕ್ಷನಾದ ನ್ಯೂಮನ್ನನು ತನ್ನ ಬುದ್ಧಿಯನ್ನು ಎಂದೂ ತ್ಯಜಿಸಲಿಲ್ಲ. ಆದರೆ ಅವನು 'ಸಾಕು ನನಗೊಂದು ಹೆಜ್ಜೆ!' ಎಂದು ಹಾಡಿದಾಗ, ಪ್ರಾರ್ಥನೆಗೆ ಮೇಲಿನ ಸ್ಥಾನವನ್ನು ನೀಡಿರುವನಷ್ಟೆ!

ಶಂಕರರು ತರ್ಕ ಸಮ್ರಾಟರು—ಬುದ್ಧಿವಾದಿಗಳಲ್ಲಿ ಹಿರಿಯರು ಶಂಕರರ ಬುದ್ಧಿವಾದವನ್ನು ಮೀರುವಂತಹ ಗ್ರಂಥವು ಪ್ರಪಂಚದ ಸಾಹಿತ್ಯದಲ್ಲಿ ಬೇರೊಂದಿಲ್ಲ ಆದರೆ ಅವರೂ ಕೂಡ, ಪ್ರಾರ್ಥನೆ ಶ್ರದ್ಧೆಗಳಿಗೆ ಅಗ್ರಸ್ಥಾನವನ್ನು ಕೊಟ್ಟಿರುವರು.

ಕೇವಲ ಶ್ರದ್ಧೆಯಿಂದಲೆ ಒಂದು ಕೆಲಸವನ್ನು ಮಾಡದ, ಹಾಗು ಪ್ರತಿಯೊಂದನ್ನು ಬುದ್ಧಿಯ ನೆರವಿನಿಂದಲೇ ನೆರವೇರಿಸಿದ, ಒಬ್ಬ ಬುದ್ಧಿವಾದಿಯನ್ನೂ ನಾನು ಕಂಡಿಲ್ಲ

ನಾನು ಬುದ್ಧಿಯನ್ನು ದಬ್ಬಿಬಿಡಬೇಕೆಂದು ವಾದಿಸ ವುದಿಲ್ಲ ಆದರೆ, ಬುದ್ಧಿಗೆ ಪಾವಿತ್ರ್ಯವನ್ನು ನೀಡುವ ಇನ್ನೊಂದು ಶಕ್ತಿಯನ್ನು ಸರಿಯಾಗಿ ಗೌರವಿಸಬೇಕೆಂದು ಹೇಳಲಿರುವೆ

## (೩೧) ಶ್ರದ್ಧೆಯೂ ಬುದ್ಧಿಯೂ

ಬುದ್ಧಿಗೆ ಸ್ಥಾನವಿಲ್ಲದ ಸಂದರ್ಭಗಳಲ್ಲಿ, ಅಂದರೆ ಪರಮಾತ್ಮನ ಅಸ್ತಿತ್ವದ ವಿಷಯದಲ್ಲಿ, ನಾನು ಶ್ರದ್ಧೆಯನ್ನೇ ನಂಬುವೆ ಯಾವ ಯುಕ್ತಿವಾದವೂ, ಆ ಶ್ರದ್ಧೆಯಿಂದ ನನ್ನನ್ನು ವಿಚಲಿತಗೊಳಿಸಲರಿಯದು ತುಂಬ ಮೇಲ್ತರಗತಿಯ ಬುದ್ಧಿಯು ನನ್ನನ್ನು ವಾದದಲ್ಲಿ ಸೋಲಿಸಿದರೆ 'ಆದರೂ ಇರುತಿಹವು ವಿಳುವುಂದಿ' ಎಂದು ಬುದ್ಧಿಯು ನಂಬಲರಿಯದ ನುಡಿಯನ್ನು ಆ ಚಿಕ್ಕ ಬಾಲಿಕೆಯು ಆಡಿದಂತೆ, 'ಆದರೂ ದೇವನಿರುತಿಹನು ನೋಡು' ಎಂದು ನಾನು ನುಡಿಯಬಯಸುವೆ (ಹರಿಜನ. ೫-೧೨-೩೬)

ಕೆಲವು ವಿಷಯಗಳಲ್ಲಿ ಬುದ್ಧಿ ನಮ್ಮನ್ನು ಬಲು ದೂರ ಒಯ್ಯಲರಿಯದು. ಅಂಥಲ್ಲಿ ಕೆಲವು ಮಾತುಗಳನ್ನು ನಾವು ಶ್ರದ್ಧೆಯಿಂದ ಸ್ವೀಕರಿಸಲೇ ಬೇಕಾಗುವದು. ಆದುದರಿಂದ ಶ್ರದ್ಧೆಯು ಬುದ್ಧಿಯನ್ನು ವಿರೋಧಿಸುವದಿಲ್ಲ ಆದರೆ ಮೀರುವದು ಶ್ರದ್ಧೆಯು, ಬುದ್ಧಿಯ ಅಳವಿನ ಹೊರಗಿರುವ ವಿಷಯಗಳಲ್ಲಿ ಕಾರ್ಯಕಾರಿಯಾಗುವ ಒಂದು ಬಗೆಯ ಆರನೆಯ ಇಂದ್ರಿಯವೇ ಸರಿ (ಹರಿಜನ ೬-೩-೩೭)

ಬುದ್ಧಿಯ ಕೊನೆಯು ಶ್ರದ್ಧೆಯ ಆದಿಯು. ಬುದ್ಧಿಯ ಕೆಲಸವು ನಿಂತಲ್ಲಿ ಶ್ರದ್ಧೆಯ ಕಾರ್ಯ ಪ್ರಾರಂಭವಾಗುವದು ಆದರೆ ಈ

ಜಗತ್ತಿನಲ್ಲಿ ಬುದ್ಧಿಯ ಸಮರ್ಥನವು ದೊರೆಯಲರಿಯದ ಕರ್ಮಗಳು ತೀರ ವಿರಳ. (ಯಂಗ್ ಇಂಡಿಯಾ. ೨೪-೬-೨೬)

ಅನುಭವವು ನನ್ನನ್ನು ಸಾಕಷ್ಟು ವಿನಮ್ರಮಾಡಿದೆ ಆದರ ಮೂಲಕ ಬುದ್ಧಿಯ ವಿಶೇಷ ಮರ್ಯಾದೆಗಳನ್ನು ನಾನು ಚೆನ್ನಾಗಿ ಅರಿತಿರುವೆ ಅಯೋಗ್ಯ ಸ್ಥಳದಲ್ಲಿ ಇರಿಸಲಾದ ಒಡವೆಯು ಕಸವಾಗುವಂತೆ, ತಪ್ಪಾಗಿ ಬಳಸಲಾದ ಬುದ್ಧಿಯು ಉನ್ಮಾದವಾಗುವದು ಆಯಾ ವ್ಯಕ್ತಿ ಶಕ್ತಿಗಳಿಗೆ ಸಲ್ಲಿಸಬೇಕಾದುದನ್ನು ಆವರವರಿಗೆ ಸಲ್ಲಿಸಿದರೆ, ಎಲ್ಲವೂ ಸರಿಹೋಗುವದು. (ಯಂಗ್ ಇಂಡಿಯಾ ೧೪-೧೦-೨೬)

ಬುದ್ಧಿಗೆ ಅತೀತವಾದುದು, ನಿಜವಾಗಿ ವಿವೇಕರಹಿತವಾದುದು ಇರುವದಿಲ್ಲ ವಿವೇಕವಿಹೀನವಾದ ನಂಬಿಕೆಯು ಅಂಧ ಶ್ರದ್ಧೆಯು, ಮತ್ತು ಅದು ಎಷ್ಟೋ ಸಲ ಧರ್ಮಭ್ರಮೆಯಾಗಿ ಪರಿಣಮಿಸುವದುಂಟು ಪ್ರಮಾಣಗಳಿಂದ ಸಿದ್ಧಮಾಡಲು ಬರುವಂತಹದನ್ನು ಪ್ರಮಾಣಗಳ ಹೊರತು ನಂಬಲು ಹೇಳುವದು ಅವಿವೇಕ ಒಂದು ತ್ರಿಕೋನದ ಕೋನಗಳ ಮೊತ್ತ ಎರಡು ಕಾಟಕೋನಗಳಿಗೆ ಸರಿಯಾಗುವದು ಎಂಬ ಸಿದ್ಧಾಂತವನ್ನು ಬುದ್ಧಿಶಾಲಿಗೆ ಪ್ರಮಾಣಗಳಿಲ್ಲದೆ ನಂಬಲು ಹೇಳುವದು ಇದಕ್ಕೆ ನಿದರ್ಶನ ಒಬ್ಬ ಅನುಭವ ಪಡೆದ ಮನುಜನು ಪರಮಾತ್ಮನ ಅಸ್ತಿತ್ವವನ್ನು ಸಿದ್ಧಮಾಡಲರಿಯದವನಾದರೂ, ಆದನ್ನು ನಂಬಲು ಎರಡನೆಯವನಿಗೆ ಹೇಳಿದರೆ, ಅದು ತನ್ನ ಅಸಾಮರ್ಥ್ಯವನ್ನು ವಿನಯದಿಂದ ಒಪ್ಪಿಕೊಂಡಂತೆ, ಹಾಗು ತನ್ನ ಅನುಭವದ ನುಡಿಯನ್ನು ಶ್ರದ್ಧೆಯಿಂದ ಸ್ವೀಕರಿಸಲೂ ಕೇಳಿಕೊಂಡಂತೆಯೆ ಸರಿ ಇಲ್ಲಿ ಆ ಎರಡನೆಯವನ ನಂಬಿಕೆಯ ಪ್ರಶ್ನೆಯು ಉದ್ಭವಿಸುವದು ಎಷ್ಟೋ ಸಲ, ನಾವು ವಂಚಿಸಲ್ಪಟ್ಟರೂ, ಜೀವನದ ಸಾಮಾನ್ಯ ವಿಷಯಗಳಲ್ಲಿ, ನಂಬಲು ಅರ್ಹರೆಂದು ಬಗೆದ ಜನರ ಮಾತುಗಳನ್ನು ನಾವು ಶ್ರದ್ಧೆಯಿಂದ ಸ್ವೀಕರಿಸುತ್ತೇವೆ ಹೀಗಿರಲು, ಜೀವನ ಮರಣದಂತಹ ಮಹತ್ವದ ವಿಷಯದಲ್ಲಿ, ಇಡೀ ಪ್ರಪಂಚದಲ್ಲಿಯ ಸಾಧುಸಂತರ ವಚನಗಳನ್ನು ಪ್ರಮಾಣವೆಂದು ಯಾಕೆ ಸ್ವೀಕರಿಸಬಾರದು? ಅವೆಲ್ಲ ಸಾರಿ ಹೇಳುವದೆಂದರೆ 'ಅಯ್ಯಾ! ಪರಮಾತ್ಮನು ಇರುವನಯ್ಯ!'

ಸತ್ಯವನ್ನೂ, ನಿಷ್ಕಪಟಭಾವವನ್ನೂ ಅನುಸರಿಸಿ ಆತನನ್ನು ಪಡೆಯಬಹುದಯ್ಯ!'

ಶ್ರದ್ಧೆಯಿಲ್ಲದಿದ್ದರೆ, ಈ ಪ್ರಪಂಚವು ಒಂದು ಅರಗಳಿಗೆಯಲ್ಲಿ ಮಣ್ಣುಪಾಲಾಗುವದು ಎಂದು ನಾನು ಧೈರ್ಯವಾಗಿ ಹೇಳಬಲ್ಲೆ ಪ್ರಾರ್ಥನೆ ತಪಸ್ಸುಗಳಿಂದ ಯಾರ ಜೀವನವು ಪಾವನವಾಗಿರುವದು ಎಂದು ನಾವು ನಂಬಿರುವೆವೊ, ಅಂಥ ಮಹನೀಯರ ಯುಕ್ತಾಯುಕ್ತವಾದ ಅನುಭವದ ಬೆಲೆಯನ್ನು ಗ್ರಹಿಸುವದೇ ನಿಜವಾದ ಶ್ರದ್ಧೆಯು ಆದುದರಿಂದ, ಪ್ರಾಚೀನ ಕಾಲದಲ್ಲಿ ಬಾಳಿದ, ಪ್ರವಾದಿಗಳಲ್ಲಿಯ ನಂಬಿಕೆಯು ಹಾಳು ಧರ್ಮಭ್ರಮೆಯಲ್ಲ, ಅದೊಂದು ಆಂತರಿಕ ಆಧ್ಯಾತ್ಮಿಕ ಕೊರತೆಯ ಪೂರೈಕೆ. ಅದಕ್ಕಾಗಿ, ಎಲ್ಲರ ಮಾರ್ಗ ದರ್ಶನಕ್ಕಾಗಿ ನಾನು ಈ ಕೆಳಗಿನ ಸೂತ್ರವನ್ನು ವಿನಯದಿಂದ ಸೂಚಿಸಬಲ್ಲೆ 'ಪ್ರತ್ಯಕ್ಷ ಪ್ರಮಾಣವನ್ನು ಕೊಡುವದು ಸಾಧ್ಯವಿರುವ ವಿಷಯದಲ್ಲಿ, ಶ್ರದ್ಧೆಯು ಪ್ರತಿಯೊಂದು ಬೇಡಿಕೆಯನ್ನೂ ನಾವು ನಿರಾಕರಿಸತಕ್ಕದ್ದು, ಮತ್ತು ಸ್ವಂತ ಅನುಭವವನ್ನುಳಿದು ಅನ್ಯ ಪ್ರಮಾಣಗಳನ್ನು ಕೊಡುವದು ಸಾಧ್ಯವಿಲ್ಲದಲ್ಲಿ, ಅವನ್ನು ಶ್ರದ್ಧೆಯಿಂದ ನಿಸ್ಸಂಕೋಚತನದಿಂದ ಸ್ವೀಕರಿಸತಕ್ಕದ್ದು

(ಯಂಗ್ ಇಂಡಿಯಾ. ೧೪-೭-೨೭)

ಜೀವನ ಸಂಗ್ರಾಮದಲ್ಲಿ ಬುದ್ಧಿಯು ನಮ್ಮನ್ನು ಕೆಲವೊಂದು ಮರ್ಯಾದೆಯವರೆಗೆ ಒಯ್ಯುವದು ಆದರೆ ನಿರ್ಣಾಯಕ ಸಂಕಟಕಾಲದಲ್ಲಿ ಅದು ನಮ್ಮ ಕೈಬಿಡುವದು ಶ್ರದ್ಧೆಯು ಬುದ್ಧಿಯನ್ನು ಮೀರುವದು ಕ್ಷಿತಿಜವು ಕತ್ತಲೆಯಿಂದ ಮುಸುಕಲಾದಾಗ, ಹಾಗು ಮಾನವನ ಬುದ್ಧಿಯು ಪ್ರತಿಕೂಲ ಪರಿಸ್ಥಿತಿಯ ಹೊಡೆತದಿಂದ ನೆಲಕ್ಕೆ ಉರುಳಿಸಲಾದಾಗ, ಶ್ರದ್ಧೆಯು ಉಜ್ವಲತಮವಾಗಿ ಹೊಳೆಯುವದು ಮತ್ತು ನಮ್ಮ ನೆರವಿಗೆ ಧಾವಿಸುವದು ನಮ್ಮ ಯುವಕರಿಗೆ ಇಂಥ ಶ್ರದ್ಧೆಯು ಬೇಕು ಮನುಜನು ಬುದ್ಧಿಯ ಹಮ್ಮನ್ನು ತೊರೆದು, ತನ್ನನ್ನು ಪೂರ್ತಿಯಾಗಿ ಪರಮಾತ್ಮನಿಗೆ ಅರ್ಪಿಸಿದಾಗ, ಇಂಥ ಶ್ರದ್ಧೆಯು ಆತನಿಗೆ ಲಭಿಸುವದು

(ಯಂಗ್ ಇಂಡಿಯಾ. ೨೧-೩-೨೮)

ಎಲ್ಲ ಬೌದ್ಧಿಕ ವಿವರಣೆಗಳನ್ನು ಬದಿಗಿರಿಸಿ, ಪರಮಾತ್ಮನಲ್ಲಿ ಮುಗ್ಧ

ಮಗುವಿನ ಶ್ರದ್ಧೆಯನ್ನಿರಿಸಿ, ನೀವು ಮುಂದುವರಿಯಬೇಕು, ಎಂಬುದು ನನ್ನ ಬಯಕೆ ನಾನು ಇರುವೆನಾದರೆ ಪರಮಾತ್ಮನು ಇರುವ. ಸಾವಿರಾರು ಜನರಂತೆ ಈ ಶ್ರದ್ಧೆಯು ನನ್ನ ಜೀವನದ ಆವಶ್ಯಕತೆಯಾಗಿರುವದು ಅವರೆಲ್ಲ ಅದನ್ನು ಕುರಿತು ಮಾತಾಡಲರಿಯರು, ಆದರೆ ಅದು ಅವರ ಜೀವನದ ಒಂದಂಗವೆಂಬುದನ್ನವರ ಜೀವನದಿಂದಲೇ ನೀವು ಕಂಡುಕೊಳ್ಳಬಹುದು ತಳವಾಯವು ಸಡಿಲಿಸಲಾದ ಶ್ರದ್ಧೆಯನ್ನು ಮರಳಿ ಸ್ಥಿರಗೊಳಿಸಲು, ನಾನು ನಿಮಗೆ ಕೇಳಿಕೊಳ್ಳುತ್ತಿರುವೆ ಅದನ್ನು ಮಾಡಬೇಕಾದರೆ, ಬುದ್ಧಿಯನ್ನು ಬೆರಗುಗೊಳಿಸಿ ನಿಮ್ಮ ಮಾತನ್ನು ತಪ್ಪಿಸುವ ಸಾಹಿತ್ಯದ ರಾಶಿಯನ್ನು ನೀವು ಮರೆಯಬೇಕಾಗುವದು 'ಈ ವಿಶ್ವದಲ್ಲಿ ನಾವು ಅಣುವಿಗಿಂತಲು ಅಲ್ಪರು' ಎಂಬ ಶ್ರದ್ಧೆಯಿಂದ ಮುಂದುವರಿಯಿರಿ ಅದೇ ನಿಮ್ಮ ಅಜ್ಞಾನದ ಹಾಗು ವಿನಯದ ಕುರುಹು, ಆಗಿರುವದು 'ನಾವು ಅಣುವಿಗಿಂತಲೂ ಅಲ್ಪರು' ಎಂದು ನಾನು ಉದ್ದೇಶಪೂರ್ವಕವಾಗಿ ಅಂದಿರುವೆ ಯಾಕಂದರೆ ಅಣುವು ತನ್ನ ಬಾಳಿನ ಕಟ್ಟಳೆಯನ್ನು ಮನ್ನಿಸುತ್ತದೆ ಆದರೆ ನಾವು ನಮ್ಮ ಅಜ್ಞಾನಜನಿತ ಸೊಕ್ಕಿನಿಂದ, ನಮ್ಮ ಪ್ರಕೃತಿಯ ಶಾಸನವನ್ನು ನಿರಾಕರಿಸುವೆವು ಆದರ ಶ್ರದ್ಧಾವಿಹೀನರ ಮನವರಿಕೆಯಾಗುವಂತೆ ಹೇಳಲು ನನ್ನ ಹತ್ತಿರ ಯುಕ್ತಿವಾದವಿಲ್ಲ

(ಯಂಗ್ ಇಂಡಿಯಾ. (೨೪-೯-೩೧)

ಬುದ್ಧಿವಾದಗಳು ಮೆಚ್ಚುವಂಥ ಜನ, ಆದರೆ ಸರ್ವಸಾಮರ್ಥ್ಯ ಆರೋಪಿಸಿಕೊಳ್ಳುವ ಬುದ್ಧಿವಾದ ಒಂದು ಭಯಂಕರ ಪಿಶಾಚಿ ಬುದ್ಧಿಗೆ ಸರ್ವಸಾಮರ್ಥ್ಯದ ಆರೋಪಣೆ ದೇವರೆಂದು ನಂಬಿ ಕಲ್ಲುಮರಗಳನ್ನು ಪೂಜಿಸುವಷ್ಟೇ ಕೆಟ್ಟ ಸಂಗತಿ (ಯಂಗ್ ಇಂಡಿಯಾ. ೧೪-೧೦-೨೬)

ನಿಮ್ಮ ವಿಶ್ವಾಸವು ಇನ್ನೂ ಹೆಚ್ಚು ಹೆಚ್ಚು ಆಳವಾಗಿ ಇಳಿಯಲಿ! ಅಂದರೆ ಕೊನೆಗೆ ನಿಮ್ಮ ಸಂದೇಹಗಳೆಲ್ಲ ಅಳಿದು, ಎಂಥ ಪ್ರಸಂಗ ಒದಗಿದರೂ ಕೂಡ ನೀವು ತುಂಬ ಆನಂದದಲ್ಲಿಯೆ ಇರತೊಡಗುವಿರಿ ಯಾಕಂದರೆ ಜೀವನ ಯಾತ್ರೆಯಲ್ಲಿ ನಾವು ಮುಂದುವರಿದಂತೆ, ಹೊಸ ಹೊಸ ಸಮಸ್ಯೆಗಳು ನಿರ್ಣಯವನ್ನಪೇಕ್ಷಿಸಿ, ನಮ್ಮೆದುರು ಬಂದು ನಿಲ್ಲುವವು ಮತ್ತು ಸೈತಾನನ ಧ್ವನಿಯು ದೇವರ ಒಳದನಿಯನ್ನು ಹೋಲುತ್ತಿರವಾಗ

ಅಂಥ ಸಮಸ್ಯೆಗಳನ್ನು ಬಿಡಿಸುವದು ಕಠಿಣತಮವಾಗುವದು ಕೇವಲ ದೃಢತಮ ವಿಶ್ವಾಸವು ಪೂರ್ಣ ಪಾವಿತ್ರ್ಯವು ಹಾಗು ಆತ್ಯಂತಿಕ ವಿನಯವು ಇವೇ ನಮ್ಮನ್ನು ಸರಿಯಾದ ಆಯ್ಕೆಯೆಡೆಗೆ ಒಯ್ಯುವವು

(ಮಹದೇವ ದೇಸಾಯಿ ದಿನಚರಿ)

## (೩೨) ಸಜೀವ ಪರಮಾತ್ಮನಲ್ಲಿಯ ಸಜೀವ ಶ್ರದ್ಧೆ*

ಶಾಸ್ತ್ರಜ್ಞರು ಉಸುರುವ ಅನೇಕ ಸಂಗತಿಗಳಲ್ಲಿ ನನ್ನ ಜೀವಂತ ಶ್ರದ್ಧೆಯಿರುವಂತೆ, ಜೀವಂತ ದೇವರಲ್ಲಿಯೂ ನನ್ನ ಶ್ರದ್ಧೆಯು ಜೀವಂತ ವಾದುದೇ ವಾಸ್ತವವೆಂದು ಬಗೆಯಲಾದ ಸಂಗತಿಗಳ ನಿಜರೂಪವನ್ನು ಅರಿಯಲು ಶಾಸ್ತ್ರಜ್ಞರು ಅರುಹಿದ ಪದ್ಧತಿಯನ್ನು ಅನುಸರಿಸಿದರೆ, ಅವರ ಹೇಳಿಕೆಯ ಸತ್ಯಾಸತ್ಯತೆಯ ಪರೀಕ್ಷಣವು ತಾನಾಗಿಯೆ ನೆರವೇರಬಲ್ಲುದು, ಎಂದು ನೀವು ಪ್ರತಿವಾದವನ್ನು ಮಾಡಬಹುದು ಹಿಂದಿನ ಋಷಿಗಳೂ, ಪ್ರವಾದಿಗಳೂ ಖಂಡಿತವಾಗಿ ಇವೇ ರೀತಿ ಹೇಳುತ್ತಿರುವರು ಅವರು ತುಳಿದ ದಾರಿಯನ್ನು ಅನುಸರಿಸುವ ಯಾವ ಮನುಜನೂ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲನು ಎಂಬುದೇ ಅವರ ಹೇಳಿಕೆ ನಿಜವಾಗಿ ನೋಡಿದರೆ, ಸಾಕ್ಷಾತ್ಕಾರದೆಡೆ ನಮ್ಮನ್ನು ಒಯ್ಯುವ ದಾರಿಯನ್ನು ತುಳಿಯಲು ನಾವು ಬಯಸುವದೇ ಇಲ್ಲ ಮತ್ತು ನಿಜವಾದ ಮಹತ್ವವುಳ್ಳ ಒಂದೇ ಒಂದಾದ ವಿಷಯವನ್ನು ಕುರಿತು, ಪ್ರತ್ಯಕ್ಷದರ್ಶಿಗಳ ಪ್ರಮಾಣವನ್ನು ಸ್ವೀಕರಿಸಲು ನಾವು ಸಿದ್ಧರಿಲ್ಲ ಭೌತಿಕ ಶಾಸ್ತ್ರಗಳ ಎಲ್ಲ ಸಿದ್ಧಿಗಳನ್ನು ಒಟ್ಟುಗೂಡಿಸಿದರೂ ಕೂಡ, ಅವು ಪರಮಾತ್ಮನ ವಿಷಯವಾಗಿ ಜನಿಸಿದ ಜೀವಂತ ಶ್ರದ್ಧೆಯನ್ನು ನೀಡುವ ಸಾಧನವನ್ನು ಸರಿಗಟ್ಟಲಾರವು ಪರಮಾತ್ಮನ ಅಸ್ತಿತ್ವವನ್ನು ನಂಬದವರು, ಶರೀರವನ್ನುಳಿದು ಬೇರಾವ

*ಇದು ಗಾಂಧೀಜಿಯವರಿಗೆ ಕೇಳಲಾದ ಮುಂದ ಕಂಡ ಪ್ರಶ್ನೆಗ ಉತ್ತರ. "ನಿಮ್ಮ ಬರಹದಲ್ಲಿ, ಸಜೀವ ದೇವರಲ್ಲಿಯ ಸಜೀವ ಶ್ರದ್ಧೆಯನ್ನು ಕುರಿತು ಬರೆದಿರುವಿರಿ. ಪರಮಾತ್ಮನ ಅಸ್ತಿತ್ವವನ್ನು ಕುರಿತು ನೀವು ಸ್ಪಷ್ಟವಾದ, ನಿರಾಕರಿಸಲು ಬಾರದ, ಪ್ರಮಾಣಗಳನ್ನು ಅರುಹಿದರೆ, ತರುಣವೃಂದಕ್ಕೆ ನೀವು ಹಿರಿಯ ಹಿತವನ್ನು ಸಲ್ಲಿಸಿದಂತಾಗುವದು. ಮತ್ತು ನಾನು ತಮಗೆ ತುಂಬ ಉಪಕೃತನಾಗುವೆ''

ವಸ್ತುವಿನ ಅಸ್ತಿತ್ವವನ್ನೂ ನಂಬುವುದಿಲ್ಲ ಮಾನವತೆಯ ಪ್ರಗತಿಗೆ ಈ ನಂಬಿಕೆಯೂ ಅನಾವಶ್ಯಕವೆಂದು ಅವರು ಬಗೆಯುವರು ಇಂಥ ಮನುಜರಿಗೆ, ಆತ್ಮನ ಅಥವಾ ಪರಮಾತ್ಮನ ಅಸ್ತಿತ್ವವನ್ನು ಸಿದ್ಧಗೊಳಿಸುವ, ಮಹತ್ತಮವಾದ ಯುಕ್ತಿವಾದವೂ ಕೂಡ ಅಪ್ರಯೋಜಕವಾದುದು ಕಿವಿಗಳನ್ನು ಒಟ್ಟಾಗಿ ತುಂಬಿಕೊಂಡವನಿಗೆ, ಮಧುರತಮವಾದ ಸಂಗೀತವನ್ನು ಕೇಳಹಚ್ಚುವದು ಸಾಧ್ಯವಿಲ್ಲ ಅದರ ಮಾಧುರ್ಯವನ್ನು ಸವಿಯಹಚ್ಚುವ ಮಾತಂತೂ ಹಾಗಿರಲಿ! ಅದೇ ಮೇರೆಗೆ ಜೀವಂತ ಪರಮಾತ್ಮನ ಅಸ್ತಿತ್ವದ ಮನವರಿಕೆಯೂ ಬೇಡಾದವರಿಗೆ, ನೀವದನ್ನು ಮಾಡಿಕೊಡಲರಿಯಿರಿ

ಪರಮಾತ್ಮನಲ್ಲಿಯ ಈ ನಂಬಿಕೆಯು, ಬುದ್ಧಿಯ ಆಚೆಗಿರುವ ಶ್ರದ್ಧೆಯನ್ನು ಆಧರಿಸಬೇಕಾಗುತ್ತದೆ ನಿಜವಾಗಿ, ಸಾಕ್ಷಾತ್ಕಾರವೆಂದು ಕರೆಯಲಾದ ಅನುಭವಕ್ಕೂ ಶ್ರದ್ಧೆಯ ಒಂದಂಶದ ನೆಲೆಯು ಇದ್ದೇ ಇರುವದು ಅದರ ಹೊರತು, ಆ ಅನುಭವವು ಇಲ್ಲಲರಿಯದು ಹಾಗಿರುವದೇ ಅದರ ಸ್ವಭಾವವು ತಮ್ಮ ಜೀವನದ ಮರ್ಯಾದೆಗಳನ್ನು ಉಲ್ಲಂಘಿಸಬಲ್ಲವರು ಯಾರು? ಈ ದೇಹಧಾರಿಯಾದ ಜೀವನದಲ್ಲಿ ಪೂರ್ಣ ಸಾಕ್ಷಾತ್ಕಾರವು ಅಸಾಧ್ಯ ಮತ್ತು ಅನಾವಶ್ಯಕ ಎಂಬುದು ನನ್ನ ಅಭಿಮತ

ಮಾನವನು ಪಡೆಯಬಹುದಾದ ಪೂರ್ಣ ಆಧ್ಯಾತ್ಮಿಕ ಉನ್ನತಿಯನ್ನು ಮುಟ್ಟಲು, ಜೀವಂತವಾದ, ಅಚಲವಾದ, ಶ್ರದ್ಧೆಯೊಂದೆ ಸಾಕು ಪರಮಾತ್ಮನು ನಮ್ಮೀ ಪಾರ್ಥಿವ ದೇಹದ ಹೊರಗಡೆ ಇರುವದಿಲ್ಲ. ಆದ್ದರಿಂದ, ಬಾಹ್ಯ ಪ್ರಮಾಣಗಳು ಎಷ್ಟೇ ಉಪಯುಕ್ತವಿದ್ದರೂ, ಇಲ್ಲಿ ಅವುಗಳ ಪ್ರಯೋಜನವು ಅಷ್ಟೊಂದು ಇರುವದಿಲ್ಲ ಪರಮಾತ್ಮನು ಇಂದ್ರಿಯಾತೀತನಿರುವ ಮೂಲಕ, ಆತನನ್ನು ಅವುಗಳಿಂದ ನಾವು ಎಂದಿಗೂ ಕಾಣಲರಿಯೆವು ನಾವು ಇಂದ್ರಿಯಗಳನ್ನು ತೊರೆದು, ಅಂತರ್ಮುಖ ಆದೆವೆಂದರೆ, ಆತನನ್ನು ನಾವು ಭಾವಿಸಬಹುದು ನಮ್ಮ ಅಂತರಂಗದಲ್ಲಿ ದೈವೀ ಸಂಗೀತವು ಸದೈವ ನಿನದಿಸುತ್ತಿರುವದು ಆದರೆ ನಮ್ಮ ಇಂದ್ರಿಯಗಳ ಕೂಗು ಆ ಕೋಮಲ ಸಂಗೀತವನ್ನು ಮುಳುಗಿಸಿಬಿಡುತ್ತದೆ. ಈ ದೈವೀ ಸಂಗೀತವೂ, ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ಕೇಳ

ಬರುವ ಯಾವುದನ್ನೂ ಹೋಲುವದಿಲ್ಲ ಎಲ್ಲವನ್ನೂ ಮೀರಿಯಲ್ಲಿ ಅದು ತುಂಬಾ ಮೀರಿರುವದು (ಹರಿಜನ. ೧೩-೬-೩೬)

ಸ-ದ್ವೈವದಿಂದ ಮಾನವರಲ್ಲಿ ಒಹುಮಂದಿ ಜೀವಂತ ದೇವರಲ್ಲಿ ಜೀವಂತ ಶ್ರದ್ಧ ಯನ್ನು ತಳೆದವರೇ ಇರುವರು ಅವರು ಅದನ್ನು ಕುರಿತು ಯುಕ್ತಿವಾದವನ್ನು ಮಾಡಲರಿಯರು, ಮಾಡಲೊಲ್ಲರು ಅವರ ಪಟ್ಟಿಗೆ 'ಅದು ಉಂಟು' ಪ್ರಪಂಚದ ಎಲ್ಲ ಧರ್ಮಗ್ರಂಥಗಳೂ ಧರ್ಮಭ್ರಮೆ ಯಿಂದ ಕೂಡಿದ ಅಜ್ಜಿಯ ಕಥೆಗಳೇ? ಋಷಿಗಳ ಹಾಗು ಸ್ರವಾದಿಗಳ ಪ್ರಮಾಣಗಳನ್ನು ನಾವು ನಿರಾಕರಿಸಬೇಕೇ? ಚೈತನ್ಯ, ರಾಮಕೃಷ್ಣ ಪರಮಹಂಸ, ತುಕಾರಾಮ. ಜ್ಞಾನದೇವ, ರಾಮದಾಸ, ನಾನಕ, ಕಬೀರ, ತುಳಸೀದಾಸ, ಇವರ ಪ್ರಮಾಣಗಳಿಗೆ ಬೆಲೆಯೆ ಇಲ್ಲವೆ? ರಾಮಮೋಹನ ರಾಯ, ದೇವೇಂದ್ರನಾಥ ಟಾಗೋರ, ವಿವೇಕಾನಂದ, ಇವರೆಲ್ಲರೂ ಆಧುನಿಕರು ಇಂದು ಜೀವಿಸುವ ಶ್ರೇಷ್ಠತಮ ಮಹನೀಯರಷ್ಟೇ ಕಲಿತ ವರು, ವಿದ್ವಾಂಸರು ಇವರ ಪ್ರಮಾಣಗಳ ವಿಷಯ ಎಂತು? ಯಾರ ಪ್ರಮಾಣಗಳು ನಿಸ್ಸಂಶಯವೆಂದು ಎಣಿಸಲಾಗಬಹುದೊ ಅಂಥ ಇಂದು ಜೀವಿಸುವ, ಮಹನೀಯರ ಸಾಕ್ಷಿಗಳನ್ನು ನಾನು ಬಿಟ್ಟಿರುವೆ ಪರಮಾತ್ಮ ನಲ್ಲಿಯ ನಂಬಿಕೆಯು ಶ್ರದ್ಧೆಯನ್ನೆ ಆಶ್ರಯಿಸಬೇಕು ಅದರ ಹೊರತು ಅದು ಬಾಳಲರಿಯದು ಪ್ರಕೃತಿಸ್ವಭಾವ ಹೀಗಿರುವಾಗ ಅದು ಹಾಗೆಯೇ ಸರಿ ತನ್ನ ಇರವಿನ ಮಿತಿಗಳನ್ನು ಉಲ್ಲಂಘಿಸುವವರಾರು?

(ಹರಿಜನ. ೧೩-೬-೩೬)

ಪ್ರಪಂಚವು ಹುಟ್ಟಿದಂದಿನಿಂದ ಜಾಣರು ಕೋಣರು ಎಲ್ಲರೂ ಈ ಭಾವನೆಯನ್ನು ಸ್ವೀಕರಿಸಿಯೆ ಮುಂದುವರಿದಿರುವರು 'ನಾವು ಇರುವೆವಾ ದರೆ, ದೇವನಿರುವ, ದೇವರಿಲ್ಲವಾದರೆ, ನಾವಿರುವದಿಲ್ಲ' ಈ ಜೀವಂತ ಶ್ರದ್ಧೆಯು ಜೀವನದಲ್ಲಿಯ ಬಹುಸಂಖ್ಯ ತೊಡಕುಗಳನ್ನು ಬಿಡಿಸಿರುವದು ಅದು ನಮ್ಮ ದುಃಖವನ್ನು ನಿವಾರಿಸಿರುವದು ಅದು ಜೀವನದಲ್ಲಿ ನಮಗೆ ಆಧಾರ ನೀಡುವದು, ಮರಣ ಸಮಯದಲ್ಲಿ ಸಮಾಧಾನ ಸಲ್ಲಿಸುವದು

(ಹರಿಜನ. ೨೪-೯-೩೯)

ಈ ನಂಬಿಕೆಯ ಮೂಲಕವೆ, ಸತ್ಯಸಂಶೋಧನವು ಕೂಡ ಮನೋರಂಜಕವೂ, ಬೆಲೆಯುಳ್ಳದ್ದೂ ಆಗುವದು (ಹರಿಜನ. ೧೨-೯-೩೬)

## ೨ ಆರಾಧನೆ

### (೩೩) ಗುಡಿಗಳ ಆವಶ್ಯಕತೆ

ಆರಾಧನೆಯ ಒಂದು ಸಾಮಾನ್ಯ ವಿಧಾನ, ಅದಕ್ಕಾಗಿ ಒಂದು ಸಾಮಾನ್ಯ ಸ್ಥಲವೂ ಮಾನವನಿಗೆ ಅವಶ್ಯವಿರುವಂತೆ ಕಾಣುವದು ದೇವಾಲಯಗಳಲ್ಲಿ ವಿಗ್ರಹಗಳು ಇರಬೇಕೋ ಬೇಡವೋ ಎಂಬುದು, ಪ್ರಕೃತಿಭಿನ್ನತೆಯ ಹಾಗು ರುಚಿಭಿನ್ನತೆಯ ಪ್ರಶ್ನೆ ಹಿಂದೂ ಹಾಗು ರೋಮನ್ ಕೆಥೊಲಿಕ್ ಮತದವರ ವಿಗ್ರಹಗಳುಳ್ಳ ಪೂಜಾಸ್ಥಾನಗಳು, ಅವಶ್ಯವಾಗಿ ಅಸಾಧು ಮತ್ತು ಧರ್ಮಭ್ರಮೆಗಳಿಂದ ಕೂಡಿದವಗಳು ಇರಲೇಬೇಕು, ಎಂದು ನಾನು ಭಾವಿಸುವದಿಲ್ಲ ಅದೇ ಮೇರೆಗೆ, ವಿಗ್ರಹಗಳಿಲ್ಲದ ಮಾತ್ರಕ್ಕೆ, ಮುಹಮ್ಮದೀಯರ ಹಾಗು ಪ್ರಾಟೆಸ್ಟಂಟ ಮತದವರ ಪೂಜಾಸ್ಥಾನಗಳು ಸಾಧು ಮತ್ತು ಧರ್ಮಭ್ರಮೆಯಿಂದ ಮುಕ್ತವಾದವುಗಳು ಎಂದೂ ನಾನು ಬಗೆಯುವದಿಲ್ಲ ಶಿಲುಬೆ ಪುಸ್ತಕದಂಥ ಸಂಕೇತಗಳೂ ಕೂಡ ಸಹಜವಾಗಿ ವಿಚಾರವಿಹೀನವಾದ ಮೂರ್ತಿಪೂಜಾನಿಷ್ಠೆಯನ್ನು ಹಾಗೂ ಧರ್ಮಭ್ರಮೆಯನ್ನು ಹುಟ್ಟಿಸಬಹುದು ಅದೇ ಮೇರೆಗೆ, ಬಾಲಕೃಷ್ಣನ ಹಾಗೂ ಮೇರಿಕನ್ನಿಕೆಯ ಮೂರ್ತಿಗಳ ಆರಾಧನೆಯೂ, ಅಂತಃಕರಣವನ್ನು ಉದಾತ್ತಗೊಳಿಸುವಂತಹುದೂ ಧರ್ಮಭ್ರಮೆಯಿಂದ ಮುಕ್ತವಾದುದೂ ಆಗಿರಬಲ್ಲುದು ಅದೆಲ್ಲ ಪೂಜಕನ ಹೃದಯದ ಒಲವನ್ನು ಅವಲಂಬಿಸಿರುವದು (ಯಂಗ್ ಇಂಡಿಯಾ. ೫-೧೧-೨೫)

ಮಾನವಕುಲಕ್ಕೆ ಸೇರಿದ ನಾವೆಲ್ಲರೂ ತತ್ವಜ್ಞಾನಿಗಳಲ್ಲ ನಾವೆಲ್ಲ ಈ ಪೃಥಿವಿಯ ಮೇಲೆ ನೆಲೆಸಿದವರು, ಪಾರ್ಥಿವರು ಆದುದರಿಂದ ಕಾಣದ

ಪರಮಾತ್ಮನ ಚಿಂತನದಿಂದಲೆ ನಮಗೆ ಸಮಾಧಾನವಾಗುವದಿಲ್ಲ. ಏಕೋ ಏನೋ, ನಾವು, ನಮಗೆ ಮುಟ್ಟಲು ಬರುವಂಥ ಒಡವೆಯನ್ನು, ಕಾಣಲು ಬರುವಂಥ ಒಡವೆಯನ್ನು, ವಂದಿಸಲು ಬರುವಂಥ ಒಡವೆಯನ್ನು ಬಯಸುವೆವು. ಅದು ಒಂದು ಪುಸ್ತಕವಿರಲಿ, ಒಂದು ಖಾಲಿ ಕಲ್ಲಿನ ಕಟ್ಟಡವಿರಲಿ, ಇಲ್ಲವೆ ಅನೇಕ ವಿಗ್ರಹಗಳುಳ್ಳ ಕಟ್ಟಡವಿರಲಿ! ಅದು ಏನಿದ್ದರೂ ನಡೆಯಬಹುದು! ಪುಸ್ತಕವು ಕೆಲವರನ್ನು ಸಂತೈಸಬಹುದು, ಖಾಲಿ ಕಟ್ಟಡವು ಬೇರೆ ಕೆಲವರನ್ನು ಸಂತೈಸಬಹುದು, ಮತ್ತು ಬೇರೆ ಅನೇಕ ಜನರು ಆ ಖಾಲಿ ಕಟ್ಟಡದಲ್ಲಿ ವಿಗ್ರಹಗಳನ್ನು ಕಾಣದೆ ಸಂತುಷ್ಟರಾಗಲರಿಯರು. ಆದಕ್ಕಾಗಿ, ಈ ದೇವಾಲಯಗಳನ್ನು ಧರ್ಮಭ್ರಮೆಯ ಪ್ರತೀಕಗಳೆಂದು ಬಗೆದು ಇವುಗಳ ಬಳಿ ನೇರಬೇಡಿ, ಎಂದು ನಾನು ಹೇಳ ಬಯಸುವೆ. ಅವುಗಳಲ್ಲಿ ಶ್ರದ್ಧೆಯನ್ನಿರಿಸಿ, ನೀವು ಈ ದೇವಸ್ಥಾನಗಳನ್ನು ಸಮೀಪಿಸಿದರೆ, ಪ್ರತಿಯೊಂದು ಸಲ, ನೀವು ಅಲ್ಲಿಂದ ವಿಶುದ್ಧರಾಗಿ ಹೊರ ಬೀಳುವಿರಿ. ಜೀವಂತ ಪರಮಾತ್ಮನಲ್ಲಿಯ ನಿಮ್ಮ ಶ್ರದ್ಧೆಯು ಪ್ರತಿಸಲ ಬೆಳೆಯುವುದು, ಎಂಬುದು ನಿಮ್ಮ ಅನುಭವಕ್ಕೆ ಬರುವುದು.

(ಹರಿಜನ. ೩೩-೧ ೩೭)

ದೇವಾಲಯಕ್ಕೆ ಹೋಗುವುದರಿಂದ ಅಂತಃಕರಣವು ಪವಿತ್ರವಾಗುವುದು. ದೇವಾಲಯಗಮನವು ಹೃದಯಶುದ್ಧಿಗಾಗಿಯೇ ಪ್ರಚುರಗೊಳಿಸಲಾಗಿರುವುದು. ಪೂಜಕನು ತನ್ನಲ್ಲಿಯ ಅತ್ಯುತ್ತಮವಾದುದನ್ನು ಆಕರ್ಷಿಸುವನು. ಸಜೀವವ್ಯಕ್ತಿಯನ್ನು ಸತ್ಕರಿಸುವಾಗ, ಆ ವ್ಯಕ್ತಿಯಲ್ಲಿಯ ಅತ್ಯುತ್ತಮವಾದುದನ್ನು ಅವನು ನೆಳೆಯಬಹುದು. ಆದರೆ ಆ ಸತ್ಕಾರವು ನಿಸ್ವಾರ್ಥವಾದುದಿರಬೇಕು. ಸಜೀವವ್ಯಕ್ತಿಯು, ಸ್ವಲ್ಪ ಹೆಚ್ಚುಕಡಿಮೆ ಪ್ರಮಾಣದಲ್ಲಿ, ನಮ್ಮಂತೆಯೇ ತಪ್ಪಬಹುದಾದ ಪ್ರಾಣಿಯು. ಆದರೆ ದೇವಾಲಯದಲ್ಲಿ ನಾವು ಪೂಜಿಸಲಿರುವ ಪರಮಾತ್ಮನು, ಕಲ್ಪನೆಗೆ ಮೀರಿದ ಪೂರ್ಣತೆಯಿಂದ ಕೂಡಿದವನು. ಸಜೀವವ್ಯಕ್ತಿಗಳಿಗೆ ಬರೆಯಲಾದ ಓಲೆಗಳು, ಅವರಿಂದ ಉತ್ತರವನ್ನು ಪಡೆದೇ ತೀರುವೆವೆಂದು ಹೇಳಲು ಬರುವುದಿಲ್ಲ. ಮತ್ತು ಅವು ಉತ್ತರವನ್ನು ಪಡೆದಾಗಲೂ ಕೂಡ, ಎಷ್ಟೋ ಸಲ, ಪಡೆದವರ ಎದೆಯನ್ನು ಒಡೆಯುವುದರಲ್ಲಿ ಕೊನೆಗೊಳ್ಳುವುದುಂಟು.

ಭಕ್ತನ ಭಾವನೆಯ ಮೇರೆಗೆ ದೇವಾಲಯದಲ್ಲಿ ನೆಲೆಸಿರುವ ಪರಮಾತ್ಮನಿಗೆ ಬರೆಯಲಾದ ಓಲೆಗಳು, ಲೆಕ್ಕಣಿಕೆಯನ್ನೂ, ಮಸಿಯನ್ನೂ, ಕಾಗದವನ್ನೂ ಮಾತುಗಳನ್ನೂ ಅಪೇಕ್ಷಿಸುವುದಿಲ್ಲ ಕೇವಲ ಮೂಕ ಆರಾಧನೆಯು ಓಲೆಯ ಕೆಲಸವನ್ನು ಮಾಡುವುದು ಮತ್ತು ತಪ್ಪದೆ ಉತ್ತರವನ್ನು ಪಡೆಯುವುದು ಈ ಎಲ್ಲ ಕಾರ್ಯಕ್ರಮವು ಶ್ರದ್ಧೆಯ ಒಂದು ಅಂದವಾದ ವಿಧಿಯು ಇಲ್ಲಿ ಪ್ರಯತ್ನದ ಅಪವ್ಯಯವಿರುವುದಿಲ್ಲ, ಹೃದಯವಿದಾರಣವಿರುವುದಿಲ್ಲ, ಹಾಗೂ ತಪ್ಪು ತಿಳಿವಳಿಕೆಯಾಗುವ ಗಂಡಾಂತರವಿರುವುದಿಲ್ಲ ದೇವಾಲಯ, ಮಸೀದಿ, ಚರ್ಚುಗಳಲ್ಲಿಯ ಪೂಜಾವಿಧಾನದ ಹಿಂಬದಿಯಲ್ಲಿರುವ ಸುಲಭ ತತ್ವಜ್ಞಾನವನ್ನು ನಾವು ಅರಿತುಕೊಳ್ಳಲು ಯತ್ನಿಸಬೇಕು ಈ ಬೇರೆ ಬೇರೆ ಪೂಜಾಸ್ಥಾನಗಳಲ್ಲಿ ನಾನು ಯಾವ ಬಗೆಯ ಭೇದವನ್ನೂ ಎಣಿಸುವುದಿಲ್ಲ ಅವು ಅವರವರ ಶ್ರದ್ಧೆಯ ನಿರ್ಮಿತಿಗಳು ಆ ಅದೃಶ್ಯನಾದ ಪರಮಾತ್ಮನನ್ನು ಹೇಗೂ ಮುಟ್ಟುವ ಮಾನವನ ಉತ್ಕಟ ಬಯಕೆಯ ಪ್ರತಿಫಲಗಳು. [ಹರಿಜನ. ೧೮-೩-೩೩)

## (೩೪) ಪ್ರತೀಕಪೂಜೆಯ ರಹಸ್ಯ

ನಾನು ಪ್ರತೀಕಪೂಜೆಯ ಸಮರ್ಥಕನೂ ಇರುವೆ, ವಿರೋಧಕನೂ ಇರುವೆ ಪ್ರತೀಕಪೂಜನವು ಮೂರ್ತಿಪೂಜೆಯಾಗಿ ಅವನತಗೊಂಡಾಗ ಮತ್ತು ಅದರ ಸುತ್ತಲೂ ಸುಳ್ಳುನಂಬಿಕೆಗಳ ಹಾಗೂ ತತ್ವಗಳ ಪದರುಗಳು ಬೆಳೆದಾಗ, ಅದನ್ನು ದೊಡ್ಡ ಸಾಮಾಜಿಕ ಅನರ್ಥವೆಂದು ಬಗೆದು, ಅದರ ಕೂಡ ಹೋರಾಡಬೇಕಾಗುವುದು ಇದಕ್ಕೆ ಪ್ರತಿಯಾಗಿ, ಪ್ರತೀಕವೆಂದರೆ ತಮ್ಮ ಆದರ್ಶಕ್ಕೆ ತಾವು ಕೊಟ್ಟ ಮೂರ್ತರೂಪ ಎಂಬರ್ಥದಲ್ಲಿ ಪ್ರತೀಕನಿರ್ಮಿತಿಯೂ, ಪ್ರತೀಕಪೂಜೆಯೂ ಮಾನವಸ್ವಭಾವದಲ್ಲಿ ಮೂಲಭೂತವಾದುವು ಹಾಗೂ ಅವು ಅವನಲ್ಲಿಯ ಭಕ್ತಿಯನ್ನು ಬೆಳೆಸುವ ಬೆಲೆಯುಳ್ಳ ಉಪಕರಣಗಳು ಈ ರೀತಿ, ಒಂದು ಗ್ರಂಥವನ್ನು ಪವಿತ್ರವೆಂದು ಬಗೆದು ಅದಕ್ಕೆ ನಮ್ಮ ಆದರವನ್ನು ಸಲ್ಲಿಸುವಾಗ, ನಾವು ಪ್ರತೀಕಪೂಜೆಯನ್ನು ಮಾಡಲಿರುವೆವು ಆದರಭಾವದಿಂದಲೂ, ಪವಿತ್ರಭಾವನೆಯಿಂದಲೂ ಕೂಡಿದವರಾಗಿ ನಾವು ದೇವಾಲಯಕ್ಕಾಗಲಿ, ಮಸೀದಿಗಾಗಲಿ ತೆರಳಿದಾಗ,

ನಾವು ಪ್ರತೀಕವನ್ನೇ ಪೂಜಿಸುತ್ತಿದುವೆವು ಇವುಗಳಲ್ಲೆಲ್ಲ ನನಗೆ ಯಾವ ಬಗೆಯ ಅಪಾಯವೂ ಕಾಣುವುದಿಲ್ಲ ಆದರ ಬದಲಾಗಿ ಸಾಂತ ಹಾಗೂ ಪರಿಮಿತ ತಿಳಿವಳಿಕೆಯನ್ನು ತಳೆದ ಮಾನವನು, ಇದನ್ನುಳಿದು, ಬೇರೆ ಬಗೆಯಾಗಿ ಆರಾಧನೆಯನ್ನು ಕ್ವಚಿತ್ತಾಗಿಯೇ ಮಾಡಬಲ್ಲ ಇದೇ ರೀತಿ, ವೃಕ್ಷಪೂಜೆಯಲ್ಲಿಯೂ, ನನಗೆ ಯಾವ ಬಗೆಯ ಮೂಲಭೂತವಾದ ಕೇಡೂ ಅಥವಾ ಅಪಾಯವೂ ಕಾಣುವುದಿಲ್ಲ ಇಷ್ಟೇ ಅಲ್ಲ, ಅದರ ಬದಲು, ನನಗದು ಆಳವಾದ ಕರುಣಾರಸದಿಂದಲೂ, ಕಾವ್ಯಸೌಂದರ್ಯದಿಂದಲೂ ತುಂಬಿರುವ ಸಂಗತಿ ಎಂದು ಅನಿಸುತ್ತದೆ ತನ್ನ ಅಂದವಾದ ರೂಪಾಕಾರಗಳ ಅನಂತ ದೃಶ್ಯಪರಂಪರೆಯಿಂದ, ಪರಮಾತ್ಮನ ಹಿರಿಮೆಯನ್ನೂ ವೈಭವವನ್ನೂ ಸಾವಿರ ನಾಲಿಗೆಗಳಿಂದ ಸಾರುವಂತಿರುವ ಇಡೀ ಸಸ್ಯ ಸಾಮ್ರಾಜ್ಯಕ್ಕೆ ಸಲ್ಲಿಸಿದ ನಿಜವಾದ ಆದರದ ಪ್ರತೀಕವದು ಈ ಸಸ್ಯಗಳಿಲ್ಲದಿದ್ದರೆ, ನಮ್ಮ ಭೂಗೋಲವು ಜೀವಿಗಳನ್ನು ಪೋಷಿಸಲು ಒಂದರ-ಗಳಿಗೆ ಕೂಡ ಸಮರ್ಥವಾಗುತ್ತಿರಲಿಲ್ಲ ಆದುದರಿಂದ, ವಿಶೇಷತಃ ಮರಗಳ ಕೊರತೆ ಇರುವಂಥ ದೇಶದಲ್ಲಿ, ವೃಕ್ಷಪೂಜೆಯು ತುಂಬ ಆರ್ಥಿಕಮಹತ್ವವನ್ನು ಪಡೆಯುವುದು

## (೩೫) ಮತಾಂಧತೆಯ ಶಾಪ

ತನ್ನ ಪೂಜಾವಿಧಿಯನ್ನುಳಿದು, ಬೇರೆ ಬಗೆಯ ಪೂಜಾವಿಧಾನಗಳಲ್ಲಿಯ ಗುಣಗಳನ್ನು ಅರಿಯಲು ಮನಸ್ಸಿಲ್ಲದ ಮತಾಂಧತೆಯ ರೂಪವನ್ನು ತಳೆದ ಸೂಕ್ಷ್ಮ ಮೂರ್ತಿ-ನಿಷ್ಠೆಯನ್ನು ಒಡೆಯುವದರಿಂದ, ನಾನು ಒಂದರ್ಥದಲ್ಲಿ ಮೂರ್ತಿ-ಭಂಜಕನೇ ಸರಿ ಒಂದು ಚಿಕ್ಕ ಶಿಲಾಖಂಡವನ್ನೂ, ಬಂಗಾರದ ಮೂರ್ತಿಯನ್ನೂ ದೇವತೆಯೆಂದು ಭಾವಿಸಿ, ಅದಕ್ಕೆ ಸಲ್ಲಿಸಲಾದ ಸ್ಥೂಲ ಹಾಗೂ ವಾಸ್ತವ ಪೂಜೆಗಿಂತ, ಈ ಬಗೆಯ ಮೂರ್ತಿಪೂಜೆಯು ಸೂಕ್ಷ್ಮ ಹಾಗೂ ಕೈಗೆ ಸಿಲುಕದಂತಹದಿರವದರಿಂದಲೆ ಹೆಚ್ಚು ಭೀಕರವಾದುದಿರುವದು (ಯಂಗ್ ಇಂಡಿಯಾ, ೨೮-೮-೨೪)

## ೩. ಪ್ರಾರ್ಥನೆ

### (೩೬) ಪ್ರಾರ್ಥನೆಯ ಅರ್ಥ

ಅಂತರಂಗದಲ್ಲಿಯ ಪರಮಾತ್ಮನನ್ನು ಕರೆಯುವದು ಪ್ರಾರ್ಥನೆ ಈಗ ನನಗದರ ಬೌದ್ಧಿಕ ಮನವರಿಕೆಯಾಗಿರಬಹುದು ಆದರೆ ಆದರ ಜೀವಂತ ಸ್ಪರ್ಶದ ಅನುಭವವಿರುವದಿಲ್ಲ

ಪ್ರಾರ್ಥನೆಯಲ್ಲಿ ನಾನು ನನ್ನನ್ನೇ, ನನ್ನ ಉಚ್ಚತರ ಆತ್ಮನನ್ನೇ, ನನ್ನ ನಿಜವಾದ ಆತ್ಮನನ್ನೇ ಬೇಡಿಕೊಳ್ಳುವೆ ಎಂದು ನೀವು ಭಾವಿಸಬಹುದು, ಅನ್ನಬಹುದು ಯಾಕೆಂದರೆ, ಈ ಆತ್ಮನೊಡನೆ ಇನ್ನೂ ನಾನು ಪೂರ್ಣ ತಾದಾತ್ಮ್ಯವನ್ನು ಪಡೆದಿರುವದಿಲ್ಲ ಆದುದರಿಂದಲೇ, ಪ್ರಾರ್ಥನೆಯೆಂದರೆ, ಎಲ್ಲವನ್ನೂ ಒಳಗೊಂಡ ಪರಮಾತ್ಮನಲ್ಲಿ ಬೆರೆಯಲು ಸಂತತವಾದ ಬಯಕೆ ಎಂದು ಅದನ್ನು ಬಣ್ಣಿಸಬಹುದು

ನಾನು ಹೊರಗಿನ ಶಕ್ತಿಯೊಂದನ್ನು ಪ್ರಾರ್ಥಿಸುವೆ ಎಂದು ಕೂಡ ನೀವು ಅನ್ನಬಹುದು ನಾನು ಆ ಅನಂತನ ಒಂದು ಅಂಶ ನಿಜ ಆದರೂ ಇಂಥ ಅತ್ಯಂತ ಅಲ್ಪವಾದ ಅಂಶವು ಆದರ ಹೊರಗಿರುವುದು ಎಂಬುದು ನನ್ನ ಭಾವನೆ ನಾನೀಗ ಬೌದ್ಧಿಕ ವಿವರಣವನ್ನು ಕೊಡುತ್ತಿರುವೆನಾದರೂ ಪರಮಾತ್ಮನಲ್ಲಿ ಬೆರೆತ ಮೂಲಕ, ನಾನು ಏನೂ ಅಲ್ಲ ಎಂದು ಅನ್ನುವಷ್ಟು ಅಲ್ಪನಿರುವೆ, ಎಂದು ನನಗನಿಸುತ್ತದೆ ನಾನು, ಆ-ಈ ಕೆಲಸವನ್ನು ಮಾಡುವೆ ಎಂದೆನ್ನಲು ಪ್ರಾರಂಭಿಸಿದ ಕೂಡಲೆ ನಾನು ನನ್ನ ಅನರ್ಹತೆಯನ್ನೂ ಕ್ಷುದ್ರತೆಯನ್ನೂ ಭಾವಿಸತೊಡಗುವೆ ಮತ್ತು ಬೇರೊಬ್ಬರು, ಬೇರೊಂದು ಹಿರಿಯ ಶಕ್ತಿಯು, ನನಗೆ ನೆರವಾಗಬೇಕು ಎಂದೆನಗೆ ಅನಿಸತೊಡಗುವದು

ನಿಜವಾಗಿ ಪ್ರಾರ್ಥನೆಯು ಪರಮಾತ್ಮನಲ್ಲಿಯ ಪೂರ್ಣ ಧ್ಯಾನ, ಪೂರ್ಣ ವಿಲೀನೀಕರಣ ಹೀಗಿದ್ದರೂ, ಒಮ್ಮೊಮ್ಮೆ ಪ್ರಾರ್ಥನೆಯಲ್ಲಿ, ಮಗುವು ತಂದೆಯನ್ನು ಬೇಡಿಕೊಂಡಂತೆ, ಭಕ್ತನು ಪರಮಾತ್ಮನನ್ನು ಬೇಡಿಕೊಳ್ಳುವುದೂ ಇಲ್ಲದಿಲ್ಲ

ನಾನು ಎತ್ತರವಾದ ಮುಗಿಲಿನಲ್ಲಿ ಎಲ್ಲಿಯೋ ನೆಲೆಸಿರುವ ಪರಮಾತ್ಮ

ನನ್ನು ಪ್ರಾರ್ಥಿಸುವೆ, ಎಂದು ಹೇಳುವದು ಹೆಚ್ಚು ಸಮರ್ಪಕವಾದುದು ಮತ್ತು ಅವನು ಹೆಚ್ಚು ದೂರವಿದ್ದಷ್ಟೂ ಆತನನ್ನು ಪಡೆಯುವ ನನ್ನ ಬಯಕೆಯು ಹೆಚ್ಚಾಗಿ ಬೆಳೆದು, ನನ್ನ ವಿಚಾರದಲ್ಲಿ ಆತನ ಸಾನ್ನಿಧ್ಯವನ್ನು ನಾನು ಅನುಭವಿಸುವೆ ವಿಚಾರಕ್ಕೆ ಬೆಳಕಿನ ಗತಿಗಿಂತ ಹೆಚ್ಚಿನ ವೇಗವುಳ್ಳ ಗತಿಯಿರುವದು ಎಂಬುದನ್ನು ನೀವು ಬಲ್ಲಿರಿ. ಆದುದರಿಂದ, ನಮ್ಮಿಬ್ಬರಲ್ಲಿಯ ಅಂತರ ಅಳೆಯಲು ಬಾರದಂತಹದಿದ್ದರೂ, ಅವೆಲ್ಲ ಇದರ ಮೂಲಕ ಅಳಿದು ಹೋಗುವದು ಅವನು ಬಲು ದೂರವಿದ್ದರೂ ತೀರ ಸಮೀಪದಲ್ಲಿಯೂ ಇರುವ (ಹರಿಜನ ೧೯-೮-೩೯)

ಅಂತರಂಗದಲ್ಲಿಯ ದೇವರ ಸಾನ್ನಿಧ್ಯದಲ್ಲಿ ಜೀವಂತ ಶ್ರದ್ಧೆಯಿಲ್ಲದೆ, ಪ್ರಾರ್ಥನೆ ಅಸಾಧ್ಯ (ಯಂಗ್ ಇಂಡಿಯಾ. ೨೦-೧೨-೨೮)

ಪ್ರಾರ್ಥನೆಯು ನಮ್ಮ ಅಸಹಾಯತೆಯ ಹಾಗು ಎಲ್ಲವನ್ನೂ ತೊರೆದು ಪರಮಾತ್ಮನಲ್ಲಿಯ ನಮ್ಮ ಅಂತಿಮ ಆಶ್ರಯದ ಅರಿವು ಅಥವಾ ಪರಿಣಾಮ (ಯಂಗ್ ಇಂಡಿಯಾ. ೨೫-೧೧-೨೬)

## (೩೭) ಪ್ರಾರ್ಥನೆಯೂ ಪ್ರಯತ್ನವೂ

ಪ್ರಾರ್ಥನೆಯು ಅಕರ್ಮದ ಪೀಠಿಕೆಯಲ್ಲ. ಅದು ಎಡೆಬಿಡದೆ ಸಾಗುವ ನಿಷ್ಕಾಮ ಕರ್ಮದ ಸ್ಫೂರ್ತಿಸ್ಥಾನ ಸ್ವಾರ್ಥಿಯಾದ ಆಲಸಿಯು ಪಾವಿತ್ರ್ಯವನ್ನು ಎಂದೂ ಪಡೆಯಲಾರ ಅದು ಕೇವಲ ನಿಸ್ವಾರ್ಥ ಉದ್ಯಮಶೀಲರಿಗೇ ಲಭಿಸುವದು (ಹರಿಜನ. ೧೫-೬-೩೫)

ಪ್ರಾರ್ಥನೆ ಉಪವಾಸಗಳಂಥ ಪ್ರಭಾವಶಾಲಿಯಾದ ಸಾಧನವು ಬೇರೊಂದಿರುವುದಿಲ್ಲ ಅವೇ ನಮಗೆ ಸರಿಯಾದ ಶಿಸ್ತನ್ನು ನೀಡುವವು, ಸ್ವಾರ್ಥತ್ಯಾಗವನ್ನೂ, ವಿನಯವನ್ನೂ, ನಿಶ್ಚಯ-ದಾರ್ಢ್ಯವನ್ನೂ ಕಲಿಸುವವು ಈ ಗುಣಗಳಿಲ್ಲದೆ ನಿಜವಾದ ಪ್ರಗತಿಯು ಆಗದು (ಯಂಗ್ ಇಂಡಿಯಾ, ೨೦-೩-೨೦)

ನಾನು ನ್ಯಾಯದೆಡೆ ಸಾಗುವ ಅಜ್ಞಾತವಾದ ದಾರಿಯನ್ನು ಕಾಣಲು, ಎಳ್ಳಷ್ಟೂ ಬೇಸರಪಡುವದಿಲ್ಲ ಮತ್ತು ಎಲ್ಲ ಸಾಧಕರೂ ತುಳಿಯಬೇಕಾದ ಈ ಕಷ್ಟಪ್ರದ ಆದರೂ ಆಂದವಾದ ದಾರಿಯಲ್ಲಿ, ವಿನಮ್ರ ಹಾಗು ಸತತ ಪ್ರಯತ್ನ ಮತ್ತು ಮೂಕ ಪ್ರಾರ್ಥನೆ ಈ ವಿಶ್ವಾಸದ ಗೆಳೆಯ

ರಿಬ್ಬರು ಸದೈವ ನನ್ನೊಡನೆ ಇರುವದುಂಟು ನನಗೆ ನೆರವಾಗುವದುಂಟು ಎಂಬುದನ್ನಷ್ಟೇ ನಾನು ನನ್ನ ಸ್ನೇಹಿತರಿಗೆ ಖಂಡಿತವಾಗಿ ಹೇಳಬಲ್ಲೆ

(ಯಂಗ್ ಇಂಡಿಯಾ. ೧-೬-೨೧)

ಪರಮಾತ್ಮನಿಗೆ ನೆನಪು ಮಾಡಿಕೊಡುವ ಆವಶ್ಯಕತೆಯಿಲ್ಲ ಅವನು ಪ್ರತಿಯೊಬ್ಬನ ಅಂತಃಕರಣದಲ್ಲಿ ನೆಲೆಸಿರುವ ಅವನ ಅಪ್ಪಣೆಯಿಲ್ಲದೆ ಯಾವ ಸಂಗತಿಯೂ ಒದಗುವದಿಲ್ಲ ನಮ್ಮ ಪ್ರಾರ್ಥನೆ, ನಮ್ಮ ಹೃದಯ ಶೋಧನೆ ಪರಮಾತ್ಮನ ನೆರವಿಲ್ಲದೆ ನಾವು ತುಂಬ ಅಸಹಾಯರು ಎಂಬುದನ್ನು ಕುರಿತು, ನಾವೇ ನಮಗೆ ಸಲ್ಲಿಸಿದ ನೆನಪು ಪರಮಾತ್ಮನ ಆಶೀರ್ವಾದದ ಬೆಂಬಲವಿಲ್ಲದಿದ್ದರೆ, ಮಾನವನ ಪ್ರಯತ್ನವು ಸಫಲವಾಗದು— ಎಂಬುದರ ನಿಶ್ಚಿತ ಅರಿವು ಹಾಗು ಪ್ರಾರ್ಥನೆ, ಇವುಗಳ ಹೊರತಾಗಿ ಯಾವ ಪ್ರಯತ್ನವೂ ಪೂರ್ಣವಾಗಲರಿಯದು ಪ್ರಾರ್ಥನೆಯು ನಮ್ರತೆಗೆ ಇತ್ತ ಕರೆಯೆ ಸರಿ! ಅದು ಅಂತರಂಗ ಸಂಶೋಧನೆಗೂ, ಅಂತಃಕರಣ ಶುದ್ಧಿಗೂ ನೀಡಲಾದ ಆಹ್ವಾನ!

## (೩೮) ಪ್ರಾರ್ಥನೆಯ ಪ್ರಭಾವ

ತಮ್ಮ ಅವನತ ಆತ್ಮರೊಡನೆ ನೋಲಿನ ಯುದ್ಧವನ್ನು ಸಾಗಿಸಿದ ಯುವಕರಿಗೆ ನಾನು ನೀಡಬಯಸುವ ಸಲಹೆಯೆಂದರೆ ಕೇವಲ ಪ್ರಾರ್ಥನೆ. ನಾವು ತುಂಬ ವಿನಮ್ರರಾಗಬೇಕು ಮತ್ತು ನಮ್ಮ ಆಚೆ ಇರುವವನಿಂದ ಸಾಮರ್ಥ್ಯವನ್ನು ಬಯಸಬೇಕು ಪ್ರಾರ್ಥನೆಯು ನೆರವಾಗದಿದ್ದರೆ, ಇನ್ನಾವುದೂ ನೆರವಾಗಲರಿಯದು ಆದುದರಿಂದ ನಾವು ಅದನ್ನೇ ಎಡೆಬಿಡದೆ ನಡೆಯಿಸಬೇಕು ಯುವಕರಿಗೆ ಇದೇ ನನ್ನ ಸಂದೇಶ ತಮಗೆ ಸರಿದೋರದಿದ್ದರೂ ಯುವಕರು, ಸತ್ಯ-ಪ್ರೇಮಗಳ, ಎಲ್ಲವನ್ನು ಗೆಲ್ಲುವ, ಸಾಮರ್ಥ್ಯವನ್ನು ನಂಬಲೇ ಬೇಕು ವಿಜ್ಞಾನ ಹಾಗು ಆಧುನಿಕ ತತ್ವಜ್ಞಾನಗಳ ಅಭ್ಯಾಸವು, ನಮ್ಮ ಯುವಕರ ಶ್ರದ್ಧೆಯನ್ನೇ ಅಳಿಸಿರುವದು ಇದೇ ಅವರ ಅಡಚಣೆ ಆದುದರಿಂದ ಅವರು ಅಶ್ರದ್ಧೆಯ ಉರಿಯಲ್ಲಿ ಬೆಂದು ಬೆಂಡಾಗಿರುವರು ಹೀಗಾಗಲು ಕಾರಣವೇನೆಂದರೆ, ಅವರ ಶ್ರದ್ಧೆಯು ಬೌದ್ಧಿಕ ಪ್ರಯತ್ನದ ಫಲವಾಗಿದ್ದು, ಆತ್ಮನ ಅನುಭವದ ಫಲವಾಗಿರುವದಿಲ್ಲ (ಯಂಗ್ ಇಂಡಿಯಾ. ೨೧-೪-೨೯)

ಪ್ರಾರ್ಥನೆಯು ಪ್ರತ್ಯೇಕವಾದುದು ಇರುವುದಿಲ್ಲ. ಅದು ಸ್ವಂತ ಜಾತಿ ಜನಗಳಿಗಷ್ಟೇ ಸೀಮಿತವಾದುದಿರುವದಿಲ್ಲ. ಅದು ಎಲ್ಲರನ್ನೂ ಒಳಗೊಳ್ಳುವದು. ಅದು ಇಡೀ ಮಾನವತೆಯನ್ನೆ ಅವಲಂಬಿಸಿಕೊಳ್ಳುವದು. ಈ ರೀತಿ ಪ್ರಾರ್ಥನೆಯು ಸಫಲವಾದರೆ, ಪೃಥ್ವಿಯ ಮೇಲೆ ಸ್ವರ್ಗ ಸಾಮ್ರಾಜ್ಯವೇ ನೆಲೆಗೊಳ್ಳಬಹುದು. (ಹರಿಜನ ೨೮-೯-೪೬)

ನನ್ನ ಅನಿಸಿಕೆಯ ಮೇರೆಗೆ, ನಾನು ಪರಮಾತ್ಮನೆಡೆ ಪ್ರಯಾಣ ಮಾಡುತ್ತಿದ್ದರೆ ನಾನು ಸುರಕ್ಷಿತನಿರುವೆ. ಯಾಕೆಂದರೆ, ನಾನು ಆತನ ಸನ್ನಿಧಿಯ ಬಿಸಿಲ ಕಾವನ್ನು ಅನುಭವಿಸುತ್ತಿರುವೆ. ನನ್ನನ್ನು ತಿದ್ದಲು ನನ್ನ ಜಪ-ತಪ, ಉಪವಾಸ-ಪ್ರಾರ್ಥನೆಗಳನ್ನು ನಾನು ಆಶ್ರಯಿಸುತ್ತಿದ್ದರೆ, ಅವುಗಳಿಗೆ ಯಾವ ಬೆಲೆಯೂ ಇಲ್ಲ, ಎಂಬುದನ್ನು ನಾನು ಬಲ್ಲೆ. ಆದರೆ, ತನ್ನ ಪ್ರಭುವಿನ ತೊಡೆಯಮೇಲೆ ತನ್ನ ದಣಿದ ಮಸ್ತಕವನ್ನು ಇಡಲು ಯತ್ನಿಸುವ ಜೀವಿಯ ಹಂಬಲವನ್ನು ಅವು ಕಾಣಿಸುತ್ತಿದ್ದರೆ, ಅವುಗಳ ಬೆಲೆಗೆ ಎಣೆಯೇ ಇಲ್ಲ. ನನ್ನ ತಪಾದಿಗಳು ಅದನ್ನೇ ಮಾಡುವವು ಎಂದು ನಾನು ಆಶಿಸುವೆ. (ಹರಿಜನ. ೧೮-೪-೩೬)

## (೩೯) ಮಾದರಿಯ ಪ್ರಾರ್ಥನೆ

ಇನ್ನು ನಾನು ತಮ್ಮೆಲ್ಲರನೂ ನ್ಯೂಮನ್ನನೊಡನೆ ಪ್ರಾರ್ಥಿಸಲು ಆಮಂತ್ರಿಸುವೆ. ಅವನ ಪದವು ಅವನ ಅನುಭವವನ್ನು ಒಳಗೊಂಡಿರುವುದು.

ಕರುಣಾಳು! ಬಾ! ಬೆಳಕೆ! ಮುಸುಕಿದೀ ಮಬ್ಬಿನಲಿ,
ಕೈಹಿಡಿದು ನಡೆಸೆನ್ನನು!
ಇರುಳು ಕತ್ತಲೆಯು ಗವಿ! ಮನೆದೂರ, ಕನಿಕರಿಸಿ
ಕೈಹಿಡಿದು ನಡೆಸೆನ್ನನು!
ಹೇಳಿ ನನ್ನಡಿಯಿಡಿಸು, ಬಲುದೂರ ನೋಟವನು,
ಕೇಳಿನೊಡನೆಯೆ ಸಾಕು ನನಗೊಂದು ಹೆಜ್ಜೆ!

(ಯಂಗ್ ಇಂಡಿಯಾ. ೧೧-೧೦-೨೮)

## (೪೦) ಮೌನದ ಮಹತ್ವ

ಸತ್ಯವನ್ನು ಪಡೆಯಬಯಸುವವನು ಮೌನವನ್ನು ತಳೆಯಬೇಕೆಂದು ನನಗೆ ಎಷ್ಟೋ ಸಲ ಅನಿಸಿದೆ. ಮೌನದ ಅದ್ಭುತ ಪ್ರಭಾವವನ್ನು ನಾನು ಬಲ್ಲೆ. ದಕ್ಷಿಣ ಆಫ್ರಿಕೆಯಲ್ಲಿ ನಾನೊಮ್ಮೆ ಮೌನವ್ರತಾಚಾರಿ ಸನ್ಯಾಸಿಗಳ ಮಠಕ್ಕೆ ಹೋಗಿದ್ದೆ. ಅದೊಂದು ಅಂದವಾದ ಸ್ಥಳವಾಗಿತ್ತು. ಅಲ್ಲಿಯ ಬಹುತರ ಎಲ್ಲ ನಿವಾಸಿಗಳೂ ಮೌನವ್ರತವನ್ನು ಆಚರಿಸುತ್ತಿದ್ದರು. ಅದರ ಉದ್ದೇಶದ ಬಗ್ಗೆ ನಾನು ಮಠಾಧಿಪತಿಯನ್ನು ಕೇಳಿದೆ. ಅವನು ಹೇಳಿದ: "ಉದ್ದೇಶವು ತೀರ ಒಡೆದು ಕಾಣುವಂತಹದಿದೆ. ನಾವೆಲ್ಲರೂ ದುರ್ಬಲ ಮಾನವರು. ಎಷ್ಟೋ ಸಲ, ನಮ್ಮ ಮಾತಿನ ಅರ್ಥವನ್ನೇ ನಾವು ಅರಿಯೆವು. ನಮ್ಮ ಅಂತಃಕರಣದಲ್ಲಿ ಸದೈವ ಮಾತನಾಡುತ್ತಿರುವ ಆ ಶಾಂತ ಕಿರುನುಡಿಯನ್ನು ನಾವು ಕೇಳಬಯಸುವೆವಾದರೆ, ಸಂತತವಾದ ಮಾತಿನಿಂದ ನಾವದನ್ನು ಕೇಳಲರಿಯೆವು." ಆ ಅಮೂಲ್ಯ ಪಾಠವನ್ನು ನಾನು ತಿಳಿದುಕೊಂಡೆ. ಮೌನದ ರಹಸ್ಯವನ್ನು ನಾನು ಅರಿತಿರುವೆ.

(ಯಂಗ್ ಇಂಡಿಯಾ. ೬-೮-೨೫)

ಮೌನವು ಸತ್ಯೋಪಾಸಕನ ಆಧ್ಯಾತ್ಮಿಕ ಸಾಧನದ ಒಂದಂಗ ಎಂಬುದನ್ನು ಅನುಭವವು ನನಗೆ ಕಲಿಸಿರುವುದು. ಉದ್ದೇಶಪೂರ್ವಕವಾಗಲಿ, ಅನುದ್ದೇಶಪೂರ್ವಕವಾಗಲಿ, ಅತಿಶಯೋಕ್ತಿಯನ್ನು ಮಾಡುವ, ಸತ್ಯವನ್ನು ಮರೆಮಾಡುವ, ಇಲ್ಲವೆ ಮಾರ್ಪಡಿಸುವ ಪ್ರವೃತ್ತಿಯು ಮಾನವನ ಒಂದು ಸ್ವಾಭಾವಿಕ ದೌರ್ಬಲ್ಯ. ಅದನ್ನು ಮೀರಲು ಮೌನವು ಅಗತ್ಯ. ಮಿತಭಾಷಿಯು ತನ್ನ ಮಾತಿನಲ್ಲಿ ಅವಿಚಾರವನ್ನು ಎಂದೂ ಬರಗೊಡುವುದಿಲ್ಲ. ಅನೇಕ ಜನರು ಮಾತನಾಡಲು ತುಂಬ ಆತುರರಾಗಿರುವುದನ್ನು ನಾವು ಕಾಣುತ್ತೇವೆ. ಮಾತನಾಡಲು ಅಪ್ಪಣೆಯನ್ನು ಬೇಡುವ ಚೀಟಿಗಳು ಕಾಡದ ಸಭಾಧ್ಯಕ್ಷನೇ ದೊರೆಯ. ಮಾತನಾಡಲು ಅನುಮತಿಯನ್ನು ಪಡೆದ ಮಾತುಗಾರನು, ಸಾಮಾನ್ಯವಾಗಿ ತನಗೆ ದೊರೆತ ಕಾಲಾವಧಿಯನ್ನು ಮೀರುವನು, ಹೆಚ್ಚಿನ ಸಮಯವನ್ನು ಬೇಡುವನು, ಮತ್ತು

ಅಪ್ಪಣೆಯಿಲ್ಲದೆ ಹಾಗೆಯೆ ಮಾತಾಡತೊಡಗುವನು ಈ ಬಗೆಯ ಮಾತಿನಿಂದ ಪ್ರಪಂಚಕ್ಕೆ ಯಾವ ಬಗೆಯ ಕಲ್ಯಾಣವೂ ಆಗಲರಿಯದು ಎಂದು ಹೇಳಬಹುದು ಅದೆಲ್ಲ ಕಾಲದ ಅಪವ್ಯಯ (ಆತ್ಮಕಥೆ)

ಇದನ್ನೆಲ್ಲ ಆಲೋಚಿಸಿದಾಗ, ಸದೈವ ಕೊರಗುವ ಮರ್ತ್ಯರಾದ ನಾವು, ಮೌನದ ಗುಣವನ್ನು ಅರಿತರೆ, ಪ್ರಪಂಚದ ಸುಮಾರು ಅರ್ಧದಷ್ಟು ದುಃಖವು ಅಳಿಯಬಹುದು ಎಂದು ನನಗೆ ಅನಿಸದಿರದು ಈ ಆಧುನಿಕ ನಾಗರಿಕತೆಯು ನಮ್ಮನ್ನು ಆವರಿಸುವ ಮುನ್ನ, ಇಪ್ಪತ್ತನಾಲ್ಕು ಗಂಟೆಗಳಲ್ಲಿ ಕನಿಷ್ಠ ಆರರಿಂದ ಎಂಟು ಗಂಟೆಗಳ ಮೌನನಾದರೂ ನಮಗೆ ಖಂಡಿತವಾಗಿ ಲಭಿಸುತ್ತಿತ್ತು ಆಧುನಿಕ ನಾಗರಿಕತೆಯು ರಾತ್ರಿಯನ್ನು ಹಗಲನ್ನಾಗಿ ಬದಲಿಸಲು, ಬಂಗಾರದ ಮೌನವನ್ನು ಹಿತ್ತಾಳೆಯ ಗದ್ದಲವನ್ನಾಗಿ ಪರಿವರ್ತಿಸಲು, ನಮಗೆ ಕಲಿಸಿತು ನಮ್ಮ ಕಾರ್ಯನಿರತ ಜೀವನದಲ್ಲಿ, ದಿನಾಲು ಎರಡು ಗಂಟೆಯಾದರೂ, ನಾವು ನಮ್ಮಲ್ಲಿಯೆ ವಿಶ್ರಮಿಸಿ, ಆ ಮಹಾಮೌನದ ದನಿಯನ್ನು ಕೇಳಲು ನಮ್ಮ ಮನಸ್ಸನ್ನು ಸಿದ್ಧಗೊಳಿಸಿದರೆ, ಅದೆಂಥ ಮಹಾ ಕಾರ್ಯವಾಗಬಹುದು! ದೈವೀ ಬಾನುಲಿಯು ಸದೈವ ಹಾಡುತ್ತಿರುವುದು ನಾವದನ್ನು ಕೇಳುವ ಸಿದ್ಧತೆಯನ್ನು ಮಾತ್ರ ಮಾಡಿಕೊಳ್ಳಬೇಕು, ಅಂದರೆ ಅದು ನಮಗೆ ಕೇಳಿಸದಿರದು. ಆದರೆ, ಮೌನವನ್ನು ಆಚರಿಸದೆ, ಅದು ಕೇಳಲು ಬಾರದು ಮೌನದ ಮಧುರವಾದ ಪರಿಣಾಮವನ್ನು ಕಿರಿದರಲ್ಲಿ ಅರುಹಲು, ಸೇಂಟ್ ಟೆರೆಸಾ ಎಂಬ ಸಾಧ್ವಿಯು ಮುಂದೆ ಕಾಣಿಸಿದ ಅಂದವಾದ ಉಪಮೆಯನ್ನು ಉಪಯೋಗಿಸಿರುವಳು

"ಕೂಡಲೆ ನಿಮ್ಮ ಇಂದ್ರಿಯಗಳೆಲ್ಲ ಒತ್ತಟ್ಟಿಗೆ ಸೇರುವಂತೆ ನಿಮಗೆ ಅನಿಸುವುದು ನಿಮ್ಮ ಪ್ರಯತ್ನ ಇಲ್ಲವೆ ಚಿಂತೆ ಇಲ್ಲದೆಯೆ, ಅವು, ಜೇನು ನೊಣಗಳು ತಮ್ಮ ಹುಟ್ಟಿಗೆ ಮರಳಿ, ಅದನ್ನು ಸೇರಿ, ತಮ್ಮ ಕೆಲಸದಿಂದ ಅಲ್ಲಿ ನಿವೃತ್ತಿಯನ್ನು ಹೊಂದುವಂತೆ, ಆತ್ಮನಲ್ಲಿ ವಿಶ್ರಾಂತಿಯನ್ನು ಪಡೆಯುವುವು ನಿಮ್ಮ ಆತ್ಮನು ತನಗೆ ತಾನೆ ಸಲ್ಲಿಸಿದ ಹಿಂಸೆಗೆ, ಪರಮಾತ್ಮನು ಈ ಬಗೆಯ ಪಾರಿತೋಷಕವನ್ನು ನೀಡುವನು ಮತ್ತು ಇಂದ್ರಿಯಗಳ ಮೇಲೆ ತನ್ನ ಪ್ರಭುತ್ವವನ್ನು ನಡೆಸಲು ಅವನಿಗೆ ಸಾಮರ್ಥ್ಯವನ್ನು ಸಲ್ಲಿಸುವನು.

ಅದರ ಫಲವಾಗಿ, ಆತ್ಮನಿಗೆ ತನ್ನ ನೆನಪು ಉಂಟಾದ ಕೂಡಲೆ, ಅವನಿಂದ ಹೊರಟ ಒಂದು ಅಲ್ಪ ಕುರುಹು ಕೂಡ, ಇಂದ್ರಿಯಗಳನ್ನೆಲ್ಲ ವಿಧೇಯರನ್ನಾಗಿ ಮಾಡಿ, ಅವು ಒಂದೆಡೆ ಸೇರುವಂತೆ ಮಾಡಲು ಸಮರ್ಥವಾಗಬಲ್ಲುದು ಬರಬರುತ್ತ ಆತ್ಮನ ಸಂಕಲ್ಪದ ಮೊದಲನೆಯ ಕರೆಗೇ ಅವು ಹೆಚ್ಚುಹೆಚ್ಚು ಬೇಗನೆ ಮರಳತೊಡಗುವುವು ಕೊನೆಗೆ, ಈ ಬಗೆಯ ಅನೇಕ ಅಭ್ಯಾಸಗಳ ತರುವಾಯ ಪರಮಾತ್ಮನು ಪೂರ್ಣ ವಿಶ್ರಾಂತಿಯಲ್ಲಿ ಪೂರ್ಣ ಧ್ಯಾನದಲ್ಲಿ ಅವನ್ನು ಇರಿಸುವನು". (ಹರಿಜನ. ೨೪-೯-೩೮)

ಈಗ ಮೌನವು ನನಗೆ ದೈಹಿಕ ಹಾಗೂ ಪಾರಮಾರ್ಥಿಕ ಆವಶ್ಯಕತೆಯಾಗಿರುವುದು ಮೊದಲು ನಾನದನ್ನು, ಕೆಲಸದ ಒತ್ತಾಯವನ್ನು ಕಡಿಮೆ ಮಾಡಲು ಸ್ವೀಕರಿಸಿದ್ದೆ ಆಮೇಲೆ ನನಗೆ ಬರಹಕ್ಕಾಗಿ ಸಮಯವು ಬೇಕಾಯಿತು ಆದರೆ ಮುಂದೆ, ಕೆಲಕಾಲ ಅದನ್ನು ಆಚರಿಸಿದ ಮೇಲೆ, ನಾನು ಅದರ ಆಧ್ಯಾತ್ಮಿಕ ಬೆಲೆಯನ್ನು ಕಂಡೆ ಇಂಥ ಮೌನದ ಸಮಯದಲ್ಲಿಯೆ ನಾನು ಪರಮಾತ್ಮನೊಡನೆ ಆಪ್ತ ಸಂಭಾಷಣೆ ಮಾಡಬಲ್ಲೆ ಎಂಬ ಮಾತು ಒಮ್ಮೆಲೆ ನನಗೆ ಹೊಳೆಯಿತು ಈಗ, ನಾನು ಮೌನಕ್ಕಾಗಿಯೆ ಜನಿಸಿದಂತೆ ನನಗೆ ಅನಿಸುತ್ತದೆ (ಹರಿಜನ. ೧೦-೧೨-೩೮)

ನನ್ನಂಥ ಸತ್ಯಶೋಧಕನಿಗೆ ಮೌನವು ತುಂಬ ನೆರವಾಗುವುದು ಮೌನಾವಸ್ಥೆಯಲ್ಲಿ ಜೀವಾತ್ಮನು ತನ್ನ ಮುಂದಿನ ದಾರಿಯನ್ನು ಹೆಚ್ಚು ಸ್ಪಷ್ಟವಾಗಿ ಕಾಣುವನು ಮತ್ತು ಬುದ್ಧಿಯು ಅಳವಿನಲ್ಲಿ ಸಿಲುಕದಂಥ, ಬುದ್ಧಿಗೆ ಮೋಸಗೊಳಿಸುವಂಥ, ಸಂಗತಿಗಳು ತೀರ ನಿಚ್ಚಳಸ್ವರೂಪವನ್ನು ತಳೆಯುವುವು ನಮ್ಮ ಜೀವನವು ಸುದೀರ್ಘವಾದ, ಕಷ್ಟಪ್ರದವಾದ ಸತ್ಯಶೋಧನೆಯು ಮತ್ತು ತನ್ನ ಪೂರ್ಣ ಎತ್ತರವನ್ನು ಏರಲು ಜೀವಾತ್ಮನಿಗೆ ಆಂತರಿಕ ವಿಶ್ರಾಂತಿಯು ಬೇಕಾಗುವುದು (ಹರಿಜನ. ೧೦-೧೨-೨೮)

## (೪೧) ನಿಜವಾದ ಧ್ಯಾನ

ನ್ನ ಭಕ್ತಿಯ ವಿಷಯವನ್ನುಳಿದು, ಬೇರೆಲ್ಲ ವಿಷಯಗಳಿಗೆ ತನ್ನ ಮಾನಸಿಕ ಕಣ್ಣು, ಕಿವಿಗಳನ್ನು ಮುಚ್ಚುವದೇ ಧ್ಯಾನವು ಆದುದರಿಂದ ಪ್ರಾರ್ಥನೆಯ ಕಾಲಕ್ಕೆ ಕಂಗಳನ್ನು ಮುಚ್ಚುವದರಿಂದ ಇಂಥ ಏಕಾಗ್ರತೆಗೆ

ನೆರವಾಗುವದು ಮನುಜನ ಪರಮಾತ್ಮನ ಕಲ್ಪನೆಯು ಸ್ವಾಭಾವಿಕವಾಗಿಯೇ ಮರ್ಯಾದಿತವಾದುದು ಆದುದರಿಂದ ಪ್ರತಿಯೊಬ್ಬನೂ ತಮಗೆ ಕಾಣುವ ಪರಮಾತ್ಮನ ಅತ್ಯುತ್ತಮ ರೂಪವನ್ನು ನೆನೆಯಬೇಕು ಮಾತ್ರ ಆ ರೂಪವು ಶುದ್ಧವೂ, ಉನ್ನತಿದಾಯಕವೂ ಇರಬೇಕು

(ಹರಿಜನ. ೧೮-೮-೩೬)

## (೪೨) ನಾಮದ ಸಾಮರ್ಥ್ಯ

ಆದಾಗ್ಯೂ ಇಲ್ಲಿ, ಸಂದೇಹ ನೈರಾಶ್ಯಗಳಿಂದ ಪೀಡಿತರಾದ ಹಲವು ಜನರಿರುವರು ಅವರಿಗೆ ಪರಮಾತ್ಮನ ನಾಮದ ಬೆಂಬಲವಿರುವದು 'ದೌರ್ಬಲ್ಯ, ಅಸಹಾಯತೆಯ ಫಲವಾಗಿ ನನ್ನೆಡೆ ಸಾರಿದವರಿಗೆ, ನಾನು ಬಲವನ್ನು ನೀಡುವೆನು' ಎಂಬುದು ಪರಮಾತ್ಮನ ಆಶ್ವಾಸನ 'ನಾನು ದುರ್ಬಲನಿದ್ದಾಗ ಪ್ರಬಲನಿರುವೆ' ಎಂದು ಸೂರದಾಸರು ಉಸುರಿರುವರು 'ರಾಮನು ನಿರ್ಬಲರ ಬಲ' ಈ ಬಲವು ಶಸ್ತ್ರಧಾರಣದಿಂದಾಗಲಿ, ಇಂಥ ಬೇರೆ ಸಾಧನಗಳಿಂದಾಗಲಿ, ಲಭಿಸುವದಿಲ್ಲ ಪರಮಾತ್ಮನ ನಾಮವನ್ನು ನೆಚ್ಚುವದರಿಂದಲೆ ಇದು ದೊರೆಯುವದು ರಾಮ ಎಂಬುದು ಪರಮಾತ್ಮನ ಪರ್ಯಾಯಪದ ನೀವು ಗಾಡ್, ಅಲ್ಲಾ, ಅಥವಾ ಬೇರೆ ಯಾವ ನಾಮವನ್ನೂ ನೆನೆಯಬಹುದು ಆದರೆ ಆತನನ್ನೇ ದೃಢವಾಗಿ ನಂಬಿದ ಕ್ಷಣ ನೀವು ಬಲಶಾಲಿಗಳಾಗುವಿರಿ ನಿಮ್ಮ ನೈರಾಶ್ಯವೆಲ್ಲ ಮಾಯವಾಗುವದು

(ಯಂಗ್ ಇಂಡಿಯಾ. ೧-೬-೨೫)

ಬಗೆಬಗೆಯ ಕಾಣಿಕೆಗಳಿಂದ ಪರಮಾತ್ಮನನ್ನು ಮೋಹಿಸಿ, ಅವುಗಳ ಮುಖಾಂತರ ಆತ್ಮರಕ್ಷಣವನ್ನು ಮಾಡಿಕೊಳ್ಳಲೆಳಸುವವರಿಗೆ, ರಾಮನಾಮದ ಉಪಯೋಗವು ಆಗದು ಪರಮಾತ್ಮನಿಗೆ ಹೆದರಿ ನಡೆಯುವವರಿಗೆ ಆತ್ಮಸಂಯಮವನ್ನು ಮಾಡಲು ಎಷ್ಟು ಹೆಣಗಿದರೂ ಅದನ್ನು ಸಾಧಿಸಲರಿಯದವರಿಗೆ, ಅದು ಪ್ರಯೋಜನಕಾರಿಯಾಗುವದು

(ಯಂಗ್ ಇಂಡಿಯಾ. ೨೨-೧-೨೫)

## (೪೩) ನಾವಿಲ್ಲ, ಅವನಿರುವ

ನಾವು ಇಲ್ಲವೇ ಇಲ್ಲ, ಆತನೊಬ್ಬನೇ ಇರುವ ಮತ್ತು ನಾವು ನಿಜವಾಗಿ ಬಾಳಬೇಕಾದರೆ, ಸಂತತವಾಗಿ ನಾವು ಅವನನ್ನು ನುತಿಸಬೇಕು ಆತನ ಇಚ್ಛೆಯನ್ನು ನೆರವೇರಿಸಬೇಕು ಆತನ ಕೊಳಲಿನ ರಾಗಕ್ಕೆ ಸರಿಯಾಗಿ ನಾವು ಕುಣಿಯೋಣ, ಆಂದರೆ ಎಲ್ಲವೂ ಸರಿಹೋಗುವುದು

(ಯಂಗ್ ಇಂಡಿಯಾ ೫-೩-೨೫)

ತನ್ನಂತರಂಗದಲ್ಲಿ ಅಹಂಕಾರದ ಅಲ್ಪಾಂಶವಿದ್ದವನೂ ಪರಮಾತ್ಮನನ್ನು ಕಾಣಲರಿಯ ಅವನನ್ನು ಕಾಣಬಯಸುವವನು ಶೂನ್ಯನಾಗಲುಬೇಕು ಬಿರಗಾಳಿಯ ಹೊಡೆತದಿಂದ ಹೊಯ್ದಾಡುವ ವಿಶ್ವದಲ್ಲಿ 'ನಾನು ಗೆದ್ದೆ' ಎಂದು ಹೇಳುವ ಎದೆಗಾರನಾರು ? ನಮ್ಮಲ್ಲಿಯ ಪರಮಾತ್ಮ ಗೆಲ್ಲುವವ, ನಾವಲ್ಲ

(ಯಂಗ್ ಇಂಡಿಯಾ ೨೫-೬-೨೫)

## (೪೪) ಒಡೆಯನ ಕೈಯಲ್ಲಿ ಯಂತ್ರವಾಗು

ಒಂದು ಯಂತ್ರವು ಯಾಂತ್ರಿಕನ ಕರೆಯನ್ನು ತನ್ನಿಂದ ತಾನೆ ಕೇಳುವಂತೆ, ಗೀತಾಭಕ್ತನು ಒದಗುವ ಸಂಗತಿಗಳನ್ನು ಕಾಣುವನು, ಅವುಗಳಿಗೆ ಸ್ವಾಭಾವಿಕ ಪ್ರತಿಕ್ರಿಯೆಗಳನ್ನು ಕಾಣಿಸುವನು, ಮತ್ತು ಆ ಮಹಾಯಾಂತ್ರಿಕನಾದ ಪರಮಾತ್ಮನು ಪ್ರೇರಿಸಿದಂತೆ ತನ್ನ ಪಾತ್ರವನ್ನು ನಿರ್ವಹಿಸುವನು ವಿವೇಚನೆಯುಳ್ಳ ಜೀವಿಗಳಿಗೆ ಯಂತ್ರದಂತೆ ವರ್ತಿಸುವುದು ತುಂಬ ಕಷ್ಟದ ಕೆಲಸ ಆದರೂ, ಶೂನ್ಯನಾಗಬೇಕಾದರೆ, ಪೂರ್ಣತೆಯನ್ನು ಬಯಸುವವನು ತಾನು ಯಂತ್ರದಂತೆ ನಡೆಯಲೇಬೇಕು ಯಂತ್ರವು ಜಡವಾದುದು ಮಾನವನು ಸಜೀವನು ಇದುವೆ ಯಂತ್ರಮಾನವರಲ್ಲಿಯ ಪ್ರಧಾನ ಭೇದ, ಆದುದರಿಂದ ನಾಯಕ ಯಾಂತ್ರಿಕನ ಕೈಯಲ್ಲಿ ಮಾನವನು ಬುದ್ಧಿಪೂರ್ವಕವಾಗಿ ಯಂತ್ರದಂತೆ ವರ್ತಿಸಬೇಕಾಗುವದು. ಪರಮಾತ್ಮನು ಎಲ್ಲ ಜೀವಿಗಳನ್ನೂ, ಅವು ಒಂದು ಯಂತ್ರದ ಅಂಗಗಳಿರುವಂತೆ ಭಾವಿಸಿ, ತಿರುಗಿಸುವನು

(ಮೀರಾಗೆ ಬಾಪೂ ಬರೆದ ಪತ್ರಗಳು)

## (೪೫) ಪರಮಾತ್ಮನು ನಿರ್ಬಲರ ಬಲ

ಪರಮಾತ್ಮನ ಕೈಯಲ್ಲಿ ನಾವು ತೃಣಮಾತ್ರ ಅವನೇ ತನಗೆ ಸರಿದೋರಿದಲ್ಲಿ ನಮ್ಮನ್ನು ಹಾರಿಸಬಲ್ಲ ನಾವು ಅವನ ಇಚ್ಛೆಯನ್ನು ವಿರೋಧಿಸಲರಿಯೆವು ಅವನು ನಮ್ಮೆಲ್ಲರನ್ನೂ, ಒಂದಾಗಲು ಹುಟ್ಟಿಸಿರುವ, ಕೊನೆಯವರೆಗೆ ಬೇರೆ ಬೇರೆಯಾಗಿ ಉಳಿಯುಲಲ್ಲ

(ಯಂಗ್ ಇಂಡಿಯಾ. ೧೫-೯-೨೪)

ಪರಮಾತ್ಮನು ತನ್ನ ಭಕ್ತರನ್ನು ಪೂರ್ತಿಯಾಗಿ ಪರೀಕ್ಷಿಸುವವನು ಆದರೆ ಅವರ ಸಹನೆಯನ್ನು ಮೀರಗೊಡುವದಿಲ್ಲ, ಅವರೆದುರು ಒಡ್ಡಿದ ವಿಷಮಪರೀಕ್ಷೆಯಿಂದ ಪಾರಾಗಲು ಅವರಿಗೆ ಸಾಕಷ್ಟು ಬಲವನ್ನು ನೀಡುವ

(ಯಂಗ್ ಇಂಡಿಯಾ. ೧೯-೨-೨೫)

ಆದರೆ ನಾನು ಪರಮಾತ್ಮನನ್ನು ನಂಬುವ ಮೂಲಕ, ಆತನಲ್ಲಿಯ ಶ್ರದ್ಧೆಯನ್ನು ಒಂದರಗಳಿಗೆ ಕೂಡ ಕಳೆದುಕೊಳ್ಳದ ಮೂಲಕ, ಅವನು ನನಗೊಡ್ಡಿದ ಸುಖದುಃಖಗಳಿಂದ ತೃಪ್ತನಿರುವ ಮೂಲಕ, ನಾನು ಅಸಹಾಯನಾದರೂ ಆಶೆಯನ್ನೆಂದೂ ತೊರೆಯುವುದಿಲ್ಲ

(ಯಂಗ್ ಇಂಡಿಯಾ. ೨೭-೧ ೨೭)

ನಮ್ಮ ಏಕಮೇವ ಸಹಾಯಕನೆಂದು ನಾವು ಆತನ ಮಡಿಲನ್ನು ಆಶ್ರಯಿಸಬಲ್ಲವರಾದರೆ, ಪ್ರತಿಯೊಂದು ಪರೀಕ್ಷೆಯಲ್ಲೂ ನಾವು ಅಪಾಯಕ್ಕೊಳಗಾಗದೆ ಪಾರಾಗಬಹುದು ಅವನ ಅಪ್ಪಣೆಯಿಲ್ಲದೆ ಯಾವುದೂ ಒದಗಲರಿಯದಾದರೆ, ಆತನು ನಮ್ಮನ್ನು ಪರೀಕ್ಷಿಸಲಿರುವನು ಎಂದು ನಂಬಲು ಅಡ್ಡಿಯೇನು ? ನಾನು ನನ್ನ ದೂರುಗಳನ್ನು ಅವನೆಡೆ ಒಯ್ಯುವೆ ಮತ್ತು ಇಷ್ಟು ಕ್ರೂರತನದಿಂದ ನಮ್ಮನ್ನು ಪರೀಕ್ಷಿಸಿದ್ದಕ್ಕಾಗಿ ನಾನು ಅವನ ಮೇಲೆ ಕೋಪಿಸಿಕೊಳ್ಳುವೆ ನಾವು ಅವನನ್ನು ತುಂಬ ನಂಬಿದರೆ ಅವನು ನಮ್ಮನ್ನು ಸಂತೈಸುವನು, ಮತ್ತು ಕ್ಷಮಿಸುವನು ನಿರಂಕುಶ ಹಿಂಸಕನೆದುರು ಧೈರ್ಯದಿಂದ ಸೆಟೆದು ನಿಲ್ಲುವ ರೀತಿಯು ಅವನನ್ನು ದ್ವೇಷಿಸುವುದೂ ಅಲ್ಲ, ಹೊಡೆಯುವುದೂ ಅಲ್ಲ ಪರಮಾತ್ಮನೆದುರು ವಿನಮ್ರರಾಗಿ

ನಿಂತು, ನಮ್ಮ ಪ್ರಾಣಯಾತನೆಯ ಗಳಿಗೆಯಲ್ಲಿ ನಮಗೆ ನೆರವಾಗಲು ಆತನನ್ನು ಆರ್ತಿಯಿಂದ ಕರೆಯುವುದೇ ಆ ಪದ್ಧತಿ.

(ಯಂಗ್ ಇಂಡಿಯಾ- ೧೫-೧೨-೨೧)

ಸಂಕಟಸಮಯದಲ್ಲಿ ಬೇರೆಲ್ಲರೂ ನಿಮ್ಮನ್ನು ಕೈಬಿಟ್ಟರೂ, ಪರಮಾತ್ಮನು ಜನರನ್ನು ಎಂದೂ ತೊರೆಯುವುದಿಲ್ಲ ಎಂದು ನಾನು ನಿಶ್ಚಿತವಾಗಿ ಹೇಳಬಲ್ಲೆ ಹಲವು ವರ್ಷಗಳ ಪೂರ್ವದಲ್ಲಿ ನಾನು ತಮಿಳು ಭಾಷೆಯ ಅಭ್ಯಾಸವನ್ನು ಮಾಡಿದೆ ಆಗ ಕಲಿತ ಗಾದೆಯ ಮಾತೊಂದನ್ನು ನಾನೆಂದಿಗೂ ಮರೆಯಲಾರೆ ಅದು ಹೀಗಿರುವುದು 'ದಿಕ್ ಕೆಟ್ರವನ್‌ಕ್ಕ ದೈವಮೇ ತೂಣ್ಣೈ' ಅಂದರೆ, 'ದಿಕ್ಕೆಟ್ಟವನಿಗೆ ದೇವನೇ ಜೊತೆ' ನಮ್ಮಲ್ಲಿಯ ಪ್ರತಿಯೊಬ್ಬನೂ, ಏಕಾಕಿಯಾಗಿ ನಿಲ್ಲಲು ಕಲಿಯಬೇಕು ಪರಮಾತ್ಮನೊಬ್ಬನೆ ನಮ್ಮ ಅಮೋಘನಾದ, ಶಾಶ್ವತನಾದ ಮಾರ್ಗದರ್ಶಕನು

(ಯಂಗ್ ಇಂಡಿಯಾ ೨೯ ೯-೨೧)

ಪರಮಾತ್ಮನು ನೆಲವಿಲ್ಲದವರಿಗೆ ನೆರವಾಗುವನು, ತಾವು ಏನಾದರೂ ಮಾಡಬಲ್ಲೆವು ಎಂದು ನಂಬುವವರಿಗಲ್ಲ

(ಯಂಗ್ ಇಂಡಿಯಾ ೨೪-೨-೨೨)

ಆತನಲ್ಲಿ ಅನನ್ಯಶ್ರದ್ಧೆಯನ್ನಿರಿಸಿದವರು ತಮ್ಮ ಗುರಿಯನ್ನು ಮುಟ್ಟದಿರರು (ಯಂಗ್ ಇಂಡಿಯಾ. ೧೧-೧-೨೫)

## (೪೬) ದೇವರಿಗೆ ಎಲ್ಲವನ್ನೂ ಅರ್ಪಿಸು

ಆತ್ಮನಿರೀಕ್ಷಣೆಯ ಗಳಿಗೆಯಲ್ಲಿ ಕವಿಯು ತನ್ನಷ್ಟಕ್ಕೆ ಕೇಳುವುದೇನೆಂದರೆ·

" ಅಯ್ಯಾ ! ಮನುಜನೇ ! ಪರಮಾತ್ಮನ ನಾಮಸ್ಮರಣವನ್ನು ಏಕೆ ತೊರೆದೆ ? ಕಾಮ-ಕ್ರೋಧ-ಲೋಭಗಳನ್ನು ನೀನು ತೊರೆಯಲಿಲ್ಲ , ಆದರೆ ಸತ್ಯವನ್ನು ಮರೆತಿರುವೆ.

" ಕೀಳುಕಾಸುಗಳನ್ನು ರಕ್ಷಿಸಿ, ಪರಮಾತ್ಮನ ಪ್ರತಿರೂಪಿಯಾದ ಬೆಲೆಯುಳ್ಳ ಹರಳನ್ನು ಎಸೆಯುವುದು ಅದೆಂಥ ಮಹಾಪ್ರಮಾದ !

" ಎಲೈ ಮರುಳನೇ ! ಈ ಹುರುಳಿಲ್ಲದ ಹಾಳು ವಿಷಯಗಳನ್ನೆಲ್ಲ ತ್ಯಜಿಸು ಪರಮಾತ್ಮನ ಕರುಣವೊಂದನ್ನೇ ಆಶ್ರಯಿಸಯ್ಯ ! "

ಹೀಗೆಂದಮಾತ್ರಕ್ಕೆ, ತನ್ನ ಹತ್ತಿರ ಇರುವ ಧನವನ್ನು ಎಸೆಯ ಬೇಕಾಗಿಲ್ಲ, ತನ್ನ ಹೆಂಡಿರುಮಕ್ಕಳನ್ನು ಮನೆಯ ಹೊರಗೆ ತಳ್ಳಬೇಕಾಗಿಲ್ಲ ಈ ಒಡವೆಗಳ ಬಗೆಗೆ ಇರುವ ಆಸಕ್ತಿಯನ್ನು ತೊರೆಯಬೇಕು. ತಮ್ಮ ಸರ್ವಸ್ವವನ್ನೂ ಪರಮಾತ್ಮನಿಗೆ ಅರ್ಪಿಸಿ, ಅವನು ನೀಡಿದ ಪ್ರಸಾದವನ್ನು ಅವನ ಸೇವೆಗಾಗಿಯೆ ವಿನಿಯೋಗಿಸಬೇಕು ಎಂಬುದೇ ಮೇಲಿನ ಹೇಳಿಕೆಯ ಅರ್ಥ ಅಂತಃಕರಣಪೂರ್ವಕವಾಗಿ ನಾವು ಆತನ ನಾಮವನ್ನು ನೆನೆದರೆ, ನಾವು ಕಾಮ, ಅಸತ್ಯ, ಕೀಳುವಿಕಾರಗಳಿಂದ ತಾನಾಗಿಯೆ ದೂರವಾಗುವೆವು

(ಹರಿಜನ ೨೪-೫-೪೬)

## (೪೭) ನಾನು ದೇವರ ದಿವ್ಯ ಹಸ್ತದಲ್ಲಿರುವೆ

ನಾನಾರು ? ಪರಮಾತ್ಮನು ನನಗಿತ್ತ ಬಲವನ್ನುಳಿದು ನನಗೆ ಬೇರೆ ಬಲವಿಲ್ಲ ಅಹಿಂಸೆಯ ಪ್ರಚಾರಕ್ಕಾಗಿ ಉಪಯುಕ್ತವಾದ ಶುದ್ಧ ಯಂತ್ರ ನಾನು, ಎಂದು ಅವನು ಭಾವಿಸಿದರೆ, ನನಗೆ ಅವನು ಬಲವನ್ನು ನೀಡುವ, ದಾರಿಯನ್ನು ತೋರಿಸುವ ಮೂಕಪ್ರಾರ್ಥನೆಯು ನನ್ನ ಆಯುಧಗಳಲ್ಲಿ ಎಲ್ಲಕ್ಕೂ ಹಿರಿದಾದುದು ಆದುದರಿಂದ ಶಾಂತಿಯ ಕಾರ್ಯವು ಆತನ ದಿವ್ಯ ಕೈಗಳಲ್ಲಿ ನೆಲೆಸಿರುವುದು ಶಾಶ್ವತವಾದ, ಅಚಲವಾದ, ಶಾಸನದ ರೂಪದಿಂದ ವ್ಯಕ್ತವಾಗುವ ಆತನ ಇಚ್ಛೆಯನ್ನು ಮೀರಿ ಯಾವ ಸಂಗತಿಯೂ ಒದಗಲರಿಯದು ಆ ಶಾಸನವೇ ಆತನು. ನಾವು ಆತನನ್ನೂ ಆತನ ಶಾಸನವನ್ನೂ ಅಸ್ಪಷ್ಟವಾಗಿಯೆ ಅರಿಯಬಲ್ಲೆವು. ಆದರೆ, ಆತನ ಶಾಸನದ ಅಸ್ಫುಟ ದರ್ಶನವು ಕೂಡ, ನನ್ನಲ್ಲಿ, ನನ್ನ ಭವಿಷ್ಯತ್ತಿನ ಬಗೆಗೆ ಆನಂದ, ಆಶೆ, ಶ್ರದ್ಧೆಗಳನ್ನು ತುಂಬಲು ಸಾಕಾಗಿರುವುದು

(ಹರಿಜನ. ೯-೧೨-೩೯)

ನಾನು ಕೇವಲ ಪರಮಾತ್ಮನ ಮಾರ್ಗದರ್ಶನದಿಂದಲೆ ನಡೆಯಬೇಕು ಅವನು ಅನುಮಾನಪ್ರಕೃತಿಯ ಒಡೆಯನಿರುವ ತನ್ನ ಅಧಿಕಾರದಲ್ಲಿ ಯಾರಿಗೂ ಪಾಲು ಕೊಡನು ಆದುದರಿಂದ, ನಾವು ತುಂಬ ವಿನಮ್ರರಾಗಿ ಬರಿಗೈಯವರಾಗಿ, ಸರ್ವಸಮರ್ಪಣಭಾವಭರಿತರಾಗಿ, ಅವನೆದುರು ನಾರ

ಬೇಕು ಅಂದರೆ ಇಡೀ ಪ್ರಪಂಚವೆದುರು ಧೈರ್ಯವಾಗಿ ನಿಲ್ಲಲು ನಮಗೆ ಅವನು ಸಾಮರ್ಥ್ಯವನ್ನು ಕೊಡುವ, ಮತ್ತು ಎಲ್ಲ ಅಪಾಯಗಳಿಂದ ನಮ್ಮನ್ನು ಕಾಪಾಡುವ (ಯಂಗ್ ಇಂಡಿಯಾ, ೩-೯-೩೧)

ನನ್ನನ್ನು ರಕ್ಷಿಸಲು ಬಯಸಬೇಡಿ. ಆ ಸರ್ವೋತ್ತಮನು ನಮ್ಮೆಲ್ಲರನ್ನು ರಕ್ಷಿಸಲು ಸದಾ ಸಿದ್ಧನಿರುವ ನನ್ನ ಕಾಲವು ಮುಗಿಯಿತೆಂದರೆ, ಈ ಜಗತ್ತಿನಲ್ಲಿಯ ಅತಿ ಪ್ರಖ್ಯಾತ ವ್ಯಕ್ತಿಯೂ ಕೂಡ ನಮ್ಮಿಬ್ಬರ ಮಧ್ಯೆ ನಿಲ್ಲಲರಿಯನು (ಯಂಗ್ ಇಂಡಿಯಾ, ೨-೬-೩೧)

ನಾನು ಈ ದೇಹದಲ್ಲಿ ಇರಬೇಕೆಂದು ಪರಮಾತ್ಮನು ಬಯಸುವವರೆಗೆ, ಅವನು ನನ್ನನ್ನು ಕಾಯುವನು ಅವನ ಬಯಕೆಯು ಪೂರ್ಣವಾದ ಕ್ಷಣ, ನಾನು ಕೈಕೊಂಡ ಯಾವ ಮುಂಜಾಗ್ರತೆಯ ಸಾಧನಗಳೂ ನನ್ನನ್ನು ಕಾಪಾಡಲರಿಯವು. (ಮೀರಾಗೆ ಬರೆದ ಪತ್ರ)

ಭಾಗ ೪

# ಪರಮಾತ್ಮನ ಸಾಕ್ಷಾತ್ಕಾರ

## ೧. ಆತನ ಸಾನ್ನಿಧ್ಯದ ಅನುಭಾವ

### (೪೮) ಒಂದು ದಿವ್ಯ ಭಾವನೆ

ಪ್ರತಿಯೊಬ್ಬನೂ ತನ್ನ ಅಂತರಂಗದಲ್ಲಿ ಉಳಿದೆಲ್ಲ ಭಾವನೆಗಳನ್ನು ಅಳಿಸಿ, ಪರಮಾತ್ಮನ ಸನ್ನಿಧಿಯ ಭಾವನೆಯೊಂದನ್ನೇ ತಳೆಯುವ ಧನ್ಯತೆಯ, ಅವರ್ಣನೀಯ ಅವಸ್ಥೆಯನ್ನು ಪಡೆಯಬಲ್ಲ, ಎಂಬುದನ್ನು ನಾನು ನಂಬುವೆ (ಯಂಗ್ ಇಂಡಿಯಾ, ೧೭-೧೧-೨೧)

ನನ್ನ ಸುತ್ತಲಿನ ಎಲ್ಲ ವಸ್ತುಗಳೂ ಸಂತತವಾಗಿ ಬದಲಾಗುತ್ತಿದ್ದರೂ ಬಯಲಾಗುತ್ತಿದ್ದರೂ ಈ ಬದಲಾವಣೆಯ ಬುಡದಲ್ಲಿ ಒಂದು ಜೀವಂತ ಶಕ್ತಿಯಿರುವುದನ್ನು ನಾನು ಅಸ್ಫುಟವಾಗಿ ಕಾಣುತ್ತಿರುವೆ, ಅದು ಬದಲಾಗದಂತಹುದು ಅದೇ ಎಲ್ಲವನ್ನೂ ಒಂದೆಡೆ ಕಟ್ಟಿಡುವುದು ಅದೇ ನಿರ್ಮಿಸುವುದು, ಅಳಿಸುವುದು, ಮರಳಿ ನಿರ್ಮಿಸುವುದು ಆ ಸರ್ವವ್ಯಾಪಕ ಶಕ್ತಿ ಇಲ್ಲವೆ ಚೈತನ್ಯವೇ ಪರಮಾತ್ಮ ನಾನು ಇಂದ್ರಿಯಗಳಿಂದ ಅರಿಯುವ ಬೇರಾವ ವಸ್ತುವೂ ಚಿರಕಾಲ ಬಾಳದಿರುವುದರಿಂದ, ಬಾಳಲರಿಯದರಿಂದ, ಪರಮಾತ್ಮನೊಬ್ಬನೇ ಇರುತಿಹನೆನ್ನಲು ಅಡ್ಡಿಯಿಲ್ಲ

### (೪೯) ಅದು ಸ್ವತಃಸಿದ್ಧವಾದುದು

ಯಾವ ಪ್ರಮಾಣವನ್ನೂ ಅಪೇಕ್ಷಿಸದೆ ಮಗುವು ತನ್ನ ತಾಯಿಯ ಪ್ರೀತಿಯನ್ನು ಭಾವಿಸುವಂತೆ ಪರಮಾತ್ಮನು ನಮ್ಮ ಹೃದಯಸಿಂಹಾಸನವನ್ನು ಅಲಂಕರಿಸಿರುವನೆಂದು ಭಾವಿಸುವದೇ ಪರಮಾತ್ಮನ ಸಾಕ್ಷಾತ್ಕಾರ. ತಾಯಿಯ ಪ್ರೀತಿಯ ಅಸ್ತಿತ್ವವನ್ನು ಮಗುವು ತರ್ಕದಿಂದ ಸಿದ್ಧಗೊಳಿಸುವದೇ ? 'ಅದು ಉಂಟು' ಎಂದಷ್ಟೇ, ಮಗು ವಿಜಯ ವೈಭವದಿಂದ ಸಾರುವದು ಪರಮಾತ್ಮನ ಇರವಿನ ಮಾತು ಕೂಡ ಹಾಗೆಯೆ ಇರಬೇಕು ಪರಮಾತ್ಮನು ಬುದ್ಧಿಗೆ ನಿಲುಕುವದಿಲ್ಲ ಆದರೆ ಅವನು ಅನುಭವಗಮ್ಯನು

ನಾವು ತುಲಸೀದಾಸ, ಚೈತನ್ಯ, ರಾಮದಾಸ ಮತ್ತು ಬೇರೆ ಅನೇಕ ಆಧ್ಯಾತ್ಮಿಕ ಗುರುಗಳ ಅನುಭವವನ್ನು ನಿರಾಕರಿಸಬಾರದು ಐಹಿಕ ಶಿಕ್ಷಕರ ಅನುಭವನ್ನು ನಾವು ನಿರಾಕರಿಸುವೆವೇ? ಹಾಗೆಯೇ ಇಲ್ಲಿಯೂ ನಾವು ವರ್ತಿಸಬೇಕು

(ಯಂಗ ಇಂಡಿಯಾ ೯-೭-೨೫)

## (೫೦) ಇಂದ್ರಿಯಜ್ಞಾನಕ್ಕಿಂತ ಹೆಚ್ಚು ನಿಜ

ಪರಮಾತ್ಮನು ಬುದ್ಧಿಯನ್ನು ಎಂದಾದರೂ ಸಂತೈಸುತ್ತಿದ್ದರೆ, ಕೇವಲ ಬುದ್ಧಿಗೆ ಸಮಾಧಾನವನ್ನು ನೀಡುವದರಿಂದ ಅವನು ಪರಮಾತ್ಮನಾಗಲಾರ ಅವನು ನಿಜವಾದ ಪರಮಾತ್ಮನಾಗಬೇಕಾದರೆ, ಹೃದಯವನ್ನು ಆಳಬೇಕು, ಮತ್ತು ಅದನ್ನು ಪರಿವರ್ತಿಸಬೇಕು ತನ್ನ ಭಕ್ತನ ತೀರ ಸಣ್ಣ ಕೆಲಸಗಳಲ್ಲಿಯೂ ಆತನು ತನ್ನ ಇರವನ್ನು ಕಾಣಿಸಬೇಕು ಪಂಚೇಂದ್ರಿಯಗಳು ನೀಡುವ ಅನುಭವಕ್ಕಿಂತ ಹೆಚ್ಚು ನಿಜವಾದ ನಿಶ್ಚಿತ ಅನುಭವದಿಂದಲೇ ಇದು ಸಾಧ್ಯ ಇಂದ್ರಿಯಗಳ ಅನುಭವವು ನಮಗೆ ಎಷ್ಟು ಸತ್ಯವಿರುವಂತೆ ಕಂಡರೂ, ಅದು ಅಸತ್ಯವಾದುದೂ, ವಂಚಿಸುವಂತಹುದೂ ಇರಬಲ್ಲದು ಎಷ್ಟೋ ಸಲ ಹಾಗಿರುವದೂ ಉಂಟು ಇಂದ್ರಿಯಗಳ ಅಳವಿನ ಆಚೆಯ ಅನುಭವವು ಅಮೋಘವಾದುದು ಅದು ಬಾಹ್ಯ ಪ್ರಮಾಣಗಳಿಂದ ಸಿದ್ಧಮಾಡಲಾಗುವುದಿಲ್ಲ ಆದರೆ, ಅಂತಃಕರಣದಲ್ಲಿ ಪರಮಾತ್ಮನ ನಿಜವಾದ ಸಾನ್ನಿಧ್ಯವನ್ನು ಅನುಭವಿಸಿದವರ ಚಾರಿತ್ರ್ಯದಲ್ಲಿಯ, ನಡತೆಯಲ್ಲಿಯ ಬದಲಾವಣೆಯಿಂದ ಅದು ಸಿದ್ಧವಾಗುವದುಂಟು

ಎಲ್ಲ ದೇಶ ಕಾಲದಲ್ಲಿಯ ಪ್ರವಾದಿಗಳ ಹಾಗು ಸಾಧುಗಳ ಅವಿಚ್ಛಿನ್ನವಾದ ಅನುಭವ ಪರಂಪರೆಯೆ ಇದಕ್ಕೆ ಪ್ರಮಾಣ ಈ ಪ್ರಮಾಣವನ್ನು ಅಲ್ಲಗಳೆಯುವದೆಂದರೆ ನಮ್ಮನ್ನೇ ಅಲ್ಲಗಳೆದಂತೆ.

(ಯಂಗ್ ಇಂಡಿಯಾ. ೧೧-೧೦-೨೮)

## (೫೧) ಈ ಭಾವನೆಯು ನರನರಗಳಲ್ಲಿ ಸೇರಿರುವದು

ನನ್ನ ಜೀವನದಲ್ಲಿ ಒಂದರಗಳಿಗೆ ಕೂಡ ನಾನು ಪರಮಾತ್ಮನನ್ನು ಮರೆತಿಲ್ಲ ಎಂಬುದನ್ನು ನಾನು ಎದೆತಟ್ಟಿ ಹೇಳಬಲ್ಲೆ ಕಳೆದ ಇಪ್ಪತ್ತು ವರುಷಗಳಿಗಿಂತ ಹೆಚ್ಚುಕಾಲ, ನಾನು ಮಾಡಿದುದನ್ನೆಲ್ಲ, ಪರಮಾತ್ಮನ

ಎದುರಿನಲ್ಲಿ ಮಾಡಿದಂತೆ ಮಾಡುತ್ತಲಿರುವೆ. ಪರಮಾತ್ಮನನ್ನು ನಾನು ನಂಬುವುದರಿಂದ ಆತನಲ್ಲಿಯ ಶ್ರದ್ಧೆಯನ್ನು ಒಂದು ಕ್ಷಣ ಹೊತ್ತು ಕೂಡ ಕಳೆದುಕೊಳ್ಳದುದರಿಂದ ಆತನು ನೀಡಿದ ಸುಖ ದುಃಖಗಳಿಂದ ತೃಪ್ತನಾಗಿರುವುದರಿಂದ, ನಾನು ಅಸಹಾಯನೆಂದು ಭಾವಿಸಬಹುದು. ಆದರೆ ನಾನು ಆಶೆಯನ್ನೆಂದೂ ಕಳೆದುಕೊಳ್ಳುವದಿಲ್ಲ. (ಯಂಗ್ ಇಂಡಿಯಾ. ೨೭-೬-೨೭)

ಯಾರ ಕಂಗಳಿಗೆ ಕಾಣದ ಸಂಗತಿಯೇ ಇರುವುದಿಲ್ಲವೋ, ಯಾರೊಡನೆ ಸಮರಸನಾಗಿ ಬಾಳಲು ನಾನು ಯತ್ನಿಸುವೆನೋ, ಅಂಥ ಸಾಕ್ಷಿಯ ಸಾನ್ನಿಧ್ಯದ ಭಾವನೆಯಿಲ್ಲದ ಒಂದು ಕ್ಷಣವೂ ನನ್ನ ಜೀವನದಲ್ಲಿ ದೊರೆಯದು. ಪರಮಾತ್ಮನು ನನ್ನನ್ನು ತೊರೆದನು ಎಂಬ ಭಾವನೆಯುಳ್ಳ ಒಂದು ಕ್ಷಣವನ್ನೂ ಕೂಡ ನನ್ನ ಜೀವನದಲ್ಲಿ ನಾನು ನೆನಪಿಗೆ ತರಲರಿಯೆ.

(ಹರಿಜನ. ೨೪-೧೨-೩೮)

ನಾನು ನನ್ನಂತರಂಗದಲ್ಲಿ ಪರಮಾತ್ಮನ ಸಾನ್ನಿಧ್ಯವನ್ನು ಭಾವಿಸುತ್ತಿರಲಿಲ್ಲವಾದರೆ, ಪ್ರತಿನಿತ್ಯ ಇಷ್ಟೊಂದು ವ್ಯಸನವನ್ನೂ ನೈರಾಶ್ಯವನ್ನೂ ಕಾಣುತ್ತಿರುವಾಗ ನಾನು ಹುಚ್ಚು ಹುಚ್ಚಾಗಿ ಕೂಗುವ ಮರುಳನಾಗಬಹುದಾಗಿತ್ತು. ಇಲ್ಲವೆ, ಹೂಗ್ಲಿ ನದಿಯ ಪಾಲಾಗುತ್ತಿದ್ದೆ.

(ಯಂಗ್ ಇಂಡಿಯಾ. ೬-೮-೨೫)

ದಿನಗಳು ಕಳೆದಂತೆ ನನ್ನ ರಕ್ತನಾಳಗಳ ಪ್ರತಿಯೊಂದು ಕಣದಲ್ಲಿ ಪರಮಾತ್ಮನ ಈ ಸಜೀವ ಸಾನ್ನಿಧ್ಯವನ್ನು ನಾನು ಅನುಭವಿಸುತ್ತಿರುವೆ. ಆ ಭಾವನೆಯು ಇದ್ದಿಲ್ಲವಾದರೆ, ನನಗೆ ಹುಚ್ಚು ಹಿಡಿಯಬಹುದಾಗಿತ್ತು. ನನ್ನ ಮನಃಶಾಂತಿಯನ್ನು ಕದಡಿಸುವ ಅನೇಕ ಸಂಗತಿಗಳು ಉಂಟು. ಈ ಸಾನ್ನಿಧ್ಯದ ಅರಿವು ಇಲ್ಲದ ಪಕ್ಷದಲ್ಲಿ, ಎಷ್ಟೋ ಸಂಗತಿಗಳು ನನ್ನನ್ನು ಆಮೂಲಾಗ್ರ ಅಲ್ಲಾಡಿಸಬಹುದಾಗಿತ್ತು. ಆದರೆ, ಅವೆಲ್ಲ ನನ್ನನ್ನು ಸೋಂಕದೆಯೆ ನನ್ನ ಒಳಯಿಂದ ಹಾದು ಹೋಗಿರುವವು.

(ಬಾಪೂ ಪತ್ರ ೪.)

## (೫೨) ದರ್ಶನವೆಂದರೆ ಸಾನ್ನಿಧ್ಯದ ಅರಿವು

ಪರಮಾತ್ಮನ ದರ್ಶನವೆಂದರೇನು? ಅದು ಭೌತಿಕ ಕಂಗಳಿಂದ ವಸ್ತುವೊಂದನ್ನು ಕಾಣುವದಲ್ಲ. ಇಲ್ಲವೆ ಪವಾಡವೊಂದನ್ನು ನಿರೀಕ್ಷಿಸುವದಲ್ಲ

ಪರಮಾತ್ಮನನ್ನು ಕಾಣುವದೆಂದರೆ, ಹೃದಯದಲ್ಲಿ ಆತನು ನೆಲಸಿರುವ ಸಂಗತಿಯನ್ನು ಅರಿಯುವದು ಈ ಅರಿವು ಉಂಟಾಗುವವರೆಗೆ, ಹಂಬಲವು ನೆಲೆಯಾಗಿ ನಿಲ್ಲಬೇಕು ಅರಿವು ಉಂಟಾದ ಕೂಡಲೆ ಅದು ತಾನೆ ಅಳಿಯುವದು ಈ ಅರಿವು ಸತತ ಪ್ರಯತ್ನದ ಕೊನೆಯ ಫಲ ಪರಮಾತ್ಮನು ಮಾನವನ ಹೃದಯ ಮಂದಿರದಲ್ಲಿ ನೆಲೆಸಿರುವ

ನಾವು ಈ ಕಂಗಳಿಂದ ಪರಮಾತ್ಮನನ್ನು ಕಾಣುವೆವು ಪರಮಾತ್ಮನು ಅಶರೀರ ಚೈತನ್ಯ ಆದುದರಿಂದ ಅವನು ಶ್ರದ್ಧೆಯ ಕಂಗಳಿಗೆಯೆ ಕಾಣುವನು. ನಮ್ಮ ಅಂತರಂಗದಲ್ಲಿ ದುಷ್ಟ ವಿಚಾರಗಳ ಕಾಟವೂ ಭೀತಿಯೂ ಇಲ್ಲದಿದ್ದರೆ, ಅಲ್ಲಿ ಸಂತತವಾಗಿ ಸಂತಸವೇ ನೆಲೆಗೊಂಡಿದ್ದರೆ, ಅದೊಂದು ನಮ್ಮಲ್ಲಿಯ ಪರಮಾತ್ಮನ ಸಾನ್ನಿಧ್ಯದ ಕುರುಹೇ ಸರಿ. ನಿಜವಾಗಿ, ಅವನು ಅಲ್ಲಿ ಸದೈವ ವಾಸಿಸಿರುವ. ಆದರೆ ನಮ್ಮಲ್ಲಿ ಶ್ರದ್ಧೆಯಿಲ್ಲದುದರಿಂದ ನಾವು ಅವನ ಇರವನ್ನು ಅರಿಯುವದಿಲ್ಲ. ಆದ್ದರಿಂದ ವಿಪುಲ ವ್ಯಸನವನ್ನು ಅನುಭವಿಸುವೆವು, ನಾವು ಒಮ್ಮೆ ನಿಜವಾದ ಶ್ರದ್ಧೆಯನ್ನು ಬೆಳೆಸಿದೆವೆಂದರೆ ಸಂಕಟಗಳು ನಮ್ಮ ಶಾಂತಿಯನ್ನು ಅಳಿಸಲರಿಯವು

(ಮಹಾದೇವ ದೇಸಾಯಿ ದಿನಚರಿ)

ವಿಶ್ವವನ್ನು ಪರಮಾತ್ಮನ ವಿವಿಧಾಂಗಗಳೆಂದು ಕಾಣುವವನು, ಆತನ ಆನಂದಮಯ ದರ್ಶನವನ್ನು ನಿಶ್ಚಿತವಾಗಿ ಪಡೆಯುವನು ಈ ದರ್ಶನವು ಲಭಿಸದಿರುವವರೆಗೆ ನಮ್ಮ ಪಾರಮಾರ್ಥಿಕ ಜ್ಞಾನಸಾಧನೆಗಳೆಲ್ಲ ವಿಫಲವಾದವುಗಳು (ಮಹಾದೇವ ದೇಸಾಯಿ ದಿನಚರಿ)

ನಾನು ಸೂರ್ಯಾಸ್ತದ ಸೋಜಿಗವನ್ನು ಇಲ್ಲವೆ ಚಂದಿರನ ಅಂದಚಂದವನ್ನು ಮೆಚ್ಚುವಾಗ, ನನ್ನ ಹೃದಯವು ಸೃಷ್ಟಿಕರ್ತನನ್ನು ಆರಾಧಿಸಲು ಹಿಗ್ಗುತ್ತದೆ ಮತ್ತು ಆತನ ಸೃಷ್ಟಿಯಲ್ಲೆಲ್ಲ ಆತನ ಕಾರುಣ್ಯದ ಕುರುಹುಗಳನ್ನು ಕಾಣಲು ನಾನು ಯತ್ನಿಸುವೆ. (ಯಂಗ್ ಇಂಡಿಯಾ. ೧೩-೧೧-೨೪)

## (೫೩) ಆತನ ರಕ್ಷಣ–ಮಾರ್ಗದರ್ಶನಗಳ ಮನವರಿಕೆ

ನಿಮ್ಮಲ್ಲಿ ಸಜೀವ ಪರಮಾತ್ಮನ ಸಜೀವ ಶ್ರದ್ಧೆಯು ನೆಲೆಸಿದ್ದರೆ, ಆತನ ಚಿರಂತನ ಸಾನ್ನಿಧ್ಯವು ನಿಮ್ಮನ್ನು ಕಾಪಾಡುವದು ಎಂಬ ಭಾವ

ನೆಯು ನಿಮ್ಮಲ್ಲಿ ಮೂಡುವುದು ಆ ಅವಸ್ಥೆಯನ್ನು ಪಡೆಯುವವರೆಗೆ, ಅಸ್ಥಿ-ಮಾಂಸದಿಂದ ಕೂಡಿದ ಮಾನವನಲ್ಲಿ ಶ್ರದ್ಧೆಯು ಯಾವ ವಿಧದಿಂದಲೂ ಪ್ರಯೋಜನಕಾರಿಯಾಗಲಾರದು ಅದೊಂದು ಮುಂದ ಜೊಂಡನ್ನು ನಂಬಿದಂತೆಯೆ ಸರಿ (ಬಾಪೂ ಪತ್ರಗಳು)

ಪರಮಾತ್ಮನು, ತನಗೆ ಬೇರೊಂದು ಕೆಲಸವಿಲ್ಲದಂತೆ, ನಮ್ಮೊಡನಿರುವ, ನಮ್ಮ ಯೋಗಕ್ಷೇಮವನ್ನು ನಿರ್ವಹಿಸುವ ಇದು ಹೇಗಾಗುವದೆಂಬುದನ್ನು ನಾನರಿಯೆ ಅದು ಹಾಗಾಗುವದೆಂಬುದನ್ನು ಮಾತ್ರ ಬಲ್ಲೆ ಶ್ರದ್ಧೆಯುಳ್ಳವರ ಎಲ್ಲ ಚಿಂತೆಗಳು ಅವರಿಂದ ದೂರವಾಗುವುವು (ಬಾಪೂ ಪತ್ರಗಳು)

ನಾವು ತೀರ ದುರ್ಬಲರಾದಾಗ ಪರಮಾತ್ಮನಲ್ಲಿ ದೃಢವಾದ ವಿಶ್ವಾಸವನ್ನಿರಿಸಿದರೆ ಅವನು ನಮಗೆ ಬಲವನ್ನು ನೀಡುವ (ಪ್ರಿಯ ಮಗುವಿಗೆ)

ಸುಮ್ಮನೆ ಚಿಂತಿಸುವುದು ಮೂರ್ಖತನವೆಂಬುದನ್ನು ನಾನು ಬಲ್ಲೆ ತನ್ನವರನ್ನೆಲ್ಲ ಕಾಯಲು, ಹಾಗೂ ಅವರಿಗೆ ಸರಿಯಾದ ದಾರಿಯನ್ನು ಕಾಣಿಸಲು, ಪರಮಾತ್ಮನು ನಮ್ಮೆಲ್ಲರ ಮೇಲ್ಭಾಗದಲ್ಲಿ ನೆಲೆಸಿರುವ

“ ನನಗಾಗಿ ಬಿರಿದಿರುವ ಪ್ರಾಚೀನ ಶಿಲೆಯೆ !
ನಿನ್ನಲ್ಲಿ ಎನ್ನ ಬೈತಿಡಗೊಡಿಸು ”.

## ೨ ದೇವರ ಮಾರ್ಗದರ್ಶನ

### (೫೪) ಪರಮಾತ್ಮನು ದಿನವೂ ಪ್ರಕಟನಾಗುವ

ನನಗೆ ಭಗವತ್ಸಂಕಲ್ಪದ ದಿವ್ಯದರ್ಶನ ಲಭಿಸಿರುವುದು ಅವನು ದಿನವೂ ಪ್ರತಿ ಮಾನವನಿಗೂ ಕಾಣಿಸಿಕೊಳ್ಳುವನೆಂಬುದು ನನ್ನ ದೃಢವಾದ ನಂಬಿಕೆ ಆದರೆ, ನಾವು ಆತನ ಅಂತರ್ವಾಣಿಗೆ ನಮ್ಮ ಕಿವಿಗಳನ್ನು ಮುಚ್ಚುವೆವು ನಮ್ಮೆದುರಿರುವ ‘ಜ್ಯೋತಿಸ್ತಂಭ’ಕ್ಕೆ ನಾವು ನಮ್ಮ ಕಂಗಳನ್ನು ಮುಚ್ಚುವೆವು ಆತನ ಸರ್ವವ್ಯಾಪಿತ್ವವನ್ನು ನಾನು ಅನುಭವಿಸುವೆ. (ಯಂಗ್ ಇಂಡಿಯಾ ೨೫-೯-೨೧)

ಪರಮಾತ್ಮನ ದನಿಯನ್ನು ನಾನು ಕೇಳಬಲ್ಲೆ ಎಂದು ಸಾಧಿಸಲಿರುವ ನನ್ನ ಅಧಿಕಾರವು ಹೊಸದೇನೂ ಅಲ್ಲ. ದುರ್ದೈವದಿಂದ ನನ್ನ ಆ ಅಧಿಕಾರವನ್ನು ಸಿದ್ಧಗೊಳಿಸಲು ಪರಿಣಾಮಗಳನ್ನುಳಿದು ಅನ್ಯ ಉಪಾಯವನ್ನು ನಾನರಿಯೆ. ತಾನು ನಿರ್ಮಿಸಿದ ಪ್ರಾಣಿಗಳ ಪರೀಕ್ಷೆಗೆ ವಿಷಯವಾಗಲು ಒಪ್ಪಿಕೊಂಡರೆ, ಪರಮಾತ್ಮನು ಪರಮಾತ್ಮನೇ ಆಗಲಾರ. ಆದರೆ, ಪ್ರೀತಿಯಿಂದ ಅವನ ದಾಸನಾದವನಿಗೆ ವಿಷಮಸಂಕಟಗಳೊಳಗಿಂದ ಹಾದು ಹೋಗಲು ಅವನು ಬಲವನ್ನು ಕೊಟ್ಟೇ ತೀರುವನು. ನಾನು ಕಳೆದ ಅರ್ಧ ಶತಕಕ್ಕಿಂತಲೂ ಹೆಚ್ಚು ಕಾಲ ಸ್ವಸಂತೋಷದಿಂದ ಈ ನಿಷ್ಠುರತಮ ಪ್ರಭುವಿನ ದಾಸನಾಗಿರುವೆ. ವರ್ಷಗಳು ಕಳೆದಂತೆ ಅವನ ದನಿಯು ಹೆಚ್ಚು ಹೆಚ್ಚು ಸ್ಪಷ್ಟವಾಗಿ ಕೇಳಿಬರಲಿದೆ. ನನ್ನ ತೀರ ಕಗ್ಗತ್ತಲೆಯ ಗಳಿಗೆಯಲ್ಲಿಯೂ ಆತನು ನನ್ನನ್ನು ಎಂದೂ ತೊರೆಯಲಿಲ್ಲ. ನನ್ನ ಮನಸ್ಸನ್ನು ವಿರೋಧಿಸಿಯೂ ಅವನು ನನ್ನನ್ನು ಕಾಯ್ದಿರುವ ಮತ್ತು ನನಗೆ ಎಳ್ಳಷ್ಟೂ ಸ್ವಾತಂತ್ರ್ಯವನ್ನು ದಯಪಾಲಿಸಿಲ್ಲ. ಅವನಲ್ಲಿಯ ನನ್ನ ಅರ್ಪಣಭಾವವು ಬೆಳೆದಂತೆ ನನ್ನ ಆನಂದವೂ ಬೆಳೆದಿರುವುದು.

(ಹರಿಜನ. ೬-೫-೩೩)

ಈ ಅಂತರ್ವಾಣಿಯು ಬಣ್ಣಿಸಬಾರದಂತಹುದು. ಆದರೆ ಒಮ್ಮೊಮ್ಮೆ ನಾವು ಅಂತರಂಗದಿಂದ ಸ್ಫೂರ್ತಿಯನ್ನು ಪಡೆಯಲಿರುವೆವು ಎಂದು ನಮಗೆ ಅನಿಸುವುದು. ನಾನು ಅದನ್ನು ಗುರುತಿಸಲು ಕಲಿತದ್ದು ಸುಮಾರು ಕ್ರಿ. ಶ. ೧೯೦೬ರಲ್ಲಿ, ಪ್ರಾರ್ಥನೆಯ ಕಾಲಕ್ಕೆ. ನನಗೆ ಅದರ ಜ್ಞಾಪಕವಿದೆ. ಅದೊಂದನ್ನು ಬಿಟ್ಟರೆ, ನನ್ನ ಜೀವನದಲ್ಲಿ ಕೆಲ ಹೊಸ ಅನುಭವ ಬಂದಂತೆ ನನಗೆ ಎಂದೂ ಅನಿಸಿಲ್ಲ. ನನ್ನ ನೆತ್ತಿಯ ಮೇಲಿನ ಕೂದಲು ಬೆಳೆದಂತೆ, ನನ್ನ ಆಧ್ಯಾತ್ಮಿಕ ಬೆಳವಣಿಗೆಯು ಅಜ್ಞಾತವಾಗಿಯೆ ಆಗಿರುವುದು.

(ಮಹಾದೇವ ದೇಸಾಯಿ ದಿನಚರಿ)

## (೫೫) ಶಾಂತವಾದ ಒಳದನಿ

ಹಲವರನ್ನು ಗೊಂದಲಗೊಳಿಸಿದ ಮೊದಲನೆಯ ಮಾತೆಂದರೆ ಪರಮಾತ್ಮನ ವಾಣಿ. ಅದೆಂತಹುದು? ನಾನು ಕೇಳಿದುದು ಏನನ್ನು? ನಾನು ಪುರುಷನೊಬ್ಬನನ್ನು ಕಂಡೆನೇ? ಇಲ್ಲದಿದ್ದರೆ ಆ ವಾಣಿಯು ನನ್ನೆಡೆ ಬಂದುದು ಎಂತು? ಇವು ಮಹತ್ವದ ಪ್ರಶ್ನೆಗಳು.

ನನ್ನ ಮಟ್ಟಿಗೆ, ದೇವವಾಣಿ, ವಿವೇಕವಾಣಿ, ಸತ್ಯವಾಣಿ, ಅಂತರ್ವಾಣಿ, ಶಾಂತವಾದ ಅಂತರ್ವಾಣಿ—ಇವೆಲ್ಲ ಒಂದೇ ಅರ್ಥದ ಶಬ್ದಗಳು. ನಾನು ಯಾವ ರೂಪವನ್ನೂ ಕಾಣಲಿಲ್ಲ. ಅದಕ್ಕಾಗಿ ಎಂದೂ ಪ್ರಯತ್ನವನ್ನೂ ನಾನು ಮಾಡಿಲ್ಲ. ಯಾಕೆಂದರೆ, ಪರಮಾತ್ಮನು ನಿರಾಕಾರನಿರುವ ಎಂಬುವನ್ನು ನಾನು ಸದೈವ ನಂಬಿರುವೆ. ಆದರೆ, ನಾನು ಕೇಳಿದ ದನಿಯು ದೂರದಿಂದ ಬಂದಂತಿತ್ತು, ಆದರೂ ತೀರ ಸಮೀಪದಲ್ಲಿತ್ತು. ನನ್ನೊಡನೆ ಖಂಡಿತವಾಗಿ ಮಾತಾಡುತ್ತಿರುವ ಮನುಜನೊಬ್ಬನ ಧ್ವನಿಯಂತೆ ಅದು ಸ್ಪಷ್ಟವಾದುದೂ ತಡೆಯಲು ಬಾರದಂತಹುದೂ ಇತ್ತು ಎಂಬುದರಲ್ಲಿ ಸಂದೇಹವಿದ್ದಿಲ್ಲ. ಈ ಧ್ವನಿಯನ್ನು ಕೇಳುವ ಪೂರ್ವದಲ್ಲಿ, ನನ್ನಂತರಂಗದಲ್ಲಿ ತುಮುಲವಾದ ಹೋರಾಟವೇ ಸಾಗಿದ್ದಿತು. ಒಮ್ಮೆ ಆ ಧ್ವನಿಯು ನನಗೆ ಕೇಳಬಂತು. ನಾನದನ್ನು ಕೇಳಿದೆ. ಅದೇ ಧ್ವನಿಯೆಂಬುದನ್ನು ನಿಶ್ಚಯಿಸಿದೆ. ಕೂಡಲೆ ಅಂತರಂಗದಲ್ಲಿಯ ಹೋರಾಟವು ನಿಂತಿತು. ನಾನು ಶಾಂತನಾದೆ. ಅದರ ಸೂಚನೆಯ ಮೇರೆಗೆ **ನಿಶ್ಚಯ**ವು ಮಾಡಲಾಯಿತು. ಉಪವಾಸದ ದಿನಾಂಕ–ಗಂಟೆಗಳನ್ನು ಗೊತ್ತುಗೊಳಿಸಲಾಯಿತು. ನಾನು ಆನಂದಭರಿತನಾದೆ. ಇದು ರಾತ್ರಿ ೧೧ರಿಂದ ೧೨ ಗಂಟೆಗಳ ನಡುವೆ ನಡೆಯಿತು. ನಾನು ಉಲ್ಲಸಿತನಾದೆ. ನಾನು ಕೇಳಿದುದು ನಿಜವಾಗಿಯೂ ಒಂದು ಧ್ವನಿಯಿತ್ತು, ಅದು ನನ್ನ ಸಂತಪ್ತ ಕಲ್ಪನೆಯ ಪ್ರತಿಧ್ವನಿಯಿರಲಿಲ್ಲ ಎಂಬುದನ್ನು ಸಿದ್ಧಗೊಳಿಸಲು ನಾನು ಬೇರೆ ಪ್ರಮಾಣಗಳನ್ನು ಕೊಡಬಲ್ಲೆನೇ? ಸಂಶಯಾತ್ಮನನ್ನು ಮನಗಾಣಿಸಲು ನಾನು ಬೇರಾವ ಪ್ರಮಾಣಗಳನ್ನೂ ಕೊಡಲರಿಯೆ. ಇದೆಲ್ಲ ಆತ್ಮವಂಚನೆ ಅಥವಾ ಮನೋವಿಕಲ್ಪವೆಂದು ಬಗೆಯಲು ಅವನು ಸ್ವತಂತ್ರನಿರುವ. ಅದು ಹಾಗೆ ಇರುವ ಸಂಭವವೂ ಇಲ್ಲದಿಲ್ಲ. ಅದಕ್ಕೆ ವಿರುದ್ಧವಾದ ಪ್ರಮಾಣಗಳನ್ನು ನಾನು ಕೊಡಲರಿಯೆ. ಆದರೆ, ನನ್ನನ್ನು ವಿರೋಧಿಸುವ ಇಡೀ ಪ್ರಪಂಚದ ಏಕಮತದ ಪ್ರತಿನಿರ್ಣಯವೂ ಕೂಡ, ನಾನು ಕೇಳಿದುದು ದೇವವಾಣಿ ಎಂಬ ನನ್ನ ನಂಬಿಕೆಯನ್ನು ವಿಚಲಿತಗೊಳಿಸಲಾರದು.

ಆದರೆ, ಪರಮಾತ್ಮನೇ ನಮ್ಮ ಕಲ್ಪನೆಯ ನಿರ್ಮಿತಿ ಎಂದು ಕೆಲವರು ಬಗೆಯುವರು. ಈ ಅಭಿಪ್ರಾಯವು ಸರಿಯಾದುದಾದರೆ, ಯಾವುದೂ

ನಿಜವಿಲ್ಲ, ಎಲ್ಲವೂ ನಮ್ಮ ಕಲ್ಪನೆಯ ನಿರ್ಮಾಣವೇ ಸರಿ. ಆದುದರಿಂದ, ನನ್ನ ಕಲ್ಪನೆಯ ಪ್ರಭಾವವು ನನ್ನ ಮೇಲೆ ಇರುವುದರಿಂದ ನಾನು ಅದಕ್ಕೆ ಒಳಗಾಗಿಯೆ ವರ್ತಿಸಬಲ್ಲೆ. ವಸ್ತುಗಳ ಸತ್ಯತೆಯು ಬರಿ ಸಾಪೇಕ್ಷವಾದುದು. ನನಗೆ ಆ ಧ್ವನಿಯು, ನನ್ನ ಸ್ವಂತ ಅಸ್ತಿತ್ವಕ್ಕಿಂತಲೂ ಹೆಚ್ಚು ನಿಜವಾದುದು ಇತ್ತು. ಅದು ನನ್ನನ್ನು ಎಂದೂ ತೊರೆದಿಲ್ಲ, ಇಷ್ಟೇ ಏಕೆ, ಯಾರನ್ನೂ ತೊರೆದಿಲ್ಲ.

ಆ ಧ್ವನಿಯನ್ನು ಕೇಳಬಯಸುವ ಪ್ರತಿಯೊಬ್ಬನೂ ಅದನ್ನು ಕೇಳಬಲ್ಲ. ಆದರೆ ಉಳಿದೆಲ್ಲ ವಿಷಯಗಳಂತೆ ಇದೂ ನಿಶ್ಚಿತವಾದ ಪೂರ್ವಸಿದ್ಧತೆಯನ್ನು ಅಪೇಕ್ಷಿಸುವುದು. (ಹರಿಜನ ೮-೭-೩೩)

ನನ್ನ ಅಂತರಂಗದಲ್ಲಿಯ ಈ ಶಾಂತವಾದ ಅಂತರ್ವಾಣಿಯನ್ನು ಅಡಗಿಸಿದಕ್ಷಣ, ನಾನು ನನ್ನ ಉಪಯುಕ್ತತೆಯನ್ನು ಕಳೆದುಕೊಳ್ಳುವೆ. (ಯಂಗ್ ಇಂಡಿಯಾ ೩-೧೨-೨೫)

## (೫೭) ಅದನ್ನು ಕೇಳಲು ಅಭ್ಯಾಸ ಬೇಕು

ಈ ಅಂತರ್ವಾಣಿಯು ಕೆಲವರೊಡನೆ ಮಾತನಾಡುವ ಶಕ್ಯತೆಯನು ಪ್ರಶ್ನಿಸುವವರನ್ನು ನಾನಂತೂ ಅರಿಯೆ. ಈ ಅಂತರ್ವಾಣಿಯ ಆದೇಶದ ಮೇರೆಗೆ ಮಾತನಾಡಬಲ್ಲ ಒಬ್ಬ ಮನುಜನ ಅಧಿಕಾರವನ್ನಾದರೂ ನಿಜವಾಗಿ ಸಮರ್ಥಿಸಲು ಬಂದರೆ, ಅದೊಂದು ಪ್ರಪಂಚಕ್ಕೆ ಲಾಭವೇ ಸರಿ. ಈ ಬಗೆಯ ತಮ್ಮ ಅಧಿಕಾರವನ್ನು ಹಲವರು ಸಾರಬಹುದು. ಆದರೆ, ಎಲ್ಲರೂ ಅದನ್ನು ಸಮರ್ಥಿಸಲರಿಯರು. ಹೀಗಿದ್ದರೂ, ಅನಧಿಕಾರಿಗಳನ್ನು ತಡೆಯುವುದಕ್ಕಾಗಿ ಅದನ್ನು ಅಡಗಿಸಬಾರದು, ಅಡಗಿಸಕೂಡದು. ಅನೇಕ ಜನರು ಈ ಅಂತರ್ವಾಣಿಯನ್ನು ನಿಜವಾಗಿ ಅರುಹುತ್ತಿದ್ದರೆ, ಅದರಿಂದ ಯಾವ ಬಗೆಯ ಗಂಡಾಂತರವೂ ಬರಲಾರದು. ಆದರೆ ದುರ್ದೈವದಿಂದ, ದಂಭಾಚಾರವನ್ನು ಅಲ್ಲಗಳೆಯುವ ಸಾಧನವೆ ಇಲ್ಲದಾಗಿದೆ. ಅನೇಕರು ಸದ್ಗುಣಗಳ ನಟನೆ ಮಾಡುವರೆಂದು ಅವುಗಳನ್ನು ಅಡಗಿಸಕೂಡದು. ಅಂತರ್ವಾಣಿಯ ಸಂದೇಶವನ್ನು ಸಲ್ಲಿಸುವ ತಮ್ಮ ಅಧಿಕಾರವನ್ನು ಹೇಳುವ ಜನರನ್ನು ಪ್ರಪಂಚದಲ್ಲೆಲ್ಲ ನಾವು ಸದೈವ ಕಾಣುತ್ತೇವೆ. ಅಲ್ಪಕಾಲ ನಡೆದ ಅವರ ಚಟುವಟಿಕೆಗಳಿಂದ ಪ್ರಪಂಚಕ್ಕೆ ಅಪಾಯವೇನೂ ಇಲ್ಲ.

ಆ ಧ್ವನಿಯನ್ನು ಕೇಳುವ ಸಾಮರ್ಥ್ಯ ಬರುವ ಪೂರ್ವದಲ್ಲಿ ಪ್ರತಿಯೊಬ್ಬನೂ ಸುದೀರ್ಘವಾದ, ತಕ್ಕಮಟ್ಟಿಗೆ ಕಠಿಣವಾದ ಅಭ್ಯಾಸಕ್ರಮವನ್ನು ಮುಗಿಸಬೇಕಾಗುವುದು ಮತ್ತು ಒಮ್ಮೆ ಅಂತರ್ವಾಣಿಯು ನುಡಿಯಿತೆಂದರೆ, ಅಲ್ಲಿ ಸಂದೇಹಕ್ಕೆ ಅವಕಾಶವೇ ಇರುವುದಿಲ್ಲ ಇಡೀ ಪ್ರಪಂಚವನ್ನು ಸದಾಕಾಲ ಯಶಸ್ವಿಯಾಗಿ ಮೋಸಗೊಳಿಸುವುದು ಯಾರಿಗೂ ಸಾಧ್ಯವಿಲ್ಲ ಆದ್ದರಿಂದ, ನನ್ನಂಥ ವಿನಮ್ರ ಮನುಜನು, ತಾನು ಅಂತರ್ವಾಣಿಯನ್ನು ಕೇಳಿದೆನೆಂದು ನಂಬಿ, ಅದರ ಆದೇಶದ ಅಧಿಕಾರವನ್ನು ಹೇಳುವ ಎದೆಗಾರಿಕೆಯನ್ನು ಕಾಣಿಸುವುದರಿಂದ, ಮತ್ತು ಅದನ್ನು ಅಲ್ಲಗಳೆಯಲು ಆಸ್ಪದ ಕೊಡದಿರುವುದರಿಂದ, ಅರಾಜಕತೆಯ ಗಂಡಾಂತರವೇನೂ ಒದಗದು. (ಹರಿಜನ ೧೮-೩-೩೩)

## (೫೭) ಅದು ಸ್ವಯಂ ಸೂಚನೆಯೇ?

ಒಬ್ಬ ಮನುಜನು 'ಒಳದನಿ'ಯನ್ನು ಕುರಿತು ಮಾತಾಡತೊಡಗಿದರೆ, ವಿಜ್ಞಾನಿಯು ಅದನ್ನು ಸ್ವಯಂಸೂಚನೆಯೆಂದು ಕರೆಯುವ ಪರಮಾತ್ಮನು ಅಂತರಂಗದಲ್ಲಿ ಇರುವುದರಿಂದ ಅದು ಸ್ವಯಂಸೂಚನೆಯೇನೋ ಸರಿ ಆದರೆ ವಿಜ್ಞಾನಿಯು ಅದನ್ನು ಸ್ವಯಂಸೂಚನೆಯೆಂದು ಕರೆವಾಗ, ಅದನ್ನು ಅವನು ಹೇಯವೆಂದೂ, ತ್ಯಾಜ್ಯವೆಂದೂ ಕಾಣುವನು ನಾನು 'ಸ್ವಯಂಸೂಚನೆ' ಎಂಬ ಶಬ್ದವನ್ನು ನನ್ನ ಸ್ವಂತ ಅರ್ಥದಲ್ಲಿ ಬಳಸುವೆ. ಈ 'ಒಳದನಿ'ಯನ್ನು 'ಸ್ವಯಂಸೂಚನೆ' ಎಂದು ಕರೆವಾಗ, ವಿಜ್ಞಾನಿಯು ಅದನ್ನು 'ಸೈತಾನನ ವಾಣಿ' ಎಂದು ಅರ್ಥಮಾಡುವನು ಅದು ಹಾಗೆ ಇರಲೂಬಹುದು ಕೆಲವು ಸಮಯಗಳಲ್ಲಿ ಸೈತಾನನ ವಾಣಿಯು 'ದೇವರ ಧ್ವನಿ'ಯಂತೆ ಮಾತನಾಡುವುದುಂಟು ಪರಮಾತ್ಮನ ಧ್ವನಿಯು ಪ್ರತಿಯೊಬ್ಬನ ಹೃದಯದಲ್ಲಿ ಕೇಳಬರುವುದಿಲ್ಲ ಅದನ್ನು ಕೇಳಬಯಸುವವರು ಕೆಲವೊಂದು ಅಭ್ಯಾಸಕ್ರಮವನ್ನು ಮುಗಿಸಬೇಕಾಗುವುದು ಅದಕ್ಕಾಗಿ ಕೆಲವು ನಿಯಮಗಳೂ ವಿಧಿಸಲಾಗಿವೆ. ನೀವವನ್ನು ಅನುಸರಿಸಿದರೆ ಅದರ ಸುಪರಿಣಾಮವು ಕಟ್ಟಿಟ್ಟಂತೆ ಲಭಿಸದಿರದು

(ಗಾಂಧೀಜೀಯೊಡನೆ ಸಂಭಾಷಣೆಗಳ )

ಮನುಜನು ತಪ್ಪೆಸಗುವ ಪ್ರಾಣಿ ತಾನು ಮುಂದಿರಿಸಿದ ಹೆಜ್ಜೆ ಸರಿಯಾದುದೆಂದವನು ನಿಶ್ಚಯವಾಗಿ ಎಂದೂ ಹೇಳಲರಿಯ. ತನ್ನ ಪ್ರಾರ್ಥನೆಗೆ ದೊರೆತ ಎತ್ತರವೆಂದು ಅವನು ಬಗೆಯುವ ವಿಷಯವು, ಅವನ ಹಮ್ಮಿನ ಮಾರ್ದನಿಯಿರಬಹುದು ಪರಮಾತ್ಮನಿಂದ ನಿರ್ದುಷ್ಟವಾದ ಮಾರ್ಗದರ್ಶನವು ಲಭಿಸಬೇಕಾದರೆ, ಮಾನವನ ಅಂತಃಕರಣವು ಪೂರ್ತಿಯಾಗಿ ನಿಷ್ಪಾಪವಾದುದೂ ದುರುಳತೆಯನ್ನು ತಳೆಯಲು ಅಪಾತ್ರವಾದುದೂ ಇರಲು ಬೇಕು ನಾನು ಅಂಥ ಅಧಿಕಾರವನ್ನು ಸಾಧಿಸುವೆ. ನನ್ನದು ಹೋರಾಡುವ, ಹೆಣಗುವ, ತಪ್ಪುವ ಅಪೂರ್ಣ ಜೀವ

(ಯಂಗ್ ಇಂಡಿಯಾ. ೨೫-೯-೨೪)

ಆತ್ಮಶುದ್ಧಿಯನ್ನು ಪಡೆಯಲು ಎಡೆಬಿಡದೆ ಯತ್ನಿಸಿ, ನಾನು ಅಂತರಂಗದಲ್ಲಿ ಮೆಲುದನಿಯನ್ನು ಸ್ಪಷ್ಟವಾಗಿಯೂ, ಯಥಾರ್ಥವಾಗಿಯೂ ಕೇಳುವ ಸಾಮರ್ಥ್ಯವನ್ನು ಕೆಲಮಟ್ಟಿಗೆ ಬೆಳಸಿಕೊಂಡಿರುವೆ

('ಮಹಾ ಉಪವಾಸ'ದಿಂದ)

## (೫೪) ಒಂದು ಮಹತ್ವದ ಅನುಭವ

ಒಂದು ಅನುಭವವು ನನ್ನ ಸ್ಮೃತಿಪಟಲದಲ್ಲಿ ಸ್ಪಷ್ಟವಾಗಿ ನೆಲೆಸಿರುವದು ಅದು ಅಸ್ಪೃಶ್ಯತಾ ನಿವಾರಣೆಗಾಗಿ ನಾನು ಕೈಕೊಂಡ ಇಪ್ಪತ್ತೊಂದು ದಿನಗಳ ಉಪವಾಸಕ್ಕೆ ಸಂಬಂಧಿಸಿರುವದು, ಮರುದಿನ ಬೆಳಿಗ್ಗೆ ಉಪವಾಸ ಕೈಕೊಳ್ಳುವದನ್ನು ಸಾರುವ ವಿಷಯವಾಗಿ ಯಾವ ಬಗೆಯ ಆಲೋಚನೆಯೂ ಇಲ್ಲದೆ ನಾನು ಪೂರ್ವರಾತ್ರಿ ನಿದ್ರೆಗೈದಿದ್ದೆ ರಾತ್ರಿ ಹನ್ನೆರಡು ಗಂಟೆಗೆ ಯಾರೋ ನನ್ನನ್ನು ಎಚ್ಚರಿಸಿದರು ಮತ್ತು ಒಂದು ದನಿಯು ಒಳಗಿನದೋ ಹೊರಗಿನದೋ ನಾನರಿಯೆ ನೀನು ಉಪವಾಸವನ್ನು ಕೈಕೊಳ್ಳಲೇ ಬೇಕು' ಎಂದು ಮೆಲುದನಿಯಲ್ಲಿ ಉಸುರಿತು. 'ಎಷ್ಟು ದಿನ'' ಎಂದು ನಾನು ಕೇಳಿದೆ 'ಇಪ್ಪತ್ತೊಂದು ದಿನ' ಎಂದದು ಉತ್ತರಿಸಿತು 'ಎಂದು ಪ್ರಾರಂಭಿಸಲಿ'' ಎಂದು ನಾನು ಕೇಳಿದ್ದಕ್ಕೆ 'ನಾಳೆ ಪ್ರಾರಂಭಿಸು' ಎಂದದು ಹೇಳಿತು, ನಾನು ಆ ಬಗೆಯ ನಿರ್ಣಯವನ್ನು ಮಾಡಿ ಶಾಂತರೀತಿಯಿಂದ ಮಲಗಿಕೊಂಡೆ ಬೆಳಗಿನ ಪ್ರಾರ್ಥನೆ ಮುಗಿಯುವವರೆಗೆ ನಾನು ನನ್ನ ಸಂಗಡಿಗರಿಗೆ ಏನನ್ನೂ ಹೇಳಲಿಲ್ಲ.

ತರುವಾಯ ನಾನವರ ಕೈಯಲ್ಲಿ ಒಂದು ಚೀಟಿಯನ್ನು ಕೊಟ್ಟೆ. ಅದರಲ್ಲಿ ನಾನು ನನ್ನ ನಿರ್ಣಯವನ್ನು ತಿಳಿಸಿದ್ದೆ. ನನ್ನ ನಿರ್ಣಯವು ಅಚಲವಾದುದು. ಅದನ್ನು ಕುರಿತು ಯಾರೂ ಯುಕ್ತಿವಾದವನ್ನು ಮಾಡಕೂಡದು ಎಂದೂ ನಾನದರಲ್ಲಿ ತಿಳಿಸಿದ್ದೆ. ಈ ಉಪವಾಸದಲ್ಲಿ ನಾನು ಬದುಕಲಾರೆ ಎಂದು ಡಾಕ್ಟರರು ಭಾವಿಸಿದರು. ಆದರೆ ನನ್ನಂತರಂಗದಲ್ಲಿಯ ಯಾವುದೋ ಒಂದು ಶಕ್ತಿ 'ನಾನು ಬದುಕಬಹುದು, ನಾನು ಮುಂದುವರಿಯಲೇಬೇಕು' ಎಂದು ಹೇಳಿತು. ನನ್ನ ಜೀವನದಲ್ಲಿ ಅಂಥ ಅನುಭವವು ಹಿಂದೆಯಾಗಲಿ ಮುಂದೆಯಾಗಲಿ ಎಂದೂ ಒದಗಲಿಲ್ಲ.

ಹೊಳೆಯುವುದೆಲ್ಲ ಹೊನ್ನಲ್ಲ ಎಂಬುದನ್ನು ನಾನು ಬಲ್ಲೆ. ಅದೇ ಮೇರೆಗೆ ಕಸಬು ಕಲಿತವನು ಅದನ್ನು ಮರೆಯಲರಿಯದಂತೆ ಪರಮಾತ್ಮನ ವಾಣಿಯನ್ನು ನಿಜವಾಗಿ ಕೇಳಿದವನು ಅದರಿಂದ ಹಿಂಜರಿಯುವುದು ಸಾಧ್ಯವಿಲ್ಲವೆಂಬುದನ್ನೂ ನಾನು ಬಲ್ಲೆ. ಅದನ್ನು ಕೇಳುವುದರಿಂದ ಜನರ ಜೀವನವು ದಿನವೂ ಹೆಚ್ಚು ಹೆಚ್ಚು ಸಂಪನ್ನವಾಗಲುಬೇಕು.

(ಹರಿಜನ ೭-೧೦-೩೯)

## (೫೯) ಸಹಜ ಪ್ರವೃತ್ತಿಯ ಸ್ಫುರಣ

ನಾನು ಇನ್ನೊಂದು ಮಾತನ್ನು ಹೇಳಿ ಮುಗಿಸುವೆ. ನನ್ನ ಜೀವನದಲ್ಲಿ ನಾನು ಮಾಡಿದ ಪ್ರತಿಯೊಂದು ಮಹತ್ವದ ಸಂಗತಿಯೂ, ನನ್ನ ಬುದ್ಧಿಯಿಂದ ಪ್ರೇರಿತವಾಗಿರುವುದಿಲ್ಲ, ಅದು ಸಹಜಪ್ರವೃತ್ತಿಯಿಂದ—ಪರಮಾತ್ಮನಿಂದ ಪ್ರೇರಿತವಾಗಿರುವುದು ಎಂದು ನಾನು ಹೇಳಬಯಸುವೆ. ಕ್ರಿ. ಶ. ೧೯೩೦ ಮಾರ್ಚ ತಿಂಗಳಲ್ಲಿಯ ನನ್ನ ದಾಂಡಿಯ ಯಾತ್ರೆಯನ್ನು ತೆಗೆದುಕೊಳ್ಳಿ. ಉಪ್ಪಿನ ಶಾಸನಭಂಗವು ಹೇಗೆ ಪರಿಣಮಿಸಬಹುದು ಎಂಬುದರ ಬಗೆಗೆ ನನಗೆ ಎಳ್ಳಷ್ಟೂ ಸಂದೇಹ ಬರಲಿಲ್ಲ. ಪಂಡಿತ ಮೋತೀಲಾಲ ನೆಹರೂ ಮತ್ತು ಇತರ ಸ್ನೇಹಿತರು ತುಂಬ ಸಿಡಿಮಿಡಿಗೊಂಡಿದ್ದರು. ನಾನು ಏನನ್ನು ಮಾಡಬಹುದೆಂಬುದನ್ನು ಅವರು ಅರಿಯದವರಾಗಿದ್ದರು, ಮತ್ತು ನನಗೂ ಅದರ ಬಗೆಗೆ ಏನೂ ಗೊತ್ತಿಲ್ಲದ್ದರಿಂದ ನಾನೂ ಏನನ್ನೂ ಹೇಳಲರಿಯದವನಾಗಿದ್ದೆನು, ಆದರೆ ಅದು ಮಿಂಚಿನಂತೆ ಹೊಳೆಯಿತು,

ಮತ್ತು ನಾಡನ್ನೆಲ್ಲ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಅಲ್ಲಾಡಿಸಲು ಸಮರ್ಥವಾಯಿತೆಂಬುದು ನಿಮಗೆಲ್ಲ ತಿಳಿದ ಮಾತಾಗಿದೆ
(ಹರಿಜನ. ೧೪-೫-೩೮)

## (೬೦) ಪರಮಾತ್ಮನ ಸಂತತವಾದ ಸ್ಮರಣೆಯ ಸೇವೆ

ಈ ಅಂತರ್ವಾಣಿಯ ಶ್ರವಣವು, ಈ ಬಗೆಯ ಶ್ರವಣದ ಪೂರ್ವ ಪಾತ್ರತೆಯನ್ನು ಅಪೇಕ್ಷಿಸುವುದು, ಮತ್ತು ಈ ಪಾತ್ರತೆಯು ಸಂತತವಾದ ಸ್ಮರಣೆಯುಳ್ಳ ಯತ್ನದಿಂದ—ಪರಮಾತ್ಮನ ಸೇವೆಯಿಂದ ಲಭಿಸುವುದು. ಹುಲ್ಲುಕಡ್ಡಿಯ ಮೊನೆಯಂಥ ಸಣ್ಣ ಸಲಿಕೆಯು ಮುಖಾಂತರ ಸಾಗರವನ್ನು ಬರಿದಾಗಿಸುವ ಯತ್ನದಂತೆ ಈ ಕ್ರಮವು ಎಂದು ಶಂಕರಾಚಾರ್ಯರು ಉಸುರಿರುವರು ಈ ಮೇರೆಗೆ ಈ ಪ್ರಕ್ರಿಯೆಯು ಜನ್ಮಜನ್ಮಾಂತರಗಳಿಗೆ ಸಾಗಿಸಲಾಗಿರುವುದರಿಂದ ಅವಶ್ಯವಾಗಿ ಅನಂತವಾದುದು

ಹೀಗಿದ್ದರೂ, ಉಸಿರು ಎಳೆಯುವ ಹಾಗೂ ಎವೆಗಳು ಇಕ್ಕುವ ಪ್ರಕ್ರಿಯೆಯು ತಿಳಿಯದಂತೆಯೇ ಸಹಜವಾಗಿ ನಡೆಯುವಂತೆ, ಈ ಯತ್ನವೂ ಸಹಜವಾಗಬೇಕು, ಇದು ಜೀವಿಸುವ ಪ್ರಕ್ರಿಯೆಯಲ್ಲಿ ಬೆರೆತುಬಿಡುವದು. ಈ ಪ್ರಯತ್ನ, ಪದ್ಧತಿಯನ್ನು ನಾನು ನಿಮ್ಮ ಅನುಸರಣಕ್ಕಾಗಿ ಶಿಫಾರಸು ಮಾಡುವೆ ಕೆಲವು ಸಮಯದಲ್ಲಿ ನೀವು ವಿವೇಕವಾಣಿಯ ಶ್ರೇಷ್ಠತಮ ಕರೆಯನ್ನು ಮನ್ನಿಸಬೇಕಾಗುತ್ತದೆ ಈ ವಿಧೇಯತೆಯ ಮೂಲಕ ನಿಮಗೆ ಕಟುತರವಾದ ಕಂಬನಿಗಳನ್ನು ಸುರಿಸಬೇಕಾಗಬಹುದು ಅದಕ್ಕೂ ಮಿಗಿಲಾಗಿ, ನಿಮ್ಮ ಸ್ನೇಹಿತರಿಂದ, ಕುಟುಂಬದವರಿಂದ, ರಾಜ್ಯದಿಂದ, ನಿಮ್ಮ ಪ್ರಾಣಪ್ರಿಯವಾದ ಎಲ್ಲವುಗಳಿಂದ ಅಗಲಬೇಕಾಗಬಹುದು ಆದರೂ ನೀವದನ್ನು ಬಿಡಕೂಡದು ಯಾಕೆಂದರೆ ಈ ವಿಧೇಯತೆಯೆ ನಮ್ಮ ಪ್ರಕೃತಿಧರ್ಮ (ಗಾಂಧೀಜಿಯ ಭಾಷಣಗಳು, ಬರಹಗಳು)

# ರಾಮನಾಮ

## (೧) ಒಳ್ಳೆಯ ಬೀಜದ ಬಿತ್ತನ

ನನ್ನ ಆರು ಅಥವಾ ಏಳನೆಯ ವಯಸ್ಸಿನಿಂದ ಹದಿನಾರನೆಯ ವಯಸ್ಸಿನವರೆಗೆ ನಾನು ಪಾಠಶಾಲೆಗೆ ಹೋಗುತ್ತಿದ್ದೆ. ಆ ಕಾಲದಲ್ಲಿ ಧರ್ಮದ ವಿಷಯವೊಂದನ್ನು ಬಿಟ್ಟು ಬೇರೆ ಏನೇನನ್ನೋ ಕಲಿಸಿದರು. ನನ್ನ ಉಪಾಧ್ಯಾಯರು ತಮಗೆ ಯಾವ ಪ್ರಯಾಸವೂ ಇಲ್ಲದೆ ನನಗೆ ಏನನ್ನು ಕಲಿಸಬಹುದಾಗಿತ್ತೋ, ಅದನ್ನು ಅವರಿಂದ ಹೊಂದಲಾರದೆ ಹೋದೆ, ಆದರೂ ನನ್ನ ಸುತ್ತಮುತ್ತಲಿನ ಸನ್ನಿವೇಶದಿಂದ ಅಲ್ಲೊಂದು ಇಲ್ಲೊಂದು ಅಂಶವನ್ನು ಗ್ರಹಿಸಿದೆ. ಇಲ್ಲಿ ಧರ್ಮ ಶಬ್ದವನ್ನು ಅದರ ಅತ್ಯಂತ ವ್ಯಾಪಕವಾದ ಆತ್ಮ—ಸಾಕ್ಷಾತ್ಕಾರ ಅಥವಾ ಆತ್ಮಜ್ಞಾನ, ಎಂಬ ಅರ್ಥದಲ್ಲಿ ಉಪಯೋಗಿಸಿದೇನೆ.

ನಾನು ವೈಷ್ಣವ ವಂಶದಲ್ಲಿ ಜನಿಸಿದ್ದುದರಿಂದ ಆಗಾಗ ಹವೇಲಿಗೆ ಹೋಗಬೇಕಾಗಿದ್ದಿತು, ಅದು ನನ್ನ ಮನಸ್ಸಿಗೆ ಹಿಡಿಸಿರಲಿಲ್ಲ. ದೇವಾಲಯದ ಆಡಂಬರ ಮತ್ತು ವೈಭವಗಳು ನನಗೆ ರುಚಿಸಲಿಲ್ಲ. ಜೊತೆಗೆ ಅಲ್ಲಿ ಅನೀತಿಯೂ ನಡೆಯುವುದೆಂದು ತಿಳಿದು ಬಂದುದರಿಂದ ಎಲ್ಲ ಆಸಕ್ತಿಯೂ ಹೋಯಿತು. ಹೀಗೆ ಹವೇಲಿಯಿಂದಲೂ ನನಗೆ ಪ್ರಯೋಜನವಾಗಲಿಲ್ಲ,

ಆದರೆ, ಯಾವುದರಿಂದಲೂ ನಾನು ಪಡೆಯಲಾರದುದನ್ನು ನಮ್ಮ ಕುಟುಂಬದ ವೃದ್ಧ ಸೇವಕಿಯೂ ದಾದಿಯೂ ಆಗಿದ್ದ ರಂಭಾ ಎಂಬಾಕೆಯ ಪ್ರೇಮದಿಂದ ಪಡೆದೆ. ನನಗೆ ದೆವ್ವ ಪಿಶಾಚಿಗಳ ಭೀತಿಯಿತ್ತು, ಈ ಭೀತಿ ಪರಿಹಾರವಾಗಲು ರಾಮನಾಮ ಪುನಶ್ಚರಣೆ ಮದ್ದೆಂದು ರಂಭಾ ಸೂಚಿಸಿದಳು. ರಂಭಾ ವಿಷಯದಲ್ಲಿ ನನಗೆ ತುಂಬ ನಂಬಿಕೆ ಇದ್ದಿತು. ದೆವ್ವ ಪಿಶಾಚಿಗಳ ಭೀತಿಯಿಂದ ಪಾರಾಗಬೇಕೆಂದು ಆ ಚಿಕ್ಕ ವಯಸ್ಸಿನಲ್ಲಿ ಅವಳ ಸೂಚನೆಯಂತೆ ರಾಮನಾಮ ಪುನಶ್ಚರಣೆಗೆ ಆರಂಭ ಮಾಡಿದೆ

ಇದು ಕೆಲವು ಕಾಲ ನಡೆದು ನಿಂತು ಹೋದರೂ ಬಿತ್ತಿದ ಒಳ್ಳೆಯ ಬೀಜ ನಿಷ್ಫಲವಾಗಲಿಲ್ಲ. ಆ ಸಾಧ್ವಿ ರಂಭಾ ಬಿತ್ತಿದ ಬೀಜದ ಫಲವಾಗಿಯೇ ರಾಮನಾಮ ಇಂದು ನನಗೆ ತಾರಕ ಮಂತ್ರವೆನಿಸಿದೆ ಎಂದು ಭಾವಿಸುತ್ತೇನೆ.

ಇದಕ್ಕಿಂತಲೂ ನನ್ನ ಮನಸ್ಸಿನ ಮೇಲೆ ಗಾಢ ಪರಿಣಾಮ ಮಾಡಿದುದು ರಾಮನಾಮ ಪಾರಾಯಣ. ನಮ್ಮ ತಂದೆ ಕೆಲವು ಕಾಲ ರೋಗ ಪೀಡಿತರಾಗಿ ಪೋರಬಂದರಿನಲ್ಲಿ ವಾಸಿಸುತ್ತಿದ್ದರು. ಆಗ ದಿನವೂ ಸಾಯಂಕಾಲ ರಾಮಾಯಣ ಕೇಳುತ್ತಿದ್ದರು. ಪಾರಾಯಣ ಮಾಡುತ್ತಿದ್ದಾತ ರಾಮಭಕ್ತನೆಂದು ಹೆಸರು ಪಡೆದಿದ್ದ. ಆತನ ಹೆಸರು ಬಿಲೇಶ್ವರದ ಲಾಧಾಮಹಾರಾಜ. ಆತನಿಗೆ ಕುಷ್ಟರೋಗವಿತ್ತು. ಆತನು ಬಿಲೇಶ್ವರ ದೇವಾಲಯದ ಮಹಾದೇವನ ಲಿಂಗಕ್ಕೆ ಪೂಜೆಮಾಡಿ ತೆಗೆದ ನಿರ್ಮಾಲ್ಯ ರೂಪವಾದ ಬಿಲ್ವ ಪತ್ರೆಯ ರಸವನ್ನು ಕುಷ್ಟ ಹಿಡಿದಿದ್ದ ಭಾಗಕ್ಕೆ ಹಚ್ಚುವುದರ ಜೊತೆಗೆ ಅಖಂಡ ರಾಮನಾಮ ಜಪವನ್ನೂ ಮಾಡಿ ಅದನ್ನು ವಾಸಿ ಮಾಡಿಕೊಂಡನೆಂದೂ, ಯಾವ ಔಷಧವನ್ನೂ ಉಪಯೋಗಿಸಲಿಲ್ಲವೆಂದೂ ಪ್ರತೀತಿ ಹರಡಿತ್ತು. ನಂಬಿಕೆಯೇ ಆತನನ್ನು ಆರೋಗ್ಯ ಸ್ಥಿತಿಗೆ ತಂದಿತೆಂಬ ವಾರ್ತೆ ಹರಡಿತ್ತು. ಈ ಕಥೆ ನಿಜವೋ, ಸುಳ್ಳೋ, ನಾವಂತೂ ನಿಜವೆಂದೇ ನಂಬಿದ್ದೆವು. ಲಾಧಾಮಹಾರಾಜ ರಾಮಾಯಣ ಪಾರಾಯಣ ಆರಂಭಿಸಿದ ಮೇಲೆ ಆತನ ಶರೀರ ಪೂರ್ಣವಾಗಿ ಕುಷ್ಟರೋಗದಿಂದ ನಿವಾರಣೆಯಾದುದನ್ನು ಪ್ರತ್ಯಕ್ಷ ನೋಡಿದ್ದೆವು. ಆತನ ಕಂಠ ಮಧುರವಾಗಿತ್ತು. ಆತನು ಶ್ಲೋಕಗಳನ್ನು ಸುಶ್ರಾವ್ಯವಾಗಿ ಹಾಡುವುದರಲ್ಲಿಯೂ ವ್ಯಾಖ್ಯಾನ ಮಾಡುವುದರಲ್ಲಿಯೂ ಭಾವಪರವಶರಾಗುವಂತೆ ಮಾಡುತ್ತಿದ್ದನು. ಆಗ ನನಗೆ ಹದಿಮೂರು ವರುಷ ವಯಸ್ಸಾಗಿದ್ದರೂ ಆತನ ಪಾರಾಯಣಕ್ಕೆ ಮಾರುಹೋಗುತ್ತಿದ್ದೆನೆಂಬುದು ಚೆನ್ನಾಗಿ ನೆನಪಿದೆ. ಅದು ರಾಮಾಯಣದ ವಿಷಯದಲ್ಲಿ ನನ್ನ ಅತೀವ ಶ್ರದ್ಧೆಗೆ ತಳಹದಿ ಹಾಕಿತು. ತುಳಸೀದಾಸರ ರಾಮಾಯಣ ಭಕ್ತಿಸಾಹಿತ್ಯದಲ್ಲಿ ಗ್ರಂಥರಾಜವೆಂದು ಇಂದು ನನ್ನ ನಂಬಿಕೆಯಾಗಿದೆ.

(ಸತ್ಯಶೋಧನೆಯಿಂದ)

## (೨) ಬಾಳಿನ ಊರೆಗೋಲು

ನಾನೊಬ್ಬ ಪೂರ್ಣತೆಯನ್ನು ಅರಸುವ ವಿನಮ್ರ ಉತ್ಕಾಂಕ್ಷಿ ಅದಕ್ಕೆ ನನ್ನ ಪಥವನ್ನೂ ಅರಿತಿದ್ದೇನೆ ಆದರೆ ಪಥದ ಅರಿವಿನಿಂದಲೇ ಗುರಿಯನ್ನು ಮುಟ್ಟಿದಂತಲ್ಲ ನಾನು ಪೂರ್ಣತೆಯನ್ನು ಹೊಂದುವುದಾದರೆ, ಮಾನಸಿಕವಾಗಿ ಎಲ್ಲ ಕಾಮನೆಗಳನ್ನೂ ನಿಗ್ರಹಿಸುವಂತಾದರೆ, ಶಾರೀರಕವಾಗಿಯೂ ಪೂರ್ಣತೆಯನ್ನು ಪಡೆದೇನು ಆದರೆ, ನಾನು ನನ್ನ ಯೋಚನೆಗಳ ಮೇಲೆ ಹತೋಟಿಯನ್ನಿಟ್ಟುಕೊಳ್ಳಲು ದಿನವೂ ತುಂಬ ಮಾನಸಿಕ ಶಕ್ತಿಯನ್ನು ವಿನಿಯೋಗಿಸಬೇಕಾದ ಸ್ಥಿತಿಯಲ್ಲಿದ್ದೇನೆಂದು ಬಿಚ್ಚು ಮನಸ್ಸಿನಿಂದ ಒಪ್ಪಿಕೊಳ್ಳುತ್ತೇನೆ ಈ ನಿಗ್ರಹ ಶಕ್ತಿಯನ್ನು ನಾನು ಪೂರ್ಣವಾಗಿ ಹೊಂದಿದಾಗ ಸೇವೆಗಾಗಿ ನನ್ನಿಂದ ಎಷ್ಟು ಅಪಾರ ಶಕ್ತಿ ಲಭ್ಯವಾದೀತು! ನನಗೆ ಪ್ರಾಪ್ತವಾದ ಕರುಳು ಬಾಲದ ರೋಗವು ನನ್ನ ಮಾನಸಿಕ ದೌರ್ಬಲ್ಯದ ಪರಿಣಾಮವೆಂದು ಒಪ್ಪಿಕೊಳ್ಳುವಂತೆ ಶಸ್ತ್ರಚಿಕಿತ್ಸೆಗೆ ಒಪ್ಪಿಕೊಂಡುದೂ ಮಾನಸಿಕ ದೌರ್ಬಲ್ಯವೇ ನಾನು ಪೂರ್ಣವಾಗಿ ನಿಸ್ವಾರ್ಥತೆಯಿಂದ ಕೂಡಿದ್ದರೆ ಅವುಗಳ ಸಹಜ ಪರಿಣಾಮವನ್ನೇ ಸ್ವಾಗತಿಸುತ್ತಿದ್ದೆ, ಆದರೆ ಈ ಕಾರ್ಯದಲ್ಲಿ ಬದುಕಬೇಕೆಂಬ ಆಸೆ ನನಗಿತ್ತು ಪೂರ್ಣ ಅನಾಸಕ್ತಿ ಎಂಬುದು ಕೇವಲ ಯಾಂತ್ರಿಕ ಪ್ರಕ್ರಿಯೆಯಲ್ಲ ತಾಳ್ಮೆಯಿಂದ ಕೂಡಿದ ಶ್ರಮದಿಂದಲೂ, ಪ್ರಾರ್ಥನೆಯಿಂದಲೂ ವ್ಯಕ್ತಿಯು ಅದನ್ನು ಸಾಧಿಸಿಕೊಳ್ಳಬೇಕು (ಯಂಗ್ ಇಂಡಿಯಾ, ೩-೪-೨೪)

ನನ್ನ ಪಾಪಪೂರಿತ ಯೋಚನೆಗಳು ಕೇವಲ ಊನಗೊಳಿಸಲ್ಪಟ್ಟಿವೆಯೇ ಹೊರತು ವಿನಾಶವಾಗಿಲ್ಲ ನನ್ನ ಯೋಚನೆಗಳ ಮೇಲೆ ನನಗೆ ಪೂರ್ಣ ಸ್ವಾಮಿತ್ವವಿದ್ದರೆ ಕಳೆದ ಹತ್ತು ವರುಷಗಳಲ್ಲಿ ನಾನು ಅನುಭವಿಸಿದ ಶ್ವಾಸಕೋಶಾವರಣದ ಉರಿಯೂತ, ಅತಿಸಾರ, ಕರುಳು ಬಾಲದ ರೋಗ ಇವುಗಳಿಂದ ಪೀಡಿತನಾಗುತ್ತಿರಲಿಲ್ಲ ಪಾಪರಹಿತ ಆತ್ಮದಿಂದೊಡಗೂಡಿದ ಆತ್ಮವು ಆರೋಗ್ಯವಾಗಿರುತ್ತದೆಂದು ನನ್ನ ನಂಬಿಕೆ ಆತ್ಮವು ಪಾಪವಿಮುಕ್ತತೆಯಲ್ಲಿ ಪ್ರಗತಿಹೊಂದಿದಷ್ಟೂ, ಶರೀರವೂ ರೋಗ ನಿರೋಧಕ ಶಕ್ತಿಯನ್ನು ಪಡೆಯುತ್ತದೆ ಆರೋಗ್ಯವಾದ ಶರೀರವೆಂದರೆ, ಬಲಿಷ್ಠವಾದ ಶರೀರವೆಂದು ಅರ್ಥವಲ್ಲ ಆತ್ಮಶಕ್ತಿ ಹೆಚ್ಚಿದಂತೆಲ್ಲ ಕಾಯಶಕ್ತಿ ಕ್ಷೀಣ

ವಾಗುತ್ತದೆ ಬಲಿಷ್ಠವಾದ ಶರೀರ ಬಹುತೇಕ ರೋಗಪೀಡಿತವಾಗಿರುತ್ತದೆ ಒಂದು ವೇಳೆ ರೋಗವಿಲ್ಲದಿದ್ದರೂ ಅಂಥ ಶರೀರ ಬೇಗ ಸಾಂಕ್ರಾಮಿಕ ರೋಗಕ್ಕೆ ತುತ್ತಾಗುತ್ತದೆ ಆದರೆ, ಪೂರ್ಣ ಆರೋಗ್ಯದಿಂದ ಕೂಡಿದ ಶರೀರ ರೋಗನಿರೋಧಕ ಶಕ್ತಿಯನ್ನು ಹೊಂದಿರುತ್ತದೆ ಎಲ್ಲ ಬಗೆಯ ಅಸಹ್ಯವಾದ ಕ್ರಿಮಿಗಳನ್ನೂ ಹೊರದೂಡುವ ಶಕ್ತಿ ಶುದ್ಧರಕ್ತಕ್ಕೆ ಇರುತ್ತದೆ

ಕಾಯೇನ, ವಾಚಾ, ಮನಸಾ, ಪಾಶವಿಕ ಕಾಮೋದ್ರೇಕವನ್ನು ನಿಗ್ರಹಮಾಡುವುದೇ ಬ್ರಹ್ಮಚರ್ಯವೆಂದು ಸಾಮಾನ್ಯ ಅಭಿಪ್ರಾಯ ಈ ನಿಗ್ರಹದ ಒತ್ತಾಯವನ್ನು ನಾಲಿಗೆಯ ನಿಗ್ರಹದ ಮೇಲೂ ಹಾಕದಿದ್ದರೆ, ಕಾಮೋದ್ರೇಕದ ನಿಗ್ರಹ ಕಷ್ಟತರವೂ, ಅಸಾಧ್ಯವೂ ಎಂಬಂತೆ ಕಂಡು ಬರುತ್ತದೆ

ಯಾರು ರುಚಿ ಮೋಹವನ್ನು ಗೆಲ್ಲಲಾರರೋ ಅವರು ಪಾಶವಿಕ ಕಾಮೋದ್ರೇಕವನ್ನೂ ನಿಗ್ರಹಿಸಲಾರರೆಂದು ನನ್ನ ಅನುಭವಕ್ಕೆ ಬಂದಿದೆ ಕಾಮೋದ್ರೇಕದ ನಿಗ್ರಹವು ನಾಲಿಗೆಯ ನಿಗ್ರಹವನ್ನೇ ಅವಲಂಬಿಸಿದೆ ಈ ನಾಲಿಗೆ ಅಥವಾ ರುಚಿ ಮೋಹವನ್ನು ಗೆಲ್ಲಲು ಎಲ್ಲ ವಿಧದ ಮಸಾಲೆ ವಸ್ತುಗಳನ್ನೂ ಸೇವಿಸಲು ಆದಷ್ಟು ವರ್ಜಿಸುವುದು ಒಂದು ಸಾಧನ ಹಾಗೆಯೇ ನಾವು ಆಹಾರವನ್ನು ಸೇವಿಸುವುದು ಎಂದಿಗೂ ನಾಲಿಗೆಯ ತೃಪ್ತಿಗಲ್ಲವೆಂದೂ ಶರೀರಧಾರಣೆಗೆ ಮಾತ್ರವೆಂದೂ ಭಾವಿಸಿ ಅದನ್ನು ಅಭ್ಯಾಸಮಾಡಿದರೆ ಅದು ಹೆಚ್ಚು ಶಕ್ತಿಯುತ ಸಾಧನವಾಗಬಲ್ಲದು ನಾವು ಪ್ರಾಣಾಧಾರಣಕ್ಕೆ ವಾಯುಸೇವನೆ ಮಾಡುತ್ತೇವೆಯೇ ಹೊರತು ರುಚಿಗಲ್ಲ ನೀರಡಿಕೆಯನ್ನು ನೀಗಿಕೊಳ್ಳಲು ನೀರನ್ನು ಕುಡಿಯುವಂತೆಯೇ ಹಸಿವೆಯನ್ನು ನೀಗಿಕೊಳ್ಳಲು ಮಾತ್ರ ಆಹಾರವನ್ನು ಸೇವಿಸಬೇಕು ಆದರೆ ನಮ್ಮ ತಂದೆ ತಾಯಿಗಳೇ ಚಿಕ್ಕಂದಿನಿಂದ ಇದಕ್ಕೆ ವಿರುದ್ಧವಾದ ಅಭ್ಯಾಸವನ್ನು ನಮಗೆ ಕಲಿಸುವುದು ದುರದೃಷ್ಟವೇ ಸರಿ ಪ್ರೀತಿಯ ಹೆಸರಿನಲ್ಲಿ ಅವರು ನಮಗೆ ವಿಧವಿಧವಾದ ರುಚಿಕರವಸ್ತುಗಳನ್ನು ಕೊಟ್ಟು ನಮ್ಮನ್ನು ಅಡ್ಡದಾರಿಗೊಯ್ಯುತ್ತಾರೆ ಕುಟುಂಬದಲ್ಲಿ ಆವರಿಸಿರುವ ಈ ವಾತಾವರಣದೊಂದಿಗೆ ನಾವು ಹೋರಾಡಬೇಕಾಗಿದೆ

ಆದರೆ, ಪಾಶವಿಕ ಕಾಮೋದ್ರೇಕವನ್ನು ಗೆಲ್ಲಲು ಇವೆಲ್ಲಕ್ಕಿಂತಲೂ ಅತ್ಯಂತ ಶ್ರೇಷ್ಠ ಸಾಧನ ರಾಮನಾಮ ಅಥವಾ ಅಂಥದೇ ಯಾವುದಾದರೂ ಮಂತ್ರ ಅವುಗಳಲ್ಲಿ 'ಓಂ ನಮೋ ಭಗವತೇ ವಾಸುದೇವಾಯ।' ಈ ದ್ವಾದಶಾಕ್ಷರೀ ಮಂತ್ರವೂ ಒಂದು ರಾಮನಾಮವು ನನ್ನ ಬಾಲ್ಯದಿಂದಲೂ ನನ್ನ ಅಭ್ಯಾಸಕ್ಕೆ ಬಂದು ನನ್ನ ಜೀವನದ ಹೋರಾಟದಲ್ಲಿ ನೆರವಾಗಿರುವುದರಿಂದ, ಅದನ್ನೇ ನಾನು ಆಶ್ರಯಿಸಿದೇನೆ ಯಾವ ಮಂತ್ರವೇ ಆಗಲಿ, ಅದರಲ್ಲಿ ತನ್ಮಯತೆಯನ್ನು ಹೊಂದಬೇಕು, ವ್ಯಕ್ತಿ ಮಂತ್ರ ಜಪಮಾಡುವಾಗ ಇತರ ಯೋಚನೆಗಳೂ ಬಂದಾವೆಂದು ಚಿಂತಿಸಬೇಕಾಗಿಲ್ಲ ಶ್ರದ್ಧಾಪೂರ್ವಕವಾಗಿ ಜಪದಲ್ಲಿ ನಿಮಗ್ನನಾದರೆ ಖಂಡಿತ ಯಶ ದೊರೆವುದೆಂದು ನನ್ನ ನಂಬಿಕೆ ಹೀಗೆ ಆಚರಿಸಿದ ಮಂತ್ರವು ಬಾಳಿನ ಊರೆಗೋಲಾಗಿ ಎಲ್ಲ ಸಂಕಷ್ಟಗಳನ್ನೂ ಪಾರುಮಾಡುತ್ತದೆ ಬ್ರಹ್ಮಚರ್ಯ ಸಾಧನಾ ಮಾರ್ಗವನ್ನು ತಿಳಿಸುತ್ತಾ ಒಬ್ಬ ಬ್ರಹ್ಮಚಾರಿಗೆ ಹೀಗೆ ಬರೆದರು ಗಾಂಧೀಜೀ "ಪ್ರಾರ್ಥನೆ ಕೊನೆಯದಾದರೂ ಕನಿಷ್ಠವೆನ್ನಿಸುವುದಿಲ್ಲ ಭಾವಭರಿತ ಹೃದಯದಿಂದಲೂ ದಿವ್ಯ ಕೃಪೆಯನ್ನು ಬಯಸುತ್ತಲೂ ತಪ್ಪದೆ ರಾಮನಾಮವನ್ನು ಜಪಿಸು" (ಯಂಗ್ ಇಂಡಿಯಾ. ೨೦-೧೨-೨೮)

ಇಂಥ ಪವಿತ್ರ ಮಂತ್ರ ಸಹಾಯದಿಂದ ಯಾರೂ ಐಹಿಕಸುಖವನ್ನು ಅಪೇಕ್ಷಿಸಬಾರದು ಮಂತ್ರಸತ್ವ ವೈಯಕ್ತಿಕ ಪರಿಶುದ್ಧತೆಯನ್ನು ಸಾಧಿಸುತ್ತದೆ ಎಲ್ಲ ನಿಷ್ಠಾವಂತ ಸಾಧಕರಿಗೂ ಇದು ತತ್‌ಕ್ಷಣ ಅರಿವಾದೀತು ಈ ಮಂತ್ರ ಪುನಶ್ಚರಣೆ ಕೇವಲ ಶುಕಪಾಠವಾಗದಂತೆ ಎಚ್ಚರಿಕೆ ಆವಶ್ಯಕ ಕೇವಲ ಶುಕಪಾಠವೆಂದರೆ, ಕೇವಲ ಯಾಂತ್ರಿಕ ಕ್ರಿಯೆ ಮಂತ್ರಗಳು ಅನಿಷ್ಟ ಭಾವಗಳನ್ನು ಉಚ್ಚಾಟನೆಮಾಡಲು ಸಹಾಯಕವಾಗುವುವೆಂಬ ಜ್ಞಾನಪೂರ್ವಕ ನಿಷ್ಠೆಯಿಂದ ನಾವು ಅವುಗಳನ್ನು ಪುನಶ್ಚರಣೆ ಮಾಡಬೇಕು (ನವಜೀವನ ೫-೬-೨೪)

ತೊಳಲಿಕೆಯಲ್ಲಿ ಸಿಲುಕಿದ ಆತ್ಮವೊಂದಕ್ಕೆ ಗಾಂಧೀಜೀ ಹೀಗೆ ಬರೆದರು. "ರಾಮನಾಮ ಸ್ಮರಣೆಯಿಂದ ನಮ್ಮ ಅಂತರಂಗದಲ್ಲಿರುವ ದಶಶಿರಸ್ಸಿನ ರಾವಣರೂಪಿ ಕಾಮೋದ್ರೇಕವನ್ನು ಹರಮಾಡಬೇಕು ನಿಷ್ಠಾಯುತರಾಗಿ ರಾಮನ ಕೃಪೆಗೆ ನಾವು ಶರಣು ಹೋದರೆ, ನಮಗೆ ಯಶ

ಖಂಡಿತ ಎಲ್ಲಕ್ಕಿಂತ ಮಿಗಿಲಾಗಿ ಆತ್ಮನಂಬಿಕೆ ಕಳೆದುಕೊಳ್ಳಬೇಡ. ನಾಲಿಗೆಯು ಸುಖದಿಂದ ದೂರವಾಗಿರು ”

(ಯಂಗ್ ಇಂಡಿಯಾ. ೨೦-೧೨-೨೮)

ಕಾಮೋದ್ರೇಕ ನಿನ್ನನ್ನು ಮುಸುಗಿದಾಗ ದೇವನಿಗೆ ಮಣಿದು ಸಹಾಯ ಬೇಡು ರಾಮನಾಮ ನಿನ್ನ ಕೈಬಿಡದ ನೆರವು 'ಸೊಂಟ-ಸ್ನಾನ'ವನ್ನು (*Hip Bath*) ಬಾಹ್ಯಸಾಧನವನ್ನಾಗಿ ಮಾಡಿಕೋ

**('ಬ್ರಹ್ಮಚರ್ಯವೋ, ಕಾಮಸಾಧನೆಯೋ' ಪುಸ್ತಕದ ಮುನ್ನುಡಿಯಿಂದ—)**

## (೩) ನಮ್ಮ ಏಕೈಕ ನೆರವು

ರಾಮ, ಅಲ್ಲಾ, ದೇವರು, ಈ ಎಲ್ಲ ಶಬ್ದಗಳೂ ನನಗೆ ಸಮಾನಾರ್ಥವುಳ್ಳವು. ಸಂಕಟದಲ್ಲಿರುವ ಮುಗ್ಧ ಜನ ನಾನು ಕನಸಿನಲ್ಲಿ ದರ್ಶನವೀಯುತ್ತೇವೆಂದು ಹೇಳುವುದನ್ನು ಕೇಳಿದೇನೆ ನಾನು ಯಾರ ಕನಸಿನಲ್ಲಿಯೂ ದರ್ಶನವೀಯಲಾರೆನೆಂದು ಚೆನ್ನಾಗಿ ಬಲ್ಲೆ, ಒಬ್ಬ ನಿರ್ಬಲ ಮಾನವನ ವಿಷಯದಲ್ಲಿ ಇಂಥ ನಂಬಿಕೆ ಮನೋಭ್ರಾಂತಿಯೇ ಸರಿ ಇದನ್ನು ಕಳೆಯಲು ನಾ ಪ್ರಯತ್ನಿಸಬೇಕು ಆದುದರಿಂದ, ಒಂದು ಸುಲಭವಾದ ಮತ್ತು ಎಂದಿಗೂ ನಿರರ್ಥಕವೆನಿಸಿದ ಸೂತ್ರವನ್ನು ಅವರು ಅನುಸರಿಸಲು ಸೂಚಿಸುತ್ತೇನೆ ದಿನವೂ ಪ್ರಾತಃಕಾಲ ಏಳುತ್ತಲೂ ಮತ್ತು ರಾತ್ರಿ ಮಲಗುವ ವೇಳೆಯಲ್ಲಿಯೂ ತಮ್ಮ ವ್ರತಗಳನ್ನು ಸಾಂಗಗೊಳಿಸುವ ಶಕ್ತಿ ನೀಡೆಂದು ಭಗವಂತನಲ್ಲಿ ಮೊರೆ ಇಡುವುದೇ ಆ ಸೂತ್ರ ಕೋಟ್ಯಂತರ ಹಿಂದೂ ಜನಕ್ಕೆ ಭಗವಂತನು ರಾಮನ ರೂಪದಲ್ಲಿ ಪರಿಚಯವಿದಾನೆ ನಾನಂತೂ ಬಾಲ್ಯದಲ್ಲಿರುವಾಗಲೇ ಭಯ ಭೀತಿಯಿಂದ ಪಾರಾಗಲು ರಾಮಸ್ಮರಣೆ ಮಾಡಲು ಭೋಧಿಸಲ್ಪಟ್ಟೆ ನನ್ನ ಸ್ನೇಹಿತರನೇಕರು ಸಂಕಟದ ಸಮಯದಲ್ಲಿ ರಾಮನಾಮ ಪಠಿಸಿ ಶಾಂತಿ ಸಮಾಧಾನ ಪಡೆದುಕೊಂಡುದನ್ನು ಬಲ್ಲೆ ಅಸ್ಪೃಶ್ಯರಿಗೂ ರಾಮನಾಮವನ್ನು ನಾನು ಬೋಧಿಸಿದೆ ಹಾಗೆಯೇ ಅತಿತಿಳಿವಳಿಕೆಯ ಫಲವಾಗಿ ದರ್ಶನ ಮಂಕಾಗದ ಮತ್ತು ನಂಬಿಕೆ ಸಂಕುಚಿತವಾಗದಿರುವ ಪಾಠಕರಿಗೂ ಇದನ್ನೇ ಬೋಧಿಸುತ್ತೇನೆ ತಿಳಿವಳಿಕೆ ನಮ್ಮನ್ನು ಬಾಳಿನ ವಿವಿಧ ಮಟ್ಟಗಳಿಗೆ ಒಯ್ದರೂ, ಪರೀಕ್ಷಾ

ಸಮಯ ಸನ್ನಿಹಿತವಾದಾಗ ಅದು ನಿರರ್ಥಕವಾದೀತು ಅಂಥ ಸಮಯದಲ್ಲಿ ನಂಬಿಕೆಯೊಂದೇ ರಕ್ಷಣೆ ಮಾಡೀತು ಎಲ್ಲ ವಿಧಗಳಲ್ಲಿಯೂ ಪ್ರಲೋಭನೆಯಿಂದ್ಯ ಯಾರು ದೇವರನ್ನು ಸ್ಮರಿಸುವರೋ ಅವರು ರಾಮನಾಮ ರಕ್ಷಿಸೀತೆಂಬ ಭರವಸೆಯನ್ನು ಹೊಂದಲಾರರು ಯಾರು ಸದಾ ಭಗವಂತನಿಗೆ ಅಂಜಿ ನಡೆಯುವರೋ, ಯಾರು ಆತ್ಮನಿಗ್ರಹ ಮಾಡಿಕೊಳ್ಳಲು ಪ್ರಯತ್ನಿಸಿಯೂ ನಿಸ್ಸಹಾಯಕರೆಂದು ತಿಳಿದುಕೊಳ್ಳುವರೋ, ಅಂಥವರಿಗೇ ಆದರ ರಕ್ಷಣೆಯ ಭರವಸ ದೊರೆತೀತು (ಯಂಗ್ ಇಂಡಿಯಾ, ೨೨-೧-೨೫)

## (೪) ರಾಮನಾಮವೂ—ರಾಷ್ಟ್ರಸೇವೆಯೂ

ಪ್ರ ರಾಷ್ಟ್ರಸೇವೆಯಲ್ಲಿ ಭಾಗವಹಿಸದೆ ಕೇವಲ ರಾಮನಾಮ ಪುನಶ್ಚರಣೆ ಮಾಡುವ ಪುರುಷರಾಗಲೀ ಮಹಿಳೆಯರಾಗಲೀ ಆತ್ಮ-ಸಾಕ್ಷಾತ್ಕಾರವನ್ನು ಪಡೆಯಬಲ್ಲರೆ? ನನ್ನ ಕೆಲವು ಭಗಿನಿಯರು ಗೃಹಕೃತ್ಯದ ಸೇವೆಯನ್ನೂ ಮತ್ತು ಆಗಾಗ ದರಿದ್ರರಿಗೆ ಧರ್ಮಕಾರ್ಯ ಮಾಡುವುದನ್ನೂ ಬಿಟ್ಟು ತಾವು ಬೇರಾವ ಕಾರ್ಯವನೂ ಮಾಡಬೇಕಾಗಿಲ್ಲವೆಂದು ಹೇಳುವುದರಿಂದ ಈ ಪ್ರಶ್ನೆಯನ್ನು ಕೇಳುತ್ತೇವೆ

ಉ, ಈ ಪ್ರಶ್ನೆ ಮಹಿಳೆಯರನ್ನಷ್ಟೇ ಅಲ್ಲ, ಪುರುಷರನ್ನೂ ಕಾಡಿದೆ ನನಗೂ ತುಂಬ ತ್ರಾಸ ನೀಡಿದೆ ಪೂರ್ಣ ನಿಷ್ಕ್ರಿಯೆಯನ್ನೂ, ಎಲ್ಲ ಪ್ರಯತ್ನಗಳ ಅಸಾರತೆಯನ್ನೂ ಬೋಧಿಸುವ ತತ್ವಜ್ಞಾನದ ಪಂಥವೊಂದು ಇರುವುದು ನನಗೆ ಗೊತ್ತು ಆ ತತ್ವಜ್ಞಾನ ನನಗೆ ರುಚಿಸದಿದ್ದರೂ, ಕೇವಲ ವಾಚಾತರ್ಕಕ್ಕೋಸ್ಕರ ಅದಕ್ಕೆ ನನ್ನ ವಿವರಣೆಯನ್ನೇ ಕೊಟ್ಟೇನು ಪ್ರಗತಿಗೆ ಪ್ರಯತ್ನ ಆವಶ್ಯಕವೆಂದು ನನ್ನ ಅಭಿಪ್ರಾಯ ಫಲವೇನೇ ಆಗಲಿ, ಪ್ರಯತ್ನವಂತೂ ನಡೆಯಲೇಬೇಕು ರಾಮನಾಮವೋ ಅಥವಾ ಬೇರೆ ಯಾವುದಾದರೂ ನಾಮವೋ ಬರೀ ಪುನಶ್ಚರಣೆಗಲ್ಲದೆ, ಶುದ್ಧಿಗಾಗಿಯೂ, ಪರಾಶಕ್ತಿಯ ಪ್ರತ್ಯಕ್ಷ ಮಾರ್ಗದರ್ಶನಕ್ಕೆ ಸಾಧನರೂಪವಾಗಿಯೂ ಆವಶ್ಯಕ, ಪ್ರಯತ್ನ ಶೀವ್ರಗತಿ ಹೊಂದುವುದಕ್ಕೂ ಅದನ್ನು ಸರಿಯಾದ ಪಥದಲ್ಲಿ ಒಯ್ಯುವುದಕ್ಕೂ ಆವಶ್ಯಕ ಎಲ್ಲ ಪ್ರಯತ್ನವೂ

ನಿರರ್ಥಕವೆನ್ನುವುದಾದರೆ, ಕುಟುಂಬದ ಬಗೆಗೆ ಆತಂಕವೂ ಆಗಾಗ ಬಡವರಿಗಾಗಿ ಧರ್ಮಕಾರ್ಯವೂ ಏತಕ್ಕೆ ಸಾಗಬೇಕು? ಈ ಪ್ರಯತ್ನದಲ್ಲಿಯೇ ರಾಷ್ಟ್ರಸೇವೆಯ ಬೀಜ ಅಡಗಿದೆ. ನನ್ನ ದೃಷ್ಟಿಯಲ್ಲಿ ರಾಷ್ಟ್ರಸೇವೆ ಎಂದರೆ, ಮಾನವ ಸೇವೆ, ಹಾಗೆಯೇ ನಿಸ್ವಾರ್ಥಮಯವಾದ ಕುಟುಂಬ ಸೇವೆಯು ರಾಷ್ಟ್ರಸೇವೆಯೇ ಎನಿಸೀತು. ನಿಸ್ವಾರ್ಥಮಯ ಕುಟುಂಬ ಸೇವೆ ಖಂಡಿತವಾಗಿಯೂ ರಾಷ್ಟ್ರಸೇವೆಯಾಗುತ್ತದೆ. ರಾಮನಾಮ ಪಠನವು ಅನಾಸಕ್ತಿಯನ್ನು ಕಲಿಸುತ್ತದಲ್ಲದೆ ಶಕ್ತಿಯನ್ನೂ ನೀಡಿ ಪರೀಕ್ಷಾ ಸಮಯ ಬಂದಾಗ ಎಂದಿಗೂ ದಾರಿ ತಪ್ಪದಂತೆ ಕಾಪಾಡುತ್ತದೆ. ಅತ್ಯಂತ ದರಿದ್ರರ ಸೇವೆಗಾಗಿ ಅವರೊಂದಿಗೆ ಸಮರಸವಾಗದ ಹೊರತು ಆತ್ಮ-ಸಾಕ್ಷಾತ್ಕಾರ ಲಭಿಸಲಾರದೆಂದು ನನ್ನ ನಂಬಿಕೆ.

(ಯಂಗ್ ಇಂಡಿಯಾ. ೨೧-೧೦-೨೬)

## (೫) ಅವನ ನೆರವನ್ನೇ ಅರಸಿ

ಬಂಡಿಗಟ್ಟಲೆ ಪುಸ್ತಕಗಳನ್ನು ವ್ಯಾಸಂಗಮಾಡಿ ಅವುಗಳಿಂದ ಲಭಿಸುವ ವಿಷಯಗಳನ್ನು ತಮ್ಮ ಮೆದುಳಿನಲ್ಲಿ ತುಂಬಿಕೊಂಡುದರ ಪರಿಣಾಮವಾಗಿ ಭಾರತಾದ್ಯಂತ ವಿದ್ಯಾರ್ಥಿಗಳು ಎಷ್ಟು ಗತಿಗೆಟ್ಟಿದ್ದಾರೆಂದು ಅವರೊಂದಿಗೆ ಪತ್ರವ್ಯವಹಾರ ಹೊಂದಿರುವ ನಾ ಬಲ್ಲೆ. ಕೆಲವರು ಮಾರ್ಗ ತಪ್ಪಿದಾರೆ. ಮತ್ತೆ ಕೆಲವರು ಹುಚ್ಚರಾಗಿದ್ದಾರೆ. ಇನ್ನೂ ಕೆಲವರು ಅನೀತಿಯ ಜೀವನ ನಡೆಸುತ್ತಾ ನಿಸ್ಸಹಾಯಕರಾಗಿದಾರೆ. ತಾವು ಎಷ್ಟು ಪ್ರಯತ್ನ ಮಾಡಿದರೂ ದುಷ್ಟ ಶಕ್ತಿಗಳನ್ನು ಗೆಲ್ಲಲು ಸಾಧ್ಯವಾಗಿಲ್ಲವೆಂದು ಅವರು ಹೇಳುವುದನ್ನು ಕೇಳಿದರೆ ನನ್ನ ಮನಸ್ಸು ಕರಗಿ ಹೋಗುತ್ತದೆ. "ನಮ್ಮನ್ನು ವಶಪಡಿಸಿಕೊಂಡಿರುವ ದುಷ್ಟಶಕ್ತಿಯಿಂದ ಪಾರಾಗುವುದು ಹೇಗೆ? ನಮ್ಮಲ್ಲಿ ತುಂಬಿರುವ ಅನೀತಿಯಿಂದ ವಿಮುಕ್ತರಾಗುವ ಪರಿ ಎಂತು?" ಹೀಗೆ ದುಃಖಭರಿತರಾಗಿ ಅವರು ಪ್ರಶ್ನಿಸುವರು. ರಾಮನಾಮ ಪಠಿಸುತ್ತಾ ದೇವನಿಗೆ ಶರಣುಹೋಗಿ ಅವನ ಕೃಪೆ ಬೇಡಿರೆಂದು ನಾನವರಿಗೆ ಸೂಚಿಸಿದರೆ, ಅವರು ನನ್ನಲ್ಲಿಗೆ ಬಂದು ಹೀಗೆನ್ನುತ್ತಾರೆ: "ದೇವನೆಲ್ಲಿ

ದಾನೋ ನಾವರಿಯೆವು, ಪ್ರಾರ್ಥನೆ ಎಂದರೇನೋ ನಮಗೆ ತಿಳಿಯದು” ಇಂಥ ಪತಿತ ಸ್ಥಿತಿ ಅವರದು.

‘ಅನಾಥೋ ದೈವ ರಕ್ಷಕಃ” ಎಂಬ ಅರ್ಥಬರುವ ಒಂದು ತಮಿಳು ಗಾದೆ ಯಾವಾಗಲೂ ನನ್ನ ನೆನಪಿಗೆ ಬರುತ್ತದೆ. ದೇವರ ಕೃಪೆಯನ್ನು ಯಾಚಿಸುವವರು ಪೂರ್ಣ ನಿರ್ವಾಣದಿಂದ ಯಾವ ತೆರನಾದ ಅಡೆ ತಡೆಯೂ ಇಲ್ಲದೆ, ನಮ್ಮಂಥ ಪತಿತರಿಗೆ ಅವನು ಹೇಗೆ ಕೃಪೆ ಬೀರುವನೆಂಬ ಶಂಕೆ, ಭೀತಿ, ಯಾವುದೂ ಇಲ್ಲದೆ, ಅವನ ಬಳಿಸಾರಬೇಕು. ತನಗೆ ಶರಣುಬಂದ ಕೋಟ್ಯಂತರ ಮಂದಿಗೆ ಕೃಪೆಬೀರುವಾತ ನಿಮ್ಮ ಕೈ ಬಿಡುವನೆ? ಅವನು ಯಾವ ವ್ಯತ್ಯಾಸವನ್ನೂ ಮಾಡದೆ ನಿಮ್ಮ ಪ್ರಾರ್ಥನೆಗೆ ಓ ಕೊಡುವನು. ಅತ್ಯಂತ ಅನೀತಿವಂತರ ಪ್ರಾರ್ಥನೆಯೂ ಕೈಗೂಡುವುದು. ಪ್ರಾರ್ಥನೆಯು ಕೇವಲ ಬಾಯಿಯ ಅಥವಾ ಕಿವಿಯ ಕಸರತ್ತಾಗಬಾರದು, ಅರ್ಥಶೂನ್ಯ ಮಂತ್ರೋಚ್ಚಾರಣೆಯಲ್ಲ ಇದು. ಹೃದಯವನ್ನು ಮೀಟಿಬಿಡುಕದ ರೀತಿಯಲ್ಲಿ ರಾಮನಾಮವನ್ನು ಎಷ್ಟು ಸಲ ಪುನರುಚ್ಚರಣೆ ಮಾಡಿದರೂ ವ್ಯರ್ಥವೇ ಆದೀತು. ಪ್ರಾರ್ಥನೆಯಲ್ಲಿ ಹೃದಯಶೂನ್ಯ ಮಾತಿಗಿಂತಲೂ ಮೌನವಾದರೂ ಹೃದಯಭರಿತ ಸ್ಥಿತಿ ಉತ್ತಮ. ಅದು ಆತ್ಮತೃಷೆಯ ಕೂಗಿಗೆ ಪ್ರತ್ಯುತ್ತರವಾಗಿರಬೇಕು. ಹಸಿದ ಮನುಷ್ಯ ಆನಂದವಾಗಿ ಭೋಜನಮಾಡುವಂತೆ, ಹೃದಯ ಪ್ರೇರಿತ ಪ್ರಾರ್ಥನೆಯಿಂದ ಆತ್ಮ ತಣಿದೀತು. ಪ್ರಾರ್ಥನೆಯ ಅಗೋಚರ ಶಕ್ತಿಯನ್ನು ಅನುಭವಿಸಿದಾತ ದಿನಗಟ್ಟಲೆ ಆಹಾರವಿಲ್ಲದಿದ್ದರೂ, ಇದ್ದಾನು, ಆದರೆ ಒಂದು ನಿಮಿಷವೂ ಪ್ರಾರ್ಥನೆ ಇಲ್ಲದೆ ಇರಲಾರ. ಇದು ನನ್ನ ಮತ್ತು ನನ್ನ ಸಂಗಾತಿಗಳ ಅನುಭವ. ಪ್ರಾರ್ಥನೆ ಇಲ್ಲದೆ ಅಂತರಂಗ ಶಾಂತಿ ದೊರೆಯಲಾರದು.

(ಯಂಗ್ ಇಂಡಿಯಾ ೨೯-೭-೩೦)

ಇದನ್ನು ನನ್ನ ಸ್ವಾನುಭವದಿಂದ ಹೇಳುತ್ತಿದ್ದೇನೆ. ನಾನು ನರಕ ಯಾತನೆಯನ್ನೂ ಅನುಭವಿಸಿದ್ದೇನೆ. ಎಲ್ಲವನ್ನೂ ತ್ಯಜಿಸಿ ದೇವರ ಸಾನ್ನಿಧ್ಯವನ್ನು ಬಯಸಿದರೆ ಎಲ್ಲವೂ ತಾನಾಗಿಯೇ ಸಿದ್ಧಿಸುವುವು.

(ಯಂಗ್ ಇಂಡಿಯಾ ೬-೮-೨೯)

## ೬ ನಾಮ ಪಠನೆಯ ಸೊಗಸು

“ ಒಂದೇ ವಸ್ತುವಿನ ಅಖಂಡ ಪಠನೆ ನನ್ನ ಕಿವಿಗಳಿಗೆ ಕರ್ಕಶವಾಗುತ್ತದೆ ಇದನ್ನು ನನ್ನ ತರ್ಕಪ್ರಧಾನವಾದ ಗಣಿತದಂಥ ಮನೋಧರ್ಮದ ನ್ಯೂನತೆ ಇರಬಹುದು ಹೇಗೋ, ಅಂತೂ, ಪುನಃ ಪುನಃ ಪಠನೆ ಮಾಡುವುದು ನನಗೆ ಹಿಡಿಸುವುದಿಲ್ಲ ಉದಾಹರಣೆಗೆ, ‘ ದೇವಾ, ಅವರನ್ನು ಮನ್ನಿಸು, ತಾವೇನು ಮಾಡುತ್ತಿರುವರೆಂಬುದರ ಅರಿವು ಅವರಿಗಿಲ್ಲ, ” ಎಂಬ ಪ್ರಾರ್ಥನಾಚರಣವನ್ನು ಬಾಕನು (*Bach*) ಅದ್ಭುತ ಸಂಗೀತದಿಂದ ಪುನಃ ಪುನಃ ಪಠನಮಾಡಿದಾಗ ನನ್ನನ್ನು ಆಕರ್ಷಿಸದೆ ಹೋಯಿತು ”

“ ನಿಮ್ಮ ಗಣಿತವಲ್ಲಿಯೂ ಪುನರಾವೃತ್ತ ದಶಮಾಂಶವಿದೆಯಲ್ಲಾ ?” ಎಂದರು ಗಾಂಧೀಜೀ ನಗುತ್ತಾ

“ ಅಲ್ಲಿ ಪುನರಾವರ್ತನೆ ಇದ್ದರೂ, ಸ್ಪಷ್ಟವಾದ ಹೊಸರೀತಿಯಲ್ಲಿರುತ್ತದೆ, ” ಎಂದು ಉತ್ತರವಿತ್ತ ಗಣಿತಶಾಸ್ತ್ರಜ್ಞ

“ ಹಾಗೆಯೇ ” ಎಂದರು ಗಾಂಧೀಜೀ, “ ಪ್ರತಿಸಲದ ನಾಮಪಠನೆಯೂ ಅಥವಾ ಜಪವೂ, ಹೊಸ ಹೊಸ ಅರ್ಥಗರ್ಭಿತವಾಗಿದ್ದು ದೇವನ ಸಾನ್ನಿಧ್ಯಕ್ಕೆ ಒಯ್ಯುತ್ತದೆ ಇದೊಂದು ವಾಸ್ತವಿಕ ಅಂಶ ನೀವು ಯಾರೋ ಸಿದ್ಧಾಂತಿಯೊಂದಿಗೆ ಮಾತನಾಡುತ್ತಿಲ್ಲ, ಜೀವನದ ಪ್ರತಿ ಕ್ಷಣದಲ್ಲಿಯೂ ತಾನು ಪ್ರತ್ಯಕ್ಷ ಅನುಭವಿಸಿದುದನ್ನೇ ನುಡಿಯುವಾತನೊಂದಿಗೆ ಈ ಅಖಂಡ ನಾಮಪಠನೆಯನ್ನು ನಿಲ್ಲಿಸುವುದಕ್ಕಿಂತಲೂ ಬಾಳು ಕೊನೆಗೊಳಿಸಿಕೊಳ್ಳುವುದು ಸುಲಭವೆನ್ನಿಸುತ್ತದೆ ನನಗೆ ಅಖಂಡ ನಾಮಪಠನೆ ಆತ್ಮನ ಆಕಾಂಕ್ಷೆ ”

“ ಇದು ನನಗೆ ಅರ್ಥವಾಗುತ್ತದೆ, ಆದರೂ ಸಾಮಾನ್ಯ ಮಾನವನಿಗೆ ಅರ್ಥಶೂನ್ಯ ಮಂತ್ರ ”

“ ನಿಜ ಅತ್ಯಂತ ಶ್ರೇಷ್ಠ ವಸ್ತುವೂ ದುರುಪಯೋಗವಾಗಲು ಸಾಧ್ಯ ಇದರಲ್ಲಿ ಎಷ್ಟೋ ಬೂಟಾಟಿಕೆಗೆ ಅವಕಾಶವಿದೆ ಬೂಟಾಟಿಕೆಯು ಸುಗುಣದ ಕೀರ್ತನೆಯೇ ಹತ್ತು ಸಹಸ್ರ ಬೂಟಾಟಿಕೆಯವರಿದ್ದರೆ, ಲಕ್ಷಾಂತರ ಸರಳಜೀವಿಗಳು ನಾಮಪಠನೆಯಿಂದ ಶಾಂತಿಪಡೆಯುತ್ತಾ

ರೆಂದು ನಾ ಬಲ್ಲೆ. ಒಂದ ಕಟ್ಟಡಕ್ಕೆ ಅದನ್ನು ಕಟ್ಟುವಾಗ ಸಾರುವೆ ಹೇಗೋ ಪ್ರಾರ್ಥನೆಯೂ ಹಾಗೆಯೇ"

"ಆದರೆ, ನಿಮ್ಮ ಉಪಮೆಯನ್ನೇ ಸ್ವಲ್ಪ ಮುಂದುವರಿಸಿ ಹೇಳುವುದಾದರೆ, ಕಟ್ಟಡವೂ ಪೂರೈಸಿದ ಮೇಲೆ ಸಾರುವೆಯನ್ನು ತೆಗೆದುಹಾಕಬೇಕೆಂದು ತಾವು ಒಪ್ಪುವಿರಿ ತಾನೇ?" ಎಂದರು ಪ್ಯೆರಿ ಸಿರಿಸೋಲ್ ಅವರು (*Pierre ceresole*)

"ಹೌದು, ಶರೀರವು ಹೋದಾಗ ಅದೂ ಹೋಗುತ್ತದೆ"

"ಏಕೆ?"

ಈ ಸಂಭಾಷಣೆಯನ್ನು ಕುತೂಹಲದಿಂದ ಆಲಿಸುತ್ತಿದ್ದ ವಿಲ್ಕಿನ್ಸನ್ ಅವರು, "ಏಕೆ?" "ನಾವು ಅನಂತವಾಗಿ ಕಟ್ಟಡ ಕಟ್ಟುತ್ತಿದ್ದೇವೆ," ಎಂದರು,

ಗಾಂಧೀಜೀ ಉತ್ತರವಿತ್ತರು "ಏಕೆಂದರೆ, ನಾವು ಪರಿಪೂರ್ಣತೆಗಾಗಿ ಕೊನೆಯಿಲ್ಲದಂತೆ ಹೆಣಗುತ್ತಲೇ ಇದ್ದೇವೆ ದೇವನೊಬ್ಬನೇ ಪರಿಪೂರ್ಣ. ಮಾನವನೆಂದಿಗೂ ಪೂರ್ಣನಾಗಲಾರ" (ಹರಿಜನ, ೨೫-೫-೩೫)

## ೭ ಆಧ್ಯಾತ್ಮಿಕ ಅನುಷ್ಠಾನ

ಒಬ್ಬ ಕ್ರೈಸ್ತ ಪಾದರೀ ಸ್ನೇಹಿತ, "ನೀವೇನಾದರೂ ಆಧ್ಯಾತ್ಮಿಕ ಅನುಷ್ಠಾನಗಳನ್ನು ಮಾಡುವಿರಾ?" ಎಂದು ಕೇಳಿದ ಪ್ರಶ್ನೆಗೆ ಗಾಂಧೀಜೀ ಇತ್ತ ಉತ್ತರವಿದು

"ಯೋಗಾಭ್ಯಾಸ ನನಗೆ ತಿಳಿಯದು, ನಾನು ಬಾಲನಾಗಿದ್ದಾಗ ನನ್ನ ದಾದಿಯಿಂದ ಕಲಿತುದೊಂದನ್ನೇ ಅನುಷ್ಠಾನ ಮಾಡುತ್ತಿದ್ದೇನೆ, ನನಗೆ ದೆವ್ವಗಳ ಭೀತಿಯಿತ್ತು ಆಕೆ, "ದೆವ್ವಗಳಿಲ್ಲ, ನಿನಗೆ ಅಂಜಿಕೆಯಾದರೆ ರಾಮ ನಾಮಸ್ಮರಿಸು" ಎಂದು ಹೇಳುತ್ತಿದ್ದಳು ಆ ಎಳೆತನದ ಕಲಿಕೆ ಇಂದು ನನ್ನ ಮನೋಆಕಾಶವನ್ನೆಲ್ಲ ಭರಿಸಿದೆ, ನನ್ನ ಜೀವನದ ಅತ್ಯಂತ ಸಂಕಟದ ಸಮಯಗಳಲ್ಲಿ ಅದು ಬೆಳಕನ್ನು ನೀಡಿದೆ ಒಬ್ಬ ಕ್ರೈಸ್ತನು ಏಸುವಿನ ನಾಮವನ್ನು ಪಠಿಸುತ್ತಲೂ, ಒಬ್ಬ ಮುಸಲ್ಮಾನನು ಅಲ್ಲಾನ ನಾಮಸ್ಮರಣೆಯಿಂದಲೂ ಮನಶ್ಶಾಂತಿಯನ್ನು ಪಡೆಯಬಹುದು.

ಇವೆಲ್ಲವುಗಳ ಅರ್ಥವೂ ಒಂದೇ ಬಗೆಯ ಸನ್ನಿವೇಶದಲ್ಲಿ ಒಂದೇ ಬಗೆಯ ಫಲಕೊಟ್ಟಾವು ನಾಮಸ್ಮರಣೆ ಬಾಯಿಮಾತಾಗಿರದೆ, ಆತ್ಮೈಕ್ಯವಾಗಿರಬೇಕು (ಹರಿಜನ, ೫-೧೨ ೪೬)

ಇಸ್ಲಾಮಿನ ಅಲ್ಲಾ, ಕ್ರೈಸ್ತರ ದೇವರು, ಹಿಂದೂಗಳ ಈಶ್ವರ ಎಲ್ಲ ಒಂದೇ ಹಿಂದೂಧರ್ಮದಲ್ಲಿ ದೇವರಿಗೆ ಅನಂತ ನಾಮಗಳಿರುವಂತೆ ಇಸ್ಲಾಮಿನಲ್ಲಿಯೂ ಅನಂತನಾಮಗಳಿವೆ ಈ ನಾಮಗಳು ವ್ಯಕ್ತಿ ಸೂಚಕಗಳಲ್ಲ, ಗುಣಸೂಚಕಗಳು, ದೇವರು ಗುಣರಹಿತನೂ, ಅವರ್ಣನೀಯನೂ, ಅಗಾಧನೂ ಆಗಿರುವುದನ್ನು ತಿಳಿದೂ ಅಲ್ಪ ಮಾನವ ತನ್ನ ಅರಿವಿಗನುಗುಣವಾಗಿ ಆ ಮಹಾ ಮಹಿಮನನ್ನು ವರ್ಣಿಸಲೆತ್ನಿಸುತ್ತಾನೆ (ಹರಿಜನ, ೧೨-೮-೩೮)

## ೮ ಒಂದೇ ನಿಶ್ಚಿತ ನೆರವು

ರಾಮನಾಮವೊಂದೇ ಅತ್ಯಂತ ನಿಶ್ಚಿತವಾದ ನೆರವೆಂಬುದರಲ್ಲಿ ಸಂಶಯವೇ ಇಲ್ಲ, ಹೃದಯಸ್ಪರ್ಶಿಯಾದ ರಾಮಸ್ಮರಣೆ ಎಲ್ಲ ಕೆಟ್ಟ ಯೋಚನೆಗಳನ್ನೂ ದೂರನೂಡುತ್ತದೆ ಕೆಟ್ಟ ಯೋಚನೆಯೇ ದೂರವಾದಾಗ, ಕೆಟ್ಟ ಕರ್ಮವೆಲ್ಲಿಂದ ಸಾಧ್ಯ ? ಮನಸ್ಸು ಶಿಥಿಲವಾಗಿದ್ದರೆ, ಬಾಹ್ಯ ಕರ್ಮಗಳೆಲ್ಲ ವ್ಯರ್ಥ ಮನಸ್ಸೊಂದು ಶುದ್ಧವಾದರೆ, ಅವೆಲ್ಲ ಅನಾವಶ್ಯಕ ಹೀಗೆಂದ ಮಾತ್ರಕ್ಕೆ ಚಿತ್ತಶುದ್ಧಿಯುಳ್ಳ ಮನುಷ್ಯ ಮನಬಂದಂತೆ ವರ್ತಿಸಬಹುದೆಂತಲ್ಲ ಅವನ ಬಾಳಿನ ಕರ್ಮವೆಲ್ಲ ಅಂತರಂಗ ಶುದ್ಧಿಯನ್ನು ಎತ್ತಿ ತೋರಿಸುತ್ತಿರಬೇಕು ಮಾನವನ ಉತ್ಕರ್ಷಕ್ಕೂ ಅಪಕರ್ಷಕ್ಕೂ ಮನಸ್ಸೇ ಕಾರಣವೆಂದು ಗೀತೆ ಖಚಿತವಾಗಿ ಹೇಳುತ್ತದೆ ಮಿಲ್ಟನ್ ಕವಿಯೂ ಇದೇ ಅಭಿಪ್ರಾಯವನ್ನು ಹೀಗೆ ಸೂಚಿಸಿದಾನೆ, " ಮನ ಇದ್ದೆಡೆಯೇ ಇರುವುದು, ತನ್ನಲ್ಲಿಯೇ ನರಕ ಸ್ವರ್ಗಗಳನ್ನು ಸೃಷ್ಟಿಮಾಡಿಕೊಳ್ಳಬಹುದು "
(ಹರಿಜನ, ೧೨-೫-೪೬)

## ೯ ರಾಮನಾಮವನ್ನು ಗೇಲಿಗೀಡುಮಾಡುವುದು

ಪ್ರ ಬನಾರಸದ ರಾಮನಾಮ ಕೋಠಿಯೂ ಮತ್ತು ರಾಮನಾಮವನ್ನು ಅಂಚಿಗೆ ಒತ್ತಿದ ಬಟ್ಟೆಯನ್ನು ಧರಿಸುವುದೂ ರಾಮನಾಮವನ್ನು ಅಪಹಾಸ್ಯಕೀಡು ಮಾಡಿದಂತೆಂದೂ, ಹೀನ ಅಣಕಮಾಡಿದಂತೆಂದೂ ನನ್ನ ಭಾವನೆ ಹೀಗಿರುವಾಗ ರಾಮನಾಮ ಸಕಲ ವ್ಯಾಧಿ ನಿವಾರಕ ಮಹಾಮಂತ್ರವೆಂದು ನೀವು ಬೋಧಿಸುವುದು ಅಜ್ಞಾನಕ್ಕೂ, ಬೂಟಾಟಿಕೆಗೂ ಪ್ರೋತ್ಸಾಹ ಕೊಟ್ಟಂತಾಗುವುದಿಲ್ಲವೆ? ಅಂತರಂಗ ಮುಟ್ಟಿದ ರಾಮನಾಮ ಸ್ಮರಣೆ ಸರ್ವವ್ಯಾಧಿ ನಿವಾರಕ ಶಕ್ತಿ ಪಡೆಯಬೇಕಾದರೆ ನಿಜವಾದ ಧಾರ್ಮಿಕ ಶಿಕ್ಷಣವೊಂದೇ ಅದಕ್ಕೆ ಮಾರ್ಗವೆಂದು ನನ್ನ ಮತ

ಉ ಹೌದು, ನಿಮ್ಮ ಮಾತು ನಿಜ ನಮ್ಮ ಸುತ್ತಮುತ್ತಲೂ ಆವರಿಸಿರುವ ಮೂಢ ತಿಳಿವಳಿಕೆ, ಬೂಟಾಟಿಕೆ ಇವನ್ನು ಗಮನಿಸಿದಾಗ, ಒಳ್ಳೆಯದನ್ನೂ ಮಾಡಲು ಅಂಜಿಕೆಯಾಗುತ್ತದೆ ಆದರೆ, ಅಂಜಿಕೆಗೆ ಗುರಿಯಾದರೆ, ಸತ್ಯವೂ ಮರೆಯಾಗುತ್ತದೆ ಇಂಥ ಸನ್ನಿವೇಶದಲ್ಲಿ ತನ್ನ ನಂಬಿಕೆಯಂತೆ ನಿರ್ಭಯವಾಗಿ ನಡೆಯುವುದೇ ಶ್ರೇಷ್ಠ ವಿಧಾನ ಅಸತ್ಯ, ಬೂಟಾಟಿಕೆ, ಇವು ಜಗತ್ತಿನಲ್ಲಿ ಇದ್ದೇ ಇರುತ್ತವೆ, ನಾವು ಮಾತ್ರ ಸತ್ಯವನ್ನಾಚರಿಸಿದರೆ ಅವು ಹೇಗೆ ವೃದ್ಧಿಯಾಗುತ್ತವೆ, ಎಂಬ ಭ್ರಾಂತಿ ಬರಬಹುದು ಅಸತ್ಯವೇ ನಮ್ಮ ಸುತ್ತುವರಿದಿರುವಾಗ ಈ ಭ್ರಾಂತಿಗೀಡಾಗುವ ಅಪಾಯವುಂಟು ಅಜ್ಞಾನದಿಂದಲೂ ಆಲಸ್ಯದಿಂದಲೂ ನಾವು ತಪ್ಪುಮಾಡದಂತೆ ಎಚ್ಚರಿಕೆಯಿಂದಿರಬೇಕು ಆದುದರಿಂದ ಎಲ್ಲ ಕಾಲಗಳಲ್ಲಿಯೂ, ಸತತವಾಗಿ ತಪ್ಪುಮಾಡದಂತೆ ಎಚ್ಚರಿಕೆಯಿಂದಿರುವುದು ಆವಶ್ಯಕ ಸತ್ಯಪ್ರೇಮಿಗೆ ಈ ಮಾರ್ಗ ಬಿಟ್ಟು ಬೇರೆ ಇಲ್ಲ ಎಚ್ಚರಿಕೆ ತಪ್ಪಿದರೆ, ರಾಮನಾಮದಂಥ ಮಹಾ ಸತ್ವಯುತ ಶಕ್ತಿಯೂ ಅಸಮರ್ಥವಾಗಿ ಪ್ರಚಲಿತವಾಗಿರುವ ನೂರಾರು ಮೂಢನಂಬಿಕೆಗಳಂತೆ ಅದೂ ಒಂದಾಗಿಬಿಡಬಹುದು, (ಹರಿಜನ, ೨-೬-೪೬)

## ೧೦. ರಾಮನಾಮವೂ—ಯಂತ್ರಮಂತ್ರವೂ

ನನ್ನ ಭಾವನೆಯ ರಾಮನಾಮಕ್ಕೂ ಯಂತ್ರಮಂತ್ರಗಳಿಗೂ ಯಾವ ಬಗೆಯ ಸಂಬಂಧವೂ ಇಲ್ಲ ರಾಮನಾಮ ಪಠನೆಯೆಂದರೆ ಭಗವಂತನ ಅಸದೃಶಶಕ್ತಿಯಿಂದ ನೆರವನ್ನು ಪಡೆದುಕೊಳ್ಳುವುದೆಂದು ಸ್ಪಷ್ಟಪಡಿಸಿ ದೇನೆ ಅದರೊಡನೆ ಹೋಲಿಸಿದ ಅಣುಶಕ್ತಿ, ಶೂನ್ಯ. ಆ ನೆರವು ಎಲ್ಲ ಬಾಧೆಗಳನ್ನೂ ಹರಿಸಬಲ್ಲದು ಹೃದಯಪೂರ್ಣವಾಗಿ ರಾಮ ಸ್ಮರಣೆ ಮಾಡಬೇಕೆಂದು ಹೇಳುವುದು ಸುಲಭವಾದರೂ ಅದನ್ನು ವಸ್ತುತಃ ಆಚರಿಸುವುದು ಮಹಾಕಷ್ಟ ಹೀಗಿದ್ದರೂ ಮಾನವನಿಗೆ ಅದನ್ನು ಬಿಟ್ಟರೆ ಅದಕ್ಕಿಂತ ಹಿರಿದಿಲ್ಲ (ಹರಿಜನ ೧೩-೧೦-೪೬)

## (೧೧) ನನ್ನ ರಾಮ

ರಾಮಧ್ಯಾನದಲ್ಲಿದ್ದ ಹಿಂದುಗಳಲ್ಲದವರು ಹೇಗೆ ಭಾಗವಹಿಸಲು ಶಕ್ಯವೆಂಬುದಕ್ಕೆ ಗಾಂಧೀಜೀ ಇತ್ತ ಉತ್ತರವಿದು

"ರಾಮಧ್ಯಾನ ಅಥವಾ ರಾಮನಾಮ ಸ್ಮರಣೆ ಕೇವಲ ಹಿಂದೂಗಳಿಗೆ ಅನ್ವಯಿಸುವುದೆಂದೂ ಆದುದರಿಂದ ಮುಸಲ್ಮಾನರು ಅದರಲ್ಲಿ ಹೇಗೆ ಭಾಗ ವಹಿಸಲು ಶಕ್ಯವೆಂದೂ ಯಾರಾದರೂ ಆಕ್ಷೇಪವೆತ್ತುವುದನ್ನು ಕೇಳಿದರೆ ನನಗೆ ನಗುಬರುತ್ತದೆ ಮುಸಲ್ಮಾನರಿಗೆ ಬೇರೆ, ಹಿಂದೂ, ಪಾರಸೀ, ಕ್ರೈಸ್ತರಿಗೇ ಬೇರೆ ಬೇರೆ ದೇವರಿದ್ದಾನೆಯೇ ? ಇಲ್ಲ ಸರ್ವಶಕ್ತ ಒಬ್ಬನೇ ಅವನು ಸರ್ವಾಂತರ್ಯಾಮಿ ಅವನಿಗೆ ಬೇರೆ ಬೇರೆ ಹೆಸರುಗಳು ನಮಗೆ ಯಾವುದು ಚಿರಪರಿಚಿತವೋ ಅದರಿಂದ ಸ್ಮರಿಸುತ್ತೇವೆ "

"ನನ್ನ ರಾಮ—ನಮ್ಮ ಪ್ರಾರ್ಥನೆಯ ರಾಮ, ಚಾರಿತ್ರಿಕ ವ್ಯಕ್ತಿ, ಅಯೋಧ್ಯಾಪತಿ, ದಶರಥ ಮಹಾರಾಜನ ಮಗ ರಾಮನಲ್ಲ ಅವನು ಸನಾತನ, ಅಜ, ಅದ್ವಿತೀಯ. ಅವನನ್ನೇ ನಾ ಧ್ಯಾನಿಸುವುದು ಅವನ ನೆರವನ್ನೇ ನಾ ಬೇಡುವುದು, ಹಾಗೆಯೆ ನೀವೂ

ಅವನು ಎಲ್ಲರಿಗೂ ಸೇರಿದವನು ಆದುದರಿಂದ ಮುಸಲ್ಮಾನನೇ ಆಗಲೀ, ಯಾರೇ ಆಗಲೀ ಅವನ ನಾಮಸ್ಮರಣೆ ಮಾಡಲು ಏಕೆ ಆಕ್ಷೇಪ ವೆತ್ತಬೇಕೋ ನನಗೆ ಅರ್ಥವಾಗದು ಆದರೆ ಅವನು ದೇವರನ್ನು ರಾಮ

ನೆಂದೇ ಭಾವಿಸಬೇಕೆಂಬ ಕಟ್ಟಿಲ್ಲ ಅಲ್ಲಾ, ಖುದಾ, ಯಾವುದು ಅವನಿಗೆ ಹಿತವೋ ಅದನ್ನು ಸ್ವರಮೇಳ ಕೆಡದಂತೆ ತನ್ನಲ್ಲಿಯೇ ಉಚ್ಚರಿಸಿಕೊಳ್ಳಬಹುದು

(ಹರಿಜನ ೨೮-೪-೪೬)

ದೇವರಲ್ಲಿ ನಂಬಿಕೆಯಿಲ್ಲವೆಂದು ನೀವು ಹೇಳಬಹುದು ದೇವರ ಚಿತ್ತವಿಲ್ಲದೆ ಒಂದು ಅರೆಕ್ಷಣವೂ ನೀವು ಉಸಿರಾಡಲಾರಿರೆಂದು ನೀವು ತಿಳಿದಿಲ್ಲ ಅವನನ್ನು ಈಶ್ವರ, ಅಲ್ಲಾ, ದೇವರು, ಅಹುರ-ಮಜ್ದಾ, ಹೇಗೆ ಬೇಕಾದರೂ ಕರೆಯಿರಿ ಅಸಂಖ್ಯ ಮಾನವರಿರುವಂತೆ, ಅವನ ನಾಮಗಳು ಅಸಂಖ್ಯ ಅವನು ಅದ್ವಿತೀಯ ಅವನೇ ಮಹಾ ಮಹಿಮ ಅವನಿಗಿಂತ ಮಹಿಮರಿಲ್ಲ ಅವನು ಕಾಲಾತೀತ ನಿರ್ವಿಕಾರ, ನಿಷ್ಕಲಂಕ ಇಂಥವನು ನನ್ನ ರಾಮ ಅವನೇ ನನ್ನ ಸ್ವಾಮಿ, ಒಡೆಯ

(ಹರಿಜನ. ೨೪-೧೧-೪೬)

## ೧೨ ರಾಮ ಯಾರು ?

ಪ್ರ ನೀವು ರಾಮನಾಮವನ್ನು ಕುರಿತು ಮಾತನಾಡುವಾಗ ಅವನು ವಿಶ್ವೇಶ್ವರನೆಂದೂ, ದಶರಥನ ಮಗನಲ್ಲವೆಂದೂ ಹೇಳುತ್ತೀರಿ ಆದರೆ, ನಿಮ್ಮ ರಾಮಧ್ಯಾನ—' ಸೀತಾರಾಮ —' ರಾಜಾರಾಮ ' ಇತ್ಯಾದಿಯಿಂದ ಕೂಡಿ, ' ಸೀತಾಪತಿಯಾದ ರಾಮನಿಗೆ ಜಯ 'ವೆಂದು ಕೊನೆಗೊಳ್ಳುತ್ತದೆ, ಈ ರಾಮ ದಶರಥ ಮಹಾರಾಜನ ಮಗ ರಾಮನಲ್ಲದಿದ್ದರೆ ಬೇರೆ ಯಾರು ?

ಉ ರಾಮಧ್ಯಾನದಲ್ಲಿ ' ರಾಜಾರಾಮ—ಸೀತಾರಾಮ ' ಎಂಬುದು ಬರುವುದೇನೋ ನಿಜ ರಾಮನಿಗಿಂತ ' ನಾಮ-ಮಹಿಮೆ ' ಹಿರಿದು ಹಿಂದೂ ಧರ್ಮವು ಅನರ್ಘ್ಯ ರತ್ನಗಳಿಂದ ತುಂಬಿ ತುಳುಕುವ ಮೇರೆವರಿಯದ ಸಾಗರದಂತೆ ಆ ಸಾಗರದಲ್ಲಿ ಆಳಕ್ಕೆ ಮುಳುಗಿದಷ್ಟೂ ಐಶ್ವರ್ಯ ದೊರಕುತ್ತದೆ ಹಿಂದೂ ಧರ್ಮದಲ್ಲಿ ದೇವರಿಗೆ ಅನಂತನಾಮಗಳು ಕೋಟ್ಯಂತರ ಹಿಂದೂಗಳ ಚಾರಿತ್ರಕ ವ್ಯಕ್ತಿಗಳಾದ ರಾಮ, ಕೃಷ್ಣ, ಇವರುಗಳನ್ನು ಇಹಕ್ಕೆ ಬಂದ ಭಗವಂತನ ಅವತಾರವೆಂದೇ ನಂಬುತ್ತಾರೆ ಇವರ ಧ್ಯಾನ, ಅರ್ಚನ, ಮೊದಲಾದುವುಗಳಿಂದ ಮೋಕ್ಷಪ್ರಾಪ್ತಿ ಎಂದು ನಂಬುತ್ತಾರೆ. ಇದರಲ್ಲಿ

ಇತಿಹಾಸ, ಭಾವುಕತೆ, ಸತ್ಯ—ಇವು ಬಿಡಿಸಲಾರದಂತೆ ಮಿಳಿನವಾಗಿವೆ. ಇವುಗಳನ್ನು ಪೃಥಕ್ಕರಿಸಲೆತ್ನಿಸುವುದು ಅಗಾಧವೇ ಸರಿ ದೇವರಿಗೆ ಕೊಟ್ಟಿರುವ ಎಲ್ಲ ನಾಮಗಳೂ, ಗುಣರೂಪಗಳೂ ಏಕಮಾತ್ರ, ನಿರಾಕಾರ, ಸರ್ವಾಂತರ್ಯಾಮಿಯಾದ ರಾಮನಿಗೆ ಸಂಕೇತಗಳೆಂದು ನಾನು ಸ್ವೀಕರಿಸಿದೇನೆ ಆದುದರಿಂದ ಸೀತಾರಾಮನೆಂದೂ, ದಶರಥನ ಮಗನೆಂದೂ ವರ್ಣಿತನಾದ ರಾಮ, ಸರ್ವಚೈತನ್ಯಶಕ್ತಿಯೆಂದೂ ಮಾನವಹೃದಯದಲ್ಲಿ ಅವನು ಪ್ರತಿಷ್ಠಿತನಾದರೆ, ಮಾನಸಿಕ, ನೈತಿಕ ದೈಹಿಕ ಮೊದಲಾದ ಎಲ್ಲ ಬಾಧೆಗಳನ್ನೂ ಪರಿಹರಿಸುವನೆಂದೂ ನಂಬಿದೇನೆ, (ಹರಿಜನ ೨-೬-೪೬)

## ೧೩ ದಶರಥಸುತ ರಾಮ

ಒಬ್ಬ ಆರ್ಯಸಮಾಜವಾದಿ ಹೀಗೆ ಬರೆಯುತ್ತಾನೆ "ನೀವು ನಂಬಿರುವ ಅಮರ್ತ್ಯರಾಮ ದಶರಥ ಸುತನೂ ಸೀತಾಪತಿಯೂ ಆದ ರಾಮ ಹೇಗಾದಾನು? ನಿಮ್ಮ ಪ್ರಾರ್ಥನಾ ಸಭೆಗೆ ಬಂದಾಗ ನನ್ನ ಮನದಲ್ಲಿ ಸಂದಿಗ್ಧ ಭಾವ ಉತ್ಪನ್ನವಾಗುವುದರಿಂದ ರಾಮಧ್ಯಾನದಲ್ಲಿ ಸೇರಲು ನನಗೆ ಅಶಕ್ಯವೆನಿಸಿದೆ ಎಲ್ಲರೂ ಪ್ರಾರ್ಥನೆಯಲ್ಲಿ ಭಾಗವಹಿಸಬೇಕೆಂದು ನೀವು ಹೇಳಿದಾಗ ನನಗೆ ಹಿಂಸೆಯಾಗುತ್ತದೆ 'ಎಲ್ಲರೂ' ರಾಮಧ್ಯಾನದಲ್ಲಿ ಭಾಗವಹಿಸುವಂತೆ ಮಾಡಲಾರಿರಾ?"

'ಎಲ್ಲರೂ' ಎಂದರೆ ನನ್ನ ಅರ್ಥವನ್ನು ಎಷ್ಟೋಸಲ ವಿವರಿಸಿದೇನೆ. ಹೃತ್ಪೂರ್ವಕವಾಗಿ ಪ್ರಾರ್ಥನೆಯಲ್ಲಿ ಸೇರಿ, ರಾಗದೊಂದಿಗೆ ಮೇಳಗೂಡಿಸುವವರಿಗೆಲ್ಲ ಅದು ಅನ್ವಯಿಸುತ್ತದೆ ಉಳಿದವರು ಮೌನವಾಗಿರಬಹುದು. ಇಲ್ಲಿನ ಪ್ರಧಾನ ಪ್ರಶ್ನೆಯೆಂದರೆ, 'ದಶರಥಸುತರಾಮ ಹೇಗೆ ಅಮರ್ತ್ಯನೆಂದು ಪರಿಗಣಿಸಲ್ಪಟ್ಟಾನು? ಸಂತ ತುಳಸೀದಾಸರೇ ಈ ಪ್ರಶ್ನೆಗೆ ಉತ್ತರವಿತ್ತಿದಾರೆ ಈ ಉತ್ತರವು ಅತರ್ಕ್ಯ ಇದು ಬೌದ್ಧಿಕ ತೃಪ್ತಿಯನ್ನು ನೀಡದಿರಬಹುದು ಮೊದಲು ಮೊದಲು ನಾನೂ ದಶರಥನಸುತ, ಸೀತಾಪತಿ ರಾಮನನ್ನೇ ಧ್ಯಾನಿಸುತ್ತಿದ್ದೆ ನನ್ನ ಜ್ಞಾನವೂ, ಅನುಭವವೂ ಹೆಚ್ಚಿದಂತೆ, ನನ್ನ ರಾಮ ಅಮರ್ತ್ಯನೂ, ಸರ್ವಾಂತರ್ಯಾಮಿಯೂ ಆದನು.

ಹೀಗೆಂದರೆ, ರಾಮ, 'ಸೀತಾಪತಿ' ಎಂಬುದು ತಪ್ಪಲಿಲ್ಲ, ರಾಮ ದರ್ಶನದಿಂದ ಸೀತಾಪತಿಯ ಅರ್ಥ ವಿಶಾಲವಾಯಿತು. ಜಗತ್ತಿನ ವಿಕಾಸವೇ ಹೀಗೆ ಕೇವಲ ದಶರಥಸುತರಾಮನನ್ನು ಧ್ಯಾನಿಸುವವನಿಗೆ ಅವನು ಸರ್ವಾಂತರ್ಯಾಮಿಯಾಗಲಾರನು ರಾಮ ದೇವರೆಂದು ನಂಬಿದವರಿಗೆ ಸರ್ವಾಂತರ್ಯಾಮಿಯಾಗುತ್ತಾನೆ, ಎಂದರೆ, ತಂದೆ ಮಕ್ಕಳಿಬ್ಬರಿಗೂ ಅಭೇದ ಉಂಟಾಗುತ್ತದೆ ಇದೆಲ್ಲ ಬರೀ ಕಲ್ಪನೆ ಎನ್ನಬಹುದು "ಅವರವರಿಗೆ ಅವರವರ ನಂಬಿಕೆಯಂತೆ" ಎಂದು ಮಾತ್ರ ಹೇಳಬಲ್ಲೆ ಸಕಲ ಧರ್ಮಗಳ ಮೂಲವೂ ಒಂದೇ, ಆದರೆ ಅವುಗಳ ಸಮನ್ವಯವನ್ನೂ ಮಾಡಬೇಕು ಇಂದು ಎಲ್ಲ ಧರ್ಮಗಳೂ ಬೇರೆ ಬೇರೆ ಎಂದು ಭಾವಿಸುತ್ತೇವೆ ಆದುದರಿಂದಲೇ ಪರಸ್ಪರ ಕಡಿದಾಟ ಇದರಿಂದ ಬೇಸರ ಹೊಂದಿ ನಾಸ್ತಿಕರಾಗುತ್ತೇವೆ ನಮ್ಮ ಸಣ್ಣಪುಟ್ಟ ಸ್ವಾರ್ಥದ ಹೊರತೂ ಏನೂ ಇಲ್ಲ, ದೇವರೂ ಇಲ್ಲ ಅವನ ತಿಳಿವಳಿಕೆ ನಮಗೆ ಬಂದಾಗ ಈ ಸ್ವಾರ್ಥ ಮಾಯವಾಗಿ ದೇವರೇ ಎಲ್ಲೆಲ್ಲಿಯೂ ವಿರಾಜಿಸುತ್ತಾನೆ ಆದುದರಿಂದ ದಶರಥನ ಸುತನಾಗಿಯೂ, ಸೀತಾಪತಿಯಾಗಿಯೂ, ಭರತ ಲಕ್ಷ್ಮಣರ ಸೋದರನಾಗಿಯೂ ಇದಾನೆ, ಇಲ್ಲವೂ ಇಲ್ಲ ಆದರೂ ಅವನು ದೇವರು, ಅಜ ಮತ್ತು ಸನಾತನ ರಾಮ ದಶರಥನ ಸುತನಲ್ಲವೆಂದು ನಂಬದವರೂ ಪ್ರಾರ್ಥನಾ ಸಭೆಯಲ್ಲಿ ಸೇರುವುದು ಶ್ಲಾಘನೀಯವೇ ಈ ರಾಮನ ವಿಷಯ ವಿಚಾರಕ್ಕೆ ಅತೀತ ವಾಚಕರು ಹೇಗಾದರೂ ಭಾವಿಸಲಿ, ನಾನು ಮಾತ್ರ ನನ್ನ ನಂಬಿಕೆಯನ್ನು ತಿಳಿಸಲೆತ್ನಿಸಿದೇನೆ (ಹರಿಜನ ೨೨-೯-೪೬)

## ೧೪. ದೇವರು ಯಾರು? ಎಲ್ಲಿದಾನೆ?

ದೇವರು ಪುರುಷನಲ್ಲ ಅವನು ಆಗಾಗ ಪುರುಷರೂಪದಿಂದ ಈ ಮರ್ತ್ಯ ಲೋಕದಲ್ಲಿ ಅವತರಿಸುವನೆಂಬುದು ಆಂಶಿಕ ಸತ್ಯ ಮಾತ್ರ, ಅದು ಅಂಥ ಅವತಾರ ಮಾಡಿದ ಪುರುಷದೇವರಿಗೆ ಬಹಳ ಸಮೀಪದವನೆಂದು ಅರ್ಥಕೊಡುತ್ತದೆ ದೇವರು ಸರ್ವವ್ಯಾಪಿ ಎಂದರೆ, ಅವನು ಎಲ್ಲ ಪುರುಷರಲ್ಲಿಯೂ ವಾಸಿಸುವನೆಂದೂ, ಆದುದರಿಂದ ಎಲ್ಲರೂ ಅವನ ಅವತಾರಗಳೆಂದೇ ಹೇಳಬಹುದು ಆದರೆ, ಈ ಮಾತಿಗೆ ನೆಲೆಯಿಲ್ಲ ರಾಮ, ಕೃಷ್ಣ,

ಮೊದಲಾದವರು ದೇವರ ಅವತಾರಗಳೆಂದು ಪರಿಗಣಿಸಲು ನಾವು ಅವರಿಗೆ ಆರೋಪಿಸಿರುವ ದೈವೀ ಗುಣಗಳೇ ಕಾರಣ. ನಿಜವಾಗಿಯೂ ಅವರು ಮಾನವ ಕಲ್ಪನೆಯ ಸೃಷ್ಟಿ ಅವರು ಬದುಕಿದ್ದರೋ ಇಲ್ಲವೋ ಎಂಬ ಸಂಶಯ, ಕಾಲ್ಪನಿಕ ಚಿತ್ರದ ಮೇಲೆ ಪರಿಣಾಮ ಬೀರಲಾರದು ಚಾರಿತ್ರಿಕ ವ್ಯಕ್ತಿಗಳಾದ ರಾಮ, ಕೃಷ್ಣರ ಬಗೆಗೆ ಎಷ್ಟೋ ಸಂಶಯಗಳು ಉತ್ಪನ್ನ ವಾಗಿ ಅವುಗಳ ಪರಿಹಾರಕ್ಕಾಗಿ ನಾನಾ ರೀತಿಯ ವಾದಗಳನ್ನು ಮಂಡಿಸ ಬೇಕಾಗುತ್ತದೆ ಇದರ ಸತ್ಯಾಂಶ ಹೀಗೆ, ದೇವರೊಬ್ಬನೇ ಶಕ್ತಿ ಅವನು ಬಾಳಿನ ಜೀವಾಳ ಅವನು ಶುದ್ಧವೂ ಅಕಳಂಕವೂ ಆದ ಚೈತನ್ಯ. ಅವನು ಸನಾತನ ಇಷ್ಟೆಲ್ಲ ಆದರೂ, ವಿಚಿತ್ರವೆಂದರೆ, ಆ ಸರ್ವವ್ಯಾಪೀ ಚೈತನ್ಯ ದಿಂದ ಎಲ್ಲರೂ ಫಲವನ್ನಾಗಲೀ, ರಕ್ಷಣೆಯನ್ನಾಗಲೀ, ಹೊಂದಲು ಸಮರ್ಥ ರಾಗಿಲ್ಲ

ವಿದ್ಯುತ್ತು ಒಂದು ಬಗೆಯ ಶಕ್ತಿ ಆದರೆ ಎಲ್ಲರೂ ಅದರಿಂದ ಫಲ ಹೊಂದುವಂತಿಲ್ಲ ಕೆಲವು ನಿಯಮಗಳಿಗನುಸಾರವಾಗಿಯೇ ಅದನ್ನು ಉತ್ಪನ್ನ ಮಾಡಬಹುದು ಅದು ಚೈತನ್ಯರಹಿತಶಕ್ತಿ ಅದನ್ನು ಉತ್ಪನ್ನ ಮಾಡುವ ನಿಯಮಗಳನ್ನು ಮಾನವ ಶ್ರಮಪೂರ್ವಕವಾಗಿ ಅರಿತು ಕೊಂಡರೆ ಮಾತ್ರ ಅದರ ಫಲವನ್ನು ಹೊಂದಬಹುದು

ನಾವು ದೇವರೆಂದು ಕರೆಯುವ ಚೈತನ್ಯಯುತ ಶಕ್ತಿಯನ್ನು ನಮ್ಮ ಲ್ಲಿಯೇ ಕಾಣುವ ನಿಯಮಗಳನ್ನು ಅನುಸರಿಸಿದರೆ ಅದು ಪ್ರತ್ಯಕ್ಷವಾದೀತು ಆದರೆ ದೇವರನ್ನು ಕಾಣಲು ಅವನ ನಿಯಮಗಳನ್ನು ಬಹಳ ಕಡುತರ ಪ್ರಯಾಸದಿಂದ ಅನುಸರಿಸಬೇಕೆಂಬುದು ಸ್ವಯಂವೇದ್ಯ. ಒಂದೇ ಮಾತಿ ನಲ್ಲಿ ಆ ನಿಯಮವನ್ನು ಬ್ರಹ್ಮಚರ್ಯವೆನ್ನಬಹುದು ಬ್ರಹ್ಮಚರ್ಯವನ್ನು ಸಾಧಿಸಲು ನೇರವಾದ ಮಾರ್ಗ ರಾಮನಾಮ ಇದನ್ನು ನನ್ನ ಅನುಭವ ದಿಂದ ಹೇಳುತ್ತಿದ್ದೇನೆ ತುಳಸೀದಾಸರಂಥ ಸಾಧುವರ್ಯರೂ ಈ ರಾಜ ಮಾರ್ಗವನ್ನು ನಮಗೆ ತೋರಿಸಿದಾರೆ ನನ್ನ ಸ್ವಂತ ಅನುಭವಕ್ಕೆ ಯಾರೂ ಅತಿಶಯವಾದ ಬೆಲೆ ಕಟ್ಟಬೇಕಾಗಿಲ್ಲ ಬಹುತೇಕ, ಉರುಳಿ ಕಾಂಚನದಲ್ಲಿ ನಾನಿದ್ದಾಗ ರಾಮನಾಮದ ಸತ್ವವು ಸ್ಪಷ್ಟವಾಗಿ ನನ್ನ ಅನುಭವಕ್ಕೆ ಬಂದಿ ತೆಂದು ಹೇಳಬಹುದು ನಮ್ಮ ಎಲ್ಲ ವಿಧದ ದುರಿತಗಳಿಗೂ ರಾಮನಾ

ಮವೇ ಔಷಧವೆಂದು ನಾನು ಅಲ್ಲಿಯೇ ಸ್ಥಿರಬುದ್ಧಿಯಿಂದ ಘೋಷಿಸಿ ದುದು ಇದನ್ನು ಪ್ರಯೋಗಮಾಡುವವನು ಅಲ್ಪ ಬಾಹ್ಯ ಶ್ರಮದಿಂದಲೇ ಅದ್ಭುತ ಪರಿಣಾಮಗಳನ್ನು ಹೊಂದಬಹುದು

ಈ ವಿಚಾರಪಥದಿಂದ ನೋಡಿದರೆ, ಬ್ರಹ್ಮಚರ್ಯ ಸಾಧನೆಗೆ ಅನು ಸರಿಸಬೇಕಾದ ಸಾಂಪ್ರದಾಯಿಕ ಮಾರ್ಗಗಳು, ರಾಮನಾಮ ಹೃದಯ ಸಿಂಹಾಸನದಲ್ಲಿ ಆರೂಢವಾದಾಗ, ಅದರ ಮುಂದೆ ಗಣನಾಶೂನ್ಯವೆಂದು ಹೇಳಬಲ್ಲೆ. ಆಗ ಮಾತ್ರ ರಾಮನಾಮದ ಲೋಕಾತೀತ ಸೌಂದರ್ಯವೂ ಸತ್ವವೂ ಅರಿವಾದೀತು (ಹರಿಜನ. ೨೨-೬-೪೭)

## (೧೫) ರಾಮನಾಮವೂ-ನಿಸರ್ಗಚಿಕಿತ್ಸೆಯೂ

ಎಲ್ಲ ವಿಷಯಗಳಲ್ಲಿಯೂ ನಾ ಪ್ರಗತಿಪರ ವಿಕಾಸಹೊಂದುವಂತೆ ನಿಸರ್ಗ ಚಿಕಿತ್ಸೆಯ ಬಗೆಗೂ ನನ್ನ ಕಲ್ಪನೆ ವಿಕಾಸಹೊಂದಿದೆ ಭಗವಂತನ ಸಾಕ್ಷಾತ್ಕಾರ ಹೊಂದಿ ಅದರಿಂದ ನಿಷ್ಕಾಮ ಸ್ಥಿತಿಯನ್ನು ಸಾಧಿಸಿದಾತ ದೀರ್ಘಾಯುಷ್ಯ ಪಡೆಯಲು ಬರಬಹುದಾದ ಎಲ್ಲ ಅಡಚಣೆಗಳನ್ನೂ ಗೆದ್ದಾನು. ಯಾವ ಮನುಷ್ಯ ಅಗೋಚರ ಶಕ್ತಿಯಲ್ಲಿ ಚೈತನ್ಯಯುತ ನಂಬಿಕೆಯುಳ್ಳವನಾಗಿ, ನಿಷ್ಕಾಮಸ್ಥಿತಿಗೆ ಬರುವನೋ ಆವನ ದೈಹಿಕ, ಆಂತರಿಕ ರಚನೆಯೂ ಪರಿವರ್ತನೆ ಹೊಂದೀತೆಂಬ ನಿರ್ಣಯಕ್ಕೆ ಅನುಭವ ದಿಂದಲೂ, ಶಾಸ್ತ್ರಾಧ್ಯಯನದಿಂದಲೂ, ಬಂದಿವೇನೆ ಇಂಥ ಸ್ಥಿತಿ ಕೇವಲ ಅಪೇಕ್ಷಿಸಿದರೆ ದೊರಕಲಾರದು ಸತತ ಎಚ್ಚರಿಕೆಯೂ ಅಭ್ಯಾಸವೂ, ಬೇಕು. ಈ ಎರಡು ಇದ್ದರೂ ದೈವಕೃಪೆ ಇಲ್ಲವಾದರೆ ಪುರುಷಪ್ರಯತ್ನ ವೆಲ್ಲ ನಿರರ್ಥಕವಾಗುತ್ತದೆ (ಪತ್ರಿಕಾವರದಿ. ೧೨-೬-೪೫)

## (೧೬) ನಿಸರ್ಗ ಚಿಕಿತ್ಸಾ ವಿಧಾನ

ಮಾನವಯೋಗ್ಯ ಚಿಕಿತ್ಸಾ ವಿಧಾನವೇ ನಿಸರ್ಗ ಚಿಕಿತ್ಸೆ 'ಮಾನವ' ನೆಂದರೆ, ಕೇವಲ ಪಶುಗುಣದಿಂದ ಕೂಡಿದ ಪ್ರಾಣಿಯಲ್ಲ, ಶರೀರ ದೊಡನೆ,ಮನಸ್ಸು ಮತ್ತು ಆತ್ಮಗಳಿಂದ ಕೂಡಿದ ಜೀವ ಇಂಥ ಜೀವಕ್ಕೆ ರಾಮನಾಮ ಅತ್ಯಂತ ಶ್ರೇಷ್ಠವಾದ ನಿಸರ್ಗ ಚಿಕಿತ್ಸಾ ವಿಧಾನ. ಅದು ಎಂದಿಗೂ ನಿಷ್ಫಲವಾಗದು ಆದುದರಿಂದಲೇ ಅದಕ್ಕೆ 'ರಾಮಬಾಣ'ವೆಂಬ

ಹೆಸರು ಬಂದಿದೆ. ಮಾನವನಿಗೆ ಇದೇ ಯೋಗ್ಯ ಚಿಕಿತ್ಸಾ ವಿಧಾನವೆಂದು ಪ್ರಕೃತಿಯೂ ಸೂಚಿಸುತ್ತದೆ. ಯಾವ ಬಗೆಯ ರೋಗವೇ ಆಗಲಿ ಹೃತ್ಪೂರ್ವಕವಾಗಿ ಮಾಡಿದ ರಾಮನಾಮ ಸ್ಮರಣೆಯಿಂದ ಗುಣಮುಖವಾಗುತ್ತದೆ. ದೇವರಿಗೆ ಅನಂತನಾಮಗಳು. ಪ್ರತಿ ಮಾನವನೂ ತನಗೆ ಪ್ರಿಯವಾದ ನಾಮವನ್ನು ಆರಿಸಿಕೊಳ್ಳಬೇಕು. ಈಶ್ವರ, ಅಲ್ಲಾ, ಖುದಾ ದೇವರು, ಎಲ್ಲದರ ಅರ್ಥವೂ ಒಂದೇ. ನಾಮಸ್ಮರಣೆ ಗಿಳಿಯ ಪಾಠವಾಗದೆ ಶ್ರದ್ಧೆಯಿಂದೊಡಗೂಡಿ ಸತತವಾದ ಪ್ರಯತ್ನವನ್ನು ಎತ್ತಿ ತೋರಿಸಬೇಕು. ಆ ಪ್ರಯತ್ನವೆಂಥದು? ಮಾನವನ ಶರೀರವು, ಭೂಮಿ, ನೀರು, ಆಕಾಶ, ತೇಜಸ್ಸು, ವಾಯು ಇವುಗಳ ಸಂಯೋಗ, ಆದುದರಿಂದ ಇವುಗಳಿಂದಲೇ ಚಿಕಿತ್ಸಾ ವಿಧಾನವನ್ನು ಕಂಡುಹಿಡಿದುಕೊಳ್ಳಬೇಕು. ಆದರೆ ರಾಮನಾಮ ಇದರ ಜೊತೆಯಲ್ಲಿ ಇದ್ದೇ ಇರಬೇಕು. ಇಷ್ಟೂ ಆಗಿ, ಸಾವು ಪ್ರಾಪ್ತವಾದರೆ ಅವಕ್ಕೆ ದುಃಖವೇಕೆ? ಅದನ್ನು ಸ್ವಾಗತಿಸಬೇಕು. ಈ ಶರೀರವನ್ನು ಅಮರವನ್ನಾಗಿ ಮಾಡಬಲ್ಲ ಯಾವ ಪಾಕವನ್ನೂ ವಿಜ್ಞಾನಿ ಇನ್ನೂ ಕಂಡುಹಿಡಿದಿಲ್ಲ. ಅಮರತೆ ಆತ್ಮದ ಲಕ್ಷಣ. ಅದು ಅವಿನಾಶಿ, ಅದರ ಪವಿತ್ರತೆಯನ್ನು ವ್ಯಕ್ತಪಡಿಸುವುದೇ ಮಾನವನ ಕರ್ತವ್ಯ.

ಮೇಲೆ ಸೂಚಿಸಿದ ವಿಚಾರ ಸರಣಿಯನ್ನು ಒಪ್ಪಿಕೊಂಡರೆ ನಿಸರ್ಗ ಚಿಕಿತ್ಸೆಯಲ್ಲಿ ದೊರಕಬಹುದಾದ ಸಾಧನಗಳೂ ತಾವಾಗಿಯೇ ಕ್ಲುಪ್ತವಾಗುತ್ತವೆ. ದೊಡ್ಡದೊಡ್ಡ ಆಸ್ಪತ್ರೆಗಳು, ಮಹಾವೈದ್ಯರು ಇವರುಗಳಿಂದ ಮಾನವ ಪಾರಾಗುತ್ತಾನೆ. ಈ ಎಲ್ಲ ಸೌಕರ್ಯಗಳನ್ನು ಕೋಟ್ಯಂತರ ಜನಕ್ಕೆ ಒದಗಿಸಲು ಸಾಧ್ಯವಿಲ್ಲ. ಹೀಗಿರುವಾಗ ಅಸಂಖ್ಯಾತ ಜನರಿಗೆ ದೊರಕುದುದನ್ನು ಎಲ್ಲೋ ಕೆಲವರು ಮಾತ್ರ ಅಪೇಕ್ಷಿಸಲೇಕೆ?

(ಹರಿಜನ ೩-೩-೪೬)

## (೧೭) ರಾಮನಾಮ ಸರ್ವರೋಗ ನಿವಾರಕ

ನಿಸರ್ಗ ಚಿಕಿತ್ಸೆ ಕುರಿತು ೩-೩-೪೬ ರ ಹರಿಜನದಲ್ಲಿ ಪ್ರಕಟವಾದ ನನ್ನ ಲೇಖನ ಓದಿದ ಶ್ರೀ ಗಣೇಶಶಾಸ್ತ್ರಿಜೋಷಿ ವೈದ್ಯ, ಎಂಬುವವರು ರಾಮನಾಮವು ಸರ್ವರೋಗ ನಿವಾರಕವೆಂಬುದಕ್ಕೆ ಆಯುರ್ವೇದದಲ್ಲಿಯೂ ಸಾಕಷ್ಟು ನಿದರ್ಶನಗಳಿವೆ ಎಂದು ತಿಳಿಸಿದ್ದಾರೆ. ನಿಸರ್ಗ ಚಿಕಿ

ತ್ತಿನಿಗೆ ಗೌರವದ ಸ್ಥಾನವೂ ಅದರಲ್ಲಿಯೂ ರಾಮನಾಮಕ್ಕೆ ಅತ್ಯಂತ ಶ್ರೇಷ್ಠ ಸ್ಥಾನವೂ ಇದೆ ಎಂದು ತಿಳಿಸಿದಾರೆ ಚರಕ, ವಾಗ್ಭಟ ಮೊದಲಾದ ಪ್ರಾಚೀನ ಭಾರತೀಯ ವೈದ್ಯಶಾಸ್ತ್ರಜ್ಞರು ತಮ್ಮ ಗ್ರಂಥಗಳನ್ನು ಬರೆದ ಕಾಲದಲ್ಲಿ ದೇವರಿಗೆ 'ವಿಷ್ಣು' ಎಂಬುದು ಸರ್ವಸಾಮಾನ್ಯವಾದ ಹೆಸರಾಗಿದ್ದಿತೇ ಹೊರತು 'ರಾಮ'ನೆಂದು ಇರಲಿಲ್ಲ ನಾನು ಚಿಕ್ಕಂದಿನಿಂದಲೂ ತುಳಸೀದಾಸರ ಶಿಷ್ಯನಾಗಿ ಯಾವಾಗಲೂ ದೇವರನ್ನು ರಾಮನೆಂದೇ ಭಜಿಸಿದೇನೆ ಆದರೆ, ಓಂಕಾರದಿಂದ ಆರಂಭವಾಗಿ ಎಲ್ಲ ಜನಾಂಗಗಳಲ್ಲಿಯೂ, ಎಲ್ಲ ದೇಶಗಳಲ್ಲಿಯೂ, ಭಾಷೆಗಳಲ್ಲಿಯೂ, ಪ್ರಚಲಿತವಿರುವ ದೇವರ ಹೆಸರೆಲ್ಲ ಒಂದೇ ಅರ್ಥವುಳ್ಳವೆಂದು ನಾ ತಿಳಿದಿದೇನೆ ದೇವರೂ ಅವನ ಕಟ್ಟಲೆಯೂ ಎರಡೂ ಒಂದೇ ಆದುದರಿಂದ ಅವನ ಕಟ್ಟಲೆಯಂತೆ ನಡೆಯುವುದೇ ಅವನ ಅರ್ಚನೆಯ ಶ್ರೇಷ್ಠವಿಧಾನ ಯಾರು ಅವನ ಕಟ್ಟಲೆಯನ್ನು ತದೇಕನಿಷ್ಠೆಯಿಂದ ಅನುಸರಿಸುವರೋ ಅವರು ನಾಮಜಪ ಮಾಡಲೇ ಬೇಕಾಗಿಲ್ಲ ಯಾರಿಗೆ ಭಗವದ್ಧ್ಯಾನವು ಸಹಜಸಿದ್ಧವಾಗಿದೆಯೋ ಅಥವಾ ಯಾರು ಭಗವಂತನಲ್ಲಿ ತಲ್ಲೀನರಾಗಬಲ್ಲರೋ ಅಥವಾ ಯಾರಿಗೆ ಭಗವಂತನ ಕಟ್ಟಲೆಗಳನ್ನು ಅನುಷ್ಠಿಸುವುದು ಸ್ವಭಾವವೇ ಆಗಿರುತ್ತದೋ ಅಂಥವರಿಗೆ ಬೇರೆ ಯಾವ ಚಿಕಿತ್ಸೆಯೂ ಬೇಡ

ಇಂಥ ಪರಮ ಸಿದ್ಧೌಷಧವನ್ನು ಕೇವಲ ಸಮೀಪದಲ್ಲಿಯೇ ಇಟ್ಟುಕೊಂಡು ಅದರ ವಿಷಯವಾಗಿ ಸ್ವಲ್ಪವೂ ತಿಳಿದುಕೊಳ್ಳದಿರುವುದು ವಿಚಿತ್ರವಲ್ಲವೆ? ಒಂದುವೇಳೆ ತಿಳಿದುಕೊಂಡಿದ್ದರೂ 'ಅವನನ್ನು' ಸ್ಮರಿಸಿಕೊಳ್ಳದಿರುವುದೂ, ಅಥವಾ ಸ್ಮರಿಸಿಕೊಂಡರೂ ಕೇವಲ ನೆಪಕ್ಕಾಗಿ ಸ್ಮರಿಸಿಕೊಳ್ಳುವುದಾದರೂ ಏತಕ್ಕೆ? ದೇವರ ನಾಮವನ್ನು ಶುಕಪಾಠ ಮಾಡಿದಂತೆ ಪಠಿಸುವುದರಿಂದ ಅವನನ್ನು ಸರ್ವರೋಗ ನಿವಾರಕನೆಂದು ಒಪ್ಪಿಕೊಳ್ಳಲು ವಿಫಲವಾದಂತಯೇ ಸರಿ

ಈ ಪರಮ ಸಿದ್ಧೌಷಧವನ್ನು ಡಾಕ್ಟರುಗಳೂ, ವೈದ್ಯರೂ, ಹಕೀಮರೂ, ಅಥವಾ ಬೇರಾವ ಚಿಕಿತ್ಸಕರಾಗಲೀ ನೀಡಲಾರರು ಅವರಿಗೆ ಅದರಲ್ಲಿ ನಂಬಿಕೆ ಇಲ್ಲ, ಪ್ರತಿಯೊಂದು ಹೃದಯದಲ್ಲಿಯೂ ಪವಿತ್ರ ಗಂಗಾ ಮೂಲವಿದೆಯೆಂದು ಅವರು ಒಪ್ಪಿಕೊಂಡರೆ, ಅವರ ವೃತ್ತಿಯೂ, ಸಂಪಾದ

ನೆಯ ದಾರಿಯೂ ಇಲ್ಲವಾಗುತ್ತದೆ ಆದುದರಿಂದಲೇ ತಮ್ಮ ಭಸ್ಮಗಳು, ಕಷಾಯಗಳು ಮಹತ್ತರವೆಂದು ಅವರು ಹೇಳಿಕೊಳ್ಳಬೇಕು ಇದರಿಂದ ವೈದ್ಯರಿಗೆ ಜೀವನೋಪಾಯ ದೊರಕುವುದಲ್ಲದೆ ರೋಗಿಗಳಿಗೂ ತಕ್ಷಣ ಪರಿಹಾರ ದೊರಕಿದಂತೆ ಕಾಣುತ್ತದೆ ಒಬ್ಬ ವೈದ್ಯನು ಕೊಟ್ಟ ಭಸ್ಮದಿಂದ ತಮ್ಮ ರೋಗವು ವಾಸಿಯಾಯಿತೆಂದು ಕೆಲವರು ಹೇಳಿದರೆ ಸಾಕು ಆ ವೈದ್ಯನ ವ್ಯಾಪಾರವು ಸುಭದ್ರವಾದಂತೆಯೇ ಆಗುತ್ತದೆ

ಮತ್ತೊಂದು ಮಾತು ರೋಗಿಗಳಿಗೆ ದೇವರ ನಾಮಸ್ಮರಣೆಯ ಮಹಾ ಪ್ರಭಾವದ ವಿಷಯದಲ್ಲಿ ನಂಬಿಕೆ ಇಲ್ಲದಿದ್ದರೆ, ಯಾವ ವೈದ್ಯ ಅದನ್ನು ಹುಟ್ಟಿಸಲು ಸಾಧ್ಯ? ರಾಮನಾಮವು ಕಾಪೀ ಪುಸ್ತಕದ ಮೇಲು ಪಂಕ್ತಿಯಂಥ ತತ್ವವಲ್ಲ ಅದು ಅನುಭವದಿಂದ ಸಿದ್ಧಿಸಬೇಕು ಯಾರು ಸ್ವಾನುಭವ ಪಡೆದಿರುವರೋ ಅಂಥವರು ಮಾತ್ರ ಸಲಹೆ ನೀಡಲು ಸಮರ್ಥರು, ಉಳಿದವರು ಅಸಮರ್ಥರು

ವೈದ್ಯರಾಜ ನಾಲ್ಕು ಶ್ಲೋಕಗಳನ್ನು ನನ್ನ ಗಮನಕ್ಕೆ ತಂದಿದಾರೆ ಅವುಗಳಲ್ಲಿ ಚರಕನ ಸೂಕ್ತಿ ಬಹಳ ಸುಲಭವಾಗಿಯೂ, ಯುಕ್ತವಾಗಿಯೂ ಇದೆ. ಅದರ ಅರ್ಥ ಹೀಗೆ " ವಿಷ್ಣುವಿನ ಸಹಸ್ರನಾಮಗಳ ಪೈಕಿ ಒಂದನ್ನಾದರೂ ಸ್ವಾಧೀನಪಡಿಸಿಕೊಂಡವನಿಗೆ ಸಕಲವ್ಯಾಧಿಗಳೂ ದೂರವಾಗುವುವು" (ಹರಿಜನ ೨೪-೩-೪೬)

## (೧೮) ನಿಸರ್ಗಚಿಕಿತ್ಸೆಯೂ—ರಾಮನಾಮವೂ

ನಿಸರ್ಗ ಚಿಕಿತ್ಸಕನ ಬತ್ತಳಿಕೆಯಲ್ಲಿ ರಾಮನಾಮವು ಮಹಾ ಅಸ್ತ್ರ. ಇದನ್ನು ಕೇಳಿ ಯಾರೂ ಆಶ್ಚರಿಪಡಬೇಕಾಗಿಲ್ಲ, ಮೊನ್ನೆ ಒಬ್ಬ ಸುಪ್ರಸಿದ್ಧ ಆಯುರ್ವೇದ ಚಿಕಿತ್ಸಕ ನನ್ನೊಡನೆ ಹೀಗೆ ಹೇಳಿದರು. "ನಾನು ಬಹಳ ಕಾಲದಿಂದ ಚಿಕಿತ್ಸೆ ನಡೆಸುತ್ತಿದೇನೆ ಆದರೆ, ರಾಮನಾಮವು ದೈಹಿಕ ವ್ಯಾಧಿಗಳ ಚಿಕಿತ್ಸಕವೆಂದು ನೀವು ಹೇಳಲಾರಂಭಿಸಿದಾಗನಿಂದ ಅದರ ಬಗ್ಗೆ ಯೋಚಿಸಿ, ಅದಕ್ಕೆ ವಾಗ್ಭಟ, ಚರಕ ಮೊದಲಾದ ವೈದ್ಯಾಚಾರ್ಯರ ಆಧಾರವಿದೆ ಎಂದು ಭಾಸವಾಗಿದ" ಆಧ್ಯಾತ್ಮಿಕ ವ್ಯಾಧಿಗಳಿಗೆ ರಾಮನಾಮ ಪುನಶ್ಚರಣೆ ಪರಿಹಾರಕವೆಂಬುದು ಪ್ರಕೃತಿಯಷ್ಟೇ

ಪ್ರಾಚೀನವಾದ ನಂಬಿಕೆ ಮಹತ್ತ್ವನಲ್ಲಿ ಅಣುವೂ ಅಂತರ್ಗತ ತಾನೇ ? ಆದುದರಿಂದ ರಾಮನಾಮವು ದೈಹಿಕ ವ್ಯಾಧಿಗಳನ್ನು ಗುಣಮಾಡಬಲ್ಲದೆಂದು ನನ್ನ ನಂಬಿಕೆ ನಿಸರ್ಗ ಚಿಕಿತ್ಸಕನು ರೋಗಿಯ ಬಳಿಗೆ ಹೋಗಿ, "ನನ್ನ ಬಳಿ ಬಾ ನಿನ್ನ ಎಲ್ಲ ವ್ಯಾಧಿಗಳನ್ನೂ ನಾನು ವಾಸಿಮಾಡುವೆ" ಎಂದು ಹೇಳುವದಿಲ್ಲ ಯಾವ ಚಿಕಿತ್ಸಾಶಕ್ತಿ ಎಲ್ಲರಲ್ಲಿ ಇದೆಯೋ, ಯಾವುದರ ಆವಾಹನೆಯಿಂದ ಮಹಾಶಕ್ತಿ ಉತ್ಪನ್ನವಾಗಬಲ್ಲದೋ ಅದನ್ನು ಕುರಿತು ಮಾತ್ರ ಹೇಳುವನು ಭಾರತೀಯರಾದ ನಾವು ಈ ತತ್ವವನ್ನು ಅನುಷ್ಠಾನಕ್ಕೆ ತಂದರೆ ನಾವೆಲ್ಲರೂ ಸ್ವತಂತ್ರರಾಗುವುದರ ಜೊತೆಗೆ, ಇಂದು ನಾಡಿನಲ್ಲಿರುವ ಎಲ್ಲ ರೋಗರುಜಿನಗಳೂ ಹೋಗಿ, ಆರೋಗ್ಯ ತಾನಾಗಿಯೇ ನೆಲೆಸುವುದು.

ರಾಮನಾಮದ ಸತ್ವಕ್ಕೆ ಕೆಲವು ಇತಿ-ಮಿತಿಯುಂಟು ಅದೊಂದು ಮಾಯಗಾರಿಕೆಯಲ್ಲ ಹೊಟ್ಟೆಬಿರಿಯ ತಿಂದು ಅದರ ದುಷ್ಪರಿಣಾಮಗಳನ್ನು ಅನುಭವಿಸುತ್ತಿರುವವನು, ಪುನಃ ಹೊಟ್ಟೆಬಿರಿಯ ತಿನ್ನುವ ಶಕ್ತಿಯನ್ನು ಗಳಿಸಿಕೊಳ್ಳುವುದಕ್ಕಾಗಿ ರಾಮನಾಮವನ್ನು ಮರೆ ಹೊಕ್ಕರೆ ಎಂದಿಗೂ ಆಗದು ರಾಮನಾಮವನ್ನು ಒಳ್ಳೆಯದಕ್ಕಾಗಿಯೇ ಹೊರತು ಕೆಟ್ಟುದಕ್ಕೆ ಉಪಯೋಗಿಸಲಾಗದು ಹಾಗಿದ್ದರೆ, ಕಳ್ಳರನ್ನೂ, ದರೋಡೆಗಾರರನ್ನೂ ಮಹಾ ಭಕ್ತ ಶಿರೋಮಣಿಗಳೆನ್ನಬೇಕಾದೀತು. ಶುದ್ಧ ಹೃದಯದಿಂದೊಡಗೂಡಿದವರಿಗೂ, ಶುದ್ಧ ಹೃದಯವನ್ನು ಗಳಿಸಿಕೊಳ್ಳಲು ಸದಾ ಶ್ರಮಿಸುವವರಿಗೂ ರಾಮನಾಮ ಹೊಂದುತ್ತದೆ, ಕಾಮೇಚ್ಛುಗಳಿಗೆ ಅದು ಲಭಿಸದು ಹೊಟ್ಟೆಬಿರಿಯ ತಿಂದುದಕ್ಕೆ ‹ ಪರಿಹಾರ ಉಪವಾಸ, ಪ್ರಾರ್ಥನೆಯಲ್ಲ ಉಪವಾಸದ ಕಾರ್ಯ ಮುಗಿದ ಮೇಲೆ ಪ್ರಾರ್ಥನೆಯ ಸರದಿ ಬರುತ್ತದೆ ಇದರಿಂದ ಉಪವಾಸ ಸುಲಭವೂ, ಸಹ್ಯವೂ ಆದೀತು ಹಾಗೆಯೇ ಔಷಧಿಗಳನ್ನು ಮಿತಿಮೀರಿ ಸೇವಿಸುತ್ತ ರಾಮನಾಮವನ್ನೂ ಜಪಿಸುತ್ತೇನೆಂದರೆ ಮೇಳಗೂಡದು, ಅದು, ಅರ್ಥಶೂನ್ಯ ನಟನೆಯಾಗುತ್ತದೆ ರೋಗಿಯ ದುಷ್ಟ ಚಟಗಳಿಗೆ ಪ್ರೋತ್ಸಾಹ ನೀಡುವ ವೈದ್ಯನ ಸಾಮರ್ಥ್ಯವೂ ದುರ್ಗತಿಗಿಳಿದು ರೋಗಿಗೂ ದುರ್ಗತಿಯೇ ಲಭಿಸುತ್ತದೆ ಶರೀರ ಚಿಕಿತ್ಸೆಮಾಡುವವರಿಗಿಂತ ಆತ್ಮವ್ಯಾಧಿಗೆ ಚಿಕಿತ್ಸೆ ಮಾಡುವವರು

ಬೇಕು, ವೈದ್ಯಶಾಲೆಗಳ ಮತ್ತು ವೈದ್ಯರ ಸಂಖ್ಯೆ ಹೆಚ್ಚುವುದರಿಂದ ಸಭ್ಯತೆ ಹೆಚ್ಚುವುದಿಲ್ಲ ಈ ಶರೀರದ ವಿಷಯದಲ್ಲಿ ನಮ್ಮ ಪ್ರೋತ್ಸಾಹಕರ ಅಭಿಮಾನ ಕಮ್ಮಿಯಾದಷ್ಟು ನಮಗೂ ಲೋಕಕ್ಕೂ ಮೇಲ್ಮೆ ಎನಿಸುತ್ತದೆ.

(ಯಂಗ್ ಇಂಡಿಯಾ. ೨೯-೯-೨೭)

ಈ ಶರೀರ ಅದರ ಕರ್ತನ ಪರಮ ಸೇವೆಗೆಂದು ಭಾವಿಸದೆ ಅದರ ಅಲಂಕಾರಕ್ಕೂ, ಹೇಗಾದರೂ ನೆಟ್ಟಗಿದ್ದರಾಯಿತೆಂಬ ಭಾವವನ್ನು ಹೊಂದಿ ಹಣವನ್ನು ನೀರಿಗಿಂತಲೂ ನಿರ್ಲಕ್ಷ್ಯದಿಂದ ಖರ್ಚುಮಾಡುವುದಕ್ಕಿಂತಲೂ ದುರ್ಗತಿಯ ಸ್ಥಿತಿಯುಂಟೆ ? ರೋಗವನ್ನು ವಾಸಿಮಾಡುವುದರ ಜೊತೆಗೆ ಶುದ್ಧಿಯನ್ನೂ ಮಾಡುವ ರಾಮನಾಮ ಸದ್ಗತಿಯನ್ನೂ ಕೊಡುತ್ತದೆ ಇದರಲ್ಲಿಯೇ ರಾಮನಾಮದ ಉಪಯುಕ್ತತೆ ಮತ್ತು ಇತಿ-ಮಿತಿಗಳು ಅಡಗಿವೆ. (ಹರಿಜನ ೭-೪-೪೬)

## ೧೯. ಪರಮ ಚಿಕಿತ್ಸೆ

"ಇನ್ನೂ ಕೆಲವು ಅಂಶಗಳ ಜೊತೆಗೆ ನೀವು ಹೀಗೆ ನುಡಿದಿದೀರಿ· 'ಮಾನವ ಯಾವ ಬಗೆಯ ವ್ಯಾಧಿಯಿಂದಲೇ ನರಳುತ್ತಿರಲಿ, ಹೃತ್ಪೂರ್ವಕವಾದ ರಾಮನಾಮ ಸ್ಮರಣೆ ಅದನ್ನು ಖಂಡಿತ ವಾಸಿಮಾಡುತ್ತದೆ' "

(ಹರಿಜನ. ೩-೩-೪೬)

" ಪಂಚಮಹಾಭೂತಗಳಾದ ಭೂಮಿ, ನೀರು, ಆಕಾಶ, ತೇಜಸ್ಸು, ಮತ್ತು ವಾಯು, ಇವುಗಳಿಂದ ಮಾನವ ಶರೀರ ನಿರ್ಮಿತವಾಗಿರುವುದರಿಂದ ಅವುಗಳಿಂದಲೇ ಚಿಕಿತ್ಸಕ ಕ್ರಮಗಳನ್ನು ಕಂಡು ಹಿಡಿದುಕೊಳ್ಳಬೇಕು " (ಹರಿಜನ ೩-೩-೪೬)

" ರಾಮನಾಮ ಪುನಶ್ಚರಣೆ ದೈಹಿಕ ವ್ಯಾಧಿಗಳಿಗೂ ಪರಮ ಚಿಕಿತ್ಸೆಯಾಗಬಲ್ಲದೆಂದು ನನ್ನ ನಂಬಿಕೆ". (ಹರಿಜನ ೭-೭-೪೬)

" ನಿಸರ್ಗ ಚಿಕಿತ್ಸೆಯ ವಿಷಯದಲ್ಲಿ ನಿಮ್ಮ ಈ ವ್ಯಾಖ್ಯಾನಗಳನ್ನು ನಾ ಓದುತ್ತಿದ್ದಾಗ ಮೊದಲು ಮೊದಲು, ಮಾನಸಿಕ ಚಿಕಿತ್ಸೆ [*Psycho therapy*) ಅಥವಾ ನಂಬಿಕೆಯೇ ಆಧಾರವಾಗುಳ್ಳ ಶ್ರದ್ಧಾ ಚಿಕಿತ್ಸೆ— (*Christian science*) ಇವುಗಳನ್ನೇ ಪರ್ಯಾಯವಾಗಿ ಹೇಳುತ್ತಿದೀರೆಂದು

ಭಾವಿಸಿದ್ದೆ. ಈ ಬಗೆಯ ಚಿಕಿತ್ಸಾವಿಧಾನ ಎಲ್ಲ ವೈದ್ಯ ಪದ್ಧತಿಗಳಲ್ಲಿಯೂ ಇರುವುದು ಕಂಡುಬರುತ್ತದೆ. ಉದಾಹರಣೆಗೆ, ಮೇಲೆ ಸೂಚಿಸಿರುವ ನಿಮ್ಮ ಮೊದಲನೆಯ ಉಕ್ತಿಯನ್ನು ಹಾಗೆ ಗ್ರಹಿಸಿದೆ. ಆದರೆ, ಎರಡನೆಯ ಉಕ್ತಿಯನ್ನು ಗ್ರಹಿಸಲಾರದವನಾಗಿದ್ದೇನೆ. ಯಾವ ಪಂಚಮಹಾಭೂತಗಳ ವಿಷಯವನ್ನು ಕುರಿತು ಹೇಳಿರುವಿರೋ ಅದನ್ನು ಹೊರತು ಬೇರೆ ಯಾವುದರಿಂದ ತಾನೇ, ಯಾವ ಬಗೆಯ ಔಷಧಿಯನ್ನೇ ಆಗಲೀ ತಯಾರಿಸಲು ಸಾಧ್ಯವಾದೀತು,

"ಮುಖ್ಯವಾಗಿ, ನೀವು 'ನಂಬಿಕೆ'ಯನ್ನು ಒತ್ತಿ ಹೇಳುವುದಿದ್ದರೆ ನನ್ನ ಆಕ್ಷೇಪವಿಲ್ಲ. ಯಾವ ರೋಗಿಯೇ ಆಗಲೀ ನಂಬಿಕೆಯಿಂದ ಸಹಕರಿಸಿ ವ್ಯಾಧಿಯನ್ನು ಗುಣಪಡಿಸಿಕೊಳ್ಳುವುದು ಆವಶ್ಯಕ. ಆದರೆ, ಈ 'ನಂಬಿಕೆಯೇ' ಶಾರೀರಕ ವ್ಯಾಧಿಗಳನ್ನೂ ಗುಣಪಡಿಸಬಲ್ಲದೆಂಬುದನ್ನು ನಂಬಲು ಕಷ್ಟವಾಗುತ್ತದೆ. ಎರಡು ವರುಷಗಳ ಕೆಳಗೆ ನನ್ನ ಎಳೆಯ ಕೂಸಿಗೆ 'ಶೈಶವದ ನರವ್ಯಾಧಿ' ಬಂದಿತು. ಅತ್ಯಂತ ಆಧುನಿಕ ಚಿಕಿತ್ಸಾಕ್ರಮವನ್ನು ಕೈಗೊಳ್ಳದಿದ್ದರೆ ಕೂಸು ಆಜೀವಪರ್ಯಂತ ಹೆಳವಾಗಬೇಕಾಗುತ್ತಿತ್ತು. ಈ ಬಗೆಯ ವ್ಯಾಧಿಯನ್ನು ಗುಣಪಡಿಸಿಕೊಳ್ಳುವುದಕ್ಕೆ ಎರಡೂವರೆ ವರುಷದ ಕೂಸಿಗೆ ರಾಮನಾಮ ಪುನಶ್ಚರಣೆ ಮಾಡೆಂದು ಬೋಧಿಸುವುದು ಸರಿಯಲ್ಲವೆಂದು ನೀವೇ ಒಪ್ಪಿಕೊಂಡಿದೀರಿ. ಆದರಲ್ಲಿ ಮಗುವಿನ ಪರವಾಗಿ ಯಾವ ತಾಯನ್ನಾದರೂ ರೋಗ ವಾಸಿಯಾಗಲು 'ಪುನಶ್ಚರಣೆಯೊಂದನ್ನೇ' ಮಾಡಲು ನೀವು ಒಪ್ಪಿಸಲು ಸಾಧ್ಯವಾಗುವುದನ್ನು ನಾನಿನ್ನೂ ನೋಡಬೇಕಾಗಿದೆ."

"ಮಾರ್ಚಿ ೨೪ ರ 'ಹರಿಜನ' ಸಂಚಿಕೆಯಲ್ಲಿ ನಿಮ್ಮ ವಾದವನ್ನು ಪುಷ್ಟಿಮಾಡಿಕೊಳ್ಳುವುದಕ್ಕೆ ಚರಕ ಸಂಹಿತೆಯ ಆಧಾರವನ್ನು ಕೊಟ್ಟದೀರಿ. ಅದಂತೂ ನನ್ನ ವಿಚಾರ ಶಕ್ತಿಯನ್ನು ಸ್ತಂಭೀಭೂತಗೊಳಿಸಿದೆ. ಎಷ್ಟು ಪ್ರಾಚೀನವೇ ಆಗಿರಲಿ ಅದು ಹೃದಯಕ್ಕೆ ಒಪ್ಪಿಗೆಯಾಗದಿದ್ದರೆ, ಅಂಗೀಕಾರಾರ್ಹವಲ್ಲವೆಂದು ನೀವೇ ನಮಗೆ ಕಲಿಸಿದೀರಿ."

ಇಷ್ಟೆಲ್ಲ ಬರೆಹ ಒಬ್ಬ ಯುವಕ ಅಧ್ಯಾಪಕನದು.

ರಾಮನಾಮವು ಶ್ರದ್ಧಾ, ಚಿಕಿತ್ಸೆ, ಕ್ರಿಶ್ಚಿಯನ್ ಸೈನ್ಸ್, ಇವುಗಳ ಅಂಶಗಳನ್ನೊಳಗೊಂಡರೂ ಅವುಗಳಿಂದ ಪ್ರತ್ಯೇಕವಾದುದು. ಅದು ತಾನು ಪ್ರತಿಬಿಂಬಿಸುವ ಸತ್ಯದ ಪ್ರತೀಕ ಅಂತರ್ಯಾಮಿಯಾದ ಭಗವಂತನ ಸಾಕ್ಷಾತ್ಕಾರವಾಯಿತೆಂದರೆ ಎಲ್ಲ ದೈಹಿಕ, ಮಾನಸಿಕ, ಅಥವಾ ನೈತಿಕ ವ್ಯಾಧಿಗಳೂ ತಾವಾಗಿಯೇ ದೂರವಾಗುತ್ತವೆ ಇದು ಜೀವನದಲ್ಲಿ ಸಿದ್ಧಿಸಿರುವುದು ಕಾಣಬರುವುದಿಲ್ಲವಾದ್ದರಿಂದ ಸತ್ಯವಲ್ಲವೆನ್ನಲಾಗುವುದಿಲ್ಲ. ಯಾರಿಗೆ ದೇವರಲ್ಲಿ ನಂಬಿಕೆ ಇಲ್ಲವೋ ಅವರಿಗೆ ನನ್ನ ವಾದದಲ್ಲಿ ಹುರುಳಿಲ್ಲ

ಶ್ರದ್ಧಾ ಚಿಕಿತ್ಸಕರೂ, ಮಾನಸಿಕ ಚಿಕಿತ್ಸಕರೂ ಸ್ವಲ್ಪ ಆಳವಾಗಿ ಚಿಂತಿಸಿದರೆ ರಾಮನಾಮದ ಹಿಂದಿರುವ ತತ್ವ ಒಪ್ಪಿಯಾರು. ಕೇವಲ ತರ್ಕದಿಂದ ಪಾಠಕನನ್ನು ನನ್ನ ವಾದಕ್ಕೆ ಒಪ್ಪಿಸಲಾರೆ ಸಕ್ಕರೆಯನ್ನೇ ಎಂದೂ ಸವಿಯದಿದ್ದವರಿಗೂ ಅದು ಸವಿ ಎಂದು ಅರಿಯದವರಿಗೂ, ಸವಿದು ನೋಡೆಂದು ಹೇಳುವುದಲ್ಲದೆ ಬೇರೆ ಯಾವ ರುಜುವಾತು ಕೊಡಲು ಸಾಧ್ಯ ?

ರಾಮನಾಮವನ್ನು ಹೃತ್ಪೂರ್ವಕವಾಗಿ ಪಠಿಸುವ ನಿಯಮಗಳನ್ನು ಇಲ್ಲಿ ಪುನಃ ಹೇಳುವ ಆವಶ್ಯಕವಿಲ್ಲ

ರಾಮನಾಮದಲ್ಲಿ ಸ್ವಲ್ಪವಾದರೂ ನಂಬಿಕೆ ಇರುವವರಿಗೆ ಚರಕನ ಆಧಾರ ಅನ್ವಯಿಸುತ್ತದೆ ಇತರರು ಅದನ್ನು ಪರಿಗಣಿಸಲು ನಿರಾಕರಿಸಬಹುದು.

ಮಕ್ಕಳು ಜವಾಬ್ದಾರಿ ಅರಿಯದವರು ಖಂಡಿತವಾಗಿಯೂ ರಾಮನಾಮ ಅವರಿಗಲ್ಲ ಅವರು ತಮ್ಮ ತಂದೆತಾಯಿಗಳ ಪೂರ್ಣ ಅಧೀನರು. ಅವರಿಗೂ, ಸಮಾಜಕ್ಕೂ ತಂದೆತಾಯಿಗಳೇ ಮಹಾ ಹೊಣೆಗಾರರು. ಕೇವಲ ರಾಮನಾಮ ಪುನಶ್ಚರಣೆಯಲ್ಲೇ ತಮ್ಮ ಹೊಣೆಗಾರಿಕೆಯನ್ನು ಮುಕ್ತಾಯಗೊಳಿಸಿ, ಮಕ್ಕಳ ವ್ಯಾಧಿಯನು ತೃಣವಾಗಿ ಕಂಡ ತಂದೆ ತಾಯಿಗಳನ್ನೂ ನಾಬಲ್ಲೆ.

ಕೊನೆಯದಾಗಿ ಎಲ್ಲವೂ, ಔಷಧಗಳೂ, ಪಂಚಮಹಾಭೂತ

ಗಳಿಂದಲೇ ಉತ್ಪನ್ನವಾದವೆಂಬ ವಾದ ವಿಚಾರಗೊಂದಲವನ್ನು ಸೂಚಿಸುತ್ತದೆ. ಈ ದೋಷ ನಿವೃತ್ತಿ ಮಾಡಿಕೊಳ್ಳಬೇಕೆಂದೇ ನನ್ನ ಸೂಚನೆ,

## ೨೦ ಆಯುರ್ವೇದ ಮತ್ತು ನಿಸರ್ಗ ಚಿಕಿತ್ಸೆ

ರಾಮನಾಮ ಪ್ರಸಾರ, ಶುದ್ಧ ಜೀವನ, ಇವು ಅತ್ಯಂತ ಶ್ರೇಷ್ಠವೂ ಮತ್ತು ಸುಲಭವೂ ಆದ ವ್ಯಾಧಿ ನಿವಾರಕಗಳೆಂದು ನನ್ನ ಪೂರ್ಣ ನಂಬಿಕೆ ವೈದ್ಯರೂ, ಹಕೀಮರೂ ರಾಮನಾಮವನ್ನು ಪರಮ ಔಷಧವನ್ನಾಗಿ ಉಪಯೋಗಿಸದಿರುವುದು ದೊಡ್ಡ ದುರದೃಷ್ಟ ಆಯುರ್ವೇದ ಸಾಹಿತ್ಯದಲ್ಲಿ ಅದನ್ನು ತಾಯಿತಿಯ ರೂಪದಲ್ಲಿ ಉಪಯೋಗಿಸುವುದು ಕಂಡುಬಂದಿದೆ. ಅದು ಜನತೆಯನ್ನು ಮೂಢ ನಂಬಿಕೆಯ ಕಮರಿಯಲ್ಲಿ ತಳ್ಳಿದಂತೆ. ವಾಸ್ತವಿಕವಾಗಿ ರಾಮನಾಮಕ್ಕೂ ಮೂಢ ನಂಬಿಕೆಗೂ ಯಾವ ಸಂಬಂಧವೂ ಇಲ್ಲ ಅದು ಪ್ರಕೃತಿಯ ಪರಮೋತ್ಕೃಷ್ಟ ನಿಯಮ ಅದನ್ನು ಅನುಷ್ಠಿಸುವವರು ರೋಗದಿಂದ ಮುಕ್ತರಾಗಿದ್ದಾರೆ ರೋಗ ಮುಕ್ತರನ್ನಾಗಿ ಮಾಡುವ ನಿಯಮ ಚಿಕಿತ್ಸೆಗೂ ಅನ್ವಯಿಸುತ್ತದೆ ರಾಮನಾಮವನ್ನು ದಿನವೂ ತಪ್ಪದೆ ಪಠಿಸುವ ಮತ್ತು ಶುದ್ಧ ಜೀವನ ನಡೆಸುವ ಮನುಷ್ಯ ಏಕೆ ಕಾಯಿಲೆ ಬೀಳುವನೆಂಬ ಪ್ರಶ್ನೆ ಏಳುತ್ತದೆ ಮಾನವ ಅಪರಿಪೂರ್ಣ. ವಿಚಾರವಂತನಾದವನು ಪೂರ್ಣತೆಗಾಗಿ ಶ್ರಮಿಸುವನು ಆದರೂ ಅದನ್ನು ಹೊಂದಲಾರ, ಹೇಗೋ ಎಚ್ಚರತಪ್ಪಿ ಎಡವುತ್ತಾನೆ ಶುದ್ಧ ಜೀವನದಲ್ಲಿ ದೇವರ ನಿಯಮಗಳೆಲ್ಲ ಅಡಕವಾಗಿರುತ್ತವೆ ಆದುದರಿಂದ ಪ್ರತಿಯೊಬ್ಬರೂ ತಮ್ಮ ತಮ್ಮ ಇತಿ-ಮಿತಿಗಳನ್ನು ತಿಳಿದುಕೊಳ್ಳುವುದೇ ಮೊದಲನೆಯ ಕರ್ತವ್ಯ ಇತಿ-ಮಿತಿಗಳನ್ನು ಮೀರಿದ ತಕ್ಷಣವೇ ಕಾಯಿಲೆ ಬೀಳುವುದು ಶತಸ್ಸಿದ್ಧ ಅವಶ್ಯಕತೆಗೆ ತಕ್ಕಂತೆ ಕ್ಲಪ್ತ ಪ್ರಮಾಣದ ಆಹಾರವನ್ನು ಸೇವಿಸುವುದರಿಂದ ರೋಗಮುಕ್ತರಾಗಬಹುದು ಒಬ್ಬರಿಗೆ ಕ್ಲಪ್ತವಾದ ಆಹಾರವನ್ನು ನಿರ್ಧರಿಸಿಕೊಳ್ಳುವುದು ಹೇಗೆ ? ಇಂಥ ಎಷ್ಟೋ ಸಮಸ್ಯೆಗಳನ್ನು ಬಿಡಿಸಬೇಕಾಗುತ್ತದೆ ಇದಕ್ಕೆ ಸುಲಭ ಉತ್ತರ—ಪ್ರತಿಯೊಬ್ಬರೂ ತಮ್ಮ ತಮ್ಮ-ಇತಿಮಿತಿಗಳನ್ನು ತಿಳಿದುಕೊಳ್ಳುವ ವೈದ್ಯರೇ ಆಗಬೇಕು. ಈ ರೀತಿ ಮಾಡುವವರು ಖಂಡಿತ ೧೨೫ ವರುಷಗಳು ಬಾಳಿಯಾರು.

ವೈದ್ಯ ಸ್ನೇಹಿತರುಗಳು ತಾವು ನಿಸರ್ಗದ ನಿಯಮಗಳನ್ನು ಕಂಡು ಹಿಡಿಯುವುದಲ್ಲದೆ ಬೇರೆ ಏನನ್ನೂ ಮಾಡುವುದಿಲ್ಲವೆಂದೂ ಆದುದರಿಂದ ತಾವೂ ಶ್ರೇಷ್ಠ ಪ್ರಕೃತಿ ಚಿಕಿತ್ಸಕರೆಂದೂ ಹೇಳಿಕೊಳ್ಳುವರು ಯಾವ ವಿಷಯವನ್ನು ಬೇಕಾದರೂ ಈ ರೀತಿಯಲ್ಲಿ ವಿವರಿಸಬಹುದು ರಾಮನಾಮವೊಂದನ್ನು ಬಿಟ್ಟು ಉಳಿದುದೆಲ್ಲ ನಿಸರ್ಗ ಚಿಕಿತ್ಸೆಗೆ ವಿರುದ್ಧವೆಂದು ನಾ ಪರಿಗಣಿಸುತ್ತೇನೆ ಮೂಲತತ್ವದಿಂದ ದೂರ ಸರಿದಷ್ಟೂ ನಿಸರ್ಗ ಚಿಕಿತ್ಸಾ ಕ್ರಮದಿಂದ ಬಾಹಿರವಾದಂತೆ ಈ ತರ್ಕಕ್ಕನುಸಾರವಾಗಿ ಪಂಚ ಮಹಾ ಭೂತಗಳ ಉಪಯೋಗವನ್ನು ಮಾತ್ರ ನಿಸರ್ಗ ಚಿಕಿತ್ಸೆಗೆ ನಾ ಸೇರಿಸುತ್ತೇನ ಇದನ್ನು ಮೀರಿ, ಹಣದಾಸೆಯನ್ನು ಬಿಟ್ಟು, ರೋಗಿಗಳ ಸೇವೆಗಾಗಿ ತನ್ನ ಸುತ್ತಮುತ್ತಲೂ ಬೆಳೆಯುವ ಗಿಡಮೂಲಿಕೆಗಳನ್ನು ಚಿಕಿತ್ಸೆಯಲ್ಲಿ ಉಪಯೋಗಿಸುವವನು ನಿಸರ್ಗ ಚಿಕಿತ್ಸಕನೆಂದು ಕರೆದುಕೊಳ್ಳಬಹುದು. ಆದರೆ, ಅಂಥ ವೈದ್ಯರನ್ನು ಇಂದು ಎಲ್ಲಿ ಕಾಣೋಣ! ಇಂದು ಎಲ್ಲರೂ ಹಣಕ್ಕಾಗಿ ಹಾತೊರೆಯುವವರೇ ಆಗಿದ್ದಾರೆ ಹಣದ ಆಸೆಯಿಂದಲೂ, ಮತ್ತು ಮಾನಸಿಕ ಜಡತ್ವದ ಪರಿಣಾಮವಾಗಿಯೂ ಇಂದು ಆಯುರ್ವೇದವು ಅತ್ಯಂತ ದುರ್ಗತಿಗಿಳಿದಿದೆ (ಹರಿಜನ, ೧೯-೫-೪೬)

## (೨೧) ಉರುಳಿ ಕಾಂಚನದಲ್ಲಿ

ಉರುಳಿ ಕಾಂಚನದ ಗ್ರಾಮಸ್ಥರನ್ನು ಕುರಿತು, ನಿಸರ್ಗ ಚಿಕಿತ್ಸೆಯು ಎಲ್ಲ ದೈಹಿಕ ವ್ಯಾಧಿಗಳಿಗೂ ಪರಮ ಶ್ರೇಷ್ಠ ಚಿಕಿತ್ಸೆಯೆಂದು ಗಾಂಧೀಜೀ ಹೇಳಿದರು "ಈಗ ತಾನೆ ನೀವು ಹಾಡಿದ ಗೀತೆಯಲ್ಲಿ ಭಕ್ತನ ಒಸಗೆ ಇದು 'ಓ ಹರೀ! ನೀ ಜನರ ದುಃಖನಿವಾರಕ' ಇಲ್ಲಿ ಕಂಡುಬರುವ ಭರವಸೆ ಸಾರ್ವತ್ರಿಕವಾದುದು, ಯಾವೊಂದು ಬಗೆಯ ದುಃಖಕ್ಕೆ ಮಾತ್ರ ಸಂಬಂಧಪಟ್ಟ ವಿಷಯವಲ್ಲ" ರಾಮನಾಮದ ಸತ್ವ ದೊರಕಬೇಕಾದರೆ ಅಗತ್ಯ ಅಂಶ ಚೈತನ್ಯಯುಕ್ತ ನಂಬಿಕೆ ಎಂದು ಹೇಳುತ್ತಾ "ನಿದ್ರೆ, ಆಹಾರ, ಕೋಪ, ಕಾಮ, ಇವುಗಳಿಗೆ ನೀವು ಗುರಿಯಾಗಿದ್ದರೆ ರಾಮನಾಮದ ಸವಿ ದೊರಕದು. ನಾಮ ಪುನಶ್ಚರಣೆಯು ಸತ್ವದಾಯಕವಾಗಬೇಕಾದರೆ ಪರನೆಯೊಂದಲ್ಲದೆ ಇಡೀ ಜೀವನದಲ್ಲಿ ಅದು ತನ್ಮಯವಾಗಬೇಕು" ಎಂದರು.

ಮಾರನೆ ದಿವಸದಿಂದಲೇ ರೋಗಿಗಳು ಚಿಕಿತ್ಸೆಗೆ ಬರಲಾರಂಭಿಸಿದರು ಸುಮಾರು ಮೂವತ್ತು ಜನ ಬಂದರು ಗಾಂಧೀಜಿಯೇ ಅವರನ್ನೆಲ್ಲ ಪರೀಕ್ಷಿಸಿ ಅವರವರ ಪರಿಸ್ಥಿತಿಗನುಗುಣವಾಗಿ ಸ್ವಲ್ಪ ಹೆಚ್ಚು ಕಡಿಮೆ ಎಲ್ಲರಿಗೂ ಒಂದೇ ವಿಧವಾದ ಚಿಕಿತ್ಸೆಯನ್ನು ಸಲಹೆ ಮಾಡಿದರು ಅವು ಈ ರೀತಿ ಇದ್ದವು, ರಾಮನಾಮ ಸ್ಮರಣೆ, ಸೂರ್ಯಸ್ನಾನ, ಸೊಂಟಸ್ನಾನ, ಹಾಲು ಮಜ್ಜಿಗೆ, ಹಣ್ಣು, ಹಣ್ಣಿನರಸ, ಮತ್ತು ತುಂಬ ಶುದ್ಧ ನೀರಿನ ಪಾನ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಹೀಗೆ ಹೇಳಿದರು "ನಿಜವಾಗಿಯೂ ಎಲ್ಲ ದೈಹಿಕ ಮತ್ತು ಮಾನಸಿಕ ವ್ಯಾಧಿಗಳಿಗೂ ಒಂದೇ ಸಾಮಾನ್ಯ ಕಾರಣವಿರುತ್ತದೆ, ಆದುದರಿಂದ ಚಿಕಿತ್ಸೆಗೂ ಒಂದೇ ಸಾಮಾನ್ಯ ಅಂಶವಿರಬೇಕು ರೋಗ ಬೀಜ ಒಂದಿದ್ದಂತೆ, ಚಿಕಿತ್ಸಾ ಕ್ರಮವೂ ಒಂದೇ ಇರಬೇಕು ಇದು ಶಾಸ್ತ್ರೀಯವಾದ ಮಾತು ಆದುದರಿಂದ ಈ ಬೆಳಿಗ್ಗೆ ಚಿಕಿತ್ಸೆಗೆ ಬಂದ ಎಲ್ಲ ರೋಗಿಗಳಿಗೂ ರಾಮನಾಮವನ್ನೇ ಒಂದೇ ವಿಧವಾದ ಚಿಕಿತ್ಸಾ ವಿಧಾನವಾಗಿ ಸಲಹೆ ಮಾಡಿದೇನೆ ಆದರೆ ನಮಗೆ ಸರಿಬೀಳದಿದ್ದರೂ 'ಅನುಕೂಲಸಿಂಧು'ವಿನಂತೆ ಶಾಸ್ತ್ರಾರ್ಥವಾಡುವ ಗುಣವೂ ನಮ್ಮಲ್ಲಿದೆ ಮರಣಾನಂತರ ಆತ್ಮಸುಖವನ್ನು ಕೊಡುವುದು ಶಾಸ್ತ್ರದ ಗುರಿಯೆಂದೂ, ಮರಣಾನಂತರವೇ ಮುಕ್ತಿ ಪಡೆಯುವುದು ಧರ್ಮವೆಂದೂ ನಾವು ಭ್ರಾಂತರಾಗಿದೇವೆ ಈ ದೃಷ್ಟಿ ನನಗೆ ಮಾನ್ಯವಿಲ್ಲ ಇಹದಲ್ಲಿ ಉಪಯೋಗವಾಗದ ಧರ್ಮ, ಪರದಲ್ಲಿಯೂ ಉಪಯೋಗವಿಲ್ಲ" "ಈ ಪ್ರಪಂಚದಲ್ಲಿ ಮಾನಸಿಕವೋ, ದೈಹಿಕವೋ ಆದ ವ್ಯಾಧಿ ಇಲ್ಲದವರು ಯಾರೂ ಇಲ್ಲ ಇವುಗಳಲ್ಲಿ ಕೆಲವಕ್ಕೆ ಚಿಕಿತ್ಸೆ ಎನ್ನುವುದೇ ಇಲ್ಲ ಉದಾಹರಣೆಗೆ ರಾಮನಾಮವು ಮುರಿದ ಅಂಗವನ್ನು ಕೂಡಿಸುವ ಇಂದ್ರಜಾಲ ನಡೆಸಲಾರದು ಹಾಗಿದ್ದರೂ ಅದು ಅವರ್ಣನೀಯ ಆನಂದವನ್ನು ತಂದುಕೊಟ್ಟು, ಸಾವಿನ ಕಹಿಯನ್ನು ಕಳೆದು, ಜೀವನಯಾತ್ರೆ ಸುಗಮವಾಗುವಂತೆ ಮಾಡಬಲ್ಲದು ಸಾವು ಹಿಂದೋ, ಮುಂದೋ ಬರುವುದು ಖಚಿತ. ಅದಕ್ಕಾಗಿ ತೊಳಲುವುದೇಕೆ?"

ತರುವಾಯ ನಿಸರ್ಗ ಚಿಕಿತ್ಸೆಯ ತತ್ವಗಳನ್ನು ಕುರಿತು ಗಾಂಧೀಜೀ ವಿವರಿಸಿದರು. ಅದರ ಸಾರಾಂಶವಿದು.

"ಮಾನವನ ಕಾಯ" ಪಂಚಮೂಲತತ್ವಗಳಾದ ವಾಯು, ಜಲ, ಭೂಮಿ, ಅಗ್ನಿ, ಆಕಾಶ, ಇವುಗಳ ಸಂಯೋಗ ಆತ್ಮ ಇದಕ್ಕೆ ಚೇತನ ನೀಯುತ್ತದೆ

"ವಾಯು ಸರ್ವಪ್ರಧಾನ ಆಹಾರವಿಲ್ಲದೆ ಕೆಲವು ವಾರಗಳೂ, ನೀರಿಲ್ಲದೆ ಕೆಲವು ಕಾಲವೂ ಜೀವಿಸಬಹುದು ಆದರೆ ವಾಯುವಿಲ್ಲದೆ ಕೆಲವು ನಿಮಿಷಗಳೂ ಜೀವಿಸಲಸಾಧ್ಯ ಆದುದರಿಂದ ವಾಯು ಯಥೇಚ್ಛವಾಗಿ ದೊರಕುವಂತೆ ಮಾಡಿದಾನೆ ಭಗವಂತ ಅನ್ನ ನೀರಿಗೆ ಆಗಾಗ ಕೊರತೆಯಾಗಬಹುದು ವಾಯುವಿಗೆಂದಿಗೂ ಆಗಲಾರದು ಹೀಗಿದ್ದರೂ ಬಾಗಿಲು ಕಿಟಕಿ ಮುಚ್ಚಿದ ಕೋಣೆಯಲ್ಲಿ ಮಲಗಿಕೊಂಡು ಶುದ್ಧ ವಾಯುವನ್ನು ದಡ್ಡತನದಿಂದ ಇಲ್ಲದಂತೆ ಮಾಡಿಕೊಳ್ಳುವುದು ಅಭ್ಯಾಸವಾಗಿದೆ ರಾತ್ರಿ ಕಳ್ಳರ ಭಯವಿದ್ದರೆ ಬಾಗಿಲು ಕಿಟಕಿಯನ್ನು ಮುಚ್ಚಿಕೊಳ್ಳಬಹುದು ಆದರೆ, ಪೂರ್ತಿ ಬಂಧನವೇಕೆ ?

"ತೆರೆದ ಪ್ರದೇಶದಲ್ಲಿ ಮಲಗಿದರೆ ಶುದ್ಧವಾಯು ದೊರಕುತ್ತದೆ. ಹಾಗೆಂದರೆ ಧೂಳಿರುವ ಕಡೆ ಮಲಗಿಕೊಳ್ಳುವುದು ಒಳ್ಳೆಯದಲ್ಲ ಮಲಗುವ ಜಾಗ ಧೂಳಿಲ್ಲದೆ ಶುದ್ಧವಾಗಿರಬೇಕು ಧೂಳು, ಸೊಳ್ಳೆ, ಇತ್ಯಾದಿಗಳಿಂದ ರಕ್ಷಿಸಿಕೊಳ್ಳಲು ಕೆಲವರು ಪೂರ್ಣವಾಗಿ ಹೊದ್ದುಕೊಳ್ಳುತ್ತಾರೆ ಇದು ರೋಗಕ್ಕಿಂತ ಅತಿಶಯವಾದುದು ಬಾಯಿಂದ ಉಸಿರಾಡುವುದು ಮತ್ತೊಂದು ದುರಭ್ಯಾಸ, ಬಾಯಿ ಆಹಾರ ಸೇವನೆಯ ಸಾಧನ ಮೂಗಿನ ಮೂಲಕ ಒಳಗೆ ಹೋಗುವ ವಾಯು ಜರಡಿ ಹಿಡಿದಂತೆ ಶುದ್ಧವಾಗಿ, ಶ್ವಾಸಕೋಶಗಳನ್ನು ಸೇರುವ ವೇಳೆಗೆ ಶಾಖವಾಗುತ್ತದೆ

"ಸಿಕ್ಕಿದ ಕಡೆ ಉಗುಳಿ ಮನಕ್ಕೆ ಬಂದಂತೆ ಕಸ ಮತ್ತು ಧೂಳನ್ನು ಎರಚುವುದು ಮಾನವನಿಗೂ ನಿಸರ್ಗಕ್ಕೂ ಪಾಪವೆಸಗಿದಂತೆ ಮಾನವನ ಶರೀರವು ದೇವರ ಆವಾಸಸ್ಥಾನ ಈ ದೇವರ ಆವಾಸಸ್ಥಾನದೊಳಗೆ ಪ್ರವೇಶಿಸುವ ವಾಯುವನ್ನು ಕೆಡಿಸುವವನು ಅದನ್ನು ಅಪವಿತ್ರ ಮಾಡಿದಂತೆ. ಅವನು ರಾಮನಾಮ ಸ್ಮರಣೆ ಮಾಡುತ್ತಿದ್ದರೂ ಅದು ವ್ಯರ್ಥ

(ಹರಿಜನ, ೭-೪-೪೬)

## (೨೨) ಕಾಂಚನಗಾಂನಲ್ಲಿ ನಿಸರ್ಗ ಚಿಕಿತ್ಸೆ

ನಿಸರ್ಗ ಚಿಕಿತ್ಸೆಯಲ್ಲಿ ಎರಡು ಭಾಗಗಳು  ರಾಮನಾಮ ಪುನಶ್ಚರಣೆ ಮಾಡಿ ವ್ಯಾಧಿಗಳನ್ನು ವಾಸಿಮಾಡಿಕೊಳ್ಳುವುದು, ಒಂದು ಭಾಗ, ಎರಡನೆಯದು ಆರೋಗ್ಯ ನಿಯಮಗಳನ್ನನುಸರಿಸಿ ಜೀವಿಸುತ್ತಾ ರೋಗ ನಿರೋಧ ಮಾಡುವುದು  ಕಾಂಚನಗಾಂನಲ್ಲಿ ಗ್ರಾಮಸ್ಥರು ಗ್ರಾಮವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಸಹಕರಿಸುತ್ತಿದಾರೆಂಬ ವರದಿ  ವೈಯುಕ್ತಿಕ, ಕೌಟುಂಬಿಕ, ಸಾರ್ವಜನಿಕ ಆರೋಗ್ಯ ನಿಯಮಗಳನ್ನು ಅನುಸರಿಸಿ ಆಹಾರ ವ್ಯಾಯಾಮಗಳಲ್ಲಿ ಎಚ್ಚರಿಕೆ ಇರುವೆಡೆ ಕಾಯಿಲೆಗಳು ಬರಲು ಕಾರಣವೇ ಇರದು  ಬಾಹ್ಯ ಹಾಗೂ ಅಂತರಂಗಶುದ್ಧಿ ಇದ್ದೆಡೆಯಲ್ಲಿ ರೋಗ ಜನನ ಅಸಾಧ್ಯ  ಗ್ರಾಮೀಣರು ಈ ವಿಷಯವನ್ನು ಅರಿತುಕೊಂಡರೆ, ಅವರು ಡಾಕ್ಟರು, ವೈದ್ಯ, ಹಕೀಮ, ಇವರ ಬಳಿಗೆ ಹೋಗಲೇಬೇಕಾಗಿಲ್ಲ

ಕಾಂಚನಗಾಂನಲ್ಲಿ ಗೋ ಸಂಖ್ಯೆ ಅತಿವಿರಳ  ಇದು ವ್ಯಸನಕರ ಕೆಲವು ಎಮ್ಮೆಗಳೇನೋ ಇವೆ  ಆದರೆ ಎಮ್ಮೆ ಹಾಲು ಹಸುವಿನ ಹಾಲಿನಷ್ಟು ಆರೋಗ್ಯವಲ್ಲವೆಂದು ನನಗೆ ತಿಳಿದು ಬಂದಿದೆ  ವೈದ್ಯರು ಹಸುವಿನ ಹಾಲನ್ನೆ ರೋಗಿಗಳಿಗೆ ಸಲಹೆ ಮಾಡುತ್ತಾರೆ  ಆರೋಗ್ಯ ಪಾಲನೆಗೆ ಹಾಲು ಅತ್ಯಂತ ಮುಖ್ಯವಸ್ತು.

ಪ್ರಕೃತಿ ಚಿಕಿತ್ಸೆಯು ಆದರ್ಶ ಜೀವನ ವಿಧಾನವನ್ನು ಸೂಚಿಸುತ್ತದೆ, ಹಾಗೆಯೇ ಪಟ್ಟಣಗಳ ಮತ್ತು ಗ್ರಾಮ ಜೀವನದಲ್ಲಿಯೂ ಅದನ್ನೇ ಸೂಚಿಸುತ್ತದೆ. ಪ್ರಕೃತಿ ಚಿಕಿತ್ಸೆಯೆಲ್ಲ ಭಗವಂತನ ನಾಮ ಸ್ಮರಣೆಯ ಸುತ್ತ ಬೆಳೆಯುತ್ತದೆ (ಹರಿಜನ, ೨೬-೫-೪೬)

## (೨೩) ಬಡವರೂ—ನಿಸರ್ಗ ಚಿಕಿತ್ಸೆಯೂ

ಜೀವನದೃಷ್ಟಿಪಥವನ್ನು ಉತ್ತಮ ರೀತಿಗೆ ತಿರುಗಿಸುತ್ತದೆ ನಿಸರ್ಗ ಚಿಕಿತ್ಸೆ  ಆರೋಗ್ಯ ನಿಯಮಗಳಿಗನುಸಾರವಾಗಿ ಬಾಳನ್ನು ನಡೆಸುವುದೇ ಅದರ ಅರ್ಥ  ಶುಲ್ಕಕೊಟ್ಟೋ, ಉಚಿತವಾಗಿಯೋ ಆಸ್ಪತ್ರೆಯಿಂದ ಔಷಧವನ್ನು ತೆಗೆದುಕೊಂಡಂತಲ್ಲ ಅದು, ಆಸ್ಪತ್ರೆಯಿಂದ ಉಚಿತ ಚಿಕಿತ್ಸೆ ಅಪೇಕ್ಷಿಸುವವನು ದಾನ ಸ್ವೀಕರಿಸಿದಂತ  ನಿಸರ್ಗ ಚಿಕಿತ್ಸೆಯನ್ನು ಅನುಸರಿಸುವವನು ಎಂದಿಗೂ ಬೇಡುವುದಿಲ್ಲ  ಸ್ವ-ಸಹಾಯವು ಆತ್ಮ

ಗೌರವವನ್ನು ವೃದ್ಧಿಗೊಳಿಸುತ್ತದೆ ಶರೀರದಲ್ಲಿರುವ ವಿಷ ಮೂಲಗಳನ್ನು ನಾಶಮಾಡಿ ಮುಂದೆ ರೋಗಪೀಡಿತನಾಗದಂತೆ ಎಚ್ಚರಿಕೆ ತಳೆಯುತ್ತಾನೆ ನಿಸರ್ಗೋಪಚಾರಕ

ರಾಮನಾಮವು ಪ್ರಕೃತಿ ಚಿಕಿತ್ಸೆಯ ಕೇಂದ್ರೀಯ ಲಕ್ಷಣ ಎಲ್ಲ ವ್ಯಾಧಿಗಳಿಗೂ ಅದು ಅನ್ವಯಿಸಬೇಕಾದರೆ ಹೃದಯ ಮೂಲದಿಂದ ಮೂಡಿ ಬರಬೇಕು

ಯುಕ್ತ ಆಹಾರವೂ, ಕ್ಲೃಪ್ತ ಆಹಾರವೂ ಮುಖ್ಯ. ಇಂದು ನಮ್ಮಂತೆಯೇ ನಮ್ಮ ಹಳ್ಳಿಗಳೂ ಬರಡಾಗಿವೆ ಹಳ್ಳಿಗಳಲ್ಲಿ ಸಾಕಷ್ಟು ತರಕಾರಿ, ಹಣ್ಣು, ಹಾಲು, ಇವನ್ನು ವೃದ್ಧಿಗೊಳಿಸುವುದು ನಿಸರ್ಗ ಚಿಕಿತ್ಸೆ ಯೋಜನೆಯ ಪ್ರಧಾನ ಅಂಶ ಇದಕ್ಕಾಗಿ ವೆಚ್ಚಮಾಡಿದ ಕಾಲ ನಿರರ್ಥಕವಲ್ಲ ಇದರಿಂದ ಹಳ್ಳಿಗಳಿಗೆ ಉಪಯೋಗವಾಗುವುದಲ್ಲದೆ ಸಮಗ್ರ ಭಾರತಕ್ಕೂ ಉಪಯೋಗವಾಗುವುದು (ಹರಿಜನ. ೨-೬-೪೫)

## (೨೪) ನಿಸರ್ಗ ಚಿಕಿತ್ಸೆಯೂ—ಆಧುನಿಕ ಚಿಕಿತ್ಸಾವಿಧಾನವೂ

ನನ್ನ ನಿಸರ್ಗ ಚಿಕಿತ್ಸಾ ವಿಧಾನ ಪ್ರಧಾನವಾಗಿ ಹಳ್ಳಿಗಳಿಗೂ ಹಳ್ಳಿಗರಿಗೂ, ಅನ್ವಯಿಸುತ್ತದೆ ಆದುದರಿಂದ ಅದರಲ್ಲಿ ಅಣುದರ್ಶಿನಿ. ಕ್ಷ-ಕಿರಣ ಇತ್ಯಾದಿಗಳಿಗೆ ಸ್ಥಾನವಿಲ್ಲ ಹಾಗೆಯೇ ಕ್ವಿನೈನ್, ಎಮಿಟೈನ್, ಪೆನ್ಸಿಲಿನ್ ಇತ್ಯಾದಿ ಔಷಧಿಗಳಿಗೂ ಸ್ಥಾನವಿಲ್ಲ ಆರೋಗ್ಯಜೀವನ ವಿಧಾನ ಅತ್ಯಂತ ಪ್ರಧಾನ, ಇಷ್ಟೇ ಸಾಕು ಎಲ್ಲರೂ ಇವುಗಳನ್ನೇ ಸರಿಯಾಗಿ ಅನುಸರಿಸಿದರೆ ವ್ಯಾಧಿಗಳೇ ಇಲ್ಲವಾದಾವು ಒಂದು ವೇಳೆ ಈ ನಿಯಮಗಳೆನ್ನೆಲ್ಲ ಅನುಸರಿಸಿಯೂ ಕಾಯಿಲೆ ಬಂದರೆ ರಾಮನಾಮದ ಸಿದ್ಧೌಷಧವಿದ್ದೇ ಇದೆ. ಈ ರಾಮನಾಮ ಸಿದ್ಧೌಷಧವು ಕಣ್ಣು ಮುಚ್ಚಿ ತೆರೆಯುವುದರೊಳಗೆ ಸಾರ್ವತ್ರಿಕವಾಗಿ ಪ್ರಚಾರ ಹೊಂದಲಾರದು ರೋಗಿಗೆ ಅದರಲ್ಲಿ ನಂಬಿಕೆ ಹುಟ್ಟಬೇಕಾದರೆ, ಮೊದಲು ವೈದ್ಯನೇ ರಾಮನಾಮ ಸತ್ವದ ಜೀವಂತ ಪ್ರತೀಕದಂತಿರಬೇಕು ಈ ಮಧ್ಯೆ ನಿಸರ್ಗದ ಐದು ಮೂಲ ಶಕ್ತಿಗಳಾದ ಭೂಮಿ, ನೀರು, ವಾಯು, ಆಕಾಶ, ಬೆಂಕಿ, ಇವುಗಳಿಂದ ದೊರಕುವ ಎಲ್ಲ ಚಿಕಿತ್ಸೆಗಳನ್ನೂ ಮಾಡಬೇಕು ಇದೇ ನಿಸರ್ಗ ಚಿಕಿತ್ಸೆಯ ಪರಮಾವಧಿ ಎಂದು

ನನ್ನ ನಂಬಿಕೆ ಆದುದರಿಂದ ಉರುಳಿ ಕಾಂಚನದ ನನ್ನ ಪ್ರಯೋಗದ ಉದ್ದೇಶ, ಗ್ರಾಮಸ್ಥರಿಗೆ ಶುದ್ಧವೂ ಆರೋಗ್ಯಕರವೂ ಆದ ಜೀವನ ವಿಧಾನ ವನ್ನೂ, ಮೂಲ ಪ್ರಕೃತಿಯ ಸರಿಯಾದ ಉಪಯೋಗದಿಂದ ಕಾಯಿಲೆ ವಾಸಿ ಮಾಡಿಕೊಳ್ಳುವುದನ್ನೂ, ಕಲಿಸುವುದೇ ಆಗಿದೆ ಆವಶ್ಯಕವೆನಿಸಿದರೆ ಸ್ಥಳದಲ್ಲಿ ಬೆಳೆಯುವ ಮೂಲಿಕೆಗಳನ್ನು ಉಪಯೋಗಿಸಬಹುದು ಆರೋಗ್ಯ ಕರವೂ, ಕ್ಲೃಪ್ತವೂ ಆದ ಆಹಾರ ಸೇವನೆ ನಿಸರ್ಗ ಚಿಕಿತ್ಸೆಯಲ್ಲಿ ಅನಿವಾರ್ಯ ಅಂಶ (ಹರಿಜನ ೧೧-೮-೪೬)

## (೨೫) ಯೂರೋಪಿನಿಂದ ಕಲಿಯಬೇಕಾದ ನೀತಿ

ಪ್ರಗತಿ ಸಾಧಿಸಬೇಕಾದರೆ ಎಲ್ಲದರಲ್ಲಿಯೂ ಪಾಶ್ಚಾತ್ಯ ದೇಶಗಳ ಮಾರ್ಗದರ್ಶನಕ್ಕೆ ನೋಡುವುದು ನಿಲ್ಲಬೇಕು ನಿಸರ್ಗ ಚಿಕಿತ್ಸೆಯನ್ನು ಕಲಿಯಲು ಪಾಶ್ಚಾತ್ಯ ದೇಶಗಳಿಗೆ ಹೋಗುವುದು ಭಾರತಕ್ಕೆ ಪ್ರಯೋಜನ ಕಾರಿಯಲ್ಲ ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿಯೇ ಅನುಸರಿಸುವಂಥ ಚಿಕಿತ್ಸಾ ವಿಧಾನ ನಿಸರ್ಗ ಚಿಕಿತ್ಸೆ, ನಿಸರ್ಗ ಚಿಕಿತ್ಸಕರ ಸಲಹೆ ಎಲ್ಲ ಕಾಲಕ್ಕೂ ಇರುವಂತಾಗಬಾರದು ಏಕೆಂದರೆ, ಅತ್ಯಂತ ಸುಲಭವಾಗಿ ಎಲ್ಲರೂ ಕಲಿಯುವಂಥ ಪಾಠವದು ರಾಮನಾಮ ಪಠನೆ ಕಲಿಯಲು ನಾ ಯೂರೋಪಿಗೆ ಹೋಗಬೇಕೆ? ಅದೆಂದಿಗೂ ಸಾಧ್ಯವಿಲ್ಲ ನನ್ನ ಕಲ್ಪನೆಯ ನಿಸರ್ಗ ಚಿಕಿತ್ಸೆಯಲ್ಲಿ ರಾಮನಾಮ ಆಧಾರಭೂತ ಅಂಶ ಭೂಮಿ, ನೀರು, ಆಕಾಶ, ವಾಯು, ಬೆಂಕಿ, ಇವುಗಳ ಉಪಯೋಗವನ್ನು ತಿಳಿದು ಕೊಳ್ಳಲು ಸಾಗರದ ಆಚೆ ಇರುವ ದೇಶಕ್ಕೆ ಪ್ರಯಾಣಮಾಡಬೇಕಾಗಿಲ್ಲ ಅದು ಸ್ವತಃ ಸಿದ್ಧವಾದುದು ಬೇಕಾದ ಜ್ಞಾನವೆಲ್ಲ ನಮ್ಮ ಹಳ್ಳಿಗಳಲ್ಲಿಯೇ ದೊರಕುತ್ತದೆ ಒಂದು ವೇಳೆ ಮೂಲಿಕೆಗಳ ಪ್ರಯೋಗ ಮಾಡಿದರೆ ಅವು ಹಳ್ಳಿಯಲ್ಲಿಯೇ ದೊರಕಬೇಕು ಆಯುರ್ವೇದವು ಅವುಗಳ ಬಗೆಗೆ ಎಲ್ಲ ಜ್ಞಾನವನ್ನೂ ತಿಳಿಸುತ್ತದೆ ವಂಚಕರಾದ ಕೆಲವು ಆಯುರ್ವೇದ ಪಂಡಿತರು ವಿದೇಶಿ ಪ್ರವಾಸ ಮಾಡಿ ಬಂದ ಮಾತ್ರಕ್ಕೆ ಒಳ್ಳೆಯವರೂ, ಜನಸೇವಕರೂ ಆಗಲಾರರು ಶರೀರ ರಚನಾ ಶಾಸ್ತ್ರ, ಮಾನವನ ಶರೀರಶಾಸ್ತ್ರ, ಇವು ಪಾಶ್ಚಾತ್ಯ ವಿಜ್ಞಾನದ ಫಲ ಇವುಗಳ ಜ್ಞಾನ ಎಲ್ಲ ವೈದ್ಯರಿಗೂ ಆವ

ಶ್ಯಕವೂ, ಉಪಯುಕ್ತವೂ ಆದರೂ ಅವುಗಳನ್ನು ಎಲ್ಲರೂ ಕಲಿಯುವ ಅವಕಾಶ ನಮ್ಮಲ್ಲಿ ಕಡಿಮೆ ಪಾಶ್ಚಾತ್ಯರ ಉಪಯುಕ್ತ ಜ್ಞಾನವನ್ನು ಎಲ್ಲರಿಂದಲೂ ಎಲ್ಲೆಲ್ಲಿಯೂ ಸುಲಭವಾಗಿ ಕಲಿಯಲು ಅವಕಾಶವಾಗುವಂತಾದರೂ, ಪ್ರಕೃತಿ ಚಿಕಿತ್ಸೆಯನ್ನು ಕಲಿಯಲು ಮಾನವ ಶರೀರ ರಚನಾ ಶಾಸ್ತ್ರ, ಶರೀರ ಶಾಸ್ತ್ರ, ಇವುಗಳ ಜ್ಞಾನ ಅತ್ಯಂತ ಆವಶ್ಯಕವಲ್ಲವೆಂದು ನನ್ನ ಭಾವನೆ

ಕೂನ್ಹೆ, ಜೆಸ್ಟ್, ಫಾದರ್ ನೀಪ್, ಮುಂತಾದವರ ಬರವಣಿಗೆಗಳು ಸುಲಭವೂ, ಎಲ್ಲರಿಗೂ ಉಪಯುಕ್ತವೂ ಆದುವು, ಅವುಗಳನ್ನು ನಾವು ಓದಬೇಕು ಪ್ರತಿಯೊಬ್ಬ ನಿಸರ್ಗ ಚಿಕಿತ್ಸಕನಿಗೂ ಅವರ ವಿಷಯವಾಗಿ ಸ್ವಲ್ಪ ಸ್ವಲ್ಪ ತಿಳಿದಿರಬೇಕು ನಿಸರ್ಗ ಚಿಕಿತ್ಸೆಯನ್ನು ಈವರೆಗೂ ಹಳ್ಳಿಗಳಲ್ಲಿ ಆಚರಣೆಗೆ ತಂದಿಲ್ಲ ಅವುಗಳ ವಿಷಯವಾಗಿಯಾಗಲೀ ಲಕ್ಷಾಂತರ ಜನರ ವಿಷಯವನ್ನಾಗಲೀ ನಾವು ಆಲೋಚಿಸಿಲ್ಲ ಇದು ಕೇವಲ ಆರಂಭದೆಸೆ ಕೊನೆ ಹೇಗೋ ಯಾರಿಗೆ ಗೊತ್ತು? ಎಲ್ಲ ಮಹತ್ತರವೂ ಒಳ್ಳೆಯವೂ ಆದ ಪ್ರಯತ್ನಗಳಿಗೆ ಬೇಕಾಗುವಂತೆ ಇದಕ್ಕೂ ತ್ಯಾಗ ಮತ್ತು ಅನನ್ಯ ಸೇವೆಗಳು ಬೇಕು, ಪಾಶ್ಚಾತ್ಯ ದೇಶಗಳಿಂದ ಮಾರ್ಗದರ್ಶನ ಪಡೆಯಲು ಯತ್ನಿಸುವುದಕ್ಕೆ ಪ್ರತಿಯಾಗಿ ನಮ್ಮ ವಿಚಾರಶಕ್ತಿಯನ್ನು ಅಂತರ್ಮುಖಿಯನ್ನಾಗಿ ಮಾಡಿಕೊಳ್ಳಬೇಕು (ಹರಿಜನ. ೨-೬-೪೬)

## ೨೬ ನಿಸರ್ಗ ನಿಯಮಗಳು

ಪ್ರ ನಿಮ್ಮ ಸಲಹೆಯಂತೆ ನಾನು ರಾಮನಾಮ ಪಠನೆ ಮಾಡುತ್ತಿದೇನೆ ಇದರಿಂದ ಸ್ವಲ್ಪ ಉತ್ತಮವೂ ಕಂಡು ಬಂದಿದೆ ಇದರ ಜೊತೆಗೆ ಕ್ಷಯಕ್ಕೆ ಕೊಡುವ ವೈದ್ಯಕೀಯ ಚಿಕಿತ್ಸೆಯನ್ನೂ ಅನುಸರಿಸುತ್ತಿದೇನೆ ಅಲ್ಪಾಹಾರ ಯುಕ್ತಾಹಾರವೂ ಆರೋಗ್ಯವನ್ನೂ ದೀರ್ಘಾಯುಷ್ಯವನ್ನೂ ನೀಡಬಲ್ಲವೆಂದು ನೀವೆ ಹೇಳಿದಿರಿ. ಇಪ್ಪತ್ತೈದು ವರುಷಗಳಿಂದಲೂ ಈ ಅಲ್ಪಾಹಾರ ನಿಯಮವನು ಪಾಲಿಸುತ್ತಿದೇನೆ ಹೀಗಿದ್ದರೂ, ನನಗೇಕೆ ಕ್ಷಯ ಪ್ರಾಪ್ತವಾಗಬೇಕು? ಈ ಜನ್ಮದಲ್ಲಿಯೋ ಹಿಂದಿನ ಜನ್ಮದಲ್ಲಿಯೋ ನಾ ಮಾಡಿದ ಪಾಪ ಕರ್ಮದ ಫಲವಿದೆಂದು ಹೇಳುವಿರಾ ?

ಮಾನವ ೧೨೫ ವರ್ಷ ಜೀವಿಸಬಲ್ಲನೆಂದು ನೀವು ಹೇಳುತ್ತಿದೀರಿ. ಹಾಗಿದ್ದರೆ ನಿಮಗೆ ತುಂಬ ಉಪಯುಕ್ತರಾಗಿದ್ದ ಮಹಾದೇವ ದೇಸಾಯಿಯವರನ್ನು ದೇವರೇಕೆ ಕಸಿದುಕೊಂಡ ಅವರು ಅಲ್ಪಾಹಾರ, ಯುಕ್ತಾಹಾರ ಎಲ್ಲ ನಿಯಮವನ್ನೂ ಅನುಸರಿಸುತ್ತಿದ್ದರಲ್ಲದೆ ನಿಮ್ಮನ್ನೂ ದೇವರೆಂದು ಸೇವಿಸುತ್ತಿರಲಿಲ್ಲವೇ? ಅವರೇಕೆ ರಕ್ತದ ಒತ್ತಡ ವ್ಯಾಧಿಗೆ ಗುರಿಯಾದರು? ಅವತಾರವೆಂದೇ ಪರಿಗಣಿಸಲ್ಪಟ್ಟಿರುವ ಶ್ರೀರಾಮಕೃಷ್ಣ ಪರಮಹಂಸರಿಗೆ ಕ್ಷಯದಷ್ಟೇ ಕ್ರೂರವಾದ ಕ್ಯಾನ್ಸರ್ ವ್ಯಾಧಿ ಏಕೆ ಬಂದಿತು? ಅದರಿಂದ ಪಾರಾಗಲು ಅವರು ಅಸಮರ್ಥರಾದರೆ?

ಉ : ನನಗೆ ತಿಳಿದಂತೆ ಆರೋಗ್ಯ ನಿಯಮ ಪಾಲನೆಯ ತತ್ವವನ್ನು ನಾ ವಿವರಿಸುತ್ತಿದೇನೆ ಎಲ್ಲರಿಗೂ ಒಂದೇ ಬಗೆಯ ಅಲ್ಪಾಹಾರ, ಯುಕ್ತಾಹಾರಗಳನ್ನು ವಿಧಿಸಲು ಸಾಧ್ಯವಿಲ್ಲ ಯುಕ್ತ ವ್ಯಾಸಂಗ ಮತ್ತು ವಿಚಾರ, ಇವುಗಳಿಂದ ಪ್ರತಿಯೊಬ್ಬ ವ್ಯಕ್ತಿಯೂ ತನಗೆ ತಾನೇ ನಿಷ್ಕರ್ಷಿಸಿಕೊಳ್ಳಬೇಕು ಹೀಗೆಂದ ಮಾತ್ರಕ್ಕೆ ವ್ಯಕ್ತಿಯು ತಪ್ಪನ್ನೇ ಮಾಡಲಾರನೆಂದೂ, ಅವನ ಜ್ಞಾನವೇ ಪರಿಪೂರ್ಣವೆಂದೂ ಹೇಳಲಾಗುವುದಿಲ್ಲ ಆದುದರಿಂದ ಜೀವನವನ್ನು ಒಂದು ಪ್ರಯೋಗ ಶಾಲೆ ಎಂದು ಕರೆದಿದಾರೆ ಇತರರ ಅನುಭವವನ್ನೂ ತಿಳಿದುಕೊಂಡು ವ್ಯಕ್ತಿ ಪ್ರಗತಿಶೀಲನಾಗಬೇಕು ಯಶಸು ದೊರೆಯದಿದ್ದರೆ ತನ್ನನ್ನೂ ಇತರರನ್ನೂ ನಿಂದಿಸಬಾರದು ನಿಯಮದಲ್ಲಿಯೇ ತಪ್ಪನ್ನು ಕಂಡುಹಿಡಿಯಲೂ ಆರಂಭಿಸಬಾರದು ಒಂದು ವೇಳೆ ಒಂದು ನಿಯಮ ತಪ್ಪೆಂದು ಕಂಡುಬಂದರೆ ಅದನ್ನು ಘೋಷಿಸಿ, ನಿಜವನ್ನು ಹೇಳುವ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕು

ನಿಮ್ಮ ಸ್ವಂತ ವಿಷಯದಲ್ಲಿ ನಿಮ್ಮ ಕಾಯಿಲೆಗೆ ಸಂಬಂಧಿಸಿದಂತೆ ಅನೇಕ ಕಾರಣಗಳಿರಬಹುದು ನಿಸರ್ಗ ಚಿಕಿತ್ಸೆಯನ್ನು ನೀವು ಸರಿಯಾಗಿ ಉಪಯೋಗಿಸಿದಿರೆಂದು ಯಾರು ಹೇಳಬಲ್ಲರು? ನಿಸರ್ಗ ನಿಯಮದಲ್ಲಿ ನೀವೆಲ್ಲೋ ತಪ್ಪುಮಾಡಿರಬೇಕೆಂದು

ನನಗೆ ಅನಿಸುತ್ತದೆ ನಿಯಮ ತಪ್ಪೆಂದು ಹೇಳುವುದಕ್ಕಿಂತಲೂ ಮಹಾದೇವ, ರಾಮಕೃಷ್ಣ ಪರಮಹಂಸರಂಥವರೂ ಎಲ್ಲೋ ತಪ್ಪು ಮಾಡಿರಬೇಕೆಂದು ಹೇಳುವುದು ಹೆಚ್ಚು ಸರಿ ಎನಿಸುತ್ತದೆ ನಿಸರ್ಗ ನಿಯಮಗಳು ನನ್ನ ಸೃಷ್ಟಿಯಲ್ಲ ಜ್ಞಾನಿಗಳು ಹೇಳುವಂತೆ ಅವು ಪ್ರಕೃತಿಯ ನಿಯಮಗಳು ಅವುಗಳನ್ನು ನಾ ನಂಬುವುದಲ್ಲದೇ, ಆ ನಂಬಿಕೆಗೆ ಅನುಗುಣವಾಗಿ ಜೀವಿಸಲು ಯತ್ನಿಸುತ್ತಿದೇನೆ ಮಾನವ ಅಪೂರ್ಣ ಜೀವ ಪೂರ್ಣಸತ್ಯ ಅವನಿಗೆ ಹೇಗೆ ಅರಿವಾಗಬೇಕು? ಅಲೋಪತಿಕ್ ವೈದ್ಯರು ಇದನ್ನು ನಂಬಲಿ ಅಥವಾ ಉದಾಸೀನರಾಗಲಿ, ನನಗಂತೂ ಏನೂ ಅನ್ನಿಸುವುದಿಲ್ಲ ಮಹಾವ್ಯಕ್ತಿಗಳ ವಿಷಯದಲ್ಲಿ ನಾ ಹೇಳಿದುದು ಅವರ ಹಿರಿಮೆಯನ್ನು ಸ್ವಲ್ಪವೂ ಕಮ್ಮಿ ಮಾಡಲಾರದು ಮತ್ತು ಮಾಡಲೂಬಾರದು. (ಹರಿಜನ. ೪-೮-೪೬)

## (೨೭) ನಂಬಿಕೆ ಚಿಕಿತ್ಸೆಯೂ—ರಾಮನಾಮವೂ

ಗೆಳೆಯರೊಬ್ಬರ ಸೂಕ್ಷ್ಮವಾದ ಲೇವಡಿ ಇದು.

"ನಿಮ್ಮ ನಿಸರ್ಗ ಚಿಕಿತ್ಸೆಗೂ ನಂಬಿಕೆ ಚಿಕಿತ್ಸೆಗೂ ಏನಾದರೂ ಸಂಬಂಧವಿದೆಯೆ? ಯಾವ ಚಿಕಿತ್ಸೆಯಲ್ಲೇ ಆಗಲಿ ಮೊದಲು ನಂಬಿಕೆ ಬೇಕು ಆದರೆ ಕೆಲವು ವಿಶಿಷ್ಟವಾದ ನಂಬಿಕೆ ಚಿಕಿತ್ಸಾ ಕ್ರಮಗಳಿವೆ ಉದಾಹರಣೆಗೆ ಸಿಡುಬು, ಹೊಟ್ಟೆಶೂಲೆ, ಇತ್ಯಾದಿಗಳಿಗೆ—ನಿಮಗೂ ಗೊತ್ತಿರಬಹುದು, ಸಿಡುಬು ವ್ಯಾಧಿಗೆ ದಕ್ಷಿಣ ದೇಶಗಳಲ್ಲಿ ಚಿಕಿತ್ಸೆಯನ್ನೇ ಮಾಡುವುದಿಲ್ಲ ಅದೊಂದು ದೈವೀ ಲೀಲೆ ಮಾರೀ ದೇವತೆಗೆ ಪೂಜೆ ಮಾಡುತ್ತೇವೆ ಇದರಿಂದ ಆಶ್ಚರ್ಯಕರವಾದ ಪರಿಣಾಮವಾಗುತ್ತದೆ ಹೊಟ್ಟೇನೋವಿಗೆ ತಿರುಪತಿಯ ಶ್ರೀನಿವಾಸದೇವರಿಗೆ ಹರಕೆ ಹೊತ್ತು ಗುಣ ಕಂಡುಬಂದಿದೆ ನಮ್ಮ ತಾಯಿಗೆ ಹೊಟ್ಟೆಶೂಲೆ ಇತ್ತು ಅವರು ತಿರುಪತಿಗೆ ಹೋಗಿ ಹರಕೆ ಕೊಟ್ಟು ಬಂದಾಗಿನಿಂದ ಅದು ನಿಂತೇಹೋಗಿದೆ

"ಈ ನಿಸರ್ಗ ಚಿಕಿತ್ಸೆಯಲ್ಲಿ ಜನಕ್ಕೇಕೆ ನಂಬಿಕೆ ಬರಬಾರದು ಇದರಿಂದ ಎಷ್ಟೋ ವೆಚ್ಚ ಕಮ್ಮಿಯಾಗುತ್ತದೆ ಫ್ರೌಜರ್ ಕವಿ ಹೇಳಿದಂತೆ

ರೋಗಿಯನ್ನು ಯಾವಾಗಲೂ ರೋಗಿಯನ್ನಾಗಿಯೇ ಇಟ್ಟಿರಬೇಕೆಂಬ ವೈದ್ಯನ ಹವಣಿಕೆಯೇ ? ಇದೂ ಪ್ರಕೃತಿಯ ವಿಧಾನವೇ ?"

ಮೇಲಿನ ಉದಾಹರಣೆಗಳು ನಿಸರ್ಗಚಿಕಿತ್ಸೆಯು ಅಲ್ಲ ಅಥವಾ ಅದರಲ್ಲಿ ನಾ ಹೇಳುವ ರಾಮನಾಮದ ಪ್ರಭಾವವೂ ಅಲ್ಲ ಆದರೆ, ಕೆಲವು ಸಂದರ್ಭಗಳಲ್ಲಿ ಯಾವ ಚಿಕಿತ್ಸೆಯೂ ಇಲ್ಲದೆ ಪ್ರಕೃತಿ ಹೇಗೆ ಗುಣಪಡಿಸಬಲ್ಲದೆಂಬುದನ್ನು ಅವು ತೋರಿಸುತ್ತವೆ ಅವು ಭಾರತೀಯರ ಜೀವನದಲ್ಲಿ ಮಿಶ್ರವಾಗಿರುವ ಮೂಢ ನಂಬಿಕೆಯನ್ನು ಅನುಮಾನಕ್ಕೆಡೆಯಿಲ್ಲದಂತೆ ತೋರಿಸುತ್ತವೆ ನಿಸರ್ಗ ಚಿಕಿತ್ಸೆಯ ಕೇಂದ್ರೀಯ ಶಕ್ತಿಯಾದ ರಾಮನಾಮವು ಮೂಢನಂಬಿಕೆಯ ಶತ್ರು ವಿಚಾರಶೂನ್ಯ ಜನರು ಎಲ್ಲವನ್ನೂ ದುರುಪಯೋಗಮಾಡಿಕೊಂಡಂತೆ ರಾಮನಾಮವನ್ನೂ ದುರುಪಯೋಗ ಮಾಡುವರು ರಾಮನಾಮದ ಬಾಯಿಪಾಠದಿಂದ ರೋಗ ಗುಣಮುಖವಾಗಲಾರದು ನಂಬಿಕೆ ಚಿಕಿತ್ಸೆ ಎನ್ನುವುದು, ಗೆಳೆಯ ವಿವರಿಸಿದಂತೆ, ಮೂಢ ಚಿಕಿತ್ಸೆ ಆದುದರಿಂದಲೇ ಅವನು ಚೈತನ್ಯಮಯ ದೇವನ ಚೈತನ್ಯಯುಕ್ತ ನಾಮವನ್ನು ಹಾಸ್ಯಕ್ಕೆ ಈಡುಮಾಡಿದಾನೆ ರಾಮನಾಮವು ಮನೋಕಲ್ಪನೆಯಲ್ಲ ಅದು ದೇವನಲ್ಲಿಯೂ ಅವನ ಕಟ್ಟಲೆಯಲ್ಲಿಯೂ ಜ್ಞಾನಯುಕ್ತ ನಂಬಿಕೆಯಾಗಿ ಹೃದಯದಿಂದ ಹೊಮ್ಮಬೇಕು ಅದರಿಂದ ಎಲ್ಲ ಗುಣಮುಖವಾಗುತ್ತವೆ ಪೂರ್ಣ ಆರೋಗ್ಯವಿರುವ ಶರೀರಕ್ಕೆ ಪೂರ್ಣ ಸ್ಥಿಮಿತವಾದ ಮನಸ್ಸೇ ಕಾರಣ ಅದು ದೇವನ ನಿಯಮ ಪೂರ್ಣ ಸ್ಥಿಮಿತವಾದ ಮನಸ್ಸು ಪೂರ್ಣ ಸ್ಥಿಮಿತವಾದ ಹೃದಯದ ಪರಿಣಾಮ ಇಲ್ಲಿ ಹೃದಯವೆಂದರೆ ಅದು ಭಗವಂತನ ಆವಾಸಸ್ಥಾನ, ವೈದ್ಯನ ಯಂತ್ರದಿಂದ ಪರಿಚಿತವಾಗುವ ಹೃದಯವಲ್ಲ ಹೃದಯದಲ್ಲಿ ಭಗವಂತನ ಪ್ರತಿಷ್ಠಾಪನೆಯಾಯಿತೆಂದರೆ ಯಾವ ಬಗೆಯ ಅಪವಿತ್ರ ಯೋಚನೆಯೂ, ಜಡಚಿಂತನೆಯೂ ಉತ್ಪನ್ನವಾಗದು ಶುದ್ಧಚಿಂತನೆ ಇರುವೆಡೆ ವ್ಯಾಧಿಗೆ ಸ್ಥಾನವಿಲ್ಲ ಇಂಥ ಸ್ಥಿತಿಹೊಂದಲು ಕಷ್ಟಸಾಧ್ಯ ಆದರೂ ಇದು ಸಾಧ್ಯವೆಂದು ಸ್ವೀಕಾರ ಮಾಡುವುದೇ ಆರೋಗ್ಯದ ಪ್ರಥಮ ಹೆಜ್ಜೆ ಮುಂದಿನ ಪ್ರಯತ್ನದಿಂದ ಮುಂದಿನ ಹೆಜ್ಜೆ ಇಂಥ ಪರಿವರ್ತನೆಯು ಜೀವನದಲ್ಲಿ ಮಾನವನು ಕಂಡು ಹಿಡಿದಿರುವ ನಿಸರ್ಗದ ಎಲ್ಲ ನಿಯಮಗಳ ಅನುಷ್ಠಾನದಿಂದ ಲಭ್ಯವಾಗುತ್ತದೆ ಇವುಗಳನ್ನು ದೂರಮಾಡಿ ಶುದ್ಧ ಹೃದಯವನ್ನು ಯಾರೂ ಹೊಂದ

ಲಾರರು ರಾಮನಾಮವಿಲ್ಲದಿದ್ದರೂ ಶುದ್ಧ ಹೃದಯವಿರಬಹುದೆಂದು ಯಾರಾದರೂ ವಾದಿಸಬಹುದು ನನಗಂತೂ ರಾಮನಾಮದ ಹೊರತು ಶುದ್ಧಿಹೊಂದುವ ಬೇರೆ ಮಾರ್ಗವೇ ಇಲ್ಲ ಜಗತ್ತಿನಲ್ಲಿ ಎಲ್ಲ ಸತ್ಪುರುಷರೂ ಇದೇ ಮಾರ್ಗಾನುಸರಣೆ ಮಾಡಿದಾರೆ ಅವರು ಮೂಢ ನಂಬಿಕೆಯುವ ರಾಗಲೀ, ಬರೀ ಮಾತಿನವರಾಗಲೀ ಆಗಿರದೆ ಭಗವಂತನ ಶರಣ ರಾಗಿದ್ದರು

ಇದು ಶ್ರದ್ಧಾ ಚಿಕಿತ್ಸೆಯಾಗುವುದಾದರೆ ನನ್ನ ಅಭ್ಯಂತರವಿಲ್ಲ ರಾಮ ನಾಮವು ನನ್ನ ಶೋಧನೆಯಲ್ಲ ಕ್ರೈಸ್ತಯುಗಕ್ಕಿಂತಲೂ ಪ್ರಾಚೀನತರ ವಾದುದು ರಾಮನಾಮವು ಶಸ್ತ್ರಚಿಕಿತ್ಸೆಯನ್ನೂ ನಿರಾಕರಿಸುವುದೇ ಎಂದು ಒಬ್ಬ ವಾಚಕ ಪ್ರಶ್ನಿಸಿದಾರೆ ಇಲ್ಲ ಆಕಸ್ಮಿಕದ ಪರಿಣಾಮವಾಗಿ ಮುರಿದ ಕಾಲನ್ನು ಅದು ಪುನಃ ಸೇರಿಸಲಾರದು ಎಷ್ಟೋ ಸಂದರ್ಭಗಳಲ್ಲಿ ಶಸ್ತ್ರ ಚಿಕಿತ್ಸೆ ಅನಾವಶ್ಯಕ ಅವು ಅವಶ್ಯವಿರುವೆಡೆ ಆಗಲೇಬೇಕು ಆದರೆ ಭಗವ ದ್ಭಕ್ತ ಶರೀರದ ಒಂದು ಅಂಗ ಭಂಗವಾದುದಕ್ಕೆ ಚಿಂತಿಸನು, ರಾಮನಾಮ ಪರನೆ ಪ್ರಯೋಗ ಸಿದ್ಧವಿಧಾನವಾಗಲೀ, ತಾತ್ಕಾಲಿಕ ಪರಿಹಾರವಾಗಲೀ ಆಗಲಾರದು. (ಹರಿಜನ, ೯-೬-೪೬)

## (೨೮) ರಾಮನಾಮದ ಬಗೆಗೆ ವಿಚಾರಗೊಂದಲ

ಒಬ್ಬ ಗೆಳೆಯ ಹೀಗೆ ಬರೆಯುತ್ತಾರೆ "ರಾಮನಾಮದಿಂದ ಮಲೇ ರಿಯಾವನ್ನು ವಾಸಿಮಾಡಿಕೊಳ್ಳಬೇಕೆಂಬ ನಿಮ್ಮ ಸಲಹೆ, ದೈಹಿಕ ವ್ಯಾಧಿಗೆ ಆಧ್ಯಾತ್ಮಿಕ ಶಕ್ತಿಯನ್ನು ಹೇಗೆ ಚಿಕಿತ್ಸಾರೂಪವಾಗಿ ಉಪಯೋಗಿಸಲು ಸಾಧ್ಯ ಎಂಬ ಪ್ರಶ್ನೆಯನ್ನು ಒಡ್ಡಿದೆ ಗುಣವಾಗುವುದೆಂಬ ನಂಬಿಕೆ ನನ ಗಿಲ್ಲ ಅಲ್ಲದೆ ದೇಶದಲ್ಲಿ ಲಕ್ಷಾಂತರ ಜನ ದುಃಖಕ್ಕೀಡಾಗಿರುವಾಗ ನನ್ನೊ ಬ್ಬನನ್ನೇ ಮೋಕ್ಷಕ್ಕೊಯ್ಯಿ ಎಂದು ಪ್ರಾರ್ಥಿಸುವುದು ನ್ಯಾಯವಲ್ಲವೆನಿಸು ತ್ತದೆ ರಾಮನಾಮದ ಅರ್ಥ ನನಗೆ ಅರಿವಾದೊಡನೆ ಅವರ ಮೋಕ್ಷಕ್ಕಾ ಗಿಯೂ ಪ್ರಾರ್ಥಿಸುವೆ ಹಾಗೆ ಮಾಡದಿದ್ದರೆ ಇಂದಿಗಿಂತಲೂ ಹೆಚ್ಚು ಸ್ವಾರ್ಥಿಯಾದೇನು"

ಇದು ಒಬ್ಬ ಶ್ರದ್ಧಾವಂತ ಸತ್ಯಾನ್ವೇಷಕನ ದೃಷ್ಟಿ ಎಂದು ನನ್ನ

ನಂಬಿಕೆ ಈತನಂತೆಯೇ ಇತರರಿಗೂ ಇದೇ ಸಂಶಯವಿರಬಹುದಾದುದರಿಂದ ಈ ಪ್ರಶ್ನೆಯನ್ನು ಬಹಿರಂಗವಾಗಿಯೇ ತೆಗೆದುಕೊಂಡಿದೇನೆ

ಮಾನವನ ಸೇವೆಗಿರುವ ಅನಂತಶಕ್ತಿಗಳಲ್ಲಿ ಆಧ್ಯಾತ್ಮವೂ ಒಂದು. ಪ್ರಾಚೀನ ಕಾಲದಿಂದಲೂ ಇದು ದೈಹಿಕವ್ಯಾಧಿಗಳಿಗೆ ನಿವಾರಣೋಪಾಯವಾಗಿದೆಯೋ ಇಲ್ಲವೋ ಎಂಬ ಪ್ರಶ್ನೆ ಬೇರೆ ಆದರೆ, ದೈಹಿಕವ್ಯಾಧಿಗಳಿಗೆ ಅದನ್ನು ಯಶಸ್ವಿಯಾಗಿ ಉಪಯೋಗಿಸಬಹುದಾದರೆ ಆ ರೀತಿ ಉಪಯೋಗಿಸದಿರುವುದು ಮೂಲಭೂತವಾದ ತಪ್ಪೆನಿಸುತ್ತದೆ ಆತ್ಮ-ವಸ್ತು-ಇವೆರಡರ ಪರಸ್ಪರ ಮಿಳನ, ಕ್ರಿಯೆ ಇವುಗಳಿಂದ ಮಾನವ ವ್ಯಕ್ತಿ ಆಗಿದಾನೆ ಲಕ್ಷಾಂತರ ಜನಕ್ಕೆ ಸಿಕ್ಕದಿರಬಹುದಾದ ಕ್ವಿನೈನ್ ನಿಂದ ಅವರ ಬಗ್ಗೆ ಯೋಚನೆಯನ್ನೂ ಮಾಡದೆ—ನಿನ್ನ ಮಲೇರಿಯಾ ವ್ಯಾಧಿಯನ್ನು ಗುಣಪಡಿಸಿಕೊಳ್ಳಬಹುದಾದರೆ, ಲಕ್ಷಾಂತರ ಜನರು ಅಜ್ಞಾನಪೂರ್ವಕವಾಗಿ ಉಪಯೋಗಿಸದಿರುವ ಮತ್ತು ಅವರಲ್ಲಿಯೇ ಇರುವ ಶಕ್ತಿಯನ್ನು ಉಪಯೋಗಿಸಿಕೊಂಡು ಗುಣಪಡೆಯಲು ಏಕೆ ನಿರಾಕರಿಸುತ್ತೀಯೆ? ಲಕ್ಷಾಂತರ ಜನ ಅಜ್ಞಾನದಿಂದಲೋ ತಾತ್ಸಾರದಿಂದಲೋ ಶ್ವಪಚರಾಗಿದ್ದರೆ ನೀನು ಶುಚಿಯಾಗಿರಬಾರದೆ? ಧರ್ಮದ ಅಪಾರ್ಥ ಮಾಡಿ ನೀನೂ ಶ್ವಪಚನಾಗಬಯಸಿದರೆ ಲಕ್ಷಾಂತರ ಜನಕ್ಕೆ ನೀನು ಸಲ್ಲಿಸುವ ಸೇವೆಯನ್ನು ಕಳೆದುಕೊಳ್ಳುವೆ ಹಾಗೆಯೇ ದೈಹಿಕ ಶುಚಿತ್ವ ಹೊಂದುವುದನ್ನು ನಿರಾಕರಿಸುವುದು ಕೆಡುಕೆನಿಸಿದರೆ ಆಧ್ಯಾತ್ಮಿಕವಾಗಿ ಶುಚಿತ್ವ ಹೊಂದಲು ನಿರಾಕರಿಸುವುದು ಇನ್ನೂ ಕೆಡುಕೆನಿಸುತ್ತದೆ

ಎಲ್ಲ ವಿಧದಲ್ಲಿಯೂ ಚೆನ್ನಾಗಿರುವುದೇ ಮೋಕ್ಷವಲ್ಲದೆ ಬೇರೆಯಲ್ಲ ಇದರಿಂದ ನಿನಗೂ ಇತರರಿಗೂ ಮಾರ್ಗದರ್ಶನವಾಗುವುದಾದರೆ ನಿನಗೇಕೆ ಬೇಡವೆನ್ನಬೇಕು? ಆದರೆ, ಪೆನ್ಸಿಲಿನ್ ಎಲ್ಲರಿಗೂ ದೊರಕದೆಂಬ ಜ್ಞಾನ ನಿನಗಿದ್ದೂ ರೋಗದಿಂದ ಗುಣಮುಖನಾಗಲು ನೀನದನ್ನು ಉಪಯೋಗಿಸಿಕೊಂಡರೆ ಪೂರ್ಣ ಸ್ವಾರ್ಥಿಯಾಗುವೆ

ಹೀಗೆ ನನ್ನ ವಾಚಕನ ವಿಚಾರಗೊಂದಲ ಸ್ವಯಂವೇದ್ಯ.

ಇದು ಹೇಗಾದರೂ ಇರಲಿ, ರಾಮನಾಮದ ಉಪಯೋಗವನ್ನು ಅರಿತುಕೊಳ್ಳುವುದಕ್ಕಿಂತಲೂ ಕ್ವಿನೈನ್ ಗುಳಿಗೆಯನ್ನು ಉಪಯೋಗಿಸು

ವುದು ಹೆಚ್ಚು ಸುಲಭವಾದುದು ಕ್ವಿನೈನ್ ಕೊಂಡುಕೊಳ್ಳಲು ಬೆಲೆ ಎಲ್ಲಿ ? ರಾಮನಾಮ ಸಾಧಿಸಬೇಕಾದ ಪ್ರಯತ್ನವೆಲ್ಲಿ ? ಯಾವ ಲಕ್ಷಾಂತರ ಜನಗಳಿಗಾಗಿ ನನ್ನ ಗೆಳೆಯ ರಾಮನನ್ನು ತನ್ನ ಹೃದಯದಿಂದ ದೂರ ಮಾಡಿದಾನೋ ಅದೇ ಲಕ್ಷಾಂತರ ಜನರ ಉಪಯೋಗಕ್ಕಾಗಿ ಈ ಪ್ರಯತ್ನ ಮಹತ್ತ್ವನಿಸೀತು (ಹರಿಜನ, ೧-೯-೪೬)

## (೨೯) ಒಂದು ಕ್ಲಿಷ್ಟ ಸಮಸ್ಯೆ

ಆಶ್ರಮದ ಒಬ್ಬ ಕಾರ್ಯಕರ್ತ ಹುಚ್ಚು ಹಿಡಿದು ಹಿಂಸಾಕೃತ್ಯಗಳಲ್ಲಿ ತೊಡಗಿದಾಗ ಅವನನ್ನು ಬಂಧನಕ್ಕೆ ಕಳುಹಿಸಿ ಗಾಂಧೀಜೀ ಹೀಗೆ ನುಡಿದರು -

" ಅವನು ಒಳ್ಳೆಯ ಕಾರ್ಯಕರ್ತ ಕಳೆದ ವರುಷ ರೋಗದಿಂದ ಗುಣಮುಖನಾದ ಮೇಲೆ ತೋಟವನ್ನು ನೋಡಿಕೊಳ್ಳುವ ಮತ್ತು ಆಸ್ಪತ್ರೆಯ ಲೆಕ್ಕವಿಡುವ ಕೆಲಸವನ್ನು ಮಾಡುತ್ತಿದ್ದನು ಕಷ್ಟಪಟ್ಟು ಕೆಲಸಮಾಡುತ್ತಾ ಸುಖಿಯಾಗಿದ್ದನು ಒಮ್ಮೆ ಅವನಿಗೆ ಮಲೇರಿಯಾ ಬಂದಿತು. ಅದನ್ನು ಕ್ಷಿಪ್ರವಾಗಿ ಗುಣಪಡಿಸಬೇಕೆಂಬ ಉದ್ದೇಶದಿಂದ ಅವನಿಗೆ ಕ್ವಿನೈನ್ ಸೂಜಿಮದ್ದನ್ನು ಕೊಡಲಾಯಿತು ಈ ಸೂಜಿಮದ್ದು ತನ್ನ ತಲೆಗೇರಿ ಹುಚ್ಚು ಹಿಡಿಸಿದೆ ಎಂದು ಅವನು ಹೇಳುತ್ತಿದ್ದಾನೆ ಈ ದಿನ ಬೆಳಗ್ಗೆ ನನ್ನ ಕೊಠಡಿಯಲ್ಲಿ ನಾ ಕೆಲಸಮಾಡುತ್ತಾ ಕುಳಿತಿದ್ದಾಗ ಅವನು ಹೊರಗಡೆ ಅಲ್ಲಲ್ಲಿ ತಿರುಗಾಡುತ್ತಾ, ಕಿರುಚುತ್ತಾ, ನಾನಾ ಸನ್ನೆಗಳನ್ನು ಮಾಡುತ್ತಾ ಇದ್ದುದು ಕಂಡುಬಂದಿತು ನಾನು ಅವನ ಬಳಿಗೆ ಹೋಗಿ, ಅವನೊಂದಿಗೆ ನಡೆದುಕೊಂಡು ಹೋದೆ ಅವನು ಸ್ವಲ್ಪ ಶಾಂತವಾದನು. ಆದರೆ ಅವನನ್ನು ನಾ ಬಿಟ್ಟುಹೋದಕೂಡಲೇ ಪುನಃ ಹತೋಟಿ ಮೀರಿದನು ಅವನು ಉಗ್ರವಾಗಿ ವರ್ತಿಸಿದನು ಯಾರ ಮಾತನ್ನೂ ಕೇಳುವುದಿಲ್ಲ, ಆದುದರಿಂದ ಅವನನ್ನು ಬಂಧನಕ್ಕೆ ಕಳಿಸಬೇಕಾಯಿತು

" ನನ್ನ ಸಹಕಾರ್ಯಕರ್ತರೊಬ್ಬರನ್ನು ಹೀಗೆ ಬಂಧನಕ್ಕೆ ಕಳುಹಿಸಬೇಕಾಯಿತಲ್ಲಾ ಎಂದು ನನಗೆ ವ್ಯಥೆಯಾಯಿತು ಯಾರಾದರೂ ನನ್ನನ್ನು ಪ್ರಶ್ನಿಸಬಹುದು, ' ಸರ್ವವ್ಯಾಧಿ ನಿವಾರಕವೆಂದು ನೀವು ಹೇಳುವ

ರಾಮನಾಮ ಎಲ್ಲಿ ಹೋಯಿತು ? ಹೀಗೆ ನಿಷ್ಫಲವಾದರೂ ರಾಮನಾಮ ದಲ್ಲಿ ನನ್ನ ನಂಬಿಕೆ ಅಚಲವಾಗಿದೆ ರಾಮನಾಮ ನಿಷ್ಫಲವಾಗುವಂತೆಯೇ ಇಲ್ಲ ನಿಷ್ಫಲತೆಯೆಂದರೆ ನಮ್ಮ ಅಶಕ್ತಿ, ನಿಷ್ಫಲದ ಕಾರಣ ನಮ್ಮಲ್ಲಿಯೇ ಇರುತ್ತದೆ. (ಹರಿಜನ, ೧-೯-೪೬)

## (೩೦) ಸಾಕ್ಷಾತ್ಕಾರದೆಡೆಗೆ

ಯಾರ ಹೃದಯ ಸಿಂಹಾಸನದಲ್ಲಿ ರಾಮ ವಿರಾಜಮಾನವಾಗಿದ್ದಾನೋ ಅವನ ಲಕ್ಷಣಗಳೇನು ? ಇದು ನಮಗೆ ತಿಳಿಯದಿದ್ದರೆ ರಾಮ ನಾಮವು ಅಪಾರ್ಥಕ್ಕೊಳಗಾಗಲು ಸಾಧ್ಯ ಈಗ ಆಗಲೇ ಅಪಾರ್ಥಗಳಾಗಿವೆ ಅನೇಕರು ಜಪಮಣಿ ಹಿಡಿದು, ಹಣೆಯ ಮೇಲೆ ಪವಿತ್ರ ಭಸ್ಮ ಧಾರಣೆ ಮಾಡಿಕೊಂಡು ವ್ಯರ್ಥವಾಗಿ ಅವನ ನಾಮ ಜಪಿಸುತ್ತಾರೆ ರಾಮನಾಮದ ಬಗೆಗೆ ನಾ ಬಿಡದೆ ಹೇಳುತ್ತಿರುವುದರಿಂದ ಈ ಬಗೆಯ ಮಿಥ್ಯಾಚಾರಕ್ಕೆ ನೆರವಾದಂತಲ್ಲವೆ ? ಹೀಗಾಗುವುದೆಂಬುದನ್ನು ಕೇಳಿ ನಾ ಅಂಜುವುದಿಲ್ಲ ಮೌನವು ಅಪಾಯಕಾರಿ, ಚೈತನ್ಯದ ವಾಣಿಯುಳ್ಳ ಮೌನವು ಹೃದಯಭರಿತ ಅನುಷ್ಠಾನದಿಂದ ಶಕ್ತಿಗೊಳ್ಳಬೇಕು ಇಂಥ ನೈಸರ್ಗಿಕ ಮೌನವು ಇಲ್ಲದಿರುವಾಗ ರಾಮನನ್ನು ಹೃದಯದಲ್ಲಿ ಕಂಡವನ ಲಕ್ಷಣಗಳನ್ನು ನಾವು ತಿಳಿದುಕೊಳ್ಳಲೆತ್ನಿಸಬೇಕು

ರಾಮಭಕ್ತನೂ, ಗೀತೆಯ ಸ್ಥಿತಪ್ರಜ್ಞನೂ ಇಬ್ಬರೂ ಸಮಾನರು ಒಬ್ಬ ಅಂತರ್ಮುಖನಾದರೆ, ಮತ್ತೊಬ್ಬನು ಪ್ರಕೃತಿಯ ಪಂಚಭೂತಗಳಿಗನುಸಾರವಾಗಿ ನಡೆಯುವನು ಇಂಥ ನಡೆವಳಿಕೆಯಿಂದ ಅವನು ರೋಗ ಗ್ರಸ್ತನಾಗಲಾರನು ಒಂದು ವೇಳೆ ರೋಗಗ್ರಸ್ತನಾದರೂ ಪ್ರಕೃತಿಯ ಸಹಾಯದಿಂದಲೇ ಗುಣಮುಖನಾಗುವನು ದೇಹಾಂತರ್ಯಾಮಿ—ಹೇಗಾದರೂ ವಾಸಿಮಾಡಿಕೊಳ್ಳಲಿಚ್ಛಿಸುವುದಿಲ್ಲ ತಾನು ದೇಹವಲ್ಲದೆ ಮತ್ತೇನೂ ಇಲ್ಲವೆನ್ನುವವನು ದೇಹವ್ಯಾಧಿಗಳನ್ನು ಗುಣಪಡಿಸಿಕೊಳ್ಳಲು ಜಗತ್ತಿನಲ್ಲೆಲ್ಲಾ ಅಲೆದಾಡಿಯಾನು, ಆದರೆ ಆತ್ಮವು ದೇಹಾತೀತವೆಂದೂ, ಅಚ್ಯುತವೆಂದೂ, ನಂಬಿದವನು ಪಂಚಭೂತಗಳ ಚಿಕಿತ್ಸೆಯಿಂದ ಗುಣಮುಖವಾಗದಿದ್ದರೂ ವ್ಯಥೆಪಡನು. ಅವನು ಸಾವನ್ನು ಗೆಳೆಯನಂತೆ ಸ್ವಾಗತಿಸುವನು. ವೈದ್ಯರ ಬಳಿ ಸಾರುವುದಕ್ಕೆ ಪ್ರತಿಯಾಗಿ ತಾನೇ ತನ್ನ ಚಿಕಿತ್ಸಕನಾಗುವನು

ಆತ್ಮಜ್ಞಾನದಿಂದ ಕೂಡಿದವನಾಗಿ ಆ ಅಂತರ್ಯಾಮಿಯನ್ನೇ ಅನನ್ಯ ನೆಚ್ಚಿರುವನು.

ಇಂಥ ವ್ಯಕ್ತಿ ಸದಾ ದೇವರ ಸ್ಮರಣೆಮಾಡುವನು ಅವನ ದೇಹ ನಿದ್ರಿಸುವಾಗ ಅವನ ಆತ್ಮಾರಾಮ ಎಚ್ಚರಿರುವನು ಅವನು ಮಾಡುವುದೆಲ್ಲ ರಾಮನಿಗಾಗಿಯೇ ರಾಮನ ಪವಿತ್ರ ಸಂಗದಗಲಿಕೆಯೇ ಅವನಿಗೆ ನಿಜವಾದ ಸಾವು

ರಾಮನೊಂದಿಗೆ ಇರುವುದಕ್ಕಾಗಿ ಪಂಚಭೂತಗಳು ಏನನ್ನು ನೀಡುವುವೋ ಆದರಲ್ಲಿಯೇ ನಿರತನಾಗಿರುವನು ಗಾಳಿ, ನೀರು, ಆಕಾಶ, ಬೆಂಕಿ, ಭೂಮಿ, ಇವುಗಳು ನೀಡಬಹುದಾದ ಸೌಕರ್ಯಗಳನ್ನೇ ಅವನು ಸೇವಿಸುತ್ತಾನೆ ಈ ಸಾಧನ ರಾಮನಾಮದ ಜೊತೆಗಲ್ಲ, ರಾಮನಾಮ ಸಾಕ್ಷಾತ್ಕಾರಕ್ಕೆ ಇದು ಸಾಧನ ರಾಮನಾಮಕ್ಕೆ ಯಾವ ಸಹಾಯವೂ ಬೇಡ ಆದರೆ, ರಾಮನಾಮದಲ್ಲಿ ನಂಬಿಕೆ ಹೇಳಿಕೊಂಡು ವೈದ್ಯರ ಸಹಾಯವನ್ನೂ ಅಪೇಕ್ಷಿಸುವುದು ಜೊತೆಗೂಡವು

ಧರ್ಮಶಾಸ್ತ್ರಗಳನ್ನು ಬಲ್ಲ ಗೆಳೆಯರೊಬ್ಬರು ರಾಮನಾಮದ ಬಗೆಗೆ ನನ್ನ ವ್ಯಾಖ್ಯಾನವನ್ನು ಓದಿ, ರಾಮನಾಮವು ದೈಹಿಕ ಪರಿವರ್ತನೆಮಾಡಬಲ್ಲ ರಸತಂತ್ರವೆಂದು ಬರೆದಿದಾರೆ ವೀರ್ಯ ಸಂವರ್ಧನವನ್ನು ಸಂಪತ್ತಿನ ಸಂಗ್ರಹಕ್ಕೆ ಹೋಲಿಸಿದಾರೆ ಆದರೆ ಅದು ಸದಾವೃದ್ಧಿಯಾಗುವುದಕ್ಕೂ ಎಂದಿಗೂ ಪತನವಾಗದೆ ಅಧ್ಯಾತ್ಮಶಕ್ತಿ ವಿಕಾಸವಾಗುವುದಕ್ಕೂ ರಾಮನಾಮವೇ ಸಾಧನ

ರಕ್ತವಿಲ್ಲದೆ ದೇಹವಿರದು ಹಾಗೆಯೇ ಆತ್ಮಕ್ಕೆ ನಂಬಿಕೆ ಶ್ರದ್ಧೆ ಎಣೆಯಿಲ್ಲದ ಪವಿತ್ರಶಕ್ತಿ, ಈ ಶಕ್ತಿ ಅಂಗಾಂಗಗಳಿಗೆ ಗಳಿತವಾದ ಶಕ್ತಿಯನ್ನು ಕೂಡಿಸಿಕೊಡಬಲ್ಲದು. ಆದುದರಿಂದಲೇ ರಾಮನಾಮ ಹೃದಯವಿಸ್ತರದಲ್ಲಿ ಸ್ಥಾಪಿತವಾದಾಗ ಮಾನವನಿಗೆ ಪುನರ್ಜನ್ಮಪ್ರಾಪ್ತಿ ಎನ್ನುತ್ತಾರೆ. ಈ ತತ್ವ ಹುಡುಗರು, ಮುದುಕರು, ಹೆಣ್ಣು, ಗಂಡು ಸಕಲರಿಗೂ ಅನ್ವಯಿಸುತ್ತದೆ.

ಇಂಥ ಶ್ರದ್ಧೆ ಪಾಶ್ಚಾತ್ಯರಲ್ಲಿಯೂ ಕಂಡುಬರುತ್ತದೆ ಶ್ರದ್ಧಾ-ಚಿಕಿತ್ಸೆ ಎನ್ನುವುದು ಇದರ ಒಂದು ಅಂಶ ವೆನ್ನಬಹುದು ಅನಂತ

ಕಾಲದಿಂದ ಭಾರತೀಯರಿಗೆ ಈ ಶ್ರದ್ಧೆ ಪ್ರಾಪ್ತವಾಗಿದೆ ಇದಕ್ಕೆ ನೆರವು ಬೇರೆ ಯಾರಿಂದಲೂ ಬರಬೇಕಾಗಿಲ್ಲ

(ಹರಿಜನ ೨೦-೬-೪೭)

## (೩೧) ಪ್ರಾರ್ಥನೋತ್ತರ ಪ್ರವಚನಗಳಿಂದ

ನಿಯಮ—ಶ್ರದ್ಧೆಗಳಿಂದ ಕೂಡಿದ ರಾಮನಾಮವು ಮನುಷ್ಯನಿಗೆ ಸಹಾಯನೀಡಬಲ್ಲದು ಹೊಟ್ಟೆಬಿರಿಯ ತಿಂದು ಹೊಟ್ಟೆನೋವು ಬಂದಾಗ 'ರಾಮ–ರಾಮ' ಎಂದು ವಾಸಿಯಾಗದಿದ್ದರೆ ಗಾಂಧಿಯನ್ನು ಬೈಯ್ಯುವುದು ಉಚಿತವಲ್ಲ ರಾಮನಾಮವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಬೇಕು ರಾಮನಾಮವನ್ನು ಉಚ್ಚರಿಸುತ್ತಾ ದರೋಡೆಯಲ್ಲಿ ನಿರತರಾದವರಿಗೆ, ಮೋಕ್ಷ ಸಿಗದು ಆತ್ಮಶುದ್ಧಿಯನ್ನು ಬಯಸುವ ಮತ್ತು ನಿಯಮ ಶ್ರದ್ಧೆಗಳನ್ನು ಅನುಸರಿಸುವ ವ್ಯಕ್ತಿಗಳಿಗೆ ಮಾತ್ರ ಅದರ ಪ್ರಯೋಜನ

(ಮುಂಬೈ-- ೧೫-೩-೪೫)

ಉರುಳಿಕಾಂಚನದ ಪ್ರಾರ್ಥನಾ ಸಭೆಯೊಂದರಲ್ಲಿ ಮಾತನಾಡುತ್ತಾ, ಯಾವ ಡಾಕ್ಟರೂ, ವೈದ್ಯರೂ ಗುಣಪಡಿಸಲಾರದಂಥ ಶಾರೀರಕ ಮತ್ತು ಮಾನಸಿಕ ವ್ಯಾಧಿಗಳನ್ನು ಗುಣಪಡಿಸುವ ಮಹಾಪರಿಣಾಮಕಾರೀ ಔಷಧ ರಾಮನಾಮವೆಂದು ಗಾಂಧೀಜೀ ನುಡಿದರು ಪ್ರಾರ್ಥನೆ ಮಾಡಿದರೆ ದೇವರು ಖಂಡಿತವಾಗಿಯೂ ಎಲ್ಲ ಬಾಧೆಗಳನ್ನೂ ವ್ಯಥೆಗಳನ್ನೂ ಪರಿಹರಿಸುವನೆಂದೂ ಆದುದರಿಂದ ಎಲ್ಲರೂ ಪೂರ್ಣ ಮನಸ್ಸಿನಿಂದ ರಾಮ-ಧ್ಯಾನದಲ್ಲಿ ಭಾಗವಹಿಸಬೇಕೆಂದೂ ಇದರಿಂದಲೇ ಶಾಂತಿಸುಖಗಳು ಲಭಿಸುವುವೆಂದೂ ತಿಳಿಸಿದರು

ಇದಕ್ಕೆ ಕೆಲವು ನಿಯಮಗಳುಂಟು, ಯುಕ್ತಾಹಾರ, ಕ್ರಮಬದ್ಧ ನಿದ್ರೆ, ವಿಶ್ರಾಂತಿ ಮತ್ತು ಕೋಪರಾಹಿತ್ಯ ಎಲ್ಲಕ್ಕಿಂತ ಮಿಗಿಲಾಗಿ ನಿಸರ್ಗ ನಿಯಮಾನುಸರಣೆ

(ಪೂನಾ--೨೨ ೩-೪೬)

ನಿಸ್ಪೃಹರಾದ ಪುರುಷರೂ ಮಹಿಳೆಯರೂ ತಾವೆಷ್ಟೇ ಪ್ರಯತ್ನ ಮಾಡಿದರೂ ರಾಮಧ್ಯಾನ ಹೃದಯಾಂತರಾಳದಿಂದ ಹೊಮ್ಮಿತೆಂದು ಹೇಳಲಾಗುವುದಿಲ್ಲವೆಂದು ತಮ್ಮಲ್ಲಿ ತಿಳಿಸಿದರೆಂದು ಗಾಂಧೀಜೀ ನುಡಿದರು. ಅದಕ್ಕೆ ತಮ್ಮ ಉತ್ತರ, ಸತತ ಪ್ರಯತ್ನ ಮತ್ತು ಅನಂತ ತಾಳ್ಮೆ ಒಬ್ಬ ಹುಡುಗ ವೈದ್ಯನಾಗಬೇಕಾದರೆ ಕಡೆಯಪಕ್ಷ ಹದಿನಾರು ವರುಷಗಳ ಕ್ರಮವರಿತ ಅಭ್ಯಾಸ ಅವಶ್ಯಕ ಹೃದಯದಲ್ಲಿ ರಾಮನಾಮ ನೆಲೆಗೊಳ್ಳಲು ಇನ್ನೆಷ್ಟು ಕಾಲದ ಅಭ್ಯಾಸಬೇಕು?

(ನವದೆಹಲಿ, ೨೮-೪-೪೬)

ರಾಮಧ್ಯಾನ ಮಾಡಿ ಹೃದಯ ಶುದ್ಧಿ ಮಾಡಿಕೊಂಡವನು ಹೊರಗಿನ ಅಶುಚಿಯನ್ನು ಸಹಿಸನು ಲಕ್ಷಾಂತರ ಜನ ಹೃತ್ಪೂರ್ವಕವಾಗಿ ರಾಮಧ್ಯಾನ ಮಾಡಿದರೆ ಸಮಾಜವ್ಯಾಧಿ ಎನಿಸಿದ ಕಲಹಗಳು ಇಲ್ಲವಾದಾವು ಭೂಲೋಕ ಸ್ವರ್ಗವಾದೀತು (ನವದೆಹಲಿ, ೨೧-೪೪೬)

ರಾಮಧ್ಯಾನದಿಂದ ಕೂಡಿದ ನಿಸರ್ಗ ಚಿಕಿತ್ಸೆ ಎಲ್ಲ ದೈಹಿಕ ಮಾನಸಿಕ ವ್ಯಾಧಿಗಳನ್ನೂ ಗುಣಪಡಿಸಬಲ್ಲದೆಂದು ಗಾಂಧೀಜೀ ನುಡಿದರು ಕೆಲವು ಮಂದಿ ಮೂಢನಂಬಿಕೆಯಿಂದ ರಾಮನಾಮವನ್ನು ತಮ್ಮ ಉತ್ತರೀಯದ ಮೇಲೆ ಬರೆದು ಎದೆಯ ಮೇಲೆ ಹೊದ್ದುಕೊಂಡಿರುವ ಅಂಶವೊಂದನ್ನೂ ಮತ್ತೆ ಕೆಲವರು ರಾಮನಾಮವನ್ನು ಸಣ್ಣ ಅಕ್ಷರಗಳಲ್ಲಿ ಲಕ್ಷಾಂತರ ಸಲ ಬರೆದು ಆ ಕಾಗದವನ್ನು ಚೂರು ಚೂರು ಮಾಡಿ ನುಂಗಿ ರಾಮನಾಮ ತಮ್ಮ ಸ್ವಾಧೀನವಾಯಿತೆಂದು ಹೇಳಿಕೊಂಡ ಪ್ರಸಂಗವನ್ನೂ ಒಬ್ಬ ವಾಚಕ ಅವರ ಗಮನಕ್ಕೆ ತಂದಿದ್ದ ಅಮರ ರಾಮನಾಮವೂ ನೂರಾರು ಮೂಢ ನಂಬಿಕೆಗಳಿಂದ ಕೂಡಿರುವ ಈ ದೇಶದಲ್ಲಿ ಒಂದು ಮೂಢನಂಬಿಕೆಯಂತಾಗುವುದೆಂದು ಮತ್ತೊಬ್ಬ ಬರೆದಿದ್ದ ಇಂಥ ವಿಮರ್ಶೆಗೆ ತಮ್ಮ ಉತ್ತರವೇನೂ ಇಲ್ಲವೆಂದು ಗಾಂಧೀಜೀ ನುಡಿದರು. ಸತ್ಯದ ದುರುಪಯೋಗವಾದರೇನಾಯಿತು? ತಾವು ಅರಿತ ಸತ್ಯವು ದುರುಪಯೋಗವಾಗುವುದೆಂಬ ಕಾರಣದಿಂದಾಗಲೀ ಅಪಾರ್ಥಕ್ಕೊಳಗಾಗವು

ದೆಂಬ ಕಾರಣದಿಂದಾಗಲೀ ಅದನ್ನು ಪ್ರಚುರಪಡಿಸದಿರಲು ಸಾಧ್ಯವಿಲ್ಲ ವೆಂದೂ ಸ್ಪಷ್ಟಪಡಿಸಿದರು "ಈ ಜಗತ್ತಿನಲ್ಲಿ ಯಾರೂ ಪರಮಸತ್ಯ ತಿಳಿಯರು ಇದು ದೇವರೊಬ್ಬನಿಗೇ ಸಾಧ್ಯ ನಮಗೆಲ್ಲ ತಿಳಿದಿರುವುದು ಸಾಪೇಕ್ಷ ಸತ್ಯ, ಆದುದರಿಂದ ನಮಗೆ ಅರಿವಾದ ಸತ್ಯವನ್ನೇ ನಾವು ಅನುಸರಿಸಬೇಕು ಇಂಥ ಸತ್ಯ ಮಾರ್ಗಾನುಸರಣೆ ಯಾರನ್ನೂ ಅಪಮಾರ್ಗಕ್ಕೊಯ್ಯಲಾರದು"
(ನವದೆಹಲಿ. ೨೪-೫-೪೬)

ಇಂದಿನ ಪ್ರವಚನದಲ್ಲಿ ರಾಮನಾಮ ಪರನೆ ಹೇಗೆ ಸತ್ವಯುತವಾಗ ಬಲ್ಲದೆಂಬುದನ್ನು ಗಾಂಧೀಜೀ ವಿವರಿಸಿದರು ಪ್ರಪ್ರಥಮವಾಗಿ ಅದು ಹೃದಯದಿಂದಲೇ ಚಿಮ್ಮಬೇಕು ಇದರ ಅರ್ಥವೇನು? ಮಾನಸಿಕ ಮತ್ತು ಆತ್ಮದ ವ್ಯಾಧಿಗಳಿಗಿಂತ ನೂರ್ಮಡಿ ಕಮ್ಮಿಯಾದ ದೈಹಿಕ ವ್ಯಾಧಿಗಳನ್ನು ಗುಣಪಡಿಸಿಕೊಳ್ಳಲು ಜನರು ಜಗತ್ತಿನ ಮೂಲೆ ಮೂಲೆಗೂ ಹೋಗುವರು "ಮಾನವ ದೇಹ ಕ್ಷಣಿಕ, ನಶ್ವರ ಆದರೂ ಅಂತರ್ಯಾಮಿಯಾದ ಆತ್ಮ ವನ್ನು ಮರೆತು ಈ ದೇಹವನ್ನು ಎಷ್ಟು ಮಹತ್ತರ ಮಾಡುತ್ತಾರೆ!" ರಾಮ ನಾಮದಲ್ಲಿ ನಂಬಿಕೆ ಇರುವ ಮನುಷ್ಯ ದೇಹವನ್ನು ಅತಿಯಾಗಿ ಎಣಿಸನು ಭಗವಂತನ ಸೇವೆಗೆ ಅದೊಂದು ಯಂತ್ರ ರಾಮನಾಮವೇ ಪರಮೋತ್ಕೃಷ್ಟ ಸಾಧನ"

ಹೃದಯದಲ್ಲಿ ರಾಮನನ್ನು ಪ್ರತಿಷ್ಠಾಪನೆ ಮಾಡುವದಕ್ಕೆ ಮಹಾ ತಾಳ್ಮೆ ಬೇಕು ಇದಕ್ಕೆ ಯುಗ ಯುಗಾಂತರಗಳೂ ಬೇಕಾದೀತು ಆದರೂ ಪ್ರಯತ್ನ ಯೋಗ್ಯವಾದುದು. ದೈವ ಕೃಪೆಯಿಂದಲೇ ಯಶ ಲಭಿಸಬೇಕು

ಅಂತರಂಗ ಬಹಿರಂಗಗಳಲ್ಲಿ ಸತ್ಯಾಚರಣೆ, ಪ್ರಾಮಾಣಿಕತೆ, ಶುದ್ಧಿ ಗಳನ್ನು ಹೊಂದಿದ ಹೊರತು ಹೃತ್ಪೂರ್ವಕವಾದ ರಾಮನಾಮವೆನಿಸ ಲಾರದು ಪ್ರತಿ ದಿನವೂ ಸಾಯಂಕಾಲದ ಪ್ರಾರ್ಥನೆಯಲ್ಲಿ ಸ್ಥಿತಪ್ರಜ್ಞನ ಲಕ್ಷಣಗಳನ್ನು ತಿಳಿಸುವ ಶ್ಲೋಕಗಳನ್ನು ಹೇಳುವ ವಾಡಿಕೆ ಇದೆ. ಇಂದ್ರಿಯ ನಿಗ್ರಹ ಮಾಡಿ, ಆಹಾರ ಪಾನಗಳಲ್ಲಿ ಸಂಯಮದಿಂದಿದ್ದು ಯುಕ್ತ ವಿಹಾರಗಳಲ್ಲಿ ತೊಡಗಿ, ಬಾಳನ್ನು ಸೇವೆಗಾಗಿ ಮುಡುಪಿಟ್ಟರೆ, ಎಲ್ಲರೂ ಸ್ಥಿತಪ್ರಜ್ಞರೇ ಆದಾರು ಮನಸ್ಸಿನ ಮೇಲೆ ಹತೋಟಿ ಇಲ್ಲದೆ ಕಿಟಕಿ

ಬಾಗಿಲುಗಳನ್ನೆಲ್ಲ ಮುಚ್ಚಿದ ಕೊಠಡಿಯಲ್ಲಿ ಮಲಗಿಕೊಂಡು ಮಲಿನ ವಾಯುವನ್ನು ಸೇವಿಸಿ, ಕೊಳಕು ನೀರನ್ನು ಕುಡಿಯಲು ಹಿಂದು ಮುಂದೆ ನೋಡದೆ, ಇರುವವರಿಗೆ ರಾಮನಾಮ ಸಿದ್ಧಿಸಲಾರದು.

ಸಾಕಷ್ಟು ಶುದ್ಧಿ ಲಭಿಸಲಿಲ್ಲವೆಂಬ ಕಾರಣದಿಂದ ರಾಮನಾಮ ಸ್ಮರಣೆಯನ್ನೇ ಬಿಡಬೇಕಾಗಿಲ್ಲ ಪರನೆಯೂ ಶುದ್ಧಿಗೆ ಒಂದು ಅಂಗ ಹೃತ್ಪೂರ್ವಕವಾಗಿ ನಾಮ ಸ್ಮರಣೆ ಮಾಡುವವನಿಗೆ ಆತ್ಮನಿಗ್ರಹ ಸುಲಭ ಆರೋಗ್ಯನಿಯಮಗಳನ್ನು ಅನುಸರಿಸುವುದು ಅವನಿಗೆ ಎರಡನೆಯ ಸ್ವಭಾವವಾಗುತ್ತದೆ ಅವನ ಬಾಳು ಸುಗಮ ಅವನು ಯಾರನ್ನೂ ಹಿಂಸಿಸನು ಇತರರ ದುಃಖ ನಿವಾರಣೆಗಾಗಿ ತಾನೇ ದುಃಖಕ್ಕೊಳಗಾದರೂ ಅಖಂಡ ಆನಂದದಿಂದಿರುತ್ತಾನೆ" ಆದುದರಿಂದ ಎಚ್ಚರಿರುವಾಗ ಅನವರತ ರಾಮ ಸ್ಮರಣೆ ಸಾಗಬೇಕು ನಿದ್ರಿಸುವಾಗಲೂ, ಭಗವಂತನ ಕೃಪೆಯಿಂದ, ಅದು ಶರೀರ, ಮನಸ್ಸು, ಆತ್ಮ, ಇವುಗಳಲ್ಲಿ ಸ್ಥಿರವಾಗುತ್ತದೆ

(ನವದೆಹಲಿ. ೨೫-೫-೪೬)

ಇಂದಿನ ಪ್ರಾರ್ಥನೋತ್ತರ ಪ್ರವಚನದಲ್ಲಿ ಸಭಿಕರನ್ನು ಕುರಿತು 'ತಮ್ಮೊಡನೆ ರಾಮಧ್ಯಾನ ಮಾಡುವುದಕ್ಕೆ ಬರುತ್ತಿರುವಿರೋ ಅಥವಾ ರಾಮಧ್ಯಾನ ಹೇಗೆ ಮಾಡಬೇಕೆಂಬುದನ್ನು ಕಲಿಯಲು ಬರುತ್ತಿರುವಿರೋ" ಎಂದು ಪ್ರಶ್ನಿಸಿದರು ರಾಮಧ್ಯಾನವು ಹೇಳಿಕೊಟ್ಟು ಕಲಿಯುವಂಥದಲ್ಲ ಮಾತಿಗಿಂತ ಮೌನ ಹೆಚ್ಚು ಸತ್ವಯುತವೆಂಬುದಾಗಿ ತಾವು ಭಾವಿಸಿರುವುದಾಗಿ ಅವರು ತಿಳಿಸಿದರು ಒಂದು ಸಣ್ಣ ಭಾವ ಜಗತ್ತನ್ನೆಲ್ಲ ಆವರಿಸಬಲ್ಲದು. ಅದು ಎಂದಿಗೂ ನಷ್ಟವಾಗಲಾರದು ಒಂದು ಭಾವವನ್ನು ಮಾತು ಅಥವಾ ಕ್ರಿಯೆಯಿಂದ ವ್ಯಕ್ತಪಡಿಸಲೆತ್ನಿಸುವುದು ಅದನ್ನು ಸಂಕುಚಿತಗೊಳಿಸಿದಂತೆ. ಈ ಜಗತ್ತಿನಲ್ಲಿ ಯಾರೂ ಒಂದು ಭಾವವನ್ನು ಮಾತು ಅಥವಾ ಕ್ರಿಯೆಯ ಮೂಲಕ ಪೂರ್ಣವಾಗಿ ವ್ಯಕ್ತಗೊಳಿಸಲಾಗದು

ಹೀಗೆ ಹೇಳಿದ ಮಾತ್ರಕ್ಕೆ ಎಲ್ಲರೂ ಎಂದೆಂದಿಗೂ ಮೌನಿಗಳಾಗಿರಬೇಕೆಂದು ತಮ್ಮ ಅಭಿಪ್ರಾಯವಲ್ಲವೆಂದು ಗಾಂಧೀಜೀ ಸ್ಪಷ್ಟಪಡಿಸಿದರು. ಸಿದ್ಧಾಂತದ ದೃಷ್ಟಿಯಿಂದ ಅದು ಸಾಧ್ಯವಾಗಬಹುದು. ಆದರೆ,

ಕಾರ್ಯತಃ ಮೌನ ಚಿಂತನೆಯನ್ನು ಪ್ರಭಾವಯುತವನ್ನಾಗಿ ಮಾಡುವುದು ಕಷ್ಟ. ಉದಾಹರಣೆಗೆ, ತಾವೇ ತಾವು ಅಪೇಕ್ಷಿಸುವ ಸ್ಥಿತಿಗೆ ಭಾವದ ಹಿಡಿತ ವನ್ನು ಸಾಧಿಸಿಲ್ಲವೆಂದೂ ತಮ್ಮ ಮನಸ್ಸಿನಿಂದಅನಾವಶ್ಯಕವಾದ ಭಾವಗಳನ್ನು ದೂಡಲು ಸಾಧ್ಯವಾಗಿಲ್ಲವೆಂದೂ ಅದಕ್ಕೆ ಅಗಾಧ ತಾಳ್ಮೆಯೂ ತಪಸೂ ಆವಶ್ಯಕವೆಂದು ಹೇಳಿದರು.

ಮೊನ್ನೆ ತಾವು ರಾಮನಾಮದ ಮಹಿಮೆಯನ್ನು ಕುರಿತು ಹೇಳಿದುದು ರೂಪಕವಲ್ಲವೆಂದೂ ಅದು ನಿಜವಾದ ಭಾವವೆಂದೂ ತಿಳಿಸಿದರು. ಇದರ ಅನುಭವ ಪರಿಶುದ್ಧ ಹೃದಯ ಉಳ್ಳವರಿಗೆ ಮಾತ್ರ ಆದೀತು. ತಾವೇ ಆ ಸ್ಥಿತಿ ಮುಟ್ಟಿಲ್ಲವೆಂದೂ ಅದಕ್ಕಾಗಿ ಶ್ರಮಿಸುತ್ತಿರುವುದಾಗಿಯೂ, ಮಾನಸಿಕವಾಗಿ ಕಲ್ಪಿಸಿಕೊಂಡರೂ, ಪೂರ್ಣವಾಗಿ ಕಾರ್ಯಗತ ಮಾಡಲು ಇನ್ನೂ ಸಾಧ್ಯವಾಗಿಲ್ಲವೆಂದೂ ತಿಳಿಸಿದರು. ಆ ಸ್ಥಿತಿ ಬಂದಾಗ ರಾಮನಾಮೋಚ್ಚಾರಣೆಯೂ ಅನಾವಶ್ಯಕವಾದೀತು. ರಾಮನಾಮ ಪಠನೆಯೂ ಒಂದು ಅಡಚಣೆ ಎಂಬ ಭಾವ ಬರುವ ಕಾಲವನ್ನು ನಾ ನಿರೀಕ್ಷಿಸುತ್ತಿದೇನೆ. ರಾಮನು ಶಬ್ದಾತೀತನೆಂಬ ಭಾವನನಗೆ ಮನವರಿಕೆಯಾದಾಗ ರಾಮನಾಮ ಪಠನೆಯೂ ನನಗೆ ಬೇಡ

ಎಲ್ಲರೂ ಪ್ರಾರ್ಥನಾ ಸಭೆ ಬಿಟ್ಟು ಹೋದ ಮೇಲೆ ಅವರವರ ಗೃಹಗಳಲ್ಲಿ ಪ್ರತ್ಯೇಕವಾಗಿಯೂ ಸಾಮೂಹಿಕವಾಗಿಯೂ ರಾಮನಾಮ ಪಠಿಸುವರೆಂದು ತಾವು ನಂಬಿರುವುದಾಗಿಯೂ, ಸಾಮೂಹಿಕ ಪ್ರಾರ್ಥನೆಯಿಂದ ಯಾವುದೋ ಅಗೋಚರ ಶಕ್ತಿ ಉತ್ಪನ್ನವಾಗಿ ಎಲ್ಲರನ್ನೂ ಗುರಿಗೊಯ್ಯುವ ಮಾರ್ಗವುಳ್ಳದೆಂದೂ ತಿಳಿಸಿದರು. (ನವದೆಹಲಿ. ೨೬-೫-೪೬)

ಇಂದಿನ ಪ್ರಾರ್ಥನಾ ಸಭೆಯಲ್ಲಿ ರಾಮನಾಮದ ಚಿಕಿತ್ಸಕ ಶಕ್ತಿಯನ್ನು ಕುರಿತು ಗಾಂಧೀಜೀ ಈ ರೀತಿ ಹೇಳಿದರು. "ರಾಮನಾಮವು ಯಾರೋ ಕೆಲವರಿಗಲ್ಲ. ಅದು ಸರ್ವರ ಸೊತ್ತು. ರಾಮನಾಮ ಪಠಿಸುವವನಿಗೆ ಅಖಂಡ ನಿಧಿ ದೊರಕುತ್ತದೆ. ಆ ನಿಧಿ ಉಪಯೋಗಿಸಿದಷ್ಟೂ ಹೆಚ್ಚುತ್ತದೆ; ಅನಂತವಾಗುತ್ತದೆ. ಈಶಾವಾಸ್ಯ ಉಪನಿಷತ್ತಿನಲ್ಲಿ ಹೇಳ

ದಂತೆ "ಪೂರ್ಣದಿಂದ ಪೂರ್ಣವನ್ನು ತೆಗೆದರೂ ಪೂರ್ಣವೇ ಉಳಿಯುತ್ತದೆ" ಅದು ಸರ್ವ ವ್ಯಾಧಿಗಳಿಗೂ ನಿಷ್ಫಲವಾಗದ ಮದ್ದು

"ಆದರೆ ಅದು ಹೃದಯಾಂತರಾಳದಿಂದ ಹೊಮ್ಮಬೇಕೆಂಬುದೇ ಪ್ರಧಾನವಾದ ಅಂಶ. ದುಷ್ಟ ಆಲೋಚನೆಗಳು ನಿಮ್ಮನ್ನು ಆವರಿಸುತ್ತದೆಯೆ? ಕಾಮ ಅಥವಾ ದುರಾಶೆ ನಿಮ್ಮನ್ನು ಹಿಂಸೆ ಪಡಿಸೀತೆ? ಇವುಗಳಿಗೆ ರಾಮನಾಮಕ್ಕಿಂತ ಹಿರಿಯ ಮದ್ದಿಲ್ಲ," ಇದನ್ನು ಒಂದು ದೃಷ್ಟಾಂತದಿಂದ ಹೀಗೆ ವಿವರಿಸಿದರು "ಸುಲಭವೂ, ಅಪ್ರಾಮಾಣಿಕವೂ ಆದ ವಿಧಾನದಿಂದ ದೊಡ್ಡ ಸಂಪತ್ತನ್ನು ಗಳಿಸಬೇಕೆಂಬ ಆಸೆ ನಿಮ್ಮಲ್ಲಿ ಹುಟ್ಟಿತೆನ್ನೋಣ ನಿಮಗೆ ರಾಮನಾಮದಲ್ಲಿ ನಂಬಿಕೆ ಇದ್ದರೆ ಆಗ ನೀವು ಹೀಗೆ ಹೇಳುವಿರಿ· "ಯಾವ ಆಸ್ತಿಯನ್ನು ನನ್ನ ಹೆಂಡತಿ ಮಕ್ಕಳು ದುಂದು ವೆಚ್ಚ ಮಾಡಲು ಸಾಧ್ಯವೋ ಅಂಥದನ್ನು ನಾನೇಕೆ ಕೂಡಿಡಲಿ? ಒಳ್ಳೆಯ ಗುಣ, ವಿದ್ಯಾಭ್ಯಾಸ, ಇವುಗಳಿಂದ ಕೂಡಿದವರಾಗಿ ಪ್ರಾಮಾಣಿಕ ವಿಧಾನದಿಂದಲೂ, ದೈಹಿಕ ಶ್ರಮದಿಂದಲೂ ತಮ್ಮ ಜೀವನ ಸಾಗಿಸುವಂಥ ಆಸ್ತಿಯನ್ನು ಅವರಿಗೆ ಏಕೆ ಬಿಡಬಾರದು? ನಿರಂತರ ರಾಮನಾಮ ಪಠನೆ ನಿಮ್ಮ ಮೋಹವನ್ನೂ ಭ್ರಮೆಯನ್ನೂ ದೂರ ಮಾಡುತ್ತದೆ ಎಲ್ಲ ಬಂಧನಗಳಿಂದಲೂ ದೂರ ಮಾಡುವ ನಾಮಪಠನೆಯ ಸಂಪತ್ತನ್ನು ಬಿಟ್ಟು ಅವರಿಗೆ ಐಹಿಕ ಸಂಪತ್ತನ್ನೂ ಕೂಡಿಡಬೇಕೆಂದು ಯೋಚಿಸಿದುದು ತಪ್ಪೆಂದು ನಿಮಗೇ ಅರಿವಾಗುತ್ತದೆ ಆ ಅರಿವಿನ ಆನಂದದಿಂದ ಹೆಂಡತಿ ಮಕ್ಕಳನ್ನು ಕರೆದು 'ನಿಮಗಾಗಿ ಒಂದು ಅಮೋಘ ಸಂಪತ್ತನ್ನು ಅರಿಸಿ ತಂದಿರುವೆ ಎನ್ನುವಿರಿ' ಅವರು ನಂಬಿಕೆಇಲ್ಲದೆ, 'ಎಲ್ಲಿ ತೋರಿಸಿ, ನೋಡೋಣ' ಎನ್ನುವರು ಆಗ ನಿಮ್ಮ ಉತ್ತರ 'ಅದು ಎಲ್ಲ ವಿಧಿಗಳನ್ನೂ ಮೀರಿದ ನಾಮನಿಧಿ ಅದು ಎಲ್ಲ ಬಯಕೆಗಳನ್ನೂ ಹಿಂಗಿಸಬಲ್ಲದು ಅದು ನನ್ನ ಹೃದಯದಲ್ಲಿದೆ'

(ಮಸ್ಸೋರಿ. ೨-೬-೪೬)

ದಿನವೂ ಪ್ರಾತಃಕಾಲವೂ ಸಂಜೆಯೂ ಎಲ್ಲರೂ ತಮ್ಮ ತಮ್ಮ ಗೃಹಗಳಲ್ಲಿ ತಪ್ಪದೆ ಪ್ರಾರ್ಥನೆ ಮಾಡುವರೆಂದು ತಾವು ನಂಬಿರುವುದಾಗಿ ಈ ಸಂಜೆಯ ಭಾಷಣದಲ್ಲಿ ಗಾಂಧೀಜೀ ತಿಳಿಸಿದರು ಅವರು ಅಪೇಕ್ಷಿಸದಿದ್ದರೆ ಸಂಸ್ಕೃತ ಶ್ಲೋಕಗಳನ್ನು ಕಲಿಯಬೇಕಾದ ಆವಶ್ಯಕತೆ ಇಲ್ಲ ಸಕಲ

ಪ್ರಾರ್ಥನೆಯ ಸಾರ ಹೃದಯದಲ್ಲಿ ಭಗವಂತನನ್ನು ಪ್ರತಿಷ್ಠಾಪಿಸುವುದು ಈ ಕಾರ್ಯ ನಡೆದರೆ ಸಮಾಜವೂ, ಲೋಕವೂ ನೆಮ್ಮದಿಯಾಗಿದ್ದೀತು
(ಮುಸ್ಸೋರಿ. ೫-೬-೪೬)

ರಾಮನಾಮ ಜಪಿಸುತ್ತಾ ಕೇವಲ ರಾವಣನಂತೆ ವ್ಯವಹರಿಸುವುದು ಶುದ್ಧ ವ್ಯರ್ಥ, ಮಹಾ ಬೂಟಾಟಿಕೆ–ಕಾಪಟ್ಯ ತಮ್ಮನ್ನೂ ಲೋಕವನ್ನೂ ಮೋಸಗೊಳಿಸಿದರೂ ಸರ್ವಶಕ್ತನನ್ನ ಮೋಸಗೊಳಿಸಲು ಸಾಧ್ಯವಿಲ್ಲ
(ನವದೆಹಲಿ. ೧೮-೬ ೪೬)

ಪ್ರಾರ್ಥನಾ ಸಭೆಯಲ್ಲಿ ಹಾಡಿದ ಮೀರಾಬಾಯಿಯ ಗೀತೆಯ ವಿಷಯವಾಗಿ ವ್ಯಾಖ್ಯಾನ ಮಾಡುತ್ತಾ, ಭಕ್ತ ಭಗವಂತನ ನಾಮಾಮೃತವನ್ನು ಚೆನ್ನಾಗಿ ಪಾನಮಾಡಲು ಅಪೇಕ್ಷಿಸುತ್ತಾನೆಂದು ನುಡಿದರು ವಿಹಿತ ಪ್ರಮಾಣದಲ್ಲಿ ತೆಗೆದುಕೊಂಡ ಅನ್ನಪಾನಾದಿಗಳು ತೃಪ್ತಿ ನೀಡುತ್ತವೆ ಮಿತಿಮೀರಿದರೆ ಅನಾರೋಗ್ಯ ಪ್ರಾಪ್ತವಾಗುತ್ತದೆ ಆದರೆ ಭಗವನ್ನಾಮಾಮೃತಕ್ಕೆ ಅಂಥ ಭಯವೇ ಇಲ್ಲ ಅದನ್ನು ಸವಿದಷ್ಟೂ ಅದರ ಬಯಕೆ ಹೆಚ್ಚುತ್ತದೆ ಆದರೆ ಅದು ಹೃದಯದಲ್ಲಿ ಚೆನ್ನಾಗಿ ಇಂಗಬೇಕು ಆಗ, ಭ್ರಮೆ, ಮೋಹ, ಆಸಕ್ತಿ, ಕಾಮ, ಅಸೂಯೆ, ಎಲ್ಲವೂ ನಮ್ಮಿಂದ ದೂರವಾಗುತ್ತವೆ ತಾಳ್ಮೆಯಿಂದ ಪ್ರಯತ್ನಿಸಿದವರಿಗೆ ಮಾತ್ರ ಯಶ ಲಭಿಸಿಯೇ ಲಭಿಸುತ್ತದೆ (ನವದೆಹಲಿ ೧೮-೬-೪೬)

ಪ್ರಾರ್ಥನಾಪರನಾದ ವ್ಯಕ್ತಿಗೆ ನಿರಾಶೆ ಎಂಬುದೇ ಇಲ್ಲ. ಏಕೆಂದರೆ, ಸರ್ವನಿಯೋಜಕನಾದ ಭಗವಂತನ ವಶದಲ್ಲಿರುವ ಕಾಲವು ಯಥಾರೀತಿಯಲ್ಲಿ ಎಲ್ಲವನ್ನೂ ಮಾಡುತ್ತದೆಂಬುದನ್ನು ಅವನು ನಂಬಿರುತ್ತಾನೆ ಆದುದರಿಂದಲೇ ತಾಳ್ಮೆಯಿಂದಲೂ, ಶ್ರದ್ಧೆಯಿಂದಲೂ ಅದನ್ನು ನಿರೀಕ್ಷಿಸುತ್ತಾನೆ

ಗಜೇಂದ್ರ ಮೋಕ್ಷದ ಕಥೆಯನ್ನು ದೃಷ್ಟಾಂತವಾಗಿ ಕೊಟ್ಟು-ಗಜರಾಜ ನೀರು ಕುಡಿಯಲು ಹೋದಾಗ ಮೊಸಳೆ ಕಾಲು ಹಿಡಿದು ಎಳೆಯ ತೊಡಗಿತೆಂದೂ ಆ ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಷ್ಟೂ ಸಾಧ್ಯವಿಲ್ಲದೆ ಹೋಯಿತೆಂದೂ ಕೊನೆಗೆ ತನ್ನ ಶಕ್ತಿ ಏನೂ ಪ್ರಯೋಜನವಿಲ್ಲವೆಂದು ಗೋಚರವಾದಾಗ ಭಗವಂತನ ಕೃಪೆಯನ್ನು ಬೇಡಿ, ಅದನ್ನೇ ನಂಬಿತೆಂದೂ

ದ್ವಾರಕಾನಾಥ ನಿಮಿಷಮಾತ್ರದಲ್ಲಿ ಪ್ರತ್ಯಕ್ಷವಾಗಿ ರಕ್ಷಣೆ ಮಾಡಿದನೆಂದೂ ಗಾಂಧೀಜೀ ನುಡಿದರು

"ಈ ಕಥೆಯ ನೀತಿ" ಹೀಗೆಂದು ವಿವರಿಸಿದರು ಗಾಂಧೀಜೀ "ದೇವರು ಆಪತ್ತಿನ ಸಮಯದಲ್ಲಿ ಭಕ್ತನ ಕೈಬಿಡದೆ ಸಲಹುವನು ಆದರೆ ಚೈತನ್ಯ ಮತ್ತು ಅನನ್ಯ ನಂಬಿಕೆ ಆವಶ್ಯಕ ಈ ಶ್ರದ್ಧೆಯ ಲಕ್ಷಣ ಹೀಗೆ, ನಮ್ಮ ಕರ್ತವ್ಯವನ್ನೆಲ್ಲ ಮಾಡಿ ಕೊನೆಯದಾಗಿ ದೇವರಿಂದ ಬರುವ ಸುಖವೋ, ಅದೃಷ್ಟವೋ, ದುರದೃಷ್ಟವೋ, ಆನಂದದಿಂದ ಸ್ವೀಕರಿಸಬೇಕು ಜನಕ ಮಹಾರಾಜ ಮಿಥಿಲಾ ನಗರ ಅಗ್ನಿಗಾಹುತಿಯಾದುದನ್ನು ಕೇಳಿ ಅನಾಸಕ್ತನಾಗಿ ನುಡಿದಂಥ ಅನಾಸಕ್ತಿಯೋಗವನ್ನು ಹೊಂದಿರಬೇಕು

"ಅವನು ಚಿತ್ತಸ್ಥೈರ್ಯದಿಂದಲೂ ಭಗವದರ್ಪಣ ಬುದ್ಧಿಯಿಂದಲೂ ಸದಾ ಎಚ್ಚರಿದ್ದು ತನ್ನ ಕರ್ತವ್ಯ ಪಾಲನೆಯಲ್ಲಿ ಸ್ವಲ್ಪವೂ ಆಲಸ್ಯಮಾಡದೆ, ತಾನು ಮಾಡಬೇಕಾದುದನ್ನೆಲ್ಲ ತಪ್ಪದೆ ಮಾಡಿ ಉಳಿದುದನ್ನು ಭಗವಂತನ ಇಚ್ಛೆಗೆ ಬಿಡುವನು" ಎಂದರು, ಗಾಂಧೀಜೀ.

"ಆದುದರಿಂದ, ಮೊದಲನೆಯದಾಗಿ ಭಗವಂತನ ಕೃಪೆಯಿಂದ ಎಲ್ಲ ಅಪಾಯವೂ ಪಾರಾಗುತ್ತದೆ. ಒಂದು ವೇಳೆ ಅಪಾಯ ತಟ್ಟಿದರೂ ಭಕ್ತ ತನ್ನ ದುಃಸ್ಥಿತಿಗೆ ಗೋಳಾಡದೆ, ಭಗವಂತನನ್ನು ಹಳಿಯದೆ ಸುಖದುಃಖಗಳನ್ನೆಲ್ಲ ಅವನಿಗೇ ಸಮರ್ಪಿಸಿ ಆನಂದಮಯನಾಗಿ ಶಾಂತಚಿತ್ತನಾಗಿರುವನು.

(ನವದೆಹಲಿ, ೨೦-೬-೪೬)

ಇಂದಿನ ಪ್ರಾರ್ಥನಾ ಸಭೆಯಲ್ಲಿ ರಾಮನಾಮದ ಅರ್ಥವನು ವಿವರಿಸಿದರು ಗಾಂಧೀಜೀ "ದೇವರು ವ್ಯಕ್ತಿಯಲ್ಲ, ಅವನು ಸರ್ವವ್ಯಾಪೀ ಸರ್ವಶಕ್ತ ಚೈತನ್ಯ ಯಾರು ತಮ್ಮ ಹೃದಯದಲ್ಲಿ ದೇವರನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವರೋ ಅವರು ವಿದ್ಯುಚ್ಛಕ್ತಿ ಮೊದಲಾದ ಸೂಕ್ಷ್ಮ ಶಕ್ತಿಗಳಿಗಿಂತಲೂ ಅತಿಸೂಕ್ಷ್ಮವೂ ಮಹತ್ತರವೂ ಆದ ಶಕ್ತಿಯನ್ನು ಹೊಂದುವರು."

"ನಾನೊಂದು ಮೂಢ ನಂಬಿಕೆಯನ್ನು ಹರಡುತ್ತಿದ್ದೇನೆಯೋ" ಎಂಬ ಪ್ರಶ್ನೆ ಹಾಕಿಕೊಂಡು, "ಇಲ್ಲ" ಎಂದು ಉತ್ತರವಿತ್ತು ಮುಂದುವರಿಸಿದರು "ಬರೀ ರಾಮನಾಮಪಠನೆಯಲ್ಲಿ ಯಾವ ಅದ್ಭುತ ಗುಣವೂ ಇಲ್ಲ ಅದೊಂದು ಇಂದ್ರಜಾಲವಲ್ಲ ಅದು ಯಾವುದರ ಪ್ರತೀಕವೋ ಅದರ ಪೂರ್ಣಾರ್ಥದಲ್ಲಿ ತೆಗೆದುಕೊಳ್ಳಬೇಕು ಅನಂತ ಶೋಧನೆಯ ಫಲವಾಗಿ ಲಭಿಸುವ ಗಣಿತ ಸೂತ್ರವೊಂದರಂತೆ ಅದು ರಾಮನಾಮ ಪಠಿಸುವವರು ಅದಕ್ಕೆ ಸಂಬಂಧಿಸಿದ ಎಲ್ಲ ನಿಯಮಗಳನ್ನೂ ಅನುಸರಿಸಬೇಕು ದೇವರ ನಾಮ ಸ್ಮರಿಸಲು ಭಗವಂತನಿಗೆ ಶರಣ ಜೀವನವನ್ನೇ ನಡೆಸಬೇಕು "

(ಪೂನಾ. ೨-೭-೪೬)

ಈ ಸಂಜೆಯ ಪ್ರಾರ್ಥನಾ ಸಭೆಯಲ್ಲಿ ಗಾಂಧೀಜೀ ತಾವು ತಂಗಿದ್ದ ಹರಿಜನ ಪ್ರದೇಶದ ಕೊಳಕು—ಕಶ್ಮಲ ಸನ್ನಿವೇಶವನ್ನು ಕುರಿತು ಹೇಳುತ್ತಾ 'ನೈರ್ಮಲ್ಯ ಶಾಖೆಯವರೂ, ಪುರಸಭೆಯ ಮರಾಮತ್ ಇಲಾಖೆಯವರೂ ಇದನ್ನೆಲ್ಲ ಸರಿಪಡಿಸದೆ ಹೇಗೆ ಸಹಿಸಿಕೊಂಡಿದ್ದಾರೆಂದು ಪ್ರಶ್ನಿಸಿದರು ಅವರು ಆ ಕೊಳಚೆ ಪ್ರದೇಶಗಳನ್ನು ನಿರ್ಮಲಗೊಳಿಸ ದಿದ್ದರೆ, ಆರೋಗ್ಯಕರವೂ ಶುದ್ಧವೂ ಆಗಿ ಮಾಡದಿದ್ದರೆ, ತಾವು ಅಲ್ಲಿ ಹೋಗಿ ತಂಗಿ ಫಲವೇನು ? ಎಂದರು

ಇವೆಲ್ಲಕ್ಕೂ ಪ್ರಾರ್ಥನೆಗೂ ಸಂಬಂಧವೇನು ? ಬಹಿರಂಗಶುದ್ಧಿಯ ನಿಯಮಗಳನ್ನು ಅನುಸರಿಸದವರು ಅಂತರಂಗಶುದ್ಧಿಗಾಗಿ ಪ್ರಾರ್ಥಿಸ ಲಾರರು. ಕೇವಲ ಜಡ ಕುತೂಹಲಕ್ಕಾಗಿ ಪ್ರಾರ್ಥನಾ ಸಭೆಗೆ ಬಂದರೆ ಅದೊಂದು ಪಾಪವೆನಿಸೀತು, ಪ್ರಾರ್ಥನೆಗೆ ಬಂದವರೆಲ್ಲ ಅಂತರಂಗ—ಬಹಿ ರಂಗ ಎರಡೂ ಬಗೆಯ ಶುದ್ಧಿಗೂ ಶ್ರಮಿಸಬೇಕು. ಮಾತೊಂದು ಬಗೆ, ಕ್ರಿಯೆಯೊಂದು ಬಗೆ ಆದರೆ ಅದು ವಂಚನೆ ಎನಿಸುತ್ತದೆ. ಆದರೆ ಸರ್ವ ಶಕ್ತನೂ, ಸರ್ವಾಂತರ್ಯಾಮಿಯೂ ಆದ ದೇವರನ್ನು ಯಾರೂ ವಂಚಿಸ ಲಾರರು.

ಸುತ್ತಲೂ ತುಂಬ ಕಶ್ಮಲವಿತ್ತು ಡಾ ದಿನಶಾ ಮೆಹತಾರವರ ಹೇಳಿಕೆಯಂತೆ ಕಕ್ಕಸುಗಳು ಅತ್ಯಂತ ಕಶ್ಮಲದಿಂದ ಕೂಡಿದ್ದು ಗಾಂಧೀಜೀ ಅವುಗಳನ್ನು ಉಪಯೋಗಿಸುವ ಸ್ಥಿತಿಯಲ್ಲಿರಲಿಲ್ಲ ಅಲ್ಲಿದ್ದ ನೊಣಗಳಿಂದ

ಅಂಟುವ್ಯಾಧಿಗಳು ಬಂದು ಗಾಂಧೀಜೀ ಮೃತರಾಗಬಹುದೆಂಬ ಶಂಕೆಯೂ ಅವರಿಗಿತ್ತು ಆದರೆ ಇವು ಯಾವುವೂ ಗಾಂಧೀಜಿಯನ್ನು ಬಾಧಿಸಲಿಲ್ಲ ತಮ್ಮನ್ನು ನೋಡಿಕೊಳ್ಳಲು ಇಬ್ಬರು ವೈದ್ಯರಿದ್ದರೂ ತಾವು ಮಾತ್ರ ದೇವರನ್ನಲ್ಲದೆ ಬೇರೆ ಯಾರನ್ನೂ ನಂಬಿರಲಿಲ್ಲ ಆ ಭಗವಂತನೇ ತಮ್ಮ ಆರೋಗ್ಯವನ್ನು ಕಾಪಾಡುವನೆಂಬ ನಂಬಿಕೆ ಅವರಲ್ಲಿತ್ತು ಇಂಥ ದೈವ ನಂಬಿಕೆ ಅವರ ಸಂಗಾತಿಗಳಲ್ಲಿರಲಿಲ್ಲ (ಮುಂಬೈ, ೬-೭-೪೬)

ತಮ್ಮ ಕೆಮ್ಮಿನ ವಿಷಯದಲ್ಲಿ ಮಿತ್ರರು ವ್ಯಕ್ತಪಡಿಸಿದ್ದ ಆತಂಕ ವನ್ನು ಕುರಿತು ಗಾಂಧೀಜಿ ಪ್ರಸ್ತಾಪಿಸಿದರು ಅವರ ಪ್ರವಚನದ ಮಧ್ಯೆಯೂ ಅದು ತೊಂದರೆ ಕೊಟ್ಟಿತು ಕಳೆದ ನಾಲ್ಕು ದಿವಸಗಳಿಂದ ಅದು ಎಷ್ಟೋ ಕಮ್ಮಿಯಾಗಿತ್ತು ಜಾಗ್ರತೆ ಪೂರ್ಣ ಗುಣವಾಗುವುದೆಂಬ ನಂಬಿಕೆ ಅವರಲ್ಲಿತ್ತು ಅವರು ಯಾವ ಚಿಕಿತ್ಸೆಯನ್ನೂ ತೆಗೆದುಕೊಳ್ಳಲು ನಿರಾಕರಿಸಿದ್ದುದರಿಂದಲೇ ಕೆಮ್ಮು ಜಾಸ್ತಿಯಾಗಿದ್ದುದು ಆರಂಭದಲ್ಲಿಯೇ ಅವರು ಪೆನ್ಸಿಲಿನ್ ತೆಗೆದುಕೊಂಡಿದ್ದರೆ ಮೂರು ದಿವಸಗಳೊಳಗೆ ಎಲ್ಲ ಸಮಾ ಧಾನಕ್ಕೆ ಬರುತ್ತದೆಂದು ಡಾ॥ ಸುಶೀಲಾ ಹೇಳಿದ್ದರು. ಗಾಂಧೀಜೀ ಪೆನ್ಸಿಲಿ ನ್ನಿನ ಶಕ್ತಿಯ ಬಗೆಗೆ ಅಪನಂಬಿಕೆಯುಳ್ಳವರಾಗಿರಲಿಲ್ಲ ರಾಮನಾಮವು ಪರಮ ಔಷಧಿಯೆಂದೇ ಅವರ ನಂಬಿಕೆಯಾಗಿತ್ತು ಸುತ್ತ ಉರಿಯುವ ಜ್ವಾಲೆಯ ನಡುವೆ ಇರುವಾಗಲೇ ಭಗವಂತನಲ್ಲಿ ನಂಬಿಕೆಯು ಜ್ವಲಂತ ವಾಗಿರಬೇಕು, ಜ್ವಾಲೆಯನ್ನು ಇಳಿಸುವ ಶಕ್ತಿಯನ್ನು ಜನರಿಗೆ ದೇವ ರೊಬ್ಬನೇ ಕೊಟ್ಟಾನು ಗಾಂಧೀಜೀಯಿಂದ ತನ್ನ ಕರ್ತವ್ಯ ನೆರವೇರ ಬೇಕಿದ್ದರೆ ಅವರನ್ನು ಬದುಕಿಸುವನು, ಇಲ್ಲವಾದರೆ, ತನ್ನ ಬಳಿಗೊಯ್ಯು ವನು.

ಎಲ್ಲರೂ ಕೇಳಿದ ಭಜನೆಯು ಗೀತೆಯೂ ರಾಮನಾಮದ ಮಹಿಮೆ ಯನ್ನೇ ಸಾರಿದ್ದಿತು ದೇವರೊಬ್ಬನೇ ಮಾನವನ ರಕ್ಷಕ ಆದುದರಿಂದ ಈ ಆಪತ್ತಿನಲ್ಲಿ ದೈಹಿಕವ್ಯಾಧಿಗೆ ಯಾವ ಚಿಕಿತ್ಸೆಯನ್ನೂ ಒಪ್ಪದೆ, ಸರ್ವ ಸ್ವವನ್ನೂ ಭಗವಂತನ ಇಷ್ಟಕ್ಕೆ ಬಿಟ್ಟಿದ್ದರು (ನವದೆಹಲಿ. ೧೮-೧-೪೭)

## (೩೨) ದೈನಿಕ ಚಿಂತನೆಗೆ

ಯಾರೇ ಆಗಲಿ, ಕಾಯಿಲೆ ಬೀಳುವುದು ನಾಚಿಕೆ ಎನಿಸಬೇಕು. ಏನೋ ಲೋಪ-ದೋಷ, ಇದೇ ಕಾಯಿಲೆ ಪೂರ್ಣ ಸ್ವಸ್ಥವಾಗಿರುವ ಶರೀರ ಮತ್ತು ಮನಸ್ಸಿನಿಂದ ಕೂಡಿದ ಯಾರೂ ಎಂದಿಗೂ ಕಾಯಿಲೆ ಯಿಂದ ನರಳಬಾರದು (ಸೇವಾಗ್ರಾಮ. ೨೬-೧೨-೪೪)

ಒಂದು ಕೆಟ್ಟ ಆಲೋಚನೆಯೂ ರೋಗದ ಚಿಹ್ನೆಯೇ ಆದುದರಿಂದ ಕೆಟ್ಟ ಆಲೋಚನೆಗಳ ಬಗೆಗೆ ನಾವು ಸದಾ ಎಚ್ಚರವಿರಬೇಕು

(ಸೇವಾಗ್ರಾಮ ೨೭-೧೨-೪೪)

ರಾಮನಾಮವು ಕೆಟ್ಟ ಆಲೋಚನೆಗಳಿಗೆ ಅಸ್ಖಲಿತ ಪರಿಹಾರ ನಾಮ ಸ್ಮರಣೆ ಕೇವಲ ಬಾಯಿಪಾಠವಾಗಬಾರದು, ಅದು ಹೃದಯಾಂತ ರಾಳದಿಂದ ಹೊಮ್ಮಬೇಕು (ಸೇವಾಗ್ರಾಮ. ೨೮-೧೨-೪೪)

ವ್ಯಾಧಿಗಳು ಅಗಣಿತ, ಹಾಗೆಯೇ ಚಿಕಿತ್ಸಕರೂ ಮತ್ತು ಚಿಕಿತ್ಸಾ ವಿಧಾನಗಳೂ ಸಕಲ ವ್ಯಾಧಿಗಳೂ ಒಂದೇ ಎಂದೂ ಅವೆಲ್ಲವುಗಳಿಗೂ ರಾಮನೇ ಏಕಮಾತ್ರ ಚಿಕಿತ್ಸಕನೆಂದೂ ನಾವು ಭಾವಿಸಿದರೆ, ಎಷ್ಟೋ ಬವಣೆಗಳಿಂದ ಪಾರಾದೇವು (ಸೇವಾಗ್ರಾಮ. ೨೯-೧೨-೪೪)

ಸನಾತನನೂ ಋಜುವೈದ್ಯನೂ ಆದ ರಾಮನನ್ನು ಮರೆತು ತಾವೇ ಮೃತ್ಯುವಿಗೆ ತುತ್ತಾಗುವ ವೈದ್ಯರ ಬಳಿಗೆ ಪರಿಹಾರಕ್ಕೆಂದು ಪರಿ ದೋಡುವ ನಮ್ಮ ಸ್ಥಿತಿ ಎಷ್ಟು ವಿಚಿತ್ರವಾದುದು!

(ಸೇವಾಗ್ರಾಮ. ೩೦-೧೨-೪೪)

ನಾವೆಲ್ಲ ಒಂದಲ್ಲ ಒಂದು ದಿನ ಮೃತ್ಯುವಶವಾಗುವೆವೆಂದೂ, ವೈದ್ಯರ ಚಿಕಿತ್ಸೆಯಿಂದ ಬಹಳ ಹೆಚ್ಚೆಂದರೆ ಕೆಲವಾರು ದಿವಸಗಳು ಮಾತ್ರ ನಮ್ಮ ಬದುಕು ಮುಂದುವರಿದೀತೆಂದೂ ಅರಿತಿದ್ದರೂ ನಮ್ಮನ್ನು ನಾವೇ ಎಣೆ ಇಲ್ಲದ ತೊಂದರೆಗೆ ಈಡುಮಾಡಿಕೊಳ್ಳುವುದು ಅತಿ ವಿಚಿತ್ರವೇ ಸರಿ!

(ಸೇವಾಗ್ರಾಮ ೩೧-೧೨-೪೪)

ಬಾಲರೂ, ವೃದ್ಧರೂ, ಶ್ರೀಮಂತರೂ, ಬಡವರೂ, ಹೀಗೆ ಎಲ್ಲರೂ ಸಾವಿಗೀಡಾಗುವುದನ್ನು ಪ್ರತ್ಯಕ್ಷ ಕಂಡರೂ ನಿಶ್ಚಿಂತರಾಗಿರದೆ ನಾಲ್ಕು ದಿನ

ಹೆಚ್ಚಿಗೆ ಬದುಕಬೇಕೆಂಬ ಆಸೆಯಿಂದ ರಾಮನಲ್ಲಿ ನಂಬಿಕೆಯನ್ನು ಬಿಟ್ಟು ಉಳಿದ ಏನೇನೋ ಪ್ರಯತ್ನ ಮಾಡುತ್ತೇವೆ. (ಸೇವಾಗ್ರಾಮ, ೧-೧-೪೫)

ಎಂಥ ವ್ಯಾಧಿ ಬಂದರೂ ರಾಮನಲ್ಲಿಯೇ ನಮ್ಮ ನಂಬಿಕೆಯನ್ನಿಟ್ಟು ನಿಜವಾದ ಶಾಂತಿಯಿಂದ ಬಾಳುವುದನ್ನು ಅಭ್ಯಸಿಸಿದರೆ ಎಂಥ ಸೊಗಸಿನಿಸೀತು! (ಸೇವಾಗ್ರಾಮ, ೨-೧-೪೫)

ಧರ್ಮನಿಷ್ಠನೆನಿಸಿಕೊಳ್ಳುವ ವ್ಯಕ್ತಿ ವ್ಯಾಧಿಪೀಡಿತನಾಗಿದ್ದರೆ ಅವನಲ್ಲಿ ಏನೋ ನ್ಯೂನತೆ ಇರಬೇಕೆಂದು ವ್ಯಕ್ತವಾಗುತ್ತದೆ. (ಸೇವಾಗ್ರಾಮ, ೨೨ ೪-೪೫)

ಎಲ್ಲ ಬಗೆಯ ಪ್ರಯತ್ನಗಳನ್ನು ಮಾಡಿದರೂ ವ್ಯಕ್ತಿಯ ಮನಸ್ಸು ಶುದ್ಧವಾಗದಿದ್ದರೆ ರಾಮನಾಮವೊಂದೇ ಅವನ ಆಸರೆಯಾಬೇಕು (೨೧-೧-೪೬)

ಅರಿವಿನಿಂದೊಡಗೂಡಿದ ಹೃದಯಾಂತರಾಳದ ರಾಮನಾಮ ಸ್ಮರಣೆಯು ಸಕಲ ವ್ಯಾಧಿ ನಿವಾರಕವೆಂದು ನನ್ನ ಧ್ಯಾನಜನ್ಯ ಜ್ಞಾನ. (ಉರುಳಿ, ೨೨-೩-೪೬)

ಮೋಹ, ದ್ವೇಷ, ಇತ್ಯಾದಿ ವ್ಯಾಧಿಗಳು ದೈಹಿಕ ವ್ಯಾಧಿಗಳಿಗಿಂತಲೂ ಹೆಚ್ಚು ಕೆಡುಕಿನ ವ್ಯಾಧಿಗಳು ಇವುಗಳಿಗೆ ರಾಮನಾಮವನ್ನು ಬಿಟ್ಟರೆ ಬೇರೆ ಚಿಕಿತ್ಸೆಯೇ ಇಲ್ಲ (ಉರುಳಿ, ೨೩-೩-೪೬)

ಶಾರೀರಕ ಅಶುಚಿಗಿಂತಲೂ ಚಿತ್ತದ ಅಶುಚಿ ಹೆಚ್ಚು ಅನರ್ಥಕಾರಕವಾದುದು, ಬಾಹ್ಯ ಅಶುಚಿ ಅಂತರಂಗ ಅಶುಚಿಯ ಸಂಕೇತ, (ಉರುಳಿ, ೨೪-೩-೪೬)

ಭಗವಂತನಿಗೆ ಶರಣು ಹೋದವನು ಅನುಭವಿಸುವ ಆನಂದವನ್ನೂ ಸುಖವನ್ನೂ ಯಾರು ವರ್ಣಿಸಬಲ್ಲರು? (ಉರುಳಿ, ೨೫-೩-೪೬)

ನಾಮಸ್ಮರಣೆಯನ್ನು ಯಾರು ಯಥಾವತ್ತಾಗಿ ಮಾಡುವರೋ ಅವರಿಗೇ ರಾಮನಾಮದ ಫಲದೊರಕುತ್ತದೆ. (ನವದೆಹಲಿ, ೮-೪-೪೬)

ರಾಮನಿಗೆ ಪ್ರಿಯವೆನಿಸುವ ಸೇವೆ ಮಾಡದೆ ಬರೀ ನಾಮಸ್ಮರಣೆ ಮಾಡಿದರೆ ಅದು ವ್ಯರ್ಥ. (ನವದೆಹಲಿ, ೨೧-೪-೪೫)

ರೋಗದ ಫಲವಾಗಿ ಸಂಭವಿಸುವ ಸಾವಿಗಿಂತ ರೋಗಭಯದಿಂದಲೇ ಹೆಚ್ಚು ಸಾವು. (ಸಿವ್ಲಾ, ೭ ೫-೪೬)

ತ್ರಿವಿಧ ವ್ಯಾಧಿಗಳಿಗೆ ರಾಮನಾಮವೇ ಭೇಷಜ, (ನವದೆಹಲಿ, ೨೪-೩-೪೬)

ರಾಮನಾಮವನ್ನು ಮರೆಹೊಕ್ಕವನಿಗೆ ಎಲ್ಲ ಇಷ್ಟಾರ್ಥ ಸಿದ್ಧಿಸುತ್ತದೆ. (ನವದೆಹಲಿ, ೨೫-೫-೪೬)

ರಾಮನಾಮಾಮೃತಪಾನ ಬಯಸುವವನು ಕಾಮಕ್ರೋಧಾದಿಗಳನ್ನು ತ್ಯಜಿಸಲೇಬೇಕು (ನವದೆಹಲಿ, ೨-೬-೪೬)

ಎಲ್ಲ ಸುಸ್ಥಿತಿಯಲ್ಲಿದ್ದಾಗ ಎಲ್ಲರೂ ಸಹಜವಾಗಿ ದೇವರ ಹೆಸರು ಹೇಳುವರು ಆದರೆ ಎಲ್ಲವೂ ಅಸ್ತವ್ಯಸ್ತವಾದಾಗಲೂ ದೇವರನ್ನೇ ಸ್ಮರಿಸುವವನು ನೈಜಭಕ್ತ. (ಮುಂಬೈ, ೬-೬-೪೬)

ರಾಮನಾಮಾಮೃತವು ಆತ್ಮಾನಂದವನ್ನು ಕೊಡುವುದಲ್ಲದೆ ಶರೀರವನ್ನು ವ್ಯಾಧಿಯಿಂದ ಪಾರುಮಾಡುತ್ತದೆ (ಪೂನಾ, ೯-೭-೪೬)

## (೩೩) ಎರಡು ಪತ್ರಗಳು

### (ಒಂದು)

ಎರವಾಡಾ ಮಂದಿರ,
ನವೆಂಬರ್ ೧೨, ೧೯೩೦.

ಪ್ರಿಯ ..

ನಿನ್ನ ದೈಹಿಕ ಆರೋಗ್ಯಕ್ಕಾಗಿ ತೊಟ್ಟಿಯಲ್ಲಿ ಕುಳಿತು ಮಾಡುವ ಸ್ನಾನವನ್ನೂ, ಸೂರ್ಯ ಸ್ನಾನವನ್ನೂ ತೆಗೆದುಕೊಳ್ಳಬೇಕು ಹಾಗೆಯೇ ಮಾನಸಿಕ ಶಾಂತಿಯನ್ನು ಪಡೆಯಲು ರಾಮನಾಮವು ಶ್ರೇಷ್ಠ ಸಾಧನ ಯಾವ ಬಗೆಯ ಕಾಮವೂ ನಿನ್ನನ್ನು ಕಾಡಿದಾಗ ಅದನ್ನು ನಿಗ್ರಹಿಸು ಭಗವಂತನ ಸೃಷ್ಟಿಯನ್ನು ಸೇವಿಸುವುದೊಂದೇ ಭಗವಂತನ ಜ್ಯೋತಿಯು ಎಡೆಗೊಯ್ಯುವ ಮಾರ್ಗ ಭಗವಂತನ ಕೃಪೆ, ಭಗವಂತನ ಜ್ಯೋತಿ, ಎನ್ನುವುದಕ್ಕೆ ಇದಕ್ಕಿಂತ ಬೇರೆ ಅರ್ಥವಲ್ಲ

ಬಾಪೂ ಆಶೀರ್ವಾದಗಳು.

ಎರಡು

ಸೇವಾಗ್ರಾಮ,
ಜನವರಿ ೯, ೧೯೪೫

ಪ್ರಿಯ,

ನಿನ್ನ ಪತ್ರ ನಿನಗೆ ಉತ್ತಮವಾದೀತೋ ಹೇಗೋ ಎಂಬ ಚಿಂತೆ ಏಕೆ ಮಾಡುತ್ತೀ? ನಾವು ಭಗವಂತನನ್ನು ಹೆಚ್ಚು ನಂಬಿದಷ್ಟೂ ಹೆಚ್ಚು ಚಿತ್ತಶಾಂತಿ' ಲಭಿಸುತ್ತದೆ ವೈದ್ಯರೂ, ಡಾಕ್ಟರೂ, ಇದಾರೆ, ನಿಜ, ಆದರೆ ಅವರು ನಮ್ಮನ್ನು ಭಗವಂತನಿಂದ ದೂರ ಒಯ್ಯುತ್ತಾರೆ ಆದುದರಿಂದಲೇ ನಾನು ನಿನ್ನನ್ನು ಪ್ರಕೃತಿಚಿಕಿತ್ಸಾಲಯಕ್ಕೆ ಕಳುಹಿಸಿದೆ ಪ್ರಕೃತಿ ಚಿಕಿತ್ಸೆಯು ನಮ್ಮನ್ನು ಹೆಚ್ಚು ಹೆಚ್ಚು ಭಗವಂತನ ಸಾನ್ನಿಧ್ಯಕ್ಕೆ ಒಯ್ಯುತ್ತದೆ ಪ್ರಕೃತಿ ಚಿಕಿತ್ಸೆಯನ್ನು ತೆಗೆದುಕೊಳ್ಳದೆ ಇರುವುದಾದರೆ ನನ್ನ ಆಕ್ಷೇಪವಿಲ್ಲ ಆದರೆ ಉಪವಾಸಕ್ಕೆ ಅಂಜುವುದೇಕೆ? ಶುದ್ಧ ವಾಯುವಿನಿಂದ ದೂರವಾಗಲೆತ್ನಿಸುವುದೇಕೆ? ಪ್ರಕೃತಿ ಚಿಕಿತ್ಸೆ ಎಂದರೆ, ನಿಸರ್ಗದ—ಭಗವಂತನ-ಹತ್ತಿರ ಹತ್ತಿರ ಹೋಗುವುದು ಇದರಿಂದ ಎಷ್ಟು ಯಶ ಲಭಿಸುವುದೋ ನೋಡೋಣ ಖಂಡಿತವಾಗಿಯೂ ನಾನು ತುಂಬ ಆಯಾಸ ಮಾಡಿಕೊಳ್ಳುವುದಿಲ್ಲ

ಬಾಪೂ ಆಶೀರ್ವಾದಗಳು

## (೩೪) ಪ್ರಶ್ನೆ ಪಟ್ಟಿಗೆ

ಪ್ರ: ಸಂಭಾಷಣೆ ಮಾಡುವಾಗ, ಬುದ್ಧಿಕ್ರಿಯೆ ಮಾಡುವಾಗ ಅಥವಾ ಅನಿರೀಕ್ಷಿತವಾಗಿ ಚಿಂತೆ ಮುಸುಗಿದಾಗ ರಾಮನಾಮವನ್ನು (ದೇವರ ಹೆಸರನ್ನು) ಪಠಿಸಬಹುದೆ? ಯಾರಾದರೂ ಹೀಗೆ ಮಾಡುವರೆ? ಹಾಗಿದ್ದರೆ ಹೇಗೆ?

ಉ: ರಾಮನಾಮವು ಹೃದಯದಲ್ಲಿ ಸ್ಥಿರವಾಗಿದ್ದರೆ, ಯಾವಕಾಲದಲ್ಲಿಯೂ, ನಿದ್ರೆಯಲ್ಲಿಯೂ ಅದನ್ನು ಪಠಿಸಬಹುದೆಂಬುದು ಅನುಭವವೇದ್ಯ ಅದೊಂದು ಅಭ್ಯಾಸವಾದರೆ ಹೃದಯಕ್ರಿಯೆಯಷ್ಟೇ ನೈಸರ್ಗಿಕವಾಗುತ್ತದೆ. ಇಲ್ಲವಾದರೆ ಅದು ಯಾಂತ್ರಿಕ ಕ್ರಿಯೆ,

ಅಥವಾ ಹೃದಯದ ಅಂಚನ್ನು ಸ್ಪರ್ಶಿಸಿದಂತೆ ಆಗುತ್ತವೆ ರಾಮ ನಾಮ ಹೃದಯವನ್ನು ಸೂರೆಗೊಂಡಾಗ ವಾಚಾಪಠನದ ಪ್ರಶ್ನೆಯೇ ಏಳುವುದಿಲ್ಲ ಏಕೆಂದರೆ, ಅದು ವಾಕ್ಕಿಗೂ ಅತೀತ ಆದರೆ ಇಂಥ ಸ್ಥಿತಿ ಹೊಂದಿದವರು ಅತಿ ವಿರಳ

ರಾಮನಾಮಕ್ಕೆ ಹೇಳಿರುವ ಎಲ್ಲ ಗುಣಗಳೂ ಅದರಲ್ಲಿವೆ ಎಂಬು ದಕ್ಕೆ ಯಾವ ಸಂಶಯವೂ ಇಲ್ಲ ಕೇವಲ ಆಸೆ ಮಾತ್ರದಿಂದ ರಾಮನಾಮ ಹೃದಯದಲ್ಲಿ ಸ್ಥಾಪಿತವಾಗದು ತಾಳ್ಮೆಯೂ, ಸತತ ಪ್ರಯತ್ನವೂ ಇದಕ್ಕೆ ಆವಶ್ಯಕ ಕಾಲ್ಪನಿಕವಾದ ಪರುಸಗಲ್ಲನ್ನು (*Philosopher's stone*) ಹೊಂದಲು ಜನ ಎಷ್ಟು ಬವಣೆ ಪಡುವರು ನಿರಂತರ ಸತ್ಯವಾದ ದೇವರನಾಮ ಇದಕ್ಕಿಂತ ಅನಂತ ಬೆಲೆಯುಳ್ಳದು

ಪ್ರ: ದಿನವೂ ಮಾಡಬೇಕೆಂದು ವಿಧಿತವಾದ ನಿತ್ಯಧ್ಯಾನ ಕರ್ಮಗಳನ್ನು ಕಾರ್ಯಭರದಿಂದಲೋ ಸನ್ನಿವೇಶದ ಒತ್ತಡದಿಂದಲೋ ಮಾಡಲು ಸಾಧ್ಯವಿಲ್ಲವಾದರೆ ಕೆಡಕು ತಟ್ಟೀತೇ ? ಯಾವುದಕ್ಕೆ ಪ್ರಾಧ್ಯಾನ್ಯತೆ ? ಸೇವೆಗೋ—ಜಪಮಣಿಗೋ ?

ಉ: ಎಂಥ ಪ್ರತಿಕೂಲಕರ ಸನ್ನಿವೇಶವೇ ಬರಲಿ ರಾಮನಾಮಸ್ಮರಣೆ ನಿಲ್ಲ ಬಾರದು ಸಂದರ್ಭಕ್ಕೆ ತಕ್ಕಂತೆ ಬಾಹ್ಯ ರೂಪಬದಲಾಗುತ್ತದೆ ಹೃದಯದಲ್ಲಿ ರಾಮನಾಮ ಸ್ಥಿರವಾಗಿ ನಿಂತಾಗ ಜಪಮಣಿ ಇಲ್ಲ ದಿದ್ದರೂ ಬಾಧಕವಿಲ್ಲ

ಪ್ರ: ಹೃದಯದಲ್ಲಿ ರಾಮನಾಮವಿದ್ದರೆ ಸಾಕೋ ಅಥವಾ ಅದರ ಪಠನ ದಲ್ಲಿ ಏನಾದರೂ ಮಹತ್ತ್ವದೆಯೋ ?

ಉ, ರಾಮನಾಮ ಪಠನೆಯಲ್ಲಿ ವಿಶೇಷ ಮಹತ್ತ್ವದೆ ಎಂದು ನನ್ನ ನಂಬಿಕೆ ಯಾರ ಹೃದಯದಲ್ಲಿ ಸತ್ಯ ಸ್ವರೂಪನಾದ ದೇವರು ಸಾಕ್ಷಾ ತ್ಕಾರವಾಗಿದಾನೋ ಅವರಿಗೆ ನಾಮ ಪಠನದ ಆವಶ್ಯಕವಿಲ್ಲ. ಆದರೆ ಅಂಥ ವ್ಯಕ್ತಿಯನ್ನು ನಾನಿನ್ನೂ ಕಂಡಿಲ್ಲ ರಾಮನಾಮ ಪಠನೆ ಯಲ್ಲಿ ಅದ್ಭುತ ಶಕ್ತಿ ಇರುವುದು ನನ್ನ ಅನುಭವಕ್ಕೆ ಗೋಚರ ವಾಗಿದೆ ಹೇಗೆ ? ಏಕೆ ? ಇದನ್ನು ತಿಳಿಯುವುದು ಅನಾವಶ್ಯಕ

# ಅನುಬಂಧ

## (೧) ಈ ರಾಮ ಯಾರು ?

ತಾವು ಸರ್ವವ್ಯಾಧಿ ನಿವಾರಕನೆಂದು ಹೇಳುವ ರಾಮ ಚಾರಿತ್ರಿಕ ರಾಮನಲ್ಲವೆಂದೂ ಯಂತ್ರ ಮಂತ್ರಗಳಿಗೆ ಉಪಯೋಗಿಸುವ ರಾಮನಲ್ಲ ವೆಂದೂ ಗಾಂಧೀಜೀ ಒತ್ತಿ ಹೇಳಿದರು ಆ ರಾಮ ದೇವರೇ ಎಂದೂ ಅವನ ನಾಮಸ್ಮರಣೆಯಿಂದ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಸಕಲ ವ್ಯಾಧಿಗಳೂ ಗುಣಮುಖವಾಗುವುವೆಂದೂ ಹೇಳಿದರು ಡಾಕ್ಟರು ಮತ್ತು ವೈದ್ಯರು ದೈಹಿಕ ವ್ಯಾಧಿಗಳನ್ನು ಮಾತ್ರ ಗುಣಪಡಿಸಬಲ್ಲರು. ಆದರೆ ರಾಮನಾಮದಿಂದ ವ್ಯಕ್ತಿ ಸ್ವಯಂ ವೈದ್ಯನಾಗುವುದಲ್ಲದೆ ಅಂತರಂಗದ ವ್ಯಾಧಿಗಳನ್ನು ಗುಣಪಡಿಸುವ ಅಮೃತವನ್ನು ಕಂಡುಕೊಳ್ಳಬಲ್ಲನು ಒಂದು ದೈಹಿಕ ವ್ಯಾಧಿ ಗುಣಪಡಿಸಲು ಸಾಧ್ಯವೇ ಇಲ್ಲವೆಂದು ಕಂಡುಬಂದರೂ ಅದನ್ನು ಶಾಂತಿಯಿಂದಲೂ, ಮಾನಸಿಕ ಸಮತೆಯಿಂದಲೂ ಸಹಿಸುವ ಶಕ್ತಿ ಲಭಿಸುತ್ತದೆ ರಾಮನಾಮದಲ್ಲಿ ನಂಬಿದವನು ವೈದ್ಯರಿಂದ ವೈದ್ಯರ ಬಳಿಗೆ ಹೋಗಿ ಹೇಗಾದರೂ ಈ ಬಾಳನ್ನು ಮುಂದುವರಿಸಿರೆಂದು ಅಂಗ ಲಾಚಿ ಬೇಡಿಕೊಳ್ಳುವನು ಡಾಕ್ಟರುಗಳೂ, ವೈದ್ಯರೂ ಗುಣಪಡಿಸಲು ಸಾಧ್ಯವಿಲ್ಲವೆಂದು ಕಂಡುಬಂದಾಗ ಮಾತ್ರ ಅನುಸರಿಸುವ ಚಿಕಿತ್ಸೆಯಲ್ಲ ರಾಮನಾಮ. ಯಾವಕಾಲದಲ್ಲಿಯೂ ಅವರ ಸಹಾಯವಿಲ್ಲದಂತೆ ಇರಲು ನೆರವಾಗಬಲ್ಲದು ಅದು ರಾಮನಾಮ ನಂಬಿದವರಿಗೆ ಅದೇ ಪ್ರಥಮವೂ ಅದೇ ಅಂತಿಮವೂ ಆದ ಚಿಕಿತ್ಸೆ (ಹರಿಜನ ೨-೬-೪೬)

## (೨) ಸಕಲ ಚಿಕಿತ್ಸಕ ಮುಲಾಮು

"ನಿಮ್ಮ ಹೃದಯಗಳಿಂದ ಭಯವನ್ನು ಉಚ್ಚಾಟನೆ ಮಾಡುವುದೇ ನನಗೆ ನೀವು ಮಾಡುವ ಅತ್ಯಂತ ದೊಡ್ಡ ಸಹಾಯ", ಎಂದರು ಗಾಂಧೀಜೀ ಅವರಿಗೆ ನಿರ್ಭಯತೆಯನ್ನು ನೀಡುವ ತಾಯಿತಿ ಯಾವುದು? ಅದು ಎಂದಿಗೂ ನಿಷ್ಫಲವಾಗದ ರಾಮನಾಮ, ನಿಮಗೆ ದೇವರಲ್ಲಿಯೇ ನಂಬಿಕೆ ಇಲ್ಲ ವೆನ್ನಬಹುದು. ಆದರೆ ಅವನ ಸಹಾಯವಿಲ್ಲದೆ ನೀವು ಒಂದು ನಿಮಿಷವೂ

ಜೀವಿಸಲಾರಿರೆಂಬ ಅರಿವು ನಿಮಗಿಲ್ಲ ಅವನನ್ನು ಈಶ್ವರ, ಅಲ್ಲಾ, ದೇವರು, ಅಹುರಾ–ಮಜ್ದಾ, ಹೇಗಾದರೂ ಕರೆಯಿರಿ ಎಷ್ಟು ಅಸಂಖ್ಯಾತ ಜನರಿದಾರೋ ಅಷ್ಟೂ ಅಸಂಖ್ಯಾತ ದೇವರ ನಾಮಗಳು. ಅವನು ಅದ್ವಿತೀಯ, ಅವನ ಸಮ ಯಾರೂ ಇಲ್ಲ ಅವನು ಕಾಲ ಬಂಧಿತನಲ್ಲ, ನಿರಾಕಾರ, ನಿಷ್ಕಲಂಕ, ಅಂಥವನು ನನ್ನ ರಾಮ ಅವನೇ ನನ್ನ ಸ್ವಾಮಿ ಮತ್ತು ಪ್ರಭು

ತಾವು ಬಾಲ್ಯದೆಸೆಯಲ್ಲಿದ್ದಾಗ ನೆರಳಿಗೂ ಅಂಜುತ್ತಿದ್ದುದಾಗಿಯೂ, ದಾದಿ ರಂಭಾ ಬೋಧಿಸಿದ ರಾಮನಾಮದಿಂದ ಈ ಭಯ ಹೋದುದಾಗಿಯೂ ಹೃದಯ ಸ್ಪರ್ಶಿಯಾಗುವಂತೆ ವರ್ಣಿಸಿದರು ಗಾಂಧೀಜೀ "ಹೆದರಿಕೆ ಕಂಡುಬಂದಾಗ ರಾಮನಾಮ ಪಠಿಸು ಅವನು ಕಾಪಾಡುವನು" ಎಂದು ಆಕೆ ಹೇಳುತ್ತಿದ್ದಳು ಅಂದಿನಿಂದ ರಾಮನಾಮ ಅವರಿಗೆ ಸಕಲ ಭಯಗಳಿಂದಲೂ ರಕ್ಷಣೆ ಕೊಟ್ಟಿತು

"ರಾಮನು ಪರಿಶುದ್ಧ ಹೃದಯವುಳ್ಳವರಲ್ಲಿ ಸದಾ ನಿವಾಸಿ ವಂಗ ದೇಶದಲ್ಲಿ ಪ್ರಸಿದ್ಧರಾಗಿರುವ ಶ್ರೀ ಚೈತನ್ಯ ಪ್ರಭು ಮತ್ತು ಶ್ರೀರಾಮಕೃಷ್ಣ ಪರಮಹಂಸರೂ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಇರುವ ಎಲ್ಲ ಹಿಂದೂಗಳಿಗೂ ಚಿರಪರಿಚಿತವಾಗಿರುವ ಭಕ್ತಶಿರೋಮಣಿ ತುಳಸೀದಾಸರು ತಮ್ಮ ಅಮರ ರಾಮಾಯಣದಲ್ಲಿಯೂ ರಾಮನಾಮದ ಮಹಿಮೆಯನ್ನು ಹಾಡಿದಾರೆ ನೀವು ಆ ನಾಮಕ್ಕೆ ಅಂಜಿ ನಡೆದರೆ ಈ ಜಗತ್ತಿನಲ್ಲಿ ಯಾರಿಗೂ –– ರಾಜನಾಗಲೀ, ಭಿಕಾರಿಯಾಗಲೀ — ಅಂಜಬೇಕಾಗಿಲ್ಲ" 'ಅಲ್ಲಾ ಹೋ ಅಕ್ಬರ್' ಕೇಳಿ ಏಕೆ ಅಂಜಬೇಕು? ಇಸ್ಲಾಮಿನ ಅಲ್ಲಾ ನಿರಪರಾಧಿಗಳ ಸಂರಕ್ಷಕ ಪೂರ್ವ ಬಂಗಾಳದಲ್ಲಿ ನಡೆದ ಹತ್ಯಾಕಾಂಡ ಪೈಗಂಬರರು ಬೋಧಿಸಿದ ಇಸ್ಲಾಂ ತತ್ವಕ್ಕೆ ವಿರುದ್ಧವಾದುದು.

ದೇವರಲ್ಲಿ ನಂಬಿಕೆ ಇರುವವರ ಹೆಂಡತಿಯನ್ನೂ ಹೆಣ್ಣುಮಕ್ಕಳನ್ನೂ ಯಾರು ಮಾನಭಂಗ ಮಾಡಲೆತ್ನಿಸಿಯಾರು? ಆದುದರಿಂದ ಅವರು ಮುಸಲ್ಮಾನರಿಗೆ ಅಂಜುವುದನ್ನು ಬಿಡಬೇಕೆಂದು ನನ್ನ ನಿರೀಕ್ಷೆ. ರಾಮನಾಮದಲ್ಲಿ ನಂಬಿಕೆ ಇರುವ ಯಾರೇ ಆಗಲೀ ಪೂರ್ವ ಬಂಗಾಳವನ್ನು ತ್ಯಜಿಸಲು ಯೋಚಿಸಬಾರದು. ತಮ್ಮ ಜನ್ಮ ಭೂಮಿಯಲ್ಲಿಯೇ

ಬಾಳಿ ಬದುಕಿ, ಸಂದರ್ಭ ಬಂದರೆ ವೀರ ಸ್ತ್ರೀಪುರುಷರಂತೆ ಮಾನರಕ್ಷಣೆ ಮಾಡಿಕೊಳ್ಳುವ ಸಲುವಾಗಿ ಸಾಯಲು ಸಿದ್ಧವಿರಬೇಕು " ಆಪತ್ತು ಬಂದಾಗ ಧೈರ್ಯದಿಂದ ಇದಿರಿಸದೆ ಓಡಿಹೋಗುವುದು ಮಾನವನಲ್ಲಿಯೂ, ದೇವರಲ್ಲಿಯೂ ತಮ್ಮಲ್ಲಿಯೂ, ನಂಬಿಕೆ ಕಳೆದುಕೊಂಡಂತೆ. ಇಂಥ ನಂಬಿಕೆಯ ಅಭಾವವನ್ನು ಪ್ರದರ್ಶಿಸುವುದಕ್ಕಿಂತ ಆತ್ಮಹತ್ಯೆ ಮೇಲು.

(ಹರಿಜನ. ೨೪-೧೧-೩೬)

## (೩) ದೇವನೊಬ್ಬನ ಗುಲಾಮರಾಗಿ

ಯಾವ ಹೆಸರಿನಿಂದ ಕರೆದರೂ ಓರ್ವನೇ ಆದ ಸರ್ವಶಕ್ತಿಯ ಗುಲಾಮರಾಗಬೇಕೆಂದು ಅವರಿಗೆ ಗಾಂಧೀಜೀ ಹೇಳಿದರು ಆಗ ಯಾವ ಪುರುಷನಿಗೂ ಶರಣಾಗತರಾಗಬೇಕಾಗಿಲ್ಲ ತಾವು ಕೇವಲ ಮಾನವ ರೂಪೀ ರಾಮನನ್ನು ದೇವರೆಂಬುದಾಗಿ ಕರೆವರೆಂಬುದು ಅಜ್ಞಾನದ ಪರಮಾವಧಿ ತಮ್ಮ ರಾಮ ದೇವರೆಂದು ಎಷ್ಟೋ ಸಲ ಸ್ಪಷ್ಟಪಡಿಸಿದಾರೆ. ಅವರ ರಾಮ ವರ್ತಮಾನ, ಭೂತ ಭವಿಷ್ಯತ್ ಕಾಲಗಳಲ್ಲೆಲ್ಲ ಇರುವವನು, ಅವನು ಅಜ, ಅವನಿಗೆ ಸೃಷ್ಟಿಯಿಲ್ಲ ಆದುದರಿಂದ ಎಲ್ಲರೂ ವಿವಿಧ ಧರ್ಮಗಳನ್ನು ಸಹಿಷ್ಣುತೆಯಿಂದ ಕಾಣಬೇಕು ತಾವು ವಿಗ್ರಹಾರಾಧಕರಲ್ಲದಿದ್ದರೂ ವಿಗ್ರಹ ಪೂಜಕರಲ್ಲಿ ಸಮಾನ ಗೌರವವನ್ನು ಹೊಂದಿದ್ದರು. ವಿಗ್ರಹಾರಾಧನೆ ಮಾಡುವವರು ಎಲ್ಲೆಲ್ಲಿಯೂ ಇರುವ ದೇವರನ್ನೇ— ಮಣ್ಣು, ಮಳೆ, ಎಲ್ಲದರಲ್ಲಿಯೂ ಸಮಾನವಾಗಿರುವ ದೇವರನ್ನೇ—ಪೂಜೆ ಮಾಡುವವರು ಎಂದು ಅವರ ನಂಬಿಕೆ ತಾವು ರಹೀಂ, ರಹಮಾನ್, ಕರೀಂ ಮೊದಲಾದ ಹೆಸರುಗಳುಳ್ಳ ಮುಸ್ಲಿಂ ಸ್ನೇಹಿತರನ್ನು ಹೊಂದಿದ್ದರು. ಅವರೆಲ್ಲರನ್ನೂ ರಹೀಂ, ರಹಮಾನ್, ಕರೀಂ ಎಂದು ಸಂಬೋಧಿಸಿದಾಗ ಅವುಗಳನ್ನೂ ದೇವರ ಹೆಸರಿಗೆ ಸೇರಿಸುವರೆ ? (ಹರಿಜನ. ೨೩-೨-೪೬)

## (೪) ಸಹಿಷ್ಣುತೆ

ಪ್ರಶ್ನೆಗಳೂ, ಆಗ್ರಹದ ಪತ್ರಗಳೂ ಸುರಿಮಳೆಯಾದವು ಅವರು ತಮ್ಮನ್ನೇಕೆ ಮುಸ್ಲಿಂ ಎಂದು ಕರೆದುಕೊಂಡರು ? ರಾಮನಿಗೂ ರಹೀಮ

ನಿಗೂ ಯಾವ ವ್ಯತ್ಯಾಸವೂ ಇಲ್ಲವೆಂದು ಅವರೇಕೆ ಭಾವಿಸಿದರು? ತಾವು ಕೊರಾನ್ ಪಠನ ಮಾಡುವುದಕ್ಕೂ ಅಭ್ಯಂತರವಿಲ್ಲವೆಂದು ಏಕೆ ಹೇಳಿದರು? ಅವರು ಪಂಜಾಬಿಗೆ ಏಕೆ ಹೋಗಲಿಲ್ಲ? ಅವರು ಕೆಟ್ಟ ಹಿಂದೂ ಆಗಿರಲಿಲ್ಲವೆ? ಅವರು ಗೂಢಚಾರರಾಗಿರಲಿಲ್ಲವೆ? ಅವರ ಅಹಿಂಸೆ ಹಿಂದೂಗಳನ್ನು ಹೇಡಿಗಳನ್ನಾಗಿ ಮಾಡಲಿಲ್ಲವೆ?

ಮೊಹಮದ್ ಗಾಂಧೀ ಎಂಬ ವಿಳಾಸವುಳ್ಳ ಒಂದು ಪತ್ರವೂ ಅವರಿಗೆ ಬಂದಿತು!

ಶಾಂತಿಯಿಂದಲೂ, ಸಮಾಧಾನದಿಂದಲೂ ಗಾಂಧೀಜೀ ಎಲ್ಲರೊಂದಿಗೆ ವಿಚಾರ ಮಾಡುತ್ತಿದ್ದರು ಯಾರೋ ಕೆಲವರು ಮಾಡಿದ ಪಾಪಕ್ಕೋಸ್ಕರ ಇಸ್ಲಾಂ ಮತವನ್ನು ಆಕ್ಷೇಪಣೆಗೆ ಗುರಿಮಾಡಬೇಕೆ? ಹಿಂದೂ ಧರ್ಮದ—ಅಷ್ಟೇಕೆ ಸಕಲಧರ್ಮಗಳ ಸಾರ ಸಹಿಷ್ಣುತೆಯಾದುದರಿಂದ ತಮ್ಮನ್ನು ಸನಾತನೀ ಹಿಂದೂ ಎಂಬುದಾಗಿಯೂ ಒಳ್ಳೆಯ ಹಿಂದೂ ಎಂಬುದಾಗಿಯೂ, ಒಳ್ಳೆಯ ಮುಸ್ಲಿಂ ಎಂಬುದಾಗಿಯೂ ಒಳ್ಳೆಯ ಕ್ರೈಸ್ತ ಎಂಬುದಾಗಿಯೂ ಕರೆದುಕೊಂಡರು ತಮ್ಮದೇ ಹಿರಿದೆಂದು ಹೇಳಿಕೊಳ್ಳುವುದು ಧರ್ಮಕ್ಕೇ ವಿರುದ್ಧವಾದುದು ನಮ್ರತೆಯು ಅಹಿಂಸೆಯ ಪ್ರಧಾನ ಲಕ್ಷಣ. ದೇವರಿಗೆ ಸಹಸ್ರನಾಮಗಳಿವೆ ಎಂದು ಹೇಳಿಲ್ಲವೆ ಹಿಂದೂ ಶಾಸ್ತ್ರಗಳಲ್ಲಿ? 'ರಹೀಂ', 'ಖುದಾ', ಇವೂ ಅವುಗಳಲ್ಲಿ ಒಂದೇಕೆ ಆಗಬಾರದು? ಕೊರಾನ್ ದೇವರನ್ನು ಮಾತ್ರ ಸ್ತುತಿಸಿ, ಮೊಹಮ್ಮದ್ ಅವನ 'ಪೈಗಂಬರ್' ಎಂಬುದನ್ನು ಮಾತ್ರ ಒಪ್ಪಿದೆ ದೇವರನ್ನು ಸ್ತುತಿಸಿ, ಬುದ್ಧ, ಝರತುಷ್ಟ್ರ, ಏಸು ಇವರೆಲ್ಲರನ್ನೂ ಅವನ ಪ್ರವಾದಿ ಎಂಬುದಾಗಿ ಒಪ್ಪಿಕೊಂಡಂತೆ ಮೊಹಮ್ಮದನನ್ನೂ ಪ್ರವಾದಿ ಎಂದು ಒಪ್ಪಿಕೊಳ್ಳಲು ಅವರಿಗೆ ಯಾವ ಶಂಕೆಯೂ ಇರಲಿಲ್ಲ. (ಹರಿಜನ, ೨೭-೫-೪೭)

## (೫) ಜನತೆಯ ಔಷಧಿ

ನಲವತ್ತು ವರುಷಗಳ ಹಿಂದೆ ಡಾ ಕೂನ್ಹೆಯವರ 'ನ್ಯೂ ಸೈನ್ಸ್ ಆಫ್ ಹೀಲಿಂಗ್' ಮತ್ತು ಜಸ್ಟರವರ 'ರಿಟರ್ನ್ ಟು ನೇಚರ್' ಎಂಬ

ಪುಸ್ತಕಗಳನ್ನು ಓದಿ ನಿಸರ್ಗ ಚಿಕಿತ್ಸೆಯಲ್ಲಿ ನಾ ನಂಬಿಕೆ ಪಡೆದೆನೆಂದು ಹೇಳಿದರೆ, ನಿಮಗೆ ಸಂತೋಷವಾಗಬಹುದು 'ರಿಟರ್ನ್ ಟು ನೇಚರ್' ಪುಸ್ತಕದಲ್ಲಿ ಪ್ರತಿಪಾದಿತವಾದಂತ ಪೂರ್ಣವಾಗಿ ನಡೆಯಲು ನನಗೆ ಮನಸ್ಸಿದ್ದರೂ ನನ್ನ ಅಜ್ಞಾನದಿಂದ ಸಾಧ್ಯವಾಗಿಲ್ಲವೆಂದು ಒಪ್ಪಿಕೊಳ್ಳುತ್ತೇನೆ ಭಾರತದ ಲಕ್ಷಾಂತರ ಜನಗಳಿಗೆ ಸುಲಭವಾಗಿರುವಂಥ ನಿಸರ್ಗ ಚಿಕಿತ್ಸಾ ಪದ್ಧತಿಯನ್ನು ಪ್ರಚುರಪಡಿಸಲು ಯತ್ನಿಸುತ್ತಿದೇನೆ. ನೀರು, ಭೂಮಿ, ಬೆಂಕಿ, ಆಕಾಶ, ವಾಯು ಈ ಶಕ್ತಿಗಳಿಂದ ಸುಲಭವಾಗಿ ದೊರಕುವ ಚಿಕಿತ್ಸೆಯನ್ನೇ ಪ್ರಚುರಪಡಿಸುತ್ತಿದೇನೆ ದೇವರ ಹೆಸರನ್ನು ಪಠಿಸುವುದು ಸರ್ವರೋಗ ನಿವಾರಕವೆಂದು ನನಗೆ ಬೋಧೆಯಾಗುತ್ತದೆ ಈ ದೇಶದಲ್ಲಿ ಲಕ್ಷಾಂತರ ಜನರು ದೇವರನ್ನು 'ರಾಮ'ನೆಂದೂ, ಇನ್ನೂ ಕೆಲವು ಲಕ್ಷಾಂತರ ಜನರು 'ಅಲ್ಲಾ' ಎಂದೂ ಕರೆಯುವರು ಈ ರೀತಿಯ ದೇವರ ನಾಮದ ಪಠನದೊಂದಿಗೆ ಪ್ರಕೃತಿಯ ನಿಯಮಗಳನ್ನು ಕಟ್ಟುನಿಟ್ಟಾಗಿ ಆಚರಿಸುವ ಕರ್ತವ್ಯ ಸೇರುತ್ತದೆ ಈ ವಿಚಾರಸರಣಿಯಿಂದ ರೋಗಬಂದ ಮೇಲೆ ವಾಸಿಮಾಡಿಕೊಳ್ಳುವುದಕ್ಕಿಂತ ರೋಗ ನಿರೋಧ ಮಾಡುವುದೇ ಉತ್ತಮವೆಂದು ನನ್ನ ಅಭಿಮತ ಆದುದರಿಂದ ಆರೋಗ್ಯಜೀವನದ ನಿಯಮಗಳಾದ ಶರೀರ, ಮನಸ್ಸು, ಮತ್ತು ಸನ್ನಿವೇಶದ ಶುಚಿತ್ವವನ್ನು ಸಾಧಿಸಲು ಕಲಿಸುವುದು ಅನಿವಾರ್ಯ (ಹರಿಜನ ೧೫-೬-೪೭)

## (೬) ರಾಮಧ್ಯಾನ

ಹೃದಯಾಂತರಾಳದಿಂದ ಮಾಡಿದ ದೇವರ ನಾಮಪಠನೆ, ಎಂದರೆ, ರಾಮಧ್ಯಾನ ಎಂಥ ಶಕ್ತಿ ಕೊಟ್ಟೀತೆಂಬುದು ಅನುಭವವೇದ್ಯ ಎಂದರು ಗಾಂಧೀಜೀ ಬ್ಯಾಂಡಿನ ರಾಗಕ್ಕೆ ತಕ್ಕಂತೆ ನಡೆಯುವ ಲಕ್ಷಾಂತರ ಸೈನಿಕರ ಶಕ್ತಿ ಎಂಥದೆಂದು ತಮಗೆ ಗೊತ್ತೆಂದೂ, ಅದೇ ಸೈನ್ಯಶಕ್ತಿ ಜಗತ್ತಿಗೆ ತರುವ ನಾಶವನ್ನು ಎಲ್ಲರೂ ಬಲ್ಲರೆಂದೂ, ಯುದ್ಧ ನಿಂತರೂ, ಯುದ್ಧೋತ್ತರ ಪರಿಣಾಮಗಳು ಯುದ್ಧಕ್ಕಿಂತ ಭೀಕರವೆಂದೂ, ಹೀಗೆ ಸೈನ್ಯಶಕ್ತಿಯಿಂದ ಬಾಳು ಬರದೆಂದೂ ತಿಳಿಸಿದರು ಅದೇ ಲಕ್ಷಾಂತರ ಜನ ತಾಳಕ್ಕೆ ತಕ್ಕಂತೆ ರಾಮಧ್ಯಾನ ಮಾಡಿದರೆ ಅದರ ಶಕ್ತಿ ಎಷ್ಟು ಅದ್ಭುತವಾಗುವು

ದೆಂಬುದನ್ನು ತಾವು ಶಂಕೆ ಇಲ್ಲದೆ ಪ್ರತಿವಾದಿಸುವುದಾಗಿ ಹೇಳಿದರು ಇದು ವಿನಾಶಕ್ಕೆ ಪ್ರತಿಯಾಗಿ ಶಾಶ್ವತ ಶಾಂತಿ ಸುಖಗಳನ್ನು ಉಂಟುಮಾಡ ಬಲ್ಲದು (ಹರಿಜನ ೩೧-೮-೪೭)

## (೭) ನಿಜವಾದ ಜ್ಯೋತಿ

ಅಯ್ಯೋ! ಇಂದು ಭಾರತದಲ್ಲಿ ನಿಜವಾದ ರಾಮರಾಜ್ಯವಿಲ್ಲ ಆದುದರಿಂದ ಯಾವ ದೀವಳಿಗೆಯನ್ನು ಆಚರಿಸಬೇಕು? ಯಾರ ಹೃದಯ ದಲ್ಲಿ ರಾಮ ರಂಜಿಸುವನೋ ಅವನೇ ವಿಜಯೋತ್ಸವವನ್ನು ಆಚರಿಸ ಬಲ್ಲನು ದೇವರೊಬ್ಬನೇ ಆತ್ಮಜ್ಯೋತಿಯನ್ನು ಬೆಳಗಿಸಬಲ್ಲನು, ಆ ಜ್ಯೋತಿಯೇ ನಿಜವಾದ ಜ್ಯೋತಿ ಭಜನೆಯ ಗೀತೆಯು ದೇವರನ್ನು ಕಾಣಲು ಹಾತೊರೆಯುವ ಕವಿಯ ಆಶಯವನ್ನು ತೋರಿಸುತ್ತದೆ. ಮನುಷ್ಯ ನಿರ್ಮಿತ ಜ್ಯೋತಿ ನೋಡಲು ಜನರು ಗುಂಪುಗುಂಪಾಗಿ ಸೇರು ವರು. ಆದರೆ ಇಂದು ಬೇಕಾದುದು ಅವರ ಹೃದಯಗಳಲ್ಲಿ ಪ್ರೇಮ ಜ್ಯೋತಿ ಆಗಲೇ ಅವರು ಅರ್ಹರು ಇಂದು ಸಹಸ್ರಾರು ಮಂದಿ ಅನಂತ ಬವಣೆಯಲ್ಲಿದಾರೆ ಸಭೆಯಲ್ಲಿರುವ ಹಿಂದೂ, ಮುಸ್ಲಿಂ, ಸಿಖ್, ಎಲ್ಲರೂ ಭೇದ ಭಾವವಿಲ್ಲದೆ ಭ್ರಾತೃಭಗಿನಿಯರೆಂದು ಹೇಳುವ ಧೈರ್ಯವಿದೆಯೆ? ಅದು ಪರೀಕ್ಷೆ, ಸಾತ್ವಿಕ ಮತ್ತು ದುಷ್ಟಶಕ್ತಿಗಳಿಗೆ ಸದಾ ನಡೆವ ಹೋರಾ ಟದ ಪ್ರತೀಕ ರಾಮರಾವಣರು. ನಿಜ ಜ್ಯೋತಿ ಅಂತರಂಗದಿಂದ ಬೆಳಗು ತ್ತದೆ (ಹರಿಜನ. ೨೩-೧೧-೪೭)

## (೮) ಹಿಂದಿನ ದಿನ

[ಜನವರಿ ೨೯ ರಂದು, ಎಂದರೆ ಅವರ ಮರಣಕ್ಕೆ ಹಿಂದಿನ ದಿನ ಗಾಂಧೀಜೀಯೇ ಸ್ವತಃ ಬರೆದ ಒಂದು ಅಂಚೆ ಕಾರ್ಡು ಶ್ರೀ ಕೆ. ಘ. ಮಶ್ರೂವಾಲಾ ಅವರಿಗೆ ಫೆಬ್ರವರಿ ೨ ನೇ ತಾರೀಖಿನ ದಿವಸ ತಲುಪಿತು. ಶ್ರೀ ಮಶ್ರೂವಾಲಾರವರು ಗಾಂಧೀಜಿಯವರಿಗೆ ಬರೆದ ಪತ್ರವೊಂದರಿಂದ ತಮಗೆ ತಲುಪಿದ ವಾರ್ತೆ ವಿಷಯವಾಗಿ ಬಾಪೂ ಬರೆದ ಪತ್ರವದು. ಅದು

ದರಿಂದ ಗಾಂಧೀಜಿಯೇ ತಮಗೆ ಸ್ವತಃ ಬರೆದ ಪತ್ರ ಆದೊಂದು ಅನರ್ಘ್ಯ ವಾದ ಜ್ಞಾಪಕಪತ್ರವೂ ಆಗಿದೆ

ಸಂ ಹರಿಜನ]

೨೯–೧–೧೯೪೮.
ನವದೆಹಲಿ

ನನ್ನ ಪ್ರಿಯ ಕಿಶೋರಲಾಲ್,

“ಇಂದಿನ ನನ್ನ ಪ್ರಾರ್ಥನೆ ಮುಗಿದ ಮೇಲೆ ಪತ್ರಗಳನ್ನು ಬರೆಯುವುದರಲ್ಲಿ ತೊಡಗಿದೇನೆ ಶಂಕರರಾಜೀಯವರ ಮಗಳ ನಿಧನದ ವಾರ್ತೆಯನ್ನು ನೀವು ತಿಳಿಸಿದುದು ಒಳ್ಳೆಯದಾಯಿತು ಅವರಿಗೊಂದು ಬೇರೆ ಪತ್ರ ಬರೆದಿದೇನೆ ನಾನು ಅಲ್ಲಿಗೆ (ಸೇವಾಗ್ರಾಮಕ್ಕೆ) ಬರುವ ವಿಷಯ ಇನ್ನೂ ಅನಿಶ್ಚಿತವೆಂದು ಪರಿಗಣಿಸಲ್ಪಡಬೇಕು ೨ ರಿಂದ ೧೨ ರ ವರೆಗೆ ನಾನು ಅಲ್ಲಿರುವೆನೆಂದು ಸೂಚಿಸಿದೇನೆ ದಿಲ್ಲಿಯಲ್ಲಿ ನಾನು ‘ಮಾಡಿಮುಗಿಸಿದೆನೆಂದು’ ಹೇಳುವುದಾದರೆ ಇನ್ನೂ ಪ್ರತಿಜ್ಞಾಪೂರ್ಣಕ್ಕಾಗಿ ಇಲ್ಲಿರಬೇಕಾದ ಆವಶ್ಯಕವಿಲ್ಲ ಇದು ನನ್ನ ಸಹಕಾರ್ಯಕರ್ತರ ದೃಷ್ಟಿಯನ್ನು ಅವಲಂಬಿಸಿದೆ ಬಹುಶಃ ನಾಳೆ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗಬಹುದು ವಿಧಾಯಕ ಕಾರ್ಯಕ್ರಮಗಳ ವಿವಿಧ ಸಂಸ್ಥೆಗಳನ್ನು ಒಟ್ಟುಗೂಡಿಸಲು ಸಾಧ್ಯವೆಂದಬುದನ್ನು ಪರಿಶೀಲಿಸುವುದಕ್ಕೂ, ಮತ್ತು ಜಮುನಾಲಾಲರ ವರ್ಷಾಬ್ದಿಕದಲ್ಲಿ ಭಾಗವಹಿಸುವುದಕ್ಕೂ ಸೇವಾಗ್ರಾಮಕ್ಕೆ ನಾ ಬರುವ ಉದ್ದೇಶ ನನ್ನ ಶಕ್ತಿ ವೃದ್ಧಿಯಾಗುತ್ತಿದೆ ಈ ಸಲ ಮೂತ್ರಪಿಂಡ ಮತ್ತು ಪಿತ್ತಕೋಶ ಎರಡೂ ತೊಂದರೆ ಕೊಟ್ಟವು ರಾಮನಾಮದಲ್ಲಿ ನನ್ನ ನಂಬಿಕೆ ಇನ್ನೂ ಎಷ್ಟು ಶಕ್ತಿ ಹೀನವೆಂಬುದನ್ನು ಇದು ತೋರಿಸುತ್ತದೆ

ಇಬ್ಬರಿಗೂ ಆಶೀರ್ವಾದಗಳು

[ಟಿಪ್ಪಣಿ —ಸೇವಾಗ್ರಾಮದ ಹಿಂದೂಸ್ತಾನೀ ತಾಲೀಮೀ ಸಂಘದಲ್ಲಿ ಶ್ರೀ ಶಂಕರ್‌ಜೀ ಒಬ್ಬ ಅಧ್ಯಾಪಕರು 'ಮಾಡಿ ಮುಗಿಸಿದೆನೆಂದರೆ' ಗಾಂಧೀಜೀ ದಿಲ್ಲಿಗೆ ಹೋದಾಗ ತೆಗೆದುಕೊಂಡ 'ಮಾಡು-ಇಲ್ಲ-ಮಡಿ' ಎಂಬ ಪ್ರತಿಜ್ಞೆಯನ್ನು ಸೂಚಿಸುತ್ತದೆ

'ಇಬ್ಬರಿಗೂ ಆಶೀರ್ವಾದಗಳೂ' ಎಂಬಲ್ಲಿ ಸೂಚಿತವಾದ ಇನ್ನೊಬ್ಬರು ಗೋಮತೀಬೇನ್ ಮಶ್ರೂವಾಲಾ ] [ಹರಿಜನ ೮-೨-೪೮)

## (೯) " ರಾಮ ! ರಾಮ !! "

ಗಾಂಧೀಜೀ, ಪ್ರಾರ್ಥನಾಸಭೆಯ ಇಕ್ಕೆಲದ ರಕ್ಷಣಾ ಸಾಲುಗಳ ಮಧ್ಯೆ ಪ್ರವೇಶಮಾಡಿದ ಕೂಡಲೇ ನೆರೆದಿದ್ದ ಜನಸಮೂಹಕ್ಕೆ ನಮಸ್ಕಾರ ಮಾಡುವ ಉದ್ದೇಶದಿಂದ ಇಬ್ಬರು ಹೆಣ್ಣುಮಕ್ಕಳ ಭುಜದ ಮೇಲಿಟ್ಟಿದ್ದ ತಮ್ಮ ಕೈಗಳನ್ನು ತೆಗೆದುಕೊಂಡರು ಇದ್ದಕ್ಕಿದ್ದಂತೆ, ಯಾರೋ ಒಬ್ಬಾತ, ಗುಂಪನ್ನು ನೂಕಿಕೊಂಡು ಬಲಗಡೆಯಿಂದ ರಕ್ಷಣಾ ಸಾಲನ್ನು ಭೇದಿಸಿಕೊಂಡು ನುಗ್ಗಿಬಂದನು ಆತ ಪಾದ ಮುಟ್ಟಿ ನಮಸ್ಕಾರ ಮಾಡಲು ಬರುತ್ತಿರಬಹುದೆಂದು ಯೋಚಿಸಿದ ಮನೂ, ಪ್ರಾರ್ಥನೆಗೆ ಆಗಲೇ ಹೊತ್ತಾಯಿತೆಂದೋ ಏನೋ ಹೇಳುತ್ತಾ ಮಧ್ಯೆ ಪ್ರವೇಶಿಸಿದ ಆ ಆಗಂತುಕನ ಕೈಹಿಡಿದು ನಿಲ್ಲಿಸಲು ಪ್ರಯತ್ನಿಸಿದಳು ಆತನು ರಭಸದಿಂದ ತನ್ನ ಕೈ ಕೊಡವಿಕೊಂಡು ಆಕೆಯ ಹಿಡಿತದಿಂದ ಬಿಡಿಸಿಕೊಂಡನು ಆಕೆಯ ಕೈಯಲ್ಲಿದ್ದ ಆಶ್ರಮ ಭಜನಾವಳಿ, ಬಾಪೂವಿನ ಪೀಕದಾನಿ, ಜಪಮಾಲೆ, ಎಲ್ಲ ಕೆಳಕ್ಕೆ ಬಿದ್ದವು ಕೆಳಕ್ಕೆ ಬಿದ್ದ ವಸ್ತುಗಳನ್ನು ಎತ್ತಿಕೊಳ್ಳಲು ಆಕೆ ಬಗ್ಗಿದಾಗ, ಆತನು ಬಾಪೂವಿಗೆ ನೇರವಾಗಿ, ಅತ್ಯಂತ ಹತ್ತಿರದಲ್ಲಿ ನಿಂತುಕೊಂಡನು ಎಷ್ಟು ಹತ್ತಿರವೆಂದರೆ, ಸಿಡಿದ ಒಂದು ಗುಂಡು ಬಾಪೂವಿನ ಬಟ್ಟೆಯ ಮಡಿಕೆಯೊಳಗ ಹೊಕ್ಕಿಕೊಂಡಿದ್ದುದು ಅನಂತರ ಕಂಡುಬಂದಿತು) ಏಳು ಗುಂಡುಗಳ ಪಿಸ್ತೂಲಿನಿಂದ ಒಂದರ ಹಿಂದೆ ಒಂದರಂತೆ ಮೂರು ಗುಂಡುಗಳು ಹಾರಿದವು. ಒಂದು ಗುಂಡು ಜಠರದ ಬಲಭಾಗವನ್ನು ನಾಭಿಗೆ ಎರಡೂವರೆ ಅಂಗುಲ ಮೇಲುಗಡೆಯೂ ಮಧ್ಯಗೆರೆಯ ಬಲಕ್ಕೆ

ಮೂರವರೆ ಅಂಗುಲ ದೂರದಲ್ಲಿಯೂ ಹೊಕ್ಕಿತು ಎರಡನೆಯದು ೭ನೆಯ ಪಕ್ಕೆಲುಬುಗಳ ಬಳಿ ಮಧ್ಯ ಗೆರೆಗೆ ಒಂದೂವರೆ ಅಂಗುಲ ಬಲಕ್ಕೂ ಮತ್ತು ಮೂರನೆಯದು ಎದೆಯ ಬಲಭಾಗದಲ್ಲಿಯೂ ಹೊಕ್ಕವು. ಒಂದು ಮತ್ತು ಎರಡನೆಯ ಗುಂಡುಗಳು ನೇರವಾಗಿ ಪ್ರವೇಶಿಸಿ ಬೆನ್ನಿನಿಂದ ಆಚೆಗೆ ತೂರಿಹೋದವು ಮೂರನೆಯದು ಶ್ವಾಸಕೋಶಗಳಲ್ಲಿ ಸಿಕ್ಕಿಕೊಂಡಿದ್ದಿತು ಮೊದಲನೆಯ ಏಟು ಬಡಿದ ಕೂಡಲೇ ಚಲನೆಯಲ್ಲಿದ್ದ ಪಾದ ಕುಸಿಯಿತು ಆದರೂ ಬಾಪೂ ಪಾದಗಳ ಮೇಲೆ ನಿಂತಿದ್ದರು. ಎರಡನೆಯ ಗುಂಡು ಬಡಿದಾಗ ಅವರು ಕೆಳಕ್ಕೆ ಬಿದ್ದರು. ಅವರು ಉಚ್ಚರಿಸಿದ ಕೊನೆಯ ಮಾತುಗಳು "ರಾಮ! ರಾಮ!!"

(ಹರಿಜನ. ೧೫-೨-೪೮)

# ಕೆಲವು ಅಧ್ಯಯನ ಗ್ರಂಥಗಳು

(೧) ಗೀತಾಮಾತೆ—ಗಾಂಧೀಜೀ

(೨) ಗೀತಾಪ್ರವಚನ—ಆಚಾರ್ಯ ವಿನೋಬಾ

(೩) ಸ್ಥಿತಪ್ರಜ್ಞ ದರ್ಶನ— ,,

(೪) ಈಶಾವಾಸ್ಯ ವೃತ್ತಿ— ,,

(೫) ಗಾಂಧೀ ವಿಚಾರ ದೋಹನ—ಕಿ ಘ ಮಶ್ರೂವಾಲಾ

# A FEW NAVAJIVAN PUBLICATIONS IN ENGLISH


### 1. Truth is God

—by Gandhiji

Pages IV, 168 Price Re. 1

### 2. The Story of My Experiments with truth— y Gandhiji

Popular Edition Price Rs 2

### 3. Hindu Dharma

—by Gandhiji

Pages xx, 443 Price Rs 4

### 4. My Religion

—by Gandhiji

Pages VII, 168 Price Rs. 2

### 5. Ramanam

—by G3 hiji

Pages VIII, 68 Price Re. 1

### 6. Practice and Precepts of Jesus

—by J C Kumarappa

Pagess XIV, 111 Price Rs. 1-50

### 7. An Atheist with Gandhi

—by GORA

Pages 55 Price Re, 1-00